ಅರಳು



080.882945
CHA

ಅಥಣಿ ಮೋಟಗಿಮಠದ ಚನ್ನಬಸವದೇವರ
ಸಮಾಜಸೇವಾ ದೀಕ್ಷಾ ಮಹೋತ್ಸವ ಸಂಪುಟ

[illegible]
[illegible]
[illegible]
([illegible]
[illegible])

ಅರಳು

N739

ಡಾ॥ ಯು ಆರ್ ಅನಂತಮೂರ್ತಿ ಅವರ
ಗ್ರಂಥದಾನ ೨೧-೭-೨೦೦೮

ಅರಳು

ಅಥಣಿ ಶ್ರೀ ಮೋಟಗಿಮಠದ
ಪೂಜ್ಯ ಶ್ರೀ ಚನ್ನಬಸವದೇವರ ಸಮಾಜಸೇವಾದೀಕ್ಷಾ ಮಹೋತ್ಸವ ಸಂಪುಟ

ಪ್ರಧಾನ ಸಂಪಾದಕರು
ಡಾ. ಗುರುಲಿಂಗ ಕಾಪಸೆ

ಸಂಪಾದಕರು
ಡಾ. ಬಸವರಾಜ ಜಗಜಂಪಿ
ಡಾ. ವಿ. ಎಸ್. ಮಾಳಿ

ವಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

೨೦೦೩

ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆ
ಶ್ರೀ ಮೋಟಗಿಮಠ, ಅಥಣಿ ಜಿ. ಬೆಳಗಾವಿ

"ARALU" Felicitation volume presented to Pujya Shri Channabasava Devaru of Motagi Math, Athani, on the occasion of his Samaj Seva Deeksha Samarambha.

Published by : Shri Guru Channabasaveshwar Granth Male,
Shri Motagi Math, Athani 591 304 ✆ (0831) 252137

Editor in chief : Dr. G. S. Kapse

Editors : Dr. Basavaraj Jagajampi and Dr. V.S. Mali

First Edition : February 2003 Copies : 1000 Pages : xxii + 314

© Publishers

Price : Rs. 200/-

080.882945
CHA

ಸಲಹಾ ಸಮಿತಿ :

ಡಾ. ಸಾ. ಶಿ. ಮರುಳಯ್ಯ	ಡಾ. ಬಿ. ಆರ್. ಹಿರೇಮಠ
ಡಾ. ಎಸ್. ಆರ್. ಗುಂಜಾಳ	ಡಾ. ಎಂ. ಬಿ. ಹೂಗಾರ
ಶ್ರೀ ಬಿ. ಎಲ್. ಪಾಟೀಲ	ಪ್ರೊ. ಎಸ್. ಬಿ. ಉತ್ನಾಳ
ಡಾ. ಜಿ. ಎಂ. ಹೆಗಡೆ	ಶ್ರೀ ಶಿವಪುತ್ರ ಯಾದವಾಡ

eg 7323

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ

ಅಕ್ಷರ ಸಂಯೋಜನೆ :
ಶ್ರೀ ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ. ಧಾರವಾಡ
ದೂರವಾಣಿ : ೭೯೦೦೩೦. ೭೪೯೯೮೪

ಮುದ್ರಕರು
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ– ೫೮೨ ೧೦೧.
✆ ೦೮೩೭೨–೫೩೭೫೬೬, ೫೩೫೫೦೯ (O) ೫೩೬೫೭೮ (R)

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಕ್ರಮ ಸಂ. 17739
ವರ್ಗ ಡಾ. ಯು. ಆರ್. ಅನಂತಮೂರ್ತಿ ಅವರ ಕೊಡುಗೆ
ವರ್ಗ ಸಂಖ್ಯೆ
ಬಂದ ತಾ|| 21/7/08
ಬೆಲೆ ರೂ. 200/-

ಸಂಪಾದಕರ ಮಾತು

ಕರ್ನಾಟಕದ ಗಡಿಯಲ್ಲಿರುವ ಅಥಣಿ ಜಂಗಮ ಜ್ಯೋತಿಗಳ ದಿವ್ಯ ಸಂಗಮ. ಜಂಗಮಸಂಕುಲಕ್ಕೆ ಮಾದರಿಯೊದಗಿಸಿದ ಶ್ರೇಯಸ್ಸು ಈ ಪುಣ್ಯಭೂಮಿಗೆ ಸಲ್ಲುವುದು. ಅಥಣಿಯ ನೆನಪಾಗುತ್ತಲೆ ಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಚಿತ್ರ ಮನದಲ್ಲಿ ಮೂಡಿ ನಿಲ್ಲುತ್ತದೆ. ಆ ದಿವ್ಯ ಚೇತನದ ತಪೋನಂದನ ಈಗ ಮತ್ತೊಮ್ಮೆ ಮೈದುಂಬಿಕೊಂಡಿದೆ. ಅಧ್ಯಾತ್ಮದ ವಸಂತದಂತೆ ಮೋಟಗಿಮಠದ ಚನ್ನಬಸವದೇವರ ಆಗಮನ ಹೊಸಬೆಳಕು ತಂದಿದೆ.

ಶ್ರೀ ಶಿವಯೋಗಿಗಳ ಗಚ್ಚಿನಮಠ ಆಧ್ಯಾತ್ಮಿಕ ಒಲವಿನ ಕಮ್ಮಟ; ಮೋಟಗಿಮಠ ಅನುಭಾವದ ಮಂಟಪ. ಮೋಟಗಿಮಠವು ವಚನ, ಸಂಗೀತ, ಅನುಭಾವ ಪರಂಪರೆಯ ನಿರಂಜನ ಪೀಠ. ಸಾಹಿತ್ಯ ಈ ಮಠದ ಜೀವದ್ರವ್ಯ. ಶ್ರೀ ಚನ್ನಬಸವದೇವರ ಗುರುಗಳಾದ ಶ್ರೀ ಗುರುಬಸವಸ್ವಾಮಿಗಳು ೭ ಕೃತಿಗಳನ್ನು ರಚಿಸಿರುವರು. ಇಂಥ ಭವ್ಯ ಪರಂಪರೆಯ ಗುರುಪೀಠವನ್ನು ಶ್ರೀ ಚನ್ನಬಸವದೇವರು ಪ್ರತಿನಿಧಿಸುತ್ತಿರುವುದು 'ಕನ್ನಡಿಗೆ ಕನ್ನಡಿ ತೋರಿದಂತೆ'. ಪೀಠಕ್ಕೆ ಗುರು ಅಲಂಕಾರದ ವಸ್ತುವಾಗಬಾರದು; ಮಠದ ಮಹತಿಯನ್ನು ಎತ್ತರಿಸಬೇಕು, ಬಿತ್ತರಿಸಬೇಕು. ಬಸವ-ತತ್ವ ಪ್ರಸಾರದ ವಾರಸುದಾರಿಕೆಯನ್ನು ವಹಿಸಿಕೊಂಡು ಗಾಳಿಗೆ ವಚನದ ಸುಗಂಧ ತುಂಬುತ್ತಿರುವ ದೇವರು ' ಮಹಾಂತ 'ದೆಡೆಗೆ ನಮ್ಮೆಲ್ಲರನ್ನು ಕರೆದೊಯ್ಯುವರೆಂಬ ಭರವಸೆ ಗಟ್ಟಿಗೊಳ್ಳುತ್ತಿದೆ.

ಶ್ರೀ ಮೋಟಗಿಮಠದ ಚನ್ನಬಸವದೇವರ ಸಮಾಜಸೇವಾ ದೀಕ್ಷಾ ಸಮಾರಂಭ ಕೇವಲ ಧಾರ್ಮಿಕ ಸಮಾರಂಭವಲ್ಲ; ಅದು ಈ ಪರಿಸರದ ಸಾಂಸ್ಕೃತಿಕ ಲೋಕದ ಮಹೋತ್ಸವ. ಅವರು ಮಠದ ಅಧಿಕಾರ ವಹಿಸಿಕೊಳ್ಳುತ್ತಿಲ್ಲ; ಕಲ್ಯಾಣ ರಾಜ್ಯ ನಿರ್ಮಾಣದ ಪ್ರತಿಜ್ಞೆಗೆ ಬದ್ಧರಾಗಿ ಸಮಾಜಸೇವೆಯ ದೀಕ್ಷೆ ಸ್ವೀಕರಿಸುತ್ತಿದ್ದಾರೆ. ಇದು ಮಠ, ಪೀಠ, ಗುರು, ಶಿಷ್ಯರಿಗೆ ಸೀಮಿತವಾಗದೆ, ಬಸವ ವಲಯದ ಜೀವಕೋಟಿಗಳ ಕನಸು ಮೂರ್ತಗೊಳ್ಳುತ್ತಿದೆ. ' ಶಿವಯೋಗದ ಹಣತೆಯಲ್ಲಿ ಮತ್ತೊಂದು ಬಸವ ಜ್ಯೋತಿ ಬೆಳಗಬೇಕು; ವಚನ ನಂದನದಲ್ಲಿ ಇನ್ನೊಂದು ಮಂದಾರ ಅರಳಬೇಕು '. ಇಂಥ ಸುಸಂದರ್ಭದಲ್ಲಿ 'ಅರಳು' ಅರಳುತ್ತಿದೆ.

'ಅರಳು' ನಾಮ, ಕ್ರಿಯಾ, ವಿಧ್ಯರ್ಥಕಗಳನ್ನು ಏಕಕಾಲದಲ್ಲಿಯೇ ಪ್ರತಿಧ್ವನಿಸುತ್ತದೆ. ಇದರಲ್ಲಿ ಚೇತನ, ಸ್ಪಂದನ, ಚಂದನ, ದರ್ಶನ, ಚಿಂತನ ಮತ್ತು ಮಂತಣಗಳೆಂಬ ಆರು ದಳಗಳಿವೆ. 'ಚೇತನ' ಶ್ರೀ ಚನ್ನಬಸವದೇವರ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಪರಿಚಯಿಸುತ್ತದೆ. ಶ್ರೀ ಚನ್ನಬಸವದೇವರು ಆಧುನಿಕ ವಚನ ಸಾಹಿತ್ಯದ ಆಶಾಕಿರಣ. ಅವರ ಕವನ, ವಚನ, ಚಿಂತನಗಳ ಅಂತರಂಗ ಇಲ್ಲಿ ಅರಳಿದೆ. ಅವರು ನಡೆದು ಬಂದ ದಾರಿ, ಮುಟ್ಟಬೇಕಾದ ಗುರಿಯನ್ನು ನಿವೇದಿಸಲಾಗಿದೆ.

ಹೂವು, ಕಾಯಿ, ಗಂಧ, ಅಂದ, ಚೆಂದ, ಆಶೆ, ಭರವಸೆಗಳೆಲ್ಲ ಮೊಗ್ಗೆಯಲ್ಲಿಯೇ ತುಂಬಿಕೊಂಡಿರುತ್ತವೆ. ಬೆಳಕು ಹರಿಯುವ ಮುನ್ನ 'ಬೆಳಗು' ಭಾವಿಸಿದ, ಆಶಿಸಿದ, ಕವನಿಸಿದ, ಗಮನಿಸಿದ ಅನುಭಾವಿಗಳ ಹೃದಯ ಮಿಡಿತಗಳ ಸಂಕಲನವೇ ಸ್ಪಂದನ. ಶ್ರೀ ಮೋಟಗಿಮಠದ ವಿವರಗಳನ್ನು ಒದಗಿಸುವ ಲೇಖನವೂ ಇದರಲ್ಲಿದೆ.

ಲೋಕಕ್ಕೆ ಮಾದರಿಯಾಗಿ ಮಹಾಮಣಿಹವನ್ನು ಪೂರೈಸಿದ ಅಥಣಿಯ ಶಿವಯೋಗಿ ಗುರುಬಸವಸ್ವಾಮಿಗಳು, ಬಸವಲಿಂಗ ಶಾಸ್ತ್ರಿಗಳು, ಗಚ್ಚಿನಮಠದ ಶ್ರೀ ಮುರುಘೇಂದ್ರ ಶಿವಯೋಗಿಗಳು, ಗೋಟಖಿಂಡಿ ಮಠದ ಶ್ರೀ ಮಹಾಂತ ಸ್ವಾಮಿಗಳು ಹಾಗೂ ಮೌನಮುನಿ ಮರುಳಶಂಕರದೇವರ ದಿವ್ಯ ವ್ಯಕ್ತಿತ್ವಗಳ ನಂದನವೇ ಚಂದನ. 'ದರ್ಶನ' ಅಥಣಿ ತಾಲೂಕಿನ ಸಮಗ್ರ ಪರಿಚಯಕ್ಕೆ ಮೀಸಲಾಗಿದೆ. ತಾಲೂಕಿನ ಕೃಷಿ, ವಾಣಿಜ್ಯ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಮತ್ತು ಜ್ವಲಂತ ಸಮಸ್ಯೆಗಳ ವಿವರಗಳನ್ನೊಳಗೊಂಡ ಈ ಭಾಗ ಚರಿತ್ರೆಯ ಕಿರು ಸಂಪುಟ.

ವೀರಶೈವ ಮಠ ಮತ್ತು ಮಠಾಧೀಶರ ಆಶಯ ಹಾಗೂ ಸಾಧನೆಗಳ ಸಮೀಕ್ಷೆ 'ಚಿಂತನ'ದಲ್ಲಿದೆ. ವೀರಶೈವ ಮಠಗಳ ಇತಿಹಾಸವನ್ನು ಹುಡುಕುತ್ತ ಅವು ಸಮಾಜ ಮತ್ತು ರಾಷ್ಟ್ರ ಕಲ್ಯಾಣಕ್ಕಾಗಿ ನಿರ್ವಹಿಸಿದ, ನಿರ್ವಹಿಸುತ್ತಿರುವ ಪಾತ್ರವನ್ನು ಅವಲೋಕಿಸಲಾಗಿದೆ. ಇದರೊಂದಿಗೆ ಮಠಗಳ ವೈಚಾರಿಕ ದೃಷ್ಟಿಯನ್ನು ದರ್ಶಿಸುತ್ತ ಮಠ-ಮಠಾಧೀಶರು ಚಿಂತಿಸಿ, ಸ್ಪಂದಿಸಬೇಕಾದ ಕಾರ್ಯಗಳನ್ನು ಸೂಚಿಸಲಾಗಿದೆ.

ಈ ಗ್ರಂಥದ ಸಂಕೀರ್ಣ ಭಾಗವೇ 'ಮಂತಣ'. ಮಂತಣ ಎಂದರೆ ಮಂತ್ರಾಲೋಚನ. ಮರ್ತ್ಯದ ಮಹಿಮೆಯನ್ನು ಸಾರುವ ಶಿವಶರಣರ ವೈಚಾರಿಕ ಆಲೋಚನೆಗಳ ಮಂಥನವಿದು. ಬಸವಯುಗದ ಹಾಗೂ ಆಧುನಿಕ ವಚನ ಸಾಹಿತ್ಯವನ್ನು ಸಮೀಕ್ಷಿಸುವ ಮೌಲಿಕ ಲೇಖನಗಳ 'ಸಂಕೀರ್ಣ' ಭಾಗವಿದು.

ಮಠಗಳು ಕನ್ನಡ ಸಂಸ್ಕೃತಿಯ ಕೇಂದ್ರಗಳು. ಧರ್ಮ ಸಂಸ್ಕೃತಿಯ ಜೀವಾಳ. ಧರ್ಮ ರಕ್ಷಣೆಯೇ ಸಂಸ್ಕೃತಿಯ ಪೋಷಣೆ. ಅಧಿಕಾರಿಗಳ, ಪುರೋಹಿತರ ಹಿಡಿತಕ್ಕೊಳಗಾದ ದೇವಸ್ಥಾನಗಳಲ್ಲಿ ಸ್ಥಾವರಗೊಂಡಿದ್ದ ಧರ್ಮವನ್ನು ಜಂಗಮಗೊಳಿಸಿದ ಶರಣರ ಮಹಾ ಸಂಕಲ್ಪದ ಫಲವೇ ಲಿಂಗಾಯತ ಧರ್ಮ. ವೀರಶೈವ ಮಠ-ಮಠಾಧೀಶರ ವೈಚಾರಿಕ ಆಲೋಚನೆ, ಸಾಧನೆ, ವೈಫಲ್ಯಗಳನ್ನು ದರ್ಶಿಸುವ ವೇದಿಕೆಯೊಂದನ್ನು ಹುಟ್ಟು ಹಾಕುವ ಆಶಯ ನಮ್ಮದು. ಬಸವಾದಿ ಶಿವಶರಣರ

ವೈಚಾರಿಕ ಚಿಂತನೆಯ ಜ್ಯೋತಿ ಮಠಗಳಲ್ಲಿ ಸದಾಕಾಲ ಬೆಳಗುತ್ತಿರಬೇಕು. ಮಠಾಧೀಶರು ಮೌಢ್ಯದ ಗುರುಗಳಾಗದೆ ಅರಿವಿನ ಅರಸರಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿ ಲೇಖನಗಳನ್ನು ನೀಡಿದ ಪೂಜ್ಯರಿಗೂ, ವಿದ್ವಾಂಸರಿಗೂ ಋಣಿಗಳಾಗಿದ್ದೇವೆ. 'ಅರಳು' ಬಸವ ಪ್ರಜ್ಞೆಯ 'ಬೆಳಕಿಂಡಿ'ಯಾಗಬಹುದೆಂದು ಭಾವಿಸಿರುವೆವು.

ಅಕ್ಷರ ಸಂಯೋಜಿಸಿದ ಧಾರವಾಡ ಮನೋಹರ ಮುದ್ರಣಾಲಯದ ಆಕಳವಾಡಿ ಸಹೋದರರ ಶ್ರದ್ಧೆ, ತಾಳ್ಮೆ, ಸಂಯಮ ಮೆಚ್ಚಬೇಕು. ಕರಡು ತಿದ್ದಿದ ಸಿದ್ದು ಹುಲ್ಲೋಳಿ, ಶ್ರೀಶೈಲ ಕಂಕಣವಾಡಿ, ಪ್ರಕಾಶ ಗಿರಿಮಲ್ಲನವರ ಅವರ ಪರಿಶ್ರಮ ಸ್ಮರಣೀಯ. ಅತ್ಯಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿದ ಗದಗಿನ ಚೈತನ್ಯ ಆಫ್‌ಸೆಟ್ ಪ್ರಿಂಟರ್ಸ್‌ನ ಸಂಚಾಲಕ ಕೆ. ಅಶೋಕ ಹಾಗೂ ಅವರ ಸಿಬ್ಬಂದಿಯನ್ನು ಸ್ಮರಿಸದಿರಲಾಗದು.

ಶ್ರೀ ಚನ್ನಬಸವದೇವರ ಸಮಾಜಸೇವಾ ದೀಕ್ಷಾ ಮಹೋತ್ಸವ ಸಂದರ್ಭದಲ್ಲಿ ಅರಳಿರುವ ಈ ಗ್ರಂಥ ಬಸವ ಪರಿಮಳ ಸೂಸಿದರೆ ನಮ್ಮ ಶ್ರಮ ಸಾರ್ಥಕವಾಗುತ್ತದೆ.

ಅಥಣಿ —**ಸಂಪಾದಕರು**

೦೪-೦೨-೨೦೦೩

ಹದುಳ ನುಡಿ

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು

ಶ್ರೀಮುರುಘರಾಜೇಂದ್ರಮಠ, ಚಿತ್ರದುರ್ಗ

ಶುಭ ನುಡಿ

ಪವಿತ್ರ ಶರಣ ಭೂಮಿಯಾದ ಅಥಣಿಯ ಶ್ರೀ ಮೋಟಗಿಮಠದ ಶ್ರೀ ಚನ್ನಬಸವದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವದ ಶುಭ ಸಂದರ್ಭದಲ್ಲಿ ನೆನಪಿನ ಸಂಚಿಕೆಯನ್ನು ಹೊರತರಲು ನಿರ್ಧರಿಸಿರುವುದು ಔಚಿತ್ಯಪೂರ್ಣವೆಂಬುದು ನಮ್ಮ ಭಾವನೆ.

ಶ್ರೀ ಚನ್ನಬಸವದೇವರು ಅಧ್ಯಯನಶೀಲರು. ಬಸವತತ್ತ್ವದ ಬಗ್ಗೆ ಆಳವಾಗಿ ಅರಿವುಳ್ಳವರು. ಅತ್ಯುತ್ತಮ ವಾಗ್ಮಿಗಳು. ಸಮಾಜಸೇವೆಯನ್ನು ಮಾಡಬೇಕೆಂಬ ಅತೀವ ಹಂಬಲವುಳ್ಳವರು, ಕ್ರಿಯಾಶೀಲರು, ಜನರನ್ನು ಆಕರ್ಷಿಸುವ ಶಕ್ತಿಯುಳ್ಳವರು.

ನಮ್ಮ ಚಿತ್‌ವಲಯಕ್ಕೆ ಸೇರಿದ ಚೇತನಗಳಲ್ಲಿ ಒಬ್ಬರಾಗಿರುವ ಶ್ರೀ ಚನ್ನಬಸವದೇವರ ಸಮಾಜಸೇವಾ ದೀಕ್ಷಾಸಮಾರಂಭದ ಹೊತ್ತಿನಲ್ಲಿ ಹೊರ ಬರುವ ಬಸವತತ್ತ್ವಗಳನ್ನು ಕುರಿತ ಗಂಭೀರ ಚಿಂತನೆಗಳನ್ನೊಳಗೊಂಡ ಸ್ಮರಣ ಸಂಚಿಕೆ ಅರ್ಥಪೂರ್ಣವಾಗಿರಲಿ ಎಂದು ಹಾರೈಸುತ್ತೇವೆ. ಶ್ರೀ ಚನ್ನಬಸವದೇವರು ಸಮಾಜ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳಲಿರುವ ಸಮಾರಂಭ ಯಶಸ್ವಿಯಾಗಿ ಜರುಗಲಿ ಎಂದು ಆಶಿಸುತ್ತೇವೆ.

ಶ್ರೀ ತೋಂಟದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು
ಶ್ರೀ ತೋಂಟದಾರ್ಯ ಮಠ, ಡಂಬಳ - ಗದಗ

ಶುಭ ನುಡಿ

ಗೌರವನೀಯ ಶ್ರೀ ಚನ್ನಬಸವದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವದ ಶುಭಸಂದರ್ಭದ ಸವಿನೆನಹಿಗಾಗಿ ಡಾ. ಗುರುಲಿಂಗ ಕಾಪಸೆಯವರ ಪ್ರಧಾನ ಸಂಪಾದಕತ್ವದಲ್ಲಿ ನೆನಪಿನ ಸಂಚಿಕೆಯೊಂದನ್ನು ಹೊರತರುತ್ತಿರುವುದು ತಿಳಿದು ತುಂಬ ಸಂತೋಷವಾಗಿದೆ.

ಶ್ರೀ ಚನ್ನಬಸವದೇವರು ಕವಿ ಹೃದಯದ ಸಾಧಕರು. ಈಗಾಗಲೇ ಅನೇಕ ವಚನಗಳನ್ನು ಬರೆದು ವಚನ ಪರಂಪರೆಯನ್ನು ಮುಂದುವರೆಸಿದ ಈ ತರುಣ ಸ್ವಾಮಿಗಳ ಬಗೆಗೆ ಸಮಾಜ ತುಂಬ ಭರವಸೆಯನ್ನಿಟ್ಟುಕೊಂಡಿದೆ. ವಿದ್ಯಾವಂತರು ಪೀಠವನ್ನಲಂಕರಿಸಬೇಕು, ಅಧ್ಯಾತ್ಮಜೀವಿಗಳಾಗಿರಬೇಕು. ಬಸವಾದಿ ಪ್ರಮಥರ ಅನುಭಾವ ಪರಂಪರೆಯ ವಾರಸುದಾರರಾಗಿ ಮುಂದುವರೆಯಬೇಕು, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತ ಒಂದು ಸುಂದರ, ಸದೃಢ, ಪ್ರೇಮಮಯ ಸಮಾಜವನ್ನು ಕಟ್ಟುವಲ್ಲಿ ವ್ಯಕ್ತಿ, ಬತ್ತಿಯಾಗಿ ಬೆಳಗಬೇಕು. ಶ್ರೀಗಂಧವಾಗಿ ತೇಯಬೇಕು ಎಂಬ ಇಂದಿನ ಯುಗಮಾನದ ಬೇಡಿಕೆಗೆ ತಕ್ಕಂತೆ ರೂಪುಗೊಳ್ಳುತ್ತಿರುವ ಶ್ರೀ ಚನ್ನಬಸವದೇವರು ಒಬ್ಬ ಮಾದರಿ ಸ್ವಾಮಿಗಳಾಗಿ ಜನ-ಮನವನ್ನು ಹಸನುಗೊಳಿಸುತ್ತಾರೆ ಎಂಬ ಭರವಸೆ ನಮಗಿದೆ. ಸದಾ ಹಸನ್ಮುಖಿಗಳೂ ಉತ್ತಮ ವಾಗ್ಮಿಗಳೂ ಆದ ಶ್ರೀಗಳ ಸಮಾಜ ಸೇವಾದೀಕ್ಷಾ ಸಮಾರಂಭ ಯಶಸ್ವಿಯಾಗಲಿ. ಅವರ ನಿರಂಜನ ಪಟ್ಟಾಧಿಕಾರದ ಸವಿನೆನಪಿಗಾಗಿ ಹೊರತರುತ್ತಿರುವ ನೆನಪಿನ ಸಂಚಿಕೆ ಎಲ್ಲಂದದಲ್ಲೂ ಮೈದುಂಬಿ ಬರಲಿ ಎಂದು ಹಾರೈಸಲಾಗಿದೆ.

ಜಯಬಸವ

ಶ್ರೀಮನ್ನಿರಂಜನ ಜಗದ್ಗುರು ಶಿವಲಿಂಗೇಶ್ವರ ಮಹಾಸ್ವಾಮಿಗಳು

ಜಗದ್ಗುರು ಸಿದ್ಧಸಂಸ್ಥಾನಮಠ, ನಿಡಸೋಸಿ

ಹದುಳ ನುಡಿ

ಕರ್ನಾಟಕದ ಯಾವುದೇ ಮೂಲೆಗೆ ಹೋದರೂ ಒಂದು ಮಠ ಸಿಗುತ್ತದೆ. ಧಾರ್ಮಿಕ ಸಂಸ್ಕೃತಿಯ ಚಟುವಟಿಕೆಗೆ ಮಠಗಳನ್ನೇ ಕೇಂದ್ರವಾಗಿರಿಸಿಕೊಂಡು ಅಂದಿನವರು ಕಟ್ಟಿ ಬೆಳೆಸಿದ ರೀತಿ ವಿಶಿಷ್ಟ. ಅದರಲ್ಲೂ ಶರಣ ಸಂಸ್ಕೃತಿಯನ್ನೇ ಆಶಯವಾಗಿರಿಸಿಕೊಂಡ ವಿರಕ್ತ ಪರಂಪರೆಯ ಶ್ರೀಮಠಗಳ ಸಮಾಜಸೇವೆ ಸ್ಮರಿಸುವಂಥದ್ದು. ಎಡೆಯೂರು ಸಿದ್ಧಲಿಂಗ ಯತಿಗಳಿಂದ ಹಿಡಿದು ಅಥಣಿಯ ಶಿವಯೋಗಿಗಳವರೆಗೆ, ಹಾನಗಲ್ಲ ಕುಮಾರೇಶ್ವರರಿಂದ ಹಿಡಿದು ಇಂದಿನ ಇಲಕಲ್ಲದ ಮಹಾಂತಪ್ಪಗಳವರೆಗೆ ನಡೆದು ಬಂದ ಈ ಸಮಾಜಸೇವಾ ಕೈಂಕರ್ಯಕ್ಕೆ ಒಂದು ಸುದೀರ್ಘ ಇತಿಹಾಸವೇ ಇಂದು ಮೈದಾಳಿ ನಿಂತಿದೆ.

ಇಂತಹ ಉಜ್ವಲ ಪರಂಪರೆಯ ವಾರಸುದಾರರಾಗಿ ಮುನ್ನಡೆಯಲಿದ್ದಾರೆ ಅಥಣಿ ಮೋಟಗಿಮಠದ ಚನ್ನಬಸವದೇವರು. ಹೆಸರು ಚೆನ್ನ, ವಚನ ಚೆನ್ನ, ರಚನೆ ಚೆನ್ನ, ಪ್ರವಚನ ಚೆನ್ನ, ಈ ಚೆನ್ನ ಎಲ್ಲರಿಗೂ ಇಂದು ಅಚ್ಚುಮೆಚ್ಚಿನ ಚಿನ್ನ. ಹೆಸರು ಕೇಳುತ್ತಿದ್ದಂತೆ ಅವರ ಕ್ರಿಯಾಶೀಲತೆ ಕಣ್ಮುಂದೆ ಬಂದು ನಿಲ್ಲುತ್ತದೆ. ಹೊಸ ಮಠ ಕಟ್ಟಿ ಹೊಸ ಸಂದೇಶಗಳನ್ನು ಬಿತ್ತರಿಸಿ ಗಡಿಭಾಗದಲ್ಲಿ ಇಂದು ಭರವಸೆಯ ಬೆಳಕು ಚೆಲ್ಲುತ್ತಿದ್ದಾರೆ. ಈ ಪಟ್ಟಾಧಿಕಾರ ಮಹೋತ್ಸವ ಸಂದರ್ಭದಲ್ಲಿ ಸಮಾಜಸೇವಾ ದೀಕ್ಷಾ ಸಮಾರಂಭ ಹಮ್ಮಿಕೊಂಡಿದ್ದು ಸಂತಸ ತಂದಿದೆ. ವಿಶೇಷ ಸಂಚಿಕೆ, ವಿಶೇಷ ಕಾರ್ಯಕ್ರಮಗಳು ಜನಮಾನಸದಲ್ಲಿ ಜಾಗೃತಿ ಮೂಡಿಸಲೆಂದು ಹೃದಯ ತುಂಬಿ ಹಾರೈಸುತ್ತೇವೆ.

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಜ್ಞಾನ ಯೋಗಾಶ್ರಮ, ಬಿಜಾಪುರ

ಹಾರೈಕೆ

ಶ್ರೀ ಮೋಟಗಿಮಠಕ್ಕೆ ಪರಂಪರೆಯಿದೆ. ಲೋಕದವರಿಗೆ ಶರಣಪಥದರ್ಶನವು ಅದರ ಪವಿತ್ರ ಕಾರ್ಯ. ಇದೀಗ ಆ ಪವಿತ್ರ ಕಾರ್ಯ ನಿರ್ವಹಣೆಗಾಗಿ ಸಮರ್ಥ ಅಧಿಕಾರಿಗಳ ಪೀಠಾರೋಹಣ. ಶ್ರೀ ಮಠದ ಧರ್ಮದಂಡ ಹಿಡಿದು ಸಮಾಜ ಸೇವಾವ್ರತ ಧರಿಸಿದವರು ಪೂಜ್ಯರಾದ ಶ್ರೀ ಚನ್ನಬಸವದೇವರು.

ಅವರು ಪ್ರಸನ್ನವದನರು, ಸಾಹಿತಿಗಳು, ವಕ್ತಾರರು, ಸಮಾಜಹಿತಚಿಂತಕರು. ಸಮತೆ ಹಾಗೂ ಸೌಜನ್ಯ ಅವರ ಸದ್ಗುಣಗಳು; ಸದ್ಭಾವ ಹಾಗೂ ಸುವಿಚಾರಗಳು ಅವರ ಸಂಪತ್ತು. ಅವರ ಪಟ್ಟಾಧಿಕಾರ ಉತ್ಸವದ ನಿಮಿತ್ತವಾಗಿ ಈ " ನೆನಪಿನ ಸಂಚಿಕೆ ". ಸಂಚಿಕೆ ಸರ್ವಾಂಗ ಸುಂದರವಾಗಿರಲೆಂದು ಹಾರೈಕೆ.

ಟಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಶ್ರೀ ನಿ. ಪ್ರ. ಮಹಾಂತಸ್ವಾಮಿಗಳು

ಚಿತ್ತರಗಿ ಸಂಸ್ಥಾನಮಠ, ಇಲಕಲ್ಲ

ಶುಭ ಹಾರೈಕೆಗಳು

ಉಜ್ವಲ ಧಾರ್ಮಿಕ ಪರಂಪರೆ ಹೊಂದಿದ, ಅಧ್ಯಾತ್ಮಿಕ ಕೇಂದ್ರವಾಗಿ ಖ್ಯಾತಿ ಗಳಿಸಿದ, ಜಂಗಮಲಿಂಗ ಸುಕ್ಷೇತ್ರ ಅಥಣಿ ಶ್ರೀ ಮೋಟಗಿಮಠದ ಪೂಜ್ಯ ಶ್ರೀ ಚನ್ನಬಸವದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಅರ್ಥಪೂರ್ಣವಾಗಿ ನಡೆಯುತ್ತಿರುವುದು ನಮಗೆ ಅಪಾರ ಸಂತಸ ತಂದಿದೆ. ಬಸವ ಪಥದಲ್ಲಿ ಸಾಗುವ ಅಚಲ ನಿರ್ಧಾರ ಹೊಂದಿದ್ದ ನಿರ್ಭೀತ ನಿಲುವಿನ ಶ್ರೀ ಚನ್ನಬಸವದೇವರು ಸಮಾಜ ಸೇವಾ ದೀಕ್ಷಾ ಬದ್ಧರಾಗುತ್ತಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ.

ಬೆಳೆಯ ಸಿರಿ ಮೊಳಕೆಯಲ್ಲಿ ಕಾಣುವಂತೆ ಪೂಜ್ಯ ಚನ್ನಬಸವದೇವರು ಅರಿವು, ಆಚಾರ, ಅನುಭಾವಗಳ ಸಾಕಾರ ಮೂರ್ತಿಯಾಗಿ ಬೆಳೆದಿದ್ದಾರೆ. ದೈವದತ್ತವಾದ ಪ್ರತಿಭೆ, ಆಳವಾದ ಅಧ್ಯಯನದಿಂದ ಪಡೆದ ಪಾಂಡಿತ್ಯ ಹಾಗೂ ಕ್ರಿಯಾಶೀಲತೆಗಳು ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳಾಗಿವೆ. ಶರಣ ಸಾಹಿತ್ಯವನ್ನು ಕರತಲಾಮಲಕ ಮಾಡಿಕೊಂಡಿರುವ ಅವರು ಪ್ರತಿಭಾವಂತ ಬರಹಗಾರರಾಗಿ, ಶ್ರೇಷ್ಠ ವಾಗ್ಮಿಗಳಾಗಿ ಖ್ಯಾತಿ ಗಳಿಸಿರುವರು.

> ನಡೆ ಶುಚಿ, ನುಡಿ ಶುಚಿ, ತನು ಶುಚಿ
> ಮನ ಶುಚಿ, ಭಾವ ಶುಚಿ
> ಇಂತೀ ಪಂಚ ತೀರ್ಥಂಗಳನೊಳಗೊಂಡು
> ಮರ್ತ್ಯದಲ್ಲಿ ನಿಂದ ನಿಮ್ಮ ಶರಣರ ತೋರಿ
> ಎನ್ನನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನ

ಈ ವಚನ ಪೂಜ್ಯಶ್ರೀ ಚನ್ನಬಸವದೇವರ ಭವಿಷ್ಯದಲ್ಲಿ ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲ. ಶರಣರು ಕಂಡ ಹೊಸ ಸಮಾಜ ರಚನೆಯ ಕನಸನ್ನು ನನಸಾಗಿಸುವಲ್ಲಿ, ಅವರು ಸಾರಿದ ಉದಾತ್ತ ಜೀವನ ಸಂದೇಶಗಳನ್ನು ಮನೆ-ಮನಗಳಿಗೆ ಮುಟ್ಟಿಸುವ

ಮಹಾಮಣಿಹದಲ್ಲಿ ಪೂಜ್ಯ ಶ್ರೀ ಚನ್ನಬಸವದೇವರು ಗಟ್ಟಿಮುಟ್ಟಾದ ದಿಟ್ಟ ಹೆಜ್ಜೆಗಳನ್ನಿಟ್ಟು ಬಸವಧರ್ಮ ಧ್ವಜವನ್ನು ಎತ್ತಿ ಹಿಡಿಯುತ್ತಾರೆಂದು ನಾವು ಭರವಸೆ ತಾಳಿದ್ದೇವೆ. ವ್ಯಷ್ಟಿ ಮತ್ತು ಸಮಷ್ಟಿ ಹಿತ ಸಾಧನೆಗಾಗಿ ಮಠಗಳು ಏನನ್ನು ಮಾಡಬಹುದು ಮತ್ತು ಮಾಡಬೇಕು ಎಂಬುದಕ್ಕೆ ಅಥಣಿಯ ಶ್ರೀ ಮೋಟಗಿಮಠ ಉಜ್ವಲ ಉದಾಹರಣೆಯಾಗುವಂತೆ ಪೂಜ್ಯ ಶ್ರೀ ಚನ್ನಬಸವದೇವರು ಸಮರ್ಥ, ಸತ್ವಶಾಲಿ ಉತ್ತರಾಧಿಕಾರಿಗಳಾಗಿ ರೂಪುಗೊಳ್ಳಲಿ ಎಂದು ನಿರಂಜನ ಪಟ್ಟಾಧಿಕಾರ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಾವು ಶುಭ ಹಾರೈಸುತ್ತೇವೆ.

ನಾಡಿನ ಪ್ರತಿಷ್ಠಿತ ಜಗದ್ಗುರುಗಳ, ಪೀಠಾಧಿಪತಿಗಳ, ರಾಜಕಾರಣಿಗಳ, ಸಾಹಿತಿಗಳ ಹಾಗೂ ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿ ಜರುಗುವ ಸಮಾರಂಭ ಸಂಪೂರ್ಣ ಯಶಸ್ವಿಯಾಗಲಿ. ಬಸವಾದಿ ಪ್ರಮಥರು, ಚಿತ್ತರಗಿ ಶ್ರೀ ವಿಜಯ ಮಹಾಂತ ಶಿವಯೋಗಿಗಳು ಪೂಜ್ಯರಿಗೆ ಹೆಚ್ಚಿನ ಶಕ್ತಿ, ಸಾಮರ್ಥ್ಯಗಳನ್ನು ದಯಪಾಲಿಸಲಿ ಎಂದು ನಾವು ಪ್ರಾರ್ಥಿಸುತ್ತೇವೆ.



ನವೀಕೃತವಾಗಿ ನಿರ್ಮಾಣಗೊಂಡ ಜಂಗಮಲಿಂಗ ಸುಕ್ಷೇತ್ರ, ಮೋಟಗಿಶ್ರೀಮಠ



ಅಥಣಿಯ ಅವಿರಳ ಜ್ಯೋತಿ.



ಮೋಟಗಿ ಮಠದ ಕರ್ತೃ ಮುರುಘೇಂದ್ರರು.



ಲಿಂ. ಚನ್ನಬಸವ ಶಿವಯೋಗಿಗಳು.



ಗೋಟಖಿಂಡಿಮಠದ ಕರ್ತೃ ಮಹಾಂತರು.



ಲಿಂ. ಗುರುಬಸವ ಶ್ರೀಗಳು.



"ಸಾಹಿತ್ಯ ತಪಸ್ವಿ" ಅಜ್ಜ ಬಸವಲಿಂಗ ಶಾಸ್ತ್ರಿಗಳು.



ಒಡಲ ಕುಡಿಯ ನಾಡಿಗೆ ನೀಡಿದ ಹಡೆದವರು
ಗುರುಮೂರ್ತಯ್ಯ, ಶಿವಗಂಗಮ್ಮ.



ಹಾಲ್ಗಲ್ಲದ ಹಸುಳೆ ಬಸು !



ಎಂಟು ವರ್ಷದ ವಟುವಿನ ಹೆಗಲೇರಿದ ಹಿರಿಯ ಭಾರ.



ಗುರುಮುಟ್ಟಿ ಗುರುವಾದ ಮರಿದೇವರೊಂದಿಗೆ ಚನ್ನಬಸವೇಶ್ವರ ಯುವಕ ಸಂಘದವರು.



ಸಾವಳಗಿ ಗುರು ಸನ್ನಿಧಿಯಲ್ಲಿ ಭಕ್ತರೊಪ್ಪಿದ ಉತ್ತರಾಧಿಕಾರಿ !



'ಶಿವಯೋಗ ಮಂದಿರ'ಕ್ಕೆ ತೆರಳುವ ಮುನ್ನ ಭಕ್ತರ ಬೀಳ್ಕೊಡುಗೆ.



'ಮೂರ್ತಿ ಮಾಡಿದ ಶಿಲ್ಪಿ'
ಚನ್ನಬಸವ ಶಾಸ್ತ್ರಿಗಳೊಂದಿಗೆ
ಚನ್ನಬಸವಾರ್ಯರು.

ಶಿವಯೋಗ ಮಂದಿರದಲ್ಲಿ
'ಶಿವಯೋಗಕ್ಕಾಗಿ ಯೋಗ'!



‘ಅರಳಿದ ಅರಿವಿನ ಕಿರಣಗಳು’



ಮೊದಲ ಕವನ ಸಂಕಲನ ‘ವರ್ತಮಾನ’ ಬಿಡುಗಡೆ ಸಾವಳಗಿ ಶ್ರೀ ಸನ್ನಿಧಿಯವರಿಂದ.



ಪ್ರಶಸ್ತಿಕೃತಿ ‘ವಚನ ಚೈತ್ರ’ ಗದುಗಿನ ಶ್ರೀಗಳಿಂದ ಬಿಡುಗಡೆ.



'ವಚನ ತರಂಗ' ಬಿಡುಗಡೆ.



ಅಥಣೀಶರ ವಚನ ಗಂಗೋತ್ರಿ, ಜ್ಞಾನಮೂರ್ತಿಗಳಿಂದ !

ಹಿರಿಯ ಜಗದ್ಗುರುಗಳ ಹದುಳ ಹರಕೆ



ಮೈಗೂರ ದೇವರಿಗೆ - ಮೈಸೂರ ಶ್ರೀಗಳಿಂದ.



ರೂಪಗೊಂಡ ಮೂರ್ತಿಗೆ - ಶಿವಮೂರ್ತಿ ಶರಣರಿಂದ.



ಚನ್ನಬಸವರಿಗೆ - ಬಸವಾಯತರಿಂದ.



ಸಿದ್ಧಗಂಗೆಯ ಸನ್ನಿಧಿಯಲ್ಲಿ, ನಾಲವಾರ ಶ್ರೀಗಳ ಸ್ನೇಹ ಗಂಗೆ.



ಮಲೆನಾಡಿನಲ್ಲಿ ತೇಲಿ ಬಂದ ಹರಕೆ ! ಆನಂದ ಪುರಂಶ್ರೀ.



ರಾಯಬಾಗದಲ್ಲಿ ಧರ್ಮದ ರಾಯಭಾರಿಗೆ ಗೌರವ ನಾಗನೂರಶ್ರೀ

ಕವಿ, ಸಾಹಿತಿ ರಾಜಕಾರಣಿಗಳೊಂದಿಗೆ




‘ತ್ರಿಭಾಷಾ ಕವಿ’ ಡಾ. ಪುಟ್ಟರಾಜರೊಂದಿಗೆ.



ನಮ್ಮಯ್ಯರೊಂದಿಗೆ - ಸಾ. ಶಿ. ಮರುಳಯ್ಯ.



ನಿಮ್ಮ ಸಂಶೋಧನೆಯೇ ನಮ್ಮ ಕಾವ್ಯಕ್ಕೆ ನೆಲೆ
-ಡಾ. ಎಂ. ಚಿದಾನಂದ ಮೂರ್ತಿಯವರೊಂದಿಗೆ.



ಮೈಸೂರಿನ ವ್ಯಾಸಂಗದಲ್ಲಿ- ಡಾ. ಹಾ. ಮಾ. ನಾಯಕರೊಂದಿಗೆ.



ಕನ್ನಡ ಸಂಸ್ಕೃತಿಯ ರಾಯಭಾರಿಗೆ ನಮ್ಮ ಸನ್ಮಾನ !



'ಕುಂಚ ಬ್ರಹ್ಮ' ಚಟ್ಟಿಯವರೊಂದಿಗೆ.



ದಾದಿ ಪ್ರಕಾಶ ಮಣಿಜಿಯವರ ಆತ್ಮೀಯ ಉಡುಗೊರೆ.

ಕಲ್ಯಾಣದ ಕನಸು ಕಂಡ ಮಮ್ಮಟಗಳು



ಕ್ರಾಂತಿ ಕಹಳೆ ವೀರಭದ್ರ ಚನ್ನಮಲ್ಲರೊಂದಿಗೆ ಚನ್ನಚೇತನ.



ಕನ್ನಡ ಐ.ಎ.ಎಸ್. ಪ್ರಥಮ ರ್‍ಯಾಂಕ್ ಖ್ಯಾತಿ ಮಹಿಳೆ,
'ವಿಜಯಲಕ್ಷ್ಮಿ ಶಂಕರ ಬಿದರಿ'ಯವರೊಂದಿಗೆ.



ಹಿರಿಯ ಸೌಜನ್ಯದ್ವಯರಾದ ಡಾ. ಸ.ಜ.ನಾ. ಹಾಗೂ
ಏಣಗಿ ಬಾಳಪ್ಪನವರೊಂದಿಗೆ.



ನೆರೆನಾಡಿನ ಮುಂಬೈ ಮಹಾನಗರದಲ್ಲಿ ಹರಡಿದ ಶರಣ ಕಿರಣ.



ಪ್ರಥಮ ಇನ್ನಿಂಗ್ಸನ ಮೊದಲ ಸಿಕ್ಸರ್ 'ಹಳಕಟ್ಟಿಶ್ರೀ' ಪ್ರಶಸ್ತಿ.



ನವೀಕೃತ ಶ್ರೀಮಠದ ಉದ್ಘಾಟನೆಯಲ್ಲಿ ಶಿವಯೋಗಿಗಳವರು.



ಹರಗುರುಗಳ ನಡುವೆ ಹಂಚಿಕೊಂಡ ಅನುಭವ.



ಸದುಹೃದಯದ ಶಿವಣ್ಣನವರಿಂದ ಗೌರವ.



ಪಟ್ಟಾಧಿಕಾರದ ಬಸವ ಪುರಾಣ ಸಂದರ್ಭದಲ್ಲಿ; ಮೈಗೂರು ಭಕ್ತರಿಂದ ''ತವರಿನ ಉಡುಗೊರೆ''

ವಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಪರಿವಿಡಿ

ಸ್ಪಂದನ

ಚಂದನ

ದರ್ಶನ

ಚಿಂತನ

ಮಂತಣ

ಚೇತನ

ಕನ್ನಡದ ಕ್ರಿಯಾಶೀಲ ಗುರು : ಚನ್ನಬಸವದೇವರು

● ಡಾ. ವಿ. ಎಸ್. ಮಾಳಿ

ಶ್ರೀ ಮುರುಘೇಂದ್ರ ಶಿವಯೋಗಿಗಳ ಪಾದಸ್ಪರ್ಶದಿಂದ ಪಾವನಗೊಂಡ ಅಥಣಿ ಸಾಧಕರ ನೆಲೆ, ಪುಣ್ಯದ ಸೆಲೆ. ನಾಡಿನ ಜಂಗಮರಿಗೆಲ್ಲ ಮಾದರಿಯಾದ ಶಿವಯೋಗಿಗಳ ತಪಸ್ಸಿನ ತಾಣವದು. ಅಥಣಿಯಲ್ಲಿರುವ ಶೆಟ್ಟರಮಠ, ಗೋಟಖಿಂಡಿಮಠ, ಮೋಟಗಿಮಠ ಮತ್ತು ಗಚ್ಚಿನಮಠಗಳು ಕರ್ನಾಟಕದ ಆಧ್ಯಾತ್ಮಿಕ ಕೇಂದ್ರಗಳಾಗಿ ವೀರಶೈವ ಪರಂಪರೆಯ ಪುನಶ್ಚೇತನದಲ್ಲಿ ವಹಿಸಿರುವ ಪಾತ್ರ ಗಮನಾರ್ಹವಾದುದು. ಚನ್ನಬಸವ ಶಿವಯೋಗಿಗಳ ಸಾಧನೆಯ ಗರಡಿಯಾದ ಇಲ್ಲಿಯ ಮೋಟಗಿಮಠವನ್ನು ಕನ್ನಡದ ಸಾಂಸ್ಕೃತಿಕ ಕೇಂದ್ರವಾಗಿ ರೂಪಿಸಿದ ಶ್ರೇಯಸ್ಸು ಇಂದಿನ ಗುರು ಚನ್ನಬಸವ ದೇವರದು. ಶಿಷ್ಯರ ಬೀಡಾಗಬೇಕಾದ ಮಠಗಳು ' ಪೀಠ 'ಗಳಾಗಿ ನಿಧಿಯ ಮೇಲಿನ ಹುತ್ತಗಳಂತೆ ಜಡಗೊಂಡು ನಿಸ್ತೇಜಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಬಸವ ಧರ್ಮದ ಅನುಷ್ಠಾನಕ್ಕೆ ಶಕ್ತಿಮೀರಿ ಶ್ರಮಿಸುತ್ತಿರುವ ಬೆರಳೆಣಿಕೆಯ ವೀರಶೈವ ಮಠಗಳಲ್ಲಿ ಅಥಣಿಯ ಮೋಟಗಿಮಠವೂ ಒಂದು. ಶೂನ್ಯ ಪರಂಪರೆಯ ಈ ಮಠವನ್ನು ಮಾನವ ಕಲ್ಯಾಣದತ್ತ ಕರೆದೊಯ್ಯುತ್ತಿರುವ ಕ್ರಿಯಾಶೀಲಗುರು ಚನ್ನಬಸವದೇವರು ಕರ್ನಾಟಕದ ಗಡಿಯಂಚಿನಲ್ಲಿ ಕನ್ನಡ ಸಂಸ್ಕೃತಿ ಕಟ್ಟುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಶಿವಶರಣರ ವಚನ ಸಾಹಿತ್ಯದ ವಾರಸುದಾರಿಕೆಯನ್ನು ಒಪ್ಪಿಕೊಂಡ ಚನ್ನಬಸವದೇವರು ಪ್ರಸಿದ್ಧ ಆಧುನಿಕ ವಚನಕಾರರಲ್ಲೊಬ್ಬರು. ' ಅಥಣೀಶ 'ನ ಅಂಕಿತದಲ್ಲಿ ರಚಿತಗೊಂಡಿರುವ ಇವರ ವಚನಗಳು ಸಿದ್ಧಯ್ಯ ಪುರಾಣಿಕ, ಮಹಾದೇವ ಬಣಕಾರರ ವಚನಗಳ ಶ್ರೇಣಿಗೆ ಸೇರುವುದರಲ್ಲಿ ಸಂದೇಹವಿಲ್ಲ.

ಚನ್ನಬಸವದೇವರು ಗುರುಬಸವ ಸ್ವಾಮಿಗಳ ಶಿಷ್ಯರು. ಹತ್ತು ವರ್ಷದ ಬಾಲಕ ಚನ್ನಬಸವದೇವರು ಮೈಗೂರಿನಿಂದ ಮಠಕ್ಕೆ ಮರಿಯಾಗಿ ಬಂದರು. ಗುರುಬಸವ ಸ್ವಾಮಿಗಳು ಮಗುವಿಗೆ ಮಠದ ಗ್ರಂಥ ಭಂಡಾರ ತೋರಿಸಿ ' ಇದೇ ಈ ಮಠದ ಆಸ್ತಿ. ಇದನ್ನೇ ಬಳಸು, ಬೆಳೆಸು ' ಎಂದು ಹರಸಿದರು.

ಚನ್ನಬಸವದೇವರು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಮೈಗೂರಿನಲ್ಲಿ ೧೨-೦೨-೧೯೭೫ ರಂದು ಜನಿಸಿದರು. ತಂದೆ ಗುರುಮೂರ್ತಯ್ಯ: ತಾಯಿ ಶಿವಗಂಗಮ್ಮ. ಶಿವಗಂಗಮ್ಮನವರ ತಂದೆ ಬಸವಲಿಂಗ ಶಾಸ್ತ್ರಿಗಳು ಸಾಹಿತ್ಯ ಪ್ರಸಾರಕ್ಕಾಗಿ ಬದುಕನ್ನು ಮೀಸಲಿಟ್ಟ ಪುಣ್ಯಾತ್ಮರು. ಶ್ರೀ ಮುರುಘೇಂದ್ರ ಶಿವಯೋಗಿಗಳ ಲಿಂಗಲೀಲಾ ಸಾಮರಸ್ಯದ ಕುರಿತು ಅಮೂಲ್ಯ ಗ್ರಂಥಗಳನ್ನು ರಚಿಸಿರುವರು.

ಬಾಲಕ ಚನ್ನಬಸವದೇವರು ಮೈಗೂರಿನ ಪ್ರಾಥಮಿಕ ಶಾಲೆಯ ಐದನೇ ತರಗತಿಯಲ್ಲಿ ಓದುತ್ತಿದ್ದಾಗಲೇ ಮೋಟಗಿಮಠದ 'ಕರೆ' ಬಂತು. ಅಂದು ಚನ್ನಬಸವದೇವರ ಅಂತರಂಗದಲ್ಲಿ ಗುರುವಾಣಿ ಅನುರಣಿಸಿತು. ಅವರು ಅಥಣಿಯ ಮೋಟಗಿಮಠಕ್ಕೆ ಬಂದರು. ಶ್ರೀ ಗುರುಬಸವಸ್ವಾಮಿಗಳು ೧೬-೧೨-೧೯೮೪ ರಂದು ಇವರನ್ನು ವಟುವಾಗಿ ಸ್ವೀಕರಿಸಿದರು. ಗುರುಗಳು ಇವರನ್ನು ಜೆ.ಎ.ಹೈಸ್ಕೂಲಿನಲ್ಲಿ ಎರಡು ವರ್ಷ ಓದಿಸಿ, ಅನಂತರ ಶಿವಯೋಗಮಂದಿರಕ್ಕೆ ಕಳಿಸಿದರು.

ಹಾನಗಲ್ಲ ಶ್ರೀ ಕುಮಾರಸ್ವಾಮಿಗಳ ದಿವ್ಯಸಂಕಲ್ಪದ ಕೇಂದ್ರವಾಗಿರುವ ಶಿವಯೋಗಮಂದಿರ ವಟುಗಳ ವ್ಯಕ್ತಿತ್ವ ನಿರ್ಮಾಣ ಕೇಂದ್ರ. ಶೂನ್ಯ ತತ್ವದ ವಿಶ್ವವಿದ್ಯಾಲಯವದು. ೧೯೮೭ರ ಜೂನ್ ೨೯ರಂದು ಚನ್ನಬಸವದೇವರು ಶಿವಯೋಗ ಮಂದಿರದ ಶೂನ್ಯ ಬಯಲಿನಲ್ಲಿ ಮೊದಲ ಪಾದ ಇರಿಸಿದರು. ವಚನಾಧ್ಯಯನದಲ್ಲಿ ಮಗ್ನರಾದ ಚನ್ನಬಸವಾರ್ಯರು ಸಂಗೀತ, ಯೋಗಗಳ ಸಾಧನೆಗೈದರು. ಮನಸ್ಸು ಕವನಗಳ ಗೂಡು ಕಟ್ಟಿತು. ಪ್ರವಚನ, ಪಾದಯಾತ್ರೆಗಳ ಪರಿಕಲ್ಪನೆ ಅರ್ಥವಾಗತೊಡಗಿತು. ಸಾಧನೆ ಸಿದ್ಧಿಗೆ ಸಮೀಪಿಸಿತು. ಕೆಳದಿ ರಾಜಗುರು ಸಂಸ್ಥಾನದ ಡಾ. ಗುರುಸಿದ್ಧದೇವ ಶಿವಾಚಾರ್ಯಸ್ವಾಮಿಗಳು, ಇಟಗಿಯ ಪಂಡಿತ ಚನ್ನಬಸವಶಾಸ್ತ್ರಿಗಳು ಹಾಗೂ ಹಂಡಗಿ ಗುರುಗಳು ಚನ್ನಬಸವಾರ್ಯರಲ್ಲಿ ದೈವತ್ವವನ್ನು ಎರಕಹೊಯ್ದರು. ಐದು ವರ್ಷಗಳ ನಿರಂತರ ಸಾಧನೆ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿತು. ೧೯೯೧ ಮೇ ೨೮ ರಂದು ಚನ್ನಬಸವದೇವರು ಉನ್ನತ ಶಿಕ್ಷಣಕ್ಕೆ ಹಂಬಲಿಸಿ ಮೈಸೂರು ಸುತ್ತೂರಮಠ ಸೇರಿದರು.

ಸುತ್ತೂರುಮಠ ವಿಶಾಲ ಕರ್ನಾಟಕದ ಆಧ್ಯಾತ್ಮಿಕ ಒಲವಿನ ತಾಣ. ಮೈಸೂರು ರಾಜಮನೆತನದ ಗುರು ಲಿಂ. ಶಿವರಾತ್ರೀಶ್ವರರ ಭಕ್ತಿಯ ಬಿಲ್ವವೇ ಸುತ್ತೂರುಮಠ. ಶಿವರಾತ್ರೀಶ್ವರ ಗುರುಕುಲದಲ್ಲಿ ಚನ್ನಬಸವದೇವರು ಅಧ್ಯಾತ್ಮ ಶಿಕ್ಷಣ ಪಡೆದುದಲ್ಲದೆ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ವಿದ್ವತ್ ಪರೀಕ್ಷೆ ಕಟ್ಟಿ ಉತ್ತೀರ್ಣರಾದರು. ೧೯೯೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಪದವಿ ಪಡೆದರು. ಮೈಸೂರು, ಶ್ರೀಗಳ 'ಮೈ'ಸೂರಿನಲ್ಲಿ 'ಶಿವ'ಮೊಗ್ಗೆ ಅರಳಿಸಿತು.

ಮೈಸೂರು ಚನ್ನಬಸವದೇವರ ಸಾಧನೆಗೆ ಸಾಕ್ಷಿಯಾಗಿದೆ. ಶ್ರೀಗಳು ಪುರಾತನ ಶರಣರ ವಚನಗಳನ್ನು ವಾಚಿಸಿ ಅನುಭಾವಿಯಾದುದಲ್ಲದೆ ವಚನ ಸಾಹಿತ್ಯಕ್ಕೆ ಹೊಸ ಚಿಗುರು ಮೂಡಿಸಿದರು.

ಅಥಣಿಯ ಮೋಟಗಿಮಠ ಕಾವ್ಯದ ಜೀವಸೆಲೆ. ಇದು ಪೀಠವಲ್ಲ; ಅನುಭಾವ ಮಂಟಪ! ಈ ಪೀಠ ಪರಂಪರೆಯ ಮಹಾತ್ಮರೆಲ್ಲರೂ ತಮ್ಮ ಅನುಭಾವವನ್ನು ಶ್ರೀ ಚನ್ನಬಸವದೇವರಿಗೆ ಧಾರೆಯೆರೆದಂತಿದೆ. ಇವರು ಬರೆದದ್ದೇ ಕವಿತೆ, ಹೇಳಿದ್ದೇ ವಚನ!

ಶ್ರೀಗಳ ಸಾಹಿತ್ಯ ಹಳಕಟ್ಟಿಶ್ರೀ, ಹುಲಗಬಾಳಿಶ್ರೀ, ಬಸವ ಕಾರುಣ್ಯ ಮೊದಲಾದ ಹಲವು ಪ್ರಶಸ್ತಿಗಳಿಗೆ ಪಾತ್ರವಾಗಿದೆ.ಶಿವಯೋಗ ಮಂದಿರದ ವಟುವಾಗಿ, ಮೈಸೂರಿನ ಮಹಾವಿದ್ಯಾಲಯದ ವಿದ್ಯಾರ್ಥಿಯಾಗಿ, ಶಿವರಾತ್ರೀಶ್ವರ ಗುರುಕುಲದ ವಚನಾಭ್ಯಾಸಿಯಾಗಿ ಜ್ಞಾನಾರ್ಜನೆ ಮಾಡಿರುವ ಚನ್ನಬಸದೇವರ ವೈಚಾರಿಕತೆ ಮೆಚ್ಚುವಂಥದ್ದು. ಅಂದು ಗುರು ಹೇಳಿದ ಮಾತು ಇಂದು ಫಲಿಸಿದೆ. ಅಥಣಿ ಶಿವಯೋಗಿಗಳ ತಪೋವನಕ್ಕೆ ಈಗ ಚೈತ್ರಾಗಮನ! ವಚನ ಕೋಕಿಲಕ್ಕೆ ವಸಂತೋತ್ಸಾಹ !!

ಚನ್ನಬಸವದೇವರು ಆಧುನಿಕಯುಗದ ವರ್ತಮಾನಕ್ಕೆ ಸ್ಪಂದಿಸುವ ವೈಚಾರಿಕ ಪ್ರಜ್ಞೆಯ ' ವರ್ತಮಾನ 'ದ ಕವಿ. ಈ ಭಾವಜೀವಿಗೆ ' ಅಗಣಿತ ಜಾತಿಗಿಂತ ಮನುಜ ಪ್ರೀತಿಯೇ ಲೇಸು '. ಈ ಕಾರಣದಿಂದಲೇ ಸಾ. ಶಿ. ಮರುಳಯ್ಯನವರು ಇವರ ಕಾವ್ಯವನ್ನು ' ವೈಚಾರಿಕತೆಯ ಚಬುಕು ' ಎಂದು ಬಣ್ಣಿಸಿದ್ದಾರೆ. ಪ್ರಗತಿಪರ ಚಿಂತನೆಯ ಈ ತರುಣ ಅನುಭಾವಿ ಕವಿ ' ವಯಸ್ಸಿಗೆ ಮೀರಿದ ಅನುಭೂತಿ ಅಭಿವ್ಯಕ್ತಿ ಸಾಧಿಸಿದ್ದಾರೆ '. ಜಾತಿ-ಕುಲ, ಆಸ್ತಿ-ಅಂತಸ್ತು, ತೀರ್ಥ-ಕ್ಷೇತ್ರಗಳನ್ನು ಮೀರಿದ ಪ್ರೀತಿಯನ್ನು ಶೋಧಿಸುವ ಕವಿ ಸಹಬಾಳ್ವೆಗೆ ಹೀಗೆ ಕರೆಕೊಡುತ್ತಾರೆ–

ಬುದ್ಧ ಬಸವೇಶ್ವರರು ಏಸು ಅಂಬೇಡ್ಕರರು
ಮಹಾವೀರ ಪೈಗಂಬರ ಗಾಂಧಿ ಪ್ರವಾದಿಗಳು
ಕೋಮು ಭಾವನೆ ಬಿಡಿಸಿ ಮೈತ್ರಿ ಭಾವನೆ ಬೆಳೆಸಿ
ಸಹಬಾಳ್ವೆ ನಡೆಸೋಣ ಎಂದು ಸಾರಿಹರವರು

ಚನ್ನಬಸವದೇವರ ಕಾವ್ಯದಲ್ಲಿ ಅನುಭಾವವಿದೆ; ಮೌಢ್ಯದಲ್ಲಿ ಮುಳುಗಿರುವ ಮನುಜರ ಚಿಂತನೆಯಿದೆ. ಕಣ್ಣು ಮುಚ್ಚಿ ಗುಡಿ ಸುತ್ತುವವರನ್ನು ವ್ಯಂಗ್ಯದಿಂದ ಛೇಡಿಸುತ್ತಾರೆ. ಜನಸಾಮಾನ್ಯರನ್ನು ಅಜ್ಞಾನದ ಕೂಪಕ್ಕೆ ತಳ್ಳಿ ಮೋಜು ಮಾಡುವ ರಾಜಕಾರಣಿಗಳು, ಅಧ್ಯಾತ್ಮದ ತೆರೆಯಲ್ಲಿ ಸೋಗಲಾಡಿಗಳಾಗಿರುವ ಆಷಾಢಭೂತಿ ಮಠಾಧೀಶರು, ಖಜಾನೆಯನ್ನು ಖಾಲಿಮಾಡಿ ದೇಶದೋಚುವ ಅಧಿಕಾರಿಗಳನ್ನು ನಿರ್ಭಿಡೆ-ನಿರ್ಭೀತಿಯಿಂದ ಖಂಡಿಸುತ್ತಾರೆ. ' ವರ್ತಮಾನ ' ಇವರ ಮೊದಲ ಕವನ ಸಂಕಲನ. ಅದಕ್ಕೆ ಮುನ್ನುಡಿ ಬರೆದಿದ್ದ ಮರುಳಯ್ಯನವರು ' ಈ ಕವಿಯ ಉಜ್ವಲ ಭವಿಷ್ಯದಲ್ಲಿ ಕನ್ನಡದ ಭಾಗ್ಯ ಅಡಗಿದೆ ' ಎಂದಿದ್ದು ಇಂದು ದಿಟಗೊಂಡಿದೆ. ಮಾನವಕುಲದ ಅಮಿತ ಪ್ರೀತಿ ಹಾಗೂ ಅದಮ್ಯ ಜೀವನೋತ್ಸಾಹ ಇವರ ಸಾಹಿತ್ಯದ ಎರಡು ಧ್ರುವಗಳು. ಆರು ಕೃತಿಗಳನ್ನು ರಚಿಸಿರುವ ಚನ್ನಬಸದೇವರು ಕನ್ನಡ ಸಾರಸ್ವತ ಲೋಕದಲ್ಲಿ ಆಧುನಿಕ ವಚನಕಾರರೆಂದೇ ಸಿದ್ಧಿ-ಪ್ರಸಿದ್ಧಿ ಗಳಿಸಿಕೊಂಡಿರುವರು.

'ವರ್ತಮಾನ'ದಲ್ಲಿ ಚಿಗುರಿದ ಅವರ ವಚನ ವಲ್ಲರಿ 'ಚೈತ್ರ'ದಲ್ಲಿ ಮೈ ತುಂಬಿಕೊಂಡು ಕುಸುಮಿಸಿತು. ಅನುಭವದ ಅಂತರಾಳದಿಂದ ಹೊಮ್ಮಿದ ಮೊನಚು ಭಾಷೆಯ ೧೬೨ ವಚನಗಳ ಸಂಕಲನವೇ 'ವಚನ ಚೈತ್ರ'. ನೂರು ದಾರಿ ಹುಡುಕಿ ಗೊಂದಲದ ಗೂಡಾಗುವುದಕ್ಕಿಂತ ಬಾಳದಾರಿ ಹುಡುಕಿ ನಡೆಯುವುದೇ ಲೇಸು ಎನ್ನುತ್ತಾರೆ ಅನುಭಾವಿ ಚನ್ನಬಸವದೇವರು–

ಕಾಶಿ ಗಂಗಾ ತೀರ್ಥಕ್ಕಿಂತ
ನಮ್ಮ ನಲ್ಲಿಯ ನೀರೇ ಮೇಲು
ಗೋಕರ್ಣದ ಸಿಹಿ ಪ್ರಸಾದಕ್ಕಿಂತ
ಅವ್ವನ ಕೈತುತ್ತೇ ಮೇಲು
ತಿರುಪತಿ ಲಾಡು ಹಸಾದಕ್ಕಿಂತ
ನಮ್ಮನೆಯ ಉಂಡಿಯೇ ಮೇಲು
ಸಿಕ್ಕಿದ್ದನ್ನೆಲ್ಲ ತಿಂದು ತೇಗುವುದಕ್ಕಿಂತ
ಅಥಣೇಶ ನಿನ್ನನುಭವದ ಅಮೃತವೇ
ಎಲ್ಲದಕ್ಕೂ ಮಿಗಿಲು

'ವಚನ ಚೈತ್ರ'ದಲ್ಲಿ ಸಮಾಜ ಮುಖಿಯಾದ ಸ್ವಾಮೀಜಿ 'ವಚನ ತರಂಗ'ದಲ್ಲಿ ಅಂತರ್ಮುಖಿಗಳಾಗಿ ಸಾಮಾಜಿಕ ಚಿಂತನೆಯಲ್ಲಿ ತರಂಗಿಸುತ್ತಾರೆ. 'ತಾನು ಉಪದೇಶಕನಲ್ಲ; ಸೇವಕ' ಎಂಬ ಭಾವವನ್ನು ಗಟ್ಟಿಗೊಳಿಸುತ್ತ ವೈದ್ಯನಂತೆ ಸಮಾಜ ಚಿಕಿತ್ಸೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಪುಸ್ತಕ ಸಂಸ್ಕೃತಿಯನ್ನು ವ್ಯಾಪಕಗೊಳಿಸುವ ಸಂಕಲ್ಪಕ್ಕೆ ಬದ್ಧಗೊಂಡಿದ್ದಾರೆ.

ಕಾವಿ ತೊಡುವುದು ಮಠದಲ್ಲಿ ಕುಳಿತು
ಪೂಜೆ ಮಾಡುವುದಕ್ಕಲ್ಲ;
ತ್ಯಾಗದಿಂದ ಸಮಾಜದ ಸೇವೆ ಮಾಡಲು

–ಎಂಬ ಭಾವನೆ ಚನ್ನಬಸವದೇವರ ಬದುಕಿನ ಜೀವಾಳ. 'ಸರ್ಕಸ್ ಮಾಡುವ ಸ್ವಾಮಿಗಳು ಸಾಕು; ಸರ್ವಿಸ್ ಮಾಡುವ ಸ್ವಾಮಿಗಳು ಬೇಕು' ಎನ್ನುವ ಸ್ವಾಮೀಜಿ ಪಲ್ಲಕ್ಕಿ - ಪಂಚಾಂಗದ ಪುರೋಹಿತ ಪುತ್ಥಳಿಗಳು ನಾಶಗೊಳ್ಳದ ಹೊರತು 'ಜಂಗಮ ಧರ್ಮ'ಕ್ಕೆ ಖಂಡಿತವಾಗಿಯೂ ಬೆಲೆ ಬಾರದು ಎನ್ನುತ್ತಾರೆ.

ವರ್ತಮಾನ, ನುತಿನಮನ, ಶ್ರೀಗುರು, ವಚನಚೈತ್ರ, ವಚನತರಂಗ, ಸಂಪ್ರದಾಯದ ಸುಳಿಯಲ್ಲಿ, ಎನ್ನೊಡೆಯನ ಹಾಡುವೆ, ಮಹಾಂತ ಮಂದಾರ– ಇವು ಚನ್ನಬಸವದೇವರ ಪ್ರಕಟಿತ ಕೃತಿಗಳು. ವಚನಚೈತ್ರ ಮತ್ತು ವಚನತರಂಗ ಆಧುನಿಕ ವಚನಗಳ ಸಂಕಲನಗಳಾದರೆ ಸಂಪ್ರದಾಯದ ಸುಳಿಯಲ್ಲಿ ವೈಚಾರಿಕ ಲೇಖನಗಳ ಸಂಕಲನ. ಎನ್ನೊಡೆಯನ ಹಾಡುವೆ ಹಾಡು, ಅನುಭಾವ, ಪೂಜಾರಿ ವಿಧಿ-ವಿಧಾನಗಳನ್ನು

ವಿವರಿಸುವ ಕೃತಿ. ಮಹಾಂತ ಮಂದಾರ ಇಳಕಲ್ಲದ ಮಹಾಂತ ಶ್ರೀಗಳನ್ನು ಪರಿಚಯಿಸುತ್ತದೆ.

ಅವರ ಪ್ರವಚನ ಕೇಳಿದರೆ ಮುಂಗಾರು ಮೊದಲ ಮಳೆಯಲ್ಲಿ ನೆನೆದ ಅನುಭವವಾಗುತ್ತದೆ. ಕಿವಿಗಳಿಗೆ ಇಂಪಾದ ನಾದ-ಮಾಧುರ್ಯ, ಮನಸ್ಸಿಗೆ ತಂಪು ನೀಡುವ ವಚನಗಳು, ಹೃದಯದಲ್ಲಿ ಆನಂದದ ಅಲೆ ಎಬ್ಬಿಸುವ ಕವಿತೆಗಳು ! ಇವೆಲ್ಲಕ್ಕೂ ಮಿಗಿಲಾಗಿ ಯಾವುದೋ ಎತ್ತರಕ್ಕೇರಿಸಿ ಶರಣದರ್ಶನದ ಭಾಗ್ಯ ಒದಗಿಸುವ ದಿವ್ಯಾನುಭವ ನಮ್ಮ ಅಹಂಕಾರವನ್ನು ಶೂನ್ಯಗೊಳಿಸುತ್ತದೆ. ಬಿಜಾಪುರದ ಶ್ರೀ ಸಿದ್ಧೇಶ್ವರ ಶ್ರೀಗಳನ್ನು ನೆನಪಿಸುವ ಚನ್ನಬಸವದೇವರ ಪ್ರವಚನ ವೈಖರಿ ಅಮೋಘವಾದುದು. ಅವರ ಮಾತುಗಳಲ್ಲಿಯೇ ಕಾವ್ಯವಿದೆ. ಅನುಭವವನ್ನು ಭಾಷೆಯಲ್ಲಿ ಮೂಡಿಸುವ ಅಪರೂಪದ ಶಬ್ದಕಲಾವಿದರಿವರು. ಚಿತ್ರದುರ್ಗ, ಹೊಸದುರ್ಗ, ಮೈಸೂರು, ಬೆಂಗಳೂರು, ದಾವಣಗೆರೆ, ಜಡೆ, ಹುಬ್ಬಳ್ಳಿ, ಕಮತಗಿ, ಸೋಲಾಪುರ, ಜತ್ತ, ತೇರದಾಳ, ಬನಹಟ್ಟಿ, ರಾಯಬಾಗ, ಭಿರಡಿ, ಕೆರೂರ, ಅವರಖೋಡ, ಬೆಳಗಾವಿ ಮೊದಲಾದೆಡೆಗಳಲ್ಲಿ ಇವರು ಪ್ರವಚನ ನೀಡಿದ್ದಾರೆ.

ದುಶ್ಚಟಗಳ ನಿರ್ಮೂಲನೆಗಾಗಿ ಆಂದೋಲನ ರೂಪಿಸಿರುವ ಚನ್ನಬಸವದೇವರು ಪ್ರತಿವರ್ಷ ಬಸವ ಜಯಂತಿಗೆ ಮೂರು ದಿನಗಳ ವ್ಯಸನಮುಕ್ತ ಪಾದಯಾತ್ರೆ ಕೈಗೊಂಡು ಅಥಣಿ-ರಾಯಬಾಗ ತಾಲೂಕುಗಳ ಹಲವಾರು ಹಳ್ಳಿಗಳನ್ನು ಸುತ್ತುವರು. ಧೂಮಪಾನ, ಮದ್ಯಪಾನ, ಗುಟಕಾ ಸೇವನೆಯಿಂದ ಮುಕ್ತಗೊಂಡ ನೂರಾರು ಜನರು ಈ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವರು. ನಾವು ದೂರದರ್ಶನ, ಕಂಪ್ಯೂಟರಗಳಂಥ ವೈಜ್ಞಾನಿಕ ಪ್ರಗತಿಗಳನ್ನು ಸ್ವೀಕರಿಸುತ್ತಲೇ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕೆಂಬ ಕರೆಕೊಟ್ಟು ಯುವಕರಲ್ಲಿ ಸಂಸ್ಕೃತಿ ಪ್ರಜ್ಞೆ ಮೂಡಿಸಲು ದೇಶದುದ್ದಕ್ಕೂ ಸಂಚರಿಸಿದ್ದಾರೆ. ಸರಳ ವಿವಾಹವನ್ನು ಪ್ರೋತ್ಸಾಹಿಸಿ ಹಲವು ಕಾರ್ಯಕ್ರಮ ಹಮ್ಮಿಕೊಂಡು ಯಶಸ್ವಿಗೊಳಿಸಿರುವರು.

ಕನ್ನಡದ ಗಡಿಯಲ್ಲಿ ಕನ್ನಡ-ಸಂಸ್ಕೃತಿ ಕಟ್ಟುವ ಅದಮ್ಯ ಹಂಬಲ ಸ್ವಾಮೀಜಿಯವರದು. 'ಕನ್ನಡ ಕನ್ನಡ ಎಂದು ಬರಿ ಕಿರುಚಿದರೆ ಕನ್ನಡ ಬೆಳೆಯದು. ಕನ್ನಡ ಬದುಕಿನ ಉಸಿರಾಗಬೇಕು; ಬರೆಯುವ, ಅರಿಯುವ, ಬಳಸುವ ಮತ್ತು ನಾಡವರ ಬಾಳು ಬೆಳಗಿಸುವ ಭಾಷೆಯಾಗಬೇಕು. ಇದನ್ನು ನಾವು ದೈನಂದಿನ ಜೀವನದಲ್ಲಿ ರೂಢಿಸಿಕೊಂಡಾಗ ಮಾತ್ರ ಕನ್ನಡ ಗಟ್ಟಿಗೊಳ್ಳುತ್ತದೆ' ಎಂದು ಹೇಳುವ ಅವರು ಕರ್ನಾಟಕದಿಂದ ಕಳಚಿಕೊಂಡು ಇಂದು ಮಹಾರಾಷ್ಟ್ರದ ಭಾಗವಾಗಿರುವ ಕನ್ನಡ ಪ್ರದೇಶಗಳಲ್ಲಿ ಕನ್ನಡದ ಕಹಳೆ ಮೊಳಗಿಸಿದುದು ಅವರ ಕನ್ನಡ ಪ್ರೇಮಕ್ಕೆ ಸಾಕ್ಷಿಯಾಗಿದೆ.

ಚನ್ನಬಸವದೇವರು ಪ್ರಸಿದ್ಧ ಪ್ರವಚನ ಪಟು. ಅವರ ಪ್ರವಚನ ಜೇನಿನ ಮಳೆ ಹನಿದಂತೆ. ಸರಳ-ಸಹಜ ಭಾಷೆಯಿಂದ ಭಕ್ತರ ಹೃದಯಕ್ಕೆ ಲಗ್ಗೆ ಹಾಕುವ ಸ್ವಾಮೀಜಿ

ಸಾವಿರಾರು ಉಪನ್ಯಾಸ ನೀಡಿದ್ದಾರೆ. ಇತ್ತೀಚಿಗೆ ಬಿಡುಗಡೆಗೊಂಡ ಅವರ ಪ್ರವಚನದ ಧ್ವನಿ ಸುರುಳಿಗಳು ಶರಣ ಸಂಸ್ಕೃತಿಯನ್ನು ಜನರ ಮನಮನದಲ್ಲಿ ಬಿತ್ತಿ ಬೆಳೆದಿವೆ. ಕಳೆದ ವರ್ಷ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ತ ತಾಲೂಕು ಕೇಂದ್ರದಲ್ಲಿ ಒಂದು ತಿಂಗಳು ಕನ್ನಡದಲ್ಲಿ ಪ್ರವಚನ ನೀಡಿ, ಹೊರನಾಡ ಕನ್ನಡಿಗರಲ್ಲಿ ಆಪ್ತಭಾವ ಮೂಡಿಸಿದರು. ರಾಜಸ್ತಾನದ ಮೌಂಟ್ ಅಬುವಿನಲ್ಲಿ ಜರುಗಿದ ಅಂತರ್‌ರಾಷ್ಟ್ರೀಯ ಕಾರ್ಯಕ್ರಮದಲ್ಲಿಯೂ ಕನ್ನಡ ಉಪನ್ಯಾಸ ನೀಡಿ, ಕನ್ನಡಾಭಿಮಾನ ಮೆರೆದ ಚನ್ನಬಸವದೇವರು ಕನ್ನಡದ ಸೇವೆಯಲ್ಲಿ ತೊಡಗಿರುವ ಅನೇಕ ಸಾಹಿತಿ, ಕಲಾವಿದ, ವಿದ್ವಾಂಸ, ಗಣ್ಯರನ್ನು ಮಠಕ್ಕೆ ಆಮಂತ್ರಿಸಿ ಸನ್ಮಾನಿಸಿರುವರು. ಇಂದು ಮೋಟಗಿಮಠ ಕರ್ನಾಟಕದ ಗಡಿಯ ಶಕ್ತಿ ಕೇಂದ್ರವಾಗಿದೆ. ಸಮಾಜದ ಕೊಳೆ ತೊಳೆಯುವ ಕಾಯಕದಲ್ಲಿ ಶ್ರದ್ಧೆ-ನಿಷ್ಠೆ ಪ್ರಾಮಾಣಿಕತೆಯಿಂದ ಶ್ರಮಿಸುತ್ತಿರುವ ಸ್ವಾಮೀಜಿಯವರ ಕನ್ನಡ - ಸಂಸ್ಕೃತಿ ಪ್ರೇಮ ಅಪಾರವಾದುದು. ಇದೀಗ ಸಂಪೂರ್ಣ ನವೀಕರಣಗೊಂಡ ಮಠ, ಭಕ್ತರ ನೆಲೆವೀಡಾಗಿ ಕಂಗೊಳಿಸುತ್ತಿದೆ. ಸಂಪ್ರದಾಯದ ಸುಳಿಗೆ ಸಿಕ್ಕದೆ ಬೆಳೆಯುತ್ತಿರುವ ಈ ವಚನಮಂದಾರ ಕನ್ನಡದ ವಿಭೂತಿಯಾಗಲಿಯೆಂದು ಅಥಣೀಶರಲ್ಲಿ ಪ್ರಾರ್ಥಿಸುವೆ.

■■

ಪಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ನಮ್ಮ ದೇವರು

• ಡಾ. ಸಾ. ಶಿ. ಮರುಳಯ್ಯ

' ತಾವು ಸೌಖ್ಯವಾಗಿರುವಿರೆಂದು ಭಾವಿಸುತ್ತೇನೆ. ಬಹಳ ದಿನಗಳಾಯಿತು. ತಮ್ಮ ಸಂಪರ್ಕವಿಲ್ಲದೆ ಏನನ್ನೋ ಕಳೆದುಕೊಂಡಂತಾಗಿದೆ ' – ಎಂಬ ಒಕ್ಕಣೆಯ ಪತ್ರವೊಂದು ಅಮೇರಿಕೆಯ ಸ್ಯಾನ್ ಹೋಸೆ ಮನೆಗೆ ಬಂದು ಮುಟ್ಟಿತು. ಅದನ್ನು ತಾವೇ ಬರೆದು ತಮ್ಮ ಮಾನಸಿಕ ತುಡಿತವನ್ನು ತೋಡಿಕೊಂಡಿದ್ದವರು ನನ್ನ ಅಭಿಮಾನದ ಮೂರ್ತಿ ಅಥಣಿ ಮೋಟಗಿ ಮಠದ ನಿಯೋಜಿತ ನಿರಂಜನ ಜಂಗಮ ಪಟ್ಟಾಧಿಕಾರಿ ಶ್ರೀ ಚನ್ನಬಸವ ದೇವರವರು. ಅದನ್ನು ಓದಿದ ನನಗೆ ಆನಂದವೂ ಆಯಿತು, ಆಶ್ಚರ್ಯವೂ ಆಯಿತು. ಆನಂದ ಅವರಲ್ಲಿ ನನ್ನ ನೆನಪು ಮಾಸದೇ ಇದ್ದದ್ದು; ಅವರ ಪ್ರೀತಿಗೆ ನಾನು ಪಾತ್ರನಾದದ್ದು. ಆಶ್ಚರ್ಯ ನನ್ನ ವಿಳಾಸದ ಅಕ್ಕರಿಕೆ (Spelling)ಯಲ್ಲಿ ತಪ್ಪಿದ್ದರೂ, ಪತ್ರ ತಪ್ಪದೆ ನನ್ನ ಕೈ ಸೇರಿದ್ದು. ನಾನಿದ್ದ ನಗರದ ಹೆಸರು San Jose; ಅವರು ಬರೆದದ್ದು Sun Hose. ನಾನಿದ್ದ ಸ್ಯಾನ್ ಹೋಸೆ ಮಗನ ಮನೆಯಿಂದ ಕುಸರ್‌ಟಿನೋದಲ್ಲಿದ್ದ ನನ್ನ ಮಗಳಮನೆಗೆ ದೂರವಾಣಿಯ ಮೂಲಕ ಓದಿ ಹೇಳಿದೆ. ಕೇಳಿದ ನನ್ನ ಮಗಳು, ಅಳಿಯ, ಮೊಮ್ಮಕ್ಕಳು ಆ ಪತ್ರ ತನ್ನಿ ಅಂದರು. ಮುಂದಿನ ಶನಿವಾರ ತೆಗೆದುಕೊಂಡು ಹೋಗಿ ಕೊಟ್ಟೆ. ನನ್ನ ಮಗಳು ರಾಗಿಣಿ ಸಂಗಮೇಶ, ಪತ್ರದ 'ತಮ್ಮ ಸಂಪರ್ಕವಿಲ್ಲದೆ ಏನನ್ನೋ ಕಳೆದುಕೊಂಡಂತಾಗಿದೆ' ಎಂಬ ಸಾಲುಗಳನ್ನು ಪಾರದರ್ಶಿಕೆಯಲ್ಲಿ ಭದ್ರಪಡಿಸಿ, ಸ್ಟಿಕರ್ ಹಾಕಿ ನಿಲ್ಲಿಸಿದ್ದಳು. ನೋಡಿದವರೆಲ್ಲಾ ಆ ಸಾಲುಗಳನ್ನು ನನ್ನ ಮಗಳು ಮಾಡಿದ್ದ ಇಂಗ್ಲೀಷ ಭಾಷಾಂತರವನ್ನೂ ಓದಿ ಆತ್ಮೀಯತೆಯ ಮಹತ್ವವನ್ನು ಕೊಂಡಾಡಿದರು. ಇಂತಹ ಅಭಿಮಾನದ ಮೂರ್ತಿ ಸಿಗುವುದು ಅಪರೂಪ ಎಂದರು. ಆ ಅಪರೂಪದ ಭಾಗ್ಯ ನನಗೆ ಲಭಿಸಿತ್ತು. ನಾನು ಧನ್ಯ.

ಕ್ರಿಯಾಧಾತುಗಳಾದ 'ನೋಡು' ವ್ಯಕ್ತಿ ನಿಷ್ಠ (Subjective) 'ಕಾಣು' ವಸ್ತುನಿಷ್ಠ (objective) ಅನ್ನಿಸುತ್ತೆ. ಸಾಮಾನ್ಯವಾಗಿ ನಾವು ನೋಡುವುದು ವಸ್ತುವಿನ ಅಥವಾ ವ್ಯಕ್ತಿಯ ಬಾಹ್ಯರೂಪವನ್ನು. ಆದರೆ ಕಾಣುವುದು, ಕಾಣಬೇಕಾದದ್ದು ಅದರಾಂತರ್ಯದ

'ಆತ್ಮಜ್ಯೋತಿ'ಯನ್ನು. ಈ ಎರಡೂ ಅರ್ಥದಲ್ಲಿ ಗ್ರಹಿಸಿ ಹೇಳುತ್ತಿದ್ದೇನೆ ಮನ್ಮನೋ ಮೂರ್ತಿ ಶ್ರೀ ಚನ್ನಬಸವದೇವರುರವರನ್ನು. ನಾನು ಶ್ರೀಗಳವರನ್ನು ನೋಡಿದ್ದು ಮೂರು ಸಲ; ಆದರೆ ಕಂಡದ್ದು ಅನೇಕ ಸಲ. ಲೆಕ್ಕಕ್ಕೆ ಸಂಖ್ಯೆಯಿಲ್ಲದಷ್ಟು ಬಾರಿ. ನನ್ನ ಅವರ ಮೊದಲ ಭೇಟಿ ಆದದ್ದು ತುಮಕೂರು ಜಿಲ್ಲೆಯ ಚೇಳೂರು ಗ್ರಾಮದಲ್ಲಿ. ಶ್ರೀ ಸಿದ್ಧಗಂಗಾಮಠದ 'ಸಿದ್ಧಗಂಗೆಯ ಶುದ್ಧಗಂಗೆ' ಶ್ರೀಶಿವಕುಮಾರ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಅಂದು ಆ ಊರಲ್ಲಿ ಏರ್ಪಟ್ಟಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾವಿಬ್ಬರೂ ಅತಿಥಿಗಳು. ಎರಡನೆಯ ಭೇಟಿ ಬೆಂಗಳೂರಲ್ಲಿ, ನಮ್ಮ ಮನೆಯಲ್ಲಿ. ಬಹುಶಃ ಅವರ 'ಸಂಪ್ರದಾಯದ ಸುಳಿಯಲ್ಲಿ' ಪುಸ್ತಕದ ಮುದ್ರಣ ಸಂದರ್ಭದಲ್ಲಿ. ಮೂರನೆಯ ಭೇಟಿ, ಚಿಕ್ಕನಾಯಕನಹಳ್ಳಿ ತಾಲೂಕು. ಕುಪ್ಪೂರು ಗ್ರಾಮದ ಶ್ರೀಗುರುಮರುಳುಸಿದ್ಧೇಶ್ವರಸ್ವಾಮಿ ಗದ್ದುಗೆ ಜಾತ್ರೆಯಲ್ಲಿ; ನನ್ನ ಪರಮಾರಾಧ್ಯದೈವ, ಕುಪ್ಪೂರುಗದ್ದಿಗೆ ಮಠಾಧೀಶ ಷ. ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ. ಅಂದು ಶ್ರೀ ಚನ್ನಬಸವದೇವರವರ ಅದ್ಭುತವಾದ ಭಾಷಣ ಕಾರ್ಯಕ್ರಮ ನೆರವೇರಿತು. ಜಾತ್ರೆಗಾಗಿ ಬಂದಿದ್ದ ಅಸಂಖ್ಯಾತ ಜನಸ್ತೋಮ ತುಂಬಾ ಕಿರುಹರೆಯದ ಶ್ರೀ ಚನ್ನಬಸವದೇವರವರ ಭಾಷಣ ಕೇಳಿ ಪರಮಾನಂದದಲ್ಲಿ ಓಲಾಡಿತು. ಮಾರನೆಯದಿನ ಬೆಳಿಗ್ಗೆ ಎಲ್ಲರೂ ಬಂದು ಬಂದು ಶ್ರೀ ದೇವರುರವರನ್ನು ಮುಟ್ಟಿ ಮುಟ್ಟಿ ಮಾತನಾಡಿಸಿ ತೃಪ್ತರಾಗುತ್ತಿದ್ದರು. ಇಂತಹ ವಾಕ್‌ಪ್ರತಿಭೆ ಇಷ್ಟು ಚಿಕ್ಕವಯಸ್ಸಿನಲ್ಲಿ ಸಿದ್ಧಿಸಿದ್ದು ಶ್ರೀ ಗುರುವಿನ ಕರುಣೆ ಎಂಬುದು ಎಲ್ಲರಿಗೂ ಭಾಸವಾಗುತ್ತಿತ್ತು.

ನಾನು ಕಂಡಂತೆ :

'ನಮ್ಮ ದೇವರು' ದುಂಡುಮುಖದ, ಮುಗ್ಧತೆಯು ಮುಗುಳುನಗುತ್ತಿರುವ ಮುಖಮಂಡಲದ ಮೋಹನಾಕಾರ ಮೂರ್ತಿ. ಅವರನ್ನು ನೆನೆದಾಗಲೆಲ್ಲ ಬುದ್ಧದೇವನ ಭಾವಬಿಂಬವೊಂದು ನನ್ನ ಮನಃಪಟಲದಲ್ಲಿ ಸುಳಿದಾಡುತ್ತಿತ್ತು. ಸಂಪರ್ಕ ಹೆಚ್ಚಿ. ಸ್ನೇಹ ವೃದ್ಧಿಯಾದಂತೆ 'ಸದುವಿನಯವೇ ಸದಾಶಿವನ ಪೂಜೆ' ಎಂಬ ದರ್ಶನಕ್ಕೆ ಅವರೇ ಒಂದು ನಿದರ್ಶನವಾದರು. ಮೊನ್ನೆ ಅಥಣಿಯಿಂದ ಪತ್ರ ಬರೆದು. ಅದರಲ್ಲಿ 'ನನ್ನ ಮೊದಲ ಬರಹದಿಂದಲೂ ತಿದ್ದಿ ತೀಡಿ ರೂಪಿಸಿದವರು ತಾವು. ತಮ್ಮ ಮಾರ್ಗದರ್ಶನವನ್ನು ನಿತ್ಯವೂ ಅಪೇಕ್ಷಿಸುವೆ' ಎಂದು ಶ್ರುತಪಡಿಸಿದ್ದರು. ವಿದ್ಯೆಗೆ ವಿನಯ ಭೂಷಣ. ನನ್ನ 'ದೇವರು' ಕವಿಯಾಗಿ, ವಚನಕಾರರಾಗಿ. ಸಾಹಿತ್ಯ ವಿಮರ್ಶಕರಾಗಿ, ಸಮಾಜ ಸುಧಾರಣೆಯ ನೇತಾರರಾಗಿ ಚಿಕ್ಕ ವಯಸ್ಸಿನಲ್ಲೇ ಬಹು ಎತ್ತರಕ್ಕೆ ಬೆಳೆದಿದ್ದಾರೆ. ಸಾಹಿತಿಯಾಗಿ 'ವಚನ ತರಂಗ'ದಿಂದ 'ವಚನಚೈತ್ರ'ದವರೆಗೆ ಸುವಿಸ್ತಾರ ಗದ್ಯಪದ್ಯ ರಚನೆಮಾಡಿದ್ದಾರೆ. ಇದು ಸಾಮಾನ್ಯನಿಗೆ ಸಾಧ್ಯವಾಗುವಂಥದಲ್ಲ. ಇವರು ನಿಜಕ್ಕೂ 'ಕಾರಣಪುರುಷ'ರಿರಬೇಕು ಎಂದಂದುಕೊಂಡೆ; ಪುರುಷನಿಗೆ (Person) ಮಿಗಿಲು ಪುರುಷಕಾರ (Personality) ಎಂಬ ಮಾತು ಚಪ್ಪರಿಸುತ್ತಾ, ಅವರ ಭೂಮ ವ್ಯಕ್ತಿತ್ವಕ್ಕೆ ಮನಸಾ ಮಣಿದೆ.

ನಾನು ಕಂಡಂತೆ :

ನಮ್ಮ ' ದೇವರು ' ವಾತ್ಸಲ್ಯಮಯಿ. ಜಾತಿಮತಭೇದವಿಲ್ಲದೆ, ದೊಡ್ಡವರು, ಚಿಕ್ಕವರು ಎಂಬ ವ್ಯತ್ಯಾಸವಿಟ್ಟಿರದೆ, ' ಉಳ್ಳವರು ', ' ಇಲ್ಲವರು ' ಎಂಬ ತಾರತಮ್ಯ ಎಣಿಸದೆ ಸ್ತ್ರೀಯೆನ್ನದೆ, ಪುರುಷನೆನ್ನದೆ ಎಲ್ಲರಿಗೂ ತಮ್ಮ ವಾತ್ಸಲ್ಯದ ಪಕ್ಷದಲ್ಲಿ ಆಶ್ರಯವಿತ್ತು ಆಶೀರ್ವದಿಸುವಷ್ಟು ವಿಶಾಲಹೃದಯಿ. ಈ ಬಗೆಯ ಮಾನವೀಯತೆ ಅಂಗಡಿಯಲ್ಲಿ ಸಿಕ್ಕುವ ಸರಕಲ್ಲ, ಅದು ಶಿವಾಂಶ ಸಂಭೂತ ಚೇತನವು ಪಡೆದುಕೊಂಡು ಬಂದ ಸಾಂಸ್ಕೃತಿಕ ಸಿದ್ಧಿ ಅಥವಾ ವ್ಯಕ್ತಿ ತನ್ನ ಪಶು ಪ್ರವೃತ್ತಿಯಿಂದ ಬಿಡುಗಡೆಹೊಂದಿ ತನ್ನಂತೆಯೇ ಪರರು ಎಂಬ ಸದ್ಭಾವನೆಯನ್ನು ಜಾಗೃತಗೊಳಿಸಿಕೊಂಡಾಗ ಅವತರಿಸುವ ಆತ್ಮಜ್ಞಾನ ! ನಮ್ಮ ದೇವರು ಮೊದಲ ವರ್ಗಕ್ಕೆ ಸೇರಿದವರು. ' ಇತರರು ನಿನ್ನ ಬಗೆಗೆ ಹೇಗೆ ನಡೆದುಕೊಳ್ಳಬೇಕೆಂದು ಬಯಸುತ್ತೀಯೋ ಹಾಗೆ ನೀನೂ ಇತರರ ಬಗೆಗೆ ನಡೆದುಕೊಳ್ಳುವುದನ್ನು ಕಲಿ ' ಎಂಬ ಸಿದ್ಧಾಂತದವರು ನಮ್ಮ ಚನ್ನಬಸವದೇವರು.

ನಾನು ಕಂಡಂತೆ :

' ನಮ್ಮ ದೇವರು ' ಬಸವಣ್ಣನವರ ಆದರ್ಶಕ್ಕೆ ಬದುಕಿದವರು. ವ್ಯಕ್ತಿ ಪ್ರಧಾನ ಸಮಾಜ ರಚನೆ (Man Oriented Society) ಅಣ್ಣನು ಸದಾಕಾಣುತ್ತಿದ್ದ ಸ್ವರ್ಣಸ್ವಪ್ನ. ವ್ಯಕ್ತಿ ಸುಧಾರಿಸಿದರೆ ಸಮಾಜ ಸುಧಾರಿಸುತ್ತದೆ, ರಾಷ್ಟ್ರ ಸುಧಾರಿಸುತ್ತದೆ, ಬೆಳೆಯುತ್ತದೆ. ವ್ಯಷ್ಟಿಯನ್ನು ಮರೆತು ಸಮಷ್ಟಿ ಸುಧಾರಿಸುತ್ತೇನೆನ್ನುವುದು ಅರ್ಥವಿಲ್ಲದ ಮಾತು. ಅಂತೆಯೇ ವ್ಯಕ್ತಿ ಕೆಲಸಕ್ಕೆ ಶುದ್ಧನಾದರೆ ಸಾಲದು, ಮನಕ್ಕೆ ಶುದ್ಧನಾಗಬೇಕು, ಭಾವಕ್ಕೆ ಶುದ್ಧನಾಗಬೇಕು. ಅಂತಾದರೆ ಮಾತ್ರ ಕೂಡಲಸಂಗಯ್ಯ ' ಇತ್ತ ಬಾ ' ಎಂದೆತ್ತಿಕೊಳ್ಳುತ್ತಾನೆ ! ಹುತ್ತವ ಬಡಿದರೆ ಹಾವು ಸಾಯುವುದಿಲ್ಲ. ಅದರಲ್ಲಿ ಅಡಗಿ ಕುಳಿತಿರುವ ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲತೆ, ಕುಹಕ, ಕ್ರೋಧ, ಮಿಥ್ಯೆ ಇವುಗಳನ್ನು ನಾಲಗೆಯ ಮೇಲಿಂದ ತೆಗೆದು ಕಳೆಯಬೇಕು. ಇದು ಅಣ್ಣನ ಸಂಸ್ಕೃತಿಯ ಸಮೀಕ್ಷೆ, ಸಜ್ಜನಿಕೆಯ ಮನೀಷೆ. ಅಣ್ಣನ ಈ ಆದೇಶವನ್ನು ಆಗುಮಾಡುವ ಉದ್ಯಮದಲ್ಲಿ ಕಂಕಣಕಟ್ಟಿ ನಿಂತವರು ' ನಮ್ಮದೇವರು '. ಬಸವಣ್ಣನವರ ದೃಷ್ಟಿಯಲ್ಲಿ –

> ದೇವನಿಗಿಂತ ಜೀವ ದೊಡ್ಡದು
> ಕೈಲಾಸಕ್ಕಿಂತ ಕಲ್ಯಾಣ ದೊಡ್ಡದು

ನಮ್ಮ ' ಅಥಣೀಶ 'ಗೆ ಅರ್ಥಾದಿಗಳಿಗಿಂತ ಅಥಣಿಯ ಉದ್ಧಾರ ದೊಡ್ಡದು ! ಆದರಿದನ್ನು ಸಂಕುಚಿತಾರ್ಥದಲ್ಲಿ ಯಾರೂ ಸ್ವೀಕರಿಸಬಾರದು. ಅಣ್ಣನಂತೆ ಇವರೂ ಮಣ್ಣಿಗೆ ಬದುಕಿದವರು, ಇಹವನ್ನು, ಇಹದ ಮಂಗಲವನ್ನು ಮೆಚ್ಚಿದವರು, ಇಹವನ್ನೇ ಪರವನ್ನಾಗಿ ಮಾಡಲೆಳಿಸಿದವರು; ಅದಕ್ಕಾಗಿ ವಿಚಾರಕ್ರಾಂತಿಗೆ ಆಹ್ವಾನವಿತ್ತವರು. ಲೋಕವನ್ನು ಮರೆತದ್ದು ಧರ್ಮವಲ್ಲ, ಆತ್ಮವನ್ನರಿಯದುದು ಅಧ್ಯಾತ್ಮವಲ್ಲ.

ಅಂತೆಯೇ ಆತ್ಮಜ್ಞಾನದಿಂದ ಆವಿರ್ಭವಿಸಿದ ದರ್ಶನ ಲೋಕಸಂಗ್ರಹ ಕಾರ್ಯದಲ್ಲಿ ಸದಾ ನಿರತವಾಗಲಪೇಕ್ಷಿಸಿದವರು. ಆದ್ದರಿಂದ ಜಗದಣ್ಣ ಬಸವಣ್ಣನಂತೆ, ನಮ್ಮ 'ದೇವರಿ'ಗೆ–

ಕರ್ತವ್ಯಕ್ಕೆ ಮಿಗಿಲಾದ ವ್ರತ ಇಲ್ಲ
ಆತ್ಮಬಲಕ್ಕೆ ಅತಿಯಾದ ಶಕ್ತಿ ಇಲ್ಲ
ಸಾಹಸಿಯ ಕ್ರಮ ಎಂದಿಗೂ ವ್ಯರ್ಥವಾಗುವುದಿಲ್ಲ

ಎಂಬ ಅಚಲ ನಂಬಿಕೆ.

ನಾನು ಕಂಡಂತೆ :

'ನಮ್ಮ ದೇವರು' ಭಕ್ತರ ಮನೆಯ ಬಿನ್ನಹಕ್ಕೆ ಬಾಯ್ತೆರೆದುಕೊಂಡು ಹೋಗುವವರಲ್ಲ. ಆ ಕುರಿತು ಅವರ 'ಸಂಪ್ರದಾಯದ ಸುಳಿಯಲ್ಲಿ' ಎಂಬ ವಿಚಾರ ಪ್ರಚೋದಕ ಲೇಖನಗಳ ಸಂಕಲನಕ್ಕೆ ನಾನು ಬರೆದ ಮುನ್ನುಡಿಯ ಎರಡು ಮಾತು ಹೇಳಲು ಇಚ್ಛಿಸುತ್ತೇನೆ. ಅದರಲ್ಲಿ ಕೆಲವು ನುಡಿಗಳು ಹೀಗಿದ್ದವು:

'ಸಾಮಾನ್ಯವಾಗಿ, ಸ್ವಾಮಿಗಳು ಸಾಮಾಜಿಕ ಕಳಕಳಿಯಿಂದ ಬಹುದೂರವಿರುತ್ತಾರೆ. ಬಿನ್ನಹ, ದಕ್ಷಿಣೆಗಳಿಗೆ ಅವರಲ್ಲಿ ವಿಶೇಷ ಆದ್ಯತೆ. ಮೂಢರ ಮೌಢ್ಯವೇ ಅವರ ಬಂಡವಾಳ. ವಸ್ತುಸ್ಥಿತಿ ಹೀಗಿರುವುದರಿಂದ ಜನತೆಯನ್ನು ಜಾಗೃತಗೊಳಿಸಿ, ವೈಚಾರಿಕತೆಯ ನೆಲೆಗಟ್ಟಿನ ಮೇಲೆ ನಿಲ್ಲಿಸಲು ದಿಟ್ಟ ಹೆಜ್ಜೆ ಇಡುತ್ತಿರುವವರು 'ಅಥಣೀಶ'ರು. ಧರ್ಮಗುರುಗಳು ಕೇವಲ ಧರ್ಮಬೋಧನೆ ಮಾಡುತ್ತಾ ಕುಳಿತರೆ ಸಾಲದು, ನುಡಿದಂತೆ ತಾವೂ ನಡೆಯಬೇಕು. ಸದ್ಭಕ್ತರೆಡೆಯಲ್ಲಿ ಸದ್ಭಾವನೆಯ ಬಿತ್ತು ಬಿತ್ತಬೇಕು. ಸದಾಚಾರ ಸಂಪನ್ನತೆಯನ್ನು ಅನುಷ್ಠಾನಕ್ಕೆ ತರಬೇಕು. ಇದು ಕೃತಿಕಾರರ ಹಸಿವು. ಹಂಬಲ. ಅಂತಹ ಪೂಜ್ಯರ ಆತ್ಮಬಲ ಹಾಗೂ ಕರ್ತೃತ್ವ ಶಕ್ತಿಗಳಿಗೆ ಸಹಸ್ರ ಸಹಸ್ರ ಪ್ರಣಾಮಗಳು. ಈ ಮಾತುಗಳು ಇಂದಿಗೂ ಪ್ರಸ್ತುತವಾದ್ದರಿಂದ ಉಲ್ಲೇಖಿಸಿ, ಶ್ರೀ ಚನ್ನಬಸವದೇವರವರು ಚಿರಾಯುವಾಗಲಿ, ಯಶೋಭಾಗಿಗಳಾಗಲಿ, ಸಮಾಜದ ಬೆಳಕಾಗಲಿ ಎಂದು ಆಶಿಸಿ, ಪೂಜ್ಯರು ಸ್ವೀಕರಿಸಲಿರುವ ನಿರಂಜನ ಜಂಗಮ ಪಟ್ಟಾಧಿಕಾರಕ್ಕೆ ಸಕಲ ಶುಭಗಳನ್ನು ಕೋರಿ ವಿರಮಿಸುತ್ತೇನೆ.

■■

ವರ್ತಮಾನ : ಒಂದು ಅವಲೋಕನ

● ಡಾ. ಎಂ. ಬಿ. ಹೂಗಾರ

' ವರ್ತಮಾನ ' ಅಥಣಿಯ ಮೋಟಗಿ ಮಠದ ಪೂಜ್ಯಶ್ರೀ ಚನ್ನಬಸವದೇವರು ಅವರ ಕವನ ಸಂಕಲನ. ಅಥಣೀಶ ಎಂಬ ಕಾವ್ಯನಾಮದಿಂದ ಈಗಾಗಲೆ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಿತರಾದ ಇವರು ಆಧುನಿಕ ವಚನಕಾರರೆಂದೇ ಹೆಚ್ಚು ಗಮನ ಸೆಳೆಯುತ್ತಾರೆ. ಸಾ. ಶಿ. ಮರುಳಯ್ಯನವರು ' ವರ್ತಮಾನ 'ಕ್ಕೆ ಬೆನ್ನುಡಿ ಬರೆಯುತ್ತ ಶ್ರೀ ಚನ್ನಬಸವದೇವರು ' ಅನುಭಾವಿ ಕವಿ 'ಯೆಂದು ಗುರುತಿಸಿದ್ದಾರೆ.

ಪ್ರಸ್ತುತ ವರ್ತಮಾನದಲ್ಲಿ ಮೂವತ್ತಕ್ಕೂ ಹೆಚ್ಚು ಕವಿತೆಗಳಿವೆ. ಈ ಕವಿತೆಗಳನ್ನೆಲ್ಲ ಎರಡು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಬಹುದು. ಒಂದು-ಕವಿಯಲ್ಲಿರುವ ಆದರ್ಶ, ದೇಶದ ಮೇಲಿರುವ ಅಪಾರ ಕಾಳಜಿ. ಪ್ರೀತಿ. ಇನ್ನೊಂದು ಮಾನವನಲ್ಲಿರುವ ದೌರ್ಬಲ್ಯ. ಇವುಗಳ ಜೊತೆಗೆ ಒಟ್ಟು ವರ್ತಮಾನದ ಸಂಕೀರ್ಣ ಬದುಕಿನ ತುಡಿತ ಇಲ್ಲಿದೆ. ಶರಣಾರ್ಥಿ, ಭುವಿನುತ, ಮಹಿಮರ ಮರೆಯದಿರಿ ಶಿವಶರಣರು, ನಾನು ನೀನು ಮುಂತಾದ ಕವಿತೆಗಳು ಒಂದನೆಯ ಗುಂಪಿಗೆ ಸೇರಿದರೆ ಉಳಿದೆಲ್ಲ ಕವನಗಳು ಮಾನವನಲ್ಲಿರುವ ಒಂದಿಲ್ಲೊಂದು ದೌರ್ಬಲ್ಯವನ್ನು ದಾಖಲಿಸುತ್ತ ಎರಡನೆಯ ಗುಂಪನ್ನು ಸೇರುತ್ತವೆ.

ಪಂಪ - ರನ್ನ, ಕುಮಾರವ್ಯಾಸ - ಚಾಮರಸ, ಕುವೆಂಪು - ಬೇಂದ್ರೆ ಮುಂತಾದ ಕವಿಗಳು ತಮ್ಮ ಕಾವ್ಯಕ್ಕೆ ಸುವಿಚಾರವನ್ನು ಸನ್ಮತಿಯನ್ನು ನೀಡಲೆಂದು ದೇವತೆಯನ್ನು ಸ್ತುತಿಸುವ ಮೂಲಕ ಒಂದು ಪರಂಪರೆಯನ್ನೇ ಹುಟ್ಟುಹಾಕಿದ್ದನ್ನು ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ನಾವು ಕಾಣುತ್ತೇವೆ. (ನವ್ಯ ದಲಿತ ಬಂಡಾಯದವರನ್ನು ಹೊರತುಪಡಿಸಿ) ಪೂಜ್ಯ ಶ್ರೀಗಳು ಕೂಡ ಇದಕ್ಕೆ ಹೊರತಾಗಿಲ್ಲ. ಸಂಕಲನದ ಮೊದಲ ಪದ್ಯವೇ ' ಶರಣಾರ್ಥಿ '. ಕವಿ ತಾಯಿ ಭಾರತಿಯನ್ನು ಕವನದಾರತಿಯ ಮೂಲಕ ಸನ್ಮತಿಯನ್ನು ಈಯುವಂತೆ ಪ್ರಾರ್ಥಿಸುತ್ತಾರೆ. ಮನುಷ್ಯನಲ್ಲಿರುವ ಮೋಸ-ದ್ವೇಷಗಳನ್ನೆಲ್ಲ ಅಳಿಸಿ ಪ್ರೀತಿ ನೆಲೆಗೊಳ್ಳುವಂತೆ ಕರುಣೆಸೆಂದು ಕೇಳಿಕೊಳ್ಳುತ್ತ ಈ ಪ್ರೀತಿಯೇ ಬದುಕಿನ ದಾರಿ ದೀಪವಾಗಲೆಂದು ಬಯಸುತ್ತಾರೆ ಕವಿ.

ವರ್ತಮಾನದ ಬದುಕು ತುಂಬ ಸಂಕೀರ್ಣವಾಗಿದೆ. ಜೀವನ ಮೌಲ್ಯಗಳಾದ ಪ್ರೀತಿ-ವಿಶ್ವಾಸಗಳು ಮರೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಬದುಕಿಗೆ ನೀತಿಯ ಪಾಠವನ್ನು ಕಲಿಸಿದ ಗುರು ಹಿರಿಯರನ್ನು ' ದೂರದಿರಿ ' ಎಂದು ಕವಿ ಕಿವಿಮಾತನ್ನು ಹೇಳುತ್ತಾರೆ. ಬುದ್ಧ, ಕ್ರೈಸ್ತ, ಪೈಗಂಬರ, ಬಸವ, ಕನಕದಾಸ ಮೊದಲಾದವರನ್ನು ಒಂದೊಂದು ಪಂಥದವರೆಂದು ಗುರುತಿಸದೆ ಸಮಗ್ರ ಮಾನವ ಕುಲ ಉದ್ಧಾರಕರೆಂದು ಪರಿಗಣಿಸಬೇಕು. ಇಂಥ ಮಹಾಸಂತ ಶ್ರೇಷ್ಠರಿಗೆ ಜಾತಿಯ ಲೇಪನವನ್ನು ಹಚ್ಚಬಾರದೆಂದು ಹೇಳುವುದರ ಜೊತೆಗೆ ಮಾನವ ಪ್ರೇಮವನ್ನು ನಮ್ಮಲ್ಲಿ ಬೆಳಸಿಕೊಳ್ಳಬೇಕೆಂಬ ಸೂಚನೆಯನ್ನೂ ಕೊಡುತ್ತಾರೆ.

ಸ್ವಾಮೀಜಿಯವರಲ್ಲಿ ಅದಮ್ಯ ಜೀವನ ಪ್ರೀತಿಯಿದೆ. ಈ ಬದುಕು ಸತ್ಯ-ಸುಂದರ. ಅದನ್ನು ನಚ್ಚಿ ಬಾಳಬೇಕೆಂಬುದನ್ನು ಸೊಗಸಾಗಿ ವರ್ತಮಾನ ಕವನದಲ್ಲಿ ಹೇಳುತ್ತಾರೆ. ನಮ್ಮ ಭವಿಷ್ಯವನ್ನು ನಾವೇ ಬರೆಯಬೇಕು ಹೊರತು ಇನ್ನೊಬ್ಬರು ಬರೆಯಲಾರರು ಎಂದು ಯುವ ಜನತೆಯಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತಾರೆ. ಆದ್ದರಿಂದ–

ಅವರಿವರ ಮಾತುಗಳ ಜಳ್ಳುಗಳ ತೂರಿ ಬಿಡು
ಸತ್ಯಕ್ಕೆ ನೀನಾಗು ದಾಸ
ಕಾಯಕವೇ ಕೈಲಾಸ

ಎಂದು ಹೇಳುವಲ್ಲಿ ವರ್ತಮಾನದ ಬಗ್ಗೆ ಕವಿಗಿರುವ ಗಾಢವಾದ ಕಾಳಜಿ ವ್ಯಕ್ತವಾಗುತ್ತದೆ. ಬದುಕಿನಲ್ಲಿ ಎಂಥ ಕಷ್ಟಬಂದರೂ ಧೈರ್ಯದಿಂದ ಎದುರಿಸಬೇಕೆಂದು ಸೂಚಿಸುತ್ತಾರೆ.

ತಾಳಿ ಬಾಳುತ ಬದುಕು
ಕಲ್ಲಾಗು ಎಲ್ಲದಕು
ಸಹನೆಯೇ ಶಿವನೊಲುಮೆ
ತಿಳಿದು ಬೆಳಗು

ಈ ಸಾಲುಗಳನ್ನು ಓದುತ್ತಿದ್ದಂತೆ ಡಿ.ವ್ಹಿ.ಜಿ.ಯವರ ' ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ವಿಧಿಯ ಮಳೆ ಸುರಿಯೆ ' ಎಂಬ ಪದ್ಯ ನೆನಪಾಗುತ್ತದೆ. ಈ ಪ್ರಪಂಚದಲ್ಲಿ ಹೇಗೆ ಬದುಕಬೇಕೆಂಬುದನ್ನು ಡಿ.ವ್ಹಿ.ಜಿ. ಸೊಗಸಾಗಿ ಹೇಳುವಂತೆ ಪೂಜ್ಯಶ್ರೀಗಳೂ ಬದುಕನ್ನು ಪ್ರೀತಿಸುವಂತೆ ಸುಂದರವಾಗಿ ಬಾಳುವಂತೆ ತಿಳಿಸುತ್ತಾರೆ. ಜೀವನದಲ್ಲಿ ಎದುರಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಧೈರ್ಯದಿಂದ ಮುನ್ನುಗ್ಗಬೇಕೆನ್ನುತ್ತಾರೆ.

'ಮಿಡಿತ' ಕವನದಲ್ಲಿ ಡಂಬಾಚಾರ, ಮೋಸ, ವಂಚನೆಗಳಿಂದ ತುಂಬಿಕೊಂಡ ಈ ಸಮಾಜದಲ್ಲಿ ಗುಣವಂತರನ್ನು ಹುಡುಕುವ ತುಡಿತ-ಮಿಡಿತದ ಸ್ಪಷ್ಟ ಚಿತ್ರಣವಿದೆ. ನನ್ನವರು ಎನ್ನುವ ಮಾತಾದರು ಉಳಿದಿಹುದೆ ಇಲ್ಲಿ ಎಂದು ಅತ್ಯಂತ ಕಳಕಳಿಯಿಂದ ನುಡಿಯುತ್ತಾರೆ.

ನನ್ನವರು ಎನ್ನುವಾ ನುಡಿಯೊಂದು ಉಳಿದಿಹುದೆ
ನನ್ನ ಮಿಡಿತದ ನುಡಿಯ ಕೇಳುವವರುಂಟೆ ?
ಏನು ಮಾಡಲಿ ನಾನು ಹೇಗೆ ಹೇಳಲಿ ಇದನು
ಸಮತೆಯಲಿ ಬಾಳಿಹುದು ಎಂಬುದನ್ನು

ಈ ಮೇಲಿನ ಪದ್ಯದಲ್ಲಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಧೋರಣೆ ವ್ಯಕ್ತಗೊಂಡಿದೆ. 'ಸಮತೆಯಲಿ ಬಾಳಿಹುದು' ಎಂದು ಹೇಳುವಲ್ಲಿಯೇ ಧ್ವನಿಯಡಗಿದೆ.

ಪೂಜ್ಯರ ಕಾವ್ಯದಲ್ಲಿ ಮತ್ತೆ ಮತ್ತೆ ಕಣ್ಣಿಗೆ ಎದ್ದು ಕಾಣುವ ಅಂಶವೆಂದರೆ ಅವರ ಜೀವನ ಪ್ರೀತಿ. 'ಎಲ್ಲಿಗೆ ಪಯಣ ?' ಕವನದಲ್ಲಿ ನಿನ್ನನ್ನು ನೀ ತಿಳಿದುಕೊಂಡು ಒಳ್ಳೆಯ ಬದುಕನ್ನು ಬದುಕೆಂದು ಸೂಚಿಸುತ್ತಾರೆ. ಲೇಸೆನಿಸಿದ ಬದುಕು ಕ್ಷಣವಾದರೂ ಸರಿ ಎನ್ನುತ್ತಾರೆ.

'ಬದುಕು' ಕವನ ತುಂಬ ಅರ್ಥಪೂರ್ಣವಾಗಿದೆ. ಮೂರು ದಿನದ ಈ ಬದುಕಿನಲ್ಲಿ ದ್ವೇಷ-ರೋಷ ಯಾಕೆ ? ಕೂಡಿ ಬಾಳಿ ಸ್ವರ್ಗಸುಖವನ್ನನುಭವಿಸಿ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಸೂಚಿಸುತ್ತಾರೆ. ಈ ನಿಸರ್ಗಕೂಡ ಮಾನವನ ಸುಂದರ ಬದುಕಿಗೆ ಚೇತನವನ್ನೀಯುತ್ತದೆ.

ತಾರೆ ಆಗಸ ನೀರು ಭೂಮಿಯು
ಸೃಷ್ಟಿ ಶ್ರೇಷ್ಠತೆ ಒಂದೇ ಅಲ್ಲವೇ ?
ಬಾಳ ಬಟ್ಟೆಗೆ ದೀಕ್ಷೆ ನೀಡಿವೆ
ನಮ್ಮ ಬದುಕಿಗೆ ಬೆಳಕ ತಂದಿವೆ

ಈ ಸೃಷ್ಟಿ ನಾವು ಒಂದಾಗಿ ಸಾಗುವಂತಹ ಪಾಠ ಹೇಳಿಕೊಡುತ್ತಲಿದೆ. ಒಂದೇ ನೀರು ಒಂದೇ ಭೂಮಿ ಒಂದೇ ಗಾಳಿ ಇದರಲ್ಲಿ ಎಲ್ಲಿದೆ ಭೇದ ? ಬದುಕಿನ ದಾರಿಗೆ ಈ ನಿಸರ್ಗ ದೀಕ್ಷೆ ನೀಡಿದೆ. ಬಾಳಿಗೆ ಬೆಳಕು ತಂದಿದೆ ಎಂದು ಸೊಗಸಾಗಿ ಹೇಳಿದ್ದಾರೆ.

'ಕವಿ ಕಾಲಮಾನದ ಕೂಸು' ಸಮಕಾಲಿನ ಸಮಸ್ಯೆಗಳಿಗೆ ಅವನು ಸ್ಪಂದಿಸುತ್ತಾನೆ. ತನ್ನ ಸುತ್ತಲಿನ ಪರಿಸರದ ಪ್ರಭಾವಕ್ಕೆ ಒಳಗಾಗಿ ತನ್ನ ಅನುಭವಗಳಿಗೆ ಮೂರ್ತಸ್ವರೂಪವನ್ನು ನೀಡುತ್ತಾನೆನ್ನುವುದಕ್ಕೆ 'ಕೋಮು ಸೌಹಾರ್ದ' ಒಂದು ಒಳ್ಳೆಯ ಉದಾಹರಣೆಯಾಗಿದೆ. 'ಜಾತಿ-ಧರ್ಮ-ಭಾಷೆ ಹೆಸರಿನಲ್ಲಿ ಇಂದು ಗೊಂದಲಗಳಿಗೆ ಲೆಕ್ಕವಿಲ್ಲ. ಬುದ್ಧ. ಪೈಗಂಬರ್, ಏಸು ಇವರೆಲ್ಲ ಮನುಕುಲಕ್ಕೆ

ಶಾಂತಿಯ ಸಂದೇಶವನ್ನು ಸಾರಿ ಸಹಬಾಳ್ವೆ ನಡೆಸುವಂತೆ ಸಾರಿದ್ದಾರೆ. ಹಮ್ಮು-ಬಿಮ್ಮು ಬಿಟ್ಟು ಒಮ್ಮನದಿ ನಾವೆಲ್ಲ ಸಾಮರಸ್ಯದಿಂದ ಬಾಳೋಣ ಸೌಹಾರ್ದದ ಬದುಕು ಬದುಕೋಣ ಎಂದು ಹೇಳುತ್ತಾರೆ.

'ಆಸೆ', 'ಭಿಕ್ಷೆ' ಕವನಗಳಲ್ಲಿ ಜನಾಂಗ ಸುಂದರವಾದ ಬದುಕನ್ನು ಬದುಕಬೇಕೆಂಬ ಕಳಕಳಿಯಿದೆ. ಹಗಲಿರುಳು ನಿರಂತರ ದುಡಿಮೆ, ಯಂತ್ರಗಳ ಮಧ್ಯೆ, ಬದುಕು ನಿಗರ್ಸದಿಂದ ದೂರಾಗುತ್ತಿರುವ ಅಪಾಯಕ್ಕೆ ನಾವೆಲ್ಲ ಒಳಗಾಗುತ್ತಿದ್ದೇವೆಂಬ ಅಳುಕಿದೆ. ಗಿಳಿ, ಕೋಗಿಲೆ, ಹಂಸಗಳ ಸ್ವಚ್ಛಂದ ಬದುಕು ಕವಿಯ ಮನಸ್ಸನ್ನು ಸೆಳೆದರೆ ಆಶ್ಚರ್ಯಪಡಬೇಕಿಲ್ಲ. ಆದ್ದರಿಂದಲೇ–

ಗಿಣಿಯು ಕೋಗಿಲೆ ಹಂಸೆ ನಾನಾಗುವಾಸೆ
ಚೆಲ್ವಿಕೆಯ ಚೆಂಬೆಳಕ ಚೆಲ್ಲುವಾ ಆಸೆ
ಎಲ್ಲರೊಳು ಒಂದಾಗಿ ಬೆರೆಯುವ ಆಸೆ
ಎಲ್ಲಿಲ್ಲ ಈ ಭಾವ ಅಲ್ಲುಂಟು ಹಿಂಸೆ

ನಿಸರ್ಗ ಮತ್ತು ಮಾನವರೊಂದಿಗೆ ಸಹಬಾಳ್ವೆ ಬೆಳೆಸಿಕೊಂಡು ಮನುಷ್ಯ ಬದುಕನ್ನು ನಡೆಸಬೇಕು. ಒಂದಾಗಿ ಬಾಳದಿದ್ದಲ್ಲಿ ಹಿಂಸೆ-ಕೊಲೆ-ಅತ್ಯಾಚಾರಗಳು ಘಟಿಸುತ್ತವೆ. ಮಾನವ ಅಮೂಲ್ಯವಾದ ತನ್ನ ಬುದ್ಧಿಶಕ್ತಿಯನ್ನು ಸದುಪಯೋಗ ಮಾಡಿಕೊಂಡು ಹಸನಾದ ಬಾಳನ್ನು ಬಾಳಬೇಕೆಂಬ ಹಿರಿಯದಾದ ಆಸೆ ಈ ಕವಿಯಲ್ಲಿದೆ.

'ವರ್ತಮಾನ' ವರ್ತಮಾನದ ಜ್ವಲಂತ ಸಮಸ್ಯೆಗಳನ್ನು ದಾಖಲಿಸುತ್ತ ಹೊಸಹಾದಿಗೆ ಹುಟ್ಟು ಹಾಕುತ್ತಿದೆ. ಮೂಢನಂಬಿಕೆ, ಕಂದಾಚಾರ, ಡಾಂಬಿಕತೆ, ರಾಜಕಾರಣದ ದೊಂಬರಾಟ ಇವೆಲ್ಲವುಗಳನ್ನು ಬರೀ ಟೀಕಿಸಿ ಬಿಡುವುದಿಲ್ಲ; ಸೊಗಸಾದ ಸುಂದರವಾದ ಬದುಕನ್ನು ಹೇಗೆ ಬದುಕಬೇಕೆಂಬುದನ್ನು ಕೂಡ ತಿಳಿಸುತ್ತದೆ.

ಈ ಸಂಕಲನದಲ್ಲಿ ಸೇರ್ಪಡೆಯಾದ 'ಬಿಡುವಿನಲ್ಲಿ ನಾಲ್ಕು ಸಾಲು'ಗಳು ಗಮನ ಸೆಳೆಯುತ್ತವೆ. ಇಲ್ಲಿ ನಿಜವಾದ ವರ್ತಮಾನದ ಚಿತ್ರ ಅಚ್ಚೊತ್ತಿದಂತೆ ಮೂಡಿ ಬಂದಿದೆ. ಗೋವು ಹಾಲು ಕೊಟ್ಟು ಕೃತಾರ್ಥವಾಗುವಂತೆ, ಮನುಷ್ಯ ಸಮಾಜಕ್ಕಾಗಿ ಏನಾದರೂ ಒಳ್ಳೆಯ ಕಾರ್ಯವನ್ನು ಮಾಡಬೇಕೆಂದು ಹೇಳುತ್ತಾರೆ. ಇಲ್ಲಿಯ ಬಿಡಿ ಬಿಡಿಯಾದ ಹನಿಗವನಗಳು ವಚನ ಮುಕ್ತಕಗಳನ್ನು ನೆನಪಿಗೆ ತರುತ್ತವೆ.

ಮೊಸಳೆ ಮೀನುಗಳ ನುಂಗುತ ದಿನವಿಡಿ
ಕಾಲಹರಣ ಮಾಡುವ ಹಾಗೆ
ಮುಗ್ದರ ಭಕ್ಷಿಸಿ ಬಾಳುವ ಇಂದಿನ
ರಾಜಕೀಯದ ನೀತಿಯೆ ಹೀಗೆ

ಕೆಸರನು ಕಡೆದರೆ ಬೆಣ್ಣೆಯು ಸಿಗುವುದೆ ?
ಮೊಸರನು ಕಡೆಯಲು ದೊರಕುವುದು
ದೇವನ ಕಾಣಲು ಹೊರಗಡೆ ಹೋಗದೆ
ನಿನ್ನಲಿ ದೇವನ ಕಾಣುವದು

'ಮಣ್ಣು ಬಿಟ್ಟು ಮಡಿಕೆಯಿಲ್ಲ ತನ್ನ ಬಿಟ್ಟು ದೇವರಿಲ್ಲ' ಎನ್ನುವಂತೆ ಭಗವಂತ ಮಾನವ ಹೃದಯದಲ್ಲಿಯೇ ಇದ್ದವನು. ತನ್ನೊಳಗಿನ ಆತನನ್ನು ಮನುಷ್ಯ ಹೊರಗೆ ಹುಡುಕುವದು ಎಂಥ ಆಭಾಸ !

ಒಟ್ಟಿನಲ್ಲಿ 'ವರ್ತಮಾನ' ಮೋಟಗಿ ಮಠದ ಪೂಜ್ಯ ಶ್ರೀಚನ್ನಬಸವದೇವರು ವರ್ತಮಾನಕ್ಕೆ ಸ್ಪಂದಿಸಿದ ಅನುಭವಗಳ ಸಮರ್ಥ ಅಭಿವ್ಯಕ್ತಿಯ ಕವನ ಸಂಕಲನ. ಆಧುನಿಕ ವಚನಕಾರರೆಂದು ಈಗಾಗಲೇ ಹೆಸರು ಮಾಡಿದ ಪೂಜ್ಯರು ಮೊದಲ ಕವನ ಸಂಕಲನದಲ್ಲಿಯೇ ಗಮನ ಸೆಳೆದಿದ್ದಾರೆ. ವರ್ತಮಾನವನ್ನು ನಾಡಿನ ಜನ ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಇವರಿಂದ ಇನ್ನೂ ಹಲವಾರು ಕೃತಿಗಳು ಹೊರಬರಲೆಂದು ಆಶಿಸುತ್ತೇನೆ.

■■

ವಚನ ಚೈತ್ರ : ವಚನ ಪರಂಪರೆಯ ಅಮೂಲ್ಯ ಕೃತಿ

● ಡಾ. ಬಿ. ಆರ್. ಹಿರೇಮಠ

ವಚನಸಾಹಿತ್ಯಕ್ಕೆ ಎಂಟುನೂರು ವರ್ಷಗಳಿಗಿಂತಲೂ ಅಧಿಕವಾದ ಭವ್ಯಪರಂಪರೆಯಿದೆ. ಈ ಸಾಹಿತ್ಯ ಪ್ರಕಾರ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ನೆಲೆಗಳಲ್ಲಿ ಉಂಟು ಮಾಡಿದ ಆವಿಷ್ಕಾರ-ಪರಿಷ್ಕಾರ-ಪರಿಶೋಧನೆಗಳು ಅತ್ಯಂತ ಅನನ್ಯವಾದವುಗಳಾಗಿರುತ್ತವೆ. ಅಂದಿನಿಂದ ಇಂದಿನವರೆಗೂ ಈ ಸಾಹಿತ್ಯ ಪ್ರಕಾರ ಉಳಿದುಕೊಂಡು, ಬೆಳೆದುಕೊಂಡು ಬಂದಿದೆ. ಆಧುನಿಕ ಯುಗದಲ್ಲಿ ಈ ಸಾಹಿತ್ಯಪ್ರಕಾರವನ್ನು ಉಳಿಸಿ, ಬೆಳೆಸಿದವರು ಹಲವಾರು ಜನ. ಇವರಲ್ಲಿ ಮಠಾಧಿಪತಿಗಳು, ಅಧಿಕಾರಿಗಳು, ಸಾಹಿತಿಗಳು, ಸಮಾಜದ ವಿವಿಧ ವರ್ಗದ-ಅಂತಸ್ತಿನ-ವಯಸ್ಸಿನ ಜನರಿದ್ದಾರೆ. ಹರ್ಡೇಕರ ಮಂಜಪ್ಪನವರಿಂದ ಅನಾವರಣಗೊಂಡ ಆಧುನಿಕ ವಚನಸಾಹಿತ್ಯ ಸಂಖ್ಯೆ, ಸತ್ವ, ಗಾತ್ರ, ಪ್ರಾದೇಶಿಕತೆಗಳಲ್ಲಿ ವಿಪುಲವೂ ವೈವಿಧ್ಯಪೂರ್ಣವೂ ಆದುದಾಗಿದೆ. ಈ ಆಧುನಿಕ ಯುಗದಲ್ಲಿ ಇದು ಚಳವಳಿಯ ಭಾಗವಾಗಿ ಬೆಳೆದು ಬರದೆ, ಅಗತ್ಯದ ಅಭಿವ್ಯಕ್ತಿಯಾಗಿ ವೈಯಕ್ತಿಕ ನೆಲೆಯಲ್ಲಿ ಅರಳಿ ನಿಂತಿದೆ.

ಆಧುನಿಕ ಯುಗದಲ್ಲಿ ವಚನ ಸಾಹಿತ್ಯಕ್ಕೆ ಮಠಾಧೀಶರು ನೀಡಿದ ಕೊಡುಗೆ ಅನುಪಮವೂ ಅಪಾರವೂ ಆದುದಾಗಿದೆ. ಹಾನಗಲ್ಲ ಕುಮಾರ ಸ್ವಾಮಿಗಳು, ಡಾ. ಜ. ಚ. ನಿ., ಡಾ. ಮೂಜಗಂ, ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಕೆಳದಿಯ ಗುರುಸಿದ್ಧ ಶಿವಾಚಾರ್ಯರು, ಮರೇಗುದ್ದಿಯ ನಿರುಪಾದಿಸ್ವಾಮಿಗಳು ಮೊದಲಾದ ಹಲವಾರು ಸಂಖ್ಯೆಯ ಮಠಾಧೀಶರು ವಚನ ಸಾಹಿತ್ಯ ರಚನೆ ಮಾಡಿದ್ದಾರೆ. ಈ ಮಠಾಧೀಶರ ವಚನ ಸಾಹಿತ್ಯ ಪರಂಪರೆಯಲ್ಲಿ ಮುನ್ನಡೆದವರು ಪೂಜ್ಯಶ್ರೀ ಚನ್ನಬಸವದೇವರು. ಚನ್ನಬಸವದೇವರು ಅತ್ಯಂತ ಕಿರಿಯ ವಯಸ್ಸಿನವರು. ಇಂಥ ಕಿರಿಯ ವಯಸ್ಸಿನಲ್ಲಿಯೇ ಹಿರಿದಾದುದನ್ನು ಸಾಧಿಸಿದ್ದಾರೆ. " ಪ್ರಾಯಂ ಕೂಸಾದೊಡೇನು ಅಭಿಪ್ರಾಯಂ ಕೂಸಕ್ಕುಮೆ " ಎಂಬ ಮಾತಿಗೆ ಇವರು ಉಜ್ವಲ ನಿದರ್ಶನರೆನಿಸಿದ್ದಾರೆ.

" ವಚನ ಚೈತ್ರ", ಪೂಜ್ಯರು ರಚಿಸಿದ ವಚನಗಳ ಅಮೂಲ್ಯ ಸಂಪುಟ. ಆಧುನಿಕ ವಚನಸಾಹಿತ್ಯಕ್ಕೆ ನೀಡಿದ ಅನರ್ಘ್ಯ ಕೃತಿರತ್ನ. ಬದುಕಿನ ಶೋಧದಿಂದ ಕಂಡುಹಿಡಿದ ಇವು ಸ್ಫಟಿಕದ ಸಲಾಕೆಗಳಂತಿವೆ, ಮುತ್ತಿನ ಹಾರದಂತಿವೆ. ಲಿಂಗ ಮೆಚ್ಚುವಂತಹ ಲಿಂಗರೂಪದ ನುಡಿಗಳು ಇವಾಗಿರುತ್ತವೆ. ಇವು ಜನ ಮೆಚ್ಚುವುದಕ್ಕಾಗಿ, ಜನಪ್ರಿಯತೆಗಾಗಿ ರಚಿಸಿದ ರಚನೆಗಳಲ್ಲ. ಜನ ಬದುಕಬೇಕೆಂದು, ಸಮಾಜ ಬೆಳೆಯಬೇಕೆಂದು ಹಂಬಲಿಸಿ ಬರೆದ ನುಡಿಗಡಣಗಳು. ಸಮಾಜ-ಸಂಸ್ಥೆಗಳ ವೈರುಧ್ಯ, ವ್ಯಕ್ತಿ-ಶಕ್ತಿಗಳ ವೈರುಧ್ಯಗಳನ್ನು ನಿರ್ಭಿಡೆಯಿಂದ, ನಿಷ್ಪಕ್ಷತನದಿಂದ, ವಸ್ತುನಿಷ್ಠೆಯಿಂದ ಇಲ್ಲಿಯ ವಚನಗಳಲ್ಲಿ ಎತ್ತಿತೋರಿಸಲಾಗಿದೆ. ವ್ಯಕ್ತಿ-ಸಮಾಜಗಳಲ್ಲಿ ಹಾಸುಹೊಕ್ಕಾಗಿರುವ ಕೃತಕತೆ, ಅಸಹಜತೆ, ಅಸಹನೀಯತೆ, ಅಪಮಾನ, ಅಕೃತ್ಯ, ಅಮಾನವೀಯತೆ, ಅಲ್ಪತೆ, ಅಪ್ರಿಯತೆ, ಅನಾಗರಿಕತೆ, ಅಸೌಂದರ್ಯ ಮೊದಲಾದ ಜೀವವಿರೋಧಿ, ಜನವಿರೋಧಿ ಕ್ರಮ-ವ್ಯವಸ್ಥೆ, ಭಾವ-ಸ್ವಭಾವಗಳನ್ನು ಜೀವಂತವಾಗಿ, ಜ್ವಲಂತವಾಗಿ ಇಲ್ಲಿಯ ವಚನಗಳಲ್ಲಿ ಪ್ರಕಟಪಡಿಸಲಾಗಿದೆ. ಸಂದರ್ಭೋಚಿತವಾದ, ಸಮಕಾಲೀನವಾದ ದೃಷ್ಟಾಂತ, ಉಪಮೆ, ರೂಪಕಗಳ ಮೂಲಕ ಈ ವ್ಯಕ್ತಿ-ಸಮಾಜದ ಸೂತಕಗಳನ್ನು ಸಶಕ್ತವಾಗಿ, ಪರಿಣಾಮಕಾರಿಯಾಗಿ ಬಿಡಿಸಿ ತೋರಿಸಲಾಗಿದೆ. ಈ ಕೃತಿಯಲ್ಲಿಯ ವಚನಗಳಲ್ಲಿ ಉಪಮಾನ ಮತ್ತು ದೃಷ್ಟಾಂತಗಳು ವೈವಿಧ್ಯಪೂರ್ಣವಾಗಿದ್ದು, ಜೀವಂತಿಕೆಯನ್ನು, ಪ್ರಖರತೆಯನ್ನು ಪಡೆದುಕೊಂಡಿರುತ್ತವೆ.

ವಚನಕಾರರ ಸಮಾಜಪ್ರೀತಿ, ವ್ಯಕ್ತಿಪ್ರೀತಿ, ಮಾನವಧರ್ಮ ಪ್ರೀತಿ ಅತ್ಯಂತ ಅನನ್ಯವಾಗಿರುತ್ತವೆ. ವ್ಯಕ್ತಿಯ ವ್ಯಕ್ತಿತ್ವದ ವಿಕಾಸದಲ್ಲಿ ಸಮಾಜದ ವಿಕಾಸ, ಮಾನವೀಯತೆಯ ವಿಕಾಸ ಅಡಗಿದೆಯೆಂಬ ಅಚಲ ವಿಶ್ವಾಸ, ನಂಬಿಕೆ ಇವರದಾಗಿದೆ.

ತಾವು ಕಂಡ, ಅನುಭವಿಸಿದ ಅನುಭವಗಳಿಗೆ ಆಕಾರ ಕೊಡುವ, ಆಶಯ ತುಂಬುವ ಪ್ರಾಮಾಣಿಕ ಪ್ರಯತ್ನವನ್ನು ವಚನಕಾರರು ಇಲ್ಲಿ ವಸ್ತುನಿಷ್ಠವಾಗಿ ಮಾಡಿದ್ದಾರೆ. ಚನ್ನಬಸವದೇವರು ಇಲ್ಲಿ ಅನುಭವವನ್ನು ಕಲಾತ್ಮಕಗೊಳಿಸಲು ಪ್ರಯತ್ನಿಸಿಲ್ಲ; ಈ ಮೂಲಕ ಜನರ ಬದುಕನ್ನು ಕಲಾತ್ಮಕವಾಗಿಸಲು ಪರಿಶ್ರಮಿಸಿದ್ದಾರೆ. ಇದು ಇವರ ಎಲ್ಲ ವಚನಗಳ ಪ್ರಧಾನ ಆಶಯ; ಮೂಲದ್ರವ್ಯ.

ಈ ವಚನಗಳಲ್ಲಿ ಗುಡುಗು-ಸಿಡಿಲು-ಮಿಂಚು-ಮಳೆಯೂ, ಬಿಸಿಲು-ಬೆಳದಿಂಗಳೂ ತುಂಬಿಕೊಂಡಿರುತ್ತವೆ. ಸಮಾಜದ-ವ್ಯಕ್ತಿಯ-ಸಂಸ್ಥೆಯ ಲೋಪ ದೋಷವನ್ನು, ಅಸಮತೋಲನವನ್ನು ತಿದ್ದುವುದಕ್ಕಾಗಿ ವಚನಗಳಲ್ಲಿ ಕಿಡಿ ನುಡಿಗಳನ್ನು, ಕಟೂಕ್ತಿಗಳನ್ನು ಬಳಸಿದ್ದಾರೆ. ಕೆಲವುಸಲ ಸದುವಿನಯದಿಂದ, ಸದಾಶಯದಿಂದ, ವಿನಮ್ರಭಾವದಿಂದ ನಿವೇದಿಸಿಕೊಳ್ಳುತ್ತಾರೆ. ಈ ರೀತಿಯ ಅಭಿವ್ಯಕ್ತಿಯ ಹಿಂದೆ ಅಡಗಿರುವ ಸಾಮಾಜಿಕ ಕಳಕಳಿ, ಮನುಷ್ಯ ಪ್ರೀತಿಗಳನ್ನು ನಾವು ಅರ್ಥೈಸಿಕೊಳ್ಳಬೇಕು.

ಇಲ್ಲಿಯ ವಚನಗಳಲ್ಲಿ ವಚನಕಾರರು ವ್ಯಕ್ತಿಮೀಮಾಂಸೆ, ಸಮಾಜ ಮೀಮಾಂಸೆಗಳನ್ನು ಸಮರ್ಥವಾಗಿ, ನಿಖರವಾಗಿ ನಿರ್ವಹಿಸಿದ್ದಾರೆ. ವ್ಯಕ್ತಿನಿರ್ಮಾಣ

ಮತ್ತು ಸಮಾಜ ನಿರ್ಮಾಣದಂಥ ಪುಣ್ಯಕಾರ್ಯಗಳನ್ನು ನೆರವೇರಿಸಲು ಈ ವಚನಗಳು ನೆರವಾಗುತ್ತವೆ. ಈ ವಚನಗಳ ಮೂಲೋದ್ದೇಶವೂ ಇದೇ ಆಗಿರುವುದು ಇವುಗಳ ಅವಲೋಕನದಿಂದ ವಿದಿತವಾಗುತ್ತದೆ.

ಈ ವಚನಗಳು ಬಿಡಿಬಿಡಿಯಾದ ಅಭಿವ್ಯಕ್ತಿಯೆನಿಸಿದರೂ ಇವುಗಳ ಸೂತ್ರ ಒಂದೇ ಆಗಿರುತ್ತದೆ. ಅದೇ ಜೀವನ ಸೂತ್ರ. ಜೀವನ ಸೂತ್ರ ಹರಿಯದಂತೆ, ಗಂಟು-ಕಗ್ಗಂಟು ಆಗದಂತೆ, ನಿಷ್ಪ್ರಯೋಜಕ ಎನಿಸದಂತೆ ನೋಡಿಕೊಳ್ಳುವ, ಎಚ್ಚರವಹಿಸುವ, ಸಾರ್ಥಕವೆನಿಸುವಂತೆ ಮಾಡುವ ಜವಾಬ್ದಾರಿ ಪ್ರತಿಯೊಬ್ಬ ವ್ಯಕ್ತಿಯದಾಗಿದೆ.

ಈ ಕೃತಿಯಲ್ಲಿರುವ ವಚನಗಳಲ್ಲಿ ಅನುಭಾವ, ದಾರ್ಶನಿಕತೆ, ಧರ್ಮ-ತತ್ವ, ಸಮಾಜಿಕ ಚಿಂತನೆ, ನೀತಿಬೋಧೆ, ಶುದ್ಧೀಕರಣ, ವೈಚಾರಿಕತೆ ಮೊದಲಾದ ನೂರಾರು ಬಗೆಯ ವಿಷಯ-ವಿವೇಚನೆಗಳು ದಟ್ಟವಾಗಿ ಸಾಂದ್ರಗೊಂಡಿರುತ್ತವೆ.

ವೈಚಾರಿಕತೆಯ ನೆಲೆಗಟ್ಟನ್ನು ಪಡೆದಿರುವ ಈ ವಚನಗಳು ಬಹಳ ಹರಿತವಾಗಿರುತ್ತವೆ. ಮನ ನೋಯಿಸುವ, ಗಾಯಗೊಳಿಸುವ, ಘಾಸಿಯಾಗಿಸುವ ಹರಿತತನ ಇದಾಗಿರುವುದಿಲ್ಲ. ಮಾತಿನ ಮೊನಚುಗಳಿಂದ ಜನರನ್ನು ಎಚ್ಚರಿಸುವ, ಸ್ಫುರಿಸುವಂತೆ ಮಾಡುವ ಜಾಗ್ರತಗುಣ ಇದಾಗಿದೆ.

" ವಚನ ಚೈತ್ರ" ಕೃತಿಯಲ್ಲಿ ಪ್ರಭುಸಮ್ಮಿತ, ಮಿತ್ರ ಸಮ್ಮಿತ, ಕಾಂತಾ ಸಮ್ಮಿತ-ಹೀಗೆ ಎಲ್ಲ ಸಮ್ಮಿತಗಳೂ ಸಮ್ಮಿಳಿತವಾಗಿರುತ್ತವೆ. ವಸ್ತುನಿಷ್ಠತೆ, ಅನುಭವದ ಜೀವಂತಿಕೆ, ಸಂವಹನಶೀಲತೆ, ಸರಳತೆ, ಸ್ಪಷ್ಟತೆ, ನೇರತೆ, ನಿರ್ಭಿಡೆ, ನಿಷ್ಠುರತೆ, ನಿರ್ಭಯತೆ, ಪ್ರಾಮಾಣಿಕತೆ- ಇವು ಈ ವಚನಗಳ ಮೂಲ ಲಕ್ಷಣಗಳಾಗಿರುತ್ತವೆ. ಇಲ್ಲಿಯ ವಚನಗಳ ಮೂಲದ್ರವ್ಯ ಬದುಕು-ಸಮಾಜ. ಹೀಗಾಗಿ ಇವು ಬದುಕಿಗೆ ಅತ್ಯಂತ ಹತ್ತಿರವಾಗಿರುತ್ತವೆ, ಬೆಳಕನ್ನು ನೀಡುವಂತಾಗಿವೆ. ಸಮಾಜಕ್ಕೆ ಸಂಜೀವಿನಿಯಾಗಿ ಪರಿಣಮಿಸಿವೆ.

ಸ್ಥಾವರಗೊಂಡಿರುವ ವ್ಯಕ್ತಿ-ಸಮಾಜ-ಧರ್ಮಗಳನ್ನು ಜಂಗಮಗೊಳಿಸಲು ' ವಚನ 'ವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಇಲ್ಲಿ ಬಳಸಿಕೊಂಡಿದ್ದಾರೆ. ವ್ಯಕ್ತಿ-ಸಮಾಜ-ಧರ್ಮಗಳು ಈಗ ತಮ್ಮ ಆಕಾರ, ಆಶಯ, ಅಸ್ತಿತ್ವ ಹಾಗೂ ನೈಜತೆಯನ್ನು ಕಳೆದುಕೊಂಡಿರುತ್ತವೆ. ಈ ವಿರೂಪ ನಡೆಯದಂತೆ ತಡೆಯುವ, ನಿಜಸ್ವರೂಪವನ್ನು ಕಾಯ್ದುಕೊಳ್ಳುವಂತೆ ಮಾಡುವ ಪ್ರಾಮಾಣಿಕ ಪ್ರಯತ್ನಗಳು ಇಲ್ಲಿ ನಡೆದಿರುವುದು ಕಂಡುಬರುತ್ತದೆ. ಈ ವಚನಗಳು ಕೇವಲ ಉಕ್ತಿಯ ಪಾತಳಿಯಲ್ಲಿ ಉಳಿಯದೆ ಕ್ರಿಯಾತ್ಮಕ ಪಾತಳಿಯಲ್ಲಿ ಪ್ರವಹಿಸುವಂತಾಗಬೇಕು. ಅಂದರೆ ಚತುರೋಕ್ತಿಗಳೆನಿಸದೆ ಕಾರ್ಯರೂಪದಲ್ಲಿ ಹರಿದು ಬರುವಂತಾಗಬೇಕು. ಬದುಕಿನಲ್ಲಿ ಅನುಷ್ಠಾನಗೊಳ್ಳಬೇಕು. ಆಗ ಮಾತ್ರ ಈ ವಚನಗಳಿಗೆ ' ಅನ್ವಯಿಕತೆ ', ' ಅನನ್ಯತೆ ' ಸಂಪ್ರಾಪ್ತವಾಗುತ್ತದೆ.

' ಅಥಣೇಶ ' ಅಂಕಿತದಲ್ಲಿರುವ ಈ ವಚನಗಳ ಶಿಲ್ಪ ಅತ್ಯಂತ ಸರಳವೂ ಸಹಜವೂ ಆದುದಾಗಿರುತ್ತದೆ. ಭಾಷೆಯ ನಿರ್ವಹಣೆ ಸಮರ್ಥವಾಗಿದೆ, ಸಮರ್ಪಕವಾಗಿದೆ. ವಚನಗಳಲ್ಲಿ ಬಳಕೆಯಾದ ಸೂತ್ರರೂಪದ ವಾಕ್ಯಗಳು, ಲೋಕೋಕ್ತಿ ಮತ್ತು ದೇಶೀಯ ಶಬ್ದಗಳು ಅಭಿವ್ಯಕ್ತಿಗೆ ಶಕ್ತಿಯನ್ನು, ಸತ್ವವನ್ನು ತಂದುಕೊಟ್ಟಿವೆ. ಸೃಜನಶೀಲ ಸಾಹಿತ್ಯ ವರ್ಗಕ್ಕೆ ಸೇರುವ ಈ ವಚನಗಳಲ್ಲಿ ಪ್ರಯೋಗಶೀಲತೆಯಿದೆ; ವೈಜ್ಞಾನಿಕ ದೃಷ್ಟಿಕೋನವಿದೆ.

ಈ ರೀತಿಯಾಗಿ ಪೂಜ್ಯ ಚನ್ನಬಸವದೇವರ ಈ ವಚನಗಳಿಗೆ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ, ವೈಚಾರಿಕ ನೆಲೆಗಳಿರುತ್ತವೆ. ಆಧುನಿಕ ವಚನಸಾಹಿತ್ಯಕ್ಕೆ ಈ ಕೃತಿಯ ಮೂಲಕ ಹೊಸ ಆಯಾಮಗಳನ್ನು ನೀಡಲಾಗಿದೆ. ಆದುದರಿಂದ ವಚನ ಚೈತ್ರ ಅಮೂಲ್ಯ ಕೃತಿಯೆನಿಸಿಕೊಂಡಿದೆ.

ಪೂಜ್ಯ ಚನ್ನಬಸವದೇವರು ಈ ಕೃತಿಯ ಮೂಲಕ ವಚನ ಸಾಹಿತ್ಯ ಪರಂಪರೆಯನ್ನು ರಕ್ಷಿಸುವ ಹಾಗೂ ಮುಂದುವರಿಸುವ ಉಭಯ ಜವಾಬ್ದಾರಿಯನ್ನು ಸಮರ್ಥವಾಗಿ ಪೂರೈಸಿದ್ದಾರೆ. ಅತ್ಯಂತ ಭರವಸೆಯ, ಬದುಕಿಗೆ ಬೆಳಕನ್ನು ನೀಡುವ ಪಾರದರ್ಶಕ ವ್ಯಕ್ತಿತ್ವದ ವಚನಕಾರರು ಇವರಾಗಿದ್ದಾರೆ. ಹಲವು ಹಂಬಲ, ಹತ್ತಾರು ಯೋಜನೆ-ಯೋಚನೆಗಳನ್ನು ಹೊಂದಿರುವ ವೈಚಾರಿಕ- ವೈಜ್ಞಾನಿಕ ದೃಷ್ಟಿಕೋನ ಪಡೆದಿರುವ ಅತ್ಯಂತ ಕಿರಿಯ ವಯಸ್ಸಿನ ವಚನ ಚೇತನ ಪೂಜ್ಯ ಚನ್ನಬಸವದೇವರ ಬಗೆಗೆ ಸಮಾಜ ಬಲವಾದ, ಅಪಾರವಾದ ನಿರೀಕ್ಷೆ ಇಟ್ಟುಕೊಂಡಿದೆ. ಈ ನಿರೀಕ್ಷೆಯ ಫಲವೆನ್ನುವಂತೆ ಇವರ ' ವಚನ ಚೈತ್ರ'ದಲ್ಲಿ ಪ್ರತಿನಿಮಿಷವೂ ಪ್ರತಿವರುಷವೂ ಪಲ್ಲವಗಳು ಪಲ್ಲವಿಸುವಂತಾಗಲಿ. ವಚನಚೈತ್ರದ ಚಿತ್ತಾರಗಳು ನಿರ್ಮಾಣಗೊಳ್ಳುವಂತಾಗಲಿ.

■■

ವಚನಚೈತ್ರ : ಒಂದು ಅವಲೋಕನ

● ಡಾ. ಬಿ. ಎಂ. ಪಾಟೀಲ

ಸ್ಥಾವರ ಮೌಲ್ಯಗಳನ್ನು ಕಿತ್ತು ಬೀಸಾಕಿ ಚಲನಶೀಲ ಮೌಲ್ಯಗಳನ್ನು ಹುಟ್ಟು ಹಾಕಿದ ಶ್ರೇಯಸ್ಸು ಬಸವಾದಿ ಶಿವಶರಣರಿಗೆ ಸಲ್ಲುತ್ತದೆ. ಅವರ ವಚನ ರಚನೆ ಕನ್ನಡಿಗರ ಹೆಮ್ಮೆಯ ಸಾಹಿತ್ಯ. ಜನಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲಿ ರಚನೆಗೊಂಡ ವಚನಸಾಹಿತ್ಯ ಒಂದು ವಿನೂತನ ಸೃಷ್ಟಿ. ಕನ್ನಡ ಭಾಷೆಗೆ ಒಂದು ಕಸುವು, ಒಂದು ಸೊಗಸು, ಒಂದು ಪ್ರಖರತೆ ತಂದುಕೊಟ್ಟಿದ್ದೇ ವಚನಸಾಹಿತ್ಯ. ವ್ಯಕ್ತಿ, ಸಮಾಜ, ರಾಷ್ಟ್ರ ಹೀಗೆ ಒಟ್ಟಂದದ ಶ್ರೇಯೋಭಿವೃದ್ಧಿಗಾಗಿ ನಿತ್ಯಸತ್ಯ ಸಂದೇಶಗಳನ್ನು ಸಾರುವ ಬಸವಾದಿ ಶರಣರ ವಚನಗಳಿಗೆ ಅಳಿವೆಂಬುದಿಲ್ಲ. ಇಂದು ಅನೇಕರು ಆಧುನಿಕ ವಚನ ರಚನೆಯಲ್ಲಿ ತೊಡಗಿರುವುದೇ ಈ ಮಾತಿಗೆ ಸಾಕ್ಷಿ.

> ಕಾವಿ ತೊಡುವುದು ಮಠದಲ್ಲಿ ಕುಳಿತು
> ಪೂಜೆ ಮಾಡುವುದಕಲ್ಲ;
> ತ್ಯಾಗದಿಂದ ಸಮಾಜಸೇವೆ ಮಾಡಲು

ಎಂಬುದಾಗಿ ಹೇಳಿದ ಪೂಜ್ಯ ಶ್ರೀ ಚನ್ನಬಸವದೇವರು ಕರ್ನಾಟಕದ ಗಡಿನಾಡಿನಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಉಳಿಸಿ ಬೆಳೆಸುವ ಘನಕಾರ್ಯವನ್ನು ಅತ್ಯಂತ ಉತ್ಸಾಹದಿಂದ ಮಾಡುತ್ತಿದ್ದಾರೆ. 'ವರ್ತಮಾನ', 'ಎನ್ನೊಡೆಯನ ಹಾಡುವೆ', 'ವಚನ ತರಂಗ', 'ವಚನಚೈತ್ರ' ಮುಂತಾದ ಮೌಲಿಕ ಗ್ರಂಥಗಳನ್ನು ಕನ್ನಡಕ್ಕೆ ನೀಡಿದ್ದಾರೆ. ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಚಿಂತನ ಬರಹಗಳನ್ನು ಬರೆದು ಈ ಭಾಗದಲ್ಲಿ ತುಂಬ ಹೆಸರು ಮಾಡಿದ್ದಾರೆ. ಪ್ರಸ್ತುತದಲ್ಲಿ ಅವರ 'ವಚನಚೈತ್ರ' ಕೃತಿಯನ್ನು ಅವಲೋಕಿಸಲಾಗುತ್ತಿದೆ.

'ವಚನಚೈತ್ರ'ವನ್ನು ಪೂಜ್ಯಶ್ರೀಗಳು ೧೯೯೭ರಲ್ಲಿ ಪ್ರಕಟಿಸಿದ್ದಾರೆ. ಸ್ವಲ್ಪ ಸಮಯದಲ್ಲಿಯೇ ಅದು ಓದುಗರ ಮೆಚ್ಚುಗೆ ಪಡೆದು ೨೦೦೨ರಲ್ಲಿ ಮರುಮುದ್ರಣ ಕಂಡಿದೆ. ಪೂಜ್ಯರು 'ವಚನಚೈತ್ರ'ದ ಮರುಮುದ್ರಣದ ಸಂದರ್ಭದಲ್ಲಿ ಪರಿಷ್ಕರಣೆ ಮಾಡಿರುವುದಾಗಿ ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ

ವಚನಗಳನ್ನೊಳಗೊಂಡ ' ವಚನಚೈತ್ರ' ಇಂದಿನ ಸಮಾಜದ ಪ್ರಸ್ತುತ ವ್ಯವಸ್ಥೆಗೆ ಕನ್ನಡಿ ಹಿಡಿದಿದೆ. ಶೋಷಣೆ, ನಿರಭಿಮಾನ, ಅಸಮಾನತೆ, ಭ್ರಷ್ಟಾಚಾರ, ಡಂಬಾಚಾರ, ಅಂಧಶ್ರದ್ಧೆ ಮುಂತಾದವುಗಳನ್ನು ಖಂಡಿಸಲು ಇಲ್ಲಿಯ ಬಹುಪಾಲು ವಚನಗಳು ಮೀಸಲಾಗಿವೆ. ಈ ' ವಚನಚೈತ್ರ' ಕೃತಿಗೆ ೨೦೦೨ರಲ್ಲಿ ಪ್ರತಿಷ್ಠಿತ ' ಹಳಕಟ್ಟಿಶ್ರೀ ' ಪ್ರಶಸ್ತಿ ಲಭಿಸಿದೆ.

' ವಚನಚೈತ್ರ' ಕೃತಿಯಲ್ಲಿ ಪೂಜ್ಯ ಶ್ರೀ ಚನ್ನಬಸವದೇವರು ವ್ಯಕ್ತಪಡಿಸಿದ ಒಟ್ಟು ಆಶಯವನ್ನು ಸ್ಥೂಲವಾಗಿ ಮೂರು ಭಾಗಗಳಲ್ಲಿ ವರ್ಗೀಕರಿಸಿಕೊಂಡು ಅವಲೋಕಿಸಬಹುದಾಗಿದೆ.

೧. ತಾತ್ವಿಕ ವಿವೇಚನೆ
೨. ಸಾಮಾಜಿಕ ವಿವೇಚನೆ
೩. ಸಾಹಿತ್ಯಿಕ ವಿವೇಚನೆ

೧) ತಾತ್ವಿಕ ವಿವೇಚನೆ :

ಪ್ರಸ್ತುತ ವಿಭಾಗದಲ್ಲಿ ದೇವರು, ದೇವಾಲಯ, ಜಂಗಮ, ಪಂಚಾಚಾರ, ಸಪ್ತಶೀಲ, ಜಾತ್ರೆ-ಉತ್ಸವ ಮೊದಲಾದ ಧಾರ್ಮಿಕ ಆಚರಣೆಗಳನ್ನು ಕುರಿತು ಪೂಜ್ಯಶ್ರೀಗಳು ' ವಚನಚೈತ್ರ'ದಲ್ಲಿ ಹೇಳಿದ ವಿಚಾರಗಳನ್ನು ಅವಲೋಕಿಸಲಾಗುತ್ತದೆ.

ದೇವರು :

ದೇವರ ಕಲ್ಪನೆಯೇ ಧರ್ಮದ ಜೀವಾಳ. ಆದಿಮಾನವನಿಂದ ಆಧುನಿಕ ಮಾನವನವರೆಗೂ ' ದೇವರ ' ಅಸ್ತಿತ್ವ-ಸ್ವರೂಪ ಕುರಿತು ನಡೆದಷ್ಟು ಜಿಜ್ಞಾಸೆ ಇನ್ನಾವ ವಿಷಯಗಳ ಕುರಿತು ನಡೆದಿಲ್ಲ. ದೇವರು ಸೃಷ್ಟಿಕರ್ತನಾಗಿ ಸಕಲಜೀವಿಗಳ ಸೂತ್ರಧಾರನಾಗಿ ಸಂರಕ್ಷಿಸುತ್ತಾನೆ. ದೇವರ ಜೊತೆ ಅನುಸಂಧಾನಗೊಳ್ಳುವುದೇ ಪ್ರತಿಯೊಬ್ಬ ಮನುಷ್ಯನ ಜೀವನದ ಅಂತಿಮ ಗುರಿ.

' ದೇವನಾಮ ಹಲವಾದರೆ !
ದೇವನೊಬ್ಬನೆ....'

' ಯಾವ ದೇವರು ಆಹುತಿ ಬೇಡಿಲ್ಲ
ಆಹುತಿ ಆಹ್ವಾನಿಸುವ ದೇವರು ದೇವರೇ ಅಲ್ಲ'

ಇಂಥ ಸಾಲುಗಳ ಮೂಲಕ ಪೂಜ್ಯಶ್ರೀಗಳು ' ಏಕದೇವೋಪಾಸನೆ ' ಪ್ರತಿಪಾದಿಸುವ ಜೊತೆಗೆ ದೇವರ ಹೆಸರಿನಲ್ಲಿ ನಡೆಯುವ ಹಿಂಸಾಕೃತ್ಯವನ್ನು ನೇರವಾಗಿ ಖಂಡಿಸಿದ್ದಾರೆ. ಜನರು ಅಜ್ಞಾನ, ಮೂಢನಂಬಿಕೆ, ಅಂಧಶ್ರದ್ಧೆಗಳಿಗೆ ಒಳಗಾಗಿ ಹಬ್ಬ-ಉತ್ಸವಗಳ ನೆಪದಲ್ಲಿ ಪ್ರಾಣಿಗಳನ್ನು ಬಲಿಕೊಡುತ್ತಾರೆ. ಯಾವ ಧರ್ಮಶಾಸ್ತ್ರದಲ್ಲಿಯೂ ಹಿಂಸೆ ಬಗ್ಗೆ ಪ್ರಸ್ತಾಪವಿಲ್ಲ. ತಮ್ಮ ಸ್ವಾರ್ಥಕ್ಕಾಗಿ ಕೆಲವ್ಯಕ್ತಿಗಳು ಇಂಥ ಕುತಂತ್ರಗಳನ್ನು ಸೃಷ್ಟಿಸಿ ಹಿಂಸಾಪ್ರವೃತ್ತಿಯನ್ನು ನಡೆಸಿಕೊಂಡು ಬಂದಿರುವುದಾಗಿ ವಚನಗಳಲ್ಲಿ ಪೂಜ್ಯಶ್ರೀಗಳು ಪ್ರಸ್ತಾಪಿಸಿದ್ದಾರೆ.

ಮಠಗಳು :

ನಮ್ಮ ಪರಂಪರೆಯಲ್ಲಿ ಮಠ ಮತ್ತು ದೇವಾಲಯಗಳಿಗೆ ಪವಿತ್ರವಾದ ಸ್ಥಾನವಿದೆ. ಕಲೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಮೊದಲಾದ ಜ್ಞಾನ ಕೇಂದ್ರಗಳಾಗಿದ್ದ ನಮ್ಮ ದೇವಾಲಯಗಳು ಇಂದು ತಮ್ಮ ಘನತೆ-ಗೌರವವನ್ನು ಕಳೆದುಕೊಂಡು ಗೊಡ್ಡು ಸಂಪ್ರದಾಯಗಳ ಆಗರವಾಗಿರುವುದನ್ನು ಪೂಜ್ಯಶ್ರೀಗಳು ಗಮನಿಸಿದ್ದಾರೆ. ಅವರು ಒಂದು ವಚನದಲ್ಲಿ ಹೇಳಿದ್ದು ಹೀಗೆ :

ಮಠಗಳು ಮಾರ್ಕೇಟಗಳಾಗದೆ
ಮಾನವತೆ ಮಂದಿರಗಳಾಗಬೇಕಯ್ಯ

ಇಂದಿನ ಬಹುತೇಕ ಮಠಗಳು ಹಣಗಳಿಕೆಯಲ್ಲಿ ತೊಡಗಿ ಮಾನವತೆ ಮಾರಿಕೊಳ್ಳುವ ವ್ಯಾಪಾರಿ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವುದನ್ನು ವಚನಕಾರರು ಸ್ಪಷ್ಟವಾಗಿ ಹೇಳಿರುವುದು ಗಮನಾರ್ಹ.

ಜಾತ್ರೆ-ಉತ್ಸವಗಳು :

ನಮ್ಮ ನಾಡಿನಾದ್ಯಂತ ಹಳ್ಳಿ-ಪಟ್ಟಣಗಳಲ್ಲಿ ದೇವರ ಉತ್ಸವ-ಜಾತ್ರೆಗಳನ್ನು ನಡೆಸಿಕೊಂಡು ಬರುವುದು ಒಂದು ಸತ್‌ಪರಂಪರೆ. ಈ ಜಾತ್ರೆ-ಉತ್ಸವಗಳಿಂದ ವ್ಯಕ್ತಿಗೆ ವಿಶ್ರಾಂತಿ, ಮನೋರಂಜನೆ, ಆಹಾರದಲ್ಲಿ ಬದಲಾವಣೆ, ಬಂಧು-ಬಳಗದವರ ಮಿಲನ, ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ಹೀಗೆ ಹತ್ತಾರು ಪ್ರಯೋಜನಗಳುಂಟು. ಆದರೆ ಇತ್ತೀಚಿಗೆ ಜಾತ್ರೆ-ಉತ್ಸವಗಳ ಮೂಲ ಉದ್ದೇಶವೇ ಮರೆತು ಕಲುಷಿತವಾದ ವಾತಾವರಣ ನಿರ್ಮಾಣಗೊಳ್ಳುತ್ತಿರುವುದನ್ನು ವಚನಕಾರರು ಕಂಡು–

ಜಾತ್ರೆಗಳು ದುಶ್ಚಟಗಳ ಪ್ರೇರೇಪಿಸದೆ
ಜನಜಾಗೃತೆಯ ಕೇಂದ್ರಗಳಾಗಬೇಕು
ಉತ್ಸವಗಳು ದುಂದುವೆಚ್ಚಕ್ಕೆ ದಾರಿತೋರದೆ
ವಿವೇಕ ವಿಕಾಸದ ದಿಕ್ಸೂಚಿಗಳಾಗಬೇಕಯ್ಯ

ಎಂದಿದ್ದಾರೆ. ಇಂಥ ಮಾತುಗಳ ಮೂಲಕ ನಮ್ಮ ಧಾರ್ಮಿಕ ಪರಂಪರೆಗಳು ಮನಸ್ಸಿನ ವಿಕಾಸಕ್ಕೆ ಕಾರಣವಾಗಬೇಕು; ವಿನಾಶಕ್ಕೆ ಕಾರಣವಾಗಬಾರದು. ದ್ವೇಷ-ಸಂಘರ್ಷಗಳ ಬದಲಾಗಿ ಮಾನವೀಯ ಮೌಲ್ಯಗಳನ್ನು ಬೆಳೆಸಲು ಸಹಕಾರಿಗಳಾಗಬೇಕೆಂದು ಹೇಳಿದ್ದಾರೆ.

ಪಂಚಾಚಾರಗಳು ಮತ್ತು ಸಪ್ತಶೀಲಗಳು :

ಒಳ್ಳೆಯತನವೇ ವ್ರತ, ಸತ್ಯದಾಚರಣೆಯೇ ಶೀಲ, ದಯವೇ ಧರ್ಮ, ನಿರ್ಮಲಭಾವವೇ ನೇಮ, ಪಾವಿತ್ರ್ಯವೇ ಪೂಜೆ ಇವೇ ಪಂಚಾಚಾರಗಳು. ತಂದೆ ಬಸವಗುರು, ತಾಯಿ ವಚನಸಾಹಿತ್ಯ, ಬಂಧುಗಳು ಶರಣಶರಣೆಯರು, ವಾಸಸ್ಥಳವೇ ಅನುಭವಮಂಟಪ, ಇಷ್ಟದೈವ ಲಿಂಗದೇವ, ಇಷ್ಟಮತ ಮಾನವಮತ, ಇಷ್ಟಧರ್ಮ

ಮಾನವಧರ್ಮ ಇವೇ ಸಪ್ತಶೀಲಗಳು ಹೀಗೆ ವಚನಕಾರರು. ವಿನೂತನವಾದ ಆಚರಣೆಗಳನ್ನು ಹೇಳಿದ್ದುಂಟು.

ಸತಿಪತಿ ಒಂದಾದ ಭಕ್ತಿ :

ತುಲಸಿದಾಸ, ಪರಮಹಂಸ, ಜೇಡರದಾಸಿಮಯ್ಯ, ಬಸವಣ್ಣ ಮೊದಲಾದ ಅಧ್ಯಾತ್ಮ ಸಾಧನೆಯ ಮಹಾನ್ ಚೇತನಗಳು ಸಂಸಾರಿಗಳಾಗಿದ್ದು ಶ್ರೇಷ್ಠ ಶರಣ-ಸಂತರಾದರು. " ಹೆಣ್ಣು ಶರಣರ ಸಾಧನೆಗೆ ಅರ್ಹನಾರಿ ", " ಸಂಸಾರ ಮಾಡಿ ಸದ್ಗತಿ ಪಡೆವುದು ಶರಣರ ಸಾಧನೆಯಲ್ಲಿದೆ " ಇಂಥ ಮಾತುಗಳನ್ನು ಹೇಳುವ ಮೂಲಕ ಪೂಜ್ಯಶ್ರೀಗಳು ಸಂಸಾರ ಅಧ್ಯಾತ್ಮ ಸಾಧನೆಗೆ ಅಡ್ಡಿಯಾಗದೆಂದು ದೃಢಪಡಿಸಿದ್ದಾರೆ.

೨) ಸಾಮಾಜಿಕ ವಿವೇಚನೆ :

' ಸಾಹಿತ್ಯ ಜೀವನದ ಪ್ರತಿಬಿಂಬ ' ಎನ್ನುವುದುಂಟು. ಸಾಮಾನ್ಯವಾಗಿ ಸಾಹಿತಿಗಳು ಸಮಕಾಲಿನ ಬದುಕಿಗೆ ಬದ್ಧರಾಗಿರುತ್ತಾರೆ. ಹೀಗಾಗಿ ತಮ್ಮ ಸುತ್ತಮುತ್ತ ನಡೆಯುವ ಲೋಕವ್ಯವಹಾರಗಳನ್ನು ಕಂಡ ಬರಹಗಾರರು ತಮ್ಮ ಬರಹದ ಮುಖಾಂತರ ಸಮಾಜದ ನೈಜಚಿತ್ರವನ್ನು ಸೆರೆಹಿಡಿಯುತ್ತಾರೆ. ಇದಕ್ಕೆ ಪೂಜ್ಯಶ್ರೀ ಚನ್ನಬಸವದೇವರು ಹೊರತಾಗಿಲ್ಲ.

ಅಪಾರ ಜನರ ಒಡನಾಟವುಳ್ಳ ಪೂಜ್ಯಶ್ರೀಗಳು ತಾವು ಕಂಡುಂಡ ಅನುಭವಗಳನ್ನು ಸರಳವಾಗಿ, ಸುಂದರವಾಗಿ, ನೀತಿಪ್ರಧಾನವಾಗಿ, ವ್ಯಂಗ್ಯ-ವಿಡಂಬನಾತ್ಮಕವಾಗಿ, ಕಾಳಜಿಪೂರ್ವಕವಾಗಿ ತಮ್ಮ ' ವಚನಚೈತ್ರ'ದ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ.

ನವಪೀಳಿಗೆಯ ಚಲ್ಲಾಟ :

ಇಂದಿನ ಯುವಕರೇ ನಾಳಿನ ನಾಗರಿಕರು. ಅವರೇ ನಮ್ಮ ರಾಜ್ಯ-ರಾಷ್ಟ್ರದ ರೂವಾರಿಗಳು. ಸಂಸ್ಕೃತಿ-ಧರ್ಮ-ಸಾಹಿತ್ಯ-ಪರಿಸರ ಉಳಿಸಿ-ಬೆಳೆಸುವ ಹೊಣೆ ಅವರದು. ಇಂಥೆಲ್ಲ ಜವಾಬ್ದಾರಿ ಹೊತ್ತ ಯುವಕರು ತಮ್ಮ ಕರ್ತವ್ಯವನ್ನು ಮರೆತು ದುಶ್ಚಟಗಳಿಗೆ ದಾಸರಾಗುವುದನ್ನು ಕಂಡು ಪೂಜ್ಯಶ್ರೀಗಳವರು–

ಕಣ್ಣಲ್ಲಿ ಕಾಮದ ನೋಟ
ಕೈಯಲ್ಲಿ ಗುಟಕಾ ಚೀಟ
ಬಾಯಲ್ಲಿ ಮದ್ಯದ ಕಾಟ
ಆಗಾಗ ಪರಸತಿ ಕೂಟ
ಬಿಸಿಲು ಕುದುರೆ ಇವರ ಓಟ
ಗುರಿಯೇ ಇಲ್ಲದಾ ದೊಂಬರಾಟ
ನವಪೀಳಿಗೆಯ ಚಲ್ಲಾಟ
ಅಥಣೀಶ ತಪ್ಪಿಸು ಇವುಗಳ ಕಾಟ

ಬಿ. ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

ಎಂದು ಹೇಳಿದ್ದುಂಟು. ಯುವಕರ ಹವ್ಯಾಸಗಳು ಅವರ ಜೀವನ ವಿಕಾಸಗೊಳಿಸಲು ಪ್ರೇರೇಪಿಸಬೇಕು. ಆದರೆ ಇಂದಿನ ಯುವಪೀಳಿಗೆ ತಮ್ಮ ವ್ಯಕ್ತಿತ್ವಕ್ಕೆ ಮಾರಕವಾದ ದುಶ್ಚಟಗಳನ್ನು ರೂಢಿಸಿಕೊಂಡಿದೆ. ಅವರ ಜೀವನ ಗೊತ್ತು-ಗುರಿ ಇಲ್ಲದ ದೊಂಬರಾಟದಂತೆ ಸಾಗುತ್ತಿದೆ. ಇಂಥ ಯುವಕರಿಂದ ನಾವು ಏನನ್ನೂ ನಿರೀಕ್ಷಿಸಿ ಫಲವಿಲ್ಲ. ಇವರನ್ನು ದೇವರೇ ಕಾಪಾಡಬೇಕೆಂದು ಪೂಜ್ಯಶ್ರೀಗಳು ಪ್ರಾರ್ಥಿಸಿದ್ದಾರೆ.

ಸಾಕ್ಷರತೆ :

ಅಕ್ಷರಜ್ಞಾನಕ್ಕೆ ಮನುಷ್ಯನ ಅಜ್ಞಾನವನ್ನು ಅಳಿಸಿ ಆತನನ್ನು ಭವ್ಯ ಮಾನವನನ್ನಾಗಿ ಮಾರ್ಪಡಿಸುವ ಅದಮ್ಯಶಕ್ತಿ ಇದೆ. ಆದರೆ ಸಂಯೋಜಕರು ತಮ್ಮ ಕರ್ತವ್ಯ ಮರೆತು ಲಂಚ-ಲಂಪಟರಾದಾಗ ಆಗುವ ಅನಾಹುತಗಳು ಆಘಾತಕರವಾದವುಗಳು. ಇದನ್ನು ನೋಡಿದ ಪೂಜ್ಯಶ್ರೀಗಳು "ಸಾಕ್ಷರತೆಯ ಹೆಸರಿನಲ್ಲಿ ಭಾರತದ ಬೊಕ್ಕಸವೆಲ್ಲ ನುಚ್ಚುನೂರಾಗಿದೆ" ಎಂದಿದ್ದಾರೆ. ಅವರ ಮಾತುಗಳು ವಾಸ್ತವ ಸಂಗತಿಗೆ ಕನ್ನಡಿ ಹಿಡಿದಿವೆ. ಹಾಗೆಯೇ "ವಿಶ್ವವಿದ್ಯಾಲಯಗಳು ಪದವೀಧರರನ್ನು ತಯಾರು ಮಾಡುವ ಕಾರ್ಖಾನೆಗಳಾಗದೆ ಆದರ್ಶ ವಿದ್ಯಾರ್ಥಿಗಳನ್ನು ರೂಪಿಸುವ ದೇವಾಲಯಗಳಾಗಬೇಕಯ್ಯ" ಎಂದು ಹೇಳುವಲ್ಲಿ ಅವರು ಶಿಕ್ಷಣದ ಬಗ್ಗೆ ಹೊಂದಿದ ಕಳಕಳಿ ವ್ಯಕ್ತವಾಗುತ್ತದೆ.

ಸಂಸ್ಕೃತಿ :

ಇಂದು ಭಾರತೀಯರಲ್ಲಿ ಬಹುಜನರು 'ನಮ್ಮದೆಲ್ಲ ಕೆಟ್ಟದ್ದು, ಹೊರದೇಶದ್ದೆಲ್ಲ ಒಳ್ಳೆಯದು' ಎಂದು ಭಾವಿಸಿ ಎಲ್ಲದಕ್ಕೂ ಪಾಶ್ಚಾತ್ಯರನ್ನು ಅನುಕರಿಸುತ್ತಿದ್ದಾರೆ. ಇದನ್ನು ಮನಗಂಡ ಪೂಜ್ಯಶ್ರೀಗಳು ಹೇಳಿದ್ದು ಹೀಗೆ :

ಮಮ್ಮಿ ಡ್ಯಾಡಿ ಬೇಡ್ವೇಬೇಡ
ಅಪ್ಪ ಅಮ್ಮ ಬೇಕೇಬೇಕು
ಹಾಯ್ ಹಲೋ ಏತಕ್ಕೆ ಬೇಕು
ನಮ್ರ ನಮನ ನಾವ್ ಕಲಿಬೇಕು
ರೀಟಾ ರಾಕಿ ದೂರು ಹಾಕು
ಶರಣ - ಶರಣೆ ಸಾಮೀಪ್ಯ ಸಾಕು
ವಿದೇಶ ವಿಕೃತಿಯ ಆಚೆ ನೂಕು
ಸ್ವದೇಶಿ ಸಂಸ್ಕೃತಿ ಆಚರಿಸಬೇಕು
ಗುರು ಅಥಣೇಶ ಬೆರೆತರೆ ಸಾಕು

ನಮ್ಮ ಭಾಷೆ. ಸಂಸ್ಕೃತಿ ಮತ್ತು ಪರಂಪರೆ ಶ್ರೇಷ್ಠವಾದುದು. ಅದನ್ನೇ ನಮ್ಮವರು ಉಳಿಸಿ-ಬೆಳೆಸಿಕೊಂಡು ಹೋಗಬೇಕೆಂಬುದು ವಚನಕಾರರ ಆಶಯವಾಗಿದೆ.

೩) ಸಾಹಿತ್ಯಿಕ ವಿವೇಚನೆ :

ಪೂಜ್ಯಶ್ರೀ ಚನ್ನಬಸವದೇವರ 'ವಚನಚೈತ್ರ' ಕೃತಿಯಲ್ಲಿಯ ವಚನಗಳ ಸಾಹಿತ್ಯಿಕ ಮೌಲ್ಯ, ಭಾಷಾಭಿವ್ಯಕ್ತಿ, ನಿರೂಪಣಾ ವಿಧಾನ ಇತ್ಯಾದಿ ಅಂಶಗಳನ್ನು ಪರಿಶೀಲಿಸುವಾಗ ಪ್ರಾಚೀನ ಶರಣರ ವಚನಗಳ ಪ್ರಭಾವವನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

'ವಚನಚೈತ್ರ'ದಲ್ಲಿಯ ವಚನಗಳು ಪ್ರಾಚೀನ ಶರಣರ ವಚನಗಳಂತೆ ಗದ್ಯಾತ್ಮಕ ಮತ್ತು ಪದ್ಯಾತ್ಮಕ ಲಯಗಳೆರಡನ್ನೂ ಮೈಗೂಡಿಸಿಕೊಂಡಿವೆ. ಚಿಕ್ಕ ಚಿಕ್ಕ ಸಾಲುಗಳಲ್ಲಿ ಒಂದು ವಿಚಾರವನ್ನು ಪ್ರತಿಪಾದಿಸುವ ಇಲ್ಲಿಯ ವಚನಗಳು ಭಾವತೀವ್ರತೆಯಿಂದ ಕೂಡಿವೆ.

ಗಾದೆ ಮಾತು ಬಳಕೆ :

ಪೂಜ್ಯಶ್ರೀಗಳು ಜೀವನಾನುಭವದ ಗಟ್ಟಿ ಮಾತುಗಳನ್ನು ವಚನಗಳಲ್ಲಿ ಪ್ರಯೋಗಿಸಿದ್ದು ಗಮನೀಯವಾಗಿದೆ. ಇಂಥ ಮಾತುಗಳಿಂದಾಗಿ ವಚನದ ಸತ್ವ ಹೆಚ್ಚಿದೆ. ಇಲ್ಲಿ ಕೆಲವನ್ನು ಉದಾಹರಣೆಗಾಗಿ ಹೇಳುವುದಾದರೆ–

* ಭೂಮಿಗಿಂತ ತಾಯಿ ದೊಡ್ಡವಳು
* ಮಕ್ಕಳು ಈ ಜಗದ ಜೀವಕಳೆ
* ನಾರಿಯಿಲ್ಲದ ಮನೆಯಲ್ಲ; ದೇವರಿಲ್ಲದ ಗುಡಿಯಲ್ಲ
* ಅತಿಯಾದ ಬುದ್ಧಿಗಿಂತ ಮಿತವಾದ ಮಾತು ಲೇಸು
* ಹೆಣ್ಣು ಅರಿತರೆ ಅಧ್ಯಾತ್ಮದ ಕಾವೇರಿ

ವಚನಗಳಲ್ಲಿ ಬಳಕೆಗೊಂಡ ಇಂಥ ಗಾದೆಮಾತುಗಳು ಓದುಗನ ಮನಸ್ಸಿನಲ್ಲಿ ನೆಲೆನಿಂತು, ಮತ್ತೆ ಮತ್ತೆ ಸ್ಮರಣೆಗೆ ಬರುವಂತವುಗಳಾಗಿವೆ.

ಆಂಗ್ಲ ಪದ ಪ್ರಯೋಗ :

ಪೂಜ್ಯಶ್ರೀಗಳು ಅಪ್ಪಟ ಕನ್ನಡಾಭಿಮಾನಿಗಳಾಗಿದ್ದರೂ ಅಭಿವ್ಯಕ್ತಿಯಲ್ಲಿ ಅನಿವಾರ್ಯವಾಗಿ ಕೆಲ ಆಂಗ್ಲಪದಗಳನ್ನು ಪ್ರಯೋಗಿಸಿದ್ದುಂಟು. ಕಂಪ್ಯೂಟರ್, ಮಾರ್ಕೇಟ್, ಕೀಬೋರ್ಡ್, ಪೇಪರಫೈಲ್, ಗೇಮ್ಸ್ ಮೊದಲಾದ ಕೆಲ ಇಂಗ್ಲೀಷ ಶಬ್ದಗಳನ್ನು ವಚನಗಳಲ್ಲಿ ಕಾಣುತ್ತೇವೆ. ಇವೆಲ್ಲ ಆಂಗ್ಲಭಾಷೆಯ ಬಳುವಳಿಗಳಾಗಿದ್ದರೂ ಜೀವನದಲ್ಲಿ ದಿನನಿತ್ಯ ಕನ್ನಡಿಗರು ಬಳಸುವ ಶಬ್ದಗಳಾಗಿವೆ.

ಶರಣರ ವಚನಗಳ ಛಾಯೆ :

ಆಧುನಿಕ ವಚನಕಾರರ ರಚನೆಗಳಿಗೆ ಬಸವಾದಿ ಶರಣರ ವಚನಗಳೇ ಸ್ಫೂರ್ತಿನೀಡಿವೆ. ಹೀಗಾಗಿ ಪೂಜ್ಯರೂ ಸಹ ಪ್ರಾಚೀನ ವಚನಕಾರರ ವಚನಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಹೀಗೆಂದಾಗ ವಚನಕಾರರ

ಸ್ವಂತಿಕೆಯನ್ನು ಅಲ್ಲಗಳೆಯುವಂತಿಲ್ಲ. ಅನಿವಾರ್ಯವಾಗಿ ಅನುಕರಣೆ ವಚನ ರಚನೆಗಳಲ್ಲಿ ಬಂದಿರುವುದು ಗಮನಾರ್ಹ. ಮಾದರಿಗಾಗಿ ಒಂದು ವಚನ :

ಅಯ್ಯಾ ಎನ್ನ ತಪ್ಪುಗಳನಂತ
ಅಯ್ಯಾ ಎನ್ನ ಮೋಸಗಳು ಮುಮ್ಮಡಿ
ಅಯ್ಯಾ ಎನ್ನ ನಿಂದನೆ ನಿಲುಕಲಾರದಷ್ಟು
....

ಪೂಜ್ಯಶ್ರೀಗಳ ಈ ವಚನದ ಸಾಲುಗಳು ಬಸವಣ್ಣನವರ ವಚನದ ಸಾಲುಗಳನ್ನೇ ನೆನಪಿಸುತ್ತವೆ.

ಎನ್ನ ತಪ್ಪು ಅನಂತ ಕೋಟಿ; ನಿಮ್ಮ ಸೈರಣೆಗೆ ಲೆಕ್ಕವಿಲ್ಲಾ
ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ
ತನು ವಂಚಕ ಮನವಂಚಕ ಧನವಂಚಕ ನಾನಯ್ಯ

ಇದೇ ಪ್ರಕಾರ ಅನೇಕ ವಚನಗಳಲ್ಲಿ ಈ ಮೊದಲಿನ ವಚನಗಳ ಛಾಯೆಯನ್ನು ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ 'ವಚನಚೈತ್ರ' ಕೃತಿ ತಾತ್ತ್ವಿಕ, ಸಾಮಾಜಿಕ, ಸಾಹಿತ್ಯಿಕ ಹೀಗೆ ಯಾವದೇ ದೃಷ್ಟಿಯಿಂದ ನೋಡಿದರೂ ಒಂದು ಮೌಲಿಕ ಗ್ರಂಥವಾಗಿದೆ. ಬದುಕಿನ ವಿವಿಧ ಸನ್ನಿವೇಶ-ಸಂದರ್ಭಗಳನ್ನು ಕಂಡು, ಕೇಳಿ ಅನುಭವಿಸಿದ ವಚನಕಾರರು ತಮ್ಮ 'ವಚನಚೈತ್ರ' ಕೃತಿಯಲ್ಲಿ ಧರ್ಮ-ಸಾಹಿತ್ಯ-ಸಂಸ್ಕೃತಿ-ಸಾಮಾಜಿಕ ಜೀವನವನ್ನು ಕುರಿತು ಚಿಂತನೆಗೈದಿದ್ದಾರೆ. ಜಿಡ್ಡುಗಟ್ಟಿದ ವಿಷಮ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ವ್ಯಂಗ್ಯ-ವಿಡಂಬನೆಗಳಿಂದ ತಿದ್ದಲು ಪ್ರಯತ್ನಿಸಿದ್ದಾರೆ. ಉತ್ತಮವಾದದ್ದನ್ನು ಹೆಮ್ಮೆಯಿಂದ ಮುಕ್ತವಾಗಿ ಹಾಡಿ ಹೊಗಳಿದ್ದಾರೆ. ಇಲ್ಲಿಯ ವಚನರಚನೆಯ ಶಿಲ್ಪವನ್ನು, ವಸ್ತು-ಅಭಿವ್ಯಕ್ತಿಕ್ರಮವನ್ನು ಗುಣಗ್ರಾಹಿಗಳಾದ ಸಹೃದಯರು ಧಾರಾಳವಾಗಿ ಮೆಚ್ಚಿಕೊಳ್ಳಬಹುದಾಗಿದೆ.

■■

ಪ್ರವಾದಿ ಕಾವ್ಯ : ವಚನ ತರಂಗ

● ಚಂದ್ರಕಾಂತ ಪೋಕಳೆ

ಕವಿ ಒಬ್ಬ ಪ್ರವಾದಿ, ಪ್ರೊಫೆಟ್ ಎನ್ನುವ ಮಾತಿದೆ. ಅವನೊಬ್ಬ ಮುನ್ನೋಡುವ ದಾರ್ಶನಿಕ. ಅವನ ಬರವಣಿಗೆ ಮಾನವ ಜನಾಂಗದ ಪ್ರಜ್ಞೆಯ ಅಂತರಾಳದ ಮಿಡಿತವಾಗಿರುವುದರಿಂದ ಅದು ಶಾಶ್ವತವಾಗಿ ನಿಲ್ಲುವ ಕ್ಲಾಸಿಕ್ ಆಗಿ ಬಿಡುತ್ತದೆ. ಚನ್ನಬಸವದೇವರು ಇವರ 'ವಚನ ತರಂಗ'ವನ್ನು ನಾನು ಪ್ರವಾದಿ ಕಾವ್ಯವನ್ನಾಗಿ ಕಾಣಲು ಬಯಸುತ್ತೇನೆ. ಕನ್ನಡ ಸಾಹಿತ್ಯದಲ್ಲಿ 'ಪ್ರವಾದಿ ಕಾವ್ಯ' ಎನ್ನುವದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಜಪಾನದಲ್ಲಿ 'ರ್ಘುನ್ ಕಾವ್ಯ' ಇರುವುದಾದರೆ ಕನ್ನಡದ ಅನುಭಾವ ಕಾವ್ಯವನ್ನು 'ಪ್ರವಾದಿ ಕಾವ್ಯ' ಎಂದೇಕೆ ಕರೆಯಬಾರದು ಎಂದು ನನಗೆ ಈ ಕ್ಷಣಕ್ಕೆ ಅನಿಸಿದ್ದು ಮಾತ್ರ ಸತ್ಯ. ಹಾಗೆ ನೋಡಿದರೆ 'ಅನುಭಾವ ಕಾವ್ಯ' ಎಂದು ಈಗಾಗಲೇ ಬಳಸಿರುವದರಿಂದ ಇದರ ಅಗತ್ಯವಿರಲಿಲ್ಲ. ಅನುಭಾವ ಎನ್ನುವ ಪದ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಅತ್ಯಂತಿಕ ಪದ ಎಂದೆನಿಸುತ್ತದೆ. ಅಧ್ಯಾತ್ಮದ ಎಲ್ಲ ಆಳ-ವ್ಯಾಪ್ತಿಯನ್ನು ಮೀರಿನಿಲ್ಲುವಂತಹ ಮಾರ್ಮಿಕ ಶಬ್ದ. ಇದನ್ನು ವ್ಯಾಖ್ಯಾನಿಸುವದೇ ಕಷ್ಟ.

ಹಲವು ಶತಮಾನಗಳು ಗತಿಸಿದರೂ ವಚನ ಸಾಹಿತ್ಯ ಇವತ್ತಿಗೂ ಜೀವಂತಿಕೆ ಉಳಿಸಿಕೊಂಡಿರುವದು ಆ ಕಾವ್ಯದ ಜೀವಸತ್ವದ ಬಗ್ಗೆ ಬೆರಗನ್ನು ಉಂಟು ಮಾಡುತ್ತದೆ. ಆಧುನಿಕ ಸಾಹಿತ್ಯ ಸಹ ಇದರ ಪ್ರಭಾವದಿಂದ ಹೊರಗುಳಿಯುವದು ಸಾಧ್ಯವಾಗಿಲ್ಲ ಎನ್ನುವದಕ್ಕೆ ಈಗಲೂ ರಚಿಸಲ್ಪಡುವ ವಚನ ಮಾದರಿಯ 'ಚುಟುಕು ಕಾವ್ಯ'ಗಳನ್ನು ನೋಡಿದರೆ ಮನವರಿಕೆಯಾಗುತ್ತದೆ. ಎಲ್ಲ ವಚನಕಾರರಲ್ಲಿ ಬಸವಣ್ಣ ಅನಂತರದ ಕವಿಗಳ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದ್ದು ಸ್ಪಷ್ಟವಾಗಿ ಗುರುತಿಸಬಹುದು. ಬಸವನ ಸಾಮಾಜಿಕ ಬದ್ಧತೆ, ಸರಳವಾದ ರಚನಾ ಮಾದರಿ ಇದಕ್ಕೆ ಕಾರಣವಾಗಿರಬಹದು. ಆದರೆ ಅಲ್ಲಮನ ನಿಗೂಢತೆ ಯಾರಿಗೂ ಇವತ್ತಿಗೂ ದಕ್ಕಲಿಲ್ಲ. ಬಸವನ ಮಾದರಿಯ ವಚನಗಳು ಹೆಚ್ಚಿನ ಸಂಖ್ಯೆಯಲ್ಲಿ ಅನುಕರಣೆಯಾಗುತ್ತವೆ. ಆದರೆ

ಅಲ್ಲಮನ ಮಾದರಿ ತೀರಾ ಅಪರೂಪ. ಪ್ರಾಯಶಃ ಜರಗನಹಳ್ಳಿ ಶಿವಶಂಕರ ಅವರ ಚುಟುಕಿನಲ್ಲಿ ಮಾತ್ರ ಅಲ್ಲಮನ ಛಾಯೆಯನ್ನು ನಾನು ಗಮನಿಸಿದ್ದೇನೆ. ಅಲ್ಲಿ ಅನುಭಾವದ ಜೊತೆಗೆ ' ರ್ಝೆನ್ 'ನ ಆಧ್ಯಾತ್ಮಿಕತೆಯೂ ಹಾಸು ಹೊಕ್ಕಾಗಿದೆ.

ಚನ್ನಬಸವದೇವರ ವಚನಗಳು ಮಾತ್ರ ಬಸವಪಥವನ್ನೇ ಮಾದರಿಯಾಗಿ ಇಟ್ಟುಕೊಂಡಿವೆ. ಬಸವ ಭಕ್ತನಾಗಿ, ಸಾಮಾಜಿಕ ಕಾರ್ಯಕರ್ತನಾಗಿ. ಸುಧಾರಕನಾಗಿ. ಬಸವದೇವರಿಗೆ ಪ್ರಿಯವಾಗಿರುವಂತಿದೆ. ಈ ಕವಿಯ ಹೆಸರಿನಲ್ಲೂ ' ಬಸವಸಿದ್ದಾ ನೆ '. ಅವರ ಎಂಬತ್ತೂ ವಚನಗಳಲ್ಲಿ ಆಯ್ಕೆ ಮಾಡಿಕೊಂಡ ವಸ್ತು ಮಾತ್ರ ಬೆರಗುಗೊಳಿಸುವಷ್ಟು ವೈವಿಧ್ಯತೆಯಿಂದ ಕೂಡಿದೆ. ಆಧುನಿಕ ಸಂಕೀರ್ಣ ಬದುಕನ್ನು ಕವಿ ಜಾಲಾಡಿಸಿಬಿಡುತ್ತಾರೆ, ಕಟುವಿಮರ್ಶೆಗೊಳಪಡಿಸುತ್ತಾರೆ. ಆಧುನಿಕ ಜೀವನ ಕ್ರಮ ಇಡೀ ಸಮಾಜವನ್ನೇ ಕುಲಗೆಡಿಸಿ ಬಿಡುತ್ತದಲ್ಲ ಎಂಬ ಅಸಮಾಧಾನ, ಆತಂಕಗಳನ್ನು ಕವಿ ತನ್ನ ಹಲವು ವಚನಗಳಲ್ಲಿ ವ್ಯಕ್ತಮಾಡುತ್ತಾರೆ. ದೇವರು. ಧರ್ಮ, ಮಠಗಳನ್ನು ತನ್ನ ಚಿಕಿತ್ಸೆಗೆ ಒಳಪಡಿಸುತ್ತಾರೆ.

ಕವಿ ಮಠಾಧೀಶನಾಗಿದ್ದರೂ ನಿತ್ಯ ಜೀವನದಲ್ಲಿ ತೀರಾ ಒಳಹೊಕ್ಕು ಅಲ್ಲಿಯ ಭ್ರಮೆ. ಮೋಸ, ವಂಚನೆ, ಸೋಗಲಾಡಿತನವನ್ನು ಹೊರಗೆಳೆದು ಬತ್ತಲೆಗೊಳಿಸಿ ' ನಗ್ನಸತ್ಯ'ವನ್ನು ಬಹಿರಂಗಗೊಳಿಸುವ ಪರಿ ನಿಜಕ್ಕೂ ಮಾರ್ಮಿಕವಾದದ್ದು. ಈ ಕವಿಗೆ ಪರಂಪರೆಯ ಬಗ್ಗೆ ಅನನ್ಯವಾದ ಶ್ರದ್ಧೆಯಿದ್ದಂತಿದೆ. ಆರ್ಷೆಯವಾದದ್ದು, ಪೂಜ್ಯವಾದದ್ದು, ಪವಿತ್ರವಾದದ್ದು, ಅದನ್ನು ಆಧುನಿಕತೆ ಹಾಳುಮಾಡದಂತೆ ರಕ್ಷಿಸಬೇಕೆಂಬ ಸಾಮಾಜಿಕ ಕಳಕಳಿ ಅವರ ಪ್ರತಿ ಮಾತಿನಲ್ಲಿ ಗುರುತಿಸಬಹುದಾಗಿದೆ. ಭಾಷೆ. ಸಂಸ್ಕೃತಿ ಬಗ್ಗೆ ಈ ಕವಿಗಿರುವ ಕಾಳಜಿ ನಿಜಕ್ಕೂ ಬೆರಗುಗೊಳಿಸುವಂತಹದು. ಅದಕ್ಕೆ ಎಂಥ ಅನ್ಯಾಯವಾದರೂ ಕವಿ ಸಹಿಸುವದಿಲ್ಲ. ತಟ್ಟನೆ ಜ್ವಾಲಾಮುಖಿಯಂತೆ ಸಿಡಿದೇಳುತ್ತಾನೆ. ಅರಳು ಹುರಿದ ಮಾತಿನಲ್ಲಿ ಚಾಟಿಯೇಟು ನೀಡುತ್ತಾನೆ. ಚನ್ನಬಸವ ದೇವರಲ್ಲಿ ಸರ್ವಜ್ಞನ ಮಾದರಿಯ ವಿಡಂಬನಾ ದಾಟಿಯಿದೆ. ಅವರ ಒಟ್ಟೂ ವಚನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಸವ + ಸರ್ವಜ್ಞ = ಚನ್ನಬಸವದೇವರು ಎಂದು ನಾನು ಸಮೀಕರಣದ ಭಾಷೆಯಲ್ಲಿ ಹೇಳಿದರೆ ತಪ್ಪಾಗಿ ಗ್ರಹಿಸಬೇಕಿಲ್ಲ. ಅದರರ್ಥ ಸಾಮಾಜಿಕ ಕಳಕಳಿ + ವಿಡಂಬನೆ ಎಂದು ಅರ್ಥ.

ಆಧುನಿಕ ಸಂದರ್ಭದಲ್ಲಿ ಚನ್ನಬಸವದೇವರು ಬರೆದಂತಹ ವಚನಗಳು ತೀರಾ ಪ್ರಸ್ತುತ ಎಂದೆನಿಸುತ್ತವೆ. ಇಂದಿನ ಸಂಕೀರ್ಣ, ಕ್ಲಿಷ್ಟ. ಗೋಜಲುಮಯ ಬದುಕಿನಲ್ಲಿ ಈ ವಚನಗಳು ತೀರಾ ಅಪ್ಯಾಯಮಾನವಾದವುಗಳು. ಸಮಾಜದ ಅನಾರೋಗ್ಯವನ್ನು ಹೊಗಲಾಡಿಸುವದೇ ಇವುಗಳ ಘನ ಉದ್ದೇಶ. ಇಂಥ ತಾತ್ವಿಕ ಮಾತುಗಳನ್ನು ಸಂದರ್ಭಗಳನ್ನು ಜನಕ್ಕೆ ಹಿಡಿಸುವಂತೆ ಮಾತನಾಡುವದು ಅಷ್ಟೊಂದು ಸುಲಭವಲ್ಲ. ಆದರೆ ಈ ಕವಿ ಸೈದ್ಧಾಂತಿಕ ವಿವರವನ್ನು ಸಹ ಅತ್ಯಂತ ಆಪ್ತ ದಾಟಿಯಲ್ಲಿ ಮೋಹಕವಾದ

ರೀತಿಯಲ್ಲಿ, ಅಷ್ಟೇ ರೋಚಕವಾದ ಭಾಷೆಯಲ್ಲಿ ಹಿಡಿದಿಟ್ಟ ಪರಿಯನ್ನು ಮಾತ್ರ ನಾನು ತುಂಬಾ ಇಷ್ಟಪಟ್ಟಿದ್ದೇನೆ.

ಸರಳ, ಸುಲಲಿತವಾದ ಭಾಷೆ ಓದುಗರ ಹೃದಯವನ್ನು ತಕ್ಷಣ ಕಟ್ಟಿ ಹಾಕುವಷ್ಟು ಸಶಕ್ತವಾಗಿದೆ. ಅವರ ರೂಪಕ ಭಾಷೆ, ಭಾಷಣದ ಪ್ರತಿಮೆ, ಸಂಕೇತಗಳಿಗೆ ಜೋತು ಬೀಳುವದಿಲ್ಲ. ಇದೇ ಈ ಕವಿಯ ಅನನ್ಯತೆ ಎಂದೆನಿಸುತ್ತದೆ. ಇಲ್ಲಿಯ ವಸ್ತುಗ್ರಹಿಕೆ ತೀರಾ ಉನ್ನತ ಮಟ್ಟದ್ದು. ಪ್ರತಿ ಹಂತದಲ್ಲಿ ' ಮಾನವೀಯತೆ 'ಯು ಮಂದ್ರವಾದ ರೀತಿಯಲ್ಲಿ ಹರಿಯುತ್ತಿರುತ್ತದೆ. ವಚನದ ಪ್ರತಿ ನಾಡಿಬಡಿತದಲ್ಲಿ ಮಾನವೀಯತೆಯು ಸಹಜವಾಗಿ ಮಿಡಿಯುತ್ತಿರುತ್ತದೆ. ಚನ್ನಬಸವದೇವರ ಒಟ್ಟು ಕಾವ್ಯದ ಆಶಯ ಮಾನವೀಯತೆಯೇ ಆಗಿದ್ದು ಮೆಚ್ಚಬೇಕಾದ ಸಂಗತಿ.

ಹಾಗಂತ ಈ ಕವಿಯ ಕಾವ್ಯದಲ್ಲಿ ದೋಷ ಇಲ್ಲವೇ ಇಲ್ಲ, ಅಂತಲ್ಲ. ಅವರ ವಚನಗಳು ಒಳನೋಟವನ್ನು ನೀಡುವದಿಲ್ಲ. ಉಪದೇಶದ ಅಪಾಯಕಾರಿ ದಾಟಿ ಹಿಡಿದುಬಿಡುತ್ತದೆ. ಹಲವು ಕಡೆ ಏಕತಾನತೆಯಿಂದ ಬಳಲುತ್ತದೆ. ಉಪದೇಶ ದಾಟಿ ಗಮನಿಸಿಯೇ ನಾನು ಆರಂಭದಲ್ಲಿ ಇದು ' ಪ್ರವಾದಿ ಕಾವ್ಯ' ಅಂದದ್ದು.

■■

ಸಂಪ್ರದಾಯದ ಸುಳಿಯಲ್ಲಿ : ಅವಲೋಕನ

● ಪ್ರೇಮಾ ಭಟ್

ಮಾನವನ ಬದುಕಿನ ಶೈಲಿ ಬದಲಾಗುತ್ತಿದ್ದಂತೆ ಸಮಸ್ಯೆಯ ಬೇರುಗಳು ವಿಶಾಲವಾಗಿ ಹರಡಿಕೊಳ್ಳುತ್ತಿವೆ. ಮಾನವ ಯಂತ್ರಮಾನವನಾಗುತ್ತಿರುವ ಇಂದಿನ ದಿನಗಳಲ್ಲಿ ಶುದ್ಧ ನೀರಿಗೆ ಅಭಾವ, ಶುದ್ಧಗಾಳಿಗೆ ಅಭಾವ, ಅದಕ್ಕೂ ಮಿಗಿಲಾಗಿ ಮಾನವ-ಮಾನವ ಸಂಬಂಧಗಳು ಬಿರುಕು ಬಿಟ್ಟಿರುವುದನ್ನು ಕಾಣುತ್ತಿದ್ದೇವೆ. ಪರಸ್ಪರರಲ್ಲಿ ವಿಶ್ವಾಸವಿಲ್ಲ. ನಂಬಿಕೆ ಮೊದಲೇ ಇಲ್ಲ. ಇದಿರು ಸಿಕ್ಕಾಗ ಒಳ್ಳೆಯ ಮಾತಿಲ್ಲ, ಕತೆಯಿಲ್ಲ. ಹಣದಿಂದ ಮಾನವನ ಗುಣವನ್ನು ಅಳೆಯಲಾಗುತ್ತಿದೆ. ಭಾವಭಾವನೆಗಳಿಗೆ ಸ್ಪಂದಿಸುವಂತಹ ವ್ಯಕ್ತಿಗಳ ಸಂಖ್ಯೆ ಅಥವಾ ಪ್ರಮಾಣ ಕಡಿಮೆಯಾಗುತ್ತಿದೆ. ಗಳಿಕೆಯ ಮೊತ್ತದ ಭಾರವನ್ನು ಹೆಚ್ಚಿಸುವುದಕ್ಕಾಗಿ ವಿವಿಧ ವೇಷಗಳ ಚಲಾವಣೆಯಾಗುತ್ತಿದೆ. ಇಂಥ ವಿಷಮ ಪರಿಸ್ಥಿತಿ ಜಗತ್ತಿನಲ್ಲಿ ಬೇರು ಬಿಟ್ಟಿರುವಾಗ ಬದುಕು ಸಹನವಾಗುವುದು ಹೇಗೆ? ಇಂಥ ಪರಿಸ್ಥಿತಿಯಲ್ಲಿ ಸಮಾಜದಲ್ಲಿರುವ ಮೌಢ್ಯವನ್ನು ಕಿತ್ತು ಹಾಕುವಂತಹ ಕೆಲಸ ಮಾಡಬೇಕಿದೆ. ಇಂಥ ಕೆಲಸ ಮಾಡುವವರು ಅಲ್ಲಲ್ಲಿ ಬೆಳಕಿಂಡಿಗಳಂತೆ ಕಾಣಸಿಗುತ್ತಾರೆ. ಅವರಲ್ಲಿ ಒಬ್ಬರು ಪೂಜ್ಯ ಅಥಣೀಶರು ಅರ್ಥಾತ್ ಪೂಜ್ಯ ಶ್ರೀಗಳಾದ ಚನ್ನಬಸವದೇವರು. ಸಮಾಜದಲ್ಲಿರುವ ಮೂಢನಂಬಿಕೆಗಳನ್ನು, ಕಂದಾಚಾರವನ್ನು ಸಾರಸಗಟಾಗಿ ಇವರು ಅಲ್ಲಗಳೆಯುತ್ತಾರೆ.

ಸಮಾಜದ ಕಳಕಳಿಹೊತ್ತ ಚಿಂತನಶೀಲರಾದ ವಚನಕಾರರು, ದಾಸರು ಅಂದು ಸಮಾಜವನ್ನು ತಿದ್ದಲು ಪ್ರಯತ್ನಿಸಿದರು. ಅದರ ಸ್ವರೂಪವನ್ನು ಬದಲಾಯಿಸಲು ಹೋರಾಟ ನಡೆಸಿದರು. ಇಂದು ಅದೇ ಪ್ರಯತ್ನವನ್ನು ಪೂಜ್ಯ ಅಥಣೀಶರು ಮಾಡಹೊರಟಿದ್ದಾರೆ. ಸನ್ಯಾಸಿಯಾದವನು ಸಮಾಜದ ಬೇರು. ತನಗೂ ಸಮಾಜಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಕೈ ಕಟ್ಟಿಕುಳಿತಿದ್ದರೆ ವಿದ್ಯಾರಣ್ಯರಿಂದ ವಿಜಯನಗರ ಸ್ಥಾಪನೆಯಾಗುತ್ತಿರಲಿಲ್ಲ. ವಿವೇಕಾನಂದರಂತಹ ವೀರಸನ್ಯಾಸಿ ಇಲ್ಲದೆ ಹೋಗಿದ್ದರೆ ನಮ್ಮ ಭಾರತದ ಸಂಸ್ಕೃತಿಗೆ ಎಂದೋ ಅವನತಿ ಬಂದೊದಗುತ್ತಿತ್ತು. ಇಂದಿಗೂ ಪ್ರಸ್ತುತ ಎನ್ನಿಸುವ ಇಂಥ ಸನ್ಯಾಸಿಗಳೂ ನಮ್ಮ ಕಣ್ಣೆದಿರು ಬಂದು ನಿಲ್ಲುತ್ತಾರೆ. ಇಂಥವರು ನಮ್ಮ ದೇಶದಲ್ಲಿ ಹುಟ್ಟಿಬರದೆ ಹೋಗಿದ್ದರೆ ಭಾರತದ ಸ್ಥಿತಿಗತಿ ಇನ್ನಷ್ಟು ಹೀನಾಯವಾಗುತ್ತಿತ್ತು.

ಅಖಂಡ ಬ್ರಹ್ಮಚರ್ಯ ಪಾಲನೆ, ಬಾಹ್ಯ ಅಂತರಂಗ ಶುದ್ಧಿ ಇದ್ದು, ತತ್ವನಿಷ್ಠರಾಗಿರುವ ಸನ್ಯಾಸಿಗಳಿಂದ ವಿಶ್ವವನ್ನೇ ಗೆಲ್ಲಲು ಸಾಧ್ಯ ಎಂಬುದನ್ನು ಎಂಥ ಸನ್ಯಾಸಿಗಳೂ ಸಾರಿತೋರಿದ್ದಾರೆ. ಇಂಥ ಅಧ್ಯಾತ್ಮಜೀವಿ ಸನ್ಯಾಸಿಗಳಿಗೆ ನಮ್ಮ ನಾಡಿನಲ್ಲಿ ಬರವಿಲ್ಲ. ಪರಂಪರೆ ಸುಸಂಸ್ಕೃತ ಬದುಕು ಸಾಮಾನ್ಯವ್ಯಕ್ತಿಯನ್ನು ಒಬ್ಬ ಯೋಗಿಯನ್ನಾಗಿಸುತ್ತದೆ. ಅಥಣಿಯ ಮೋಟಗಿಮಠದ ಪೀಠಾಧಿಪತಿಗಳಾದ ಚನ್ನಬಸವದೇವರ ಪೀಠದ ಪರಂಪರೆ ದೊಡ್ಡದು. ಅಧ್ಯಾತ್ಮ ಅನುಭೂತಿಗಳು ಚಿಂತಕರೂ ಆದ ಶ್ರೀಗಳಿಂದ ಇತ್ತೀಚಿಗೆ 'ಸಂಪ್ರದಾಯದ ಸುಳಿಯಲ್ಲಿ' ಎಂಬ ಕಿರುಹೊತ್ತಿಗೆ ಹೊರಬಂದಿದೆ. ಸರ್ವಾಂಗ ಸುಂದರವಾಗಿ ಬಂದಿರುವ ಈ ಕೃತಿಯ ಒಳಹೂರಣವೂ ಅಷ್ಟೆ ಸತ್ವಯುತವಾಗಿದೆ. ಲೇಖನಗಳೂ ಅವರ ಪ್ರೌಢ ಅನುಭವಗಳ ಹಿನ್ನೆಲೆಯಲ್ಲಿ ರಚನೆಗೊಂಡಿದ್ದು, ಚಿಂತನೆಗೆ ಹಚ್ಚುತ್ತವೆ. ಪುಸ್ತಕದಲ್ಲಿರುವ ಮೊದಲ ಲೇಖನ 'ಬಿಂದುಗಳು' ಇದರಲ್ಲಿ ಇಂದಿನ ಶಿಕ್ಷಣ ವ್ಯವಸ್ಥೆ, ಧರ್ಮದ ಅವನತಿ, ಮಾತು ಕೃತಿ ಆಚಾರ ವಿಚಾರಗಳ ಕುರಿತು ಶ್ರೀಗಳು ನಿರ್ದಾಕ್ಷಿಣ್ಯವಾಗಿ ನಿರೂಪಿಸಿದ್ದಾರೆ. ಹಬ್ಬಗಳ ಆಚರಣೆಯಲ್ಲಿ ಹರಕೆಗಳ ರೂಪದಲ್ಲಿ ಹಣ ಅಪವ್ಯಯವಾಗುತ್ತಿರುವುದನ್ನು 'ಹಬ್ಬಗಳ ಅಬ್ಬರ' ಲೇಖನದಲ್ಲಿ ಖಂಡಿಸಿದ್ದಾರೆ. ಸ್ವತಂತ್ರ ಭಾರತದ ಬದುಕಿಗೆ ಏನಾಗಿದೆ ? ಜಾತ್ಯಾತೀತ ಭಾರತ ಜಾತಿಯ ಸಂಕೋಲೆಗಳಲ್ಲಿ ಸಿಕ್ಕು ನರಳುತ್ತಿರುವ ಬಗ್ಗೆ, ರಾಮನ ಹೆಸರಿನಲ್ಲಿ ಗುಡಿಕಟ್ಟುವವರು ಕೆಡವುವವರ ಬಗ್ಗೆ, ನಾಗರಿಕತೆಯೆಂದರೆ ಕೇವಲ ಸ್ವೇಚ್ಛಾಚಾರ, ದುರಾಚಾರಗಳಲ್ಲ ಎಂಬುದನ್ನು ಪ್ರಸ್ತುತ ಪಡಿಸುತ್ತ, ಇದರಿಂದ ಭಾರತದ ಭವಿಷ್ಯ ಏನಾಗಬಹುದು ಎನ್ನುವುದರ ಬಗ್ಗೆ ಚಿಂತನೆ ನಡೆಸಿದ್ದಾರೆ. ಮಠಾಧೀಶರು ಮಾಡಬೇಕಾದ ಸಮಾಜಸೇವೆ ಏನು ? ಜಾತಿಯ ಮೇಲೆ ಉಪಜಾತಿಯನ್ನು ನಿರ್ಮಿಸಿ ಮಠಪಲ್ಲಕ್ಕಿಯನ್ನು ಸೃಷ್ಟಿಸಿ ಹುಂಬ ಜನರ ಮೇಲೆ ಸವಾರಿ ಮಾಡುವುದಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾ ಅರ್ಥಪೂರ್ಣ ತತ್ವಚಿಂತನೆಯನ್ನು ನಡೆಸಿದ್ದಾರೆ. 'ಮಹಿಳೆ ಮನುಕುಲದ ಜೀವಕಳೆ' ಎಂಬ ಲೇಖನದಲ್ಲಿ ವರದಕ್ಷಿಣೆ ಪಿಡುಗಿನಿಂದ ಆಗುತ್ತಿರುವ ಅನ್ಯಾಯದ ಬಗ್ಗೆ, ೨೧ ನೇ ಶತಮಾನದ ಮಹಿಳೆಯರು ಇನ್ನೂ ಲಕ್ಷ್ಮಣರೇಖೆಯಿಂದ ಹೊರಬಂದಿಲ್ಲ ಎಂಬುದನ್ನು ಖಚಿತಪಡಿಸುತ್ತಾರೆ. ಹೀಗೆ ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲುವ ಈ ಕೃತಿಯಲ್ಲಿರುವ ಲೇಖನಗಳೂ ನಮ್ಮನ್ನು ಚಿಂತನೆಗೆ ಹಚ್ಚುತ್ತವೆ. ಭ್ರಷ್ಟರಾಜಕಾರಣದಿಂದ ಬದುಕು ಬರಡಾಗುತ್ತಿರುವ, ನೈತಿಕ ಮೌಲ್ಯ ಅಪಮೌಲ್ಯವಾಗುತ್ತಿರುವ ಇಂದಿನ ದುರ್ದೆಶೆಯಲ್ಲಿ ಚಿಂತನೆಗೆ ಹಚ್ಚುವ ಇಂಥ ಪುಸಕ್ತಗಳ ಅವಶ್ಯಕತೆ ಬಹಳವಾಗಿದೆ. ಸ್ವಾಮೀಜಿಯವರ ವಚನದಲ್ಲಿ ಕಸುವಿದೆ, ಕಾವಿದೆ, ವಿಚಾರಧಾರೆ ಇದೆ. ನಿರ್ದಾಕ್ಷಿಣ್ಯವಾಗಿ ಹೇಳುವ ಕೆಚ್ಚು ಇದೆ. ಶಕ್ತಿ ಇದೆ. ಅವರ ಆಲೋಚನೆಗಳ ಮಧುರ ಫಲದ ಸವಿಯನ್ನು ಸಮಾಜ ಸವಿಯಲಿ, ಅದು ಜನತೆಗೆ ಜೀವ ಸೆಲೆಯಾಗಲಿ, ಸಾಮಾಜಿಕ ಕಳಕಳಿ ಹೊತ್ತಿರುವ ಸ್ವಾಮೀಜಿಯವರ ಈ ಕೃತಿಯನ್ನು ಸರ್ವರೂ ಓದುವಂತಾಗಲಿ ಎಂದು ಆಶಿಸುವೆ.

■■

ಸಂಪ್ರದಾಯದ ಸುಳಿಯಲ್ಲಿ : ಒಳನೋಟಗಳು

● ಡಾ. ಸಿ. ಪಿ. ಕೃಷ್ಣಕುಮಾರ

೧

ನಮ್ಮ ನಾಡಿನ ಬಹುಪಾಲು ಮಠಮಾನ್ಯಗಳು ಇಂದು ಸಂಪ್ರದಾಯದ ಸುಭದ್ರ ಕಾವಿ ಕೋಟೆಗಳಾಗಿವೆ; ಮಠಾಧೀಶರು ಕಂದಾಚಾರಗಳ ಕಾವಲುಗಾರರಾಗಿದ್ದಾರೆ ! ಇಂಥ ವಿಷಮ ಸನ್ನಿವೇಶದಲ್ಲಿ ಪ್ರಗತಿಪರ ಧೋರಣೆಯ ಮಠಾಧೀಶರು ಅಲ್ಲೊಬ್ಬ ಇಲ್ಲೊಬ್ಬರಾದರೂ ಇರುವುದು ಸಮಾಧಾನದ ಸಂಗತಿ. ನಿಡುಮಾಮಿಡಿ ಮಾನವಧರ್ಮಪೀಠದ ಶ್ರೀ ವೀರಭದ್ರ ಚನ್ನಮಲ್ಲಸ್ವಾಮಿಯವರು ಅಂಥ ಮಠಾಧೀಶರಲ್ಲಿ ಮುಖ್ಯರಾದವರು. ಅವರ ಜಾಡನ್ನೆ ಹಿಡಿಯ ಹೊರಟಿದ್ದಾರೆ ಶ್ರೀ ಮೋಟಗಿಮಠದ ಶ್ರೀ 'ಅಥಣೀಶ'ರು. 'ಶ್ರೀ ಜ.ಚ.ನಿ. ಪೀಠದ ಶ್ರೀ ವೀರಭದ್ರ ಚನ್ನಮಲ್ಲಸ್ವಾಮಿಯವರ ವಿಚಾರಗಳು ನನ್ನ ಬರಹಕ್ಕೆ ಸ್ಫೂರ್ತಿ ತಂದಿವೆ' ಎಂದು ಅವರು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಇಬ್ಬರೂ ಇನ್ನೂ ಯುವಕರಾದುದರಿಂದ ಸ್ವಲ್ಪಮಟ್ಟಿಗಾದರೂ 'ನಿರಂಕುಶಮತಿ'ಯನ್ನು ಮೆರೆದು ಸಮಾಜದಲ್ಲಿ ಬದಲಾವಣೆಯನ್ನು ತರುವ ಸಾಧ್ಯತೆಯಿದೆ. ('ಸ್ವಲ್ಪಮಟ್ಟಿಗಾದರೂ' ಎಂದು ಏತಕ್ಕೆ ಹೇಳುತ್ತಿದ್ದೇನೆಂದರೆ ಮಠ ಎಂದಮೇಲೆ ಕೆಲವು ಅನಿವಾರ್ಯ ಮಿತಿಗಳಿರುತ್ತವೆ.)

ಮಠಗಳು ಮನಸ್ಸು ಮಾಡಿದರೆ. ಏನನ್ನು ಬೇಕಾದರೂ ಸಾಧಿಸಬಹುದು. ಪ್ರತಿಯೊಂದು ಮಠಕ್ಕೂ ನಿಷ್ಠೆಯಿಂದ, ವಿಧೇಯತೆಯಿಂದ ನಡೆದುಕೊಳ್ಳುವ ಅಭಿಮಾನಿ ಸಮುದಾಯವಿರುತ್ತದೆ. ಅದನ್ನು ಸನ್ಮಾರ್ಗದಲ್ಲಿ ಒಯ್ಯಬೇಕು, ಮಠಾಧೀಶರು: ಮೌಢ್ಯದ ಕೊರಕಲು ಹಾದಿಯಲ್ಲಲ್ಲ. ಈ ಅರಿವು 'ಅಥಣೀಶ'ರಿಗಿದೆ ಎನ್ನುವುದು ಸಂತೋಷದ ವಿಷಯ.

ಇಂದು ನಮ್ಮ ಸಮಾಜ 'ಸ್ಥಾವರ'ವಾಗಿದೆ. ಅದನ್ನು 'ಜಂಗಮ'ವಾಗಿಸುವ ಜವಾಬ್ದಾರಿ ಮಠಗಳ ಮೇಲಿದೆ. ಅದು ಅವುಗಳ ನಿಜವಾದ ಕರ್ತವ್ಯ. ಈ ಕರ್ತವ್ಯ ಪ್ರಜ್ಞೆಯನ್ನು ತಮ್ಮ ಬದುಕಿನಲ್ಲಿ ಎಂತೋ ಅಂತೆ ಬರಹಗಳಲ್ಲಿ ವ್ಯಕ್ತಪಡಿಸುತ್ತಿದ್ದಾರೆ. 'ಅಥಣೀಶ'ರು ಅವರ 'ಸಂಪ್ರದಾಯದ ಸುಳಿಯಲ್ಲಿ' ಎಂಬ ಪುಸ್ತಕ ಈ ದಿಕ್ಕಿನಲ್ಲಿ

ತುಂಬ ಗಮನಾರ್ಹವಾಗಿದೆ. ಶೀರ್ಷಿಕೆಯೆ ಅರ್ಥಪೂರ್ಣವಾಗಿದೆ. ಸಂಪ್ರದಾಯದ ಕೆಟ್ಟ ಸುಳಿಯಿಂದ ಸಮಾಜವನ್ನು ಪಾರುಮಾಡಬೇಕೆಂಬ ಅಪೇಕ್ಷೆ, ಎಚ್ಚರ ಈ ಪುಸ್ತಕದ ಎಲ್ಲ ಲೇಖನಗಳಲ್ಲೂ ಪಡಿಮೂಡಿದೆ. ಮಠಾಧಿಪತಿಯೊಬ್ಬರ ಈ ಸಾಮಾಜಿಕ ಕಳಕಳಿಯನ್ನು ವಿಚಾರಪರತೆಯನ್ನು ಮೆಚ್ಚದಿರುವುದು ಶಕ್ಯವಿಲ್ಲ.

'ಸಂಪ್ರದಾಯದ ಸುಳಿಯಲ್ಲಿ' ಗ್ರಂಥದ ಬರಹಗಳಲ್ಲಿ ಕೆಲವು 'ನೇತ್ಯಾತ್ಮಕ'ವಾಗಿದ್ದು. ನಮ್ಮ ಸಮಾಜದ ಲೋಪ-ದೋಷ. ಓರೆ-ಕೋರೆಗಳನ್ನು ಟೀಕಿಸುವ, ವಿಡಂಬಿಸುವ ಕೆಲಸವನ್ನು ಮುಖ್ಯವಾಗಿ ಮಾಡುತ್ತವೆ; ಇನ್ನು ಕೆಲವು 'ಇತ್ಯಾತ್ಮಕ'ವಾಗಿದ್ದು, ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತವೆ. ಗುರಿ ಒಂದೇ.

೨

'ಬಿಂದುಗಳು' ಎಂಬ ಬರಹ ಕೆಲವು ಬಿಡಿವಿಚಾರಗಳ ಗೊಂಚಲು. 'ನಾವು ಕಂಪ್ಯೂಟರ್ ಯುಗದವರು. ಖಂಡಿತ ನಮಗೆ ಬಿಡುವಿಲ್ಲ' ಎಂಬುದು ಎಂಥ ವಿಪರ್ಯಾಸ! ವಿಜ್ಞಾನ. ತಂತ್ರಜ್ಞಾನಗಳಲ್ಲಿ ನಾವು ಸಾಧಿಸಿರುವಷ್ಟು ಪ್ರಗತಿಯನ್ನು ಅಧ್ಯಾತ್ಮದಲ್ಲಿ ಸಾಧಿಸಿಲ್ಲ ಎಂಬುದು ಇದರ ಧ್ವನಿಯಿರಬಹುದು. 'ಹಾದಿ ಬೀದಿಗಳಲ್ಲಿ ಲಾಟರಿ ಟಿಕೇಟುಗಳ ಮಾರಾಟವಾಗುವಂತೆ, ದುಡ್ಡಿಗಾಗಿ ಸರ್ಟಿಫಿಕೇಟ್ ಶಿಫಾರಸ್ ಪತ್ರಗಳನ್ನು ಮನೆ ಮನೆಗೆ ತಂದು ತಲುಪಿಸುವ ವ್ಯವಸ್ಥೆ ನಡೆಯುತ್ತಲೇ ಇದೆ' ಎಂಬುದು ಕೂಡ ಕಟುಸತ್ಯದ ನಿರೂಪಣೆಯಾಗಿದೆ. 'ನೂರಾರು ಕಷ್ಟ ಸಂಕಷ್ಟಗಳ ಪರಿಹಾರಕ್ಕಾಗಿ ನಾವು ತೆಗೆದುಕೊಳ್ಳುವ ನಿರ್ಧಾರ ಸಾವಲ್ಲ, ಸಾಧನೆ'. 'ಮಾತು, ಕೃತಿ, ಅರಿವು-ಆಚಾರ ಒಂದಾದಾಗ ತಾನೆ ಒಬ್ಬ ಶ್ರೇಷ್ಠ ಸಾಧಕನಾಗುವುದು' ಎಂಬ ಹೇಳಿಕೆಗಳು ಸ್ವೀಕಾರಾರ್ಹವಾಗಿವೆ.

'ಹಬ್ಬಗಳು' ಬರಹದಲ್ಲಿ 'ಅಥಣೀಶ'ರು ವಿಷಾದದಿಂದ ಹೇಳುತ್ತಾರೆ. "ಹಬ್ಬಗಳು ಕೇವಲ ವಾರ್ಷಿಕ ಆಚರಣೆಗಳಾಗಿವೆ, ದುಂದುವೆಚ್ಚದ ಕೇಂದ್ರಗಳಾಗಿವೆ" ಈ ಪ್ರಶ್ನೆಯನ್ನು ಲಕ್ಷಿಸಬೇಕು. "ಮನೆಯ ಮಕ್ಕಳನ್ನು ಬೀದಿಪಾಲು ಮಾಡಿ, ಕಾಣದಿರುವ ದೇವರಿಗೆ ಎರಗುವುದರಿಂದ ಏನು ಪ್ರಯೋಜನ ?"

'ಓ! ಯುವಕ, ಏನಾಗುವೆ ?' ಲೇಖನದಲ್ಲಿ ಇಂದಿನ ಯುವಕರ ಅವಸ್ಥೆಯನ್ನು ಪ್ರಾಸಬದ್ಧವಾಗಿ ಕಟಕಿಗೆ ಗುರಿಮಾಡಲಾಗಿದೆ. "ಈ ದೇಶದ ಬಹುತೇಕ ಯುವಕರು ದುಶ್ಚಟಗಳ ದಾಸರಾಗಿದ್ದಾರೆ. ಧೂಮಪಾನದ ದೊರೆಗಳಾಗಿದ್ದಾರೆ. ಗುಟಕಾದ ಗುಲಾಮರಾಗಿದ್ದಾರೆ. ಮಟಕಾದ ಮಜನುಗಳಾಗಿದ್ದಾರೆ. ಬದುಕನ್ನು ಚಟಗಳಿಗೆ ಅರ್ಪಿಸಿಕೊಂಡಿದ್ದಾರೆ. ಚಟಗಳಿಂದಲೆ ಘಟವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ" ದಿಟವಲ್ಲವೆ ?

'ಸ್ವತಂತ್ರ ಭಾರತದ ಅತಂತ್ರ ಬದುಕು' ಲೇಖನದ ಈ ಪ್ರಶ್ನೆ ಮನನಯೊಗ್ಯವಾದದ್ದು. "ನಮ್ಮದು ಸ್ವತಂತ್ರ ಭಾರತ, ತ್ಯಾಗಭೂಮಿ ಭಾರತ ಎಂದು ಹೇಳಿಕೊಂಡು, ಹೆಮ್ಮೆಪಡುವ ನಾವು ನಿಜವಾಗಿಯೂ ಸ್ವತಂತ್ರರಾಗಿದ್ದೇವೆಯೇ ?"

' ಅಥಣೀಶ 'ರ ಈ ಹೇಳಿಕೆಗಳನ್ನು ಪರಿಗಣಿಸಬೇಕು " ನಾಗರಿಕತೆ ಎಂದರೆ ಕೇವಲ ಸ್ವೇಚ್ಛಾಚಾರ ದುರಾಚಾರವಲ್ಲ; ಶಿವಾಚಾರ ಸಹಜಾಚಾರಗಳು ಬೆಳೆಯಬೇಕು ". " ಭರತಖಂಡದಲ್ಲಿ ಬಾಬಾಗಳಿಗೇನು ಕೊರತೆಯಿಲ್ಲ. ಬಾಯಾರಿದವರಿಗೆ ನೀರೆರೆಯುವವರ ಕೊರತೆಯಿದೆ ".

ಇಡೀ ಸಂಕಲನದಲ್ಲಿ ಅತ್ಯಂತ ಮಹತ್ವದ ಬರಹವೆಂದರೆ. ' ನಾವು ಮಠಾಧೀಶರು ಮತ್ತು ನಮ್ಮ ಸಮಾಜಸೇವೆ '. ಇದು ಒಂದು ರೀತಿಯಲ್ಲಿ ಆತ್ಮಾವಲೋಕನವೆ ಆಗಿದೆಯೆನ್ನಬಹುದು. ಮಠದ ಸ್ವಾಮಿಗಳು " ಮುಗ್ಧರನ್ನು ಗೋಮುಖವ್ಯಾಘ್ರಗಳಂತೆ ಕಾಡುತ್ತಿದ್ದಾರೆ " ಎಂದು ನಿರ್ಭಿಡೆಯಿಂದ ಹೇಳುವ ' ಅಥಣೀಶ 'ರು, " ಇಂದು ಮಾತ್ರ ಸಮಾಜದ ಸ್ವಾಸ್ಥ್ಯ ಬಯಸುವ ಸ್ವಾಮಿಗಳ ಕೊರತೆ ಹೆಚ್ಚುತ್ತಲೆ ಇದೆ " ಎಂದು ತಥ್ಯವನ್ನು ನಿಷ್ಠುರವಾಗಿ ಅನಾವರಣಮಾಡಿದ್ದಾರೆ. ಎಷ್ಟು ಮಂದಿ ಸ್ವಾಮಿಗಳು ಈ ಹೊತ್ತು ಹೀಗೆ ಹೇಳಬಲ್ಲರು ? (" ಜಾತಿ, ಉಪಜಾತಿಯ ಸಂಘಟನೆ ಕಾರ್ಯಕ್ರಮಗಳಿಗೆ ಹೋಗಿ ಅಲ್ಲಿ ಅವರಂತೆ ಡೋಲುಬಡಿದು, ತುತ್ತೂರಿ ಊದಿ ಬರುವ ಮಠಾಧೀಶರು ಜಾತಿಯ ಜಗದ್ಗುರುಗಳಾಗುತ್ತಾರೆಯೆ ಹೊರತು ಜ್ಯೋತಿಯ ಜಗದ್ಗುರುಗಳಾಗುವುದಿಲ್ಲ" ಎಂದು ಇನ್ನೊಂದು ಕಡೆ ಟೀಕಿಸಲಾಗಿದೆ.)

' ಮಹಿಳೆ ಮನುಕುಲದ ಜೀವಕಳೆ ' ಎಂಬ ಬರಹದಲ್ಲಿ ' ಅಥಣೀಶ 'ರು ಏಕಪಕ್ಷೀಯ ನಿಲುವು ತಳೆಯದೆ, ಮಹಿಳೆಗೆ ಹೀಗೆ ಕಿವಿಮಾತು ಹೇಳಿರುವುದು ಗಮನಾರ್ಹ. " ಸುಮ್ಮನೆ ಗಂಡನನ್ನು ಪೀಡಿಸಿ ಕಾಡುತ್ತ ಹೆಂಡತಿ ಮಾರಿಯಾಗಬಾರದು, ಪ್ರೀತಿಯ ನಾರಿಯಾಗಬೇಕು ".

' ದೇವಸ್ಥಾನ ' ಎಂಬುದರ ಬದಲು ' ಧ್ಯಾನಮಂದಿರ ' ಅಥವಾ ' ಪ್ರಾರ್ಥನಾಮಂದಿರ ' ಇಲ್ಲವೆ ' ಚಿಂತನಮಂದಿರ ' ಎಂದು ಕರೆಯುವುದು ಯುಕ್ತ ಎನ್ನುತ್ತಾರೆ ' ಅಥಣೀಶ 'ರು. (ದೇವಸ್ಥಾನಗಳ ಸುತ್ತ) ಇದು ವಿಚಾರಯೋಗ್ಯ.

" ಬಾಲ್ಯದ ಮೂರು ವರ್ಷದ ಬುದ್ಧಿಯೇ ಮುಪ್ಪಿನ ನೂರು ವರ್ಷಗಳವರೆಗೆ ಕಾಡುತ್ತವೆ; ಆಗ ನಮ್ಮ ಮಕ್ಕಳು ನಾಯಕರಾಗುವುದಿಲ್ಲ, ನಾಲಾಯಕರಾಗುತ್ತಾರೆ " ಎಂದು ತುಸು ಚಮತ್ಕಾರಪೂರ್ವಕವಾಗಿ ಹೇಳಲಾಗಿದೆ, ' ಮಕ್ಕಳು ಅಕ್ಕರೆಯ ಹೂಗಳು ' ಎಂಬ ಬರಹದಲ್ಲಿ.

' ಜಾತಿ ಬೇಡ, ಧರ್ಮ ಬೇಕು ' ಎನ್ನುವುದೊಂದು ಮುಖ್ಯವಾದ ಲೇಖನ. ಇಲ್ಲಿನ ಸಂದೇಶವೆಂದರೆ, " ಒಂದೇ ಒಂದು ಜಾತಿ ಅದು ಮಾನವ ಜಾತಿ. ಒಂದೇ ಒಂದು ಧರ್ಮ ಅದು ಮಾನವ ಧರ್ಮ. ಅಂತಹ ಮಾನವಧರ್ಮದ ನೆಲೆಯಲ್ಲಿ ಒಂದಾಗಿ ಹೆಜ್ಜೆ ಹಾಕುತ್ತಾ, ಗಟ್ಟಿಯಾಗಿ ಹೋಗೋಣ. ' ಜಾತಿ ಬೇಡ, ಧರ್ಮ ಬೇಕು ' (ಇನ್ನೊಂದು ಕಡೆ ' ಅಥಣೀಶ 'ರು ಮನನೀಯವಾಗಿ ಹೇಳುತ್ತಾರೆ. " ಬಿದ್ದವರ, ನೊಂದವರ,

ನಿರಾಶ್ರಿತರ, ದುಃಖಿತರ, ಶೋಷಿತರ ಬದುಕನ್ನು ಸುಂದರ ಮಾಡುವುದಾದರೆ ಅದಕ್ಕಿಂತ ದೊಡ್ಡ ಧರ್ಮ ಮತ್ತೊಂದಿಲ್ಲ. ಉಳಿದ ನೂರು ಧರ್ಮಕಾರ್ಯ ಮಾಡುವುದರಲ್ಲಿ ಅರ್ಥವೇ ಇಲ್ಲ".)

ಒಂದೆಡೆ, "ಜ್ಞಾನವೆಂಬುದು ಹರಿಯುವ ಗಂಗೋತ್ರಿಯೇ ವಿನಾ ನಿಂತ ನೀರಾಗಬಾರದು" ಎಂಬುದು ಅಥಣೀಶರ ಉಕ್ತಿ. ನಿಂತ ನೀರನ್ನು ಹರಿಯುವ ಜೀವನದಿಯನ್ನಾಗಿಸುವ ಶ್ಲಾಘ್ಯ ಪ್ರಯತ್ನ ಅವರದು.

"ಇಲ್ಲಿಯ ಎಲ್ಲ ವಿಚಾರಗಳು ಎಲ್ಲವೂ ನನ್ನವೆಂದು ಹೇಳಲಾರೆ" ಎಂದು ವಿನಯದಲ್ಲಿ ಪ್ರಕಟಿಸಿದ್ದಾರೆ ಅಥಣೀಶರು. ಬೆಳಕು ಎಲ್ಲಿಂದ, ಯಾರಿಂದ, ಯಾರ ಮೂಲಕ ಬಂದರೂ ಬೆಳಕೇ; ಅದು ಕತ್ತಲನ್ನು ಕಳೆಯಬೇಕು ಎಂಬುದು ಮುಖ್ಯ. ಈ ಸದುದ್ದೇಶದಿಂದ ಹೊರಬಂದಿರುವ 'ಸಂಪ್ರದಾಯದ ಸುಳಿಯಲ್ಲಿ' ಸಮಾಜಮುಖಿಯಾದ ಉಪಯುಕ್ತವಾದ ಚಿಂತನಶೀಲ ಕೃತಿ. ಇದನ್ನು ಕೊಟ್ಟಿದ್ದಕ್ಕಾಗಿ ಅಥಣೀಶರು ಅಭಿನಂದನೀಯರು. ಅವರ ಸತ್‌ಸಂಕಲ್ಪಕ್ಕೆ, ಕಾರ್ಯಕಲಾಪಕ್ಕೆ ಎಲ್ಲ ಯಶವೂ ಸಮನಿಸಲಿ.

■■

ವಿ. ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

ಆಧುನಿಕ ವಚನ ಸಾಹಿತ್ಯ : 'ಅಥಣೀಶ'ರ ಕೊಡುಗೆ

● ಡಾ. ಜಿ.ಎಂ. ಹೆಗಡೆ

ಆಧುನಿಕ ವಚನ ಸಾಹಿತ್ಯವು ಹೊಸಗನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟವಾದದ್ದು. ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತವಾಗದೆ ದೇಶೀಯವಾದ ಚಿಂತನಧಾರೆಯಿಂದ ಅಭಿವ್ಯಕ್ತಗೊಂಡ ಆಧುನಿಕ ವಚನಗಳು ವಿಪುಲವಾಗಿ ರಚಿತವಾಗುತ್ತಿವೆ. ಆಧುನಿಕ ವಚನಗಳು ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದಿಂದ ಪ್ರೇರಣೆ ಪಡೆದುಕೊಂಡಿದ್ದರೂ ಅವು ವಸ್ತು. ಆಶಯ ಅಭಿವ್ಯಕ್ತಿಯಿಂದ ಸ್ವತಂತ್ರ ಸ್ವರೂಪ ಪಡೆದುಕೊಂಡಿವೆ. ಹನ್ನೆರಡನೆಯ ಶತಮಾನದಲ್ಲಿ ವಚನಗಳು ಸಾಮಾಜಿಕ ಪ್ರತಿಭಟನೆಯ ಧ್ವನಿಯಾಗಿ ಅಭಿವ್ಯಕ್ತಿಗೊಂಡರೆ ಇಪ್ಪತ್ತನೆಯ ಶತಮಾನದ ವಚನಗಳಿಗೆ ಅಂತಹ ಒತ್ತಡ ಕಾರಣವಾಗಿಲ್ಲ. ವಚನಕಾರರ ಸಮಾಜೋ ಧಾರ್ಮಿಕ ಚಳವಳಿಯ ಆಶಯಗಳು ಹನ್ನೆರಡನೆಯ ಶತಮಾನದ ವಚನಗಳಲ್ಲಿ ಮೂರ್ತಸ್ವರೂಪ ಪಡೆದುಕೊಂಡಿದ್ದು ಅವು ಎಂಟು ಶತಮಾನಗಳಿಂದ ಕನ್ನಡಿಗರನ್ನು ಪ್ರಭಾವಿಸುತ್ತ ಬಂದಿವೆ.

ಭಾರತೀಯ ಭಾಷೆಗಳಲ್ಲಿ ರಾಮಾಯಣ. ಮಹಾಭಾರತಗಳಂತಹ ರಾಷ್ಟ್ರೀಯ ಮಹಾಕಾವ್ಯಗಳಿಂದ ಪ್ರಭಾವಿತವಾಗದೆ ಶುದ್ಧ ದೇಶೀಯ ಚಿಂತನೆಯಿಂದ ಸಾಹಿತ್ಯವಾಗಿ ಅರಳಿದ ವಚನವು ಕನ್ನಡ ಸಾಹಿತ್ಯದ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. ವಚನಗಳ ಪ್ರಭಾವ ಕನ್ನಡ ಸಾಹಿತ್ಯದುದ್ದಕ್ಕೂ ಬೇರೆ ಬೇರೆ ಸಾಹಿತ್ಯ ಪ್ರಕಾರಕ್ಕೆ. ಕವಿಗಳಿಗೆ ಸ್ಫೂರ್ತಿಯನ್ನು ನೀಡಿದೆ. ಆಧುನಿಕ ವಚನಕಾರರು ಹಿಂದಿನ ವಚನಗಳಿಂದ ಪ್ರಭಾವಿತರಾಗಿ ವಚನಕಾರರ ಅಭಿವ್ಯಕ್ತಿ ಮಾಧ್ಯಮವನ್ನು ತಮ್ಮದಾಗಿಸಿಕೊಂಡು ಕನ್ನಡದ ಆಧುನಿಕ ಸಾಹಿತ್ಯದ ವೈವಿಧ್ಯಕ್ಕೆ ಕಾರಣರಾಗಿದ್ದಾರೆ.

ಆಧುನಿಕ ವಚನಗಳನ್ನು ಬರೆದ ಎಸ್.ವಿ.ರಂಗಣ್ಣ. ಸಿದ್ಧಯ್ಯ ಪುರಾಣಿಕ. ಎಸ್.ವಿ.ಪರಮೇಶ್ವರ ಭಟ್ಟ. ಮಹಾದೇವ ಬಣಕಾರ ಮೊದಲಾದವರಂತೆ ವೀರಶೈವ ಮಠಾಧೀಶರೂ ಬಹುವಾಗಿ ವಚನ ರಚನೆ ಮಾಡಿದ್ದಾರೆ. ಜ.ಚ.ನಿಯವರು. ಮೂಜಗಂ. ಮುಂಡರಗಿ ಜಗದ್ಗುರುಗಳು. ಚಿತ್ರದುರ್ಗ ಶಿವಮೂರ್ತಿ ಶರಣರು. ಸಿರಿಗೆರೆ ಪಂಡಿತಾರಾಧ್ಯ ಶ್ರೀಗಳು. ಮರೇಗುದ್ದಿ ನಿರುಪಾಧಿ ಶ್ರೀಗಳು. ಚಿಲಕವಾಡಿ ಕುಮಾರ

ನಿಜಗುಣ ಶ್ರೀಗಳು. ಹುಲಸೂರು ಶಿವಾನಂದ ಶ್ರೀಗಳು. ವಿಜಯಕುಮಾರ ಮಹಾನುಭಾವಿಗಳು. ಗಂಗಾಧರ ಶಿವಾಚಾರ್ಯರು. ವೀರಪ್ಪದೇವರು. ನಾರದಗಡ್ಡಿ ಚನ್ನಬಸವೇಶ್ವರ ಸ್ವಾಮೀಜಿ. ಪ್ರಭುದೇವರು- ಹೀಗೆ ಕರ್ನಾಟಕದ ಹಲವು ವೀರಶೈವ ಮಠಾಧೀಶರು ಆಧುನಿಕ ವಚನಗಳನ್ನು ಬರೆದಿದ್ದಾರೆ.

ನಾಡಿನ ವೀರಶೈವ ಮಠ ಪರಂಪರೆಯಲ್ಲಿ ಅಥಣಿಯ ಮೋಟಗಿ ಮಠಕ್ಕೆ ವಿಶಿಷ್ಟವಾದ ಪರಂಪರೆಯಿದೆ. ಮೋಟಗಿ ಮಠದ ಚನ್ನಬಸವದೇವರು ವೀರಶೈವ ಮಠಾಧೀಶರ ಪರಂಪರೆಯಲ್ಲಿ ಆಧುನಿಕ ವಚನಗಳನ್ನು ಬರೆಯುತ್ತಿದ್ದಾರೆ. ಯುವ ಪ್ರತಿಭಾವಂತರಾದ ಚನ್ನಬಸವದೇವರಲ್ಲಿ ಪರಂಪರೆಯ ಶ್ರದ್ಧೆ ಇದೆ. ಪ್ರಗತಿಯ ವಿಚಾರಧಾರೆಯಿದೆ. ಆದರ್ಶವಾದಿಯಾದ ಚನ್ನಬಸವದೇವರು ತಮ್ಮ ಪ್ರತಿಭೆಯನ್ನು ಆಧುನಿಕ ವಚನ ರಚನೆಯಲ್ಲಿ ಕ್ರಿಯಾಶೀಲಗೊಳಿಸುತ್ತಿದ್ದಾರೆ.

ಚನ್ನಬಸವದೇವರು 'ಅಥಣೇಶ' ಅಂಕಿತದಲ್ಲಿ ಈವರೆಗೆ ಎರಡು ನೂರಕ್ಕೂ ಹೆಚ್ಚು ಆಧುನಿಕ ವಚನಗಳನ್ನು ಬರೆದಿದ್ದಾರೆ. ಅವರ 'ವಚನಚೈತ್ರ' ಮತ್ತು 'ವಚನತರಂಗ'ಗಳು ಜನಪ್ರಿಯವಾಗಿವೆ. ಕೇವಲ ಜನಪ್ರಿಯತೆಯೊಂದೇ ಮಾನದಂಡವಾಗಿರದೆ ಚನ್ನಬಸವದೇವರ ವಚನಗಳಲ್ಲಿ ಮೌಲ್ಯನಿಷ್ಠೆ. ಜೀವನ ಪ್ರೀತಿ ತುಂಬಿಕೊಂಡಿವೆ. 'ಸ್ವಾಮಿ. ನಾನು ಉಪದೇಶಕನಲ್ಲ; ಸೇವಕ. ಸಮಾಜ ಸುಧಾರಕ. ಸಂಶೋಧಕ. ಸತ್ಯಪಥದ ಸಾಧಕ ನಾನು'. ಎಂದು ನಮ್ರತೆಯಿಂದ ಹೇಳಿದ್ದಾರೆ.' ಚನ್ನಬಸವದೇವರು ಮೌಲ್ಯಗಳ ಆರಾಧಕರು. ಆದರ್ಶವಾದದ ಪ್ರತಿಪಾದಕರು. ತಮ್ಮ ವಚನಗಳಲ್ಲಿ ನೇರವಾದ ವಿಚಾರದ ಮೂಲಕ ಮೌಲ್ಯಪ್ರತಿಪಾದನೆಯನ್ನು ಅರ್ಥಪೂರ್ಣವಾಗಿ ಮಾಡುತ್ತಾರೆ.

ಸೌಜನ್ಯ ಶತ್ರುಗಳನ್ನು ನಾಶ ಮಾಡಿದರೆ
ನಂಬಿಕೆಯು ಸಂಶಯಾದಿಗಳನ್ನು ಸದೆ ಬಡಿಯುತ್ತದೆ
ದಯೆಯು ಕ್ರೂರಿಗಳನ್ನು ಕಡಿಮೆ ಮಾಡಿದರೆ
ಸರಳತೆ ಸಂಪ್ರದಾಯಸ್ಥರನ್ನು ಮೃದುವಾಗಿಸುತ್ತದೆ
ನೀತಿಯು ಅನ್ಯಾಯಗಳ ನಾಶ ಮಾಡಿದರೆ
ಪ್ರೀತಿಯು ಜಾತಿ ಪಿಶಾಚಿಗಳ ಜ್ಯೋತಿ ಸ್ವರೂಪ
ಮಾಡಿತ್ತೆಂದ ಅಥಣೀಶ.

ವಚನಚೈತ್ರ. ಪುಟ ೩೭

'ಪ್ರೀತಿ'ಯ ಬಗೆಗೆ ಹೇಳುವ ಈ ವಚನವು ಸೌಜನ್ಯ. ನಂಬಿಕೆ. ದಯೆ. ಸರಳತೆ. ನೀತಿಯ ಪರಿಣಾಮಗಳನ್ನು. ಅವು ಬೀರುವ ಪ್ರಭಾವಗಳನ್ನು ಮನಮುಟ್ಟುವಂತೆ ತಿಳಿಸುತ್ತದೆ. ಹೀಗೆ ಚನ್ನಬಸವದೇವರು ತಮ್ಮ ವಚನಗಳ ತುಂಬ ವಿಚಾರದ ಬಳ್ಳಿ ಬೆಳೆಸಿ ಅನುಭವ-ಅನುಭಾವದ ಹೂ ಅರಳುವಂತೆ ಮಾಡಿದ್ದಾರೆ.

ಚನ್ನಬಸವದೇವರು ತಮ್ಮ ವಚನಗಳ ಅಭಿವ್ಯಕ್ತಿರಮಣೀಯತೆಗೆ ವಿಶೇಷ ಒತ್ತು ನೀಡುತ್ತಾರೆ. ಅವು ಪ್ರಶ್ನೆ. ಸಂವಾದ. ವಿಚಾರದಿಂದ ಬೆಳೆಯುತ್ತವೆ.

ನಮ್ಮ ಮನಸ್ಸಿಗೆ ಮುಟ್ಟುವಂತೆ ಉಪಮೆ ರೂಪಕಗಳನ್ನು ನೀಡಿ ಸಮರ್ಥನೆ ಮಾಡುವ ವಿಶಿಷ್ಟ ಶೈಲಿ ಚನ್ನಬಸವದೇವರ ವಚನಗಳಲ್ಲಿವೆ. ನಿದರ್ಶನಕ್ಕಾಗಿ 'ಮನುಜ ಮತ'ದ ಬಗೆಗಿನ ವಚನವನ್ನು ನೋಡಬಹುದು.

ಒಂದು ಗಿಡದ ರೆಂಬೆಕೊಂಬೆಗಳೆಷ್ಟಿದ್ದರೇನು
ತಾಯಿಬೇರು ಒಂದೇ ಅಲ್ಲವೆ?
ಒಂದೇ ಬೆಳೆಯ ಫಸಲು ಎಷ್ಟೇ ಇದ್ದರೇನು
ಫಲವು ಒಂದೇ ಅಲ್ಲವೇ?
ಒಂದು ಬಾವಿಯ ಝರಿಗಳು ಎಷ್ಟೇ ಇದ್ದರೇನು?
ಜಲವು ಒಂದೇ ಅಲ್ಲವೆ?
ಅಘಣೇಶ ಜಾತಿಮತ ಪಂಥಗಳೆಷ್ಟಿದ್ದರೇನು
ಮನುಜಮತ ಒಂದೇ ಅಲ್ಲವೆ?
ದೇವನಾಮ ಹಲವಾದರೆ ದೇವನೊಬ್ಬನೆ ಅಘಣೇಶ

ವಚನಚೈತ್ರ. ಪುಟ ೩೭

ಮನುಜಮತ. ವಿಶ್ವಪಥ. ಸರ್ವೋದಯ. ಸಮನ್ವಯದ ಪ್ರತಿಪಾದನೆ ಮಾಡುವ ಚನ್ನಬಸವದೇವರು ಭಾರತದಲ್ಲಿ ಧರ್ಮಗಳು ಹಲವಾದರೂ ದೇವರೊಬ್ಬನೆ ಎಂಬ ವಿವೇಕದ ಮಾತನ್ನು ಹೇಳಿ ಎಚ್ಚರಿಸುತ್ತಾರೆ. ಮಠಾಧಿಪತಿಗಳಾದವರು ವಿಶ್ವಮಾನವತ್ವವನ್ನು ಹರಡಬೇಕು ಎಂಬ ಉದಾತ್ತ ಆದರ್ಶ ಚನ್ನಬಸವದೇವರದಾಗಿದೆ. ಮಠದ ಸ್ವಾಮಿಯಾಗಿ ವೀರಶೈವ ಆಚಾರ ಪರಂಪರೆಯ ವಿಚಾರವನ್ನು ತಮ್ಮ ವಚನಗಳ ಮೂಲಕ ಹೇಳುವುದನ್ನು ಅಘಣೇಶರು ಮರೆಯುವುದಿಲ್ಲ. ಪ್ರಗತಿಪರ ವಿಚಾರಗಳ ಜೊತೆಗೆ ಅಂತರಂಗದ ರತ್ನವಾದ ಅನುಭಾವ ಅವರ ವಚನಗಳ ಅಭಿವ್ಯಕ್ತಿ ಸತ್ವವೂ ಆಗಿದೆ.

ಸಾವಿರಾರು ಪುಸ್ತಕಗಳಿದ್ದರೇನು?
ಪರಿಪೂರ್ಣ ಜ್ಞಾನವಾಗದನ್ನಕ್ಕ.
ಸಂಗೀತದ ಸಾಧನಗಳಿದ್ದರೇನು?
ಸ್ವರಮಾಧುರ್ಯ ಮನ ತುಂಬದನ್ನಕ್ಕ.
ನಟಸಾರ್ವಭೌಮ ಪ್ರಶಸ್ತಿ ಬಂದರೇನು?
ನಟನೆ ನೋಡುಗರನ್ನು ಮೈಮರೆಸದನ್ನಕ್ಕ.
ಅಘಣೇಶ ಅಂಗದ ಮೇಲೆ ಲಿಂಗವಿದ್ದರೇನು?
ಲಿಂಗನಿಷ್ಠೆ ಬಲಿಯದನ್ನಕ್ಕ

ವಚನಚೈತ್ರ. ಪುಟ ೧೫

ಚನ್ನಬಸವದೇವರಿಗೆ ಸ್ಫೂರ್ತಿ ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳು. ಅಲ್ಲಿಂದಲೇ ಅವುಗಳ ಭಾವ. ಭಾಷೆಗಳನ್ನು ತಮ್ಮ ವಚನಗಳ

ಅಭಿವ್ಯಕ್ತಿಗೂ ಬಳಸಿಕೊಂಡದ್ದನ್ನು ಇಲ್ಲಿ ಕಾಣುತ್ತೇವೆ. ಚನ್ನಬಸವದೇವರು ತಾವು ಸದಾ 'ಭಕ್ತಪ್ರೇಮಿ' ಎಂಬುದನ್ನು ಹೇಳಿಕೊಂಡಿದ್ದಾರೆ.

ಮಗು ಅತ್ತರೆ ಹೆತ್ತ ತಾಯಿಗೆ ಗೊತ್ತಾಗುವಂತೆ
ಮಲತಾಯಿಗೆ ಆ ನೋವು ವೇದ್ಯವಾಗುವದೇನಯ್ಯ?
ವರಕವಿಯು ತನ್ನ ಕಾವ್ಯದ ರಸಾನುಭೂತಿ ಪಡೆಯುವಂತೆ
ಕುಕವಿಯು ಆ ಸವಿಜೇನ ಆಸ್ವಾದಿಸುವನೇನಯ್ಯ?
ಪ್ರಿಯಕರನ ಪ್ರೇಮಭಾಷೆ ಪ್ರೇಯಸಿಗೆ ಅರ್ಥವಾಗುವಂತೆ
ಪಾಣ್ಣೆಗೆ ವಿದಿತವಾಗುವದೇನಯ್ಯ?
ಅಥಣೀಶ. ನಿನ್ನ ಭಕ್ತರ ನೋವು ನಲಿವು ನಿನಗೆ
ತಿಳಿಯುವಂತೆ ಅನ್ಯರಿಗೆ ತಿಳಿಯುವುದೇನಯ್ಯ?

ವಚನಚೈತ್ರ. ಪುಟ ೫೨

'ವಚನ ತರಂಗ'ದ ವಚನಗಳಲ್ಲಿ ಚನ್ನಬಸವದೇವರು ಸಮಾಜಸಮ್ಮುಖಿಯಾದ ಹಲವು ವಚನಗಳನ್ನು ಬರೆದಿದ್ದಾರೆ. ಮಾನವತೆಯ ಪ್ರೀತಿ ಮಂದಾರವಾಗಿ ಅರಳಿರುವ ವಚನಗಳು ಇಲ್ಲಿ ಎದ್ದು ಕಾಣುತ್ತವೆ.

ಸಮಾಜ ಮರೆತು ಮಠದಲ್ಲಿ ಕುಳಿತ ಸ್ವಾಮಿ ಸ್ವಾಮಿಯಲ್ಲ.
ಮಕ್ಕಳ ಮರೆತು ಮನೆಯಲ್ಲಿ ಕುಳಿತ ಶಿಕ್ಷಕ ಶಿಕ್ಷಕನಲ್ಲ.
ರೋಗಿಗಳ ಮರೆತು ರೂಮಿನಲ್ಲಿ ಕುಳಿತ ವೈದ್ಯ ವೈದ್ಯನಲ್ಲ.
ಜನ ಮರೆತು ಮಹಲಿನಲ್ಲಿ ಕುಳಿತ ರಾಜಕಾರಣಿ
ರಾಜಕಾರಣಿ ಅಲ್ಲ.
ಅಥಣೀಶಾ
ಜನಸಾಮಾನ್ಯರಿಗೆ ತಲುಪದ ಧರ್ಮ ಧರ್ಮವೇ ಅಲ್ಲ.

ವಚನ ತರಂಗ. ಪುಟ ೭೦

ಧರ್ಮದ ಆಚರಣೆ. ಉದ್ದೇಶ. ಸಾರ್ಥಕತೆ ಸಾಧಿತವಾಗಬೇಕಾದರೆ ಅದು ಶ್ರೀಸಾಮಾನ್ಯನನ್ನು ಮುಟ್ಟಿದಾಗ ಮಾತ್ರ ಸಾಧ್ಯ ಎಂಬ ವಿಚಾರವನ್ನು ಚನ್ನಬಸವದೇವರು ಪ್ರತಿಪಾದಿಸುತ್ತಾರೆ. ಜಾತಿ. ಮತದ ಎಲ್ಲೆ ಮೀರಿ ಭಾರತ ಧರ್ಮ ಬೆಳಗಬೇಕು. ಶ್ರೀಸಾಮಾನ್ಯರನ್ನು ಮರೆತವರು ಏನನ್ನೂ ಮಾಡಿದಂತಾಗುವುದಿಲ್ಲ. ಸರ್ವ ಹಿತದೃಷ್ಟಿ. ಬಿದ್ದವರನ್ನು ಮೇಲೆತ್ತುವುದು ಮಾನವತೆಯ ಧರ್ಮ ಎಂಬ ಆದರ್ಶವನ್ನು ಅಥಣೀಶರು ಪ್ರತಿಪಾದಿಸುತ್ತಾರೆ. ತಮ್ಮ ವಚನಗಳಲ್ಲಿ ಅಥಣೀಶರು ಜನಸಾಮಾನ್ಯರಿಗೆ ತಿಳಿಯುವ ಹಾಗೆ ಸಾಮಾನ್ಯವಾದ ದೃಷ್ಟಾಂತಗಳನ್ನು ನಿದರ್ಶನಗಳನ್ನು ನೀಡಿ ವಿಚಾರ ಸಮರ್ಥನೆ ಮಾಡುತ್ತಾರೆ.

ಹಾಸಿಗೆಯನ್ನು ಹಣದಿಂದ ಪಡೆಯಬಹುದು
ನಿದ್ರೆಯನ್ನು ಪಡೆಯಬಹುದೆ?
ಆಹಾರವನ್ನು ಹಣದಿಂದ ಪಡೆಯಬಹುದು
ಹಸಿವೆಯನ್ನು ಪಡೆಯಬಹುದೆ?

ಮಾತ್ರೆಯನ್ನು ಹಣದಿಂದ ಪಡೆಯಬಹುದು
ಆರೋಗ್ಯವನ್ನು ಪಡೆಯಬಹುದೆ?
ಹಣದಿಂದ ಎಲ್ಲವನ್ನೂ ಪಡೆಯಲಾಗದು
ಗುಣ ಋಣಗಳ ಗಣ್ಯತೆ ಬೇಕೆಂದ ಅಥಣೀಶ

ವಚನ ತರಂಗ. ಪುಟ ೫೦

ಆಧುನಿಕ ಜೀವನದಲ್ಲಿ ಮನುಷ್ಯ ಹಣ ಗಳಿಸುವ ಯಂತ್ರವಾಗಿರುವುದರಿಂದ ಹಣದಿಂದ ಎಲ್ಲವನ್ನೂ ಪಡೆಯಲಾಗದು. ಗುಣ-ಋಣಗಳ ಕಡೆಗೆ ನಮ್ಮ ಯೋಚನೆ ಹರಿಯಬೇಕು ಎಂಬುದನ್ನು ಜನಸಾಮಾನ್ಯರಿಗೆ ತಿಳಿಸಲು ಸರಳವಾದ ರೀತಿಯಲ್ಲಿ ಮಂಡನೆ ಮಾಡುತ್ತಾರೆ. ವಾಚ್ಯವೆನಿಸಿದರೂ ಜನಸಾಮಾನ್ಯರಿಗಾಗಿ ಅಭಿವ್ಯಕ್ತಿಯನ್ನು ಸರಳಗೊಳಿಸುತ್ತಾರೆ.

ಅಥಣೀಶರ ವಚನಗಳ ಪ್ರಮುಖ ವೈಶಿಷ್ಟ್ಯವೆಂದರೆ ಅವರ ಕನ್ನಡ ಪ್ರೀತಿ. ಕನ್ನಡ ನಾಡಿನಲ್ಲಿ ಕನ್ನಡ ಸರ್ವರಂಗಗಳಲ್ಲಿ ಸರ್ವೋಚ್ಚ ಸ್ಥಾನ ಪಡೆಯಬೇಕು. ಕನ್ನಡವ ಅಭಿಮಾನ ಅದರ ಮಹೋನ್ನತ ಪರಂಪರೆಯ ಪ್ರತೀಕ ಎಂಬುದನ್ನು ನಾವು ನೆನಪಿಡಬೇಕು.

ಬಸವಾದಿ ಶರಣರ ವಚನಭಾಷೆ
ರನ್ನ ಪಂಪ ಜನ್ನರ ಕಾವ್ಯಭಾಷೆ
ಕುಮಾರವ್ಯಾಸ ಕಾಳಿದಾಸರ ಭಾವಭಾಷೆ
ಕುವೆಂಪು ಮಾಸ್ತಿ ಬೇಂದ್ರೆ ಕಾರಂತರ ಜೀವಭಾಷೆ
ಅಂದಿನಿಂದ ಇಂದಿನವರೆಗೆ ಒಂದೇ ಭಾಷೆ
ಅಥಣೀಶರ ಸವಿಗನ್ನಡಭಾಷೆ

ವಚನ ತರಂಗ. ಪುಟ ೧೦

ಕನ್ನಡ ಪ್ರಾಚೀನ ಪರಂಪರೆಯ ಭಾಷೆಯಾಗಿರುವುದೆಂಬ ಅಭಿಮಾನವನ್ನು ನಾವು ತಳೆಯುವದು ಮಾತ್ರವಲ್ಲ. ಕನ್ನಡ ನಮ್ಮ ನಿತ್ಯ ಜೀವನದಲ್ಲಿ ವ್ಯವಹಾರ ಭಾಷೆಯಾಗಿ. ಆಡಳಿತ ಭಾಷೆಯಾಗಿ ಪ್ರಥಮ ಸ್ಥಾನ ಪಡೆಯಬೇಕು. ಅದನ್ನೇ ಅಥಣೀಶರು ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಆಡುವ ಭಾಷೆ ಕೇವಲ ಕನ್ನಡವಾಗದೆ
ಆಡಳಿತ ಭಾಷೆ ಕನ್ನಡವಾಗಬೇಕು
ಫಲಕಗಳ ಭಾಷೆ ಕೇವಲ ಕನ್ನಡವಾಗದೆ
ದಿನಬಳಕೆಯ ಭಾಷೆ ನುಡಿಗನ್ನಡವಾಗಬೇಕು
ಬರೆಯುವ ಭಾಷೆ ಕೇವಲ ಕನ್ನಡವಾಗದೆ
ಅರಿಯುವ ಭಾಷೆ ಸವಿಗನ್ನಡವಾಗಬೇಕು
ಕನ್ನಡ ಭಾಷೆ ಕೇವಲ ಗ್ರಂಥಸ್ಥವಾಗದೆ
ಹೃದಯಸ್ಥವಾಗಬೇಕೆಂದ ಅಥಣೀಶ

ವಚನ ತರಂಗ. ಪುಟ ೧೨

ಪರಭಾಷಾ ವ್ಯಾಮೋಹ. ಅನ್ಯಭಾಷಿಕರ ವಲಸೆಯಿಂದ ಕರ್ನಾಟಕದಲ್ಲಿ. ಕನ್ನಡದ ಸ್ಥಾನಮಾನ ಕುಂಠಿತವಾಗುತ್ತ ನಡೆದಿದೆ. ಕರ್ನಾಟಕದಲ್ಲಿ ಕನ್ನಡ ಸೊರಗುವುದಕ್ಕೆ ಅಥಣೀಶರು ವಿಷಾದಿಸುತ್ತಾರೆ.

ಒಂದೆಡೆ ಎಕ್ಕಡ
ಇನ್ನೊಂದೆಡೆ ಎನ್ನಡ
ಮತ್ತೊಂದೆಡೆ ಮೈಬಡಾ
ಮಗದೊಂದೆಡೆ ಜೀವಘೋಡಾ
ಅಥಣೀಶ
ಈ ಗೊಂದಲಗಳಲ್ಲಿ ಬೆಳೆಯುವದೆಂದು ಕನ್ನಡ?

ವಚನ ತರಂಗ, ಪುಟ ೧೯

ಆಳುವ ಸರಕಾರ. ಅಧಿಕಾರಿಗಳು. ಜನರು ಕನ್ನಡದ ಬಗೆಗೆ ಕಾಳಜಿ ವಹಿಸದಿದ್ದರೆ ಕನ್ನಡ ಕರ್ನಾಟಕದಲ್ಲಿ ಅನಾಥವಾಗುತ್ತದೆ. ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾದ ತುರ್ತು ಅವಶ್ಯಕತೆಯತ್ತ ಅಥಣೀಶರು ಗಮನ ಸೆಳೆಯುತ್ತಾರೆ.

ಕನ್ನಡಕ್ಕೆ ಆರು ಜ್ಞಾನಪೀಠ ಪ್ರಶಸ್ತಿ ಬಂದರೂ
ಕನ್ನಡಿಗರ ಜ್ಞಾನ ಇಮ್ಮಡಿಯಾಗಲಿಲ್ಲ
ಕನ್ನಡಕ್ಕೆ ಫಾಲ್ಕೆ ಪದ್ಮಭೂಷಣ ಬಂದರೂ
ಕನ್ನಡಿಗರ ಬಾಳು ಬೆಳಗಲಿಲ್ಲ
ಕನ್ನಡದಲ್ಲಿ ಪುಸ್ತಕಗಳು ಸಾವಿರಾರು ಬಂದರೂ
ಕನ್ನಡಿಗರ ಹೃದಯಗದ್ದುಗೆ ಏರಲಿಲ್ಲ
ಕನ್ನಡ ಕನ್ನಡ ಎಂದು ಖೊಟ್ಟಿಯಾಗಿ ಕಿರುಚುವದಕ್ಕಿಂತ
ಗಟ್ಟಿಯಾಗಿ ಕನ್ನಡ ಬೆಳೆಸಿದರೆ
ಸಾರ್ಥಕವೆಂದ ಅಥಣೀಶ

ವಚನ ತರಂಗ, ಪುಟ ೨೮

ಕನ್ನಡವನ್ನು ನಾಡಿನಲ್ಲಿ ಗಟ್ಟಿಗೊಳಿಸುವ ಪ್ರಾಮಾಣಿಕ ಕಳಕಳಿ ಅಥಣೀಶರ ವಚನಗಳಲ್ಲಿ ಅಭಿವ್ಯಕ್ತವಾಗಿದೆ. ಕನ್ನಡ ಪ್ರೀತಿಯನ್ನು ವಚನಗಳ ಮೂಲಕ ಪ್ರಸಾರ ಮಾಡುತ್ತಿರುವ ಅಥಣೀಶರು ಕನ್ನಡದ ಸ್ವಾಮಿಯಾಗಿದ್ದಾರೆ. ಗಡಿನಾಡಿನ ಅಥಣಿಯಲ್ಲಿ ಕನ್ನಡದ ಕಾರ್ಯ ಮಾಡುವ ಅಥಣೀಶರು ತಮ್ಮ ವಚನಗಳ ಮೂಲಕ ಕನ್ನಡ ಸಂಸ್ಕೃತಿ ಪ್ರಸಾರ ಮಾಡುತ್ತಿದ್ದಾರೆ. ಆದರ್ಶವಾದ. ಮೌಲ್ಯನಿಷ್ಠೆ. ಕನ್ನಡ ಪ್ರೀತಿ. ಪ್ರಾಮಾಣಿಕ ಚಿಂತನೆಯ ಅಥಣೀಶರು ಅಪರೂಪದ ವಾಗ್ಮಿಗಳು. ಅವರ ವಚನವಾಹಿನಿ ಬತ್ತಲಾರದ ಗಂಗೆಯಾಗಿ ನಿರಂತರವಾಗಿ ಪ್ರವಹಿಸಲಿ. ಸಾಮಾಜಿಕ ಪ್ರಜ್ಞೆಯ ಅಥಣೀಶರ ವಚನಗಳು ಪ್ರಗತಿಯ ಆಶಯಗಳನ್ನು ಸಮರ್ಥವಾಗಿ ಮುನ್ನಡೆಸುವಲ್ಲಿ ಯಶಸ್ವಿಯಾಗಿವೆ.

■■

ಗ್ರಂಥಾಲಯ

ಪ್ರವಚನ ಪಟು : ಚನ್ನಬಸವದೇವರು

● ಜಯವಂತ ಕಾಡದೇವರ

ಮಠಗಳು ಸಾತ್ವಿಕ ಮತ್ತು ನೈತಿಕ ಬದುಕಿನ ನೆಲೆಗಟ್ಟುಗಳು. ಹಿಂದೊಂದು ಕಾಲದಲ್ಲಿ ಮಠಾಧೀಶರುಗಳು ತಪಸ್ವಿಗಳಾಗಿದ್ದರು, ಯೋಗಿಗಳಾಗಿದ್ದರು. ಎಡೆಯೂರಿನ ಶ್ರೀ ಸಿದ್ಧಲಿಂಗೇಶ್ವರರು. ಹಾನಗಲ್ಲದ ಕುಮಾರ ಸ್ವಾಮಿಗಳು, ಅಥಣಿಯ ಶಿವಯೋಗಿಗಳು, ಹುಬ್ಬಳ್ಳಿಯ ಸಿದ್ಧಾರೂಢರು ಈ ಸಂದರ್ಭದಲ್ಲಿ ನಮ್ಮ ಸ್ಮರಣೆಗೆ ಬರುವ ಮಹಾನುಭಾವರು. ಇನ್ನು ಕೇಲವು ಮಠಾಧೀಶರು ಸಮಾಜ ಸೇವೆ, ಸ್ವಾಧ್ಯಾಯದ ಜೊತೆಗೆ ಲೇಖನ ವ್ಯವಸಾಯದಲ್ಲಿ ತೊಡಗಿ ೧೨ನೆಯ ಶತಮಾನದ ನೆನಪು ಹಸಿರಾಗಿಸಿದ್ದಾರೆ. ಅವರಲ್ಲಿ ನನ್ನ ಅರಿವಿಗೆ ಬಂದವರೆಂದರೆ ತರಳಬಾಳುವಿನ ಡಾ. ಶಿವಮೂರ್ತಿ ಶಿವಾಚಾರ್ಯರು. ಅಥಣಿ ಮೋಟಗಿಮಠದ ಶ್ರೀ ಚನ್ನಬಸವ ದೇವರು. ಮೊದಲ ಇಬ್ಬರು ಹಿರಿಯರು. ಮೂರನೆಯವರು ಕಿರಿಯರು.

ಚನ್ನಬಸವದೇವರದು ಆಕರ್ಷಕ ವ್ಯಕ್ತಿತ್ವ. ತರುಣ ವಯಸ್ಸಿನಲ್ಲಿಯೇ ಇವರದು ಅಪಾರ ಜ್ಞಾನ ಸಂಪಾದನೆಯ ಸಾಧನೆ. ಇದಕ್ಕೆ ಅನುಭವದ ಬಿಸಿ ಬೇರೆ. ಇದನ್ನು ಲೇಖನಿ ಎಂಬ ಕಡಗೋಲಿನಿಂದ ಕಡೆದಿದ್ದಾರೆ. ಈ ಅಭಿವ್ಯಕ್ತಿಯ ಫಲಶ್ರುತಿಯೇ ವರ್ತಮಾನ, ವಚನ ಚೈತ್ರ, ವಚನ ತರಂಗ, ಸಂಪ್ರದಾಯದ ಸುಳಿಯಲ್ಲಿ ಮುಂತಾದ ಅಮೂಲ್ಯ ಸಾಹಿತ್ಯ ಕೃತಿಗಳು. ಇಂಥ ಪ್ರತಿಭಾವಂತ ಪ್ರಶಾಂತ ಸ್ವಭಾವದ ಸ್ವಾಮಿಗಳ ಸಾಮೀಪ್ಯ ಹೊಂದಿರುವದೇ ಒಂದು ಅಪರೂಪದ ಭಾಗ್ಯ. ವರ್ಷ ನೆನಪಿಲ್ಲ, ಅದೊಂದು ದಿನ ನಾನು ಅಥಣಿಯ ಬಿ. ಎಲ್. ಪಾಟೀಲರ ಮನೆಗೆ ಹೋಗಿದ್ದೆ. ಆಗ ಪಾಟೀಲರು ಪ್ರಮೋದ ಕುಲಕರ್ಣಿಯವರ ಜೊತೆಗೆ ಮಾತಾಡುತ್ತ ಕುಳಿತಿದ್ದರು. ನನ್ನನ್ನು ಅವರಿಗೆ ಪರಿಚಯಿಸಿದ ಪಾಟೀಲರು , ಪ್ರಮೋದರು ಅಥಣಿಯವರೇ. ಈಗ ಪ್ರಧಾನಮಂತ್ರಿಗಳ ಪತ್ರಿಕಾ ಕಾರ್ಯದರ್ಶಿಗಳು ಎಂದು ಹೇಳಿದಾಗ ನನಗೊಂದು ತೆರನಾದ ರೋಮಾಂಚನ ಅಭಿಮಾನ. ಅದೇ ವೇಳೆಗೆ ಶ್ರೀ ಚನ್ನಬಸವದೇವರ ಆಗಮನವಾಯಿತು. ನಾನು ಮತ್ತು ಪಾಟೀಲರು ಎದ್ದು ಹೋಗಿ ಕಾಲು ಮುಟ್ಟಿ ನಮಸ್ಕರಿಸಿದೆವು. ಆ ಮೇಲೆ ಸ್ವಾಮೀಜಿಯವರನ್ನು ಪ್ರಮೋದರಿಗೆ ಪರಿಚಯಿಸಲಾಯಿತು. ಅವರು ತಕ್ಷಣವೇ ಕಿರಿಯ ವಯಸ್ಸಿನ ಪೂಜ್ಯರ ಪಾದಸ್ಪರ್ಶಿಸಿ ನಮಸ್ಕರಿಸಿದರು.

ಮುಂದೆ ನಾನು, ಪಾಟೀಲರು ಹಾಗೂ ಪೂಜ್ಯರು ಮಲಾಬಾದಿನ ವಿಮೋಚನಾ ಶಾಲೆಗೆ ಹೊರಟೆವು. ಅದು-ಇದು ಮಾತನಾಡುತ್ತ ವಿಷಯ ಡಾ. ಹಿರೆಮಲ್ಲೂರ ಈಶ್ವರನ್ ಅವರತ್ತ ಹೊರಳಿತು. ಪಾಟೀಲರು ಈಶ್ವರನ್‌ರಿಗೆ ಕ್ಯಾನ್ಸರ ಆದದ್ದು ಅಮೇರಿಕೆಯ ವೈದ್ಯರು ಅವರ ಮರಣ ದಿನಾಂಕವನ್ನು ಖಾತ್ರಿಯಾಗಿ ಹೇಳಿದ್ದು ಪಾಟೀಲರು ಈಶ್ವರನ್‌ರನ್ನು ಧಾರವಾಡದ ಒಬ್ಬ ಆಯುರ್ವೇದ ವೈದ್ಯನಿಗೆ ತೊರಿಸಿದ್ದು ಆ ಔಷಧಿಯಿಂದ ಈಶ್ವರನ್‌ರನ್ನು ಮತ್ತೆ ನಾಲ್ಕೈದು ವರ್ಷಗಳ ಕಾಲ ಬದುಕಿಸಿದ್ದು, ಅನಂತರ ಅವರು ' ವೀರಶೈವ ಮಠಗಳು ' ಎಂಬ ಪಾಂಡಿತ್ಯಪೂರ್ಣ ಗ್ರಂಥ ಬರೆದು ಪ್ರಕಟಿಸಿದ್ದು ಎಲ್ಲವನ್ನು ವಿವರವಾಗಿ ಹೇಳಿದರು. ಸುಭದ್ರೆಯ ಗರ್ಭದ ಅಭಿಮನ್ಯುವಿನಂತೆ ನಾನು ಕುಳಿತಿದ್ದೆ. ಪಾಟೀಲರು ಮತ್ತು ಪೂಜ್ಯರ ನಡುವಿನ ಸಂಭಾಷಣೆಯನ್ನು ಆ ಮೇಲೆ ನಾನು ಡಾ. ಹಿರೆಮಲ್ಲೂರ ಈಶ್ವರನ್‌ರ ಸುತ್ತಮುತ್ತ ಎಂಬ ಲೇಖನ ಬರೆದು ಕರ್ಮವೀರ ಪತ್ರಿಕೆಯಲ್ಲಿ ಪ್ರಕಟಿಸಿದೆ.

ಪೂಜ್ಯರು ಮೋಟಗಿಮಠದಂತಹ ಒಂದು ಪರಂಪರಾಗತವಾದ ಪ್ರತಿಷ್ಠಿತ ಮಠದ ಮಠಾಧೀಶರು. ಆದರೆ ಸಮಾಜದ ಅಂಧಶ್ರದ್ಧೆಗಳನ್ನು ಸಂಪ್ರದಾಯದ ಓರೆ-ಕೋರೆಗಳನ್ನು ಖಂಡಿಸಿದ ಅವರ ಧೈರ್ಯ ತಲೆದೂಗುವಂತಹದು. ಅವರು ರಚಿಸಿರುವ ವರ್ತಮಾನ, ವಚನ ಚೈತ್ರ, ವಚನ ತರಂಗ, ವಚನ ಸಂಕಲನಗಳ ಕುರಿತು ಲೇಖನಗಳನ್ನು ಬರೆಯುವ ಪ್ರೇರಣೆ ನನಗೊದಗಿ ಬಂದಿತು. ಬಸವಣ್ಣನವರ ಕಾಲದ ವಿಚಾರಧಾರೆ ಸದ್ಯದ ವಾತಾರಣವನ್ನು ಬಳಸಿಕೊಂಡು ಚನ್ನಬಸವದೇವರು ಅವರ ಲೇಖನಿಯಿಂದ ಹರಿದು ಬರುತ್ತಿದೆ. ಸತ್ಯದ ಕಹಿಯನ್ನು ಜೇನಿನಂತಹ ಸಿಹಿ ಶಬ್ದಗಳ ಮೂಲಕ ನೀಡಿ, ಪೂಜ್ಯರು ಸಮಾಜದ ಸ್ವಾಸ್ಥ್ಯ ಸುಧಾರಿಸುವ ಕಾಯಕ ಮಾಡುತ್ತಿದ್ದಾರೆ.

೨೦೦೧ ಜುಲೈ ೬ ಬನಹಟ್ಟಿ ನಗರಕ್ಕೊಂದು ಸಡಗರದ ದಿನ. ಅಂದು ಕನ್ನಡದ ಹೆಮ್ಮೆಯ ಸುಪುತ್ರಿ ವಿಜಯಲಕ್ಷ್ಮಿ ಶಂಕರ ಬಿದರಿಯವರಿಗೆ ತವರಿನ ಆತ್ಮೀಯ ಸತ್ಕಾರ ಸಮಾರಂಭ. ನಿಡಸೋಸಿ ಮಠದ ಪರಮಪೂಜ್ಯ ಪಂಚಮ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ಸಾನಿಧ್ಯದಲ್ಲಿ ನಡೆದ ಸಮಾರಂಭಕ್ಕೆ ಪೂಜ್ಯ ಚನ್ನಬಸವದೇವರು ಆಗಮಿಸಿದ್ದರು. ಅಂದು ಪೂಜ್ಯರು ಮಾಡಿದ ಭಾಷಣ ಜನಮನದಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡಿತು. ಅವರ ಅಸ್ಖಲಿತವಾಣಿ ಸೋನೆ ಮಳೆ ಸುರಿದಂತೆ, ಅವರ ವಿಚಾರಧಾರೆ ತುಂಬಿ ಹರಿಯುವ ಕೃಷ್ಣೆಯ ಪ್ರವಾಹದಂತೆ, ಅದರಲ್ಲಿ ಮಿಂದು ಜನ ಧನ್ಯರಾಗಿ ಹೋದರು. ಪೂಜ್ಯರು ಬನಹಟ್ಟಿಗೆ ಮತ್ತೆ ಮತ್ತೆ ಆಗಮಿಸಿದರು. ಅವರ ನುಡಿಗಳನ್ನು ಇನ್ನೂ ಕೇಳಬೇಕು ಎಂಬ ನನ್ನೂರಿನ ಜನರ ದಾಹ ಇನ್ನೂ ತುಂಬಿಲ್ಲ.

ಈ ಸಂದರ್ಭದಲ್ಲಿ ಪೂಜ್ಯರು ನನ್ನ ಮನೆಗೆ ಪಾದವಿಡುವ ಕೃಪೆ ತೋರಿದರು. ನನ್ನ ಬರಹಗಾರ ಮಗ ವಿಶ್ವಜನಿಗೆ ಆಶೀರ್ವಾದ ನೀಡಿದರು. ಪೂಜ್ಯರ ಸಾಮೀಪ್ಯವನ್ನು ಇಷ್ಟೊಂದು ಸಮೀಪ, ನಿಕಟದಿಂದ ಹೊಂದಿದ ನಾನೇ ಧನ್ಯ. ಈ ಅನುಭವಗಳನ್ನೆಲ್ಲಾ ಕ್ರೋಢೀಕರಿಸಿ ನುಡಿ ನಮನಗಳನ್ನಾಗಿಸಿ ಪೂಜ್ಯರ ಪಾದಕ್ಕರ್ಪಿಸಿದ್ದೇನೆ.

■■

ಪಾದಯಾತ್ರೆ : ಚನ್ನಬಸವದೇವರು

• ಶಿವಪುತ್ರ ಯಾದವಾಡ

ಕಟ್ಟೋಣ ನಾವೆಲ್ಲ ಕಲ್ಯಾಣ ರಾಜ್ಯ
ದ್ವೇಷ ದೋಷಗಳ ಮಾಡೋಣ ತ್ಯಾಜ್ಯ

ಸ್ವಾಮಿಗಳಾದವರು ಕಾವಿ ಬಟ್ಟೆ ಧರಿಸಿ. ಮಠದಲ್ಲಿ ಕುಳಿತು ಧರ್ಮ ಪ್ರಸಾರ ಮಾಡುವ ಕಾಲವೊಂದಿತ್ತು. ಆದರೆ ಈಗ ಯುವಯತಿಗಳು ಮಠದಲ್ಲಿ ಕುಳಿತುಕೊಳ್ಳದೆ, ಸದಾ ಜನಪರ ಚಟುವಟಿಕೆಯಲ್ಲಿ ತೊಡಗಿ ಕ್ರಿಯಾಶೀಲರಾಗಿ, ಸೃಜನಶೀಲರಾಗಿ ಧರ್ಮಪ್ರಸಾರದೊಂದಿಗೆ ಸಾಮಾಜಿಕ, ಶೈಕ್ಷಣಿಕ. ಸಾಂಸ್ಕೃತಿಕ ಚಿಂತನೆಯಲ್ಲಿಯೂ ತೊಡಗಿಕೊಳ್ಳುತ್ತಿರುವುದು ಪ್ರಗತಿಶೀಲ ಬೆಳವಣಿಗೆಯಾಗಿದೆ. ಈ ದಿಶೆಯಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟವರಲ್ಲಿ ಅಥಣಿ ಮೋಟಗಿಮಠದ ಪೂಜ್ಯ ಶ್ರೀ ಚನ್ನಬಸವದೇವರೂ ಒಬ್ಬರು.

ಯುವ ಮಠಾಧೀಶರಾದ ಶ್ರೀ ಚನ್ನಬಸವದೇವರು ಪ್ರತಿವರುಷ ಬಸವ ಜಯಂತಿಯ ಶುಭ ನೆನಹಿನಲ್ಲಿ ಪಾದಯಾತ್ರೆ ಹಮ್ಮಿಕೊಳ್ಳುತ್ತಿದ್ದಾರೆ. 'ಪಾದಯಾತ್ರೆ' ಎಂದರೆ ಭಜನೆ ಮಾಡುತ್ತಾ, ಜಯಘೋಷ ಹಾಕುತ್ತಾ, ಹರಟೆ ಹೊಡೆಯುತ್ತಾ ಹೋಗುವುದಲ್ಲ. ಯಾವುದೇ ಧ್ಯೇಯ, ಉದ್ದೇಶ, ಗುರಿ ಇಲ್ಲದೆ ದೇವಸ್ಥಾನಕ್ಕೆ, ಪಾದಯಾತ್ರೆಗೆ, ದಿಂಡಿಗೆ ಹೋಗುವದು ವ್ಯರ್ಥವೇ ಸರಿ. ಶ್ರೀ ಚನ್ನಬಸವದೇವರ ಪಾದಯಾತ್ರೆ ವಿಶಿಷ್ಟವಾದುದು. ಇದು ಜನಜಾಗೃತಿ ಪಾದಯಾತ್ರೆ. ಜನರಲ್ಲಿ ಆತ್ಮಬಲ ತುಂಬುವದರೊಂದಿಗೆ, ಸಾಮಾಜಿಕ ಸಾಮರಸ್ಯ ಮೂಡಿಸುವುದು ಈ ಪಾದಯಾತ್ರೆಯ ಮೂಲೋದ್ದೇಶ.

ಪಾದಯಾತ್ರೆಯ ನೇತಾರ ಶ್ರೀ ಚನ್ನಬಸವದೇವರೊಂದಿಗೆ ಕಳೆದ ಮೂರು ವರುಷಗಳಿಂದ ಪಾಲ್ಗೊಳ್ಳುತ್ತ ಬಂದಿರುವ ನನಗೆ, ಎರಡು ದಶಕಗಳ ಹಿಂದೆ ಅಂದರೆ ೧೯೮೭ರಲ್ಲಿ ಮಹಾಂತ ಜೋಳಿಗೆಯ ಶಿಲ್ಪಿ ಇಳಕಲ್ಲದ ಪೂಜ್ಯ ಶ್ರೀ ಮಹಾಂತಪ್ಪಗಳವರೊಂದಿಗೆ ಒಂದು ತಿಂಗಳವರೆಗೆ ಪಾದಯಾತ್ರೆಯಲ್ಲಿ ಸಂಘಟಕನಾಗಿ ಪಾಲ್ಗೊಂಡಿದ್ದು ಸ್ಮರಣೆಗೆ ಬರುತ್ತದೆ. ಅವರ ಉದ್ದೇಶ ದುಶ್ಚಟಗಳ

ನಿರ್ಮೂಲನೆಯಾಗಿದ್ದರೆ, ಇವರ ಉದ್ದೇಶ ಜಾತಿ, ವರ್ಣ, ವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ. ಆರೋಗ್ಯ, ಧರ್ಮನಿಷ್ಠೆ, ಸಹಜೀವನ, ಸಹಭೋಜನ, ಸಹಚಿಂತನೆ, ಸಾಹಿತ್ಯ, ಸಮಾಲೋಚನೆ ಹಾಗೂ ಕನ್ನಡ ಜಾಗೃತಿಯೊಂದಿಗೆ ಸಾಮಾಜಿಕ ಸಾಮರಸ್ಯ ಸಾಧಿಸುವುದೇ ಈ ಪಾದಯಾತ್ರೆಯ ಗುರಿ.

ಪ್ರಪ್ರಥಮವಾಗಿ ೨೦೦೦ ನೇ ಸಾಲಿನಲ್ಲಿ ಎಪ್ರೀಲ್ ೨೬, ೨೭ರಂದು ಎರಡು ದಿನಗಳ ಕಾಲ ಅಥಣಿಯ ಶಿವಯೋಗಿಗಳವರ ಜನ್ಮಸ್ಥಳವಾದ ' ನದಿಇಂಗಳಗಾಂವ ' ಗ್ರಾಮಕ್ಕೆ ಪಾದಯಾತ್ರೆ ಹಮ್ಮಿಕೊಂಡಿದ್ದರು. ತಾಲೂಕಿನ ಸಂಕೋನಟ್ಟಿ, ಕರ್ಲಟ್ಟಿ, ಹಲ್ಯಾಳ, ದರೂರ ಮೂಲಕ ನದಿಇಂಗಳಗಾಂವಿಗೆ ತೆರಳಿ ವಾಸ್ತವ್ಯ ಮಾಡಿ, ಮರುದಿನ ರಾಯಬಾಗ ತಾಲೂಕಿನ ಯಲ್ಪಾರಟ್ಟಿಯಲ್ಲಿ ಪಾದಯಾತ್ರೆ ಮುಕ್ತಾಯಗೊಳಿಸಿದರು. ಈ ಸಮಯದಲ್ಲಿ ಪ್ರತಿ ಗ್ರಾಮಗಳಲ್ಲಿ ಶರಣರ ಸಂಗದಲ್ಲಿ ಪ್ರವಚನ ಮಾಡಿ, ಆತ್ಮಜಾಗೃತಿಯ ಉತ್ಥಾನ ಮಾಡುವುದಕ್ಕಾಗಿ ಇದೊಂದು ಸತ್ಯಯಾತ್ರೆ ಎಂಬುದನ್ನು ಮನದಟ್ಟು ಮಾಡಿಕೊಟ್ಟರು.

ಮರುವರುಷ ೨೦೦೨ರ ಎಪ್ರೀಲ್ ೨೧, ೨೨ ಈ ಎರಡು ದಿನ ' ಯಡೂರು ವೀರಭದ್ರೇಶ್ವರ ದೇವಸ್ಥಾನಕ್ಕೆ' ಪಾದಯಾತ್ರೆ ಕೈಕೊಂಡರು. ತಾಲೂಕಿನ ಶಿನಾಳ, ತಂಗಡಿ, ಕಾತ್ರಾಳ, ಐನಾಪುರ ಮೂಲಕ ಉಗಾರಖುರ್ದಕ್ಕೆ ಆಗಮಿಸಿ ವಾಸ್ತವ್ಯ ಮಾಡಿ ಮೊಳವಾಡ, ಇಂಗಳಿ, ಮಾಂಜರಿ ಮೂಲಕ ಯಡೂರಕ್ಕೆ ತಲುಪಿ ಮುಕ್ತಾಯಗೊಳಿಸಿದರು. ಈ ಸಮಯದಲ್ಲಿ ದುಶ್ಚಟಗಳಿಂದ, ಪಾಶ್ಚಿಮಾತ್ಯ ಸಂಸ್ಕೃತಿಯಿಂದ ದೂರವಿರುವಂತೆ ಕರೆ ನೀಡುವದರೊಂದಿಗೆ ಶರಣ ಸಂಸ್ಕೃತಿಯ ಅರಿವನ್ನು ಮೂಡಿಸಿದರು. ಅಲ್ಲದೆ ಯಕ್ಸಂಬಾದ ಶ್ರೀ ಎಸ್. ಆರ್. ಡೋಂಗರೆ ಅವರಿಂದ ಪ್ರತಿ ಗ್ರಾಮಗಳಲ್ಲಿ ಮೂಢನಂಬಿಕೆಯ ನಿರ್ಮೂಲನೆ ಮಾಡುವ ದಿಶೆಯಲ್ಲಿ ಪವಾಡ ಬಯಲು ಮಾಡುವದರ ಮೂಲಕ ಚಿಂತನೆಗೈದುದು ವಿಶೇಷ.

೨೦೦೨ರ ಮಾರ್ಚ ೨೩ ಹಾಗೂ ೨೪ರ ಪಾದಯಾತ್ರೆಯು ತುಂಬಾ ವಿಶೇಷವಾದದ್ದು. ಸರಕಾರದಿಂದ ನಿರ್ಲಕ್ಷ್ಯಕ್ಕೆ ಒಳಗಾದ ಅಥಣಿ ತಾಲೂಕಿನ ಗಡಿಭಾಗದ ಹಳ್ಳಿಗಳಲ್ಲಿ, ನಾಡಿನ ಹಲವಾರು ಧರ್ಮಗುರುಗಳು, ಸಾಹಿತಿಗಳು ಹಾಗೂ ಶರಣಗಣ್ಯರೊಂದಿಗೆ ಪಾದಯಾತ್ರೆ ಕೈಗೊಂಡು ಕನ್ನಡದ ಮಹತ್ವ ಅರುಹಿ ಕನ್ನಡ ಜಾಗೃತಿಗೈದರು. ಕರ್ನಾಟಕ ಸರಕಾರದ ಮೂಲಭೂತ ಸೌಲಭ್ಯಗಳಿಂದ ವಂಚಿತಗೊಂಡು, ಮಹಾರಾಷ್ಟ್ರಕ್ಕೆ ತಮ್ಮ ಗ್ರಾಮಗಳನ್ನು ಸೇರಿಸಿರಿ, ಇಲ್ಲದಿದ್ದರೆ ತಾವೇ ವಲಸೆ ಹೋಗುವ ನಿರ್ಧಾರ ಮಾಡಿದ ಗ್ರಾಮಸ್ಥರ ನಿಜಸ್ಥಿತಿಯನ್ನು ಈ ಪಾದಯಾತ್ರೆಯಲ್ಲಿ ಪೂಜ್ಯರು ಅರಿತು, ಬೆಂಬಲ ಸೂಚಿಸಿ ಸರಕಾರವನ್ನು ಜಾಗೃತಗೊಳಿಸುವ ಕಾರ್ಯಮಾಡಿದ್ದು ಶ್ಲಾಘನೀಯ. ಗಡಿಹಳ್ಳಿಗಳಾದ ದೇವರಡ್ಡೆರಟ್ಟಿ, ಕುಂಬಾರಗುತ್ತಿ, ಮದಭಾಂವಿ, ಜಂಬಗಿ, ಸಂಬರಗಿ, ಶಿರೂರ ಮೊದಲಾದ ಗ್ರಾಮಗಳಲ್ಲಿ ಸಂಚರಿಸಿ ಕನ್ನಡದ ಕಹಳೆಯೂದಿದರು.

ಪಾದಯಾತ್ರೆ ಮಾಡುವದನ್ನು ಕೇಳಿದ್ದೇವೆ. ಕಂಡಿದ್ದೇವೆ. ಆದರೆ ಇಷ್ಟೊಂದು ಆಧುನಿಕ ಸೌಲಭ್ಯಗಳ ಯುಗದಲ್ಲಿಯೂ ಊರಿಂದೂರಿಗೆ ಸಂಚರಿಸಿ ಪಾದಯಾತ್ರೆಗೆ ಹೋಗುವವರು ವಿರಳ. ಪಾದಯಾತ್ರೆ ಒಂದು ಜನಸ್ಪಂದನ ಕಾರ್ಯಕ್ರಮ.

ಮಠಗಳಿಗೆ ಭಕ್ತರು ಬರುವುದು ಸಾಮಾನ್ಯ. ಆದರೆ ಮಠಾಧೀಶರೇ ಭಕ್ತರೆಡೆಗೆ ಹೋಗುವುದು ವಿಶೇಷ. ಸಂಚಾರ ಜಂಗಮದ ಬಹುಮುಖ್ಯ ಲಕ್ಷಣ. ಅಥಣೀಶ ಕಾವ್ಯನಾಮದ ಶ್ರೀ ಚನ್ನಬಸವದೇವರು ಜನಸಾಮಾನ್ಯರತ್ತ ಧರ್ಮದ ತಿರುಳು ಕೊಂಡೊಯ್ದು ಅವರ ಪ್ರೀತಿಗೆ ಪಾತ್ರರಾದರು. ನನ್ನ ಪಾಲಿಗೆ ಇದೊಂದು ಮರೆಯಲಾಗದ ದಿವ್ಯಾನುಭವ. ಜನ ಸ್ವಾಗತಿಸುವ ರೀತಿ, ಅವರ ಪ್ರೀತಿ. ವಿಶ್ವಾಸ ಅವಿಸ್ಮರಣೀಯ. ವ್ಯಸನಾಧೀಶರನ್ನು ಚಟಗಳಿಂದ ಮುಕ್ತಗೊಳಿಸಿ ಹೊಸ ಬದುಕು ನೀಡಿ ಹರಸುವ ಚನ್ನಬಸವದೇವರನ್ನು ಕಂಡರೆ ಭಕ್ತರಿಗೆ ಎಲ್ಲಿಲ್ಲದ ಪ್ರೀತಿ.

ಮಠಾಧೀಶರು ಯಾವುದೇ ಒಂದು ತಾತ್ವಿಕ ಬದ್ಧತೆ ಇಲ್ಲದೆ ಕಚ್ಚಾಡುವುದರಲ್ಲಿ ಕಾಲಕಳೆಯುತ್ತಿರುವ ಇಂದಿನ ಸಮಯದಲ್ಲಿ ಧರ್ಮ ಪ್ರಸಾರ. ತತ್ವ ಪ್ರಸಾರಕ್ಕೆಲ್ಲಿಯ ಸಮಯ. ಆದರೆ ಜನಜಾಗೃತಿಯ ನವಶಿಲ್ಪಿಗಳಾದ ಅಥಣಿಯ ಮೋಟಗಿಮಠದ ಶ್ರೀ ಚನ್ನಬಸವದೇವರು ಪಾದಯಾತ್ರೆ ಕೈಕೊಂಡಲ್ಲೆಲ್ಲ ಧಾರ್ಮಿಕ ಜಾಗೃತಿ. ನೈತಿಕ ಎಚ್ಚರ, ಸಮಾಜ ಸ್ವಾಸ್ಥ್ಯ, ಸಾಂಸ್ಕೃತಿಕ ಅಭಿವೃದ್ಧಿ, ಸಮಾನತೆ ಬಿಂಬಿಸುವದರ ಮೂಲಕ ಸ್ವಾಮಿತ್ವದ ಘನತೆ ಎತ್ತಿ ಹಿಡಿದಿದ್ದಾರೆ. ಅಂತೆಯೇ ಅವರ ಪಾದಯಾತ್ರೆಗೆ ಒಂದು ವೈಶಿಷ್ಟ್ಯವಿದೆ.

■■

ನಡೆದುಬಂದ ದಾರಿ ಮುಟ್ಟಬೇಕಿರುವ ಗುರಿ

● ಬಿ. ಎಲ್. ಪಾಟೀಲ

ಇಂದು ಲಿಂಗಾಯತ ಸಮಾಜದ ಸ್ವಾಮಿಗಳಲ್ಲಿ ಅಗ್ರಗಣ್ಯರಾದ ಹಾನಗಲ್ ಶ್ರೀಗಳು ಈ ಭಾಗದ ಅಪರೂಪದ ಜಂಗಮ ಮೂರ್ತಿಗಳಾದ ಬೆಳಗಾವಿಯ ಶ್ರೀ ಶಿವಬಸವಸ್ವಾಮಿಗಳಿಗೆ ನೀಡಿದ ಉಪದೇಶ : " ಜನ ಸೇವೆಯಲ್ಲಿ ಶಿವಪೂಜಾ ಭಾವನೆ ಇರಬೇಕು, ಪ್ರಸಾದದಲ್ಲಿ ಪಾವಿತ್ರ್ಯವಿರಬೇಕು. ಇದೇ ನಿನ್ನ ಧ್ಯೇಯ. ಸದ್‌ವಿನಯ, ಸೌಜನ್ಯ, ಕೈಂಕರ್ಯಗಳಿಂದ ಲೋಕಕಲ್ಯಾಣವನ್ನೆಸಗು. ನೀನು ಮುಟ್ಟಿದ್ದೆಲ್ಲಾ ಚಿನ್ನವಾಗುತ್ತದೆ. ಮೆಟ್ಟಿದ ನೆಲ ಪಾವನವಾಗುತ್ತದೆ " ಅದನ್ನು ಪೂಜ್ಯರು ತಮ್ಮ ಜೀವನದುದ್ದಕ್ಕೂ ಪಾಲಿಸಿ ಪರಮಪಾವನ ಮೂರ್ತಿಗಳಾಗಿದ್ದುದು ನಾಡಿನ ಜನಮಾನಸದಲ್ಲಿ ಅಚ್ಚಳಿಯದೆ ನಿಂತಿದೆ. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಹುಟ್ಟಿದ ವ್ಯಕ್ತಿಯೋರ್ವನನ್ನು ಗುರುತಿಸಿ ತಂದು, ಗುರು ಅವರಿಗೆ ಯೋಗ್ಯ ಸಂಸ್ಕಾರವನ್ನು ನೀಡಿ, ಶಿವಯೋಗ ಮಂದಿರದ ನಿಸರ್ಗದತ್ತವಾದ ದೈವೀ ಪರಿಸರದಲ್ಲಿ ಜೀವನದುದ್ದಕ್ಕೂ ಉಸಿರಾಗಿ ನಿಲ್ಲಬಲ್ಲ ತಾತ್ವಿಕ ಸಿದ್ಧಾಂತಗಳನ್ನು ಮೈಗೂಡಿಸಿ, ಶ್ರೀ ಸಾಮಾನ್ಯನನ್ನು ಶರಣನನ್ನಾಗಿ ಮಾಡುವ ಪರಂಪರೆ ಲಿಂಗಾಯತ ಸಮಾಜದ ಇತಿಹಾಸದಲ್ಲಿ ಒಂದು ಅಪರೂಪದ ಧಾರ್ಮಿಕ ಪ್ರಕ್ರಿಯೆ. ತನ್ನ ಇಡೀ ಜೀವನವನ್ನು ಸಮಾಜಕ್ಕಾಗಿ ಮಾನವ ಧರ್ಮಕ್ಕಾಗಿ ಸವೆಸಲಿರುವ ವ್ಯಕ್ತಿಯನ್ನು ಶಕ್ತಿಯನ್ನಾಗಿ ಮಾರ್ಪಡಿಸುವ ಈ ಅಪರೂಪದ ಕ್ರಿಯೆ, ಮನುಷ್ಯನನ್ನು ಮಹಾ ಮಾನವನನ್ನಾಗಿ ಲೋಕದ ಗುರುವನ್ನಾಗಿ ಬದಲಿಸುವ ಶಕ್ತಿ ಹೊಂದಿದೆ. ಲಿಂಗಾಯತ ಸಮಾಜದ ಇತಿಹಾಸವನ್ನು ಅವಲೋಕಿಸಿದಾಗ ಅಂಥ ಅಪ್ರತಿಮ ಶರಣರು, ಸಂತರು, ಸ್ವಾಮಿಗಳು, ಮಠಾಧೀಶರು ಈ ನಾಡಿಗೆ ದಾರಿ ತೋರಿದ ಉದಾಹರಣೆಗಳನ್ನು ಗಮನಿಸಬಹುದು. ತಾನು ತಿರಿದುಂಡರೂ ಸಮಾಜದ ಬಡ ಮಕ್ಕಳಿಗೆ ಅನ್ನ ಆಶ್ರಯ ನೀಡಿ, ಶಿಕ್ಷಣದ ಅನುಕೂಲತೆಗಳನ್ನು ಕಲ್ಪಿಸಿದ ಪೂಜ್ಯರನೇಕರಿಂದು ನಾಡಿನ ಭಾಗ್ಯದ ಬಾಗಿಲನ್ನು ತೆಗೆದ ಅಪರೂಪದ ದೃಷ್ಟಾಂತಗಳನ್ನು ಕಾಣಬಹುದು. ಉತ್ತರ ಕರ್ನಾಟಕದಲ್ಲಿ ನಾಗನೂರ ಶ್ರೀ ಶಿವಬಸವ ಸ್ವಾಮಿಗಳು, ಧಾರವಾಡದ ಪೂಜ್ಯ ಶ್ರೀ ಮೃತ್ಯಂಜಯ ಸ್ವಾಮಿಗಳು, ಅತ್ತ ಮೈಸೂರಿನಲ್ಲಿ ಸುತ್ತೂರು ಶ್ರೀಗಳು ಸಿರಿಗೆರೆಯಲ್ಲಿ ತರಳಬಾಳು ಜಗದ್ಗುರುಗಳು

ಹೀಗೆ ಹತ್ತು ಹಲವು ಘಟಗಳು ಸಮಾಜದ ಅಂಗವಾದ ವ್ಯಕ್ತಿಯನ್ನೇ. ' ದೇಹವೇ ದೇವಾಲಯ ' ಎನ್ನುವ ತೆರದಿ ಎತ್ತಿ ಬೆಳೆಸಿದರು. ಈ ನಾಡನ್ನು ಸಮಾಜವನ್ನು ಸುಂದರವಾಗಿ ಬಂಧುರವಾಗಿ ಕಟ್ಟಲು ಅವರು ಕೈಕೊಂಡ ತ್ಯಾಗ-ಪರಿಶ್ರಮಗಳು ಕಾಲನ ಮರಳಲ್ಲಿ ಅವರ ಹೆಜ್ಜೆಗಳನ್ನು ಇನ್ನುಳಿಯದಂತೆ ಮೂಡಿಸಿವೆ. ಜತೆಗೆ ಇತ್ತೀಚಿಗೆ ಪ್ರಥಮ ಬಾರಿಗೆ ಇಳಕಲ್ ಶ್ರೀಗಳು, ನಂತರದಲ್ಲಿ ಗದಗ-ಚಿತ್ರದುರ್ಗದ ಶ್ರೀಗಳು ಅಂಧಶ್ರದ್ಧೆ ಮತ್ತು ಧಾರ್ಮಿಕ ವೈರುಧ್ಯಗಳ ವಿರುದ್ಧ ಕೈಕೊಂಡ ಕ್ರಾಂತಿ ಶರಣ ಧರ್ಮದ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲು.

17739

೧೨ನೇ ಶತಮಾನದಲ್ಲಿ ಅಂದಿನ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು, ನಿತ್ಯ ಜೀವನದಲ್ಲಿ ಸತ್ಯವನ್ನು ಪ್ರತಿಷ್ಠಾಪಿಸಿ, ನೈಜ ಸಾಮಾಜಿಕ ಸಮತೋಲನ ತರಬಲ್ಲ, ಸರ್ವರಿಗೂ ಸಮಬಾಳು ಕಲ್ಪಿಸಬಲ್ಲ ಮತ್ತು ಅಂಧಶ್ರದ್ಧೆ ಅನಾಚಾರಗಳಿಂದ ತುಂಬಿದ ಪರಂಪರಾಗತ ಧಾರ್ಮಿಕ ನಂಬಿಕೆಗಳನ್ನು ಮೆಟ್ಟಿಹಾಕಬಲ್ಲ ವಿನೂತನ ಮಾನವ ಧರ್ಮವನ್ನು ಕಟ್ಟಿದ ಅಪರೂಪದ ವಿಚಾರವಾದಿ, ಸಮಾಜವಾದಿ ಬಸವಣ್ಣ ಅಂದಿಗೂ-ಇಂದಿಗೂ-ಎಂದೆಂದಿಗೂ ಪ್ರಸ್ತುತವಾಗಿರಬಲ್ಲ. ಯಾಕೆಂದರೆ ಅವನು ಕಟ್ಟಬಯಸಿದ ಸಮಾಜ ವ್ಯವಹಾರಿಕ ವಿಚಾರಗಳಿಂದ (Practical thinking) ಕೂಡಿದ್ದಾಗಿತ್ತು. ಧರ್ಮ ಜಾಗೃತಿ ನಿರಂತರ ಪ್ರಕ್ರಿಯೆಯಾಗಿ ಉಳಿಯಬೇಕೆಂದು ಮಠಗಳ ಸೃಷ್ಟಿಯಾಯಿತು. ಕಾಲಮಾನಕ್ಕೆ ತಕ್ಕಂತೆ, ಸಮಾಜದ ಅವಶ್ಯಕತೆಗಳಿಗೆ ಸ್ಪಂದಿಸಿ ಸಮಾಜಕ್ಕೆ ದಿಕ್ಕು-ದಿಶೆ ತೋರಿದ ಕೀರ್ತಿ ನಮ್ಮ ಮಠ ಮಾನ್ಯಗಳಿಗಿದೆ. ಧಾರ್ಮಿಕ ಅಂಧಶ್ರದ್ಧೆಗಳನ್ನು ಬಂಡವಾಳವಾಗಿಟ್ಟುಕೊಂಡು ಜಾಗತಿಕ ಮಟ್ಟದಲ್ಲಿ ಮೆರೆದ ಅನೇಕ ಜನ ರಾಜಕೀಯ ಸ್ವಾಮಿಗಳನ್ನು ಕಂಡು ಮನಸ್ಸು ಮುದುಡಿ ಹೋದ ಇಂದಿನ ದಿನಮಾನದಲ್ಲಿ, ಮಠದ ಸಮಸ್ತವನ್ನೂ ಸಮಾಜ ಪುರುಷನಿಗೆ ಧಾರೆಯೆರೆದು, ಶಿಕ್ಷಣ ಪ್ರಸಾದ ನೀಡಿ ಸೇವೆ ಗೈಯುತ್ತಿರುವ ಮಠ-ಘಟಗಳನ್ನು ಕಂಡಾಗ ಇದುವೇ ಅಪ್ಪ ಬಸವಣ್ಣ ಮಠಗಳಿಂದ ಅಪೇಕ್ಷಿಸಿದ್ದುದು ಎನ್ನುವ ಭಾವ ಬರದೆ ಇರಲಾರದು.

ಈ ಹಿನ್ನೆಲೆಯಲ್ಲಿ ಬೆಳೆದು ಬಂದ ಮಠಗಳಲ್ಲಿ ತನ್ನದೇ ಆದ ವೈಶಿಷ್ಟವನ್ನು ಕಾಯ್ದುಕೊಂಡು ನಾಡಿನ ಲಕ್ಷವನ್ನೇ ತನ್ನತ್ತ ಸೆಳೆದ ಹಿರಿಮೆ ಅಥಣಿಯ ಶ್ರೀಮಠಗಳಿಗಿರುವದು ಭಕ್ತರ ಭಾಗ್ಯ. ೧೬ನೇ ಶತಮಾನದಲ್ಲಿ ಆಗಿ ಹೋದ ಎಡೆಯೂರ ಶ್ರೀ ಸಿದ್ಧಲಿಂಗ ಶಿವಯೋಗಿಗಳು ನೂರೊಂದು ವಿರಕ್ತರ ದಂಡನ್ನೇ ಕಟ್ಟಿಕೊಂಡು ನಾಡಿನುದ್ದಕ್ಕೂ ಸಂಚರಿಸಿ ಸಮಾಜ ಪುರುಷನನ್ನು ಎಚ್ಚರಿಸಿ, ಧರ್ಮ ಜಾಗೃತಿ ಮಾಡಿದರೆ. ಅವರ ನಂತರ ಇನ್ನೋರ್ವ ಶಿವಯೋಗಿಯನ್ನು ಕಾಣಲು ಮೂರು ಶತಮಾನಗಳ ಕಾಲ ನಾಡು ಕಾಯಬೇಕಾಯಿತು. ಆಗ ಉದಯಿಸಿದವರೇ ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳವರು. ಮಠ-ಪೀಠಗಳ ಮಾಯೆಗೆ ಸಿಲುಕದೆ, ಅಪ್ಪ ಬಸವಣ್ಣನ ವಚನಗಳನ್ನು ಬೆನ್ನಿಗೆ ಕಟ್ಟಿಕೊಂಡು ನಾಡಿನುದ್ದಕ್ಕೂ ಸಂಚರಿಸುತ್ತ ಅಂಗವನ್ನೇ ಲಿಂಗವನ್ನಾಗಿ ಮಾಡಿಕೊಂಡ ದಿವ್ಯ ಪ್ರಸಾದ ಜೀವಿಗಳು. ಅವರ ಜೀವಿತದ ಕಾಲದಲ್ಲಿ ನಡೆದು ಹೋದ ಘಟನೆಗಳು ಗತ ಇತಿಹಾಸವಾದರೂ ಬರಲಿರುವ ಸಹಸ್ರಾರು

೦೮೦ ೩೩೨೧೪೫
SHA

ವರ್ಷಗಳವರೆಗೂ ನಾಡಿನ ಜಂಗಮಮೂರ್ತಿಗಳಿಗೆ ದಾರಿತೋರುವ ಮೈಲಿಗಲ್ಲುಗಳಾಗಿವೆ. ಪ್ರಜ್ಞಾವಂತರಿಗೆ ಇಂದಿಗೂ ಜೀವಂತವಾಗಿರುವ ಶ್ರೀ ಶಿವಯೋಗಿಗಳು ಅಥಣಿ ನಗರದ ಹೆಮ್ಮೆ, ನಾಡಿನ ದಿವ್ಯ ಜಂಗಮ ಮೂರ್ತಿ ಲೋಕಮಾನ್ಯ ಶ್ರೀ ಬಾಲಗಂಗಾಧರ ಟಿಳಕರವರಿಗೂ ದಾರಿತೋರಿದ ಯುಗಪುರುಷ.

ಶ್ರೀ ಶಿವಯೋಗಿಗಳ ಮಠ ಸಮಾಜದ ಶಿರಸ್ಸಾದರೆ, ಶ್ರೀ ಮೋಟಗಿಮಠ ಸಮಾಜ ಪುರುಷನ ಕಣ್ಣಾಗಿ ಕೆಲಸ ಮಾಡಿದೆ. ಯಾವುದೇ ಪ್ರಚಾರದ ಹಂಗು, ಅಭಿಲಾಷೆ ಇರದ ಜಂಗಮ ಮೂರ್ತಿಗಳು ನಮ್ಮ ಲಿಂ. ಚನ್ನಬಸವ ಸ್ವಾಮಿಗಳು. ಆದರೆ ಅಪರೂಪದ ಲಿಂಗಾನುರಾಗಿ, ಶಿವಾನುಭವ ಚರಪುಂಗವ, ಉದ್ದಾಮ ಸಂಸ್ಕೃತ ಪಂಡಿತರಾಗಿ ಬಾಳಿದ ಅವರು ತಮ್ಮ ಸ್ಪಷ್ಟವಾದ ನಿಲುಮೆಗೆ ಪ್ರಸಿದ್ಧರಾದವರು. ಇಹದ ಭೋಗ-ಭಾಗ್ಯಗಳಿಂದ ಮುಖ ತಿರುವಿ ಅಂತರಂಗದತ್ತ ಒಲವನ್ನು ಹೊಂದಿ, ಒಳಗಿನ ಜ್ಯೋತಿಯನ್ನು ಬೆಳಗಿಸಿದ ಮಹಾನುಭಾವರವರು. ಅಂಥ ಗುರುಗಳು ಬೆಳಗಿನಲ್ಲಿ ಬೆಳಕಾಗಿ ಹೋದಾಗ ಮುಂದೇನು ಎಂಬ ಪ್ರಶ್ನೆಗೆ ಸಮಾಜದ ಉಡಿಯಲ್ಲಿ ಶ್ರೀ ಚನ್ನಬಸವದೇವರನ್ನು ಹಾಕಿ ಹೋದ ಪುಣ್ಯ ಪುರುಷರು.

ಅಥಣಿಯ ದಿವ್ಯ ಪರಿಸರದಲ್ಲಿ ತಮ್ಮ ಬಾಲ್ಯವನ್ನು ಕಳೆದ ನಮ್ಮ ದೇವರು, ಕೆಲವು ದಿನ ಇಲ್ಲಿಯೇ ಶಿಕ್ಷಣ ಪೂರೈಸಿದರು. ನಂತರದ ದಿನಗಳಲ್ಲಿ ಶಿವಯೋಗ ಮಂದಿರದ ನಿಸರ್ಗದತ್ತವಾದ ಪರಿಸರದಲ್ಲಿ, ಪರಿಪೂರ್ಣವಾದ ಶಿಕ್ಷಣವನ್ನು ಪೂರೈಸಿದ ಶ್ರೀಗಳು ಬಿದಿಗೆಯ ಚಂದ್ರನಂತೆ ಬೆಳೆದದ್ದು ನಾಡಿನ ಭಾಗ್ಯ. ಅಲ್ಲಿದ್ದ ಗುರುವರ್ಗ ಮೆಚ್ಚಿದ ಅಚ್ಚು ಮೆಚ್ಚಿನ ವಟುವಾಗಿ ಬೆಳೆದ ಶ್ರೀ ಚನ್ನಬಸವದೇವರು ಪ್ರಥಮರಲ್ಲಿ ಪ್ರಥಮರಾಗಿ ಸರ್ವರ ಲಕ್ಷ್ಯವನ್ನು ತಮ್ಮೆಡೆಗೆ ಸೆಳೆದಿದ್ದರು. ಶರಣ ಸಾಹಿತ್ಯದ ಜತೆಗೆ ಸಂಸ್ಕೃತ ಅಭ್ಯಾಸವನ್ನು ಮಾಡಿದ ಶ್ರೀಗಳು ತಮ್ಮ ಅಪ್ರತಿಮ ಬೌದ್ಧಿಕ ಬಲದಿಂದ ಆಕಾಶಕ್ಕೇರುವ ಹಂಬಲವನ್ನು ಹೊಂದಿದ್ದರು. ಸುಂದರವಾದ ಧ್ವನಿ, ಸರ್ವರೂ ಮೆಚ್ಚುವ ಮೈಕಟ್ಟು, ಆಳವಾದ ಜ್ಞಾನಶಕ್ತಿಯ ಜತೆಗೆ ಅಭಿವ್ಯಕ್ತಿಯ ಕಲೆಯನ್ನು ಕರಗತ ಮಾಡಿಕೊಂಡ ಶ್ರೀಗಳು ಪ್ರವಚನ ಹೇಳುವಲ್ಲಿ ನಿಷ್ಣಾತರು. ಶಿವಯೋಗಮಂದಿರದಲ್ಲಿ ಮಿಂದು ಸುತ್ತೂರಿನ ಪ್ರಭೆಯಲ್ಲಿ ಪುನೀತವಾಗಲು ಮೈಸೂರಿಗೆ ಪಯಣ ಬೆಳೆಸಿದ್ದುದು ಅವರ ವ್ಯಕ್ತಿತ್ವದ ವಿಕಾಸದಲ್ಲಿ ಬಹು ದೊಡ್ಡ ಘಟ್ಟವೆಂದು ಗುರುತಿಸಬಹುದು. ಅಲ್ಲಿಯೂ ತಮ್ಮ ಕ್ರಿಯಾಶೀಲ, ಅಧ್ಯಯನಶೀಲ ಪ್ರವೃತ್ತಿಯಿಂದ ಸರ್ವರ ಹೃದಯಗಳನ್ನು ಗೆದ್ದ ನಮ್ಮ ದೇವರು ಅಪ್ರತಿಮ ವಾಕ್ಪಟುಗಳಾಗಿ ಹೊರಹೊಮ್ಮಿದರು. ಸುತ್ತೂರು ಶ್ರೀಮಠದ ಭವ್ಯ-ದಿವ್ಯ ಪರಿಸರ, ಪೂಜ್ಯರ ಹಿಮಾಲಯದೆತ್ತರದ ವ್ಯಕ್ತಿತ್ವ, ನಮ್ಮ ದೇವರ ಬೆಳವಣಿಗೆಯಲ್ಲಿ ಅಚ್ಚಳಿಯದ ಪ್ರಭಾವ ಮೂಡಿಸಿದ್ದನ್ನು ಸೂಕ್ಷ್ಮಮತಿಗಳಾದ ಯಾರಾದರೂ ಕಾಣಬಹುದು. ನಾಡಿನ ಸಹಸ್ರಾರು ಮಕ್ಕಳಿಗೆ ಶಿಕ್ಷಣ ನೀಡಿ, ಶೈಕ್ಷಣಿಕ ರಂಗದಲ್ಲಿ ಅಪ್ರತಿಮ ಕ್ರಾಂತಿಯನ್ನು ಗೈದ ಅಪರೂಪದ ಸಾಧನೆ

ಅವರದು. ನೂರೊಂದು ಸಮಸ್ಯೆಗಳ ಮಧ್ಯದಲ್ಲೂ ಅವರ ಲಿಂಗಪೂಜಾ ನಿಷ್ಠೆ. ಭಕ್ತ ಜನ ಭಾಗ್ಯರಾಗಿ ಸಾಗಿ ಬಂದ ಆ ಪುಣ್ಯ ಪುರುಷರ ದರ್ಶನವೇ ಒಂದು ಸೌಭಾಗ್ಯ. ಅಂಥವರ ದಿವ್ಯ ಸಾನಿಧ್ಯದಲ್ಲಿ ನಮ್ಮ ದೇವರ ವ್ಯಕ್ತಿತ್ವ ರೂಪುಗೊಂಡಿತು.

ಡಿ.ವಿ.ಜಿ.ಯವರು ಹೇಳಿದಂತೆ–

ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು ।
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ॥
ಜಗದ ಜೀವಿತದಿ ನಿಜ ಜೀವಿತದ ಪೂರ್ತಿಯನು ।
ಬಗೆಯಲರಿತವನೆ ಸುಖಿ - ಮಂಕುತಿಮ್ಮ ॥

ಜಗದ ಸುಖ ದುಃಖದ ಜತೆಗೆ ತಮ್ಮನ್ನು ಗುರುತಿಸಿಕೊಳ್ಳುವ ವ್ಯಕ್ತಿತ್ವವನ್ನು ಅತಿ ಚಿಕ್ಕವಯಸ್ಸಿನಲ್ಲಿ ರೂಢಿಸಿಕೊಂಡಿರುವ ಶ್ರೀಗಳು, ಅದಕ್ಕಾಗಿಯೇ ಸರ್ವರ ಪ್ರೀತಿಗೆ ಪಾತ್ರರಾಗಿದ್ದಾರೆ.

ಇದೆಲ್ಲ ನಡೆದು ಬಂದ ದಾರಿಯ ದಿವ್ಯ ಸ್ಮರಣೆಯಾದರೆ, ಮುಟ್ಟಬೇಕಿರುವ ಗುರಿ ಸಹ ನಿಚ್ಚಳವಾಗಿರಬೇಕಾದದ್ದು ಇಂದಿನ ದಿನಮಾನದ ಅವಶ್ಯಕತೆ. ಜಾತಿ-ಧರ್ಮಗಳಲ್ಲಿ ಮೂಡಿರುವ ಆಳವಾದ ಕಂದರಗಳು ರಕ್ತದೋಕುಳಿ ಆಡಿಸುತ್ತಿರುವ ಇಂದಿನ ದಿನಮಾನದಲ್ಲಿ ಮಠಗಳ ಗುರಿ ನಿಶ್ಚಿತವಾಗಿರಲೇಬೇಕು. ನಾವೆಲ್ಲ ಒಂದೆಂಬ ಭಾವನೆ ಭಾವನಾತ್ಮಕವಾಗಿ ಜನಮಾನಸದಲ್ಲಿ ಮೂಡಿಸುವ ಪ್ರಾಮಾಣಿಕ ಪ್ರಯತ್ನ ಇಂದು ಹಿಂದೆಂದಿಗಿಂತಲೂ ಅವಶ್ಯಕವಿದೆ. ಅಂತಹ ಕ್ರಾಂತಿಯೊಂದು ಶ್ರೀ ಮೋಟಗಿ ಮಠದ ಶ್ರೀಗಳಿಂದ ಪ್ರಾರಂಭವಾಗಲಿ ಎಂಬುದೇ ನಾಡಿನ ಪ್ರಜ್ಞಾವಂತರ ಅಪೇಕ್ಷೆ.

ವೈಭವಕ್ಕಿಂತ ಮಿಗಿಲಾದ ಶ್ರೇಯಸ್ಸೊಂದುಂಟು, ಭೌತಶಕ್ತಿಗಿಂತ ಹಿರಿದಾದ ಆತ್ಮ ಶಕ್ತಿಯೊಂದುಂಟು, ದೃಶ್ಯಕ್ಕಿಂತ ಶಾಶ್ವತವಾದ ಅದೃಶ್ಯ ಸತ್ವವೊಂದುಂಟು. ಭೋಗ-ಭಾಗ್ಯದ ಸೌಖ್ಯಕ್ಕಿಂತ ನಿರ್ಮಲ ಶಾಂತಿಯ ಆನಂದವೊಂದುಂಟು.

ತತ್ವ-ಆದರ್ಶ ಮತ್ತು ಮಾನವೀಯತೆ ನಡುವೆ ಸಮರಸ ಸಂಬಂಧವಿರಬೇಕಾಗುತ್ತದೆ. ಆ ಬಂಧವಿದ್ದಾಗಲೇ ಧರ್ಮಕ್ಕೆ ಕಂಪು. ಈ ಬಂಧವನ್ನು ಸಾಧಿಸುವದು ಧರ್ಮದ ಉದ್ದೇಶ ಕೂಡ. ಮತಿಯಿಲ್ಲದ ಮತ ಮನುಕುಲಕ್ಕೆ ಹಿತವಲ್ಲ, ಅದು ಅಪಾಯಕಾರಿ.

ಹೃದಯ ವೈಶಾಲ್ಯವೇ ನಿಜವಾದ ಧಾರ್ಮಿಕತೆ. ಒಂದು ಧರ್ಮ ತನ್ನ ಅಂತಃಸತ್ವದಿಂದ ಮಾತ್ರ ಶ್ರೀಮಂತವಾಗಬಲ್ಲದು. ಧರ್ಮ ಕಲ್ಲಿನಿಂದ ಕಟ್ಟಿದ ಕೋಟೆಯಾಗಬಾರದು ಬಯಲಾಗಬೇಕು. ಕೋಟೆ ಕಟ್ಟಿದರೆ ಅದನ್ನು ಒಡೆಯುವವ ಒಳಗೇ ಹುಟ್ಟಿಕೊಳ್ಳುತ್ತಾನೆ. ಬಯಲು ಕಾಯುವವನಿಗೆ ಕಲಿಯಾಗುತ್ತದೆ. ಧರ್ಮ ಕೇವಲ ಕೋಟೆಯಾಗದಂತೆ ನೋಡಿಕೊಳ್ಳಬೇಕಾದರೆ ಧರ್ಮದ ತಿರುಳನ್ನು ಅರ್ಥ ಮಾಡಿಕೊಳ್ಳಲು ತೆರೆದ ಮನಸ್ಸು, ಸಹನೆ, ಸಂಯಮದ ನಡತೆ ಬೇಕು. ಧರ್ಮ ಮನುಷ್ಯನ ಅಂತರಂಗಕ್ಕೆ ಸಂಬಂಧಪಟ್ಟದ್ದು. ಒಳಗಿನ ಅರಳುವಿಕೆಗೆ ಸಹಾಯ ಮಾಡುವಂಥದು.

ನಮ್ಮ ಭಾವನೆಗಳನ್ನು ಪರಿಶುದ್ಧಗೊಳಿಸುವಂಥ ಗುಣವುಳ್ಳದ್ದು. ಮನುಷ್ಯನ ವ್ಯಕ್ತಿತ್ವದ ಸಂಪೂರ್ಣ ವಿಕಾಸವೇ ಧರ್ಮದ ನಿಜವಾದ ಉದ್ದೇಶ. ನಿಜವಾದ ಧರ್ಮ ನಮಗೆ ನಮ್ಮ ಸುತ್ತ ಮುತ್ತಲಿನ ಪರಿಸರದ ಜತೆ ಸಾಮರಸ್ಯದಿಂದ ಬದುಕುವ ಕಲೆಯನ್ನು ಕಲಿಸಿಕೊಡುತ್ತದೆ. ಆದ್ದರಿಂದಲೇ ಪ್ರಾಚೀನ ಭಾರತೀಯ ಸಂಸ್ಕೃತಿ ಹೊರಗಿನ ಧರ್ಮಾಚರಣೆಗಿಂತ ಹೆಚ್ಚು ಮಾನಸಿಕ ನೈತಿಕತೆಗೆ, ಮೌನಕ್ಕೆ ಮತ್ತು ಮುಕ್ತ ಚಿಂತನೆಗೆ ಮಹತ್ವ ಕೊಟ್ಟಿದೆ. ಇನ್ನು ಸಾಮಾಜಿಕ ಆಚರಣೆಯಲ್ಲಿ ಧರ್ಮವು, ಎಲ್ಲ ವರ್ಗದ ಜನರ ಸಮಷ್ಟಿ ಹಿತವನ್ನು ಸಾಧಿಸುವದಕ್ಕೆ ಒತ್ತು ಕೊಡುತ್ತದೆ. ಎಲ್ಲರನ್ನೂ ಒಂದುಗೂಡಿಸಿ, ಸಮಾಜದ ಎಲ್ಲ ಸ್ತರಗಳಲ್ಲೂ ಶಾಂತಿ ಅಹಿಂಸೆಗಳು ನೆಲೆಸುವಂತೆ ಆಗ್ರಹಿಸುತ್ತದೆ.

ಅದ್ಭುತ ಶಕ್ತಿಯುಳ್ಳ ಧರ್ಮಗಳು ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುವದಕ್ಕಿಂತ ಕೆಟ್ಟದ್ದನ್ನು ಮಾಡಿವೆ. ಇದಕ್ಕೆ ಕಾರಣ ಆ ಧರ್ಮಗಳ ಸಂಕುಚಿತ ಭಾವನೆ. ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಒಂದಾಗಬೇಕು. ವೇದಾಂತದ ಮಿದುಳು ಇಸ್ಲಾಮಿನ ದೇಹ, ಇದೊಂದೇ ನಮ್ಮ ಪುರೋಗಮನಕ್ಕೆ ದಾರಿ. ಎಲ್ಲ ಧರ್ಮಗಳ ಆಚೆ ನೋಡುವ ವೇದಾಂತದ ದೃಷ್ಟಿ ಹಾಗೂ ಮೇಲು ಕೀಳು, ಸ್ಪರ್ಶ-ಅಸ್ಪೃಶ್ಯತೆಯ ಸೋಂಕಿರದ ಇಸ್ಲಾಂ ಧರ್ಮದ ಸಮಾನತೆ ಇವುಗಳಿಂದ ಮಾತ್ರ ಭಾರತದ ಶ್ರೇಯಸ್ಸು ಸಾಧ್ಯ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಈ ಎಲ್ಲ ವಿಚಾರಗಳ ಸಾರ ಸರ್ವಸ್ವವೇ ಶರಣ ಧರ್ಮದ ಮರ್ಮ. ಅದರ ನೈಜ ಅನುಷ್ಠಾನವೇ ನಮ್ಮ ಮಠ ಮಾನ್ಯಗಳ ಗುರಿ. ಆ ಗುರಿಯೆಡೆಗೆ ಸಾಗುವ ಮನೋಧರ್ಮ, ಹೃದಯ ವೈಶಾಲ್ಯತೆ, ವಿಶ್ವಬಂಧುತ್ವ, ಬಿದ್ದವರನ್ನು ಮೇಲಕ್ಕೆತ್ತುವ ಸಹೃದಯ ಹೊಂದಿದ ನಮ್ಮ ಶ್ರೀ ಚನ್ನಬಸವದೇವರು ಆ ಕನಸನ್ನು ನನಸು ಮಾಡುವ ಮೂಲಕ ಬಸವ ತತ್ವದ ನೈಜ ಅನುಷ್ಠಾನಗೈಯಲಿ ಎಂದು ಶುಭ ಹಾರೈಸುತ್ತೇನೆ.

■■

ಸ್ಪಂದನ

ನಿರಂಜನ ಜಂಗಮಲಿಂಗ

● ಡಾ. ಎಂ. ಚಿದಾನಂದಮೂರ್ತಿ

ಅಥಣಿ ಮೋಟಗಿಮಠದ ಪೂಜ್ಯಶ್ರೀ ಚನ್ನಬಸವದೇವರನ್ನು ನಾನು ಕಂಡು ಮಾತನಾಡಿರುವುದಲ್ಲದೆ ಅವರ ಮಠಕ್ಕೆ ಹೋಗಿ ಆತಿಥ್ಯವನ್ನು ಸ್ವೀಕರಿಸಿರುವೆ. ಕಿರಿವಯಸ್ಸಿನ ಈ ಪೂಜ್ಯರು ಸಾಹಿತ್ಯಾಭಿಮಾನಿಗಳೂ ಆತ್ಮಸಾಧನೆಯಲ್ಲಿ ಬೆಳೆಯಬೇಕೆಂಬ ತೀವ್ರ ಹಂಬಲವುಳ್ಳವರೂ ಆಗಿದ್ದಾರೆ.

' ಅಂಜನ ' ಒಂದು ಕಪ್ಪು ಲೇಪನ, ಕಾಡಿಗೆ. ಅದನ್ನು ಅಲಂಕಾರಕ್ಕೆ ಕಣ್ಣಿಗೆ ಹಚ್ಚುವುದುಂಟು. ಮಾಂತ್ರಿಕ ಕಾಡಿಗೆಯನ್ನು ಹಚ್ಚಿಕೊಂಡರೆ ಗುಪ್ತಧನ ಕಾಣುತ್ತದೆಯೆಂಬ ನಂಬಿಗೆ. ಅದನ್ನು ಅಂಜನವೆಂದೇ ಕರೆಯುತ್ತಾರೆ. ' ನಿರಂಜನ 'ವೆಂಬುದು ಯಾವುದೇ ಒಂದು ಕಲೆಯಿಲ್ಲದ, ಲೌಕಿಕ ಬಯಕೆಯೂ ಇಲ್ಲದ ಸ್ಥಿತಿಯನ್ನು ಹೇಳುತ್ತದೆ. ಅದಕ್ಕೆ ಶೂನ್ಯತತ್ವವೆಂದೂ ಪರವಸ್ತುವೆಂದೂ ಅರ್ಥವಿದೆ. ವಿರಕ್ತರನ್ನು ' ನಿರಂಜನ 'ರೆಂದೂ ಕರೆಯುತ್ತಾರೆ.

ವಿರಕ್ತರು ಸನ್ಯಾಸಿಗಳು, ಲೌಕಿಕವಾದ ಬಯಕೆಯನ್ನು ನಿಗ್ರಹಿಸಿ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಅಮರತ್ವದೆಡೆಗೆ, ಅನಿತ್ಯದಿಂದ ನಿತ್ಯದೆಡೆಗೆ ನಡೆಯುವ ಪಯಣಿಗರು, ಸಾಧಕರು. ' ಶಕ್ತಿ' ಎಂದರೆ ಲೌಕಿಕ ಬಯಕೆ, ಲೌಕಿಕ ಹಾತೊರೆತ, ಅದು ' ಅಂಜನ '. ಅದನ್ನು ಮೀರಿದವನೇ ವಿರಕ್ತ. ಅವನ ಗುರಿ ನಿರಂಜನ ವಸ್ತುವಾಗುವುದು. ವಿರಕ್ತಾಶ್ರಮದ ಪದ ಅತ್ಯಂತ ಕಠಿಣವಾದುದು. ವಿರಕ್ತ ಮೊದಲು ತಾನು ಬೆಳಕನ್ನು ಕಂಡರೆ ಮಾತ್ರ ಉಳಿದವರಿಗೆ ಬೆಳಕನ್ನು ಕಾಣಿಸಬಲ್ಲನು. ಹಾಗೆ ಒಳಗಿನ ಸಾಧನೆಗಳನ್ನು ಮಾಡುತ್ತಲೇ ಅವನು ಸಮಾಜಸೇವೆಯನ್ನು ತನ್ನ ಸಾಧನೆಯ ಭಾಗವೆಂದೇ ಗ್ರಹಿಸಿ ಮುಂದುವರೆಯುತ್ತಾನೆ. ಹಾಗೆ ವಿರಕ್ತ ತತ್ವವನ್ನು ಗ್ರಹಿಸಿ, ಮುನ್ನಡೆಯುತ್ತಿರುವ ಸ್ವಾಮಿಗಳು ನನ್ನ ಕಣ್ಣಿಗೆ ಬಹುಜನ ಬೀಳುತ್ತಿಲ್ಲ. ಆ ಬಗ್ಗೆ ಇರುವ ನನ್ನ ತೀವ್ರ ನೋವನ್ನು ಮಾತ್ರ ಇಲ್ಲಿ ಸೂಚಿಸುತ್ತಿದ್ದೇನೆಯಾದರೂ ಹೇಳುವುದು ಬಹಳ ಇದೆ.

ಪೂಜ್ಯಶ್ರೀಗಳು ತಮ್ಮ ಅಂತರಂಗಸಾಧನೆಯಲ್ಲಿ ಮುಂದುವರೆಯಲಿ. ಅವರು ಸಮಾಜದ ನೇತಾರರಾಗಬೇಕು; ಸಮಾಜ ಅದರಲ್ಲೂ ಶ್ರೀಮಂತ ವರ್ಗದ ಸಮಾಜ ಅವರ ಮತ್ತು ಅವರ ಮಠದ ನೇತಾರರಾಗಲು ಎಂದೂ ಅವಕಾಶಕೊಡಕೂಡದು. ಇಂದಿನ ವಾಸ್ತವವನ್ನು ಎಲ್ಲರೂ ಬಲ್ಲರು.

ಯಾವುದೇ ಜಾತಿಯವರಾಗಲಿ, ದೀನರ ದಲಿತರ ನಿಸ್ಸಹಾಯಕರ ಕಣ್ಣೀರು ಒರೆಸುವಂತಹದು ದಿವ್ಯಕಾಯಕ. ಅದಕ್ಕೆ ದೀಕ್ಷಾ ಬದ್ಧರಾಗಬೇಕಿಲ್ಲ. ವಿರಕ್ತಾಶ್ರಮವನ್ನು ಸ್ವೀಕರಿಸಿದಾಗಲೇ ಅವರು ದೀಕ್ಷಾಬದ್ಧರಾಗಿದ್ದರು. ಅವರಿಗೆ ನನ್ನ ಶುಭ ಹಾರೈಕೆಗಳು. ಗುರು ಬಸವೇಶ್ವರನ ಸಂಪೂರ್ಣ ಕೃಪೆ ಅವರ ಮೇಲಿರಲಿ; ನಿರಂತರ ಧ್ಯಾನ, ಆತ್ಮ ಚಿಂತನ ಅವರ ಬದುಕಿನ ಭಾಗವಾಗಿರಲಿ.

■■

ಟಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಶಿವಯೋಗ ಮಂದಿರದಲ್ಲಿ ಕಂಡ ಗೈಡ್

- ಶ್ರೀ ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ನಾಲವಾರ

ಅದೊಂದು ಅವಿಸ್ಮರಣೀಯ ಸುಂದರ ಸಂಜೆಯ ಸಮಯವಾಗಿತ್ತು. ವಿಜಾಪುರದ ನೆಚ್ಚಿನ ಭಕ್ತರೋರ್ವರ ಆಮಂತ್ರಣದ ಮೇರೆಗೆ ಆಗಮಿಸಿದ್ದ ನಾವು ಅಲ್ಲಿಯ ಕಾರ್ಯಕ್ರಮವನ್ನು ಮುಗಿಸಿ ಕೂಡಲಸಂಗಮ, ಐಹೊಳೆ, ಪಟ್ಟದಕಲ್ಲು, ಬಾದಾಮಿ ದೇವಾಲಯಗಳನ್ನು ನೋಡಿಕೊಂಡು ಸೂರ್ಯಾಸ್ತದ ನಂತರದ ಸಂಜೆಯ ಆ ಸಮಯಕ್ಕೆ ಶ್ರೀ ಶಿವಯೋಗ ಮಂದಿರಕ್ಕೆ ಬಂದಿದ್ದೆವು. ಅದು ಶಿವಯೋಗ ಮಂದಿರಕ್ಕೆ ನಮ್ಮ ಮೊದಲ ಭೇಟಿಯಾಗಿದ್ದಿತ್ತು. ಅಖಿಲ ಭಾರತ ಶ್ರೀ ಮದ್ ವೀರಶೈವ ಮಹಾಸಭೆಯ ಅಧ್ಯಕ್ಷರು, ಸಮಾಜ ಪ್ರೇಮಿಗಳು ಆಗಿದ್ದ ಲಿಂ॥ ಹಾನಗಲ್ಲ ಕುಮಾರ ಶಿವಯೋಗಿಗಳವರ ಪವಿತ್ರ ಸಮಾಧಿ ಸ್ಥಳ, ಅವರೇ ಸ್ಥಾಪಿಸಿದ ಮಠಾಧೀಶರ ತರಬೇತಿ ಕೇಂದ್ರವಾಗಿರುವ ಶ್ರೀ ಶಿವಯೋಗ ಮಂದಿರವನ್ನು ಕಾಣುವ ಬಯಕೆ ಬಹಳ ದಿನಗಳಿಂದ ತುಂಬಿಕೊಂಡಿದ್ದರೂ ಅಂದಿನವರೆಗೂ ಸಮಯಾವಕಾಶ ಒದಗಿ ಬಂದಿರಲಿಲ್ಲ.

ತಂಗಾಳಿ ಹಿತವಾಗಿ ಲಾಸ್ಯವಾಡುವ ಸಂಜೆಯ ಸುಮಾರು ಏಳು ಗಂಟೆಯ ಸಮಯಕ್ಕೆ ನಾವು ಮಂದಿರವನ್ನು ತಲುಪಿದ್ದೆವು. ಅಲ್ಲಿಯ ಪ್ರಶಾಂತ ವಾತಾವರಣ ನಮ್ಮನ್ನು ಮಂತ್ರಮುಗ್ಧಗೊಳಿಸಿತು. ಆದರೆ ಆ ಸಂಜೆಯ ಸಮಯದಲ್ಲಿ ಪ್ರವಾಸಿಗರು, ದರ್ಶನಾರ್ಥಿಗಳು ಯಾರೂ ಇರದೆ ಶಾಂತ ಮೌನ ವ್ಯಾಪಿಸಿಕೊಂಡಿತ್ತು. ಕುಮಾರ ಶಿವಯೋಗಿಗಳವರ ಮಂದಿರದ ಸಂಜೆಯ ಪೂಜೆ ಅದೇ ತಾನೇ ಮುಗಿದು ಹೂ, ಧೂಪಗಳ ಸೌಗಂಧ ಆ ಶಾಂತ ವಾತಾವರಣಕ್ಕೆ ಮೆರಗು ನೀಡಿದಂತಿತ್ತು. ಅಂಥ ಸಮಯಕ್ಕೆ ಅಲ್ಲಿಗೆ ಆಗಮಿಸಿದ್ದ ನಮಗೆ ಆ ಸ್ಥಳವನ್ನು ಸರಿಯಾಗಿ ಪರಿಚಯಿಸುವ ವ್ಯಕ್ತಿಯೊಬ್ಬರ ಅಗತ್ಯವಿದೆ ಎಂದೆನಿಸಿತು. ಸಾಧಕ ವಟುಗಳು ಕೂಡ ಸಂಜೆಯ ಅಧ್ಯಯನಕ್ಕಾಗಿ ಅಧ್ಯಯನ ಕೊಠಡಿಯಲ್ಲಿ ಕೆಲವರು, ಸಂಜೆಯ ಪೂಜೆ, ಪ್ರಸಾದಗಳಿಗಾಗಿ ದಾಸೋಹ ಮನೆಯಲ್ಲಿ ಕೆಲವರು ಅದಾಗಲೇ ಸೇರಿಕೊಂಡಿದ್ದರಿಂದ ಹೊರಗಡೆ ಯಾರೂ ಕಾಣಿಸುತ್ತಿರಲಿಲ್ಲ. ಆದರೆ ನಮ್ಮೊಂದಿಗೆ ಆಗಮಿಸಿದ್ದ ಹೊನ್ನ ಕಿರಣಗಿಯ ಸ್ವಾಮೀಜಿಗಳಿಗೆ ಶಿವಯೋಗ ಮಂದಿರ ಚಿರಪರಿಚಿತ. ಅವರು ನಮ್ಮನ್ನು ನೇರವಾಗಿ ಸಾಧಕ ವಟುಗಳು ಇರುವ ಕಡೆ ಕರೆ ತಂದರು. ಅಲ್ಲಿರುವ ಕೆಲವು ವಟುಗಳನ್ನು ಕರೆದು ನಾವು ಶಿವಯೋಗ ಮಂದಿರವನ್ನು

ಕಾಣಲು ಬಂದಿದ್ದೇವೆ. ಇಲ್ಲಿಯ ಎಲ್ಲಾ ಸ್ಥಳಗಳನ್ನು ನಮಗೆ ತೋರಿಸುವಿರಾ ಎಂದು ಕರೆದಾಗ ಅವರಲ್ಲಿ ಒಬ್ಬ ಹದಿನೈದು - ಹದಿನಾರು ವಯಸ್ಸಿನ ಅದೇ ತಾನೇ ಮುಖದಲ್ಲಿ ಮೀಸೆ ಮೂಡುವಂತಿದ್ದ ತರುಣ ಸನ್ಯಾಸಿಯೊಬ್ಬ ಚಿನಕುರುಳಿಯಂತೆ ಪಟಪಟನೆ ಮಾತನಾಡುತ್ತ "ಓಹೋ ನಾನು ತೋರಿಸುತ್ತೇನೆ" ಎಂದು ಮುಂದೆ ಬಂದ. ಸಾದಾ ಬಿಳಿಯ ಉಡುಪಿನಲ್ಲಿದ್ದ ನಾವು ಅಲ್ಲಿಯ ಸಾಧಕರಿಗೆ ಮಠಾಧೀಶರಂತೆ ಕಂಡಿರಲಿಲ್ಲ. ಈ ಯುವ ವಟುವು ಕೂಡ ನಮ್ಮನ್ನು ಕೇವಲ ಪ್ರವಾಸಿಗರೆಂದೆ ಭಾವಿಸಿ ಶಿವಯೋಗ ಮಂದಿರದ ಬಗ್ಗೆ, ಹಾನಗಲ್ಲ ಕುಮಾರಸ್ವಾಮಿಗಳ ಬಗ್ಗೆ ಪಟಪಟನೆ ಸಾಹಿತ್ಯಕ ಸುಸಂಬದ್ಧ ಭಾಷೆಯಲ್ಲಿ ವಿವರಣೆಗಳನ್ನು ನೀಡುತ್ತಿರುವದು ನಮ್ಮನ್ನು ಬೆರಗುಗೊಳಿಸುವಂತೆ ಮಾಡಿತು.

ಶ್ರೀ ಕುಮಾರ ಮಹಾಸ್ವಾಮಿಗಳವರ ಮಂದಿರ, ವಿಭೂತಿ ತಯಾರಿಕೆ ಕೇಂದ್ರ, ಸಾಧಕರ ಕೊಠಡಿಗಳು ಎಲ್ಲವನ್ನು ತೋರಿಸುತ್ತ ಯಾವ ಗೈಡ್‌ಗೂ ಕಡಿಮೆ ಇಲ್ಲ ಎನ್ನುವಂತೆ ಈ ಬಾಲ ಸನ್ಯಾಸಿ ನಮಗೆ ಶಿವಯೋಗ ಮಂದಿರವನ್ನು ಪರಿಚಯಿಸಿದ. ಕೊನೆಗೆ ನಾವು ಅಲ್ಲಿಂದ ಮರಳುವಾಗ ಆ ಯುವಕನಿಗೆ ಒಂದಿಷ್ಟು ಕಾಣಿಕೆಯನ್ನು ನೀಡುತ್ತ "ನೀವು ಯಾವ ಮಠಕ್ಕೆ ಸ್ವಾಮಿಗಳಾಗಲಿರುವಿರಿ ಮರಿ ಸ್ವಾಮಿಗಳೇ" ಎಂದು ಕೇಳಿದಾಗ ಆತ "ಅಥಣಿಯ ಮುರುಘೇಂದ್ರ ಸ್ವಾಮಿಗಳ ಹೆಸರು ಕೇಳಿದ್ದಿರಲ್ಲವೆ? ಅಲ್ಲಿಯೇ ಮೋಟಗಿಮಠ ಎನ್ನುವ ಮಠವಿದೆ. ಅಲ್ಲಿಯ ಮರಿದೇವರು ನಾವು" ಎಂದು ಪರಿಚಯಿಸಿಕೊಂಡಿದ್ದ ಈ ಯುವ ಮರಿ ಸ್ವಾಮೀಜಿ ನಾವು ವಾಹನವೇರಿ ಹೊರಟಾಗ ನಮ್ಮ ಮನಸ್ಸನ್ನು ತುಂಬಿಕೊಂಡು ಬಿಟ್ಟಿದ್ದ. ಅಂದೇ ನಮ್ಮ ಜೊತೆಯಲ್ಲಿದ್ದವರಿಗೆ ನಾವು ಹೇಳಿ ಬಿಟ್ಟೆವು. ' ಈ ಯುವ ಮರಿ ದೇವರಲ್ಲಿ ಏನೋ ವಿಶೇಷ ಆಕರ್ಷಣೆ. ಪ್ರತಿಭೆ ಇದೆ. ಮುಂದೆ ಈತ ಉತ್ತಮ ಸಾಧಕನಾಗುತ್ತಾನೆ. ಆತನ ಮಾತುಗಳು ಮೋಡಿ ಮಾಡುತ್ತವೆ ಎಂದು '. ನಾವು ಮರಳಿ ಶ್ರೀ ಮಠಕ್ಕೆ ಬಂದ ಮೇಲೂ ಈ ಯುವ ಸ್ವಾಮೀಜಿಯ ಚಿತ್ರಣ ಮನಸ್ಸಿನಲ್ಲಿ ಉಳಿದುಕೊಂಡು ಬಿಟ್ಟಿತ್ತು. ಅದಾಗಲೇ ಶಿವಯೋಗ ಮಂದಿರದಿಂದ ವಿದ್ಯಾಭ್ಯಾಸ ಮಾಡಿ ಬಂದಿದ್ದ ಸಿಂದಗಿ ತಾಲೂಕಿನ ಮಾಡಬಾಳದ ಗಂಗಾಧರ ದೇವರು ಎನ್ನುವವರು (ಅವರು ಈಗ ಮಳಖೇಡದಲ್ಲಿ ಮಠಾಧೀಶರಾಗಿದ್ದಾರೆ.) ನಮ್ಮ ಆಶ್ರಯದಲ್ಲಿದ್ದರು. ಬಂದ ನಂತರ ಅವರನ್ನು ಕುರಿತು ನಾವು ಶಿವಯೋಗ ಮಂದಿರಕ್ಕೆ ಹೋದದ್ದನ್ನು ವಿವರಿಸಿ ಯಾರೋ ಅಥಣಿಯ ಮೋಟಗಿ ಮಠದ ಮರಿದೇವರಂತೆ ನಮಗೆ ಶಿವಯೋಗ ಮಂದಿರವನ್ನು ಚೆನ್ನಾಗಿ ಪರಿಚಯಿಸಿದರು. ಹುಡುಗ ತುಂಬಾ ಪ್ರತಿಭಾವಂತನಿದ್ದಾನೆ ಎಂದು ಹೇಳಿದಾಗ ಶ್ರೀ ಗಂಗಾಧರದೇವರು "ಅವರು ಚನ್ನಬಸವದೇವರು, ನನ್ನ ಗೆಳೆಯರು" ಎಂದು ಹೇಳಿದರಷ್ಟೆಯಲ್ಲ, ಶಿವಯೋಗ ಮಂದಿರಕ್ಕೆ ಹೋದದ್ದು ನಾವೇ ಎನ್ನುವ ಕುರಿತು ವಿವರಿಸಿ ಚನ್ನಬಸವದೇವರಿಗೆ ಪತ್ರ ಬರೆದಾಗ ಅವರಿಗೆ 'ಶಾಕ್' ಆಯಿತಂತೆ. ಏಕೆಂದರೆ ನಮ್ಮ ಬಗ್ಗೆ ಮೊದಲೇ ಕೇಳಿದ್ದರಿಂದ ನಾವೇ ಅಲ್ಲಿಗೆ ಹೋದರೂ ಗುರುತು ಹಿಡಿಯಲಿಲ್ಲವೆಂದು ವಿಷಾದಿಸಿ ನಮಗೂ ಪತ್ರ ಬರೆದರು. ಶಿವಯೋಗ ಮಂದಿರದ

ಭೇಟಿಯಿಂದಲೇ ಅವರಲ್ಲಿದ್ದ ಪ್ರತಿಭೆಯನ್ನು ಗುರುತಿಸಿದ್ದ ನಾವು ಮುಂದೆ ಅವರು ಮೈಸೂರಿನ ಸುತ್ತೂರು ಮಠದಲ್ಲಿ ಅಭ್ಯಾಸ ಮಾಡುತ್ತಿರುವಾಗಲೂ ಆತ್ಮೀಯವಾಗಿ ಬರೆಯುತ್ತಿದ್ದ ಪತ್ರಗಳಿಗೆ ಉತ್ತರಿಸುತ್ತಿದ್ದೆವು. ಮುಂದೆ ಒಂದು ಸಲ ರಜೆಯಲ್ಲಿ ನಾಲವಾರಕ್ಕೆ ಬರಬೇಕೆಂದು ತಿಳಿಸಿ ಬರೆದೆವು. ನಮ್ಮ ಆದೇಶದಂತೆ ನಮ್ಮನ್ನು ಕಾಣಲೂ ಬಂದರಷ್ಟೆಯಲ್ಲ ಕೆಲವು ದಿನಗಳವರೆಗೆ ಚನ್ನಬಸವದೇವರು ನಮ್ಮೊಂದಿಗೆ ಇರುವಂತಾಯಿತು. ಅದಾಗಲೇ ಕೆಳದಿಯ ಪಟ್ಟಾಧ್ಯಕ್ಷರಿಂದ ಪರಿಣತಿ ಪಡೆದಿದ್ದ ಅವರು ಶಬ್ದಗಳನ್ನು ಪ್ರಾಸಗಳ ರೀತಿಯಲ್ಲಿ ಷಟ್ಪದಿಗಳಿಗೆ ಹೋಲಿಸಿ ಕವನಗಳನ್ನು ಬರೆಯಲು ಪ್ರಯತ್ನಿಸುತ್ತಿದ್ದರು. ಅವರ ಈ ಸಾಹಿತ್ಯಿಕ ಚಟುವಟಿಕೆಗಳನ್ನು ಗಮನಿಸಿ ನಮ್ಮಲ್ಲಿರುವ ಹಲವಾರು ಪುಸ್ತಕಗಳನ್ನು ಓದಲು ಪ್ರೇರೇಪಿಸಿದೆವು. ಅವರಲ್ಲಿ ಓದುವ, ಬರೆಯುವ ಹವ್ಯಾಸ ದ್ವಿಗುಣಗೊಳಿಸಲು ಪ್ರಯತ್ನಿಸಿದೆವು. ಈ ಪ್ರಯತ್ನ ಹುಸಿಯಾಗಲಿಲ್ಲ ಎನ್ನುವುದಕ್ಕೆ ಚನ್ನಬಸವದೇವರ ಇಂದಿನ ವ್ಯಕ್ತಿತ್ವ ಒಂದು ನಿದರ್ಶನವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅಂದಿನ ಅವರ ಕವಿತೆ ಬರೆಯುವ ಹವ್ಯಾಸವನ್ನು ಗಮನಿಸಿ ಕವಿ ಲಕ್ಷ್ಮೀನಾರಾಯಣ ಭಟ್ಟರ ಪುಸ್ತಕಗಳನ್ನು ಶ್ರೀ ಸಿದ್ಧಯ್ಯ ಪುರಾಣಿಕರ ಕೆಲ ಗ್ರಂಥಗಳನ್ನು ನೀಡಿ ಬರೆಯಲು ಪ್ರೋತ್ಸಾಹಿಸಿದ್ದು ನಮಗೆ ಇನ್ನೂ ನೆನಪಿದೆ.

ಹೀಗೆ ನಮ್ಮ ಹಾಗೂ ನಮ್ಮ ಶ್ರೀ ಮಠದ ಸಂಪರ್ಕವನ್ನು ಪಡೆದ ಶ್ರೀ ಚನ್ನಬಸವದೇವರು ಮುಂದೆ ನಾವೇ ದಿಗ್ಭ್ರಮೆಗೊಳ್ಳುವಂತೆ ಅತಿ ಚಿಕ್ಕ ವಯಸ್ಸಿನಲ್ಲಿಯೇ ಕವಿಯಾಗಿ, ಸಾಹಿತಿಯಾಗಿ, ವಚನಕಾರರಾಗಿ ಬೆಳೆಯುವುದರೊಂದಿಗೆ ಹಲವಾರು ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಚಕಚಕನೆ ಪಾದರಸದಂತೆ, ಅರಳು ಹುರಿದಂತೆ ಮಾತನಾಡುತ್ತ ಸಭೆ ಸಮಾರಂಭಗಳಲ್ಲಿ ಪ್ರವಚನಕಾರರಾಗಿ, ಉಪನ್ಯಾಸಕರಾಗಿ, ಸಂಚಾಲಕರಾಗಿ ವಿಜೃಂಭಿಸಿದರು. ಜೊತೆಗೆ ಎಂ.ಎ. ಪದವೀಧರರು ಕೂಡ ಆದರು. ಹೀಗೆ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸರ್ವ ಪರಿಪೂರ್ಣರಾಗಿ ಅಥಣಿಯ ಮೋಟಗಿ ಮಠದ ಪಟ್ಟಾಧಿಕಾರದ ಮಣಿಹವನ್ನು ಪಡೆಯಲಿರುವುದು ನಮಗಲ್ಲದೆ ಮತ್ತಾರಿಗೆ ತಾನೇ ಹೆಚ್ಚಿನ ಸಂತೋಷವನ್ನು ಉಂಟು ಮಾಡೀತು ಎಂದು ಭಾವಿಸುತ್ತೇವೆ.

ಅಂದು ಶಿವಯೋಗ ಮಂದಿರದಲ್ಲಿ ಗೈಡ್ ಆಗಿ ಕಾಣಿಸಿಕೊಂಡಿದ್ದ ಈ ಚನ್ನಬಸವದೇವರು ಮೋಟಗಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಳ್ಳುವದರೊಂದಿಗೆ ಸಮಾಜಕ್ಕೆ, ನಾಡಿಗೆ ಸತ್ಪಥವನ್ನು ತೋರುವ ಗೈಡಾಗಿ (ಮಾರ್ಗದರ್ಶಕ) ಬೆಳೆಯಲಿ, ಬೆಳಗಲಿ ಎಂದು ಹೃದಯಾರೆ ಹಾರೈಸುತ್ತೇವೆ.

■■

ನಿರಾಭಾರಿ : ಚನ್ನಬಸವದೇವರು

• ಶ್ರೀ ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು, ನಾಗಠಾಣ

ಕನ್ನಡ ನಾಡಿನ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಂಗಲವಾಚಕ ಅಥಣಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಈ ಪುಣ್ಯಭೂಮಿಯಲ್ಲಿ ಶತಮಾನಗಳಿಂದ ಅನೇಕ ಪುಣ್ಯ ಪುರುಷರು ತಪಗೈದು, ಭಕ್ತೋದ್ಧಾರಕರಾಗಿ ಲೋಕ ಪೂಜ್ಯರಾಗಿ ಹೋಗಿದ್ದಾರೆ. ಜೊತೆಗೆ ಸಾಹಿತ್ಯ ಸಂಸ್ಕೃತಿ ಕಲೆಗಳನ್ನು ಬೆಳೆಸಿ ಪೋಷಿಸಿದ ಕೀರ್ತಿ ಅಥಣಿ ಸುಕ್ಷೇತ್ರದ ಮಠಗಳಿಗೆ ಸಲ್ಲುತ್ತದೆ. ಆ ದಿಶೆಯಲ್ಲಿ ಮೋಟಗಿಮಠವು ವಿಶೇಷ ಕಾರ್ಯಗೈಯುತ್ತ ಬಂದುದು ಸರ್ವವಿದಿತ ಸಂಗತಿಯಾಗಿದೆ. ಶ್ರೀ ಮಠದ ಹಿಂದಿನ ಹಲವಾರು ಪೂಜ್ಯರು ತಪಸ್ವಾಧ್ಯಾಯ ಪ್ರವಚನಗಳ ಜೊತೆಗೆ ಸಮಾಜದ ಬದುಕಿನ ಒಳಿತಿಗಾಗಿ, ಉದ್ಧಾರಕ್ಕಾಗಿ ಲಿಂಗವಂತ ಧರ್ಮ, ಶರಣ ಸಂಸ್ಕೃತಿ ಶಿವಯೋಗ ಪರಂಪರೆ ತತ್ವಜ್ಞಾನಗಳನ್ನು ಉಪದೇಶಿಸಿ, ಆಚರಿಸಿ, ಉಳಿಸಿ, ಬೆಳೆಸಿಕೊಂಡು ಬಂದವರಾಗಿದ್ದಾರೆ. ಆ ಪರಂಪರೆಯಲ್ಲಿ ಲಿಂ. ಗುರುಬಸವ ಅಪ್ಪಗಳ ಹೆಸರು ಮೇರುಸದೃಶವಾದುದು. ಅವರು ಘನ ವಿದ್ವಾಂಸರು, ವೇದ, ಆಗಮ, ಶಾಸ್ತ್ರ, ಪುರಾಣಗಳನ್ನು ಅರಗಿಸಿಕೊಂಡು ಅರುಹಿದ ಮಹಾಂತರು. ಉನ್ನತ ಲೇಖಕ, ಕವಿ ಹೃದಯರು. ಜೊತೆಗೆ ಬಸವಾದಿ ಶಿವಶರಣರ ವಚನಗಳ ಆಳ ಅಗಲವನ್ನು ತಲಸ್ಪರ್ಶಿಯಾಗಿ ಬಿಚ್ಚಿ ಬೋಧಿಸಿದ ಉದ್ದಾಮ ಪಂಡಿತರು. ಅವರ ವಿದ್ವತ್ಪ್ರಭೆಯಿಂದ ಅನೇಕ ಗ್ರಂಥಗಳು ಹೊರಬಂದಿವೆ. ಆ ಸತ್ಪರಂಪರೆಯ ಇನ್ನೊಂದು ರತ್ನವೇ ಶ್ರೀ ಚನ್ನಬಸವದೇವರು. "ಅರಿವಿಂಗೆ ಹಿರಿದು ಕಿರಿದುಂಟೆ?" ಎಂಬ ವ್ಯೋಮ ಮೂರುತಿ ಅಲ್ಲಮಪ್ರಭುದೇವರ ಮಾತಿನಂತೆ ಕಿರಿವಯದಲ್ಲಿಯೇ ಹಿರಿದಾದ ಸಾಧನೆ ಮಾಡಿರುವ ಶ್ರೀ ಚನ್ನಬಸವದೇವರು ಈ ನಾಡು ಕಂಡ ವಿಶೇಷ ಶರಣ ಚೇತನ ಎನ್ನಬಹುದು. ಇದಕ್ಕೆ ಎಳೆ ವಯದಲ್ಲಿಯೇ ಅವರಿಂದ ಮೂಡಿ ಬಂದ ಹತ್ತಾರು ಸಾಹಿತ್ಯ ಕೃತಿಗಳೇ ಸಾಕ್ಷಿ ಎನ್ನಬಹುದು.

ಶ್ರೀ ದೇವರಲ್ಲಿ ತಾರುಣ್ಯದ ಕ್ರಿಯಾಶಕ್ತಿ ಸಮಾಜದ ಸೇವೆಗೈವ ಹಿರಿದಾದ ಹಂಬಲ, ಹಿಂದಿನ ಗುರುಗಳ ಶ್ರೀರಕ್ಷೆ, ಭಕ್ತ ಸಮೂಹದ ಬೆಂಬಲ, ಶರಣರ ವಚನ ಸಾಹಿತ್ಯದ ಸಂಪತ್ತು, ಆಳವಾದ ಅಧ್ಯಯನ, ಕಾವ್ಯರಚನಾ ಶಕ್ತಿ, ಲೇಖನ, ಕಲೆ ಹಾಗೂ

ವಿಶ್ವವಿಭೂತಿ ಪುರುಷ ಬಸವೇಶ್ವರರು ಹೇಳಿದಂತೆ "ನುಡಿದರೆ ಮುತ್ತಿನಹಾರ, ಮಾಣಿಕ್ಯದ ದೀಪ್ತಿ, ಸ್ಪಟಿಕದ ಶಲಾಕೆ, ಲಿಂಗಮೆಚ್ಚಿ (ಸಮಾಜವೇ) ಅಹುದಹುದೆನ್ನುವ ಅತ್ಯದ್ಭುತ ವಾಕ್‌ಪ್ರೌಢಿಮೆಗಳೆಲ್ಲವನ್ನು ಮೇಳೈಸಿಕೊಂಡಿರುವ ಶ್ರೀ ಚೆನ್ನಬಸವದೇವರು ಒಬ್ಬ ವ್ಯಕ್ತಿಯಲ್ಲ ಶಕ್ತಿಯ ಸಂಚಯ ಎನ್ನಬಹುದು.

ಲಿಂ. ಗುರುಬಸವ ಅಪ್ಪಗಳ ಹತ್ತಿರ ಅಧ್ಯಯನ ಮಾಡಿದ ನಮಗೆ ಪುರಾಣ, ಪ್ರವಚನ, ಧಾರ್ಮಿಕ ಕಾರ್ಯಗಳಿಗೆಲ್ಲ ಅವರದೇ ಪ್ರೇರಣೆ ಎನ್ನಬಹುದು. ಅವರಿಂದ ಪಡೆದ ಅನುಭವದಮೃತಕ್ಕೆ ಅವರಿಗೆ ಒಂದು ಅಮೂಲ್ಯ ಕಾಣಿಕೆ ಕೊಟ್ಟ ಸಂತಸ ಹಾಗೂ ಅಭಿಮಾನ ನಮ್ಮದು. ಬಾಲ್ಯದಲ್ಲಿ ಶ್ರೀ ಚನ್ನಬಸವದೇವರಿಗೆ ಲಿಂಗದೀಕ್ಷಾ ಸಂಸ್ಕಾರ ನೀಡಿದ್ದೆವು. ಆಗ ಸಂಸ್ಕಾರಗೊಂಡ ಮಲ್ಲಿಗೆ ಮೊಗ್ಗೆಯೇ ವಿಕಸಿತಗೊಂಡು ಮೋಟಗಿಮಠದ ಉತ್ತರಾಧಿಕಾರಿ ಎಂಬ ಪರಿಮಳ ಬೀರುವ ಪುಷ್ಪವಾದದ್ದು ಒಂದು ಯೋಗಾಯೋಗ ಅಥವಾ ದೈವೀ ಸಂಕಲ್ಪ ಎನ್ನಬಹುದು. ಇಂದು ಅಭಿನವ "ಚನ್ನಬಸವಣ್ಣ"ನೆಂದೇ ನಾಡಿನಾದ್ಯಂತ ಭಕ್ತ ಸಮೂಹಕ್ಕೆ ಸುಂದರ ಸುಮಧುರ ಸವಿನುಡಿಗಳಿಂದ ಶರಣರ ಹಾಗೂ ಧರ್ಮತತ್ವಗಳನ್ನು ಮನೆ-ಮನಗಳಿಗೆ ತಲುಪಿಸುತ್ತಿದ್ದಾರೆ ಶ್ರೀ ಚನ್ನಬಸವದೇವರು.

ಶ್ರೀ ದೇವರು ಸದ್ಯದಲ್ಲಿ ನಿರಾಭಾರಿ ಪಟ್ಟಾಧಿಕಾರ ಸ್ವೀಕರಿಸಲಿದ್ದು, ಇದು ಅವರ ಜೀವನದ ಅತ್ಯಂತ ಮಹತ್ವದ ಘಟ್ಟ ಎನ್ನಬಹುದು. ಸಮಾಜಸೇವೆ, ಅಪ್ಪ ಬಸವಣ್ಣನವರ ಹಾಗೂ ಧರ್ಮ ಸಂಸ್ಕೃತಿಯ ಪ್ರಸಾರಕರಾಗಿ ನಿರಾಭಾರಿ ಜಂಗಮಾಧಿಕಾರಕ್ಕೆ ಸಜ್ಜಾಗಿ ನಿಂತಿದ್ದಾರೆ. ಭಾವೀ ಜೀವನವೆಲ್ಲ ಶರಣರ ತತ್ವ ಪ್ರಸಾರಕ್ಕೆ, ತತ್ವಚಿಂತನೆಗೆ, ಲಿಂಗ ಪೂಜಾಚರಣೆಗೆ, ಜಪ-ತಪ, ಶಿವಯೋಗಾನುಷ್ಠಾನಕ್ಕೆ ವೀರ ಕಂಕಣ ಕಟ್ಟಲಿದ್ದಾರೆ.

ಶ್ರೀ ಶಿವಯೋಗಿಗಳ ಪರಂಪರೆಯ ವಾರಸುದಾರರಾದ ಅವರಿಂದ ಮುಂದಿನ ದಿನಗಳಲ್ಲಿ ಸಮಾಜ, ನಾಡು ಹಾಗೂ ನಾವು ಬಹಳಷ್ಟು ವಿಧಾಯಕ ಕಾರ್ಯಗಳನ್ನು ನಿರೀಕ್ಷಿಸುವವರಾಗಿದ್ದೇವೆ.

■■

ಸಭೆಯ ಸಂಚಾಲಕ

● ಶ್ರೀ ಶಿವಾನಂದ ಸ್ವಾಮಿಗಳು, ಸೊನ್ನ

''ಮಾತೆಂಬುದು ಜ್ಯೋತಿರ್ಲಿಂಗ'' ಇದು ಶರಣರು ಮಾತಿಗೆ ಕೊಟ್ಟ ಮಹತ್ವ. ಮಾತು ಕೇಳುಗರ ಮನಸ್ಸನ್ನು ಅರಳಿಸಬೇಕೇ ಹೊರತು ಕೆರಳಿಸಬಾರದಲ್ಲಾ! ಇಂತಹ ಮಾತಿನ ಮೌಲ್ಯ ಅರಿತು ಮಾತನಾಡುವ ಬೆರಳೆಣಿಕೆಯ ಸ್ವಾಮಿಗಳಲ್ಲಿ ಶ್ರೀ ಚನ್ನಬಸವದೇವರೂ ಒಬ್ಬರು.

ಹೀಗೊಂದು ಸಂದರ್ಭ ಜುಲೈ ೨೬. ೨೭ ಹಾಗೂ ೨೮. ೨೦೦೦. ಐತಿಹಾಸಿಕ ನಗರ ವಿಜಾಪುರದ ಪ್ರತಿಷ್ಠಿತ ಶ್ರೀ ಸಿದ್ಧೇಶ್ವರ ಸಂಸ್ಥೆಯವರು ಹಮ್ಮಿಕೊಂಡ ಬಂಥನಾಳ ಸಂಗನಬಸವ ಶಿವಯೋಗಿಗಳ ಜನ್ಮ ಶತಾಬ್ದಿಯ ಕಾರ್ಯಕ್ರಮ. ಒಂದು ತಿಂಗಳವರೆಗೆ ಪ್ರವಚನ ಹೇಳುವ ಕಾಯಕ ನಮ್ಮದಾಗಿತ್ತು. ಕೊನೆಯ ವಿಶೇಷ ಕಾರ್ಯಕ್ರಮವನ್ನು ನಿರ್ವಹಣೆ ಮಾಡುವವರಾರು ಎಂದು ಎಲ್ಲರೂ ನಿರಂತರ ಯೋಚಿಸುತ್ತಲೇ ಇದ್ದೆವು. ಲಕ್ಷಾಂತರ ಜನ ಸಮೂಹವನ್ನು ಸ್ಪಂದಿಸುವ ಶಕ್ತಿ ನಮ್ಮ ಸುತ್ತಲಾರಿಗಿದೆ ಎಂದು ಚಿಂತನ ಮಾಡುವಾಗಲೇ ನಮ್ಮ ಮನಃ ಪಟಲಕ್ಕೆ ಹೊಳೆದದ್ದು ಬೇರಾರೂ ಅಲ್ಲ, ಚನ್ನಬಸವದೇವರು ಮಾತ್ರ.

ಸಮಿತಿಯ ಅನೇಕರಿಗೆ ಇವರು ನಿರ್ವಹಿಸಬಲ್ಲರೆ ಎನ್ನುವ ಯೋಚನೆ ಕಾಡುತ್ತಲೇ ಇತ್ತು. ಅಂದು ಲಕ್ಷಾಂತರ ಜನ ಸಮೂಹ ವೇದಿಕೆಯಲ್ಲಿ ಸಮ್ಮೇಳನಗೊಂಡಿದೆ. ಚನ್ನಬಸವದೇವರು ಮಾತು ಆರಂಭಿಸುತ್ತಿದ್ದಂತೆ ಎಲ್ಲರೂ ಮಂತ್ರಮುಗ್ಧ! ಆ ಮೂರು ದಿನಗಳವರೆಗೆ ಎಲ್ಲ ಸಭಿಕರನ್ನು, ವೇದಿಕೆಯ ಮೇಲೆ ಇರುವ ಸ್ವಾಮಿಗಳನ್ನು ಸಂತಸ ಪಡಿಸುವ ಜೊತೆಗೆ ಆಶ್ಚರ್ಯಗೊಳಿಸಿದ್ದನ್ನು ನೆನಪಿಸಿಕೊಂಡರೆ ನಮಗಿನ್ನೂ ಆನಂದವೆನಿಸುತ್ತದೆ.

ಅಂದಿನಿಂದ ಇಂದಿನವರೆಗೆ ನಿರ್ವಹಣೆ ನಿಂತಿಲ್ಲ. ನಿತ್ಯ ಗಂಗೋತ್ರಿಯಂತೆ ಹರಿಯುತ್ತಲೇ ಇದೆ. ಈ ಕಲೆ ಎಲ್ಲರಿಗೂ ಸಿಗುವ ಮಾತೇನಲ್ಲ. ಅದೊಂದು ದೈವೀ ಕೃಪೆಯೇ ಅನ್ನಬೇಕು. ಇಂಥ ಪೂಜ್ಯರ ಪಟ್ಟಾಧಿಕಾರದ ಸಂದರ್ಭದಲ್ಲಿ ನಾವು ಪ್ರವಚನ ಮಾಡುತ್ತಿರುವದು ಇದೊಂದು ಯೋಗಾಯೋಗ. ಮಾತಿನ ಮಹತ್ವ ಅರಿತರೆ ಮಾನವಕುಲವನ್ನೇ ಗೆಲ್ಲಬಹುದು ಎನ್ನುವುದಕ್ಕೆ ಇವರಿಗಿಂತ ಸಾಕ್ಷಿ ಬೇರೆ ಬೇಕೆ!

ನಾ ಕಂಡಂತೆ ನನ್ನ ಚನ್ನಬಸು

• ಶ್ರೀ ಚಂದ್ರಶೇಖರ ಶಿವಾಚಾರ್ಯರು, ಹುಕ್ಕೇರಿ

೧೯೬೨ ರೊಳಗೆ ನಾನು ಮೈಸೂರಿನೊಳಗ ಅಭ್ಯಾಸ ಮಾಡುತ್ತಿದ್ದೆ. ಜಪದಕಟ್ಟಿ ಮಠದಾಗ ಇರುsದು. ಮಹಾರಾಜ ಸಂಸ್ಕೃತ ಕಾಲೇಜಕ್ಕೆ ಅಧ್ಯಯನಕ್ಕೆ ಹೊಗುದು. ಅಲ್ಲಿ ಒಬ್ಬ ನನ್ನ ಗೆಳೆಯ ' ಬಾ, ನಿನಗ ನಿಮ್ಮ ಕಡೆಯವ್ನ ಪರಿಚಯಿಸ್ತಿನಿ ಅಂದ '. ' ಯಾರೋ ಆ ಮಾರಾಯಾ !' ಅಂತ ಹೋದೆ. " ಇವರು ಚನ್ನಬಸವ ದೇವರು ಅಥಣಿ ಮೋಟಗಿ ಮಠಕ್ಕೆ ಉತ್ತರಾಧಿಕಾರಿ ಆಗ್ಯಾನ. ನಮ್ಮ ಕಾಲೇಜಿನ್ಯಾಗ ಓತ್ತಾನ ಚೊಲೋ ಲೇಖನ. ಕವನ ಬರಿತಾನೂ " ಅಂದಾ. ನನಗೆ ತುಂಬಾ ಖುಷಿಯಾಯಿತು. ನನಗೆ ಲೇಖನ-ಕವನ ಬರೆಯುವವರನ್ನು ಕಂಡ್ರೆ ಭಾಳ ಪ್ರೀತಿ. ಸಾಹಿತ್ಯ ಸಂಬಂಧ ಸ್ನೇಹ ಆಗಿ ಮಾರ್ಪಾಟ ಆಯ್ತು. ಇಬ್ಬರು ಮೈಸೂರಿನ ವಾರ ಪತ್ರಿಕೆಗೆ ಲೇಖನ-ಕವನ ಬರಿತಿದ್ವಿ.

ಇವನಲ್ಲಿ ಎಷ್ಟು ಪ್ರತಿಭೆ ಇತ್ತಂದ್ರs ಸಂಜಿ ಮುಂದ ವಾರ್ತಾದಾಗ ಮಲ್ಲಿಕಾರ್ಜುನ ಮನ್ಸೂರ ನಿಧನರಾದ್ರು ಅಂತ ಸುದ್ದಿ ಬಂತು. ತಕ್ಷಣ ನಾನು ಜೆ.ಎಸ್. ಎಸ್. ಗುರುಕುಲಕ್ಕೆ ಓಡಿ ಹೋದೆ. ಚನ್ನಬಸು ಪ್ರಸಾದಕ್ಕೆ ಕುಳಿತಿದ್ದ. ನಾನು ಅಲ್ಲೇ ಹೋಗಿ ' ಮಲ್ಲಿಕಾರ್ಜುನ ಮನ್ಸೂರರು ಲಿಂಗೈಕ್ಯ ಆಗ್ಯಾರ. ನಾನು ಲೇಖನ ಬರಿತಿನಿ: ನೀ ಕವನ ಬರೀಬೇಕು ನೋಡ. ಮೊದಲ ಕವನ ಬರೀ ಆ ಮೇಲೆ ಊಟ ಮಾಡು ' ಎಂದೆ. ಪಕ್ಕದಲ್ಲಿರುವ ಗೆಳೆಯರು " ತಡಿಯೋ ಮಾರಾಯ. ಮೊದಲ ಊಟ ಮಾಡಲಿ. ಆ ಮೇಲೆ ಬರೀತಾನ ಎಷ್ಟು ಗಡಿಬಿಡಿ ನಿಂದು ಅಂದ್ರು". ನಾನು ' ಸುಮ್ಮನಿರ್ರೋ ನಿಮಗೇನ ತಿಳಿತ್ತೈತಿ ' ಎಂದೆ. ಚನ್ನಬಸವದೇವರ್ನ ಎಬ್ಬಿಸಿಯೇ ಬಿಟ್ಟೆ. ಮರುಮಾತಾಡದೆ ಸರಾ ಸರಾ ಹಾಳಿ ಪೆನ್ನು ತೊಗೊಂಡು ಕವನ ಬರೆದೇ ಬಿಟ್ಟಾ ! ಎಂತಾ ಅದ್ಭುತ ಕವನಾ ಅಂದ್ರ ಪಂಡಿತ್ರು ಬೆರಳು ಕಚ್ಚು ಹಾಂಗ ಇತ್ತು. ಮಾರನೇ ದಿನಾ ' ಮಹಾನಂದಿ ' ಪತ್ರಿಕೆಯೊಳಗ " ನಾದ ಬ್ರಹ್ಮ ಮಲ್ಲಿಕಾರ್ಜುನ ಮನ್ಸೂರ " ಎಂಬ ಕವನ ಮುಖ ಪುಟಕ್ಕೆs ಬಂತು.

ಮೈಸೂರಿಗೆ ರಂಭಾಪುರಿ ಜಗದ್ಗುರುಗಳು ಬಂದ್ರು. ಆಗ ಒಂದು ಕಾರ್ಯಕ್ರಮ ಜಗನ್ಮೋಹಿನಿ ಪ್ಯಾಲೇಸ್‌ನೊಳಗ ಹಮ್ಮಿಕೊಂಡಿದ್ವಿ, ' ಚನ್ನಬಸು, ನೀ ಉಪನ್ಯಾಸ ಮಾಡಬೇಕು ನೋಡು ' ಎಂದಾಗ ಹೂಂ ಅಂದ. ಕಂಚಿನ ಕಂಠದ ಚನಬಸು ಮೈಸೂರಿನ ಜನಕ್ಕ ಹುಚ್ಚು ಹಿಡಿಸಿಬಿಟ್ಟಾ.

ಚನ್ನಬಸು, ಜಡೆ ಮಹಾಸ್ವಾಮಿಗಳು ಮತ್ತು ನಾನು ಆತ್ಮೀಯ ಗೆಳೆಯರು. ಆಗ ಮೈಸೂರಿನೊಳಗ ಅಧ್ಯಯನ ಮಾಡ್ತಾ, ಸುಖ ಬರ್‍ಲಿ ದುಃಖ ಬರ್‍ಲಿ ಎಲ್ಲರೂ ಹಂಚಿಕೊಂಡು ಆನಂದವಾಗಿ ಇರ್‍ತಿದ್ವಿ. ಆ ನೆನಪು, ಆನಂದದ ಕಣ್ಣೀರು ತರ್ತಾವ. ಇವನಿಗೆ ನಿಸರ್ಗ ಅಂದ್ರ ಪ್ರಾಣ. ಮೈಸೂರು ಚಾಮುಂಡಿಬೆಟ್ಟಕ್ಕೆ ಹೋಗುದು, ಬೆಟ್ಟದ ಮ್ಯಾಲ ನಿಂತು ನಿಸರ್ಗ ನೋಡಿ ಆನಂದ ಪಡೂಋದು, ಅಲ್ಲೇ ಕವನ ಬರೆಯುವದು. ಇದು ಚನ್ನಬಸುನ ಹವ್ಯಾಸ.

ಇಬ್ಬರು ಕೂಡಿ ಸುತ್ತಮುತ್ತಲಿನ ಊರಿಗೆ ಹೋಗಿ ಪ್ರವಚನ ಮಾಡ್ತಿದ್ವಿ, ಬಯಲು ಸೀಮೆಯ ಭಾಷೆ ಆ ಜನರಿಗೆ ತಟ್ಟಿ ಭಾಳ ಖುಷಿ ಆಗುತ್ತಿತ್ತು. ಅಷ್ಟ ಅಲ್ಲ ಚೊಲೋ ಚೊಲೋ ಕಾರ್ಯಕ್ರಮ ಇದ್ರ ಮುಂದ ಹೋಗಿ ಕುಂತು ಕೇಳತಿದ್ವಿ. ಅವರು ಏನೇನು ಮಾತಾಡ್ತಿದ್ರು ಅದನ್ನ ಸಂಜಿಕ ಬಂದು ಚರ್ಚೆ ಮಾಡತಿದ್ವಿ.

ಮೈಸೂರಿನ ವಾರಪತ್ರಿಕೆಯಾದ ' ಪಂಚಾಚಾರ್ಯ ಪ್ರಭಾ 'ಗೆ ಹೋಗಿ ಪ್ರೂಫ್ ತಿದ್ದೋದು ಮಾಡ್ತಿದ್ವಿ. ಅಂದು ಪುಟ್ಟ ಬಾಯಿಂದ ಪುಟು ಪುಟು ಮಾತಾಡ್ತಿದ್ದ ಚೋಟುದ್ದದ ಚನ್ನಬಸು ಇಂದ ಇಷ್ಟ ಎತ್ತರ ಬೆಳದ ನಿಂತದ್ದು ನೋಡಿದರ ಕಣ್ಣೊಳಗಿಂದ ಬಳಾ ಬಳಾ ಅಂತ ನೀರು ಸುರಿತಾವ. ಸಂತೋಷಋನ ಕಾವಿಯೊಳಗ ಮುಚ್ಚಿ ಇಡಬೇಕಂದ್ರ ಹೆಚ್ಚಾಗಿ-ಹುಚ್ಚಾಗಿ ಕುಣಿತದ. ನನ್ನ ಚನಬಸು ಅಥಣಿ ಶಿವಯೋಗಿ ಹಾಂಗ ಆಗಲಿ !

■■

ಕವಿತಾ ಶಕ್ತಿ

- ಶ್ರೀ ಜಗದ್ಗುರು ಶಿವಾನಂದ ಮಹಾಸ್ವಾಮಿಗಳು, ಮೈಸೂರು

ವಾಕ್‌ಶಕ್ತಿ ನಿಮಗೆ ವಶವಾಗಿದೆ. ನಿಮ್ಮ ಮೈಮಾಟ, ಮಗುವಿನಂಥ ಮುಗ್ಧ ನಿಷ್ಕಲ್ಮಷ ಮನಸ್ಸು, ವಿನಯ - ವಿವೇಕ, ಭಕ್ತಿ - ಶ್ರದ್ಧೆ ನನ್ನ ಮನ ಗೆದ್ದಿವೆ.

ನೀವು ಸೇವಾದೀಕ್ಷಾ ಸ್ವೀಕರಿಸಿದ ನಂತರವೂ ಈ ಗುಣಗಳನ್ನು ಕಳೆದುಕೊಳ್ಳದಿದ್ದರೆ ಅಥಣೀಶನ ತಪೋಭೂಮಿಯಲ್ಲಿ ಜ್ಯೋತಿಯಂತೆ ಬೆಳಗುವಿರೆಂದು ನಂಬಿ ಆಶೀರ್ವದಿಸುತ್ತೇನೆ.

ಅಥಣಿಯ ಚಿರಂಜೀವಿ ಚನ್ನಬಸವದೇವರು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ೪-೫ ವರ್ಷಗಳಿಂದ ಪರಿಚಿತರಷ್ಟೆ. ಜಗದ್ಗುರು ಅನ್ನದಾನೇಶ್ವರ ಸಂಸ್ಥಾನಮಠಕ್ಕೆ ಆಗಾಗ್ಗೆ ಹಲವಾರು ಸಾಮಾಜಿಕ ಚಿಂತನೆಗಳನ್ನು ಹೊತ್ತು ಬರುತ್ತಿದ್ದರು. ಚರ್ಚಿಸುತ್ತಿದ್ದರು. ವೀರಶೈವ ಮತದ ಏಳಿಗೆಯಲ್ಲಿ ಗುರು ವಿರಕ್ತರ ಐಕ್ಯತೆಯ ಬಗ್ಗೆ ಸಮಾಜದ ಕೆಳಸ್ತರದಲ್ಲಿರುವ ಬಡವರ ಅರ್ಥವಿಲ್ಲದ ಆಚರಣೆಯ ಬಗ್ಗೆ ಜನರಲ್ಲಿರುವ ಮೌಢ್ಯತೆಯ ಬಗ್ಗೆ ಸಂಪ್ರದಾಯದ ಸುಳಿಗೆ ಸಿಕ್ಕ ಮಠಾಧಿಪತಿಗಳ ಸಮಾಜದ ಧಾರ್ಮಿಕ ಹಾಗೂ ರಾಜಕೀಯ ನೇತಾರರ ಬಗ್ಗೆ, ಹೆಣ್ಣು ಮಕ್ಕಳ ಬಗ್ಗೆ, ನಡೆದಂತೆ ನುಡಿಯದ, ನುಡಿದಂತೆ ನಡೆಯದ ಆದರ್ಶಪುರುಷರೆಂದು ತಮ್ಮನ್ನು ಹೊಗಳಿಸಿಕೊಳ್ಳುವ ಜನರ ಬಗ್ಗೆ ಕವನಗಳನ್ನು, ವಚನಗಳನ್ನು ರಚಿಸಿ, ಓದಿ ಪುರಸ್ಕಾರಗಳಿಸಿಕೊಳ್ಳುತ್ತಿದ್ದರು.

ಸ್ನಾತಕೋತ್ತರ ಪದವಿ ಪಡೆದು ಕರ್ನಾಟಕ ಮಾತ್ರವಲ್ಲ ನೆರೆಯ ಮಹಾರಾಷ್ಟ್ರ ಮತ್ತು ಆಂಧ್ರ ಮೊದಲಾದೆಡೆಗಳಲ್ಲಿ ಪ್ರವಚನದ ಕಂಪು ಸೂಸಿದರು. ಅವರ ಮಾತು ಯಾರನ್ನಾದರೂ ಮೋಡಿ ಮಾಡಬಲ್ಲದು. ಅವರ ಕವನ-ವಚನಗಳು ಚಿತ್ತಾಕರ್ಷಕವಾಗಿವೆ. ಅನ್ಯಾಯ, ಭ್ರಷ್ಟಾಚಾರ, ಸಂಪ್ರದಾಯದ ಮೌಢ್ಯಗಳ ವಿರುದ್ಧ ಸಿಂಹದಂತೆ ಗರ್ಜಿಸುತ್ತಾರೆ. ಆ ಚನ್ನಬಸವದೇವರ ನಿರರ್ಗಳ ವಾಣಿ ಸತ್ತಂಥವರನ್ನು ಬಡಿದೆಬ್ಬಿಸುವಲ್ಲಿ ಸಂದೇಹವೇ ಇಲ್ಲ. ಸಮಾಜ ಸೇವೆಯ ದೀಕ್ಷೆ ಪಡೆದು ಕೊಳ್ಳುತ್ತಿರುವ ಶ್ರೀಗಳು ಅಥಣೀಶನನ್ನು ಆದರ್ಶವಾಗಿರಿಸಿಕೊಳ್ಳಲಿ. ಅಥಣಿ ಕರ್ನಾಟಕ ತಪೋಭೂಮಿ. ಚನ್ನಬಸವದೇವರು ಆ ತಪೋಭೂಮಿಯ ಪುಣ್ಯಪುರುಷರಾಗಲೆಂದು ಹಾರೈಸುವೆ.

■■

ಬೆಳೆವ ಸಿರಿ

* ಶ್ರೀ ಮಲ್ಲಯ್ಯ ಸ್ವಾಮೀಜಿ, ಮೈಗೂರ

ಹುಟ್ಟುತ್ತಲೇ ಮರುಗ ತನ್ನ ಪರಿಮಳವನ್ನು ಹೊರಸೂಸುವಂತೆ ಪೂಜ್ಯ ಶ್ರೀ ಚನ್ನಬಸವದೇವರು ಬಾಲ್ಯದಲ್ಲಿಯೇ ತಮ್ಮ ಪ್ರತಿಭೆಯನ್ನು ತೋರಿದರು. ವೇದಮೂರ್ತಿ ಶ್ರೀ ಗುರುಮೂರ್ತಯ್ಯ ಸ್ವಾಮಿಗಳು ತಮ್ಮ ವರಪುತ್ರರಾದ ಶ್ರೀ ಚನ್ನಬಸವದೇವರನ್ನು ನನ್ನ ಕಡೆಗೆ ಅಧ್ಯಯನ ಮಾಡಲು ಕಳಿಸುತ್ತಿದ್ದರು. ನಾನು ಅವರಿಗೆ ಸಂಸ್ಕೃತ ಸುಭಾಷಿತಗಳು, ನೀತಿ ಶತಕ, ಭಗವದ್ಗೀತೆಯ ಶ್ಲೋಕಗಳನ್ನು ಹೇಳಿಕೊಡುತ್ತಿದ್ದೆ. ಅಂದಂದಿನ ಪಾಠವನ್ನು ಅಂದೇ ಕಂಠಪಾಠಮಾಡಿ ಹೇಳಿಯೇ ಬಿಡುತ್ತಿದ್ದರು. ಆಗ ಮೋಟಗಿ ಮಠದ ಹಿರಿಯ ಪೂಜ್ಯರು ಇವರನ್ನು ಇನ್ನೂ ಸ್ವೀಕಾರ ಮಾಡಿರಲಿಲ್ಲ. ಇವರು ಯಾವುದಾದರೂ ಒಂದು ಪೀಠಕ್ಕೆ ಅಧಿಕಾರಿಯಾದರೆ ನಮ್ಮ ನಾಡಿನ ಭಾಗ್ಯೋದಯವಾಗುತ್ತದೆ ಎಂದು ಮನಸ್ಸು ಅಂದು ಹೇಳುತ್ತಿತ್ತು. ಮುಂದೆ ಕೆಲವು ದಿನಗಳಲ್ಲಿ ಅಥಣಿಯ ಮೋಟಗಿಮಠದ ಪೂಜ್ಯರಾದ ಶ್ರೀ ಗುರುಬಸವ ಮಹಾಸ್ವಾಮಿಗಳು ಇವರನ್ನು ತಮ್ಮ ಶ್ರೀ ಮಠಕ್ಕೆ ಉತ್ತರಾಧಿಕಾರಿಗಳೆಂದು ಸ್ವೀಕಾರ ಮಾಡಿಕೊಂಡರು. ಬಸವರಾಜ ಚನ್ನಬಸವದೇವರಾಗಿ ಶಿವಯೋಗ ಮಂದಿರ ಸೇರಿದರು.

ಇಂದು ಶ್ರೀ ಚನ್ನಬಸವದೇವರು ನಾಡಿನ ಕಣ್ಮಣಿಯಾಗಿ ಬೆಳಗುತ್ತಿದ್ದಾರೆ. ವಯಸ್ಸಿಗೆ ಮೀರಿದ ಅನುಭವ ಅವರದು. ಅರಳು ಹುರಿದಂತೆ ಮಾತನಾಡುವ ಇವರು ವಚನೋದ್ಯಾನಕ್ಕೆ ಚೈತ್ರದ ಮೆರಗು ನೀಡಿದವರು. ಅವರ ವಚನಗಳು ಜನ ಮನದಲ್ಲಿ ನಿತ್ಯ ತರಂಗಗೊಳ್ಳುತ್ತಿವೆ. ಜಾತಿ, ಮತ, ಪಂಥ, ಸಂಪ್ರದಾಯಗಳನ್ನು ಮೀರಿ ಬೆಳೆಯುತ್ತಿರುವ ಧೀರ ಯುವ ಸ್ವಾಮೀಜಿ ಮಠಾಧಿಪತಿಗಳಿಗೆ ಮಾದರಿಯಾಗಲಿದ್ದಾರೆ. ಇವನಾರವ ಎಂದೆನಿಸದೆ ಇವ ನಮ್ಮವ ಎಂಬ ಭಾವದಿಂದ ಇಡೀ ಮನುಕುಲವನ್ನೇ ಪ್ರೀತಿಸುವ ಹದುಳ ಹೃದಯದ ಪೂಜ್ಯ ಚನ್ನಬಸವದೇವರು ಸಕಲ ಜೀವಾತ್ಮರಿಗೆ ಲೇಸ ಬಯಸುವ ಮಹಾಮಹಿಮರು. ಒಂದು ಕಾಲಕ್ಕೆ ' ಅಥಣಿ ' ಎಂದಾಕ್ಷಣ ಪೂಜ್ಯಶ್ರೀ ಮುರುಘೇಂದ್ರ ಮಹಾಸ್ವಾಮಿಗಳವರ ನೆನಪು ತಟ್ಟನೆ ಸ್ಮೃತಿ ಪಟಲದ ಮೇಲೆ ಮೂಡುತ್ತಿತ್ತು. ಆದರೆ ಇಂದು ಹೊಸ ಪೀಳಿಗೆಗೆ ' ಅಥಣಿ ' ಎಂದಾಕ್ಷಣವೇ ' ಅಥಣೀಶ 'ನ ಅನುಭಾವ ವಾಣಿ ಕೇಳುತ್ತದೆ. ■■

ಡೈನಾಮಿಕ್ ದೇವರು

• ಶ್ರೀ ಮಲ್ಲಿಕಾರ್ಜುನ ದೇವರು, ಸತ್ತಿ

ಚನ್ನಬಸವದೇವರನ್ನು ನಾನು ಆಗಾಗ ಪ್ರೀತಿಯಿಂದ 'ನೀವು ಬರಿ ಚನ್ನಬಸವದೇವರಲ್ಲ; ನೀವೊಬ್ಬ ಡೈನಾಮಿಕ್ ದೇವರೆಂದು' ಕರೆಯುತ್ತೇನೆ. 'ಡೈನಾಮಿಕ್' ಎಂದರೆ ಶಕ್ತಿಯುತ, ಚಲನಾತ್ಮಕ (Powerfull always moving). ಸ್ವಾಮಿ ವಿವೇಕಾನಂದರು ಹೇಳುವಂತೆ ಅವರು ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಶಕ್ತಿವಂತರು. ಅವರು ಸದಾ ಚಲಿಸುವ ಚೇತನ ! ಒಂದು ದಿನವು ಸುಮ್ಮನೆ ಕುಳಿತಿರುವುದನ್ನು ನಾನು ನೋಡಿಲ್ಲ ! ಅವರು ನನಗೆ ತುಂಬಾ ಹತ್ತಿರದವರು. ಅವರ ಪ್ರತಿಯೊಂದು ಹೆಜ್ಜೆಯನ್ನು ಬಹು ತೀಕ್ಷ್ಣವಾಗಿ ಗಮನಿಸಿದ್ದೇನೆ. ನಾನು ಬಹಳ ದೇವರುಗಳನ್ನು ಹಾಗೂ ಸ್ವಾಮಿಗಳನ್ನು ನೋಡಿದ್ದೇನೆ. ಆದರೆ ಚನ್ನಬಸವದೇವರು ಒಬ್ಬ ವಿಭಿನ್ನ ಹಾಗೂ ವಿಶಿಷ್ಟ ದೇವರು.

ಅವರು ಮೂಢನಂಬಿಕೆ, ಕಂದಾಚಾರ, ಜಾತೀಯತೆ, ಧರ್ಮಾಂಧತೆಗಳನ್ನು ಕೆಚ್ಚೆದೆಯಿಂದ ವಿರೋಧಿಸುವ ಧೈರ್ಯಶಾಲಿಗಳು. ಸಂಗೀತ, ಸಾಹಿತ್ಯ, ಕಲೆ, ಜ್ಞಾನ, ವಿಜ್ಞಾನಗಳಲ್ಲಿ ಜ್ಞಾನವುಳ್ಳ ಚನ್ನಬಸವದೇವರು ತಮ್ಮ ಸುಮಧುರ ಕಂಠದಿಂದ ಹಾಡಿದರೆ ಭಕ್ತರ ಮನವು ಭಾವದಲ್ಲಿ ಓಲಾಡುತ್ತದೆ. ಅವರ ವಚನಗಳು ಅತ್ಯಂತ ಮಧುರ ಹಾಗೂ ಆಹ್ಲಾದಕರ. ಎಲ್ಲರೊಳಗೆ ಬೆರೆತು ಬದುಕುವದೊಂದು ಅವರ ವಿಶೇಷ ಗುಣ. ಇವರನ್ನು ಅರ್ಥ ಮಾಡಿಕೊಂಡು ಬೆಳೆಸುವ ಭಾರ ಭಕ್ತವೃಂದಕ್ಕೆ ಸೇರಿದ್ದು.

■■

ಅಪರಂಜಿ

● ಶ್ರೀ ಜ್ಞಾನಮೂರ್ತಿ ದೇವರು, ಮೈಸೂರು

ಸಕಲರಿಗೂ ಲೇಸನ್ನೇ ಬಯಸಿದ ಬಸವಾದಿ ಶಿವಶರಣರ ಪುಣ್ಯಪಥದಲ್ಲಿ ಪುಟ್ಟ ಹೆಜ್ಜೆಯನ್ನಿಡುತ್ತ ದಿಟ್ಟತನದಿಂದ ಮಾತನಾಡುವ ಮೋಡಿಗಾರ ಶ್ರೀಚನ್ನಬಸವ ದೇವರು. ಅವರವರ ಭಾವಕ್ಕೆ ಅವರವರ ವೇಷದಲಿ ಅವರೆಲ್ಲರಿಗೆ ಗುರು ನೀನೊಬ್ಬನೇ ಎನ್ನುವಂತೆ, ಶ್ರೀಯುತರು ಆತ್ಮೀಯ ಗುರುವಾಗಿ, ಹೃದಯವಂತ ಸ್ನೇಹಿತರಾಗಿ, ಮಾತೃಹೃದಯದ ತಾಯಿಯಾಗಿ, ಕ್ರಿಯಾಶೀಲ ಕವಿಯಾಗಿ, ಶಿಸ್ತಿನ ಸಿಪಾಯಿಯಾಗಿ, ಸಮಾಜದ ಶ್ರೇಷ್ಠ ಸಂಘಟಕರಾಗಿ ನನಗೆ ಕಂಡ ರೀತಿ ನಿಜಕ್ಕೂ ಖುಷಿ ನೀಡುತ್ತದೆ.

ಗುರುಕುಲದ ಒಂದು ನೆನಪು :

ಮೈಸೂರು ಸುತ್ತೂರ ಮಠದ ಶಿವರಾತ್ರೀಶ್ವರ ಗುರುಕುಲ ಸುಮಾರು ೨೫ ಸಾಧಕರ ಸಾಂಸ್ಕೃತಿಕ ಕೇಂದ್ರ ! ತಮ್ಮ ಬದುಕನ್ನೇ ಸ್ವಾಮಿತ್ವದ ಸಾಧನೆಗಾಗಿ ಮೀಸಲಿರಿಸಿದ ಯುವ ಯತಿಗಳಿವರು. ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಕಾರುಣ್ಯ ಶ್ರೀರಕ್ಷೆಯಲ್ಲಿ ಬೆಳೆಯುವ ಇವರೆಲ್ಲರ ಮಧ್ಯೆ ವಿಭಿನ್ನವಾಗಿ ಎದ್ದು ತೋರುವವರೆಂದರೆ ನಮ್ಮ ಚನ್ನಬಸವದೇವರು. ಯಾವದೇ ಸಾಹಿತ್ಯ ಚಟುವಟಿಕೆಯಿರಲಿ. ಸಂಗೀತ, ಧರ್ಮಪ್ರಸಾರ, ಪ್ರವಚನ, ಸಮಾಜ ಸಂಘಟನೆ ಈ ಎಲ್ಲದರಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡು ಗುರುಕುಲದ ಕೀರ್ತಿಗೆ ಪಾತ್ರರಾದವರು. ಮೈಸೂರಿನ ಭಾಗದ ತುಂಬೆಲ್ಲ ಸಂಚರಿಸಿ ಮಲ್ಲಿಗೆಯ ಸುವಾಸನೆ ಪಸರಿಸುವಂತೆ ತಮ್ಮ ಹದುಳ ಸ್ವಭಾವವನ್ನು ಹೊರಸೂಸಿದರು.

. ' ಅಥಣೀಶ ' ಎಂಬ ವಚನಾಂಕಿತದ ಮೂಲಕ ಆಧುನಿಕ ವಚನಗಳನ್ನು ಪ್ರಗತಿಪರ ಚಿಂತನೆಗಳನ್ನು ಬಿಚ್ಚಿಟ್ಟು ಸಮಾಜದ ಹಾಗೂ ಸ್ವಾಮಿಗಳ ಸೋಗಲಾಡಿತನವನ್ನು ಬಯಲಿಗೆಳೆದರು. ಒಬ್ಬ ಸ್ವಾಮಿಗಳಾಗಿ ಮತ್ತೊಬ್ಬ ಸ್ವಾಮಿಗಳ ಬಗ್ಗೆ ಬರೆಯುವದೆಂದರೆ ಅದೇನು ಹಗುರವಾದ ಮಾತಲ್ಲ. ಯಾರಲ್ಲಿ ನೈತಿಕ ಧೈರ್ಯ, ಆಧ್ಯಾತ್ಮಿಕ ಸ್ಥೈರ್ಯವಿರುತ್ತದೆಯೋ ಅವರು ಮಾತ್ರ ಇಂತಹ ಮಾತುಗಳನ್ನಾಡಲು ಸಾಧ್ಯ. ಅಂತಹ ಎದೆಗಾರಿಕೆಗೆ ನಾನು ಬೆರಗಾಗುತ್ತೇನೆ.

ಬೇಂದ್ರೆಯವರು ಹೇಳುವಂತೆ–

ಮಾತು ಮಾತು ಮಥಿಸಿ ಬಂದ ನಾದದ ನವನೀತ
ಅರ್ಥವಿಲ್ಲ, ಸ್ವಾರ್ಥವಿಲ್ಲ ಇದು ಬರಿಯ ಭಾವಗೀತ

ಎನ್ನುವ ಕವಿಯ ಆಂತರ್ಯ ಧ್ವನಿ ಇವರ ಹೃದಯದಲ್ಲಿ ಮೊಳಗುತ್ತಿದೆ. ಇವರ ಜೊತೆಯಲ್ಲಿರುವದೇ ಒಂದು ಪುಣ್ಯ ವಿಶೇಷ. ಐತಿಹಾಸಿಕ ಸ್ಥಳಗಳನ್ನು ನೊಡುವದು. ಸಾಹಿತಿಗಳನ್ನು ಭೇಟಿ ಮಾಡುವುದು, ವಿಚಾರವಂತ ಲೇಖಕರನ್ನು ಸಂದರ್ಶಿಸುವದು, ಸಂಗೀತ ಕೇಳುವದು ಹೀಗೆ ಹತ್ತು ಹಲವು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ನನ್ನಂಥವರನ್ನು ತಮ್ಮ ಭಾವಲೋಕಕ್ಕೆ ಕರೆದೊಯ್ಯುವ ಸಹೃದಯ ಭಾವಜೀವಿ.

■■

ಪಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಚೈತನ್ಯದ ಚಿಲುಮೆ

● **ಶ್ರೀ ಶರಣಬಸವದೇವರು**, ಟೆಂಗಳಿ

ಎಂಟು ವರ್ಷಗಳ ಹಿಂದಿನ ಮಾತು. ಹುಬ್ಬಳ್ಳಿಯ ಮೂರುಸಾವಿರ ಮಠದ ಕುಮಾರೇಶ್ವರ ಶಿವಯೋಗಿ ಸಾಧಕ ಸಂಘದಲ್ಲಿದ್ದುಕೊಂಡು ಪಿ.ಯು.ಸಿ. ಓದುತ್ತಿದ್ದೆ. ಅಲ್ಲಿನ ಹಿರಿಯ ಸಾಧಕರು ಚನ್ನಬಸವದೇವರ ಬಗೆಗೆ ಮೆಚ್ಚುಗೆಯ ಮಾತು ಆಡುತ್ತಿದ್ದರು. ಅವರ ಮಾತು ಕೇಳಿ ನನಗೆ ಅವರನ್ನು ಕಾಣುವ ಬಯಕೆಯಾಯಿತು. ಒಂದು ದಿನ ಇದ್ದಕ್ಕಿದ್ದಂತೆಯೇ ಅವರು ಮೂರುಸಾವಿರ ಮಠದಲ್ಲಿ ನನಗೆ ಪ್ರತ್ಯಕ್ಷರಾದರು. ನನಗೂ ಆನಂದ, ಆಶ್ಚರ್ಯ! ಅಂದಿನಿಂದ ಇಂದಿನವರೆಗೂ ಅದೇ ಪ್ರೇಮ, ಅದೇ ವಿಶ್ವಾಸ, ಅದೇ ಬಾಂಧವ್ಯವನ್ನಿಟ್ಟುಕೊಂಡು ಬಂದಿರುವರು.

ಅಚ್ಚರಿಗೊಳಿಸುವ ಸಾಹಸಮಯ ಸಾಧನೆ ಅವರದು. ಎಷ್ಟೋ ಕಷ್ಟಗಳು ಮುಗಿಬಿದ್ದರೂ ಎಡರುಗಳು ಬಂದರೂ ಎದೆಗೆಡದೆ ದಿಟ್ಟತನದಿಂದ ಸಾಧನೆಯ ಪಥದಲ್ಲಿ ಮುನ್ನುಗ್ಗಿದರು. ಅವರು ವಿದ್ಯಾಭ್ಯಾಸವನ್ನು ಮಧ್ಯದಲ್ಲಿ ನಿಲ್ಲಿಸಬೇಕಾಗಿ ಬಂದರೂ ಸ್ವಾಧ್ಯಾಯ ಶೂರರಾಗಿ ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು. ವೀರಶೈವ ಧರ್ಮದ ತತ್ವಗಳನ್ನು ಅರಿತು, ಧರ್ಮಗಳ ಮರ್ಮ ತಿಳಿದು, ಬಸವ ತತ್ವವನ್ನು ಪ್ರಚಾರ ಮಾಡುತ್ತಿರುವ ಚನ್ನಬಸವದೇವರದ್ದು ಯೌಗಿಕ ನಿಲುವು.

ಇವರ ಬಗ್ಗೆ ಬಹಳ ಬರೆಯಬೇಕೆನಿಸುತ್ತದೆ. ಹೃದಯ ಬಹಳ ಬರೆಯಬೇಡ ಎಂದು ತಡೆಯುತ್ತದೆ. ಯಾಕೆಂದರೆ ಅವರ ಬಗ್ಗೆ ಬರೆಯುವದೆಂದರೆ ನನ್ನ ಬಗ್ಗೆ ಬರೆದುಕೊಂಡಂತೆ! ಸಾಕಿಷ್ಟು. ನಮ್ಮಿಬ್ಬರ ಅಂತರಂಗದ ಆರಾಧ್ಯರಾದ ಶಿವಯೋಗ ಮಂದಿರದ ಸಂಸ್ಥಾಪಕ ಹಾನಗಲ್ಲ ಕುಮಾರ ಸ್ವಾಮಿಗಳು, ಬಸವಾದಿ ಪ್ರಮಥರು, ಕನ್ನಡ ತಾಯಿ ಅವರಿಗೆ ಆಯುಷ್ಯ, ಆರೋಗ್ಯ, ಸಕಲ ಸಂಪನ್ಮೂಲಗಳನ್ನು ಕರುಣಿಸಿ ಕಾಪಾಡಲಿ. ಅವರಿಂದ ಈಗ ಬಂದಿರುವದಕ್ಕಿಂತಲೂ ಹೆಚ್ಚು ಹೊಸ ಕೃತಿಗಳು ಹೊರಬರಲಿ. ಕನ್ನಡ ಸಾಹಿತ್ಯದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಲಿ.

■■

ಕಾವಿಯಲ್ಲಿ ಅರಳಿದ ಕಮಲ

• ದಾನಪ್ಪ ಜತ್ತಿ

ಖಾಕಿ, ಖಾದಿ, ಕಾವಿ ಇವು ನಿಷ್ಠೆ, ತ್ಯಾಗ, ವೈರಾಗ್ಯದ ಸಂಕೇತಗಳು. ಸ್ವಾತಂತ್ರ್ಯದ ಸಂದರ್ಭದಲ್ಲಿ ದೇಶದ ಗೌರವಕ್ಕೆ ಪಾತ್ರವಾಗಿದ್ದ ಈ ತ್ರಿವರ್ಣಗಳು ಇಂದು ಅಪಮೌಲ್ಯಗೊಂಡು, ಅಪಹಾಸ್ಯದ ವಸ್ತುಗಳಾಗಿವೆ. ದೇಶ, ಸಮಾಜ, ಸಂಸ್ಕೃತಿ ಬಿಕ್ಕಟ್ಟಿನಲ್ಲಿವೆ. ಇಂಥ ಸಂದರ್ಭದಲ್ಲಿ ಪಾವಿತ್ರ್ಯಕ್ಕೆ ಚೈತ್ರದ ಚಿಗುರಿನ ಬಣ್ಣ ಹಾಕುತ್ತಿರುವ ಅಥಣಿಯ ಶ್ರೀ ಚನ್ನಬಸವದೇವರು ಈಗ ನಾಡಿನ ಗಮನ ಸೆಳೆದಿದ್ದಾರೆ.

ವಿದ್ಯೆ, ವಿದ್ಯೆಗೆ ಬೇಕಾದ ವಿನಯ, ವಿನಯಕ್ಕೆ ಬೇಕಾದ ಸೌಜನ್ಯ, ಸೌಜನ್ಯಕ್ಕೆ ಬೇಕಾದ ಮೃದು ವಚನ, ವಚನಕ್ಕೆ ಬೇಕಾದ ಅನುಭಾವ, ಅನುಭಾವಕ್ಕೆ ಬೇಕಿರುವ ಸಾಧನೆ, ಸಾಧನೆಗೆ ಬೇಕಿರುವ ಸಮಯ, ಸಮಯಕ್ಕೆ ಬೇಕಿರುವ ಶಾಂತಿ, ಮೌನ, ಶೂನ್ಯ, ಈ ಎಲ್ಲವನ್ನೂ ಶ್ರೀ ಚನ್ನಬಸವದೇವರು ಸಾಧಿಸಿದ್ದಾರೆ. ಅಥಣಿಯ ಶ್ರೀ ಮೋಟಗಿಮಠ ಸಾಧನೆಯ ಶ್ರೀಗಿರಿ. ಅದರ ಶಿಖರ ಶ್ರೀ ಚನ್ನಬಸವದೇವರು.

ಮಠದಿಂದ ಘಟ ಬೆಳಗಬೇಕು. ಮಠದಿಂದ ಸಮಾಜ ಬೆಳಗಬೇಕು. ಚನ್ನಬಸವದೇವರ ಬುದ್ಧಿ ಪಾದರಸ. ಮುಖದಲ್ಲಿ ಸದಾ ಮಂದಹಾಸ. ಹೆಜ್ಜೆ-ಹೆಜ್ಜೆಯಲ್ಲಿಯೂ ಶರಣ ತತ್ವದ ಗೆಜ್ಜೆನಾದ. ನುಡಿ-ನುಡಿಗಳಲ್ಲಿಯೂ ಅನುಭಾವದ ಆವಿಷ್ಕಾರ. ಅವರ ಸೃಜನಾತ್ಮಕ ಮನಸ್ಸು ಕಥೆ, ಕವಿತೆ, ವಚನ, ಪ್ರವಚನಗಳಿಗೆ ಮಾತ್ರ ಸೀಮಿತಗೊಳ್ಳದೆ ಒಡೆದ ಮನ, ಬಿದ್ದ ಮನೆ, ಕಳೆ ಕಳೆದುಕೊಂಡ ಬದುಕು, ವ್ಯಕ್ತಿತ್ವಗಳಿಗೆ ಹೊಸ ಶಕ್ತಿ ನೀಡುವುದನ್ನು ನೋಡಿ ಆಶ್ಚರ್ಯಗೊಂಡಿದ್ದೇನೆ. ಅವರ ದಿವ್ಯ ಸಾನಿಧ್ಯವೇ ರಸಾನುಭವದ ಒಂದು ಅಮೃತಗಳಿಗೆ.

ಕಾವಿ ಹಾಕಿದ ಮಾತ್ರಕ್ಕೆ ಸ್ವಾಮಿ ಆಗಲಾರ.
ಖಾದಿ ತೊಟ್ಟ ಮಾತ್ರಕ್ಕೆ ದೇಶ ಭಕ್ತನಾಗಲಾರ.
ಖಾಕಿ ಉಟ್ಟ ಮಾತ್ರಕ್ಕೆ ಸೈನಿಕನಾಗಲಾರ.
ದಾನೇಶ ಪ್ರಿಯ ದೇವಾ
ಕಾವಿ, ಖಾದಿ, ಖಾಕಿಗಳ ಮರ್ಮವ ತಿಳಿದ
ಅಥಣೇಶಂಗಲ್ಲದೆ ಈ ಮೂರು ಮೂರ ನೋಡಾ

ನಾನು ಕಂಡ ದೇವರು

• ಶರಣಪ್ಪ ಗುಡದಿನ್ನಿ

ಏನು ನೀನು ದೇವರನ್ನು ಕಂಡಿದ್ದೀಯಾ ? ಹಾಗಾದರೆ ಎಲ್ಲಿ ? ಯಾವಾಗ ? ದೇವರು ಎಂಥವನು ಎಂದು ನನ್ನನ್ನು ಎಲ್ಲರೂ ಕೇಳಬಹುದು. ರೂಪ, ಗುಣ, ಆಕಾರವಿರದ ದೇವರನ್ನು ಕಾಣುವುದೆಂದು ? ಕಂಡವರು ಯಾರಾದರೂ ನಮಗೆ ಹೇಳಿದ್ದಾರೆಯೇ ? ಇಲ್ಲ. ಹಾಗಾದರೆ " ನಾನು ದೇವರನ್ನು ಕಂಡಿದ್ದೇನೆ ". ಕಂಡದ್ದನ್ನು ಕಂಡಂತೆಯೇ ಇಲ್ಲಿ ಹೇಳ ಬಯಸುತ್ತೇನೆ. ನಾನು ಕಂಡ ದೇವರು ಅಥಣಿಯ ' ಶ್ರೀ ಚನ್ನಬಸವದೇವರು ' ಅದು ಶ್ರೀ ಮೋಟಗಿಮಠದಲ್ಲಿ. ಇವರು ಮಾತನಾಡುವ ದೇವರು, ಚಲಿಸುವ ದೇವರು. " ದೇವರು ಸದಾ ಒಳ್ಳೆಯದನ್ನೇ ಬಯಸುವನು; ಒಳ್ಳೆಯದನ್ನೇ ಮಾಡುವನು, ದೇವರು ಕರುಣಾಶಾಲಿ " ಎಂದು ಒಪ್ಪುವುದಾದರೆ ಆ ದೇವನಲ್ಲಿ ಇರಬೇಕಾದ ಎಲ್ಲಾ ಗುಣಗಳು ಈ ಸ್ವಾಮೀಜಿಯವರಲ್ಲಿ ಇವೆ. ಅಂತೆಯೇ ಇವರು ನಾನು ಕಂಡ ದೇವರು.

ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ನನಗೆ ' ವಚನತರಂಗ ' ಎಂಬ ಆಧುನಿಕ ವಚನ ಸಂಗ್ರಹದ ಹೊತ್ತಿಗೆ ನೋಡುವ ಸದಾವಕಾಶ ಗದುಗಿನ ಪ್ರಭುಗ್ರಾಫಿಕ್ಸ್'ದಲ್ಲಿ ದೊರಕಿತ್ತು. ಅರ್ಧಗಂಟೆ ಅಲ್ಲಿಯೇ ಕುಳಿತು ಆ ವಚನ ಸಂಕಲನವನ್ನು ಕಣ್ಣಾಡಿಸಿದೆ. ಎಂತಹ ಅದ್ಭುತ ವಿಚಾರಗಳು ಆ ಯುವಚೇತನದಲ್ಲಿ ? ಎಂದು ಅಚ್ಚರಿಗೊಂಡೆ. ನಂತರ ಶ್ರೀಮಠದಿಂದ ಆ ಹೊತ್ತಿಗೆಯನ್ನು ತರಿಸಿಕೊಂಡು ಓದಿದೆ. ಮನನಗೈದೆ. ಅದರಲ್ಲಿಯ ನಾಲ್ಕು (ವಚನ) ಮುತ್ತುಗಳನ್ನು ಆಯ್ದು ನಾನು ಸಂಪಾದಿಸಿದ ' ಅನುಭಾವಿಗಳ ಅಣಿಮುತ್ತುಗಳು ' ಹಾರದಲ್ಲಿ ಪೋಣಿಸಿರುವೆ. ಅಥಣೀಶ ಎಂಬುದು ಅವರ ವಚನಾಂಕಿತ.

ಶ್ರೀ ಚನ್ನಬಸವದೇವರು ವಚನಕಾರರು, ಕವಿಗಳು, ಸಾಹಿತಿಗಳು. ಮಿಗಿಲಾಗಿ ಸಮಾಜದ ಚಿಂತಕರು, ವಿಚಾರವಂತರು, ಕ್ರಿಯಾಶೀಲ ಯುವ ಮಠಾಧೀಶರು. ಪ್ರಸನ್ನತೆ ಎಂಬುದು ಎಲ್ಲಿಯೂ ಹೊರಗೆ ಮಾರಾಟಕ್ಕೆ ಸಿಗುವುದಿಲ್ಲ. ಅದನ್ನು ನಾವು

ಸೃಷ್ಟಿಸಿಕೊಳ್ಳಬೇಕು ಎನ್ನುವ ಹಾಗೆ ಅವರಿರುವ ತಾಣ ಶ್ರೀ ಮೋಟಗಿಮಠವು ಒಂದು ಪವಿತ್ರವಾದ, ಪ್ರಶಾಂತವಾದ ಶಾಂತಿಧಾಮ, ಅನುಭವ ಮಂಟಪ, ವೈಚಾರಿಕತೆಯ ಮಹಾಮಂದಿರ.

ಮೊನ್ನೆ ಅಂದರೆ ದಿನಾಂಕ ೧೭-೧೦-೨೦೦೩ ರಂದು ಪೂಜ್ಯಶ್ರೀಗಳನ್ನು ಕಾಣಲು ನಾನು ಹೋಗಿದ್ದೆ. ನನ್ನ ಬಹುದಿನದ ಕನಸು ನನಸಾದಂತಾಯಿತು. ನನ್ನನ್ನು ಕಂಡಕೂಡಲೇ ಗುರುತುಹಿಡಿದು 'ಬನ್ನಿ ಗುಡದಿನ್ನಿಯವರೆ, ಕ್ಷೇಮವೇ ?' ಎಂದು ಅತ್ಯಂತ ಪ್ರೀತಿಯಿಂದ ಬರಮಾಡಿಕೊಂಡು ಕುಳ್ಳಿರಿಸಿದರು. ಆಗ ಅಲ್ಲಿ ಅವರೊಂದಿಗೆ ಕಳೆದ ಅಲ್ಪ ಅವಧಿಯನ್ನು ಅವರಲ್ಲಿ ನಾನು ಕಂಡ ದೈವತ್ವವನ್ನು ಇಲ್ಲಿ ವಿಷದಪಡಿಸಬಯಸುವೆ.

ನಾವು 'ದಸರಾ' ಹಬ್ಬವನ್ನು ಬನ್ನಿ ಪತ್ರಿಯ ಪರಸ್ಪರ ವಿನಿಮಯ ಮಾಡುವುದರೊಂದಿಗೆ ಬಹುಕಾಲದಿಂದಲೂ ನಾಡಿನಾದ್ಯಂತ ಆಚರಿಸುತ್ತ ಬಂದಿದ್ದೇವೆ. ಆದರೆ ಅಥಣಿಯ ಶ್ರೀಮಠದಲ್ಲಿ ಪೂಜ್ಯರು ಆಚರಿಸಿದ 'ದಸರಾ' ಹಬ್ಬವೇ ಒಂದು ವಿಶಿಷ್ಟ.

ಪ್ರತಿಯೊಬ್ಬರು ವಿಜಯದಶಮಿಯಂದು ಬನ್ನಿಗಿಡದಿಂದ ಪತ್ರಿಹರಿದು ತಂದರೆ ಅದೆಷ್ಟು ಗಿಡಗಳು ಖಾಲಿಯಾಗುತ್ತವೆ, ಎಷ್ಟೊಂದು ಪರಿಸರ ನಾಶವಾಗುತ್ತದೆ. ಅದರ ಬದಲಾಗಿ ಸಾಂಕೇತಿಕವಾಗಿ 'ಬನ್ನಿ'ಯ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಶರಣರ ವಚನಗಳನ್ನು ಶುಭಾಶಯಕ್ಕಾಗಿ ಬಳಸಿಕೊಳ್ಳಬೇಕು. ಇದರಿಂದ ಪರಿಸರ ಸಂರಕ್ಷಣೆಯಾಗುತ್ತದೆ. ಹಿಂದೆ ಶರಣರು ಗಿಡಗಳಿಂದ ತಾನಾಗಿ ಕಳಚಿದ ಪತ್ರಿಗಳನ್ನು ಪೂಜೆಗೆ ಬಳಸುತ್ತಿದ್ದರು ಎನ್ನುವ ವೈಜ್ಞಾನಿಕ ಸತ್ಯವನ್ನು ಅವರು ತಿಳಿಸಿದರು. ಬರೀ ಮಾತಿನಲ್ಲಿ ಹೇಳದೆ ಈ ಸಲದ 'ದಸರಾ'ವನ್ನು ತಮ್ಮ ಶ್ರೀಮಠದಲ್ಲಿ ಆಚರಿಸಿದ ಬಗೆಯನ್ನು ವಿವರಿಸಿದರು.

ಅವರ ಜೊತೆಯಲ್ಲಿ ಕಳೆದ ೩ ಗಂಟೆಯ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಸಾಹಿತ್ಯ, ಸಂಪ್ರದಾಯ, ಅಧ್ಯಾತ್ಮ, ಶಿವಯೋಗ, ಧ್ಯಾನ ಏನೇನೋ ? ಹತ್ತು ಹಲವು ವಿಷಯಗಳ ಬಗೆಗೆ ನಾವು ಚಿಂತನೆಗೈಯ್ದೆವು. ಧ್ಯಾನದಲ್ಲಿ ಮನದ ಏಕಾಗ್ರತೆ ಸಾಧಿಸುವುದು ಹೇಗೆ ? ಎಂದು ಅವರಲ್ಲಿ ಪ್ರಶ್ನಿಸಿದಾಗ ಅವರು ಹೇಳಿದ್ದು " ಆದಷ್ಟು ನಮ್ಮ ಬಯಕೆಗಳನ್ನು ಕಡಿಮೆಮಾಡಿಕೊಳ್ಳಬೇಕು. ಬಯಕೆಗಳು, ಆಲೋಚನೆಗಳು ಮನವನ್ನು ಚಂಚಲಿಸುವುದು ಸ್ವಾಭಾವಿಕ, ಆದರೆ ನಾವು ಅವುಗಳ ಬಗೆಗೆ ಉದಾಸೀನರಾಗಬೇಕು. ಅಂದಾಗ ಅವು ತಾನೇ ತಾನಾಗಿ ದೂರವಾಗುತ್ತವೆ. ಮನಸ್ಸನ್ನು ಎಂದಿಗೂ ಉದ್ವಿಗ್ನಗೊಳಿಸಬಾರದು " ಎನ್ನುವ ತಮ್ಮ ಅನುಭವ ಸಿದ್ಧಿಯನ್ನು ತೋರಿಸಿಕೊಟ್ಟರು.

ಪ್ರಸನ್ನವದನರು, ತೇಜಸ್ವಿಗಳು, ಸಮಾಜದ ಹಿತಚಿಂತಕರು, ಸಾಹಿತ್ಯ, ಕಲೆ, ಸಂಗೀತ ಪ್ರೇಮಿಗಳು ಆದ ಶ್ರೀ ಚನ್ನಬಸವದೇವರನ್ನು ಪಡೆದ ಅಥಣಿಯ ಜನರು ನಿಜಕ್ಕೂ ಪುಣ್ಯಶಾಲಿಗಳು. ಕನ್ನಡನಾಡಿನ ಯುವ ಮಠಾಧೀಶರಲ್ಲಿ ಒಬ್ಬ ಅಪರೂಪದ ಸ್ವಾಮೀಜಿಯವರು ಇವರು. ಅನಿವಾರ್ಯ ಕಾರಣಗಳಿಂದ, ಅವರಿಂದ ಬೀಳ್ಕೊಂಡು ನಾನು ಅಂದೇ ಸಾಯಂಕಾಲ ಬಿಜಾಪುರಕ್ಕೆ ಹಿಂದಿರುಗಬೇಕಾಯಿತು. ಬರುವಾಗ ಮತ್ತೊಮ್ಮೆ ಭಕ್ತಿಪೂರ್ವಕವಾಗಿ ಅವರಿಗೆ ಮಣಿದು ಅವರು ಆಶೀರ್ವದಿಸಿ ನೀಡಿದ ಹಾರೈಕೆಗಳನ್ನು ಹೊತ್ತು ಒಲ್ಲದ ಮನದಿಂದ ಅವರಿಂದ ಬೀಳ್ಕೊಂಡೆನು.

■■

ಉದಾತ್ತ ಚಿಂತನೆಯ ಚಿನ್ಮಯ

● ಮಹಾಲಿಂಗ ಯಾಳಗಿ

" ನಾವು ತೊಟ್ಟಿರುವ ಕಾವಿ ಕೈಚಾಚುವದಕ್ಕಲ್ಲ, ಕಾಯಕ ಪ್ರಜ್ಞೆಯನ್ನು ಮೂಡಿಸುವ ಹಾಗೆಯೇ ತ್ಯಾಗ ನಿಸ್ವಾರ್ಥದಿಂದ ಬದಕಲು ".

" ಸ್ವಾಮಿಗಳಾದವರು ಬದುಕಿನಲ್ಲಿ ಭರವಸೆಯನ್ನು ಕಳೆದುಕೊಂಡು ಬೇಸತ್ತು ಬಂದ ಭಕ್ತರಿಗೆ ಬೆಳಕನ್ನು ನೀಡುವ ಭಾಸ್ಕರರಾಗಬೇಕೇ ವಿನಾ ಭಯವನ್ನು ಹುಟ್ಟಿಸುವ ಭಯೋತ್ಪಾದಕರಾಗಬಾರದು ".

" ಮಠಗಳು ಮಾರ್ಕೆಟುಗಳಾಗದೆ ಮಾನವತೆಯ ಮಂದಿರಗಳಾಗಬೇಕು ".

ಈ ನುಡಿಕಿಡಿಗಳು ಸ್ಫೋಟಗೊಂಡಿದ್ದು ಮಠಾಧೀಶರಿಂದ ಬಹಿಷ್ಕೃತಗೊಂಡ ಬಂಡುಕೋರ ವ್ಯಕ್ತಿಯಿಂದಲ್ಲ. ದೇವರು, ಧರ್ಮ, ಮಠ, ಜಾತಿಗಳಿಂದ ಶೋಷಣೆಗೊಳ್ಳುತ್ತಿರುವ ಜನಸಾಮಾನ್ಯರ ಮಧ್ಯದಿಂದ ಎದ್ದು ಬಂದ ವಿಚಾರವಾದಿಯದಲ್ಲ. ಈ ಸಮಾಜದಲ್ಲಿ ಕಂಡು ಬರುವ ಅನ್ಯಾಯ, ಅಧರ್ಮ. ಅವಿವೇಕ, ಸಂಪ್ರದಾಯಗಳನ್ನು ಧಿಕ್ಕರಿಸಬೇಕೆಂದು ಸಾರುವ ನವಮಾನವತಾವಾದಿಯಲ್ಲ. ಇವುಗಳನ್ನು ಸ್ಫೋಟಿಸಿದವರು ಓರ್ವ ಯುವ ಮಠದ ಉತ್ತರಾಧಿಕಾರಿಗಳು. ಅವರೇ ಅಥಣಿಯ ಶ್ರೀ ಮೋಟಗಿಮಠದ ಉತ್ತರಾಧಿಕಾರಿ ಶ್ರೀ ಚನ್ನಬಸವದೇವರು. ಇಪ್ಪತ್ತಾರರ ಹರೆಯಲ್ಲಿಯೆ ತಮ್ಮ ಜನಪರ ಧೋರಣೆಗಳಿಂದ, ಸತ್ಯ-ಶುದ್ಧ ನಡೆ-ನುಡಿಗಳಿಂದ ವೈಚಾರಿಕ, ವೈಜ್ಞಾನಿಕ ಮನೋಭಾವ ಮೈಗೂಡಿಸಿಕೊಂಡು ಅರಿವನ್ನೇ ಗುರುವನ್ನಾಗಿ ಅನುಭಾವವನ್ನೇ ಜಂಗಮವಾಗಿಸಿಕೊಂಡು 'ಬಸವತತ್ವ'ಗಳನ್ನೆ ಉಸಿರನ್ನಾಗಿ ಮಾಡಿಕೊಂಡವರೆಂದರೆ ಯಾರಿಗೂ ಅಚ್ಚರಿಯಾಗದೇ ಇರದು.

ಇಂದು ನಮ್ಮ ನಾಡಿನಲ್ಲಿ ಹಲವಾರು ಮಠಾಧೀಶರು ಸ್ವವಿಮರ್ಶಕರಾಗಿ ವ್ಯಕ್ತಿ ಸಮಾಜ. ಧರ್ಮ. ರಾಜಕೀಯಗಳಲ್ಲಿರುವ ಕೊಳೆಯನ್ನು ತಮ್ಮ ಆಚಾರ-ವಿಚಾರಗಳಿಂದ ಕಳೆಯಬಲ್ಲವರಾಗಿದ್ದಾರೆ. ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಸಾಣೆಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು. ಬಿದರಕುಂದಿ ಶಿವಯೋಗಾಶ್ರಮದ

ಶ್ರೀ ಶಿವಕುಮಾರ ಸ್ವಾಮಿಗಳು, ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು ಇವರ ಸಾಲಿನಲ್ಲಿಯೇ ' ಅಥಣೀಶ 'ರೆಂಬ ಅಂಕಿತದಿಂದ ಆಧುನಿಕ ವಚನ ಸಾಹಿತ್ಯಕ್ಕೂ ಕೈ ಹಾಕಿ, ' ವಚನ ಚೈತ್ರ ', ' ವಚನ ತರಂಗ 'ಗಳನ್ನು ಇತ್ತ ಕವಿಯಾಗಿ, ' ವರ್ತಮಾನ 'ವನ್ನು ಕಂಡ ಆಧುನಿಕ ವಿಚಾರಗಳಿಂದ ಪ್ರೇರಣೆಗೊಂಡು ' ಸಂಪ್ರದಾಯದ ಸುಳಿಯಲ್ಲಿ ' ಎಂಬ ಗದ್ಯದ ಜೊತೆಗೆ ಶ್ರೀ ಗುರುವನ್ನು ದರ್ಶನ ಮಾಡಿಸಿದ ಶ್ರೀ ಚನ್ನಬಸವದೇವರು ಕಿರಿಯರಾಗಿದ್ದಾರೆ.

ಶ್ರೀ ಚನ್ನಬಸವದೇವರನ್ನು ಶಿವಯೋಗ ಮಂದಿರದಲ್ಲಿರುವಾಗ ಸಾಧಕಾವಸ್ಥೆಯಲ್ಲಿ ಕಂಡಿದ್ದೆ. ಕಂಡಾಗ ಅವರಾಗಲೆ ಮೈಸೂರು ಶ್ರೀ ಮಹಾರಾಜಾ ಸಂಸ್ಕೃತ ಕಾಲೇಜದಲ್ಲಿ ವಿದ್ಯಾರ್ಥಿಗಳಾಗಿದ್ದರು. ೧೯೯೭ ಫೆಬ್ರುವರಿ ೨೬ ರಂದು ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಆಶ್ರಯದಲ್ಲಿ ದಾವಣಗೆರೆಯಲ್ಲಿ ನವ್ಯವಚನಕಾರರ ಸಮಾವೇಶದಲ್ಲಿ ತಮ್ಮ ಆಧುನಿಕ ವಚನಗಳನ್ನು ಮನಮುಟ್ಟುವಂತೆ ಓದಿ ಅಂದಿನ ಪ್ರೇಕ್ಷಕರ, ಆಧುನಿಕ ವಚನಕಾರರ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿದರು.

ಶ್ರೀ ಮೋಟಗಿಮಠದ ಉತ್ತರಾಧಿಕಾರಿಯಾಗಿ ಕಾವಿ ತೊಟ್ಟಿದ್ದರೂ ಆ ವೇಷದ, ಸ್ಥಾನದ ಬಿಗುಮಾನ ಬಿಂಕುಗಳಿರಲಿಲ್ಲ. ನಯವಿನಯಗಳ ಮೂರ್ತಿ. ಸಹಜ ಸೌಜನ್ಯದ ನುಡಿಗಳು ಇದ್ದವು. ತಾರುಣ್ಯದ ಆವೇಶ ಉದ್ವೇಗಗಳು ಇರದೆ ' ಬಂದಿರಾ, ಬನ್ನಿ ' ' ಹದುಳವೆನ್ನಿ ' ' ಎನಗಿಂತ ಕಿರಿಯರಿಲ್ಲ ' ಎಂಬ ಬಸವಣ್ಣನವರ ವಚನವನ್ನು ಆತ್ಮಸಾತ್ ಮಾಡಿಕೊಂಡ ಶ್ರೀ ಚನ್ನಬಸವದೇವರನ್ನು ಕಂಡಾಗಲೆಲ್ಲ ನನ್ನ ಮನದಲ್ಲಿ ಮೂಡುತ್ತಿದ್ದುದು ೧೨ ನೇ ಶತಮಾನದ ' ಅವಿರಳಜ್ಞಾನಿ ' ಶ್ರೀ ಚನ್ನಬಸವಣ್ಣನವರ ನೆನಪು.

ಶ್ರೀ ಚನ್ನಬಸವದೇವರಲ್ಲಿ ಗುಪ್ತವಾಗಿದ್ದ ಕವಿಚೇತನ ಜಾಗೃತಗೊಂಡು ' ವರ್ತಮಾನ ' ಕವನ ಸಂಕಲನ ಹೊರಹೊಮ್ಮಿದಾಗ ಅವರಿಗೆ ಆಗ ಕೇವಲ ೨೦ ವರುಷ. ಪ್ರಥಮ ಪ್ರಯತ್ನದಲ್ಲಿ ವಯಸ್ಸಿಗೆ ಮೀರಿದ ಕಾವ್ಯಾನುಭೂತಿಯನ್ನು ಪಡೆದಿದ್ದಾರೆ. ಈ ಯುವ ಕವಿ ಬುದ್ಧ, ಬಸವ, ಕ್ರಿಸ್ತ, ಪೈಗಂಬರ, ಕನಕದಾಸ, ಮಹಾತ್ಮಾ ಗಾಂಧೀಜಿಯವರಂತಹ ಮಹಾಮಾನವತಾವಾದಿಗಳನ್ನು ಜಾತಿಯ ಬಂಧನದಲ್ಲಿ ಬಂಧಿಸಿರುವದನ್ನು ಖಂಡಿಸಿದ್ದಾರೆ.

೧೯೯೭ರಲ್ಲಿ ' ವಚನಚೈತ್ರ ' ೧೯೯೯ರಲ್ಲಿ ' ವಚನತರಂಗ 'ಗಳು ಶ್ರೀ ಚನ್ನಬಸವದೇವರ ಹೃದಯಾಂತರಾಳದಿಂದ ಹೊರಹೊಮ್ಮಿದವು. ೧೩೨ ವಚನಗಳ ಮೂಲಕ ಆಧುನಿಕ ಕೋಗಿಲೆಯಾಗಿ, ವಚನ ಚೈತ್ರದ ಬರವನ್ನು ವಚನ ವಸಂತೋತ್ಸವಕ್ಕೆ ನಾಂದಿ ಹಾಡಿದ್ದಾರೆ. ಶ್ರೀ ಚನ್ನಬಸವದೇವರು ಸಾಮಾಜಿಕ, ರಾಜಕೀಯ, ಧಾರ್ಮಿಕ ರಂಗಗಳಲ್ಲಿ ಕಂಡುಬರುತ್ತಿರುವ ಅನ್ಯಾಯ, ಅಸಮತೆ, ಅಸಮಂಜಸಗಳನ್ನು ಎತ್ತಿ ತೋರಿಸಿದ್ದಾರೆ. ತಾವೊಂದು ಮಠಕ್ಕೆ ಉತ್ತರಾಧಿಕಾರಿಯಾದರೂ ಒಂದು ಧರ್ಮಕ್ಕೆ

ಸೇರಿದ್ದರೂ ಅದರಲ್ಲಿ ಕಂಡುಬರುವ ದೋಷಗಳನ್ನು ಅಭಿವ್ಯಕ್ತಿಗೊಳಿಸಬಲ್ಲ ಎಂಟೆದೆಯ ಬಂಟತನ ಅವರ ಸಾತ್ವಿಕ-ನೈತಿಕ ಶಕ್ತಿಗೆ ಸಾಕ್ಷಿಯಾಗಿದೆ.

ಕವನ, ವಚನಗಳಿಂದ ಹದಗೊಂಡು ಶ್ರೀಗಳ ಹೃದಯಶ್ರೀ ಗದ್ಯದತ್ತ ಮುಂಚಾಚಿ ೨೦೦೧ ರಲ್ಲಿ ' ಸಂಪ್ರದಾಯದ ಸುಳಿ 'ಯಲ್ಲಿ ಸಿಕ್ಕವರನ್ನು ಬಿಡಿಸಲು ಯತ್ನಿಸಿದೆ. ಇದರಲ್ಲಿ ೧೧ ಲೇಖನಗಳಿದ್ದು ವೈವಿಧ್ಯಮಯವಾಗಿವೆ. ಪ್ರಾರಂಭದಲ್ಲಿ ಹಿಡಿದಿಟ್ಟ ಬಿಂದುಗಳು ಸುವಿಚಾರದ ಸಿಂಧುವಾಗಿವೆ. ' ಮಾತು-ಕೃತಿ, ಅರಿವು-ಆಚಾರ ಒಂದಾದಾಗ ತಾನೆ ಒಬ್ಬ ಶ್ರೇಷ್ಠ ಸಾಧಕನಾಗುವದು. ಡಿಗ್ರಿಗಳಿಂದ ಜ್ಞಾನ ಹೆಚ್ಚುವದಿಲ್ಲ. ಕ್ರಿಯಾಶೀಲ ಪರಿಶ್ರಮದಿಂದ ವ್ಯಕ್ತಿತ್ವದ ವಿಕಾಸ. ' ' ಹಬ್ಬಗಳ ಅಬ್ಬರದಲ್ಲಿ ' ಕೇವಲ ಬಹಿರಂಗವಾಗಿ ಅಲಂಕಾರ ಮಾಡಿ ನೂರಾರು ದೀಪಗಳ ಬೆಳಗಿಸಿ ಅಂತರಂಗದಲ್ಲಿ ಮಾತ್ರ ಕತ್ತಲೆ ತುಂಬಿಕೊಂಡರೆ ಸಾವಿರಾರು ದೀಪ ಬೆಳಗುವುದರಲ್ಲಿ ಪ್ರಯೋಜನವಿಲ್ಲ. ವೈಚಾರಿಕ ಮನೋಭಾವನೆಯನ್ನು ಬೆಳೆಸಿ ಸಂಪ್ರದಾಯದ ಸುಳಿಯಿಂದ ಪಾರಾಗಲು ಸಹಾಯಕವಾಗಿದೆ. ಇವುಗಳೊಂದಿಗೆ ' ಶ್ರೀಗುರು ' ಎಂಬ ಸದ್ಗ್ರಂಥದ ಸಂಪಾದನೆಯನ್ನು ಮಾಡಿದ್ದಾರೆ.

ಪೂಜ್ಯರಿಂದ ಧರ್ಮ-ಸಮಾಜ-ಸಾಹಿತ್ಯ-ಸಂಸ್ಕೃತಿ ಬೆಳಗುವಂತಾಗಲೆಂದು ' ಅಥಣೀಶ 'ರಲ್ಲಿ ಪ್ರಾರ್ಥಿಸುತ್ತೇನೆ.

■■

ಮನ ಅರಳಿಸುವ ತಂಗಾಳಿ

● ಡಾ. ವೈ. ರುದ್ರಪ್ಪ

೨೦೦೦ ರ ಫೆಬ್ರುವರಿಯಲ್ಲಿ ಒಂದು ದಿನ ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾ ಆಶ್ರಮದಲ್ಲಿ ಸುಂದರ ವ್ಯಕ್ತಿತ್ವದ ತರುಣ ಸಾಧಕರೊಬ್ಬರು ಪರೀಕ್ಷೆ ಮಾಡಿಸಿಕೊಳ್ಳಲು ಬಂದಿದ್ದರು. ಅವರು ' ವಿಶೇಷವಾಗಿ ದೈಹಿಕ ಸಮಸ್ಯೆ ಏನೂ ಇಲ್ಲದಿದ್ದರೂ ಸ್ವಲ್ಪ ಸ್ಥೂಲ ದೇಹ ಇದೆ. ತೂಕ ಕಡಿಮೆ ಮಾಡಿಕೊಳ್ಳಬೇಕು ಅದಕ್ಕಾಗಿ ಬಂದಿದ್ದೇನೆ ' ಎಂದು ಹೇಳಿದರು. ಅವರು ಮಾತನಾಡುವ ಶೈಲಿ, ದಿಟ್ಟತನ, ನಿಷ್ಕಲಂಕ ನುಡಿಗಳು ನನ್ನ ಮನಸ್ಸನ್ನು ಆಕರ್ಷಿಸಿದವು. ಈ ಸಾಧಕರು ಯಾರಿರಬಹುದು ಎಂದು ಕುತೂಹಲ ಮೂಡಿತು. ನೇರವಾಗಿ ವಿಚಾರಿಸಿದಾಗ ಅಥಣಿಯ ಮೋಟಗಿಮಠದ ಅಧಿಪತಿಗಳು ಎಂದು ಅವರಿಂದಲೇ ತಿಳಿಯಿತು. ಶ್ರೀಗಳು ಉತ್ತಮ ವಾಗ್ಮಿಗಳಾಗಿರಬಹುದೆಂದು ಅಂದುಕೊಂಡೆ.

ಆಗ ನಾನು ಹೇಳಿದೆ, ಸರಿ ಸ್ವಾಮೀಜಿ ತಮ್ಮ ತೂಕ ಕಡಿಮೆ ಆಗುತ್ತದೆ. ಜೊತೆಗೆ ಶರೀರದ ಶುದ್ಧಿಯೂ ಸಹ ಆಗುತ್ತದೆ. ಅದಕ್ಕೇನೂ ತೊಂದರೆ ಇಲ್ಲ. ಆದರೆ ತಮ್ಮ ಚಿಕಿತ್ಸಾ ಸಾಧನ ಮಾಡುವ ದಿನಗಳಲ್ಲಿಯೇ ಒಂದು ದಿನ ನಮ್ಮ ಆಸ್ಪತ್ರೆಯ ರೋಗಿ ಸಾಧಕರಿಗೆ ತಾವು ಬಂದು ಉಪನ್ಯಾಸ ನೀಡಬೇಕೆಂದು ಕೇಳಿಕೊಂಡೆ. ಕೂಡಲೇ ಯಾವ ಟಾಪಿಕ್ ಮೇಲೆ ಉಪನ್ಯಾಸ ಇರಬೇಕು ಹೇಳಿ ಡಾಕ್ಟ್ರೆ ಎಂದರು. ಅದಕ್ಕೆ ಉತ್ತರವಾಗಿ ನಾನು ಆರೋಗ್ಯ ಮತ್ತು ಅಧ್ಯಾತ್ಮದ ಬಗ್ಗೆ ಇರಬೇಕು ಬುದ್ಧಿ, ಎಂದೆ. ಸರಿ ಮಾಡೋಣ ಎಂದರು. ಮರುದಿನ ಅರ್ಧ ಗಂಟೆಯ ಉಪನ್ಯಾಸ ಮುಕ್ಕಾಲು ಘಂಟೆಯವರೆಗೆ ಹೋಯಿತು. ನೂರಾರು ಜನ ಸಾಧಕರು ಜಾಗ ಬಿಟ್ಟು ಕದಲದೆ ಮೌನದಿಂದ ಕೇಳುತ್ತಾ ಕುಳಿತಿದ್ದರು. ಅವರ ವಚನಗಳು ಎಲ್ಲರನ್ನು ಬೆರಗುಗೊಳಿಸಿದವು. ನಾನು ಮನಸ್ಸಿನಲ್ಲಿ ಅಂದುಕೊಂಡದ್ದು ಸತ್ಯವಾಯಿತು. ಈ ಉಪನ್ಯಾಸ ಕೇಳಿ ಆಕರ್ಷಿತಗೊಂಡು, ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಮತ್ತೊಂದು ಉಪನ್ಯಾಸ ಮಾಡಿಸಿದೆ. ಬುದ್ಧಿಜೀವಿಗಳು ಅನೇಕರು ಆ ಸಭೆಯಲ್ಲಿದ್ದರು. ಚನ್ನಬಸವದೇವರು ತಮ್ಮ ಮಾತುಗಳಿಂದ ಮೋಡಿಮಾಡಿದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಕಂಡಿತು. ಶ್ರೀ ಚನ್ನಬಸವದೇವರು

ನಿಶ್ಚಿತವಾಗಿ ಅಧಿಪತ್ಯವನ್ನು ಸಾಂಗವಾಗಿ ಸಾಗಿಸುವ ಒಬ್ಬ ದಕ್ಷ ಸ್ವಾಮಿಗಳಾಗಿರುವರೆಂದು ತಿಳಿದು ಸಂತೋಷವಾಯಿತು. ಅಥಣಿಯ ಸಮಾಜ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿದೆ ಎಂದು ತಿಳಿಸಲು ಅತೀ ಸಂತೋಷವೆನಿಸುತ್ತದೆ. ಅನಂತರ ಅವರ ಸಂಪ್ರದಾಯದ ಸುಳಿಯಲ್ಲಿ ಗ್ರಂಥ ಓದಿ. ಅವರು ಕ್ರಾಂತಿಕಾರಿ ಎಂಬುದು ಖಚಿತವಾಯಿತು. ಇಂಥ ಕ್ರಾಂತಿಕಾರಕ ಸ್ವಾಮಿಗಳು ಯಥೇಚ್ಛವಾಗಿ ಬರಬೇಕು. ವೀರಶೈವ ಧರ್ಮದ ವೈಜ್ಞಾನಿಕ ಮನೋಧರ್ಮವನ್ನು ಸಮಾಜಕ್ಕೆ ತಿಳಿಸುವಂತಾಗಬೇಕು. ವೀರಶೈವ ಧರ್ಮ ಪುನರುಜ್ಜೀವನಗೊಳ್ಳಬೇಕು. ಈ ಪುನಶ್ಚೇತನಕ್ಕಾಗಿ ಬಸವಾದಿ ಶರಣರು ಮರಳಿ ಹುಟ್ಟಿ ಬರುವಂತಾಗಬೇಕೆಂದು ದೇವರಲ್ಲಿ ನಾನು ಪ್ರಾರ್ಥಿಸುತ್ತೇನೆ. ಅಂತಹ ವ್ಯಕ್ತಿತ್ವದಲ್ಲಿ ಶ್ರೀ ಚನ್ನಬಸವದೇವರು ಒಬ್ಬರು ಎಂದು ನನ್ನ ಅಭಿಮತ. ಇಂತಹ ಕ್ರಾಂತಿಕಾರಕ ಕೆಲಸ ನಮ್ಮ ಮಠಾಧೀಶರಿಂದ ಆಗಬೇಕಿದೆ.

ಇಂತಹ ಸೇವಾ ಭಾಗ್ಯ ದೊರೆತು ಇವರ ಸಂಪರ್ಕ ಕಲ್ಪಿಸಿದ ಧರ್ಮಸ್ಥಳದ ನನ್ನ ಪ್ರಕೃತಿ ಚಿಕಿತ್ಸಾ ಆಶ್ರಮಕ್ಕೆ ನಾನು ಅಭಿವಂದಿಸುತ್ತೇನೆ. ಪಟ್ಟಾಧಿಕಾರಕ್ಕೇರುವ ಈ ಶುಭ ಸಂದರ್ಭದಲ್ಲಿ ಶ್ರೀಗಳಿಗೆ ಶುಭ ಹಾರೈಸಿ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ನಾನು ಶ್ರೀ ಚನ್ನಬಸವದೇವರನ್ನು ಕಂಡಂತೆ ಬರೆದಿದ್ದೇನೆ. ನನ್ನ ಅನಿಸಿಕೆಗಳೇ ನಿಮ್ಮ ಅನಿಸಿಕೆಗಳು ಎಂದು ಅಂದುಕೊಂಡಿದ್ದೇನೆ. ಮತ್ತೊಮ್ಮೆ ಶ್ರೀ ಚನ್ನಬಸವ ದೇವರಿಗೆ ಶುಭ ಹಾರೈಸಿ. ಶ್ರೀಗಳು ಸಕಲರಿಗೆ ಲೇಸು ಬಯಸುವಂತಾಗಲಿ ಎಂದು ಶ್ರೀ ಸ್ವಾಮಿ ಮಂಜುನಾಥನಲ್ಲಿ ಪ್ರಾರ್ಥಿಸುತ್ತೇನೆ.

ಟಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ತೇಜಸ್ವಿಶ್ರೀ

● ಟಿ. ಪಿ. ಮನೋಳಿ

ಅಥಣಿ ಮೋಟಗಿಮಠದ ಶ್ರೀ ಚನ್ನಬಸವದೇವರನ್ನು ಕಂಡಾಗ ನನಗೆ ೧೨ ನೇ ಶತಮಾನದ ಜ್ಞಾನ ನಿಧಿ, ಷಟಸ್ಥಲ ಚಕ್ರವರ್ತಿ ಚನ್ನಬಸವಣ್ಣ ನೆನಪಾಗುವರು. ಅಂಥದೇ ಕೆಚ್ಚು, ತೇಜಸ್ಸು, ತೀಕ್ಷ್ಣದೃಷ್ಟಿ, ವಚನ ಸೃಷ್ಟಿ ಚನ್ನಬಸವದೇವರದು. ಕೆಂಪು ವಸ್ತ್ರವನ್ನು ಬೆಳಗುತ್ತಿರುವ ಈ ವೀರ ವಿರಕ್ತ ಕನ್ನಡದ ಸ್ವಾಮಿ ವಿವೇಕಾನಂದರು. ಮಾತೆತ್ತಿದರೆ ಮುತ್ತು ಸುರಿಯುತ್ತವೆ, ಕೈಮುಗಿದರೆ ಹೃದಯ ಭಕ್ತಿಯ ಕಡಲಾಗುತ್ತದೆ. ಶಿವಯೋಗಿಯ ಪವಿತ್ರ ನೆಲದ ಈ ಅಧ್ಯಾತ್ಮ ಚೇತನ ನಾಡು ಬೆಳಗುವುದರಲ್ಲಿ ಎರಡು ಮಾತಿಲ್ಲ.

ಶ್ರೀ ಚನ್ನಬಸವದೇವರದು ವಯಸ್ಸಿಗೆ ಮೀರಿದ ಅನುಭಾವ. ಅವರ ವಚನಗಳನ್ನು ಒಮ್ಮೆ ಓದಿದರೆ ಸಾಕು ಮನದಿಂದ ಮರೆಯಾಗುವುದೇ ಇಲ್ಲ. ಅವರ ಪ್ರವಚನ ಅವರ ಸಾಹಿತ್ಯದಷ್ಟೇ ಆಕರ್ಷಕ, ಮನಮೋಹಕ. ಜ್ಞಾನನಿಧಿ ಚೆನ್ನಬಸವಣ್ಣ ಕಲ್ಯಾಣದ ಅನುಭವ ಮಂಟಪದಲ್ಲಿ ಮಾತನಾಡಿದಂತೆ ಭಾಸವಾಗುವುದು.

ಶ್ರೀಗಳದು ಚುಂಬಕ ವ್ಯಕ್ತಿತ್ವ. ತಮ್ಮ ಅಂತರಂಗದ ಒಲವು-ನಿಲುವುಗಳನ್ನು ಭಕ್ತರೊಂದಿಗೆ ಹಂಚಿಕೊಳ್ಳುವ ಅವರ ಆತ್ಮೀಯತೆ ಸದಾ ಸ್ಮರಣೀಯ. ಶ್ರೀ ಚನ್ನಬಸವದೇವರ ನೆನಪಾಗುತ್ತಲೆ ಅರಳುವ ಗುಲಾಬಿ ಮೊಗ್ಗು ಮನದಾಳದಲ್ಲಿ ಮೂಡುತ್ತದೆ. ಅದೇ ಸೊಬಗು; ಅದೇ ಬೆಡಗು. ಈ ಚೆಂಗುಲಾಬಿಯ ಮಧುರ ಪರಿಮಳ ಅಧ್ಯಾತ್ಮಕ್ಕೆ ಹೊಸ ಚೈತನ್ಯ ತರಲಿ.

■■

ಅನುಪಮ ವ್ಯಕ್ತಿತ್ವ

● **ಬಸವರಾಜ ಕತ್ತಿ**

ಚನ್ನಬಸವ ದೇವರದು ಅನುಪಮ ವ್ಯಕ್ತಿತ್ವ. ಅವರ ಸಾಮಾಜಿಕ ಕಾಳಜಿ, ವಾಕ್ ಚಾತುರ್ಯ, ಕಲ್ಯಾಣ ರಾಜ್ಯ ನಿರ್ಮಾಣದ ಕನಸು, ವೈಚಾರಿಕ ವಿಚಾರಧಾರೆ, ಚಿಂತನಶೀಲ ವಚನಗಳು, ನನ್ನನ್ನು ತುಂಬಾ ಆಕರ್ಷಿಸಿವೆ. ಆಡಂಬರರಹಿತ ಪ್ರಾಮಾಣಿಕ ಜಂಗಮಲಿಂಗ ಶ್ರೀ ಚನ್ನಬಸವದೇವರ ಜೀವನೋತ್ಸಾಹವನ್ನು ಕಂಡಾಗ ವಿವೇಕಾನಂದರು ನೆನಪಾಗುತ್ತಾರೆ.

ಶ್ರೀ ಚನ್ನನಬಸವದೇವರು ಅಥಣಿಯ ಆಧ್ಯಾತ್ಮಿಕ ಪ್ರಭೆ. ಅವರು ತಮ್ಮ ವಚನ, ಕವನ, ಚಿಂತನಗಳ ಮೂಲಕ ಸಮಾಜ ಸೇವೆಯ ದೀಕ್ಷೆ ಸ್ವೀಕರಿಸಿದುದು ನಮ್ಮ ನಾಡಿನ ಭಾಗ್ಯ. ಶ್ರೀಗಳ ವಾಣಿಯಲ್ಲಿ ದಿವ್ಯಶಕ್ತಿಯಿದೆ. ಅವರ ದೃಷ್ಟಿ ಪರುಷ, ಎಂಥ ಹೃದಯಗಳೂ ಅಪರಂಜಿಯಾಗಬಲ್ಲವು. ಶ್ರೀಗಳು ಸ್ನೇಹಶೀಲರು. ಅವರ ನಾಲ್ಕು ಮಾತು ಕೇಳಿದರೆ ಸಾಕು ನಾವು ಅವರನ್ನು ಹಿಂಬಾಲಿಸುತ್ತೇವೆ.

ಅಪರೂಪದ ಅನುಭಾವಿ ಕವಿ ಶ್ರೀ ಚನ್ನಬಸವದೇವರು ಅಥಣಿಯ ಶ್ರೀ ಮೋಟಗಿಮಠದ ನಿರಂಜನಪೀಠಾರೋಹಣ ಮಾಡುತ್ತಿರುವುದು ನಮಗೆಲ್ಲ ಸಂತಸತಂದಿದೆ. ಮಠಾಧೀಶರು ಪೀಠಾಧಿಕಾರಿಗಳಾದರೆ ಸಾಲದು, ಸಮಾಜದ ಸೇವಕರಾಗಬೇಕು. ಬಸವಾದಿ ಶರಣರ ಕಲ್ಯಾಣ ರಾಜ್ಯ ನಿರ್ಮಾಣದ ರೂವಾರಿಗಳಾಬೇಕು. ಬಸವಧರ್ಮದ ಆದರ್ಶಕ್ಕೆ ನಮ್ಮ ದೇವರು ಮಾದರಿಯಾಗಬಲ್ಲರೆಂಬ ನಂಬಿಕೆ ನನ್ನದು.

ನಮ್ಮ ಭಾಗ್ಯ

• ಶಿವರುದ್ರಪ್ಪ ನಂದೇಶ್ವರ

ನಾನು ಮೊದಲು ಕಂಡಾಗ ಅವರು ಇನ್ನು ಚನ್ನಬಸವದೇವರಾಗಿರಲಿಲ್ಲ. ಅವರು ನೆರೆಯ ಜಮಖಂಡಿ ತಾಲೂಕಿನ ಮೈಗೂರು ಕನ್ನಡ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದರು.

ಶ್ರೀ ಚನ್ನಬಸವದೇವರನ್ನು ಕಾಣುವ ಹಿನ್ನೆಲೆ :

ಶ್ರೀ ಕ್ಷೇತ್ರ ಮೋಟಗಿಮಠದ ಅಧಿಪತಿಗಳಾದ ಶ್ರೀ ಮ.ನಿ.ಪ್ರ. ಗುರುಬಸವ ಅಪ್ಪಗಳು ತಮ್ಮ ಆಯುಷ್ಯದ ಎಂಬತ್ತು ಸಂವತ್ಸರಗಳನ್ನು ಕಳೆದರೂ ತಮ್ಮ ತರುವಾಯದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳಲಿಕ್ಕೆ ಯೋಚಿಸಿರಲಿಲ್ಲ. ಇದನ್ನು ಮನಗಂಡು ಮಠದ ಭಕ್ತರೇ ಒಂದು ದಿನ ಅವರ ಹತ್ತಿರ ಹೋಗಿ " ಬುದ್ಧಿ, ತಮ್ಮ ದೇಹಕ್ಕೆ ಮುಪ್ಪು ಆವರಿಸಿ ಬರುತ್ತಿದೆ. ಇದು ಅಲ್ಲದೆ ಆಗಾಗ ಅಸ್ವಸ್ಥತೆ ಉಂಟಾಗುತ್ತದೆ. ಕಾರಣ ಈಗಲೆ ನಿಮ್ಮ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳರಿ " ಅಂತಾ ಹೇಳಿದಾಗ ಅವರು ಈ ಕೆಳಗಿನಂತೆ ನುಡಿದರು. ಭಕ್ತರೆ, ಇದು ಭಕ್ತರ ಮಠವಾಗಿರುವದು. ನೀವೇ ಒಬ್ಬ ಸುಶಿಕ್ಷಿತ ಮತ್ತು ಸುಲಕ್ಷಣ ಸಂಪನ್ನನಾದವನನ್ನು ಹುಡುಕಿಕೊಳ್ಳಿ. ಅವನು ಜಂಗಮನೇ ಇರಲಿ, ಭಕ್ತನೇ ಇರಲಿ ನೇಮಿಸಿಕೊಳ್ಳಿರಿ ಅಂತಾ ನಿರೂಪಣೆಯನ್ನಿತ್ತರು. ಆಗ ಭಕ್ತರಿಗೆ ಅದಾವದೊಂದು ತೋಚದಂತಾಗಿ ಅದಕ್ಕೆ ತಾವೇ ಒಂದು ಮಾರ್ಗವನ್ನು ತೋರಿಸಬೇಕೆಂದು ಬಿನ್ನಹಿಸಿಕೊಳ್ಳಲು ಅವರು ಈ ಮುಂದಿನಂತೆ ಹೇಳಿದರು. ಈ ಮಠದ ಶಾಸ್ತ್ರಿಗಳಾದ ವೇದಮೂರ್ತಿ ಬಸವಲಿಂಗಯ್ಯ ಮತ್ತು ಅವರ ಸತಿಯಾದ ಬಸಲಿಂಗಮ್ಮನಿಗೆ ಶಿವಗಂಗಮ್ಮ ಎಂಬ ಸುಪುತ್ರಿಯೊಬ್ಬಳಿರುವಳು. ಅವಳಿಗೆ ಈರ್ವರು ಸುಪುತ್ರರಿವರು. ಅವರಲ್ಲಿ ಹಿರಿಯ ಮಗನಾದ ಬಸವರಾಜ (ಬಸವಯ್ಯಾ)ನನ್ನು ಮಠಕ್ಕೆ ಮರಿದೇವರನ್ನಾಗಿ ಕೇಳಿರಿ ಎಂದು ಸೂಚನೆಯನ್ನು ಕೊಟ್ಟರು. ಆ ಪ್ರಕಾರವಾಗಿ ನಾನು ಒಂದು ದಿವಸ ಮೈಗೂರಿಗೆ ಹೊರಟೆ. ವೇ|| ಗುರುಮೂರ್ತಯ್ಯನವರನ್ನು ಹಾಗೂ ಬಾಲಕ ಬಸವರಾಜನನ್ನು ಕಂಡು ಅಥಣಿಗೆ ಬರುವಾಗ ಅವರನ್ನು ಕರೆದುಕೊಂಡು ಬಂದೆನು.

ಅಪ್ಪಗಳ ಹಿತವಚನ :

ಆಗ ತಾನೇ ಪರ್ಯಂಕದಿಂದ ಎದ್ದು ಕುಳಿತಿದ್ದ ಅಪ್ಪಗಳು ಮೈಗೂರಿನಿಂದ ಬಂದಂಥವರ ವಂದನೆಗಳನ್ನು ಸ್ವೀಕರಿಸಿ, " ನೋಡಿ, ಗುರುಮೂರ್ತಯ್ಯನವರೇ. ಈ ಮಠದ ಭಕ್ತರು ಮತ್ತು ದೈವದವರು ನಿಮ್ಮ ಕರುಳಿನ ಕಂದನಾದ ಬಸವರಾಜನನ್ನು ಈ ಮಠದ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಳ್ಳಲು ಇಚ್ಛೆಯುಳ್ಳವರಾಗಿದ್ದಾರೆ. ಅದಕ್ಕೆ ನಿಮ್ಮ ಸಮ್ಮತಿಯಿದ್ದರೆ ತಿಳಿಸಿರಿ. ನಮಗಂತೂ ಬಾಲಕನ ಲಕ್ಷಣ ನೋಡಿದರೆ ಇವನೊಬ್ಬ ಮಹಾಜ್ಞಾನಿಯಾಗುತ್ತಾನೆಂದು ಕಂಡು ಬಂದಿದೆ" ಎಂದರು. ಆಗ ಗುರುಮೂರ್ತಯ್ಯನವರು ತಕ್ಷಣವೇ ಗುರುಗಳ ಪಾದಕ್ಕೆ ಸಾಷ್ಟಾಂಗ ನಮಸ್ಕರಿಸಿ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಅದರಿಂದ ಅಲ್ಲಿ ಕೂಡಿದ ಎಲ್ಲ ಭಕ್ತರಿಗೆ ಪರಮಾನಂದವಾಯಿತು.

ಚನ್ನಬಸವ ದೇವರಾದದ್ದು :

ಆಗಲೇ ಗುರುಗಳು ಒಂದು ಕಾವಿಯ ಟೊಪ್ಪಿಗೆಯನ್ನು ತೊಡಸಿದರು ಬಾಲಕ ಬಸವರಾಜನಿಗೆ. ಇನ್ನು ಮುಂದೆ ಈತನೇ ನಮ್ಮ ಮಠದ ಉತ್ತರಾಧಿಕಾರಿ ಎಂದು ಕೂಡಿದ ಭಕ್ತರಿಗೆ ಹೇಳಿ ತಮ್ಮ ಗುರುಗಳಾದ ಲಿಂ. ಶ್ರೀ ಮ.ನಿ.ಪ್ರ. ಚನ್ನಬಸವ ಮಹಾಸ್ವಾಮಿಗಳವರ ಹೆಸರಿಟ್ಟು ಕರೆದರು. ಅಂದು ಚನ್ನಬಸವ ದೇವರಾದರು.

ಗುರುಗಳ ನಿರೂಪಣೆ :

ತದನಂತರ ಬಾಲಕ ಚನ್ನಬಸವ ದೇವರನ್ನು ಕರೆದು ' ಈಗ ನೀನು ಮೈಗೂರಿಗೆ ಹೋಗಿ ಅಲ್ಲಿ ಓದುತ್ತಿರು. ೩ ನೇ ಕ್ಲಾಸನ್ನು ಮುಗಿಸಿಕೊಂಡು ಮುಂದಿನ ಅಭ್ಯಾಸಕ್ಕಾಗಿ ಅಥಣಿಗೆ ಬಂದು ಬಿಡು ' ಅಂತಾ ಹೇಳಿ ಕಳಿಸಿಕೊಟ್ಟರು. ಗುರುಗಳ ಆಜ್ಞೆಯಂತೆ ೩ ನೇ ಕ್ಲಾಸನ್ನು ಮುಗಿಸಿಕೊಂಡು ಅಥಣಿಗೆ ಬಂದರು. ಅಲ್ಲಿ ಶಾಲಾ ಶಿಕ್ಷಣದೊಂದಿಗೆ ಧಾರ್ಮಿಕ. ಅಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ಪಡೆದು ಗುರುಗಳಿಂದ ಮತ್ತು ಸಮಾಜದಿಂದ ಸೈ ಎನಿಸಿಕೊಂಡರು.

ಮೃತ್ಯು ಪತ್ರ ಬರೆದಿಟ್ಟರು :

ಶ್ರೀ ಗುರುಬಸವಅಪ್ಪಗಳು ತಮ್ಮ ಪ್ರಕೃತಿಯು ದಿನೆ-ದಿನೆ ಕ್ಷೀಣಿಸುತ್ತಿರುವದನ್ನು ಮನಗಂಡು ಮಠದ ಎಲ್ಲ ಒಡೆತನವನ್ನು ಉತ್ತರಾಧಿಕಾರಿಯಾದ ಶ್ರೀ ಚನ್ನಬಸವದೇವರ ಹೆಸರಿಗೆ ನೋಂದಾಯಿಸಿ ಮಠದ ಭಕ್ತರಾದ ಶ್ರೀ ಬಸಪರಪ್ಪಾ ಶಿ. ಅವಟಿ ಹಾಗೂ ವಿರೂಪಾಕ್ಷಯ್ಯಾ ಗು. ತೆಲಸಂಗ ಅವರ ಸಮಕ್ಷಮದಲ್ಲಿ ಮೃತ್ಯು ಪತ್ರ ಬರೆದಿಟ್ಟರು. ಅದರಲ್ಲಿ ಬಾಲಕ ಚನ್ನಬಸವ ದೇವರು ಸುಜ್ಞಾನ ಆಗುವವರೆಗೆ ಮಠದ ಯಾವತ್ತು ಕಾರ್ಯಕಲಾಪಗಳ ಕಡೆಗೆ ಹಾಗೂ ಅವರ ವಿದ್ಯಾಭ್ಯಾಸದ ಕಡೆಗೆ ಲಕ್ಷವಿಡಬೇಕು ಅಂತಾ ಬರೆದರು.

ಶ್ರೀ ಚನ್ನಬಸವ ದೇವರ ಆಧ್ಯಾತ್ಮಿಕ ಶಿಕ್ಷಣ :

ಚನ್ನಬಸವದೇವರು ಒಂದು ಮಠದ ಅಧಿಪತಿಗಳಾಗುತ್ತೇವೆಂದು ತಿಳಿದು ಧಾರ್ಮಿಕ ಶಿಕ್ಷಣ ಕೊಡುವ ಕೇಂದ್ರವಾದ ಶಿವಯೋಗ ಮಂದಿರದಲ್ಲಿ ಅಭ್ಯಾಸ ಕೈಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಅವರ ಇಚ್ಛೆಯ ಪ್ರಕಾರ ಕಾರ್ಯಕಾರಿಗಳು ಶಿವಯೋಗ ಮಂದಿರಕ್ಕೆ ಕಳುಹಿಸಿ ಕೊಟ್ಟರು. ಅಲ್ಲಿ ಅವರು ಧಾರ್ಮಿಕ ಶಿಕ್ಷಣ ಪಡೆದು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮಾರ್ಗದಲ್ಲಿ ನಡೆದು ಶಿವಯೋಗ ಮಂದಿರದ ವ್ಯವಸ್ಥಾಪಕರಾದ ಹಾಲಕೇರಿ ಶ್ರೀಗಳ ಮತ್ತು ಸಂಚಾಲಕರಾದ ಕೆಳದಿ ಪಟ್ಟಾಧ್ಯಕ್ಷರ ಪ್ರೀತಿಗೆ ಪಾತ್ರರಾದರು.

ನಿಲ್ಲದ ವಿದ್ಯಾದಾಹ :

೧೯೫೦ರ ಅಂತ್ಯದಲ್ಲಿ ಉನ್ನತ ಶಿಕ್ಷಣ ಪಡೆಯುವದಕ್ಕಾಗಿ ಮೈಸೂರಿನ ಸುತ್ತೂರು ಮಠಕ್ಕೆ ಹೋದರು. ಅಲ್ಲಿನ ಗುರುಕುಲಾಶ್ರಮದಲ್ಲಿ ನಿಂತು ಕನ್ನಡ ಹಾಗೂ ಸಂಸ್ಕೃತದಲ್ಲಿ ಎಂ.ಎ. ಪದವಿ ಪಡೆದರು. ಜೊತೆ ಜೊತೆಗೆ ವಚನ ಸಾಹಿತ್ಯದ ಕಡೆಗೆ ಹೆಚ್ಚಿನ ಆಸಕ್ತಿವಹಿಸಿದರು. ಇವರ ವಾಕ್‌ಚಾತುರ್ಯವನ್ನು ಕಂಡು ಕಾಲೇಜಿನ ಶಿಕ್ಷಕರು ಊರ ಹಿರಿಯರು ಮತ್ತು ಪೀಠಾಧಿಪತಿಗಳು ಸಂತುಷ್ಟರಾಗಿ ತಮ್ಮಲ್ಲಿ ನಡೆಯುವ ಯಾವುದೇ ಸಾಮಾಜಿಕ ಧಾರ್ಮಿಕ ಸಭೆ ಸಮಾರಂಭಗಳಿಗೆ ಆಹ್ವಾನಿಸಿಕೊಂಡು ಮಾನ ಸನ್ಮಾನಗಳನ್ನು ಮಾಡಹತ್ತಿದರು. ಹೀಗಾಗಿ ಅಲ್ಲಿ ಅನೇಕ ಚರಮೂರ್ತಿಗಳು ಹಾಗೂ ಜಗದ್ಗುರುಗಳ ಪರಿಚಯ ಮಾಡಿಕೊಂಡು ಅನೇಕ ಕವಿತೆ ಲೇಖನಗಳನ್ನು ಬರೆದು ' ಆಶುಕವಿ ' ಎಂಬ ಬಿರುದನ್ನು ಪಡೆದರು. ಬಸವಧರ್ಮ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ವಹಿಸಿ ಚಿತ್ರದುರ್ಗ, ಸಾವಳಗಿ, ಗದಗ, ಮುಂಡರಗಿ, ಡಂಬಳ ಮತ್ತು ಮೂರುಸಾವಿರ ಮಠದ ಜಗದ್ಗುರುಗಳು ಅಲ್ಲದೆ ಚಿತ್ತರಗಿ ಇಳಕಲ್ಲ ಸಂಸ್ಥಾನ ಮಠದ ಪೂಜ್ಯ ಮಹಾಂತಪ್ಪಗಳ ಕೃಪೆಗೆ ಪಾತ್ರರಾಗಿ ಬಸವ ಧರ್ಮ ಪ್ರಚಾರಕರಾಗಿ ಸಮಾಜದ ಏಳ್ಗೆಗಾಗಿ ಬಿಡುವಿಲ್ಲದೆ ದುಡಿಯುತ್ತಿದ್ದಾರೆ. ತಮ್ಮ ವಿಚಾರಧಾರೆಯಿಂದ ಇಂದಿನ ಸಮಾಜಕ್ಕೆ ಮನ ಮುಟ್ಟುವಂತೆ ' ಅಥಣೀಶ ' ಎಂಬ ನಾಮಾಂಕಿತದಿಂದ ವಚನಗಳನ್ನು ರಚಿಸುತ್ತಿದ್ದಾರೆ.

ಅನುಷ್ಠಾನ :

ಮಹಾತಪಸ್ವಿಗಳಾದ ಶ್ರೀ ಮುರುಘೇಂದ್ರ ಶಿವಯೋಗಿಗಳು ತಪಸ್ಸು ಮಾಡಿದ ಪುಣ್ಯಭೂಮಿ ಗವಿಮಠದಲ್ಲಿ ತಾವು ಅನುಷ್ಠಾನ ಮಾಡಬೇಕೆಂದು ಸಂಕಲ್ಪವುಳ್ಳವರಾಗಿ ಅದನ್ನು ಹುಕ್ಕೇರಿ ಹಿರೇಮಠದ ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯರಿಗೆ ತಿಳಿಸಿದರು. ಅವರ ಮುಖಾಂತರ ಅಥಣಿಯ ಭಕ್ತರಿಗೂ ವ್ಯಕ್ತವಾಗಿ ಹಲವು ದಿವಸಗಳವರೆಗೆ ಮೌನ ಅನುಷ್ಠಾನವನ್ನು ಮಾಡಿ ಅಲೌಕಿಕ ಅನುಭವವನ್ನು ಪಡೆದುಕೊಂಡರು.

ಚನ್ನಬಸವದೇವರು ಮಾಡಿದ ಮಹತ್ಕಾರ್ಯಗಳು :

ಬೆಳೆಯು ಸಿರಿಯು ಮೊಳಕೆಯಲ್ಲಿ ಕಾಣು ಎಂಬ ನಾಣ್ಣುಡಿಯಂತೆ ಅವರು ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿ ಮಾಡಿದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳು ಅಗಾಧ ಮತ್ತು ಅದ್ಭುತವೆನಿಸುತ್ತವೆ. ಅವೆಲ್ಲವುಗಳನ್ನು ಬರೆಯುತ್ತಹೋದರೆ ಅದೊಂದು ದೊಡ್ಡ ಹೊತ್ತಿಗೆಯೇ ಆಗಬಹುದು. ಅವೆಲ್ಲವುಗಳನ್ನು ಹೇಳಲಿಕ್ಕೆ ಹೋಗದೆ ಒಂದೆರಡನ್ನು ಮಾತ್ರ ಹೇಳಲೇಬೇಕಾಗುತ್ತದೆ.

ಜೀರ್ಣೋದ್ಧಾರ :

೧) ಜೀರ್ಣವಾಗಿದ್ದ ಮಠವನ್ನು ಭಕ್ತರ ಸಹಾಯ. ಸಹಕಾರದಿಂದ ಅಂದಾಜು ೧೩-೧೪ ಲಕ್ಷ ರೂಪಾಯಿಗಳ ವೆಚ್ಚಮಾಡಿ ಜೀರ್ಣೋದ್ಧಾರಗೊಳಿಸಿದರು.

೨) ೧೯೯೮ ರಲ್ಲಿ ತಮ್ಮ ಗುರುಗಳಾದ ಲಿಂ. ಮ. ನಿ. ಪ್ರ. ಗುರುಬಸವ ಮಹಾಸ್ವಾಮಿಗಳವರ ಅಮೃತಶಿಲೆಯ ಮೂರ್ತಿಯನ್ನು ಪ್ರತಿಷ್ಠಾನಗೊಳಿಸಿದರು.

೩) ಸಮತಾವಾದಿ ಅಣ್ಣ ಬಸವಣ್ಣನವರ ತತ್ವದಂತೆ ಮಠದಲ್ಲಿ ಹರಳಯ್ಯ ಸಮಾಜದ ಕಲ್ಯಾಣ ಮಹೋತ್ಸವವನ್ನು ನೇರವೇರಿಸಿದ್ದು ೧೯೯೮ ರಲ್ಲಿ.

೪) ಹೊಸದಾಗಿ ಕಟ್ಟಿಸಿದ ಮಠದ ಮಹಾದ್ವಾರದ ಮುಂದೆ ಅಮೃತ ಶಿಲೆಯ ಬಸವಮೂರ್ತಿಯನ್ನು ಸ್ಥಾಪಿಸಿದರು.

೫) ಮಠವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದರು.

ಚನ್ನಬಸವದೇವರು ಕವಿ, ವಚನಕಾರ, ಅನುಭಾವಿ. ಅವರ ವಚನ ಸಂಕಲನಗಳು ಅನೇಕ ಪ್ರಶಸ್ತಿಗಳನ್ನು ಪಡೆದಿವೆ. ಇವೆಲ್ಲಕ್ಕೂ ಹೆಚ್ಚಾಗಿ ಅವರು ಬತ್ತಲಾರದ ಪ್ರೀತಿಯ ಒರತೆ. ಇಂತಹ ಸ್ವಾಮಿಗಳು ನಮಗೆ ಸಿಕ್ಕಿದ್ದು ನಮ್ಮ ನಾಡಿನ ಸುದೈವವೆಂದು ನಾನು ಭಾವಿಸಿದ್ದೇನೆ.

ಸಂಗೀತದ ಶ್ರೀನಿಧಿ

• ರವೀಂದ್ರ ಸೋರಗಾಂವಿ

" ಸರಸ ಸಾಹಿತ್ಯ ಸಂಗೀತ ಸಲ್ಲಾಪತೇ ಶಂಭುಲಿಂಗ " ಎನ್ನುವ ಶ್ರೀಮನ್ ನಿಜಗುಣರ ಉಕ್ತಿಯಂತೆ ಪರಮಾತ್ಮನು ಸಾಹಿತ್ಯ ಹಾಗೂ ಸಂಗೀತ ಇವೆರಡರಲ್ಲೂ ಪ್ರೀತಿಯುಳ್ಳವನು. ಸಂಗೀತ ಒಂದು ಅದ್ಭುತವಾದ ಯೋಗ. ಮನಃಸ್ವಾಸ್ಥ್ಯಕ್ಕೆ ಪವಿತ್ರವಾದ ಸಾಧನೆ.

ಸಂಗೀತದ ಅನಂತತೆಯ ಅನುಭವಾಂತರಾಳದಲ್ಲಿ ಲಿಂಗಾಂಗ ಸಾಮರಸ್ಯ ಸುಖಿಸಿ ಜಗತ್ತಿಗೆ ಇವೆರಡರಲ್ಲಿ ಆನಂದಿಸುವದನ್ನು ಸುಖಿಸುವದನ್ನು ತೋರಿಸುತ್ತಲಿದ್ದಾರೆ. ನವ್ಯ ವಚನಕಾರರಾದ ಮೋಟಗಿ ಮಠದ ಪೂಜ್ಯ ಶ್ರೀ ಚನ್ನಬಸವ ದೇವರು (ಅಥಣೀಶ). ಶ್ರೀಗಳಿಗೆ ಸಂಗೀತ ಸಂಸ್ಕಾರ ರಕ್ತಗತವಾಗಿ ಮೂಡಿ ಬಂದುದು. ಪೂಜ್ಯರ ತಂದೆಯವರಾದ ಶ್ರೀ ವೇದಮೂರ್ತಿ ಗುರುಮೂರ್ತಯ್ಯನವರು ಶ್ರೇಷ್ಠ ದಮಡಿ ವಾದಕರು. ಹಾಗು ಶ್ರೀನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿಯನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅವರ ಸಂಸ್ಕಾರದಿಂದ ಪೂಜ್ಯರಲ್ಲಿ ಸಂಗೀತ ಕಲೆಯು ಸಹಜವಾಗಿ ಮೂಡಿದೆ. ಶಿವಯೋಗ ಮಂದಿರದಲ್ಲಿ ಅಧ್ಯಾತ್ಮ ಸಾಧನೆಯ ಜೊತೆಗೆ ಸಂಗೀತ ಸಾಧನೆ ತಬಲಾ, ಹಾರ್ಮೋನಿಯಂ ನುಡಿಸುವದು. ಶರಣರ ವಚನಗಳನ್ನು ಸ್ವತಃ ರಾಗ ಸಂಯೋಜಿಸಿ ಸುಶ್ರಾವ್ಯವಾಗಿ ಹಾಡುವದು ಶ್ರೀಗಳ ಹವ್ಯಾಸವಾಗಿತ್ತು. ಮೈಸೂರಿನಲ್ಲಿ ಉನ್ನತ ವ್ಯಾಸಂಗದ ಜೊತೆಗೆ ಸಂಗೀತ ವಿದ್ವಾಂಸರ ಒಡನಾಟ ಬೆಳಿಸಿದರು. ಆಗಾಗ ಸಂಗೀತ ನಿರ್ದೇಶಕರನ್ನು ಕಂಡು ಹೊಸ ಹೊಸ ಹಾಡುಗಳಿಗೆ ಹೊಸ ರೀತಿಯ ರಾಗ ಸಂಯೋಜಿಸಿದರು.

ಬಸವಶ್ರೀ ಒಂದು ನೆನಪು :

ಪೂಜ್ಯರ ಜೊತೆ ನಾನು ಕಾರ್ಯಕ್ರಮಕ್ಕೆ ಹೋಗುವಾಗ ಹೋಗು ಹೋಗುತ್ತಲೆ ಕವನ ರಚಸಿ, ರಾಗ ಸೂಚಿಸಿ ಊರು ತಲುಪಿದ ನಂತರ ಅದೇ ಕಾರ್ಯಕ್ರಮದಲ್ಲಿ ನನ್ನಿಂದ ಆ ಕವನಗಳನ್ನು ಹಾಡಿಸಿದ ಉದಾಹರಣೆಗಳು ಸಾಕಷ್ಟು ಉಂಟು.

ಸ್ಟುಡಿಯೋದಲ್ಲಿ ಧ್ವನಿ ಸುರಳಿಯ ಧ್ವನಿ ಮುದ್ರಣ ನಡೆಯುತ್ತಿದ್ದಾಗಲೆ ವಚನ ರಚಿಸಿ ಖ್ಯಾತ ಗಾಯಕರಿಂದ ಹಾಡಿಸಿದ ಶ್ರೀಗಳ ಪ್ರತಿಭೆ ಅಪೂರ್ವವಾದದ್ದು. ಅವರ 'ಬಸವಶ್ರೀ' ಧ್ವನಿ ಸುರಳಿಗೆ ನಾನೇ ಧ್ವನಿ ನೀಡಿದ್ದೇನೆ. ಕವಿ, ವಚನಕಾರ. ದಾರ್ಶನಿಕ. ಅನುಭಾವಿ, ಪ್ರವಚನ ಪಟುಗಳಾಗಿರುವ ಶ್ರೀಗಳು ಹಾರ್ಮೋನಿಯಂ ಮಿಡಿದು ನಾದ ಸುಧೆಯನ್ನು ಹೊರಸೂಸುವರು. ಇಷ್ಟೆಲ್ಲಾ ಕಲೆಗಳು ಈ ಯುವ ಪ್ರತಿಭೆಯಲ್ಲಿ ಮೇಳೈಸಿಕೊಂಡಿರುವುದನ್ನು ನೆನಪಿಸಿ ಕೊಂಡರೆ ಮೈ-ಮನ ರೋಮಾಂಚನಗೊಳ್ಳುವದು.

ಗಾನಯೋಗಿ

● ಅಂಬಯ್ಯ ನುಲಿ

ಅಥಣಿ ಸುಕ್ಷೇತ್ರ. ಅಲ್ಲಿಯ ಶ್ರೀ ಮೋಟಗಿಮಠ ಶರಣ ಸಂಸ್ಕೃತಿಯ ದಿವ್ಯ ಜ್ಯೋತಿ. ಕ್ರಿಯಾಶೀಲ ಗುರು ಚನ್ನಬಸವದೇವರು ಆ ಜ್ಯೋತಿಯ ಮಹಾಬೆಳಗು. ನಾನು ವೃತ್ತಿಯಿಂದ ಶಿಕ್ಷಕನಾಗಿದ್ದರೂ ನನ್ನ ಒಲವಿನ ಕ್ಷೇತ್ರ ಸಂಗೀತ. ನನ್ನ ತಂದೆ ದಿವಂಗತ ಶ್ರೀ ಮಹಾದೇವಯ್ಯ ನುಲಿಯವರು ಗುಬ್ಬಿ ಕಂಪನಿಯ ಕಲಾವಿದರಾಗಿದ್ದರು. ಅವರೆಂದೂ ಕುಟುಂಬದ ಸುಖ-ದುಃಖಗಳಲ್ಲಿ ಭಾಗಿಗಳಾಗಿರಲಿಲ್ಲ. ಆದ್ದರಿಂದ ತಂದೆಯಂತೆ ಮಗನು ಸಂಗೀತದ ಹುಚ್ಚಿನಿಂದ ಹಾಳಾಗಬಾರದೆಂದು ನನ್ನ ಚಿಕ್ಕಪ್ಪ ಶ್ರೀ ರಾಮಸ್ವಾಮಿ ನುಲಿಯವರು ತಮ್ಮಲ್ಲಿಯೇ ನನ್ನನ್ನು ಇಟ್ಟುಕೊಂಡು ಪ್ರೀತಿ-ವಾತ್ಸಲ್ಯ ನೀಡಿ ವಿದ್ಯಾಭ್ಯಾಸ ಮಾಡಿಸಿದರು.

ಆದರೆ ನನ್ನ ಮನ ಸಂಗೀತದೆಡೆಗೆ ತುಡಿಯುತ್ತಿತ್ತು. ಇದನ್ನು ಅರಿತ ನನ್ನ ಚಿಕ್ಕಪ್ಪ ಶ್ರೀ ನಾರಾಯಣ ಥಗೆಯವರಲ್ಲಿ ಸಂಗೀತ ಕಲಿಯೆಂದು ಕಳುಹಿಸಿದರು. ಶ್ರೀ ಥಗೆಯವರ ಆಶೀರ್ವಾದದಿಂದ ನಾನೊಬ್ಬ ಸಂಗೀತಗಾರನಾದೆ. ' ವಚನವಾಣಿ ' ಧ್ವನಿ ಸುರುಳಿಯ ಮೂಲಕ ನಾಡಿನ ಮನಗೆದ್ದ ನನಗೆ ಒಂದು ದಿನ ಶ್ರೀ ಚನ್ನಬಸವದೇವರ ಪತ್ರ ಬಂತು. ಆ ಸುದೀರ್ಘ ಓಲೆಯೊಂದಿಗೆ ದೇವರ ದೂರವಾಣಿ ಕರೆಯೂ ಬಂತು. ಶರಣಾರ್ಥಿ ಅಂಬಯ್ಯ ನುಲಿಯವರಿಗೆ. ನಾನು ಅಥಣಿಯ ಸ್ವಾಮೀಜಿ. ನಿಮ್ಮ ನೋಡುವ. ನಿಮ್ಮ ಜೊತೆ ಚಿಂತನೆ ಮಾಡುವ ಅಪೇಕ್ಷೆಯಾಗಿದೆ. ನಿಮ್ಮ ' ವಚನವಾಣಿ ', ' ನಂಬಿದೆ ನಿನ್ನ ಪಾದ ' ಪ್ರತಿ ದಿನ ಕೇಳಿ ಆನಂದ ಪಡುತ್ತಿರುವೆ. ಹೇಳಿ ನಾನೇ ನಿಮ್ಮ ಹತ್ತಿರ ಬರಲೇ ? ಅಂದಾಗ ನನ್ನ ಮನಸ್ಸು ರೋಮಾಂಚನಗೊಂಡಿತು. ಶರಣು ಅಪ್ಪಾಜಿಯವರೆ ನಾನೇ ನಿಮ್ಮನ್ನು ಕಾಣಲು ಬರುತ್ತೇನೆ. ದಿನವನ್ನು ಗೊತ್ತುಮಾಡಿ ಅಂದಾಗ ಕೆಲವು ದಿನಗಳಲ್ಲಿಯೇ ಮಹಾರಾಷ್ಟ್ರದ ಜತ್ತನಲ್ಲಿ ನನ್ನ ಪ್ರವಚನವಿದೆ. ದಿನಾಂಕ ೧೮-೮-೨೦೦೦ ರಂದು ಅಲ್ಲಿ ನಿಮ್ಮ ಸಂಗೀತ ಕಾರ್ಯಕ್ರಮ ಇದೆಯೆಂದು ಶ್ರೀಗಳು ದೂರವಾಣಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ ಸರಿಯಾಗಿ ೮ ಗಂಟೆಗೆ ಜತ್ತ ತಲುಪಿದೆ. ನನಗಾಗಿ ಒಬ್ಬ ಶರಣ ನಿಲ್ದಾಣದಲ್ಲಿ ಕಾಯುತ್ತಿದ್ದ. ನನ್ನನ್ನು ನೋಡಿದ ತಕ್ಷಣ ನೀವು ಅಂಬಯ್ಯ ನುಲಿ ತಾನೇ ? ಎಂದು ಕೇಳಿಯೇ ಬಿಟ್ಟರು. ಹೌದು ಎಂದೆ. ಬನ್ನಿ. ನಿಮ್ಮ ಸೇವೆಗಾಗಿ ನಾನು ಬಂದಿದ್ದು. ಶ್ರೀಗಳು ನಿಮ್ಮ ನಿರೀಕ್ಷೆಯಲ್ಲಿದ್ದಾರೆ ಎಂದು ಹೇಳಿ ಶ್ರೀಗಳು ಇರುವ ಸ್ಥಳಕ್ಕೆ ನನ್ನನ್ನು ಕರೆದೊಯ್ದರು. ಮೂಡುತ್ತಿರುವ ಹುಣ್ಣಿಮೆಯ ಚಂದ್ರನ ಕಾಂತಿವೆತ್ತ ಸ್ವಾಮೀಜಿಯವರನ್ನು ಕಂಡು ಮನಸ್ಸು ಪಾದಕ್ಕೆ ಮಣಿಯಿತು. ಭಾವ ಮೈಗೂಡಿತು. ಕೈ ತಾವಾಗಿಯೇ ಮುಗಿದವು. ಶರಣು ಹೇಳಿ ಮೌನವಾಗಿ ನಿಂತುಕೊಂಡೆ.

ಸ್ವಾಮೀಜಿಯವರು ಮರು ಶರಣಾರ್ಥಿಗಳನ್ನು ಹೇಳುತ್ತಾ, ನನ್ನ ಯೋಗಕ್ಷೇಮ ವಿಚಾರಿಸಿ, ನಿಮ್ಮನ್ನು ನೋಡಿಕೊಳ್ಳಲು ಇಗೋ ಈ ಭಕ್ತರಿದ್ದಾರೆ. ಬೇಗ ಸ್ನಾನ ಪೂಜೆ ಮುಗಿಸಿ, ಪ್ರಸಾದ ಮಾಡಿರಿ, ಸ್ವಲ್ಪ ವಿರಾಮ ಮಾಡಿ. ದೂರದ ಪ್ರಯಾಣ ಆಯಾಸವಾಗಿರಬಹುದು ಎಂದು ಅಪ್ಪಣೆ ಮಾಡಿದರು. ನಾನೆಂದೂ ಅಂತಹ ಆತಿಥ್ಯ ಪಡೆದಿರಲಿಲ್ಲ. ಅಂದು ಮಧ್ಯಾಹ್ನ ೨ ಘಂಟೆ ಆಗಿರಬಹುದು ಸ್ವಾಮೀಜಿಯವರೊಂದಿಗೆ ನನ್ನ ಬದುಕು, ಸಂಗೀತ ಅಭ್ಯಾಸದ ವಿಚಾರ ಹಂಚಿಕೊಂಡೆ. ಆನಂದಪಟ್ಟರು. ಸ್ವಾಮೀಜಿಯವರ ಎರಡು ವಚನಗಳನ್ನು ಹಾಡಿದೆ. ಅದ್ಭುತವೆಂದು ವರ್ಣಿಸಿದರು. ಸ್ವತಃ ಸಂಗೀತಗಾರರೂ ಆದ ಸ್ವಾಮೀಜಿ ಹಾರ್ಮೋನಿಯಂ ನುಡಿಸುತ್ತಾ ಹಾಡಿದರು. ನಾನಂತೂ ಸುಸ್ತುಹೊಡೆದೆ. ಜೊತೆಗೆ ತಬಲ ಕೂಡಾ ಲೀಲಾಜಾಲವಾಗಿ ನುಡಿಸಿದರು. ಇಂಥ ಸ್ವಾಮೀಜಿಯವರು ಸಿಗುವುದು ಬಹಳ ವಿರಳ. ಆ ದಿನ ಸಾಯಂಕಾಲದ ನನ್ನ ಸಂಗೀತ ಕಾರ್ಯಕ್ರಮದ ಭಿತ್ತಿಪತ್ರವನ್ನು ಕೊಟ್ಟರು. ಅದರಲ್ಲಿ ಪಂಡಿತ ಅಂಬಯ್ಯ ನುಲಿ ಎಂದು ಬರೆಸಲಾಗಿತ್ತು. ಓದಿ ಮನಸ್ಸಿಗೆ ಮುಜುಗರವಾಗಿ ಸ್ವಾಮೀಜಿಯವರೇ, ನನ್ನನ್ನೇಕೆ ? ಪಂಡಿತರೆಂದು ಸಂಬೋಧಿಸಿದ್ದೀರಿ ? ದಯವಿಟ್ಟು ಎನ್ನುವಂತೆಯೇ.... ಅದು " ಅಥಣೀಶನ ಆಶೆ. ಆಶೀರ್ವಾದ. ಮುಂದೆ ನೀವು ಪಂಡಿತರಾಗಬೇಕೆಂದು ನಮ್ಮ ಅಪೇಕ್ಷೆ" ಎಂದರು.

ಅಂದು ಶ್ರೀಗಳವರೇ ನನ್ನ ವಚನ ಗಾಯನಕ್ಕೆ ಹಾರ್ಮೋನಿಯಂ ಸಾಥ್ ನೀಡಿದರು. ಅದು ಮರೆಯಲಾಗದ ದಿನ. ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಅಪಾರ ಭಕ್ತ ಸಮೂಹ, ಇನ್ನೊಂದು ಮತ್ತೊಂದು ಹಾಡಬೇಕು ಎಂದು ಪ್ರೋತ್ಸಾಹಿಸುತ್ತಾ ಹಾಡಿಸಿ ಹಾರೈಸಿದರು. ಆ ದಿನ ನಾನೆಂದೂ ಮರೆಯುವುದಿಲ್ಲ.

ಮರುದಿನ ಶ್ರೀಗಳವರು ತಮ್ಮ ವಾಹನದಲ್ಲಿಯೇ ಕೂಡಿಸಿಕೊಂಡು ಅಥಣಿ ಮೋಟಗಿ ಮಠಕ್ಕೆ ನನ್ನನ್ನು ಕರೆದುಕೊಂಡು ಬಂದರು. ತಮ್ಮ ವಚನಗಳನ್ನು ನನ್ನ ಕೈಗಿತ್ತರು. ಅವರ ವಚನಗಳು ನನ್ನ ಮನ ಸೆಳೆದವು. " ಅತಿಯಾದ ಬುದ್ಧಿಗಿಂತ ", " ರೂಪ ಬಣ್ಣಕ್ಕಾಗಿ ಚಿಂತೆ ". " ವೀರನಾದರೇ ಸಿಂಧೂರ ಲಕ್ಷ್ಮಣನಾಗು ". " ಸ್ವಾಮಿ ನಾನು: ಉಪದೇಶಕ ನಾನಲ್ಲ' ಎಂಬ ಶ್ರೀಗಳವರ ವಚನ ಭಾವಗಳು ನನ್ನಲ್ಲಿ ಸಂಚರಿಸಹತ್ತಿದವು. ಈ ಸಂಸ್ಕಾರದ ಫಲವೇ ' ವಚನ ಚಂದನ '. ಆ ಧ್ವನಿ ಸುರಳಿಯನ್ನು ಇಳಕಲ್ಲಿನ ಮಹಾಂತ ಸ್ವಾಮಿಗಳು ಬಿಡುಗಡೆ ಮಾಡಿದರು.

ಸ್ವಾಮೀಜಿಯವರು ಈಗ ನನ್ನ ಜೀವದ ಉಸಿರಾಗಿದ್ದಾರೆ. ತಿಂಗಳಿಗೆ ನಾಲ್ಕೈದು ಸಲವಾದರೂ ದೂರವಾಣಿ ಮುಖಾಂತರ ನನ್ನ ಯೋಗಕ್ಷೇಮ ವಿಚಾರಿಸುತ್ತಾರೆ. ಬಹು ತೀವ್ರವಾಗಿ ' ವಚನ ಚಂದನ ' ನಾಡಿನಾದ್ಯಂತ ಭಕ್ತರ, ಸ್ವಾಮಿಗಳ ಹೃದಯ ತುಂಬಿತು. ಅಂತೆಯೇ ಸ್ವಾಮಿಯವರು, ಪುನಃ ' ಅಥಣೀಶನ ' ವಾಣಿಯಂತೆ ರಚಿತವಾದ ವಚನಗಳ ಧ್ವನಿ ಮುದ್ರಣ ಮಾಡಿಸಿದರು. ಅದುವೇ ' ವಚನ ಗಂಗೋತ್ರಿ'. ಶ್ರೀಗಳು ನುಡಿದಂತೆ ನಡೆಯುವ ಶರಣ ಜೀವಿಗಳು. ಶ್ರೀಗಳ ಆಶೀರ್ವಾದದಿಂದ ನಾನು ಧನ್ಯನಾಗಿದ್ದೇನೆಂದು ಹೇಳಲು ಹೃದಯ ತುಂಬಿಬರುತ್ತದೆ. ಅವರ ಕೃಪೆಯೇ ನನಗೆ ಶ್ರೀರಕ್ಷೆ.

■■

ಗ್ರಂಥಾಲಯ
ಬೆಂಗಳೂರು-19

ಕ್ರಾಂತಿಯೋಗಿ

• ಲಕ್ಷ್ಮೀದೇವಿ ಪಾಟೀಲ

ಧಾರ್ಮಿಕ ಕ್ಷೇತ್ರದಲ್ಲಿ ತನ್ನದೆ ಆದ ವೈಶಿಷ್ಟ್ಯಗಳಿಂದ ಎದ್ದು ತೋರುವ ನಗರ ಅಥಣಿ. ರಾಮದಾಸ, ರಮಣಮಹರ್ಷಿ, ಸಿದ್ಧಾರೂಢ, ಮುರುಗೋಡ ಮಹಾಂತಜ್ಜನವರನ್ನು ತನ್ನ ಕಡೆಗೆ ಕೈ ಮಾಡಿ ಕರೆದ ಕ್ಷೇತ್ರವಿದು. ಮಹಾತಪಸ್ವಿ ಜಂಗಮ ಜ್ಯೋತಿ, ವಿರಕ್ತ ಚಕ್ರವರ್ತಿ ಶ್ರೀ ಮುರುಘೇಂದ್ರ ಶಿವಯೋಗಿಗಳ ತಪೋಭೂಮಿಯಿದು.

ಸುಕ್ಷೇತ್ರ ಮೋಟಗಿಮಠದ ಪರಂಪರೆ ಕುರಿತು ಬರೆಯುತ್ತಾ ಹೋದರೆ ಒಂದು ಉದ್ಗ್ರಂಥವಾದೀತು. ಅಥಣಿಯ ಗಚ್ಚಿನಮಠ ಅನ್ನದಾಸೋಹದ ಮಹಾಮನೆಯಾದರೆ ಮೋಟಗಿಮಠ ಜ್ಞಾನದಾಸೋಹದ ಅನುಭವ ಮಂಟಪ.

ನಾನು ತಂದೆಯವರೊಂದಿಗೆ ಅಥಣಿಗೆ ಬಂದಿದ್ದೆ. ಆಗ ಚನ್ನಬಸವದೇವರು ೯-೧೦ ವರುಷದ ಬಾಲಕ. ಉದ್ದನೆಯ ಕಫನಿಯನ್ನು ಎರಡೂ ಕೈಯಲ್ಲಿ ಎತ್ತಿಹಿಡಿದು ಮೋಟಗಿಮಠದಲ್ಲಿನ ಕೋಣೆಯ ಮುಂದೆ ನಿಂತು ತದೇಕ ಚಿತ್ತದಿಂದ ನಮ್ಮನ್ನು ದಿಟ್ಟಿಸುತ್ತಿದ್ದರು. ನಾನು ನಮ್ಮ ತಂದೆಯವರು ಅಕ್ಕ-ತಂಗಿಯರು ಜೋಡಿದಾರರು ಇದ್ದೆವು. ನಾವೆಲ್ಲ ಮಾಡುತ್ತಿದ್ದ ಗದ್ದಲ ಕೇಳುತ್ತ ನಗುಮುಖದಿಂದ ನೋಡುತ್ತ ನಿಲ್ಲುತ್ತಿದ್ದ ಆ ಬಾಲಕ ಚನ್ನಬಸವದೇವರನ್ನು ನಾನೆಂದೆಗೂ ಮರೆಯಲಾರೆ. ನಮ್ಮ ತಂದೆ ಲಿಂ. ಪಂಡಿತ ಮಲ್ಲಿಕಾರ್ಜುನ ಮನ್ಸೂರರರು ದೇವರುಗಳನ್ನು ಕಂಡಕೂಡಲೇ. "ಬರ್ರಿ ಬರ್ರಿಪಾ" ಎಂದು ಎದ್ದು ಬಂದು ಕೈ ಹಿಡಿದು ಪ್ರೀತಿಯಿಂದ ತಮ್ಮ ಹತ್ತಿರ ಕೂಡ್ರಿಸಿಕೊಳ್ಳುತ್ತಿದ್ದರು. ಮ.ನಿ.ಪ್ರ. ಗುರುಬಸವಲಿಂಗಸ್ವಾಮಿಗಳು 'ದೇವರೂ' ಎಂದು ಕೂಗುವರು. ದೇವರುಗಳು ಎದ್ದು 'ಬಂದಿನ್ರೀ ಬುದ್ದಿ' ಎಂದು ಓಡಿದರು. ಅರ್ಧತಾಸಿನಲ್ಲಿ ಮತ್ತೆ ಬಂದು ನಮ್ಮ ಹತ್ತಿರ ಕುಳಿತರು. ಆಗ ಮತ್ತೆ ಅದೇ ಕೂಗು. ಮತ್ತೆ ಓಡಿದರು. ಇದು ಹಲವು ಸಲ ಪುನರುಕ್ತಿಗೊಂಡಿತು.

ಪ್ರತಿ ಶಿವರಾತ್ರಿಗೊಮ್ಮೆ ನಮ್ಮ ತಂದೆಯವರ ಜೊತೆ ಶಿವಯೋಗಿಗಳ ಸೇವೆಗೆ ನಾವೆಲ್ಲ ಅಥಣಿಗೆ ಬರುತ್ತಿದ್ದೆವು. ಆಗ ನಾವೆಲ್ಲ ಮೋಟಗಿಮಠದಲ್ಲಿ ವಾಸ್ತವ್ಯ ಹೂಡುತ್ತಿದ್ದೆವು. ನಮಗೆ ದೇವರುಗಳೆಂದರೆ ಬಲು ಪ್ರೀತಿ. ಭಕ್ತಿ. ಅವರು ಎದ್ದು ಓಡಿ

ಹೋದಕೂಡಲೆ ನಮ್ಮ ತಂದೆಯವರ ಮುಖ ಸಪ್ಪಗಾಗುತ್ತಿತ್ತು. ನಮ್ಮನ್ನೆಲ್ಲ ನೋಡುತ್ತ " ತಂಗೀ, ಸಣ್ಣ ವಯಸ್ಸು, ಪಾಪ ಗುರುಗಳು ಒಂದು ಕ್ಷಣವೂ ಅವರನ್ನು ಬಿಡುವುದಿಲ್ಲ. ಆಟವಾಡುವ ವಯಸ್ಸು, ಏನೂ ತಿಳಿಯದ ಮನಸ್ಸು, ಇಷ್ಟು ಸಣ್ಣ ಹುಡುಗರಿದ್ದಾಗ ಯಾಕಾದರೂ ಸ್ವಾಮಿಗಳನ್ನಾಗಿ ಮಾಡುತ್ತಾರೆ. ಶಿವ-ಶಿವಾ " ಎನ್ನುತ್ತಿದ್ದರು. ಪುನಃ ದೇವರುಗಳು ಬಂದಾಗ ' ಬರ್ರಿಪಾ, ಬರ್ರಿ ಬರ್ರಿ' ಎನ್ನುತ್ತಿದ್ದರು.

ಮತ್ತೊಮ್ಮೆ ಮಕ್ಕಳೆಲ್ಲ ಪೇಟೆಗೆ ಹೋಗಲು ಹಟಮಾಡುತ್ತಿದ್ದರು. " ತಂಗೀ, ಎಲ್ಲರನ್ನೂ ಪ್ಯಾಟಿಗೆ ಕಾರಿನ್ಯಾಗ ಕರ್‍ಕೊಂಡು ಹೋಗಿ ಬರ್‍ತೀನಿ " ಎಂದು ಹೇಳಿ ತಂದೆ ಹೊರಟರು. ಮಕ್ಕಳನ್ನೆಲ್ಲ ಕರೆದುಕೊಂಡು ಹೋಗುವುದನ್ನು ದೇವರುಗಳು ಅದೇ ಹಸನ್ಮುಖದಿಂದ ನೋಡುತ್ತ ನಿಂತಿದ್ದರು. ಅದನ್ನು ನೋಡಿದ ನಮ್ಮ ತಂದೆ " ಬರ್ರಿ, ಬರ್ರಿ. ದೇವರು, ತಾವೂ ಕಾರನ್ನು ಹತ್ತಿ" ಎಂದು ಕೈ ಹಿಡಿದು ಹತ್ತಿಸಲು ಪ್ರಯತ್ನಿಸಿದಾಗ ದೇವರುಗಳು ' ಬೇಡ ಗುರುಗಳು ಬೈಯುತ್ತಾರೆ. ನನಗೆ ಭಯವಾಗುವುದು ' ಎಂದು ಕೊಸರಾಡಿದರು. ತಂದೆಯವರ ಕಣ್ಣು ತುಂಬ ನೀರು. ಶಿವ ಶಿವಾ ಅದೆಷ್ಟು ಭಯ ! ಸಣ್ಣ ಕಂದನಿಗೆ ತನ್ನ ಮನಸ್ಸಿಗೆ ಬಂದಂತೆ ನಡೆದುಕೊಳ್ಳಲು ಅನುಮತಿ ಇಲ್ಲವಲ್ಲಾ ಎಂದು ನೊಂದು, " ಇರಲಿ, ಕಾರನ್ನು ಹತ್ತಿ, ಗುರುಗಳಿಗೆ ನಾ ಹೇಳ್ತೇನ್ರಿಪಾ " ಎಂದು ದೇವರುಗಳನ್ನು ಕರೆದುಕೊಂಡು ಹೊರಟೇಬಿಟ್ಟರು. ಅರ್ಧ ತಾಸಿನ ನಂತರ ಅವರು ಬಂದಾಗ ನಮ್ಮ ತಂದೆಯ ಮುಖದಲ್ಲಿ ಅದೇನೋ ಸಂತೃಪ್ತಿ, ಹೆಮ್ಮೆ. ಗದ್ದಲ ಮಾಡಬೇಡಿರಿ ಎಂದು ಮಕ್ಕಳಿಗೆ ಹೇಳುತ್ತಾ " ತಂಗೀ, ಗುರುಗಳು ದೇವರುಗಳನ್ನು ಕರೆದರೆ ?" ಎಂದು ಭಯದಿಂದ ಮೆಲ್ಲನೇ ನನ್ನನ್ನು ಕೇಳಿದರು. ಇಲ್ಲಪ್ಪಾ ಎಂದೆ, ಪುಣ್ಯಕ್ಕೆ ಮಧ್ಯಾಹ್ನ ಅವರು ವಿಶ್ರಮಿಸಿದ್ದರು. ಶಿವನ ದಯೆ ಅಷ್ಟರಲ್ಲಿ ಸ್ವಾಮಿಗಳು ಎದ್ದು ' ದೇವರೂ ' ಎಂದಾಗ ದೇವರುಗಳು ಒಂದೇ ಕ್ಷಣದಲ್ಲಿ ಮಾಯವಾಗಿದ್ದರು.

ನಮ್ಮ ತಂದೆ ನನ್ನ ಬಳಿಗೆ ಬಂದು ಕುಳಿತು " ಯವ್ವಾ ತಂಗೀ ನನ್ನ ಮನಸ್ಸಿಗೆ ಒಂದು ನಮೂನೆಯಾಗುತ್ತಿದೆ " ಎಂದು ಹೇಳುತ್ತ ಮರೆಯಲ್ಲಿ ಬೀಡಿ ಹಚ್ಚಿದರು. ನಾನು ' ಯಾಕಪ್ಪಾ' ಎಂದೆ. " ಏನು ಹೇಳಲಿ ತಂಗಿ, ನಾನು ಹುಡುಗರನ್ನೆಲ್ಲಾ ಪೇಟೆಗೆ ಕರೆದುಕೊಂಡು ಹೋಗಿ ಐಸ್ ಕ್ರೀಮ್ ತಿನಿಸಲು ಕಾರಿನಿಂದ ಕೆಳಗಿಳಿದೆ. ಆದರೆ ದೇವರುಗಳು ಇಳಿಯಲಿಲ್ಲ. ನಾನು ಎಲ್ಲರಿಗೂ ಐಸ್‌ಕ್ರೀಮ್ ಕೊಡಿಸಿ ದೇವರಿಗೊಂದು ಮುಚ್ಚಿ ತೆಗೆದುಕೊಂಡು ಹೋದೆ. ಅದನ್ನು ನೋಡಿ ದೇವರುಗಳು ನಮಗೆ ಬೇಡ ಎನ್ನಹತ್ತಿದರು. ನಾನು ಬಹಳ ಜುಲುಮಿ ಮಾಡಿ ತಿನ್ನಿಸಹತ್ತಿದೆ. ಎಳೆಯ ಮನಸ್ಸು ಐಸಕ್ರೀಮ್ ತಿನ್ನುವಾಗ ಅವರನ್ನು ನೋಡಬೇಕಿತಪ್ಪಾ. ಯಾರಾದರೂ ನೋಡಿಯಾರೆಂಬ ಭಯ. ಗುರುಗಳಿಗೆ ಹೇಳಿಯಾರೆಂಬ ಭಯ. ನಾನಂತೂ ಎದುರಿಗೇ ನಿಂತಿರುವೆ. ನನ್ನನ್ನು ನೋಡುತ್ತಾ ನಗುತ್ತಾ ತಿನ್ನುವ ನೋಟ ನನ್ನ ಹೃದಯವೇ ಬಾಯಿಗೆ ಬಂದಂತಾಯಿತು. ತಂಗೀ ನಾಳೆ ಸ್ವಾಮಿಯಾಗುವ ಕಂದ ಇಂದು ಏನೆಲ್ಲ ತ್ಯಾಗಮಾಡಬೇಕಲ್ಲಾ ಇದೆಂತಹ ನ್ಯಾಯ ? ನಾನೂ ಈ ಪ್ರಶ್ನೆಯನ್ನು ಸ್ವಾಮಿಗಳನ್ನೇ ಕೇಳುತ್ತೇನೆ " ಎಂದರು ಸಿಟ್ಟಿನಿಂದ.

ನಾನಾಗ ಬೇಡಪ್ಪಾ ಅವರೆಲ್ಲ ಏನೇನೊ ಕಟ್ಟುಪಾಡುಗಳನ್ನು ಮಾಡಿಕೊಂಡಿರುತ್ತಾರೋ ಏನೋ. ಪೂಜ್ಯ ಗುರುಬಸವ ಸ್ವಾಮಿಗಳಂತೂ ಬಹಳ ಸಿಟ್ಟಿನ ಸ್ವಭಾವದವರು ಎನ್ನುತ್ತೀರಿ ಎಂದೆ. ' ಹಿಂಗಂತಿ ತಂಗೀ. ಹೌದು ಸ್ವಾಮಿಗಳಿಗೆ ಸಿಟ್ಟು ಬಹಳ ' ಎಂದೆನ್ನುತ್ತ ಇನ್ನೊಂದು ಬೀಡಿಯನ್ನು ಹಚ್ಚಿ ಸೇದಹತ್ತಿದರು. ಹೀಗೆ ನಾವುಗಳು ಪ್ರತಿ ಶಿವರಾತ್ರಿಗೆ ಹೋಗುತ್ತ- ಬರುತ್ತ ಎರಡೂ ಮಠಗಳಲ್ಲಿ ಓಡಾಡುತ್ತ ನಮ್ಮ ತಂದೆಯು ಸಂಗೀತ ಸೇವೆಯಲ್ಲಿ ಭಾಗಿಗಳಾಗುತ್ತಿದ್ದೆವು. ಕಾಲಾನಂತರ ಪೂಜ್ಯ ಮ.ನಿ.ಪ್ರ. ಗುರುಬಸವ ಸ್ವಾಮಿಗಳು ಲಿಂಗೈಕ್ಯರಾದರು. ದೇವರುಗಳನ್ನು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸಕ್ಕೆಂದು ಇಟ್ಟರು. ಕೆಲವು ವರ್ಷಗಳ ನಂತರ ನಮ್ಮ ತಂದೆಯೂ ಶಿವಾಧೀನರಾದರು. ಆದರೂ ಶಿವರಾತ್ರಿಗೆ ಅಥಣಿಗೆ ಹೋಗುವುದನ್ನು ನಿಲ್ಲಿಸಿಲ್ಲ. ಪೂಜ್ಯ ಸ್ವಾಮಿಗಳಾದ ಗುರುಬಸವಲಿಂಗ ಸ್ವಾಮಿಗಳು ಇಲ್ಲಿದಿದ್ದರೂ ಮೋಟಗಿಮಠದಲ್ಲಿ ನಮಗೆಲ್ಲ ಸಿಗುವ ಅನುಕೂಲತೆಗೆ ಯಾವ ತೊಂದರೆಯೂ ಆಗಲಿಲ್ಲ. ಸ್ವಾಮಿಗಳು ಲಿಂಗೈಕ್ಯರಾಗುವ ಮೊದಲು ತಾವಿಲ್ಲದಾಗ್ಯೂ ನಮ್ಮ ತಂದೆಯವರಿಗೆ ನಮಗೆ ಮೊದಲಿನಂತೆಯೇ ನೋಡಿಕೊಳ್ಳಬೇಕೆಂದು ಅಲ್ಲಿನ ಮಠದ ಜನರಿಗೆಲ್ಲ ಅಪ್ಪಣೆ ಕೊಡಿಸಿದ್ದರಂತೆ. ಇವೆಲ್ಲದರ ನಡುವೆ ದೇವರುಗಳು ಮೈಸೂರಿನಲ್ಲಿ ಬಿ.ಎ., ಎಮ್.ಎ. ಡಿಗ್ರಿ ಮುಗಿಸಿ ಅಥಣಿಗೆ ಬಂದರು.

ಆಕಸ್ಮಿಕವಾಗಿ ನನ್ನ ಜೀವನದಲ್ಲಿ ಬಿರುಗಾಳಿಯೊಂದು ಬೀಸಿ ಕಂಗೆಟ್ಟೆ (೧೯೯೮ ರಲ್ಲಿ). ಸಮಾಧಾನವಾಗದೇ ಅಥಣಿಗೆ ನನ್ನ ಮಗಳೊಂದಿಗೆ ಬಂದೆ. ಮೊದಲು ಮೋಟಗಿ ಮಠದಲ್ಲಿ ನಮ್ಮ ಸಾಮಾನುಗಳನ್ನು ಇಟ್ಟು ಕೈ ಕಾಲು ಮುಖ ತೊಳೆದು ಭಸ್ಮಧರಿಸಿ ಪೂಜ್ಯ ಗುರುಬಸವಸ್ವಾಮಿಗಳ ಗದ್ದುಗೆಗೆ ಅಡ್ಡಬಿದ್ದು ಎದ್ದು ನಿಂತಾಗ ಹಿಂದೆ ದೇವರುಗಳು ನಿಂತಿದ್ದರು. ನಾನು ಹೊರಳಿ ನೋಡಿ ಬೆರಗಾದೆ. ಅವರಿಗೆ ತಕ್ಷಣ ಅಡ್ಡ ಬೀಳುವುದನ್ನು ಮರೆತು ಹಾಗೇ ನಿಂತುಬಿಟ್ಟೆ. ಅಂದು ಕಂಡಾಗ ಬಾಲಕ ದೇವರುಗಳು ಇಂದು ಇಷ್ಟೆತ್ತರ ಬೆಳೆದು ನಿಂತಿದ್ದರು. ಎಮ್.ಎ. ಡಿಗ್ರಿಯನ್ನು ಮುಗಿಸಿಕೊಂಡು ಮಠಕ್ಕೆ ಬಂದಿದ್ದರು. ಇಂದು ಇವರು ಅಸಾಧಾರಣ ವಚನಕಾರರು. ಚಿಂತನಶೀಲರು. ವಾಗ್ಮಿಗಳು. ಅವರು ಏನೇ ಆಗಿದ್ದರೂ ನಾನು ಅಂದು ಕಂಡ ಅವರ ಹಸನ್ಮುಖ ಇಂದಿಗೂ ಹಾಗೇ ಇದೆ. ಆ ಸ್ನಿಗ್ಧ ನಗುವಿನ ಹಿಂದೆ ಅವರ ಭಾವದ ಆಳದಲ್ಲಿ ಅಡಗಿದ್ದ ನಿಷ್ಕಳಂಕ ಪ್ರೀತಿ ನಮ್ಮಲ್ಲಿ ಅನನ್ಯತೆಯ ಭಾವನೆಯನ್ನು ಮೂಡಿಸುತ್ತದೆ. ಅವರನ್ನು ಇಷ್ಟು ವರ್ಷಗಳ ನಂತರ ಒಮ್ಮೆಲೇ ನೋಡಿ ನನಗಾದ ಆನಂದ ಆಶ್ಚರ್ಯ ವರ್ಣಿಸಲು ಅಸಾಧ್ಯ. ಅವ್ವಾ ಹಾಗೇಕೆ ನಿಂತು ಬಿಟ್ಟಿರಿ ? ಎಂದಾಗಲೆ ನನಗರಿವಾದುದು ನಾನು ಚನ್ನಬಸವ ದೇವರುಗಳ ಮುಂದೆ ನಿಂತಿರುವೆನೆಂದು. ತಕ್ಷಣ ಅವರ ಪಾದಗಳ ಮೇಲೆ ತಲೆ ಇಟ್ಟು ನಮಸ್ಕರಿಸಿದೆ. ನನ್ನ ಜೀವನದಲ್ಲಿ ಬೀಸಿದ ಬಿರುಗಾಳಿಗೆ ನಾನು ಮೊದಲೇ ಸೋತು ಯಾರ ಮುಂದೆಯೂ ಕಣ್ಣೀರನ್ನು ಹಾಕಿರಲಿಲ್ಲ. ಆದರೆ ತಕ್ಷಣ ತಡೆಯಲಾಗದೆ ಕಣ್ಣೀರಿಟ್ಟೆ. ದೇವರುಗಳು ನನ್ನನ್ನು ಎಬ್ಬಿಸಿ " ಅಳಬೇಡಿ ತಾಯಿ ನೀವು ಹೀಗೆ ಅತ್ತರೆ ನಿಮ್ಮ ಮಗಳು ಅಳುತ್ತಾಳೆ. ಜೀವನದಲ್ಲಿ ಬರುವ ಕಷ್ಟಗಳನ್ನು ಧೈರ್ಯದಿಂದ ಎದುರಿಸಬೇಕು " ಎಂದೆಲ್ಲ

ಸಮಾಧಾನ ಮಾಡಿ ಒಂದೆರಡು ದಿನ ತಮ್ಮಲ್ಲೆ ನಮ್ಮನ್ನು ಉಳಿಸಿಕೊಂಡು ನಂತರ ಊರಿಗೆ ಕಳುಹಿಸಿಕೊಟ್ಟರು.

ಇಂದಿಗೂ ನಾನು ನನ್ನ ತಂಗಿ, ತಂಗಿಯ ಮಗಳು ಹಾಗೂ ನನ್ನ ಮಗಳು ಶಿವರಾತ್ರಿಗೆ ತಪ್ಪದೇ ಅಥಣಿಗೆ ಹೋಗುತ್ತೇವೆ. ನಮ್ಮ ತಂದೆ ಪರಿಪಾಲಿಸುತ್ತ ಬಂದ ಸಂಗೀತ ಸೇವೆಯನ್ನು ನನ್ನ ಮಗಳು ಮುಂದುವರಿಸಿಕೊಂಡು ಬರುತ್ತಿರುವಳು. ಗಚ್ಚಿನಮಠ ಹಾಗೂ ಮೋಟಗಿ ಮಠಗಳೆರಡರ ನಡುವೆ ೩-೪ ದಿವಸ ಸಂತೋಷದಿಂದ ಓಡಾಡಿಕೊಂಡು ಮರಳಿ ಊರಿಗೆ ಬರುವ ದಿವಸ ದೇವರುಗಳು ಹೋಳಿಗೆಯ ಪ್ರಸಾದ ಮಾಡಿಸುತ್ತಾರೆ. ಆದರೆ ಹೋಗುವ ದಿವಸ ನಮಗೆಲ್ಲ ತವರು ಮನೆಯಿಂದ ಗಂಡನ ಮನೆಗೆ ಹೋಗುತ್ತಿರುವಂತೆ ಭಾಸವಾಗುತ್ತದೆ. ಹೊರಡುವಾಗ " ಅಬ್ಬಾ ! ಪೂರ್ತಿ ಒಂದು ವರುಷ ಕಾಯಬೇಕಲ್ಲ, ಪುನಃ ಅಥಣಿಗೆ ಬರಲು !" ಎಂದು ಮನಸ್ಸಿನಲ್ಲಿ ದುಃಖ ತುಂಬಿಕೊಂಡು ತಾಯಿಯನ್ನು ಅಗಲಿದ ತಬ್ಬಲಿ ಹಾಗೆ ಪೂಜ್ಯಶ್ರೀ ಚನ್ನಬಸವ ದೇವರನ್ನು ಅತೀ ಕಷ್ಟದಿಂದ ಅಗಲುತ್ತೇವೆ. ಬರುವಾಗ ನಾವೆಲ್ಲ ಹಿಂದೆ ಹೊರಳಿ ನೋಡಿದರೆ ದೇವರುಗಳು ನಾವು ಮಠದಿಂದ ಮರೆಯಾಗುವ ತನಕ ಹಾಗೇ ನಿಂತ ದೃಶ್ಯ ಹಾಗೂ ಅಂದು ಆ ಪುಟ್ಟ ಬಾಲಕ ತನ್ನ ಕಪನಿಯನ್ನು ಎರಡು ಕೈಯಲ್ಲಿ ಎತ್ತಿ ಹಿಡಿದು ನಗುತ್ತ ನಿಂತ ದೃಶ್ಯ ನನಗೆ ಎಂದಿಗೂ ಮರೆಯಾಗುವುದಿಲ್ಲ.

ಸ್ಫೂರ್ತಿಚೇತನ

● ದುಂಡಯ್ಯ ಡಿಗ್ಗಿಮಠ

ಪಾದರಸದಂತೆ ಸದಾ ಚಟುವಟಿಕೆಯಲ್ಲಿ ತೊಡಗಿ ಜನರಲ್ಲಿ ಧಾರ್ಮಿಕ ನಂಬುಗೆಯನ್ನು ಗಟ್ಟಿಗೊಳಿಸುತ್ತ ತಮ್ಮ ಕಂಚಿನ ಕಂಠದಿಂದ ಜನ ಜಾಗೃತಿ ಮಾಡುತ್ತ ಜನಮನ ಸೂರೆಗೊಂಡ ಯುವ ಪೂಜ್ಯರಲ್ಲಿ ಶ್ರೀ ಚನ್ನಬಸವದೇವರು ಅಗ್ರುಗಣ್ಯರು. ಅವರನ್ನು ಕುರಿತು ಬರೆಯುವುದೆಂದರೆ ಕರಿಯನ್ನು ಕನ್ನಡಿಯೊಳಗೆ ಹಿಡಿದಂತೆ. ಅವರ ಜೀವನ ಸಿದ್ಧಾಂತ ಒಂದು ಬೃಹತ್ ಗ್ರಂಥವಾಗಬಹುದು. ನನ್ನ ಮತ್ತು ಪೂಜ್ಯ ಶ್ರೀ ಚನ್ನಬಸವದೇವರ ಸಂಪರ್ಕ ಬಂದಾಗ ನಾಲ್ಕಾರು ಮಾತುಗಳನ್ನಾಡಿ ಒಲವಿನಿಂದ ನಡೆದುಕೊಂಡದ್ದನ್ನು ಈ ಲೇಖನದಲ್ಲಿ ಮೂಡಿಸಿದ್ದೇನೆ.

ಮಠಗಳ ಕೇಂದ್ರುಸ್ಥಾನ ಅಥಣಿ. ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮಿಗಳ ಮಠದಂತೆ ಶ್ರೀ ಮೋಟಗಿಮಠ ಹಾಗೂ ಶೆಟ್ಟರ ಮಠಗಳು ಜನಮನ್ನಣೆ ಪಡೆದಿವೆ. ಮೋಟಗಿಮಠ ಪ್ರಶಾಂತ ವಾತಾವರಣಕ್ಕೆ ಹೇಳಿಮಾಡಿಸಿದ ತಾಣ. ದಣಿದ ದೇಹದ ಬೇಸರವನ್ನು ಕ್ಷಣಾರ್ಧದಲ್ಲಿ ಹೋಗಲಾಡಿಸುವ ಸ್ಥಳ. ಇಲ್ಲಿ ದೇಹ ತಾನೊಂದು ಯಾವುದೇ ವಾತಾನುಕೂಲಿತ ಕಟ್ಟಡದಲ್ಲೋ ಅಥವಾ ಊಟಿಯಂತಹ ಸ್ಥಳದಲ್ಲಿದ್ದೇನೆ ಎನ್ನದೆ ಬಿಡದು. ಅಷ್ಟೊಂದು ಮುದ ನೀಡುವ ಸ್ಥಳವಿದು. ಈ ಮಠದ ಪರಂಪರೆಯ ಬಗ್ಗೆ ಹೇಳಬೇಕೆಂದರೆ ಹಿಂದಿನ ಪೀಠಾಧಿಪತಿಗಳು ಶ್ರೀ ಗುರುಬಸವ ಮಹಾಸ್ವಾಮಿಗಳು ಒಳ್ಳೆಯ ಮೇಧಾವಿಗಳು, ಕಲಾವಿದರು. ಧಾರ್ಮಿಕ ಪರಂಪರೆಯನ್ನು ಜನಮನದಲ್ಲಿ ಬಿಂಬಿಸಿದ ಮಹಾಮಹಿಮರು. ಅವರು ಹಾಕಿಕೊಟ್ಟ ಧಾರ್ಮಿಕ ವಿವೇಚನೆಯ ಜಾಡಿನಲ್ಲಿ ಮುಂದೆ ಸಾಗಿದವರು ಶ್ರೀ ಚನ್ನಬಸವದೇವರು.

ನಾನು ಅಥಣಿಗೆ ಮೊದಲ ಸಲ ಭೆಟ್ಟಿ ಕೊಟ್ಟಾಗ ಇಲ್ಲಿಯ ಮಠಗಳ ಪರಂಪರೆ ನನಗೆ ಸೋಜಿಗವನ್ನುಂಟು ಮಾಡಿತ್ತು. ಇವುಗಳ ಬಗ್ಗೆ ತಿಳಿಯಬೇಕೆಂಬ ಕುತೂಹಲ ಮೂಡಿತು. ಆದ್ದರಿಂದಲೇ ಏನೋ ಭಗವಂತ ಅದನ್ನು ಕೈಗೂಡಿಸಲೆಂದು ನನ್ನನ್ನು ಕೆ.ಎಲ್.ಇ. ಸಂಸ್ಥೆಯ ಸಿ. ಎಸ್. ಕಿತ್ತೂರ ಪ್ರೌಢಶಾಲೆಗೆ ಸಹಶಿಕ್ಷಕನೆಂದು ನೇಮಿಸಿ ಅಥಣಿಗೆ ಕಳುಹಿಸಿದ. ನಾನು ಪ್ರತಿನಿತ್ಯ ಮೋಟಗಿಮಠಕ್ಕೆ ಭೆಟ್ಟಿಕೊಡುತ್ತಿದ್ದೆ. ಇಲ್ಲಿನ

ಪರಂಪರೆಯನ್ನು ತಿಳಿಯಲು ಪ್ರಯತ್ನಿಸುತ್ತಿದ್ದೆ. ಒಂದು ದಿನ ಹಿರಿಯರೊಬ್ಬರನ್ನು ಮಾತನಾಡಿಸಿ ಈ ಮಠದ ಸದ್ಯದ ಪೀಠಾಧಿಪತಿಗಳು ಯಾರು ಎಂದು ವಿಚಾರಿಸಿದಾಗ ತಿಳಿಯಿತು. ಅವರೇ ಈ ಚನ್ನಬಸವದೇವರು ಎಂದು.

ಶ್ರೀ ಚನ್ನಬಸವದೇವರು ಆಗ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅವರು ಅಥಣಿಗೆ ಬರುವುದು ಅಪರೂಪವಾಗಿತ್ತು. ನನ್ನ ಮನಸ್ಸು ಅವರನ್ನು ಕಾಣಲು ಹಾತೊರೆಯುತ್ತಿತ್ತು. ಅಂದು ೧೯೯೫ ರ ಜನೆವರಿ ೧೦ ನೇ ತಾರೀಖು. ಅದು ಮಹಾದಾನಿ ಶಿರಸಂಗಿ ಲಿಂಗರಾಜರ ಹುಟ್ಟು ದಿನ. ಆ ಜಯಂತಿ ಕಾರ್ಯಕ್ರಮಕ್ಕೆ ಪೂಜ್ಯ ಶ್ರೀ ಚನ್ನಬಸವ ದೇವರು ಆಗಮಿಸಿದ್ದರು. ಅಂದು ಅವರ ಭೇಟಿ ನನಗಾಯಿತು. ಪ್ರತ್ಯಕ್ಷ ಸ್ವಾಮಿ ವಿವೇಕಾನಂದರನ್ನು ಕಂಡಷ್ಟು ಸಂತೋಷವಾಯಿತು.

ಶ್ರೀಗಳು ಮಾತನಾಡುವ ರೀತಿ ಅವರಲ್ಲಿರುವ ಸಾಮಾಜಿಕ ಕಳಕಳಿ, ಧಾರ್ಮಿಕ ಪ್ರಜ್ಞೆ ನನ್ನನ್ನು ಆಕರ್ಷಿಸಿದವು. ಪರಹಿತ ಚಿಂತನೆಗೆ ಸದಾ ಸ್ಪಂದಿಸುವ ಶ್ರೀ ಚನ್ನಬಸವ ದೇವರಿಗೆ ನಾನೊಂದು ದಿನ ಭೆಟ್ಟಿಯಾಗಿ ಮೈಸೂರಿಗೆ ಉನ್ನತ ವ್ಯಾಸಂಗಕ್ಕೆ ಹೋಗಬೇಕಾಗಿದೆ ಎಂದು ತಿಳಿಸಿದೆ. ಆಗ ಪೂಜ್ಯರು ಮೈಸೂರು ನಮ್ಮದು. ಅಲ್ಲಿ ನೀವು ಹಾಯಾಗಿ ಅಭ್ಯಾಸಮಾಡಬಹುದು ಎಂದು ಹೇಳಿ, ಶ್ರೀ ನೀಲಕಂಠ ದೇವರಿಗೆ ಒಂದು ಪತ್ರಬರೆದು ಕೊಟ್ಟರು. ನನಗೆ ಅಲ್ಲಿಯೇ ತಂಗುವ ವ್ಯವಸ್ಥೆ ಮಾಡಿಸಿದರು. ಅದು ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದಂತೆ ಉಳಿದಿದೆ.

ಅವರು ಕನ್ನಡ ಸಾಹಿತ್ಯ ಪರಿಷತ್ತು ಅಥಣಿ ಘಟಕದ ಗೌರವ ಅಧ್ಯಕ್ಷರಾಗಿದ್ದರೆ ನಾನು ಅದರ ಕೋಶಾಧ್ಯಕ್ಷನಾಗಿದ್ದೆ. ಪರಿಷತ್ತಿನ ಕಾರ್ಯಕಲಾಪಗಳನ್ನು ಹಮ್ಮಿಕೊಳ್ಳುವಾಗ ಕಾರ್ಯಕ್ರಮಗಳನ್ನು ಯೋಚಿಸುವಾಗ ಪೂಜ್ಯರಿಗೂ ನನಗೂ ಬಹಳಷ್ಟು ನಿಕಟ ಸಂಪರ್ಕ ಬಂದಿತು. ಆಗ ಪೂಜ್ಯರು ನನ್ನಲ್ಲಿರುವ ಪ್ರತಿಭೆಯನ್ನು ಗುರುತಿಸಿ ಸಾಕಷ್ಟು ಪ್ರೋತ್ಸಾಹಿಸಿದರು. ಅಲ್ಲದೆ ಸೂಕ್ತ ಮಾರ್ಗದರ್ಶನ ನೀಡಿದರು. ಅದು ನನ್ನ ಜೀವನದಲ್ಲಿ ಎಂದೆಂದಿಗೂ ಮರೆಯಲಾರದ ಶ್ರೀರಕ್ಷೆಯಾಗಿ ಉಳಿದಿದೆ.

ಮೊದಲಿನಿಂದಲೂ ಬರವಣಿಗೆಯ ಅಭ್ಯಾಸವನ್ನು ರೂಢಿಸಿಕೊಂಡ ನಾನು ದಿನಪತ್ರಿಕೆಗಳಿಗೆ ಬರೆಯುತ್ತಿದ್ದೆ. ಪ್ರಕಟಗೊಂಡ ಲೇಖನಗಳನ್ನು ಪೂಜ್ಯರು ಓದುತ್ತಿದ್ದರು. ಮೆಚ್ಚುಗೆಯ ಮಾತುಗಳನ್ನು ಹೇಳುತ್ತಿದ್ದರು. ಕರ್ತೃತ್ವಶಕ್ತಿಗೆ ಹೆಸರಾದ ಶ್ರೀ ಚನ್ನಬಸವದೇವರು ಕೇವಲ ಉಪದೇಶ ಮಾಡುವವರಲ್ಲ; ತಾವು ಸ್ವತಃ ಕಾರ್ಯದಲ್ಲಿ ಮಗ್ನರಾಗಿರುವಂಥವರು.

ಕಲ್ಯಾಣದ ಪಥಿಕ

● ಸುರೇಶ ಅಂಗಡಿ

17739

ಅಥಣಿ ಮೋಟಗಿಮಠದ ಶ್ರೀ ಚನ್ನಬಸವದೇವರು ದೈವಸ್ವರೂಪಿಗಳು. ಶ್ರೇಷ್ಠ ಅನುಭಾವಿಗಳು. ಅಂತೆಯೇ ಶ್ರೀಮಠ ಸದಾಕಾಲ ಭಕ್ತರಿಂದ ತುಂಬಿರುತ್ತದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನು ಸಾಧಿಸುವುದೇ ಶ್ರೀಗಳ ಧ್ಯೇಯ.

ಆಧುನಿಕ ವಚನಕಾರರಾಗಿಯೂ ಶ್ರೀಗಳು ಹೊರಹೊಮ್ಮಿದ್ದಾರೆ. ' ಅಥಣೇಶ ' ಕಾವ್ಯನಾಮದಿಂದ ಆ ಕ್ಷೇತ್ರದಲ್ಲಿ ಶ್ರೀಗಳು ಮಾಡುತ್ತಿರುವ ಕೃಷಿ ಗಮನೀಯ. ಪ್ರಮಥರ ವಚನಗಳನ್ನು ಅರಗಿಸಿಕೊಂಡು ಅರಳಿದ ಅಥಣೇಶರ ವಚನಗಳು ಸಮಾಜಮುಖಿಯಾಗಿವೆ, ಚಿಂತನಶೀಲವಾಗಿವೆ. ಸಮಾಜವನ್ನು ಜಂಗಮವಾಗಿ ಭಾವಿಸಿದ ಶ್ರೀಗಳು ಕಾಯಕ-ದಾಸೋಹಗಳನ್ನು ಚಿರಂತನ ಮೌಲ್ಯಗಳನ್ನಾಗಿ ಮುಂದುವರಿಸಿದವರು. ಅವರ ನಿಷ್ಠೆ, ದಿಟ್ಟನಿಲುವು, ಸ್ಪಷ್ಟವಾಕ್ಯಗಳು ಮನಮುಟ್ಟುವಂತಿವೆ. ಸಮಾಜದ ಬಗೆಗಿನ ಅವರ ಕಾಳಜಿ ಕಳಕಳಿಗಳು ಅವರನ್ನು ಉನ್ನತ ಸ್ಥಾನದಲ್ಲಿ ನಿಲ್ಲಿಸಿವೆ. ಇದೀಗ ಸಮಾಜಸೇವಾ ದೀಕ್ಷೆಯನ್ನು ಸ್ವೀಕರಿಸುತ್ತಿರುವ ಶ್ರೀಗಳು ಎಲ್ಲರಿಗೂ ದಾರಿದೀಪವಾಗಲಿ.

■■

ಶ್ರೀ ಚನ್ನಬಸವದೇವರು

• ಎಂ. ಸಿದ್ದಣ್ಣ

ಮೋಟಗಿ ಮಠದಾಗ ನಾಟೀದ ಶಿವಕಳೆಯು
ನೋಟಕ್ಕೆ ಚೆನ್ನs ಚನ್ನಬಸವದೇವರು
ಊಟದ ಸ್ವಾಮಿs ಅವರಲ್ಲ ॥ ೧ ॥

ವರ್ತಮಾನದ ಕವಿಯ ವರ್ತನೆಯು ಅಪರಂಜಿ
ಕರ್ತಾರನ ಕಮ್ಮಟದ ಸ್ವಚ್ಛಂದ । ವಚನಗಳು
ಮರ್ತ್ಯರಿಗೆ ಕತ್ತಲೆಯ ಕೈದೀಪ ॥ ೨ ॥

ಸುಳಿದಿಲ್ಲ ಒಳಗಿಲ್ಲ ಸಂಪ್ರದಾಯದ ಸುಳಿಯು
ಸುಳಿದಾವ ಶರಣರ ಸೂಳ್ನುಡಿಯು । ಕಾಯಕದಿ
ಚಂದನದ ಬತ್ತಿ ಉರಿದಾಂಗ ॥ ೩ ॥

ನಾಡಿನ ತುಂಬೆಲ್ಲ ಹಾಡಿ ಹರಿಸುವ ಬಳಗ
ನಾಡಿನ ಜನರೆಲ್ಲ ತಲೆದೂಗಿ । ನಮಿಸುವರು
ಬಾನಾಡಿ ಬಾಂದಳದಿ ನಲಿದಾಂಗ ॥ ೪ ॥

ಬಸವನೆ ಮಹಾಮಂತ್ರ ಬಸವನೆ ಮಹಾಪ್ರಾಣ
ಶ್ರೀ ಗುರು ಬಸವನ ವರಪುತ್ರ । ಅಥಣೀಶ
ಅಂಧರ ಬದುಕಿಗೆ ಸಿದ್ಧಾಂಜನ ॥ ೫ ॥

■■

ಭಕ್ತಾನುರಾಗಿ

● ಅಪ್ಪಾಸಾಹೇಬ ಅಲಿಬಾದಿ

ಭಕ್ತಾನುರಾಗಿ ಬಂಥನಾಳ ಸಂಗನಬಸವ ಶಿವಯೋಗಿಯಂತೆ !
ಚರಜಂಗಮರಾಗಿ ನಾಡಿನುದ್ದಕ್ಕೂ ಸಂಚರಿಸುತ
' ಕಲ್ಯಾಣ ದರ್ಶನ ' ಪ್ರವಚನ ಮಾಡುತ
ಗಡಿನಾಡಿನಲಿ ಕನ್ನಡ ಕಂಪ ಸೂಸುವರು. ॥ ೧ ॥

' ಬಸವಶ್ರೀ ' ' ವಚನ ಚಂದನ ' ಅನುದಿನವೂ ತೀಡುತ
' ಸಂಪ್ರದಾಯದ ಸುಳಿಯಲಿ ' ಸಿಲುಕಿದವರ ಮೇಲಕ್ಕೆತ್ತುತ
' ವಚನಚೈತ್ರ' ' ವಚನತರಂಗ ' ಅಲೆ ಪಸರಿಸುತ ॥ ೨ ॥

ಜಾತಿ ವರ್ಣ ವರ್ಗರಹಿತ ಕಲ್ಯಾಣ ರಾಜ್ಯದ ಉದಯಕ್ಕಾಗಿ
ಜನಜಾಗೃತಿ ಪಾದಯಾತ್ರೆ ಮಾಡುತ
ಶರಣ ಸಂಸ್ಕೃತಿ ಪ್ರಭೆ ಬೀರುತ ॥ ೩ ॥

' ಬಸವತತ್ವ' ಪ್ರತಿಪಾದಕ ' ಮಹಾಂತಯೋಗಿ ' ಹರಿಕಾರರಂತೆ
ಜನರ ಅಜ್ಞಾನ ಅಂಧಕಾರ ಕಳೆಯುತ
ಜಗದಿ ಸುಜ್ಞಾನ ಬೆಳಕ ಬೀರುತ ॥ ೪ ॥

ಬಂದ ಭಕ್ತರಿಗೆಲ್ಲ ಹದುಳಬನ್ನಿ ಎಂದು ಸ್ವಾಗತಿಸುತ
ಆತ್ಮೀಯತೆಯ ಮಾತೃ ಹೃದಯದಿ ಆಶೀರ್ವದಿಸುತ
ಭಕ್ತರ ಸಂಸ್ಕರಿಸಿ ದಿವ್ಯಗುಣಗಳ ಪುರಸ್ಕರಿಸುತ ॥ ೫ ॥

ಸ್ವಾಮಿ ನಮ್ಮದು ' ಮನುಜಮತ ' ' ವಿಶ್ವಪಥ 'ವೆಂದು
ಕುವೆಂಪುವಾಣಿಯಂತೆ ' ವಿಶ್ವಮಾನವ ' ಸಂದೇಶ ಸಾರುತ
ಬಸವಾದಿ ಪ್ರಮಥರಂತೆ ' ಸಕಲ ಜೀವಾತ್ಮರಿಗೆ ' ಲೇಸು ಬಯಸುವ ॥ ೬ ॥

ಅನುಭಾವ ಕವಿ, ಸಾಹಿತಿ, ಚನ್ನಬಸವನ ಅವತಾರಿ
ಭಕ್ತಾನುರಾಗಿ ಅಥಣಿ ಮೋಟಗಿಮಠಾಧೀಶ
' ಅಥಣೀಶ ' ತಮ್ಮ ಕೃಪೆ ಸದಾ ಇರಲೆಂದ ಬಸವತತ್ವಕಿಂಕರ
' ಬಸವನೀಲಾಂಬಿಕಾತನಯ '

ನೆನಹು

● ಮಹಾದೇವ ಅಥಣಿ

ಘನ ಮಠವು ಮಹಾಮನೆಯು
ಗುರು ಪೀಠದೊಡೆಯ ಶ್ರೀ ಚನ್ನಬಸವ
ನುಡಿ ಚೆನ್ನ; ನಡೆ ಚೆನ್ನ; ಅಪ್ಪಟ ಚಿನ್ನ
ಅಂತಃಕರುಣದ ಮೂರ್ತಿ ಗುರುದೇವ.

ಕಾಯಕದ ನಿಷ್ಠೆ ಸಮಚಿತ್ತಭಾವ
ಭಕ್ತಿ ಭಂಡಾರದ ನಿಧಿಯು
ಸಾಹಿತ್ಯ ಸವಿಗೋಷ್ಠಿ, ವಚನಮಧುವೃಷ್ಟಿ
ಹರ ಗುರು ನೆನಹಿನ ಗಾನ ಸುಧೆಯು.

ಭಕ್ತರು ಎಲ್ಲರು ಗುರುಪೀಠದೊಡೆಯರು
ಮಹಾಮಹಿಮ ಶರಣರ ಭವ್ಯಕೂಟ
ಅಧ್ಯಾತ್ಮ ಚಿಂತನ ಅನುಭಾವದ ಮಂಥನ
ಉಣಲುಬೇಕಷ್ಟು ದಾಸೋಹದೂಟ.

ಕಂಡವರ ಕಣ್ಮಣಿ ಗುರುಬಸವನರಗಿಣಿ
ನುಡಿ ನುಡಿಗೂ ಶರಣರ ಸಂದೇಶ
ಶರಣರ ಕಂದ ಗುರು ಮಠಕೆ ಚೆಂದ
ಅಂಕಿತ ನಾಮವು ಶ್ರೀ ಅಥಣೀಶ !

■■

ನಮೋ ಎಂಬೆ

● ಸುಭಾಷ ಮೋಟಗಿ

ಅಂದು ಬಸವ ಅಲ್ಲಮ ಸಿದ್ಧರಾಮರು
ಹರಸಿಹರು ವಚನ ಸುಧೆ-
ಇಂದು ಅಥಣೀಶ ಅಂಕಿತದಿ ಸುರಿಸುತಿಹರು
ಚನ್ನಬಸವದೇವರು ವಚನ ಸುಮಗಳಲಿ ತತ್ವಬೋಧೆ
ನಾಡೆಲ್ಲ ನಿತ್ಯ ನಂದಾದೀಪದಂತೆ
ಬೆಳಕಿನ ಮಂದಿರವಾಗಲೆಂಬ ಹಂಬಲ
ಬಂತು ಸಾಹಿತ್ಯಕೆ ಅಸೀಮ ಬಲ
ಬದುಕು ಬಂಗಾರ ಭಾಷೆ ಶೃಂಗಾರ
ಮಠಪೀಠಗಳ ಧರ್ಮ ಕಾರ್ಯಕೆ ಕಂಕಣಬದ್ಧ
ಇರುಳು ಹಗಲೆನ್ನದೆ ಶರಣತತ್ವ ಪ್ರಸಾರಕೆ ಸಿದ್ಧ !
ವಚನ ಚೈತ್ರ ಚಿತ್ತಾರ
ಕಾವ್ಯ ಕುಂಚದಲಿ ನೇತಾರ
ನಡೆನುಡಿಗಳೊಂದಾದ ಧರ್ಮಯೋಗಿ.
ಬಸವಪಥದೊಳು ಸಾಗಿ
ಧಾರುಣೆಗೆ ನಿತ್ಯ ಸೊಗವ ಕೋರುತ
ಗುರುಬಸವ ಯೋಗಿಯ ಮಾನಸಕುವರನಾಗಿ
ಮೆರೆಯುತಿಹ ವಿನಯ ಗುಣ ಸಂಪನ್ನ
ಕಾರುಣ್ಯ ಮೂರ್ತಿ ಕವಿಗಣಕೆ ಸ್ಫೂರ್ತಿ
ನಮ್ಮ ಅಥಣೀಶರ ಕೀರ್ತಿ
ಲೋಕವೆಲ್ಲ ಹರಡಿತ್ತು.
ಅಂತಪ್ಪಯೋಗಿವರ್ಯಗೆ
ಭಕ್ತಿ ಭಾವದುಂಬಿ ಮನದುಂಬಿ ತನುದುಂಬಿ
ನಮೋ ನಮೋ ಎನ್ನುತಿರ್ದ ಕಾಣಾ ಬಸವಪ್ರಿಯ
ಕನ್ನಡ ಕವಿಕಾಳಿದಾಸ ತನಯ ಚೆನ್ನ.

■■

ಚಂದನ

ಮೋಟಗಿಮಠ ದರ್ಶನ

● ಬಾಳೇಶ ಲಕ್ಷೆಟ್ಟಿ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಅಥಣಿ ಸುಕ್ಷೇತ್ರಕ್ಕೆ ವಿಶಿಷ್ಟವಾದ ಸ್ಥಾನವಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಶರಣ ಸಂಸ್ಕೃತಿಯನ್ನೇ ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದ ಈ ಪ್ರದೇಶದ ನಾಲ್ಕು ಮಠಗಳು ಈ ಸುಕ್ಷೇತ್ರಕ್ಕೆ ಆಧ್ಯಾತ್ಮಿಕ ದೀಕ್ಷೆ ನೀಡಿವೆ. ಇಂತಹ ಮಠಗಳಲ್ಲಿ ಅಥಣಿಯ ಶ್ರೀ ಮೋಟಗಿಮಠವೂ ಒಂದು.

ಶೂನ್ಯ ಪೀಠದ ದಿವ್ಯ ಪರಂಪರೆಯನ್ನೇ ಹೊಂದಿದ ಶ್ರೀಮಠ, ಸುಮಾರು ಮುನ್ನೂರೈವತ್ತು ವರ್ಷಗಳ ಸುದೀರ್ಘ ಸಾಂಸ್ಕೃತಿಕ ಐತಿಹ್ಯದೊಂದಿಗೆ ಶೋಭಾಯಮಾನವಾಗಿದೆ.

ಸುಮಾರು ಕ್ರಿ.ಶ. ೧೬೫೦ರ ಆಸುಪಾಸು ಇದ್ದಿರಬಹುದು. ಅಂದಿನ ಮಠಾಧಿಪತಿಗಳಾದ ಶ್ರೀ ಮಹಾಂತ ಮಹಾಸ್ವಾಮಿಗಳು ಒಂದು ಚಿಕ್ಕ ಕುಟೀರದಲ್ಲಿ ವಾಸ್ತವ್ಯ ಮಾಡಿದ್ದರು. ಸಿಂದಗಿ ತಾಲೂಕಿನ ಮೋರಟಗಿ ಗ್ರಾಮದ ಸದ್ಭಕ್ತರು ವ್ಯಾಪಾರ ಮಾಡುವುದಕ್ಕಾಗಿ ಅಥಣಿಗೆ ಆಗಮಿಸಿದ್ದರು. ಅವರಿಗೆ ಮಹಾಸ್ವಾಮಿಗಳು ಕಾಯಕಕ್ಕೆ ಹರಸಿ ಆಶೀರ್ವದಿಸುತ್ತಾರೆ. ಗುರು ವಾಣಿಯಂತೆ ಅವರು ಕಾಯಕದಲ್ಲಿ ಮನಸಾ ನಿರತರಾಗಿ ಯಶಸ್ವಿಯಾಗುತ್ತಾರೆ. ಅಂದಿನ ಆ ಭಕ್ತಿಯ ದ್ಯೋತಕವಾಗಿ ಅವರೆಲ್ಲ ಒಂದೆಡೆ ಸೇರಿ ವಿನೂತನವಾಗಿ ಶ್ರೀ ಮಠವನ್ನು ನಿರ್ಮಿಸುತ್ತಾರೆ. ಅಂದು ಮೋರಟಗಿ ಗ್ರಾಮದ ಸದ್ಭಕ್ತರು ನಿರ್ಮಿಸಿದ ಶ್ರೀ ಮಠವೇ ಇಂದು 'ಮೋಟಗಿಮಠ'ವೆಂದು ಪ್ರಸಿದ್ಧಿ ಪಡೆದಿದೆ.

ಶ್ರೀ ಮಠದ ಪರಂಪರೆಯನ್ನು ಬೆಳಗಿದ ಶ್ರೀಗಳವರಲ್ಲಿ ಶ್ರೀ ಮ. ನಿ. ಪ್ರ. ಮಹಾಂತಸ್ವಾಮಿಗಳೇ ಮೊದಲಿಗರು. ಶ್ರೀಗಳು ಆಗಿನ ಕಾಲದ ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕೃಷ್ಣಾತೀರದ ಮೈಗೂರು ಗ್ರಾಮದ ಹಿರೇಮಠ ಮನೆತನದಲ್ಲಿ ಜನಿಸಿದರು. ಗುಹೇಶ್ವರಗಡ್ಡೆಯಲ್ಲಿ ಅವರು ತಮ್ಮ ಚಾತುರ್ಮಾಸಾನುಷ್ಠಾನ ಮುಗಿಸಿಕೊಂಡವರೇ ಅಥಣಿಗೆ ದಯಮಾಡಿಸಿ ಪರ್ಣಕುಟೀರವನ್ನು ಕಟ್ಟಿಕೊಂಡು ತಪೋನುಷ್ಠಾನ ಆರಂಭಿಸಿದರು. ಪರಮ ವೈರಾಗಿಗಳೂ ಲಿಂಗಪೂಜಾನಿಷ್ಠರೂ ಆಗಿದ್ದ

ಮಹಾಂತಸ್ವಾಮಿಗಳು ಜಟಾಧಾರಿಗಳಾಗಿದ್ದುದೊಂದು ವಿಶೇಷ. ಈ ಶಿವಯೋಗಿಗಳ ತಪಸ್ಸಿನ ಪುಣ್ಯ ಕುಟೀರವೇ ಇಂದಿನ ಸುಕ್ಷೇತ್ರ ಶ್ರೀ ಮೋಟಗಿಮಠ. "ವಿರಕ್ತನಾದವನು ಎಲ್ಲಿದ್ದರೇನು? ಆತ ವಾಸ್ತವ್ಯ ಮಾಡಿದ ಕುಟೀರವೇ ಸುಕ್ಷೇತ್ರ". ಅವರ ನುಡಿ ಚೆನ್ನ. ನಡೆ ಚೆನ್ನ. ನಡೆ-ನುಡಿಗಳ ಸಾಮರಸ್ಯವೇ ಶ್ರೀಗಳ ಜೀವ-ಜೀವಾಳ!

ಸಿಂದಗಿ ತಾಲೂಕಿಗೆ ಸೇರಿದ ಮೋರಟಗಿ ಅಂದು ಕ್ಷಾಮಪೀಡಿತ ಪ್ರದೇಶವಾಗಿತ್ತು. ಉದರ ನಿರ್ವಹಣೆಗಾಗಿ ಒಂದೇ ಕುಟುಂಬಕ್ಕೆ ಸೇರಿದ ಸರ್ವಶ್ರೀ ಮಲಕಪ್ಪ. ಮಲ್ಲಪ್ಪ ಹಾಗೂ ಶಿವಲಿಂಗಪ್ಪ ಎಂಬ ಹೆಸರಿನ ಮೂವರು ಶರಣರು ಮೋರಟಗಿ ಗ್ರಾಮದಿಂದ ಅಥಣಿಗೆ ಆಗಮಿಸಿದರು. ಮೋಟಗಿಮಠ ನಿರ್ಮಾಣ ಕಾರ್ಯದಲ್ಲಿ ಈ ಮೂವರ ಶರಣರ ಪಾತ್ರ ಬಹು ಮಹತ್ವದ್ದಾಗಿದೆ.

ಮಹಾಂತ ಸ್ವಾಮಿಗಳು ಕೊಂಪೆ ಹಾಕಿಕೊಂಡು ವಾಸಿಸುವ ಕ್ಷೇತ್ರ ಮಂಗಸೂಳಿ ದೇಸಾಯರದಾಗಿತ್ತು. ಆಗ ಅಥಣಿಯು ಮಂಗಸೂಳಿ ದೇಸಾಯಿಯವರ ಇನಾಮು ಗ್ರಾಮವಾಗಿತ್ತೆಂದು ತಿಳಿದುಬರುತ್ತದೆ. ಈ ಮೂವರು ಶರಣ ಬಂಧುಗಳ ಸತತ ಪ್ರಯತ್ನದಿಂದಾಗಿ ಆ ಜಾಗೆಯನ್ನು ದೇಸಾಯಿಯವರಿಂದ ಪಡೆದು. ಹಗಲಿರುಳು ದುಡಿದು ಈಗಿನ ಮೋಟಗಿಮಠ ಕಟ್ಟಿದ್ದೊಂದು ಮಹತ್ವದ ದಾಖಲೆಯಾಗಿದೆ.

ಶ್ರೀ ಮಹಾಂತಸ್ವಾಮಿಗಳು ಅದೆಷ್ಟೋ ವರ್ಷಗಳ ಕಾಲ ಅಥಣಿಯ ಹಾಗೂ ಸುತ್ತಲಿನ ಅಪಾರ ಸಂಖ್ಯೆಯ ಸದ್ಭಕ್ತರಿಗೆ ಲಿಂಗಪೂಜಾ ವಿಧಾನ, ಕಾಯಕ ತತ್ವಗಳನ್ನು ಬೋಧಿಸಿ ಸನ್ಮಾರ್ಗದಲ್ಲಿ ನಡೆಸಿದರು. ಸದಾಚಾರ ಸನ್ಮತಿಯ ಶರಣಮಾರ್ಗದ ತಿರುಳನ್ನು ಅಧ್ಯಾತ್ಮ ಅನುಭಾವವನ್ನು ಉಣಬಡಿಸಿದರು. ಶ್ರೀ ಮಹಾಂತಸ್ವಾಮಿಗಳ ದಿವ್ಯ ತಪಸ್ಸಿನ ಫಲವಾಗಿ ಅಥಣಿ ಅಧ್ಯಾತ್ಮದ ನೆಲೆವೀಡಾಯಿತು.

ಹೀಗೊಂದು ದಿನ ಬೆಳಗು ಮುಂಜಾನೆ ನಾಲ್ಕು ಗಂಟೆಯ ಸಮಯಕ್ಕೆ ಎದ್ದು ಶಿವಪೂಜೆ ಮುಗಿಸಿಕೊಂಡು ಆಸನಾರೂಢರಾಗುತ್ತಲೇ ಶಿವನ ಸ್ಮರಣೆಯಲ್ಲಿಯೇ ಇಹಲೋಕ ತ್ಯಜಿಸಿದರು. ಶ್ರೀಮಠದ ಎರಡನೆಯ ದ್ವಾರದ ಮೊದಲನೆಯ ಸದರಿನಲ್ಲಿ ಅವರ ಸಮಾಧಿಯಿದೆ.

ಆಚಾರ-ವಿಚಾರ ಸಂಪನ್ನರೂ, ಲಿಂಗಪೂಜಾನಿಷ್ಠರೂ ಆಗಿದ್ದ ಮೋರಟಗಿ ಮಲಕಪ್ಪ ಶರಣರು ಶ್ರೀಗಳವರಲ್ಲಿ ಅಪಾರ ಪ್ರೀತಿ-ನಿಷ್ಠೆಯುಳ್ಳವರಾಗಿದ್ದರು. ಶ್ರೀಗಳನ್ನು ಕಳೆದುಕೊಂಡ ದುಃಖದಲ್ಲಿ ಬಳಲಿ ಬೆಂಡಾಗಿ ಶ್ರೀಗಳ ಮರಣಾನಂತರದ ಒಂದೆರಡು ದಿನಗಳಲ್ಲಿಯೇ ಲಿಂಗೈಕ್ಯರಾದರು. ಮಲಕಪ್ಪ ಶರಣರ ಸಮಾಧಿಯೂ ಕೂಡ ಮಹಾಂತ ಶ್ರೀಗಳ ಸಮಾಧಿಯ ಸಮೀಪದಲ್ಲಿಯೇ ಇದೆ.

ಶ್ರೀ ಮಹಾಂತ ಸ್ವಾಮಿಗಳ ವಂಶಜರಾದ ಮೈಗೂರ ಹಿರೇಮಠದವರನ್ನು ಮೋಟಗಿ ಮಠದ ಅಧಿಕಾರ ವಹಿಸಿಕೊಳ್ಳಲು ಭಕ್ತರು ಕೇಳಿಕೊಂಡರು. ಆಗ ಹಿರೇಮಠದ ಹಿರಿಯರಾದ ಪಂಚಯ್ಯನವರು "ಈ ನಿರಂಜನ ಮಠಕ್ಕೆ ನಿರಂಜನ ಮೂರ್ತಿಯನ್ನೇ ಹುಡುಕುವದು ಸೂಕ್ತವಾದುದು" ಎಂದು ನುಡಿದರು. ಆಗ ಭಕ್ತರು "ದಯವಿಟ್ಟು ತಮ್ಮ

ಮಠದಿಂದಲೇ ಓರ್ವ ಮರಿದೇವರನ್ನು ಮೋಟಗಿ ಮಠಕ್ಕೆ ಸಲ್ಲಿಸಬೇಕಾಗಿ ಬೇಡಿಕೊಳ್ಳುತ್ತೇವೆ'' ಎಂದು ಅಂಗಲಾಚಿ ಬೇಡಿಕೊಂಡರು ಆಗ ಪಂಚಯ್ಯನವರು ''ವಿರಕ್ತಾಶ್ರಮವು ಕಠಿಣ. ಅಲ್ಲಿ ಸ್ವಾಮಿಗಳಾಗಿರುವವರು ಜೀತೇಂದ್ರಿಯಗಳು, ದೃಢ ಮನಸ್ಸಿನವರು ಇರಬೇಕಾಗುತ್ತದೆ. ಅಂತವರು ನಮ್ಮ ಹಿರೇಮಠದಲ್ಲಿ ಇದ್ದಾರೆಯೇ ಎಂಬುದನ್ನು ಕಂಡುಕೊಂಡು ತಮಗೆ ತಿಳಿಸುತ್ತೇವೆ'' ಎಂದು ನುಡಿದರು.

ಮೋಟಗಿ ಮಠಕ್ಕೆ ಬರಲು ಶಿವಯ್ಯನವರು ತಮ್ಮ ಒಲವು ತೋರಿದ್ದರಿಂದ ಅವರನ್ನು ಶ್ರೀ ಮಠಕ್ಕೆ ಪೀಠಾಧಿಕಾರಿಗಳಾಗಿ ಮಾಡಲಾಯಿತು. ಇವರೇ ಶಿವಪಂಚಾಕ್ಷರಿ ಸ್ವಾಮಿಗಳೆಂದು ಮುಂದೆ ಹೆಸರಾದರು. ಪಂಚಾಕ್ಷರಿ ಮಂತ್ರವು ಶಿವಯ್ಯನವರ ಮನಸ್ಸಿನ ಮೇಲೆ ಅಚ್ಚಳಿಯದೆ ಬಿಂಬಿಸಿದ್ದರಿಂದ ಆ ಮಹಾಮಂತ್ರವನ್ನು ಶ್ರೀಗಳವರು ಸದಾಕಾಲ ಪಠಿಸುತ್ತಲಿದ್ದರು. ಮಠದಲ್ಲಿದ್ದ ಸಕಲ ವಸ್ತುಗಳ ಮೇಲೆ ಶಿವ ಪಂಚಾಕ್ಷರ ಮಂತ್ರವನ್ನು ಬರೆಯಿಸಿದ್ದರಲ್ಲದೆ ಧರಿಸುವ ಬಟ್ಟೆ, ಹಾಸಿಗೆ, ಹೊದಿಕೆಗಳ ಮೇಲೂ ಶಿವಪಂಚಾಕ್ಷರಿ ಮಹಾಮಂತ್ರವನ್ನು ಬರೆಯಿಸಿದ್ದರು. ಶ್ರೀಗಳವರ ದರ್ಶನಾರ್ಥಿಗಳಾಗಿ ಬಂದ ಭಕ್ತರು ನೋಡಿದಲ್ಲೆಲ್ಲಾ ಶಿವಪಂಚಾಕ್ಷರ ಮಹಾಮಂತ್ರವನ್ನೇ ಕಾಣುತ್ತಿದ್ದರು.

ಶ್ರೀಗಳವರು ಭಕ್ತರಿಗೆ ಶಿವಪಂಚಾಕ್ಷರಿ ಮಂತ್ರದ ಬೋಧೆಯನ್ನು ಮಾಡುತ್ತ ಶಿವಭಜನೆ, ಶಿವ ಸಂಕೀರ್ತನೆಗಳಲ್ಲಿ ಕಾಲಕಳೆಯ ತೊಡಗಿದರು. ತಮ್ಮ ತರುವಾಯ ಶ್ರೀ ಮಠಕ್ಕೆ ತಮ್ಮ ಪೂರ್ವಾಶ್ರಮದ ಮೈಗೂರು ಹಿರೇಮಠದ ಶ್ರೀ ಜಡೆಯಯ್ಯನವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಂಡು ಸದ್ಭಕ್ತರ ಸಮ್ಮುಖದಲ್ಲಿ ನಿರಂಜನ ಪಟ್ಟಾಧಿಕಾರವನ್ನು ನೀಡಿದರು. ಮಠದ ಸಕಲ ಉಸ್ತುವಾರಿಯನ್ನು ಶ್ರೀ ಜಡೆಯಯ್ಯ ಸ್ವಾಮಿಗಳಿಗೆ ಒಪ್ಪಿಸಿ ತಾವು ಲಿಂಗಪೂಜೆ, ಶಿವಪಂಚಾಕ್ಷರ ಮಂತ್ರ ಪಠನ ಹಾಗೂ ಅನುಷ್ಠಾನಗಳಲ್ಲಿ ತೊಡಗಿದರು. ಶ್ರೀಗಳ ತೋರಗದ್ದಿಗೆಯು ಶ್ರೀ ಮಠದ ಪಶ್ಚಿಮ ದಿಕ್ಕಿನಲ್ಲಿರುವ ಬಿಲ್ವಪತ್ರಿ ಬನದಲ್ಲಿ ಇದೆಯೆಂದು ತಿಳಿದು ಬರುತ್ತದೆ.

ಜಡೆಯ ಶ್ರೀಗಳವರ ಕಾಲದಲ್ಲಿ ಮೋಟಗಿಮಠದ ಶಾಖಾ ಮಠವು ಮಿರಜದಲ್ಲಿ ಪ್ರಾರಂಭವಾದುದೊಂದು ವಿಶೇಷ. ಶ್ರೀಗಳವರು ಮಿರಜಕ್ಕೆ ಪ್ರಯಾಣ ಬೆಳೆಸಿ ಆ ಶಾಖಾ ಮಠದಲ್ಲಿಯೇ ವಾಸ್ತವ್ಯ ಮಾಡಿ ಅಲ್ಲಿಯೇ ಲಿಂಗೈಕ್ಯರಾದರು. ಲಿಂಗೈಕ್ಯರಾದಾಗ ಕೇವಲ ೩೦ ವರ್ಷದವರಿದ್ದರು. ಶ್ರೀಗಳವರ ಇನ್ನೊಂದು ವಿಶೇಷತೆಯೆಂದರೆ ಲಿಂಗಪೂಜೆಗೆಂದು ಭಕ್ತರು ತಂದ ಪ್ರಸಾದವನ್ನು ಮಾತ್ರ ಸ್ವೀಕರಿಸುತ್ತಿದ್ದರು.

ಶ್ರೀ ಸಂಗನಬಸವ ಸ್ವಾಮಿಗಳು ಜಡೆಯಯ್ಯ ಸ್ವಾಮಿಗಳವರ ಉತ್ತರಾಧಿಗಳಾಗಿ ಅಧಿಕಾರ ಸ್ವೀಕರಿಸಿದರು. ಶ್ರೀಗಳವರ ಪೂರ್ವಾಶ್ರಮ ಮಠವಾದ ಮೈಗೂರ ಹಿರೇಮಠವು ಆಗಿನ ಕಾಲದಲ್ಲಿ ಒಳ್ಳೆಯ ಸಂಪ್ರದಾಯದ ಮಠವೆಂದು ಖ್ಯಾತಿ ಗಳಿಸಿತ್ತು. ಸುತ್ತಮುತ್ತಲಿನ ಅನೇಕ ಗ್ರಾಮದವರು ಈ ಮಠದವರನ್ನೇ ತಮ್ಮ ಗುರುಗಳನ್ನಾಗಿ ಸ್ವೀಕರಿಸಿದ್ದುಂಟು. ಮೈಗೂರು ಹಿರೇಮಠದ ಹಿರಿಯರಾದ ವೇದಮೂರ್ತಿ ಪಂಚಯ್ಯನವರು ಪೂಜಾನಿಷ್ಠರೂ ಧರ್ಮೋಪದೇಶಕರೂ ಆಗಿದ್ದರು. ಅವರ ಶಿಷ್ಯರು ಅವರನ್ನು ಭಯ-ಭಕ್ತಿಯಿಂದಲೂ ಆದರಾಭಿಮಾನದಿಂದಲೂ ಮನಸಾ

ಪೂಜಿಸುತ್ತಿದ್ದರು. ಅದು ಕಾರಣ ಆ ಮಠಕ್ಕೆ ಪಂಚಯ್ಯನ ಮಠವೆಂದು ಜನರು ಕರೆಯುವದು ರೂಢಿಯಾಗಿತ್ತು.

ಇಂಥ ಸತ್ಸಂಪ್ರದಾಯದ ಮಠದಿಂದ ಬಂದ ಶ್ರೀ ಸಂಗನಬಸವ ಸ್ವಾಮಿಗಳು ಕೇವಲ ಶಿವಯೋಗಿಗಳಾಗಿರದೆ ನೇಗಿಲಯೋಗಿಯೂ ಆಗಿದ್ದುದು ದಾಖಲಿಸುವಂಥ ಸಂಗತಿಯಾಗಿದೆ. 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂಬ ಗಾದೆ ಮಾತಿನಂತೆ ಕೃಷಿ ಕಾಯಕವನ್ನು ಶ್ರೀಗಳು ಕೈಕೊಂಡಿದ್ದರು. ನಿತ್ಯ ಪ್ರಾತಃಕಾಲದಲ್ಲೆದ್ದು ಹೊಲಕ್ಕೆ ಹೋಗಿ ಬರುವ ಪರಿಪಾಠವನ್ನಿಟ್ಟುಕೊಂಡಿದ್ದರು. ಹೊಲದಲ್ಲಿ ನಟ್ಟು ಕಡಿಯುವದು, ರೆಂಟೆ-ಕುಂಟೆ ಹೊಡೆಯುವದು, ಬಿತ್ತುವುದು ಹಾಗೂ ಬೆಳೆ ಬಂದ ನಂತರ ಹಕ್ಕಿ ಕಾವಲು ಮಾಡುವುದು ಈ ಮೊದಲಾದ ಕಾರ್ಯಗಳನ್ನು ಶ್ರೀಗಳು ಮಾಡುತ್ತಿದ್ದರು. ಶ್ರೀಗಳು ಆಜಾನುಬಾಹುಗಳಾಗಿದ್ದರು. ಯಾವುದೇ ಕಾರ್ಯವಿರಲಿ. ಅದರಲ್ಲಿಯೇ ಸಂತುಷ್ಟಿ ಅನುಭವಿಸುತ್ತಿದ್ದರು. ನಾಲ್ಕು ಆಳು ಮಾಡುವ ಕೆಲಸವನ್ನು ಶ್ರೀಗಳೊಬ್ಬರೇ ಮಾಡಿ ಮುಗಿಸುವದನ್ನು ಕಂಡಾಗ ಸುತ್ತಲಿನ ರೈತರಿಗೆ ನಿಜಕ್ಕೂ ಆಶ್ಚರ್ಯವಾಗುತ್ತಿತ್ತು.

ಶ್ರೀಗಳು ಐದು ಮೈಲು ದೂರದಲ್ಲಿದ್ದ ತಮ್ಮ ಹೊಲಕ್ಕೆ ಕಾಲ್ನಡಿಗೆಯಿಂದಲೇ ಹೋಗಿ ಬರುತ್ತಿದ್ದರು. ಅವರೆಂದೂ ಬರಿಗೈಯಿಂದ ಬರುತ್ತಿರಲಿಲ್ಲ. ಹೊಲದಲ್ಲಿ ಸುತ್ತಾಡಿ ತೆನೆ ಹಾಕಲಾರದ ಜೋಳದ ಎಳೆದಂಟುಗಳನ್ನು ಕಿತ್ತು, ಹೊರೆ ಕಟ್ಟಿ ತಮ್ಮ ತಲೆ ಮೇಲೆ ಹೊತ್ತು ತರುತ್ತಿದ್ದರಂತೆ. ಸಾಮಾನ್ಯರು ತಲೆಯ ಮೇಲೆ ಹೊರುವ ಮೂರು ಪಟ್ಟು ಶ್ರೀಗಳು ತರುವ ಹೊರೆ ದೊಡ್ಡದಾಗಿರುತ್ತಿತ್ತು.

ಶ್ರೀಗಳವರು ತಮ್ಮ ಮಠದಲ್ಲಿಯೇ ತಮ್ಮ ವ್ಯಾಯಾಮಗೋಸುಗ ಗರಡಿ ಮನೆಯೊಂದನ್ನು ಕಟ್ಟಿಕೊಂಡಿದ್ದರು. ದರ್ಶನಕ್ಕೆ ಬರುವ ಯುವಕರನ್ನು ಗರಡಿ ಮನೆಗೆ ಕರೆದುಕೊಂಡು ಹೋಗಿ ಅನೇಕಾನೇಕ ವ್ಯಾಯಾಮ ಪದ್ಧತಿಗಳನ್ನು ಕಲಿಸಿಕೊಡುತ್ತಿದ್ದರು. ಎರಡು ಕೊಡಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಸುಲಭವಾಗಿ ನಿಚ್ಚಣಿಕೆಯನ್ನು ಏರುತ್ತಿದ್ದರು.

ಸಂಗನಬಸವ ಸ್ವಾಮಿಗಳು ತಮ್ಮ ಪ್ರಸಾದವನ್ನು ತಾವೇ ಸಿದ್ಧಪಡಿಸುತ್ತಿದ್ದರು. ತಮ್ಮ ಜೀವಿತಾವಧಿಯಲ್ಲಿ ಸದ್ಭಕ್ತರ ಆತ್ಮೀಯ ಕರೆಯ ಮೇರೆಗೆ ಶಿರೋಳ, ಮುಧೋಳ. ಕಂಕಣವಾಡಿ ಮೊದಲಾದ ಅದೆಷ್ಟೋ ಊರುಗಳಿಗೆ ಹೋಗಿ ಧರ್ಮೋಪದೇಶ ಮಾಡಿದರು.

ಯುಗಾದಿ ಸಮೀಪಿಸುತ್ತಿದ್ದಂತೆ ಶ್ರೀಗಳು ಸದ್ಭಕ್ತರನ್ನು ತಮ್ಮ ಶ್ರೀಮಠದಲ್ಲಿ ಕರೆಯಿಸಿಕೊಂಡು ತಾವು ಶಿವಸಾಯುಜ್ಯ ಹೊಂದುವ ಸಮಯ ಸಮೀಪಿಸಿತೆಂಬುದನ್ನು ಅರುಹಿದರು. ಸದ್ಭಕ್ತರ ಇಚ್ಛೆಯಂತೆ ತಮ್ಮ ಪೂರ್ವಾಶ್ರಮ ಮಠದ ಮುರಿಗೆಪ್ಪ ಮರಿದೇವರನ್ನು ಪೀಠಾಧಿಕಾರಿಯನ್ನಾಗಿ ಮಾಡುವ ನಿರ್ಧಾರಕ್ಕೆ ಬಂದರಲ್ಲದೆ. ಅವರಿಗೆ ನಿರಂಜನ ದೀಕ್ಷೆ ನೀಡಿದರು. ಯುಗಾದಿಯಂದೇ ಸಂಗನಬಸವ ಸ್ವಾಮಿಗಳು

ಶಿವಸಾಯುಜ್ಯ ಹೊಂದಿದರು. ಶ್ರೀಗಳವರ ಗದ್ದುಗೆಯು ಮೋಟಗಿಮಠದ ಬಕುಲ ಗಿಡದ ಎದುರಿಗೆ ಪೂರ್ವಾಭಿಮುಖವಾಗಿ ಇರುವ ಸದರಿನಲ್ಲಿ ಒಂದನೆಯದಾಗಿದೆ.

ಮುರಿಗೆಪ್ಪ ಮರಿದೇವರೇ ಮುರುಘೇಂದ್ರ ಮಹಾಸ್ವಾಮಿಗಳೆಂದು ಪ್ರಸಿದ್ಧರಾದರಲ್ಲದೆ ಮೋಟಗಿಮಠದ ಐದನೆಯ ಪೀಠಾಧಿಪತಿಯಾಗಿ ಸಮರ್ಥ ರೀತಿಯಲ್ಲಿ ಧರ್ಮಕಾರ್ಯ ಮುಂದುವರಿಸಿಕೊಂಡು ಬಂದರು.

ಶ್ರೀ ಮುರುಘೇಂದ್ರ ಮಹಾಸ್ವಾಮಿಗಳು ೧೯ನೆಯ ಶತಮಾನದ ಆದಿಯಲ್ಲಿ ಜನ್ಮ ತಳೆದಿರಬಹುದು. ಅಥಣಿಯ ಮೋಟಗಿಮಠದ ಪೀಠಾಧಿಕಾರಿಯಾಗಿ ಸುಮಾರು ೧೮೩೨ ರಲ್ಲಿ ಬಂದಿರಬಹುದೆಂದು ಒಂದು ಮೂಲದ ಪ್ರಕಾರ ತಿಳಿದು ಬರುತ್ತದೆ.

ಶ್ರೀಗಳು ಸುರಪುರ ಸಂಸ್ಥಾನದ ನಾಮಾಂಕಿತ ನಿಷ್ಠೆ ಲಿಂಗಣ್ಣನವರ ಆಶ್ರಯದಲ್ಲಿದ್ದುಕೊಂಡು ಸುರಪುರ ಪಾಠಶಾಲೆಯಲ್ಲಿ ಎರಡು ವರ್ಷ ಅಧ್ಯಯನಗೈದು ಶಾಸ್ತ್ರಾಭ್ಯಾಸದಲ್ಲಿ ಪ್ರಾವೀಣ್ಯತೆ ಹೊಂದಿದರು. ಬಾಗಲಕೋಟೆಯ ಶ್ರೀ ಬಸವಲಿಂಗ ಸ್ವಾಮಿಗಳು ನಡೆಸುತ್ತಿದ್ದ ಪಾಠಶಾಲೆಯಲ್ಲೂ ಕೆಲವು ಕಾಲವಿದ್ದು, ವೀರಶೈವ ಧರ್ಮ ತತ್ವಗಳ ಅಧ್ಯಯನ ಮಾಡಿ ಪಂಡಿತರೆನಿಸಿದರು. ಶಬರಶಂಕರ ವಿಳಾಸ, ರಾಜಶೇಖರ ವಿಳಾಸ ಗ್ರಂಥಗಳು ಕಂಠಪಾಠವಾಗಿದ್ದವು. ತಾವು ಅಧ್ಯಯನ ಮಾಡಿದ ಧರ್ಮತತ್ವಗಳನ್ನು ಮೋಟಗಿ ಮಠಕ್ಕೆ ಬರುವ ಸದ್ಭಕ್ತರಿಗೆ ಹೇಳಿಕೊಡುತ್ತಿದ್ದರು. ಕಂದಾಚಾರಗಳನ್ನು ಕೊಡವಿಕೊಳ್ಳಲು ಭಕ್ತರಿಗೆ ಉಪದೇಶಿಸುತ್ತಿದ್ದರು.

ಕೋಹಳ್ಳಿ ಪಟ್ಟದದೇವರು, ಗಂಗಾಧರ ಮಡಿವಾಳೇಶ್ವರ ತುರಮರಿ, ಹಾವೇರಿ ಮಠದ ಶ್ರೀ ನಿ.ಪ್ರ. ಶಿವಬಸವ ಮಹಾಸ್ವಾಮಿಗಳು, ಅಥಣಿಯ ಶಿವಯೋಗಿ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳು ಶ್ರೀಗಳೊಡನೆ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತಿದ್ದುದಾಗಿ ತಿಳಿದು ಬರುತ್ತದೆ. ವೀರಶೈವರಲ್ಲಿ ಬಡವ-ಬಲ್ಲಿದ, ಮೇಲು-ಕೀಳು ಎಂಬ ಯಾವ ಭೇದ-ಭಾವವನ್ನು ಎಣಿಸದೆ ಎಲ್ಲರೂ ಒಂದೆಂಬ ಭಾವನೆಯಿಂದ ಭಕ್ತಿಯಿಂದ ಕರೆದವರ ಮನೆಗೆ ಹೋಗಿ ಧರ್ಮೋಪದೇಶ ಮಾಡಿ ಅವರ ಇಷ್ಟಾರ್ಥ ಈಡೇರಿಸುತ್ತಿದ್ದರು. ಶ್ರೀಗಳು ನಾಡಿನ ತುಂಬ ಸಂಚರಿಸಿ ಕಾಯಕ ಸಿದ್ಧಾಂತ ಕುರಿತು ಅಸ್ಖಲಿತ ವಾಣಿಯಲ್ಲಿ ಉದ್ಬೋಧಕವಾಗಿ ಪ್ರವಚನ ಮಾಡುತ್ತಿದ್ದರು. ತಮ್ಮ ಮಠದಲ್ಲೂ ಅಷ್ಟೇ ಆಸಕ್ತಿಯಿಂದ ಪ್ರವಚನಗಳನ್ನು ನೀಡುತ್ತಿದ್ದರು.

ಹೀಗೊಂದು ದಿನ ಇಂಗಳಗಾಂವಿ ಗ್ರಾಮಕ್ಕೆ ಶ್ರೀಗಳು ದಯಮಾಡಿಸಿದಾಗ ಅಲ್ಲಿಯ ಅವರ ಪೂರ್ವಾಶ್ರಮದ ಬೀಗರು ನೆಲೆಸಿದ್ದ ಭಾಗೋಜಿ ಮಠಕ್ಕೆ ಭೇಟಿಯಿತ್ತರು. ಅಲ್ಲಿ ತಮ್ಮ ಸೋದರತ್ತೆಯ (ನೀಲಮ್ಮ ತಾಯಿ) ಮೊಮ್ಮಗನಾದ ಚನ್ನಬಸವನನ್ನು ಕಂಡರು. ನಿರಂಜನ ಸ್ವಾಮಿಗೆ ಇರಬೇಕಾದ ಎಲ್ಲ ಲಕ್ಷಣಗಳೂ ಚನ್ನಬಸವನಲ್ಲಿರುವುದನ್ನು ಕಂಡುಕೊಂಡು ತಮ್ಮ ಉತ್ತರಾಧಿಕಾರಿಯಾಗಿ ಆತನನ್ನು ತಂದುಕೊಳ್ಳುವ ಸಂಕಲ್ಪಗೈದರು. ಕೆಲವು ದಿನಗಳ ನಂತರ ಶ್ರೀಗಳ ಅಪ್ಪಣೆಯ ಮೇರೆಗೆ

ಚನ್ನಬಸವನ ತಂದೆ-ತಾಯಿ ಬಾಲಕನನ್ನು ಮೋಟಗಿಮಠಕ್ಕೆ ಒಪ್ಪಿಸಿದರು. ಸುಮಾರು ೩೦ ವರ್ಷ ಶ್ರೀಗಳ ಸೇವೆ ಮಾಡುತ್ತ ಚನ್ನಬಸವನವರು ಮೋಟಗಿ ಮಠದಲ್ಲಿದ್ದರೆಂದು ಗೊತ್ತಾಗುತ್ತದೆ.

ಶ್ರೀಚನ್ನಬಸವ ಶ್ರೀಗಳ ನಿರಂಜನ ದೀಕ್ಷೆ ಮತ್ತು ಪಟ್ಟಾಭಿಷೇಕ ಮಹೋತ್ಸವವು ಸಮಸ್ತ ಸದ್ಭಕ್ತ ಮಾಹೇಶ್ವರರ ಸಮ್ಮುಖದಲ್ಲಿ ಶಾಲಿವಾಹನ ಶಕೆ ೧೮೧೧ ರಲ್ಲಿ ನೆರವೇರಿತು. ಕ್ರಿ. ಶ. ೧೯೧೪ ಸಪ್ಟಂಬರ ೨೩ ರಂದು (ಶಾಲಿವಾಹನ ಶಕೆ ೧೮೩೬ ರಲ್ಲಿ) ಶ್ರೀ ಮುರುಘೇಂದ್ರ ಶ್ರೀಗಳು ಲಿಂಗೈಕ್ಯರಾದರೆಂದು ಗೊತ್ತಾಗುತ್ತದೆ. ಅವರ ಗದ್ದುಗೆಯು ಆಗಿನ ಮೋಟಗಿ ಮಠದ ಹಿಂಭಾಗದಲ್ಲಿದ್ದ ಪತ್ರಿಬನದಲ್ಲಿದೆಯೆಂದು ಹೇಳುತ್ತಾರೆ. ಸುಮಾರು ೯೪ ವರ್ಷ ಕಾಲ ಶ್ರೀಗಳು ಬದುಕಿದ್ದರೆಂದು ಒಂದು ಮೂಲದಿಂದ ತಿಳಿದು ಬರುತ್ತದೆ. ತಮ್ಮ ಬದುಕಿನುದ್ದಕ್ಕೂ ಯಾವ ಭೇದ-ಭಾವವಿಲ್ಲದೆ ಜನತೆಯ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಿದರೆಂದು ಗೊತ್ತಾಗುತ್ತದೆ.

ಶ್ರೀ ಮಠದ ಆರನೆಯ ಅಧಿಪತಿಗಳಾದ ಶ್ರೀ ಚನ್ನಬಸವ ಸ್ವಾಮಿಗಳು ನದಿ ಇಂಗಳಗಾಂವಿಯವರು. ಗಚ್ಚಿನಮಠದ ಪರಮ ತಪಸ್ವಿ ಮುರುಘೇಂದ್ರ ಶಿವಯೋಗಿಗಳ ಪೂರ್ವಾಶ್ರಮದ ಸಹೋದರರು. ಇಂಗಳಗಾಂವಿಯ ಭಾಗೋಜಿ ಮಠದ ಒಂದೇ ಮನೆತನದ ಮೂವರು ಸಹೋದರರು ವೈರಾಗ್ಯ ತಾಳಿ ಸ್ವಾಮಿಗಳಾಗುತ್ತಾರೆ. ಇವರೆಲ್ಲ ಅಥಣಿಯ ಒಂದೇ ಸ್ಥಳದಲ್ಲಿ ಮೂರು ಮಠಗಳಿಗೆ (ಗಚ್ಚಿನಮಠ, ಮೋಟಗಿಮಠ, ಗೋಟಖಿಂಡಿಮಠ) ಮಠಾಧಿಪತಿಗಳಾದದ್ದು ಇತಿಹಾಸದಲ್ಲೇ ಅಪೂರ್ವವೂ ವಿಶಿಷ್ಟವೂ ಆಗಿದೆ. ಮೋಟಗಿ ಮಠದ ಇತಿಹಾಸ ಪರಂಪರೆಗಳಿಗೆ ನವಚೈತನ್ಯ ತುಂಬಿದವರೇ ನಮ್ಮ ಶ್ರೀ ಚನ್ನಬಸವಸ್ವಾಮಿಗಳೆಂದು ಹೇಳಿದರೆ ಅತ್ಯುಕ್ತಿಯೆನಿಸದು.

ಶ್ರೀಮನ್ನೃಪ ಶಾಲಿವಾಹನ ಶಕೆ ೧೮೪೭ ಪುಷ್ಯ ಶುದ್ಧ ಪೌರ್ಣಿಮೆಯ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಚನ್ನಬಸವ ಮಹಾಸ್ವಾಮಿಗಳು ಲಿಂಗೈಕ್ಯರಾದರು. ಅಥಣಿಯ ಸದ್ಭಕ್ತರು ಲಿಂಗೈಕ್ಯ ದಿನವನ್ನು ಚನ್ನಬಸವೇಶನ ಹುಣ್ಣಿಮೆಯೆಂದು ಕರೆಯುವ ಪರಿಪಾಠವಿದೆ. ಅರಿವಿನ ಗುರು ಎಂದೇ ಪ್ರಖ್ಯಾತರಾದ ಲಿಂ. ಗುರುಬಸವ ಸ್ವಾಮಿಗಳು ಸಾಹಿತ್ಯ ತಪಸ್ವಿಗಳು. ಒಂದು ರೀತಿಯಲ್ಲಿ ಅರಿವು ಆಚಾರ ಅನುಭಾವಗಳ ತ್ರಿವೇಣಿ ಸಂಗಮವೇ ಸರಿ. ದೇವ ಪೂಜೆಗೆ ನೀಡುವ ಆದ್ಯತೆ ಪುಸ್ತಕಕ್ಕೂ ದೊರೆಯಬೇಕೆಂಬುದು ಅವರ ಜೀವನ ಧ್ಯೇಯವಾಗಿತ್ತು. ಪುಸ್ತಕ ಸಂಸ್ಕೃತಿಯನ್ನೇ ಅಳವಡಿಸಿಕೊಂಡಿದ್ದ ಗುರುಬಸವಸ್ವಾಮಿಗಳು ಚೆನ್ನಬಸವ ಚಾರಿತ್ರ್ಯ, ಅಂಧ ಸಿದ್ಧಾಂಜನ, ಸುಪ್ರಭಾತ ಮೊದಲಾದ ಮೌಲಿಕ ಕೃತಿಗಳನ್ನು ರಚಿಸಿದ್ದರು.

ಮೋಟಗಿಮಠದ ಐದನೆಯ ಪೀಠಾಧಿಪತಿಗಳಾಗಿದ್ದ ಶ್ರೀ ಮುರುಘೇಂದ್ರ ಶ್ರೀಗಳ ಪೂರ್ವಾಶ್ರಮದ ಮೈಗೂರು ಹಿರೇಮಠಕ್ಕೆ ಸೇರಿದವರು. ನಮ್ಮ ಗುರು ಬಸವಸ್ವಾಮಿಗಳು ಮೋಟಗಿಮಠದ ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿಕೊಂಡ ಅವಧಿಯಿಂದ ಲಿಂಗೈಕ್ಯರಾಗುವವರೆಗೆ ಸೇವಕರನ್ನಾಗಲಿ ಶಿಷ್ಯರನ್ನಾಗಲಿ ತಮ್ಮ ಸೇವೆಗೆ

ನಿಯಮಿಸಿಕೊಳ್ಳಲಿಲ್ಲ. ತಮ್ಮ ದಿನನಿತ್ಯದ ಕಾರ್ಯಗಳನ್ನು ತಾವೇ ಸ್ವತಃ ನಿರ್ವಹಿಸುತ್ತಿದ್ದರು. ೧೯೮೪ ರಲ್ಲಿ ಮೈಗೂರು ಹಿರೇಮಠದ ಚನ್ನಬಸವರನ್ನು ಕರೆಯಿಸಿಕೊಂಡು ಚನ್ನಬಸವದೇವರು ಎಂದು ನಾಮಕರಣ ಮಾಡಿ ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸಿದರು. ಸ್ವಾಮಿಗಳು ೨೯-೩-೧೯೮೭ ರಂದು ಲಿಂಗೈಕ್ಯರಾದರು. ಅವರ ತೋರಗದ್ದುಗೆ ಶ್ರೀಮಠದಲ್ಲಿ ಅವರ ಗುರುಗಳ ಗದ್ದುಗೆಯ ಬಳಿಯಿದೆ. ಶ್ರೀ ಗುರುಬಸವ ಸ್ವಾಮಿಗಳು ಮಠದ ಸದ್ಭಕ್ತರಿಗೆ ನೀಡಿದ ಸಂದೇಶ ಇಂತಿದೆ :

"ಶ್ರೀಮಠಕ್ಕೆ ಯಾವುದೇ ರೀತಿಯ ಆಸ್ತಿಪಾಸ್ತಿ ಇರಕೂಡದು. ಭಕ್ತರಿಂದ ಕಾಣಿಕೆ ರೂಪದಲ್ಲಿ ಸಂದಾಯವಾದ ಧನ-ಧಾನ್ಯಗಳನ್ನು ಪ್ರತಿ ತಿಂಗಳು ಹುಣ್ಣಿವೆಯಂದು ಜರುಗುವ ದಾಸೋಹಕ್ಕೆ ವಿನಿಯೋಗಿಸಬೇಕು. ಶ್ರೀಮಠದಲ್ಲಿ ಆಧ್ಯಾತ್ಮಿಕ ಪ್ರವಚನಗಳನ್ನು ಏರ್ಪಡಿಸಬೇಕಲ್ಲದೆ ಗುರುಗಳ ಪುಣ್ಯತಿಥಿ ಆಚರಿಸಬೇಕು".

ಉತ್ತರಾಧಿಕಾರಿಯಾಗಿ ಬಂದ ಶ್ರೀ ಚನ್ನಬಸವದೇವರು ತಮ್ಮ ಗುರುಗಳು ಹೇಳಿಕೊಟ್ಟ ಈ ಆದೇಶವನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬಂದುದೊಂದು ಉಲ್ಲೇಖನೀಯ ಅಂಶವಾಗಿದೆ.

ಜನಮಾನಸದ ಅಧ್ಯಾತ್ಮ ಕೇಂದ್ರವಾದ ಅಥಣಿ ಮೋಟಗಿಮಠವು ಹಿರಿಯ ಗುರುಗಳೆಲ್ಲರ ನಿರಂತರ ಶ್ರಮ-ಸಿದ್ಧಿ-ಸಾಧನೆಗಳ ಫಲವಾಗಿ ಇಂದು ಲೋಕಮಾನ್ಯವೆನಿಸಿದೆ. ಸುಮಾರು ೩೫೦ ವರ್ಷಗಳಷ್ಟು ಪ್ರಾಚೀನವೆನಿಸಿದ ಈ ಶ್ರೀಮಠವು ಶ್ರೀ ಚನ್ನಬಸವದೇವರ ನೇತೃತ್ವದಲ್ಲಿ ಇನ್ನಷ್ಟು ತನ್ನ ಪ್ರಕಾಶವನ್ನು ದೇದೀಪ್ಯಮಾನವಾಗಿ ಬೆಳಗಿ ಸಮಗ್ರ ಕರ್ನಾಟಕದಲ್ಲೇ ಖ್ಯಾತನಾಮವಾಗುವದರಲ್ಲಿ ಸಂದೇಹವಿಲ್ಲ. ಕೈಗೆ ಕೈ ಕೂಡಿಸಿ ಬಸವರಥ ಎಳೆಯುವ ಸಂಕಲ್ಪ ತೊಟ್ಟ ಅಪರೂಪದ ಪೀಠಾಧಿಪತಿಗಳು ಶ್ರೀಮಠಕ್ಕೆ ದೊರೆತ ಮೇಲೆ ಏನೆಲ್ಲ ಬಯಸುವದು ಸೂಕ್ತವೇ ಸರಿ!!

■■

ಪಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಶ್ರೀ ಚೆನ್ನಬಸವ ಶಿವಯೋಗಿಗಳು

● ಸುಭಾಷ ಮೋಟಗಿ

ಆಸೆಗೆ ಸತ್ತುದು ಕೋಟಿ. ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ

ಇಂದಿನ ವಿಜ್ಞಾನಯುಗದಲ್ಲಿ ಮಾನವನ ಬದುಕು ತುಂಬ ಸಂಕೀರ್ಣವೆನಿಸುತ್ತದೆ. ಮನುಷ್ಯನ ಬೇಕು-ಬೇಡಗಳಿಗೆ ಕೊನೆ ಎಂಬುದಿಲ್ಲ. ಕೇವಲ ಬಾಹ್ಯ ಸುಖ ಸಂತೋಷಗಳತ್ತ ಅವನ ಮನಸ್ಸು ಲೋಲಾಡುತ್ತಿದೆ. ಅವುಗಳೇ ತನಗೆ ಸಂತೋಷ ನೀಡುವ ಸಾಧನಗಳೆಂದು ನಂಬಿ ಅವುಗಳ ಸಂಪಾದನೆಗಾಗಿ ಆತನ ಆಯುಷ್ಯವೇ ತೀರುತ್ತದೆ. ಆದರೂ ಅವನ ಮನಸ್ಸು ಸಂತೋಷವನ್ನು ಅನುಭವಿಸುತ್ತಿಲ್ಲ.

ಪವಿತ್ರವಾದ ನಮ್ಮೀ ನಾಡಿನಲ್ಲಿ ಜನಮಾನಸದ ಕಾಳಿಕೆಯನ್ನು ಕಳೆದು ಅಲ್ಲಿ ಅಧ್ಯಾತ್ಮದ ಪ್ರಭೆಯನ್ನು ಸುರಿಸುತ್ತ ಆಗಾಗ ಮಹಾಪುರುಷರು ಉದಯಿಸುತ್ತಲೇ ಬಂದಿದ್ದಾರೆ. ಜನತೆಯ ಬಾಳನ್ನು ನಂದಾದೀಪದಂತೆ ಬೆಳಗುತ್ತಲಿದ್ದಾರೆ. ಅಂಥ ಮಹಾನುಭಾವರಲ್ಲಿ ಅಥಣಿಯ ಸುವಿಖ್ಯಾತ ಮಠವೆನಿಸಿದ ಶ್ರೀ ಮೋಟಗಿಮಠದ ಚೆನ್ನಬಸವ ಮಹಾಶಿವಯೋಗಿಗಳು ಅತ್ಯಂತ ಪ್ರಮುಖರು.

ಶ್ರೀ ಚೆನ್ನಬಸವ ಶಿವಯೋಗಿಗಳು ತಮ್ಮ ತ್ರಿಕಾಲ ಲಿಂಗಪೂಜಾನಿಷ್ಠೆ, ವೀರವೈರಾಗ್ಯ, ಸರ್ವಜೀವ ದಯಾಪರತೆ ಮೊದಲಾದ ಸದ್ಗುಣಗಳಿಂದ ಕಂಗೊಳಿಸಿ, ಸದಾಚಾರದ ಸಾಕಾರಮೂರ್ತಿಗಳೆನಿಸಿ ಲೋಕವಿಖ್ಯಾತರಾದರು. ಉದಾರಚರಿತರೂ ಶಿವಯೋಗ ಕುಲ ಸಂಜಾತರೂ ಲೋಕ ಹಿತೈಷಿಗಳೂ ಆದ ಶ್ರೀ ಚೆನ್ನಬಸವ ಶಿವಯೋಗಿಗಳು ಅಥಣಿ ಮೋಟಗಿ ಮಠದ ಪೀಠಾಧಿಕಾರಿಗಳಾಗಿ ಸಮಾಜೋದ್ಧಾರಕ್ಕಾಗಿ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡರು. ಜಂಗಮ ಕುಲತಿಲಕರೆನಿಸಿ ನಾಡಿಗೆ ಆದರ್ಶರಾದರು.

ಜನನ :

ಬೆಳಗಾವಿ ಜಿಲ್ಲೆಯ ಇಂಗಳಗಾವಿ ಗ್ರಾಮ ಅಥಣಿ ತಾಲೂಕಿನಲ್ಲಿದ್ದು ಧಾರ್ಮಿಕ ಕ್ಷೇತ್ರದ ಇತಿಹಾಸದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಅಲ್ಲಿಯ ಬಾಗೋಜಿಕೊಪ್ಪ ಮಠದ ಮನೆತನವು ಪರಮಪವಿತ್ರವಾದುದು. ನಾಡಿಗೆ ಮೂವರು ಮಹಾಯೋಗಿಗಳನ್ನು ನೀಡಿದ ಹೆಮ್ಮೆಗೆ ಪಾತ್ರವಾಗಿದೆ. ಅಲ್ಲಿಯ ರಾಚಯ್ಯ-ನೀಲಮ್ಮ ಎಂಬ ದಂಪತಿಗಳ ಪುಣ್ಯೋದರದಲ್ಲಿ ಜನಿಸಿದ ಗುರುಲಿಂಗದೇವರು ಮುಂದೆ ಅಥಣಿ ಗಚ್ಚಿನಮಠದ ಮುರುಘೇಂದ್ರ ಶಿವಯೋಗಿಗಳಾಗಿ ಲೋಕ ಕಲ್ಯಾಣಗೈದ ಜಗದ್ವಂದ್ಯ ಪುರುಷರು. ಈ ಮುರುಘೇಂದ್ರ ಶಿವಯೋಗಿಗಳ ಸಹೋದರ ದುಂಡಯ್ಯ ಹಾಗೂ ನೀಲಮ್ಮ ಅವರ ಪುತ್ರರೇ ಶ್ರೀ ಮೋಟಗಿಮಠಕ್ಕೆ ಪೀಠಾಧಿಕಾರಿಗಳಾಗಿ ವಿಜೃಂಭಿಸಿದ ಚನ್ನಬಸವ ಶಿವಯೋಗಿಗಳು. ಅದರಂತೆ ಅಥಣಿ ಗೋಟಖಿಂಡಿಮಠದ ಮಹಾಂತ ಶಿವಯೋಗಿಗಳೂ ಬಾಗೋಜಿ ಕೊಪ್ಪ ಮಠದ ಮನೆತನದವರೇ ಎಂಬುದು ಗಮನಾರ್ಹ ಸಂಗತಿ.

ಇಂಗಳಗಾವಿಯ ಒಂದು ಜ್ಯೋತಿ ಅಥಣಿ ಗಚ್ಚಿನಮಠಕ್ಕೆ ಇನ್ನೊಂದು ಜ್ಯೋತಿ ಮೋಟಗಿಮಠಕ್ಕೆ ಮತ್ತೊಂದು ಜ್ಯೋತಿ ಗೋಟಖಿಂಡಿಮಠಕ್ಕೆ. ಈ ಜ್ಯೋತಿತ್ರಯಗಳ ಮಹಾಪ್ರಕಾಶದಲ್ಲಿ ಅಥಣಿ ನಗರ ಅಧ್ಯಾತ್ಮದ ತವರು, ಧರ್ಮಲತೆಯ ಚಿಗುರು, ಅನುಭಾವ ಅನುಭೂತಿ ಭಕ್ತಿ ಭಾವಗಳ ಮಹಾಮೇರುವಾಯಿತು.

ಇಂಗಳಗಾವಿಯ ದುಂಡಯ್ಯನವರು ಶಿವಭಕ್ತಿ ಸಂಪನ್ನರು. ಅವರ ಧರ್ಮಪತ್ನಿ ಲಿಂಗಮ್ಮನವರೂ ಸಹ ಪತಿಗೆ ಸತಿಯಾಗಿ ಬಾಳಿ ಪತಿಯ ಸಕಲ ಯಶಸ್ಸಿನ ಭಾಗವಾಗಿದ್ದರು. ಒಂದು ದಿನ ಈ ಜಂಗಮ ದಂಪತಿಗಳು ಭಕ್ತರ ಸದಿಚ್ಛೆಯಂತೆ ವೀರಶೈವ ಪ್ರಮುಖ ಪುಣ್ಯಕ್ಷೇತ್ರವಾದ ಉಳವಿಗೆ ಪ್ರವಾಸ ಹೊರಡುತ್ತಾರೆ.

ಶ್ರೀ ಚೆನ್ನಬಸವಣ್ಣನವರ ಐಕ್ಯ ಸ್ಥಳವಾದ ಉಳವಿ ವೀರಶೈವರಿಗೆ ಅತ್ಯಂತ ಭಕ್ತಿಪೂರ್ಣವಾದ ಸ್ಥಳ. ಅಲ್ಲಿ ಪ್ರತಿವರ್ಷ ಚೆನ್ನಬಸವಣ್ಣನವರ ಜಾತ್ರೆ ತುಂಬ ಅದ್ದೂರಿಯಿಂದ ಜರುಗುತ್ತಿದೆ. ಲಕ್ಷಾಂತರ ಜನ ಅಲ್ಲಿ ಭಾಗವಹಿಸಿ ತಾವು ಪುನೀತರಾದೆವೆಂಬ ಭಾವತಾಳುತ್ತಾರೆ.

ಅಲ್ಲಿ ಯಾತ್ರಾರ್ಥಿಗಳಾಗಿ ತೆರಳಿದ ದಂಪತಿಗಳಾದ ದುಂಡಯ್ಯ ಹಾಗೂ ಲಿಂಗಮ್ಮನವರ ಸ್ವಪ್ನದಲ್ಲಿ ಸ್ವತಃ ಚೆನ್ನಬಸವಣ್ಣನವರೇ ಪ್ರತ್ಯಕ್ಷರಾಗಿ, ' ಪುಣ್ಯ ಸ್ವರೂಪರಾದ ದಂಪತಿಗಳೇ ಇನ್ನು ಒಂದು ವರ್ಷದೊಳಗಾಗಿಯೇ ನಿಮ್ಮ ಪವಿತ್ರ ಗರ್ಭದಿಂದ ಓರ್ವ ಗಂಡು ಮಗುವು ಜನಿಸುತ್ತಾನೆ. ಆ ಮಗುವಿನಿಂದ ಅಧ್ಯಾತ್ಮ ಲೋಕಕ್ಕೆ ಅಪಾರಕೊಡುಗೆ ಸಂದು ಆತ ವೀರವೈರಾಗ್ಯ ಪುರುಷನಾಗಿ ಮೆರೆಯುವನು. ಆತ ಸಾಕ್ಷಾತ್ ನನ್ನ ಸ್ವರೂಪನೇ ಸರಿ. ಇದರಿಂದ ನಿಮ್ಮ ಇಚ್ಛೆ ಪೂರೈಸಿದಂತಾಗುವದು ' ಎಂದು ಅಪ್ಪಣೆಯಾಗುತ್ತದೆ. ಅಷ್ಟರಲ್ಲಿ ಆ ದಂಪತಿಗಳು ಎಚ್ಚರಗೊಳ್ಳುವರು. ಆ ಮಾಹೇಶ್ವರ ದಂಪತಿಗಳ ಆನಂದಕ್ಕೆ ಪಾರವೇ ಇಲ್ಲದಂತಾಗುವದು.

ಮುಂದೆ ವರುಷ ತುಂಬುವದರೊಳಗಾಗಿಯೇ ಶರಣೆ ಲಿಂಗಮ್ಮನವರು ಗರ್ಭವತಿಯಾಗಿ ೧೭೮೨ ವೈಶಾಖ ಶುದ್ಧ ಪಂಚಮಿ (ಸನ್ ೧೮೬೦)ಯಂದು ಗಂಡುಮಗುವಿಗೆ ಜನ್ಮವಿತ್ತರು. ದಂಪತಿಗಳು ಸಂತೋಷಭರಿತರಾಗಿ ಮಗುವಿಗೆ ಚೆನ್ನಬಸವಯ್ಯ ಎಂದು ನಾಮಕರಣ ಮಾಡಿದರು. ಚೆನ್ನಬಸವಣ್ಣನವರ ಕೃಪಾಶಿಶುವಾಗಿ ಅವತರಿಸಿದ ಚೆನ್ನಬಸವಶಿವಯೋಗಿಗಳು ಮುಂದೆ ಜ್ಞಾನಯೋಗಿಗಳಾಗಿ ಚೆನ್ನಬಸವಣ್ಣನವರಂತೆ ಷಟಸ್ಥಲ ಚಕ್ರವರ್ತಿಗಳಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಕಾರಣಕರ್ತರಾದರು, ಲೋಕ ವಂದ್ಯರಾದರು.

ಬಾಲ್ಯ - ವಿದ್ಯಾಭ್ಯಾಸ :

ತಾಯಿ ಲಿಂಗಮ್ಮನ ಮುದ್ದು ಆರೈಕೆಯಲ್ಲಿ ಚೆನ್ನಬಸವ ಬಿದಿಗೆಯ ಚಂದ್ರನಂತೆ ದಿನದಿಂದ ದಿನಕ್ಕೆ ಬೆಳೆಯತೊಡಗಿದ. ಜಗತ್ತಿನಲ್ಲಿ ತಾಯಿಯ ಮಮತೆಗಿಂತ ಮಿಗಿಲಾದುದು ಯಾವುದಿದೆ ? ಲಿಂಗಮ್ಮನ ಮಾತೃಹೃದಯದ ವಾತ್ಸಲ್ಯದಲ್ಲಿ ಚೆನ್ನಬಸವನಿಗೆ ಯಾವುದರ ಕೊರತೆ ? ಅದು ಎಂದೂ ಬತ್ತದ ಒರತೆ !

ಚೆನ್ನಬಸವ ಓಣಿಯಲ್ಲಿ ಮುದ್ದಾಗಿ ಆಡುತ್ತ ಆಡುತ್ತಲಿದ್ದಾಗ ಎಲ್ಲರ ಗಮನವೂ ಆತನ ಮೇಲೆಯೇ. ಬಾಲ್ಯದ ಆತನ ಚೆಲ್ಲು ಚೆಲ್ಲಾಟಗಳು ಎಲ್ಲರಲ್ಲೂ ಹರ್ಷ ಉಕ್ಕಿಸುತ್ತಿದ್ದವು. ಕಾಂತಿಯುಕ್ತವಾದ ಚಿನ್ನವರ್ಣದ ಆತನ ಮೈಬಣ್ಣ. ಕಮಲದಂತಹ ಹೊಳಪುಳ್ಳ ಸುಂದರ ನೇತ್ರಗಳು. ದಷ್ಟಪುಷ್ಟವಾದ ಆತನ ಮೈಕಟ್ಟು. ಕಂಡವರ ಮನದಲ್ಲಿ ಆನಂದ ಹೊರಸೂಸಿದರೆ ಆಶ್ಚರ್ಯವೇನು ?

ತಾಯಿ-ತಂದೆಯರ ವಾತ್ಸಲ್ಯದ ಸುರಿಮಳೆಯಲ್ಲಿ ಬಾಲಕ ಚೆನ್ನಬಸವ ಮಿಂದು ಹೋದ. ಅವರು ಚೆನ್ನಬಸವನು ದೇವಾಂಶ ಸಂಭೂತನೆಂದು ಮನಗಂಡು ಅವನಿಗೆ ಆಗಲೇ ಅಧ್ಯಾತ್ಮ ವಿಚಾರಗಳನ್ನೂ, ಧಾರ್ಮಿಕ ನಡೆ-ನುಡಿಗಳನ್ನೂ ಕಲಿಸುವರು. ಮುಂದೆ ಚೆನ್ನಬಸವನನ್ನು ವಿದ್ಯಾಭ್ಯಾಸಕ್ಕೆಂದು ಪಾಠಶಾಲೆಗೆ ಕಳಿಸುವರು.

ನಯ-ವಿನಯಶಾಲಿಯೂ ಅತ್ಯಂತ ಮೇಧಾವಿ ಬಾಲಕನೂ ಆದ ಚೆನ್ನಬಸವನು ಗುರುಗಳು ಹೇಳುವ ಪಾಠಗಳನ್ನು ಅತ್ಯಂತ ಶೀಘ್ರವಾಗಿ ಅರ್ಥೈಸಿಕೊಂಡು ಮುಂದಿನ ಪಾಠಗಳನ್ನು ಅರುಹಬೇಕೆಂದು ಕೇಳುವನು. ಚೆನ್ನಬಸವನು ಒಮ್ಮೊಮ್ಮೆ ಕ್ಲಿಷ್ಟ ಪ್ರಶ್ನೆಗಳನ್ನೂ ಕೇಳತೊಡಗುವನು. ಈತನ ಅಸಾಧಾರಣ ಪ್ರತಿಭೆ ಹಾಗೂ ಕುಶಾಗ್ರಮತಿಯನ್ನು ಕಂಡು ಗುರುಗಳು ಆಶ್ಚರ್ಯ ಹಾಗೂ ಸಂತೋಷಯುಕ್ತರಾದರು.

ತನ್ನ ಓರಿಗೆಯ ಬಾಲಕರಿಗೆ ಶಾಲೆಯಲ್ಲಿ ಚೆನ್ನಬಸವನು ತನ್ನಲ್ಲಿ ಬೀಜಾಂಕುರಗೊಂಡ ಅಧ್ಯಾತ್ಮ ವಿಷಯಗಳನ್ನಲ್ಲದೆ ಲಿಂಗಪೂಜೆಯ ವಿಧಿ-ವಿಧಾನಗಳನ್ನೂ ತಿಳಿಸುವನು. ತನ್ನ ಗೆಳೆಯರನ್ನೆಲ್ಲ ಧಾರ್ಮಿಕ ವಿಷಯಗಳತ್ತ ನಡೆಯುವಂತೆ ಪ್ರೇರೇಪಿಸುತ್ತಾನೆ. ಈಗ ಚೆನ್ನಬಸವ ಬಾಹ್ಯದಲ್ಲಿ ಓರ್ವ ಲೌಕಿಕ ವಿದ್ಯಾರ್ಥಿಯಂತೆ ಕಂಡರೂ ಅಂತರ್ಯದಲ್ಲಿ ಅನುಭಾವಿಯ ಆದರ್ಶಗಳನ್ನು

ಮೈಗೂಡಿಸಿಕೊಂಡ ಯೋಗಿಯಂತೆ ಸಾಗುತ್ತ ಪಾರಮಾರ್ಥ ಪಥಿಕನೆನಿಸುತ್ತಾನೆ. ಈ ಲೋಕದ ಜಂಜಡಗಳಿಂದ ಮುಕ್ತನಾಗಿ ಉಳಿಯಬೇಕೆಂದು ಆತನ ಮನಸ್ಸು ತಹತಹಿಸುತ್ತದೆ. ಸದ್ಗುರುವಿನ ಸಾನಿಧ್ಯಕ್ಕಾಗಿ ತುಡಿತ ಅಧಿಕವಾಗುತ್ತದೆ.

ಗುರು ಸಾನಿಧ್ಯ :

ಪಂಡಿತೋತ್ತಮರಾದ ದುಂಡಯ್ಯನವರು ಮತ್ತು ಶರಣೆ ನೀಲಾಂಬೆ ಅವರು ತಮ್ಮ ಮಗ ಚೆನ್ನಬಸವನ ಅಧ್ಯಾತ್ಮದ ಎಳೆತ ಸೆಳೆತಗಳನ್ನು ಅರಿಯುತ್ತಾರೆ. ಆತನಲ್ಲಿದ್ದ ಧರ್ಮ-ದೃಷ್ಟಿಯನ್ನು ಕಂಡು ಸಂತೋಷಿಸುತ್ತಾರೆ. ಬಾಲ್ಯಾವಸ್ಥೆಯಿಂದ ಪ್ರಬುದ್ಧಾವಸ್ಥೆಗೆ ಬರುತ್ತಿರುವ ಚೆನ್ನಬಸವನಿಗೆ ತಕ್ಕುದಾದ ಒಂದು ಧಾರ್ಮಿಕ ನೆಲೆ ದೊರಕಿಸಬೇಕೆಂದು ಹಂಬಲಿಸುತ್ತಾರೆ. ಅಥಣಿಯ ಉನ್ನತ ಧಾರ್ಮಿಕ ಹಾಗೂ ಅಧ್ಯಾತ್ಮ ಕೇಂದ್ರವೆನಿಸಿದ ಶ್ರೀ ಮೋಟಗಿಮಠವೇ ಚೆನ್ನಬಸವನಿಗೆ ತಕ್ಕ ಸ್ಥಾನವೆಂದು ತೀರ್ಮಾನಿಸುತ್ತಾರೆ. ಆಗಿನ ಮೋಟಗಿಮಠದ ಪೀಠಾಧ್ಯಕ್ಷರಾದ ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು ಸರ್ವಜೀವನ ಕಾರುಣ್ಯಭರಿತರೂ ಶಿವಯೋಗ ನಿಷ್ಠರೂ ಎಂಬುದನ್ನರಿತು ಚೆನ್ನಬಸವನನ್ನು ಮೋಟಗಿಮಠಕ್ಕೆ ಕರೆದುಕೊಂಡು ಬಂದು ತಮ್ಮ ಮನೋಭಿಲಾಷೆಯನ್ನು ಪೂಜ್ಯ ಮುರುಘೇಂದ್ರ ಮಹಾಶಿವಯೋಗಿಗಳಲ್ಲಿ ಅರುಹಿ, ತಮ್ಮ ಪುತ್ರನನ್ನು ಕೃಪೆಯಿಟ್ಟು ಸ್ವೀಕರಿಸಿ ಆತನನ್ನು ಉದ್ಧರಿಸಬೇಕೆಂದು ಅರಿಕೆ ಮಾಡಿಕೊಳ್ಳುವರು.

ಆಗ ಮುರುಘೇಂದ್ರ ಯತಿಗಳು ತಮ್ಮ ದೂರದೃಷ್ಟಿಯಿಂದ ಚೆನ್ನಬಸವನಲ್ಲಿದ್ದ ಅಲೌಕಿಕ ಆತ್ಮೋನ್ನತಿ ಮಾರ್ಗದ ಆದರ್ಶಗುಣಗಳು ಯುಕ್ತವಾಗಿರುವುದನ್ನು ಅರಿತುಕೊಳ್ಳುತ್ತಾರೆ. ದಂಪತಿಗಳಾದ ನೀಲಮ್ಮ-ದುಂಡಯ್ಯನವರಿಗೆ ' ನಿಮ್ಮ ಮಗ ಚೆನ್ನಬಸವನು ಅಪೂರ್ವವಾದ ಅಧ್ಯಾತ್ಮ ತೇಜಸ್ಸಿನಿಂದ ಬೆಳಗಿ ಲೋಕೋದ್ಧಾರಕ್ಕೆ ಕಾರಣವಾಗಿ ಮಹಾವಿಭೂತಿಪುರುಷನಾಗಿ ಬೆಳಗುತ್ತಾನೆ. ಇನ್ನು ಮುಂದೆ ಆತನ ಯೋಗ ಕ್ಷೇಮವೆಲ್ಲ ನಮ್ಮದು ' ಎಂದು ಅಪ್ಪಣೆ ಕೊಡಿಸುತ್ತಾರೆ.

ನೀಲಮ್ಮ-ದುಂಡಯ್ಯನವರ ಸಂತೋಷಕ್ಕೆ ಎಣೆಯಿಲ್ಲದಂತಾಯಿತು. ಚೆನ್ನಬಸವನನ್ನು ಶಿವಯೋಗಿ ಸನ್ನಿಧಿಗೆ ಸಮರ್ಪಿಸಿ ಗುರುಗಳ ಅಪ್ಪಣೆಯಂತೆ ಪ್ರಸಾದ ಸ್ವೀಕರಿಸಿ ಮೋಟಗಿಮಠದಿಂದ ನಿರ್ಗಮಿಸಿ ತಮ್ಮ ಗ್ರಾಮವಾದ ಇಂಗಳಗಾಂವಿಗೆ ಆಗಮಿಸಿದರು.

ಗುರುಕಾರುಣ್ಯ :

ಸದ್ಗುರುವಿನ ಕೃಪೆಯಾದರೆ ಯಾವುದು ತಾನೆ ಅಸಾಧ್ಯ ? ಅಣ್ಣ ಬಸವಣ್ಣನ ವಾಣಿಯಂತೆ ಕೊರಡು ಚಿಗಿಯುತ್ತದೆ. ಬರಡು ಹಯನವನ್ನು ನೀಡುತ್ತದೆ. ಆತನ ಒಲುಮೆಯಾದರೆ ವಿಷವು ಅಮೃತವಾಗುತ್ತದೆ. ಸಕಲ ಪಡಿ ಪದಾರ್ಥಗಳೂ ತುಂಬಿಸೂಸುತ್ತವೆ.

ಅಂತೆಯೇ ಚೆನ್ನಬಸವನು ಮೋಟಗಿಮಠದ ಪೂಜ್ಯ ಮುರುಘೇಂದ್ರ ಯೋಗಿಗಳ ಅಂತರಂಗವನ್ನರಿತು ಅವರ ನೆರಳಿನಂತೆ ಸೇವೆಗೈಯುತ್ತ ಆ ಪೂಜ್ಯರ ಕೃಪಾಶೀರ್ವಾದವನ್ನು ಹೊಂದುವಲ್ಲಿ ಬಹುಬೇಗ ಸಫಲನಾಗುತ್ತಾನೆ.

ನಿತ್ಯದಲ್ಲಿ ಬೆಳಿಗ್ಗೆ ಬೇಗನೆದ್ದು ಗುರುಸೇವೆಗೆ ತೊಡಗಿದನೆಂದರೆ ಆತನಿಗೆ ದಣಿವೆಂಬುದೇ ಇಲ್ಲ. ಗುರುಸೇವೆ ಆತನ ಸರ್ವಸ್ವ.

ಸದ್ಗುರು ಮುರುಘೇಂದ್ರ ಶಿವಯೋಗಿಗಳು ಚೆನ್ನಬಸವನ ಅಪಾರ ಗುರುನಿಷ್ಠೆಗೆ ಬೆರಗಾಗಿಹೋದರು. ಒಂದು ದಿನ ಗುರುಗಳ ಆಜ್ಞೆಯಿಲ್ಲದೆ ಕೇವಲ ಶಿವನಾಮ ಸ್ಮರಣೆಯಲ್ಲಿಯೇ ತಲ್ಲೀನನಾಗಿದ್ದುದನ್ನು ಕಂಡು ಕೂಡಲೇ ಆತನಿಗೆ ಪ್ರಸಾದ ಸ್ವೀಕರಿಸಲು ತಿಳಿಸುತ್ತಾರೆ. ಚೆನ್ನಬಸವನ ನಿಶ್ಚಲ, ನಿರ್ವಿಕಾರ, ಲಿಂಗವಿಹಾರ, ಮನೋನಿಗ್ರಹ ಗುಣಗಳಿಗೆ ಮೆಚ್ಚಿ ಮುರುಘೇಂದ್ರ ಯತಿಗಳು ಅಂತಃಕರಣದ ಗಂಗೆಯನ್ನೇ ಶಿಷ್ಯನ ಮೇಲೆ ಹರಿಬಿಡುತ್ತಾರೆ.

ಚೆನ್ನಬಸವನು ತನ್ನ ಶಿವಾನುಭವದ ಉತ್ಕೃಷ್ಟ ಪಥದಿಂದ ಸ್ವಲ್ಪವೂ ವಿಚಲಿತನಾಗದೆ ಮುಂದುವರೆಯುತ್ತಾನೆ. ಆತನಿಗೆ ಮುರುಘೇಂದ್ರ ಯೋಗಿಗಳು ಸಕಲಶಾಸ್ತ್ರ, ಶಿವಾನುಭವ ಸಿದ್ಧಾಂತ ಸೂತ್ರಗಳನ್ನು ಯಥೇಚ್ಛವಾಗಿ ಅರಹುತ್ತಾರೆ. ಲಿಂಗಪೂಜಾ ಮಹತ್ವ, ಅಷ್ಟಾವರಣ, ಷಟಸ್ಥಲದ ನೆಲೆ-ಕಲೆಗಳನ್ನು ಬೋಧಿಸುತ್ತಾರೆ.

ಚೆನ್ನಬಸವನು ಗುರುಗಳ ಬೋಧೆಯನ್ನು ಮನನಗೊಳಿಸುತ್ತ ಅವರ ಸೇವೆ ತನಗೊದಗಿದ ಭಾಗ್ಯವೆಂದೇ ಬಗೆಯುತ್ತಾನೆ. ಸದಾ ಪರಿಚಾರಕರಂತೆ ಅವರ ಬಳಿಯಿರುತ್ತ ಅವರ ಮನೋರತವನ್ನರಿತು ಸೇವೆಗೆ ಸಿದ್ಧನಾಗಿರುತ್ತಾನೆ. ಮುರುಘೇಂದ್ರ ಯತಿಗಳ ಹಾಗೂ ಚೆನ್ನಬಸವನ ಸಂಬಂಧವು ಜ್ಞಾನ ಮತ್ತು ಕ್ರಿಯೆಗಳ ಅಪೂರ್ವಸಂಗಮ. ಅವರ ನಡೆ-ನುಡಿ ನಮಗೆ ಎಂದೆಂದೂ ಆದರ್ಶ, ಅನುಪಮ.

ಚರ ಜಂಗಮ :

ಶ್ರೀ ಚೆನ್ನಬಸವ ಶ್ರೀಗಳು ವೀರಶೈವ ತತ್ತ್ವದ ಅತ್ಯಂತ ಮಹತ್ತರವಾದ ಸಿದ್ಧಾಂತದಂತೆ ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಎಂದು ದೇಶಪರ್ಯಟನವನ್ನು ಕೈಕೊಳ್ಳುತ್ತಾರೆ. ಮಾನವ ಜೀವನದ ಆದರ್ಶಗಳನ್ನು ಹೊತ್ತು ಸಂಚರಿಸುವ ಇಂಥ ಜಂಗಮ ಮೂರ್ತಿಗಳ ಸಂಚಾರವು ಸಾಕ್ಷಾತ್ ಶಿವಸಂಚಾರವೇ ಸರಿ.

ಆತ್ಮನ ನೈಜ ಸ್ವರೂಪವನ್ನರಿತು ವಿಶ್ವವ್ಯಾಪಕವೂ ಪ್ರಪಂಚ ಪೂರಕವೂ ಆದ ಪರಶಿವತತ್ವವನ್ನರಿತವನೇ ಚರಜಂಗಮನಾಗಿದ್ದು, ಅವನೇ ಶಿವಯೋಗಿ ಎನಿಸುತ್ತಾನೆ. ಆತ ತನ್ನ ಒಳಿತನ್ನೂ ಕೆಡಕನ್ನೂ ಎಂದೂ ವಿಚಾರಿಸಲಾರ. ಕೇವಲ ಪರರ ಸುಖಕ್ಕಾಗಿ ಅಂಥ ಯೋಗಿಗಳ ಜೀವನ ಮುಡಿಪಾಗಿರುತ್ತದೆ. ಅಂಥ ಯೋಗಿವರೇಣ್ಯರಾಗಿದ್ದರು ನಮ್ಮ ಶ್ರೀ ಚನ್ನಬಸವ ಶಿವಯೋಗಿಗಳು. ಅವರ ಪಾದಧೂಳಿಯಿಂದ ಈ ಲೋಕದ ನೆಲ ಪವಿತ್ರವಾಗುತ್ತದೆ. ಅವರು ಮೆಟ್ಟಿದ ಧರೆ ಕಾಶಿ. ಮುಟ್ಟಿದ ಜಲ ಪವಿತ್ರ ಗಂಗೆ.

ಚೆನ್ನಬಸವ ಶಿವಯೋಗಿಗಳು ತಮ್ಮ ಸಂಚಾರದಲ್ಲಿ ಅನೇಕ ಊರುಗಳನ್ನು ಸಂದರ್ಶಿಸುತ್ತಾರೆ. ಅವರು ಹೋದಲ್ಲೆಲ್ಲ ಅತ್ಯಂತ ಆದರದ ಸ್ವಾಗತ, ಸುಮಂಗಲೆಯರಿಂದ ಆರತಿ ಬೆಳಗುತ್ತ ಪಾದಪೂಜೆ.

ಚೆನ್ನಬಸವ ಶಿವಯೋಗಿಗಳು ತಾವು ಹೋದಲ್ಲಿಯೇ ಲಿಂಗಪೂಜೆ, ಭಕ್ತಜನರಿಗೆ ತತ್ವೋಪದೇಶಗಳನ್ನು ಅರುಹುತ್ತ ಪ್ರಸಾದಕ್ಕಾಗಿ ಕೇವಲ ಒಂದೆರಡು ಮನೆಗಳನ್ನು ಮಾತ್ರ ಆಯ್ದುಕೊಳ್ಳುತ್ತಿದ್ದರು. ತಮ್ಮ ಉಳಿದ ಸಮಯವನ್ನೆಲ್ಲ ಧರ್ಮೋಪದೇಶಕ್ಕಾಗಿ ಮೀಸಲಿಡುತ್ತಿದ್ದರು. ಶಿವಯೋಗಿಯು ನಮ್ಮ ಬಾಧೆಗಳನ್ನೆಲ್ಲ ನಾಶಪಡಿಸುವ ಪ್ರತ್ಯಕ್ಷ ದೇವದೂತ. ಆತನ ದರ್ಶನ ಸಂಭಾಷಣೆಯಿಂದ ನಮ್ಮ ಬಾಳೆಲ್ಲ ಪುನೀತ.

ಚೆನ್ನಬಸವ ಶಿವಯೋಗಿಗಳು ಹೋದಲ್ಲೆಲ್ಲ ಅನೇಕ ಭಕ್ತರು ತಮ್ಮ ಅಳಲುಗಳನ್ನು ಅರಹುವರು. ತಮ್ಮ ವ್ಯಾಕುಲಗಳನ್ನು ತೋಡಿಕೊಳ್ಳುವರು. ಅವರಿಗೆಲ್ಲ ಶಿವಯೋಗಿಗಳು ತಮ್ಮ ಶಿವಾನುಭವ ವಾಣಿಯಿಂದ ಸಂತುಷ್ಟ ಪಡಿಸಿದರು. ಅವರಲ್ಲಿ ಧರ್ಮ ಮಾರ್ಗದ ಮಹತಿಯನ್ನು ಪ್ರಚುರಪಡಿಸಿದರು.

ನಿಸರ್ಗಪ್ರಿಯ ಯೋಗಿ :

ಶ್ರೀ ಚೆನ್ನಬಸವ ಶಿವಯೋಗಿಗಳ ಸಂಚಾರ ಸಮಯದಲ್ಲಿ ಅನೇಕ ಅರಣ್ಯ ಪ್ರದೇಶಗಳು ಅವರಿಗೆ ಎದುರಾದವು. ಅಲ್ಲಿ ಅದೆಷ್ಟು ಪ್ರಾಣಿ ಪಕ್ಷಿಗಳೂ ಶ್ರೀಗಳ ಬಳಿಗೆ ಬಂದು ವಿನಯಪ್ರದರ್ಶಿಸಿ ಮರೆಯಾಗುತ್ತವೆ. ಹಿಂಸ್ರ ಪ್ರಾಣಿಗಳು ಕಂಡರೂ ಸಹ ಅವೂ ಕೂಡ ಶಿವಯೋಗಿಯ ಪಾದದ ಬಳಿಸುಳಿದು ಮಾಯವಾಗುತ್ತವೆ. ಯೋಗಿಯ ಜಗದ್ ಭರಿತ ದೃಷ್ಟಿಯ ಹಾಗೂ ಕಾರುಣ್ಯ ಸೃಷ್ಟಿಯ ಅರಿವನ್ನು ಮಾನವರೆಂತು ತಿಳಿಯಲು ಸಾಧ್ಯ ? ಯೋಗಿಯ ನಿಲುವನ್ನು ಯೋಗಿಯೇ ಅರಿಯಬಹುದಲ್ಲವೆ ?

ಹೀಗೆ ಚೆನ್ನಬಸವ ಶಿವಯೋಗಿಗಳ ಸಂಚಾರದಲ್ಲಿ ಗಿಡ, ಹೂಬಳ್ಳಿ, ಕೆರೆ, ಹಳ್ಳ, ಗುಡಿ, ಗಂವ್ಹರಗಳೂ ಅವರಿಗೆ ಮುದವನ್ನು ನೀಡುತ್ತವೆ. ಹಾಗೆಯೇ ಚೆನ್ನಬಸವ ಶಿವಯೋಗಿಗಳು ಉಳಿವೆ ಕ್ಷೇತ್ರದ ಸಂಚಾರವನ್ನು ಪೂರೈಸಿ, ಬಹುದಿನಗಳಾದುದರಿಂದ ಪೂಜ್ಯ ಗುರುಗಳ ದರ್ಶನಾಕಾಂಕ್ಷಿಗಳಾಗಿ ಅಥಣಿ ಮೋಟಗಿಮಠಕ್ಕೆ ಮರಳುತ್ತಾರೆ.

ಪಟ್ಟಾಭಿಷೇಕ :

ಶ್ರೀ ಚೆನ್ನಬಸವ ಸ್ವಾಮಿಗಳು ತಮ್ಮ ಯಾತ್ರೆಯಿಂದ ಅತ್ಯಂತ ಉಲ್ಲಸಿತರಾಗಿ ಶ್ರೀ ಮಠಕ್ಕೆ ಆಗಮಿಸಿದುದನ್ನು ಕಂಡು ಪೂಜ್ಯ ಮುರುಘೇಂದ್ರಯತಿಗಳು ಹರ್ಷಪುಳಕಿತರಾದರು. ಪೂಜ್ಯರು ತುಂಬ ವೃದ್ಧಾಪ್ಯವನ್ನು ಹೊಂದಿದವರಾಗಿದ್ದರಿಂದ ಚೆನ್ನಬಸವಸ್ವಾಮಿಗಳನ್ನು ಕುರಿತು ' ನನ್ನ ನೆಚ್ಚಿನ ಶಿಷ್ಯ ಯೋಗಿವರ್ಯನೇ ನೀನು .ಇನ್ನು ಮಠಬಿಟ್ಟು ಎಲ್ಲಿಯೂ ಹೋಗಕೂಡದು. ಈ ಮಠದ ಅಧಿಕಾರವನ್ನೆಲ್ಲ ನಿನ್ನ ಸ್ವಾಧೀನಪಡಿಸಿ, ಮಠದ ಪೀಠಾಧಿಕಾರವನ್ನು ನಿನಗೆ ವಹಿಸಿಕೊಡುತ್ತೇನೆ. ಈ ಮಠದ ಸಮಸ್ತ ಕಾರ್ಯಭಾರವೆಲ್ಲ ಇನ್ನು ಮೇಲೆ ನಿನ್ನದು. ನೀನು ಭಕ್ತಜನೋದ್ಧಾರದಲ್ಲಿ

ನಿರತನಾಗಿ ಕೀರ್ತಿವಂತನಾಗು ' ಎಂದು ಆಶೀರ್ವದಿಸುತ್ತಾರೆ. ಆಗ ಚೆನ್ನಬಸವ ಸ್ವಾಮಿಗಳು ' ಕೃಪಾಗುರುವೇ ತಮ್ಮ ಆದೇಶವನ್ನು ಚಾಚೂ ತಪ್ಪದೆ ಪಾಲಿಸುವೆ. ತಮ್ಮ ದಿವ್ಯ ಆಶೀರ್ವಾದವು ನಿರಂತರವೂ ನನ್ನ ಮೇಲಿರಲಿ ' ಎಂದು ತುಂಬ ವಿಧೇಯರಾಗಿ ಕೇಳಿಕೊಳ್ಳುತ್ತಾರೆ.

ಯತಿವರ್ಯ ಮುರುಘೇಂದ್ರ ಯೋಗಿಗಳು ಮೋಟಗಿಮಠದ ಸಕಲ ಸದ್ಭಕ್ತರ ಸಮ್ಮುಖದಲ್ಲಿ ಚೆನ್ನಬಸವ ಶ್ರೀಗಳಿಗೆ ಶಕೆ ೧೮೧೧ (ಸನ್ ೧೮೮೯) ರಲ್ಲಿ ಪೀಠಾಧಿಕಾರ ಸಮಾರಂಭವನ್ನು ತುಂಬ ಸಂಭ್ರಮದೊಂದಿಗೆ ನೆರವೇರಿಸುತ್ತಾರೆ. ಚೆನ್ನಬಸವ ಶ್ರೀಗಳಿಗೆ ಗುರು ಮುರುಘೇಂದ್ರ ಶಿವಯೋಗಿಗಳು ಸಕಲ ಮಂತ್ರೋಪದೇಶವನ್ನಿತ್ತು ಹರಸುತ್ತಾರೆ. ಚೆನ್ನಬಸವ ಸ್ವಾಮಿಗಳು ತಮ್ಮ ಗುರುಗಳಿಗೆ ಭಯಭಕ್ತಿಯಿಂದ ವಂದಿಸುತ್ತಾರೆ. ಶ್ರೀಮಠ ಹಾಗೂ ಭಕ್ತ ಜನತೆಯ ಅಭಿವೃದ್ಧಿ, ಧರ್ಮಜಾಗೃತಿಗಾಗಿ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಳ್ಳುತ್ತಾರೆ. ಭಕ್ತರು ಒಬ್ಬ ಮಹಾಯೋಗಿ ತಮಗೆ ದೊರೆತದ್ದಕ್ಕಾಗಿ ಆನಂದ ಪರವಶರಾಗುತ್ತಾರೆ.

ಚೆನ್ನಬಸವ ಶಿವಯೋಗಿಗಳ ಖ್ಯಾತಿ :

ಶ್ರೀ ಮೋಟಗಿಮಠಕ್ಕೆ ಪಟ್ಟಾಭಿಷಕ್ತರಾದನಂತರ ಶ್ರೀಗಳ ಖ್ಯಾತಿ ನಾಡಿನ ನಾಲ್ದೆಸೆಗೂ ಹರಡಿತು. ಶ್ರೀಗಳು ಶಿವಯೋಗ ಲೀಲಾಪರಶರಾಗಿದ್ದು ಮಠದಲ್ಲಿ ನಿರಂತರ ಜಂಗಮ ದಾಸೋಹ ನೆರವೇರುತ್ತಿತ್ತು. ಶ್ರೀಗಳ ಖ್ಯಾತಿಗೆ ಅನೇಕ ಕಡೆಗಳಿಂದ ಭಕ್ತರು ಬಂದು ಶ್ರೀಗಳ ದರ್ಶನ ಭಾಗ್ಯಪಡೆದು ಪಾವನರಾದರು. ಬಡವರು-ದೀನ-ದಲಿತರನ್ನು ಕಂಡರೆ ಶ್ರೀಗಳಿಗೆ ಅಪಾರ ಅನುಕಂಪ. ನಿತ್ಯವೂ ಅವರಿಗೆ ಮಠದಲ್ಲಿ ಪ್ರಸಾದ ವಿನಿಯೋಗ ನಡೆಯುತ್ತಿತ್ತು. ಅಥಣಿ ಗಚ್ಚಿನಮಠದ ಶ್ರೀ ಮುರುಘೇಂದ್ರ ಶಿವಯೋಗಿಗಳೂ ಮೋಟಗಿಮಠಕ್ಕೆ ದಯಮಾಡಿಸಿ ಚೆನ್ನಬಸವ ಶಿವಯೋಗಿಗಳೊಂದಿಗೆ ಕುಶಲ ಸಂಭಾಷಣೆ ನಡೆಸಿ ಅವರ ಲಿಂಗಯೋಗದ ಬಗ್ಗೆ ವಿಚಾರಿಸುತ್ತಿದ್ದುದು ಅವರ ದಿವ್ಯ ಭವ್ಯ ತ್ಯಾಗ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ.

ಬೀಳೂರಿನ ವೈರಾಗ್ಯ ಚಕ್ರವರ್ತಿ ಶ್ರೀ ಗುರುಬಸವ ಮಹಾಸ್ವಾಮಿಗಳು ಚೆನ್ನಬಸವ ಶಿವಯೋಗಿಗಳ ದರ್ಶನಕ್ಕೆ ಬರುತ್ತಿದ್ದರು. ಅದರಂತೆ ಬಂಥನಾಳದ ಸಂಗನಬಸವ ಶಿವಯೋಗಿಗಳೂ ನಮ್ಮ ನಾಡಿನಲ್ಲಿ ಅಭೂತಪೂರ್ವ ಕ್ರಾಂತಿಯನ್ನುಂಟು ಮಾಡಿದ್ದು ಗಮನಾರ್ಹ ಸಂಗತಿ.

ಶ್ರೀ ಚೆನ್ನಬಸವ ಶಿವಯೋಗಿಗಳು ತಮ್ಮ ಪರಮಸಾತ್ವಿಕ ಬದುಕಿನಿಂದ ಲಿಂಗಾಂಗ ಸಾಮರಸ್ಯದಲ್ಲಿ ಸುಖಾನಂದವನ್ನು ಅನುಭವಿಸುತ್ತಿದ್ದ ಮಹಾಯೋಗಿಗಳು. ಅವರು ಪ್ರಾಣಲಿಂಗ, ಭಾವಲಿಂಗ, ಆತ್ಮಲಿಂಗ ಈ ಮೂರನ್ನೂ ಒಂದಾಗಿಸಿದ ವೈರಾಗ್ಯ ಚಕ್ರವರ್ತಿಗಳು.

ಲಿಂಗೈಕ್ಯ :

ಚೆನ್ನಬಸವ ಶಿವಯೋಗಿಗಳು ಮೋಟಗಿಮಠದ ಪೀಠಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ತಮ್ಮ ಅಂತರಂಗದ ಪಾರಮಾರ್ಥ ಬದುಕಿನಲ್ಲಿ ತಲ್ಲೀನರಾಗಿರುತ್ತಿದ್ದರು. ಅವರು ಕಮಲ ಪುಷ್ಪದಂತೆ ನಿರ್ಲಿಪ್ತರು. 'ಇವನಾರವ ಇವನಾರವ ಎಂದೆನಿಸದೆ ಇವನನ್ನವ ಇವನನ್ನವ ಎಂದೆನಿಸಯ್ಯ' ಎಂದು ಸಮಸ್ತ ಮಾನವಕುಲವನ್ನೇ ತಮ್ಮ ಅಂತಃಕರಣದ ಬಾಹುಗಳಲ್ಲಿ ತುಂಬಿಕೊಂಡರು.

ಪೂಜ್ಯ ಚೆನ್ನಬಸವ ಶಿವಯೋಗಿಗಳು ದೈಹಿಕ ವೃದ್ಧಾಪ್ಯದಿಂದಾಗಿ ಶಕೆ ೧೮೪೭ (ಸನ್ ೧೯೨೫) ಪುಷ್ಯ ಶುಕ್ರವಾರ ೧೫ ಬೆಳಗಿನಜಾವ ಲಿಂಗಪೂಜೆಗೈಯುತ್ತಿರುವಾಗಲೇ ಲಿಂಗದಲ್ಲಿ ಲೀನವಾದರು. ಬೆಳಗಿನೊಂದಿಗೆ ಮಹಾಬೆಳಗು ತುಂಬಿಕೊಂಡಿತು.

ಚೆನ್ನಬಸವ ಶಿವಯೋಗಿಗಳ ಲಿಂಗೈಕ್ಯ ದಿನಾಚರಣೆ ಪ್ರತಿವರ್ಷ ಪುಷ್ಯ ಶುಕ್ರವಾರ ೧೫ ಬನದ ಹುಣ್ಣಿಮೆಯ ದಿನ ತುಂಬ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಪಂಡಿತವರೇಣ್ಯ ಗುರುಬಸವ ಮಹಾಸ್ವಾಮಿಗಳು ತಮ್ಮ ಗುರುಗಳ ಕುರಿತು ರಚಿಸಿದ 'ಚೆನ್ನಬಸವೇಶನ ಚಾರಿತ್ರ್ಯವು' ಧರ್ಮಾಭೀಪ್ಸೆಯುಳ್ಳವರಿಗೆ ಕಾಮಧೇನು ಎನಿಸಿದೆ. ಮುಮುಕ್ಷುಗಳ ಕೈಪಿಡಿ ಎನಿಸಿದೆ.

ಶ್ರೀ ಗುರುಬಸವ ಮಹಾಸ್ವಾಮಿಗಳು

● ಡಾ. ಸಂಗಮೇಶ ಬಿರಾದಾರ

ಅಥಣಿ ಒಂದು ಪುಣ್ಯಕ್ಷೇತ್ರ. ನಿರಾಭಾರಿ ಶ್ರೀ ಮುರುಘೇಂದ್ರಶಿವಯೋಗಿಗಳು ನಡೆದಾಡಿದ ಪವಿತ್ರಸ್ಥಾನ. ಅನೇಕ ಮಠ-ಮಾನ್ಯಗಳಿಗೆ ನೆಲೆವೀಡು. ಇವುಗಳಲ್ಲಿ ಮೋಟಗಿಮಠವೂ ಒಂದು.

ಮೋರಟಗಿ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕೊನೆಯ ಹಳ್ಳಿ. ಆಚೆಗೆ ಕಲಬುರ್ಗಿ ಜಿಲ್ಲೆ. ಅಲ್ಲಿಂದ ಬಂದು ನೆಲೆನಿಂತ ಒಬ್ಬ ಮಹಾತ್ಮನ ಹೆಸರಿನದೆ ಈ ಮಠ, ಮೋಟಗಿಮಠ. ಇದು ನಿರಂಜನಪೀಠ. ಶ್ರೀ ಮ.ನಿ.ಪ್ರ. ಗುರುಬಸವ ಮಹಾಸ್ವಾಮಿಗಳು ಈ ಪೀಠಪರಂಪರೆಯಲ್ಲಿ ಏಳನೆಯವರಾಗಿ ರಾರಾಜಿಸಿದವರು.

ಅಥಣಿ ಮತ್ತು ಜಮಖಂಡಿಗಳು ಕೃಷ್ಣವೇಣಿಯ ಎಡಬಲದಲ್ಲಿರುವ ಎರಡು ತಾಲೂಕುಗಳು. ಶ್ರೀ ಗುರುಬಸವ ಸ್ವಾಮಿಗಳು ಜನಿಸಿದ್ದು ಜಮಖಂಡಿ ತಾಲೂಕಿನ ಮೈಗೂರು ಗ್ರಾಮದಲ್ಲಿ; ಕ್ರಿ. ಶ. ೧೯೦೦ರಲ್ಲಿ. ಅದೊಂದು ರಮ್ಯಸ್ಥಳ. ಪೂರ್ವವಾಹಿನಿಯಾಗಿ ಹರಿಯುವ ಕೃಷ್ಣಾನದಿಯ ದಂಡೆಯಲ್ಲಿದೆ. ಸುತ್ತಲು ನದಿಯ ನೀರುಂಡು ಬೆಳೆದುನಿಂತ ಹಚ್ಚ ಹಸುರಿನ ವನಶ್ರೀ. ಕಣ್ಣಿಗೆ ರಮಣೀಯ. ಅದು ಯಾರನ್ನೂ ಉಲ್ಲಸಿತಗೊಳಿಸುತ್ತದೆ.

ಇಂತಹ ಪ್ರಕೃತಿಸೌಂದರ್ಯದಿಂದ ತುಂಬಿದ ಮೈಗೂರಿನಲ್ಲಿ ಸುಸಂಸ್ಕೃತವಾದ ಒಂದು ಜಂಗಮ ಮನೆತನ. ಚೆನ್ನವೀರಯ್ಯ ಆ ಮನೆಯ ಯಜಮಾನ. ಅವನ ಹೆಂಡತಿ ಸಾಧ್ವಿಶಿರೋಮಣಿ ಶ್ರೀಮತಿ ಗಂಗಾಂಬಿಕೆ. ಈ ದಂಪತಿಗಳಿಗೆ ತ್ರಿಮೂರ್ತಿಗಳಾಗಿ ಮೂರು ಜನ ಮಕ್ಕಳು, ಸಂಗಯ್ಯ, ಬಸಲಿಂಗಯ್ಯ ಮತ್ತು ಗುರುಬಸವಯ್ಯ. ಕೊನೆಯ ಗುರುಬಸವಯ್ಯನೇ ಈ ಮೋಟಗಿಮಠದ ಪೀಠಾಧಿಪತಿ ಶ್ರೀ ಮ.ನಿ.ಪ್ರ. ಗುರುಬಸವ ಮಹಾಸ್ವಾಮಿಗಳಾದವರು, ಮಠಕ್ಕೆ ಹೆಸರು ತಂದುಕೊಟ್ಟವರು.

'ಬೆಳೆಯ ಸಿರಿ ಮೊಳಕೆಯಲ್ಲಿ' ಎನ್ನುವಂತೆ ಮಹಾವೈರಾಗ್ಯಮೂರ್ತಿಯಾಗಿ ಪ್ರಜ್ವಲಿಸಲಿರುವ ಗುರುಬಸವಯ್ಯನಲ್ಲಿ ಆ ಕುರುಹುಗಳು ಬಾಲ್ಯದಲ್ಲಿಯೆ ಕಾಣುತ್ತಿದ್ದವು. ಚಿಕ್ಕಂದಿನಲ್ಲಿಯೆ ಹೆಣ್ಣು ಎಂದರೆ ಆಗಿಬರುತ್ತಿರಲಿಲ್ಲ. ಅವರಿಂದ

ದೂರವಿರುತ್ತಿದ್ದ. (ಈ ವಿಷಯ ಅವರೇ ನನ್ನ ಮುಂದೆ ಹೇಳಿದ್ದುಂಟು) ಅದೇ ಅವರು ನೈತಿಕ ಬ್ರಹ್ಮಚಾರಿಯಾಗಿ ಉಳಿಯುವಂತೆ ಮಾಡಿತು.

ಎಳೆತನದಿಂದಲೆ ಜ್ಞಾನಾರ್ಜನೆಯಲ್ಲಿ ಆಸಕ್ತಿ. ಯಾವುದನ್ನೂ ತಳಸೋಸಿ ನೋಡುವ ದೃಷ್ಟಿ. ಆಢ್ಯತೆಯ ಕಡೆಗೆ ಗಮನ ಕಡಿಮೆ. ಪದವಿ ಪಡೆಯಬೇಕೆಂಬ ಹಂಬಲವಿಲ್ಲ, ಜ್ಞಾನಾರ್ಜನೆಯೊಂದಾದರೆ ಸಾಕು. ಇದು ಅವರ ಮನೋಭಾವ. ಆ ದೃಷ್ಟಿಕೋನದಿಂದಲೇ ಅವರು ಅಧ್ಯಯನ ಮಾಡಿದ್ದು.

ಅವರ ಪ್ರಾಥಮಿಕ ವಿದ್ಯಾಭ್ಯಾಸ ಪ್ರಾರಂಭವಾದುದು ಮೈಗೂರಿನಲ್ಲಿಯೆ. ಆದರೆ ಒಂದು ಮಠದ ಸ್ವಾಮಿಯಾಗಬೇಕಾದುದರಿಂದ ಸಂಸ್ಕೃತದ ತಿಳುವಳಿಕೆಯಿರಬೇಕೆಂಬುದು ಅಂದಿನ (ಇಂದೂ ಕೂಡ) ಪರಿಪಾಠ. ಅಂತೆಯೇ ಆ ಕಾಲದಲ್ಲಿ ಉತ್ತಮ ಶಿಕ್ಷಣಕ್ಕೆ ಹೆಸರುಪಡೆದ ಬಾಗಲಕೋಟೆಯ ಶ್ರೀ ಮಲ್ಲಣಾರ್ಯರ ಗುರುಕುಲದಲ್ಲಿ ಕ್ರಿ. ಶ. ೧೯೧೬ ರಿಂದ ೨೦ ರ ವರೆಗೆ ನಾಲ್ಕುವರ್ಷ ಸಂಸ್ಕೃತಭಾಷೆಯ ಪೂರ್ವಭಾವಿಯಾದ ಅಭ್ಯಾಸ ನಡೆಯಿತು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮರಿದೇವರನ್ನು ಕ್ರಿ. ಶ. ೧೯೨೦ರಲ್ಲಿ ಕಾಶಿಯ ಜಂಗಮವಾಡಿ ಮಠಕ್ಕೆ ಕಳಿಸಲಾಯಿತು. ಅಲ್ಲಿ ಅವರು ನ್ಯಾಯಾಚಾರ್ಯ ಶ್ರೀ ಶಿವದತ್ತ ಪಂಡಿತರಲ್ಲಿ ೧೨ವರ್ಷಗಳವರೆಗೆ ಅಧ್ಯಯನ ಮಾಡಿದರು. ಶ್ರೀ ಬಸವರಾಜ ಶಾಸ್ತ್ರಿಗಳು ಇಟಗಿ, ಶ್ರೀ ಶಂಕರಶಾಸ್ತ್ರಿಗಳು ಶಾಂತಗಿರಿ, ಪಂ. ನಾಗಭೂಷಣ ಶಾಸ್ತ್ರಿಗಳು ಧಾರವಾಡ ಇವರು ಗುರುಬಸವಸ್ವಾಮಿಗಳ ಸಹಪಾಠಿಗಳಾಗಿದ್ದರು. ಅಂಗಿನ ಅವರ ದಿವ್ಯ ತೇಜಸ್ಸನ್ನು ಪಂ. ನಾಗಭೂಷಣ ಶಾಸ್ತ್ರಿಗಳು, ' ಕಣ್ಣಲ್ಲಿ ಕಾಂತಿ, ಮನದಲ್ಲಿ ಶಾಂತಿ, ನುಡಿಯಲ್ಲಿ ಸೌಶೀಲ್ಯ, ನಡೆಯಲ್ಲಿ ನಿಶ್ಚಲ, ಭಾವದಲ್ಲಿ ದಿಗಂಬರ, ಬ್ರಹ್ಮಚರ್ಯದ ಪೂರ್ಣಚಂದಿರ ', ಹೀಗೆ ಮುಕ್ತಕಂಠದಿಂದ ಹೊಗಳಿದ್ದಾರೆ. ' ವಿಶ್ವವಿಶಾಲ ತಾರುಣ್ಯದ ಮಮತೆಯ ಮಂದಾರ ಚೇತನ ನಗುಮೊಗದಲ್ಲಿ ಪ್ರಥಮಬಾರಿ ಇಷ್ಟೆಲ್ಲವನ್ನು ಒಬ್ಬ ಸಾಧಕನಲ್ಲಿ ಕಂಡಿದ್ದು ಗುರುಬಸವದೇವರಲ್ಲಿ ಮಾತ್ರ ಎಂದು ಉದ್ಗರಿಸಿದ್ದಾರೆ.

ಇವರ ಚುರುಕುಮತಿಯನ್ನು ಶ್ರೀ ಶಿವದತ್ತ ಗುರುಗಳು ಕಂಡುಕೊಂಡರು. ಪರೀಕ್ಷೆಗೆ ಕುಳಿತುಕೊಳ್ಳಲು ಹೇಳಿದರು. ಗೆಳೆಯರೂ ದುಂಬಾಲು ಬಿದ್ದರು. ಆದರೆ ಗುರುಬಸವದೇವರು ಒಪ್ಪಲಿಲ್ಲ. ' ನಾನು ಇಲ್ಲಿ ಬಂದುದು ಅಧ್ಯಯನಕ್ಕಾಗಿ ಪರೀಕ್ಷೆಯಲ್ಲಿ ಉತ್ತೀರ್ಣನಾಗುವದಕ್ಕಲ್ಲ. ನನ್ನನ್ನು ಒತ್ತಾಯಿಸದಿರಿ '. ಇದು ಅವರ ಸ್ಪಷ್ಟ ನುಡಿ. ' ವಿದ್ಯೆಗಾಗಿ ಜೀವನ, ಜೀವನಕ್ಕಾಗಿ ವಿದ್ಯೆಯಲ್ಲ ' ಇದು ಅವರ ನಿಲುವು.

ಅವರ ಜ್ಞಾನ ವ್ಯರ್ಥವಾಗಲಿಲ್ಲ. ಅನೇಕರು ಅವರಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ವ್ಯಾಸಂಗಮಾಡಿದರು. ಅಂಥವರಲ್ಲಿ ನಾನೂ ಒಬ್ಬ. ಅವರು ಅನೇಕ ಗ್ರಂಥಗಳನ್ನು ಬರೆದರು. ಶಿವಸುಪ್ರಭಾತ, ಸ್ತೋತ್ರಮಾಲೆ, ಅಂಧಸಿದ್ಧಾಂಜನ, ಶ್ರೀ ಚನ್ನಬಸವೇಶ್ವರ ಚಾರಿತ್ರ್ಯ ಇವೆಲ್ಲ ಪ್ರಕಟಿತ ಕೃತಿಗಳು. ಪಾಖಂಡ ಕೃತಿಖಂಡನ ವೀರಶೈವ ಮತಮಂಡನ, ಪಾರ್ವತಿ ಪರಿಣಯ, ಸುಂದರನಂಬಿಯ ಚಂಪೂ ಇವೇ ಮೊದಲಾದ ಹಲವು ಗ್ರಂಥಗಳು ಪ್ರಕಟಗೊಳ್ಳಬೇಕಾಗಿವೆ.

ತಮಗಾಗಿ, ಮಠಕ್ಕಾಗಿ ಎಂದೂ ಯಾರಿಗೂ ಕೈಚಾಚಿದವರಲ್ಲ. ಬೇಡಿದವರಲ್ಲ. ದೇವರು ಕರುಣಿಸಿದರಲ್ಲಿಯೇ ತೃಪ್ತಿಪಡೆಯುವದು ಅವರ ಮನೋಧರ್ಮ. ಅಥಣಿಯಿಂದ ಪಶ್ಚಿಮಕ್ಕೆ ಶಿನಾಳ ಎಂಬುದು ಒಂದು ಚಿಕ್ಕ ಗ್ರಾಮ. ಅಲ್ಲಿ ಮಠದ ಒಂದು ಹೊಲ. ಅದು ಅಘಹರಿಣಿಗೆ ಹೊಂದಿಕೊಂಡಿದೆ. ಅಲ್ಲಿ ಒಂದಿಷ್ಟು ಪೇರಲಗಿಡಗಳಿವೆ. ಗೋದಿ, ಜೋಳ ಬೆಳೆಯುವ ಉತ್ತಮ ಎರೆಭೂಮಿ. ಸುಧಾರಣೆ ಮಾಡಿದರೆ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಬಹುದು. ಆದರೆ ಗುರುಗಳು ಅದನ್ನು ಒಪ್ಪಲಿಲ್ಲ. ಒಮ್ಮೆ ಆ ವಿಚಾರವನ್ನು ಅವರ ಮುಂದೆ ಮಂಡಿಸಿದಾಗ. 'ಅದೆಲ್ಲ ಏಕೆ ? ನಾನು ಇರುವವ ಒಬ್ಬ. ಇದು ನಿರಂಜನಪೀಠ, ರಂಜನೀಯತೆಗೆ ಅವಕಾಶವೆಲ್ಲಿ ? ಘಟದಿಂದ ಮಠಬೆಳಗಬೇಕಲ್ಲದೆ. ಮಠದಿಂದ ಘಟವಲ್ಲ. ನನಗೆ ಆಡಂಬರ ಬೇಕಿಲ್ಲ. ಪ್ರಚಾರ ಪ್ರಿಯತೆ ನನಗಿಲ್ಲ. ಇದ್ದುದರಲ್ಲಿ ತೃಪ್ತರಾಗಿರುವದೇ ಶರಣಧರ್ಮ. ಅದನ್ನನುಸರಿಸಿಯೇ ನಡೆಯಬೇಕು' ಎಂದು ಹೇಳಿ ತಮ್ಮ ನಿಲುವನ್ನು ವ್ಯಕ್ತಪಡಿಸಿದರು. ನಡೆವಳಿಕೆಯ ಮಾರ್ಗಸೂಚಿಸಿದರು.

ಇದು ಕೇವಲ ಅವರ ಹೇಳಿಕೆಯು ಮಾತಾಗಿರಲಿಲ್ಲ. ಅದರಂತೆ ಅವರ ಆಚರಣೆಯೂ ಇದ್ದಿತು. ಹೊಲದಿಂದ ಬಂದ ಉತ್ಪನ್ನದಲ್ಲಿಯೇ ಅವರ ಜೀವನ ನಿರ್ವಹಣೆ. ಮಿತವಾದ ಖರ್ಚು, ಮಠದಲ್ಲಿ ವಿದ್ಯುತ್ತನ್ನು ಅಳವಡಿಸಿದ್ದರೂ ಅದರ ವೆಚ್ಚ ಭರಿಸುವದು ಕಷ್ಟಕರವೆಂದು ತೆಗೆದು ಹಾಕಿದ್ದರು. ಕಂದೀಲು, ಚಿಮಣಿಗಳೆ ಬೆಳಕಿನ ಸಾಮಗ್ರಿಗಳು. ನಾವು ಓದುವದಕ್ಕೂ ಅವುಗಳದೇ ಉಪಯೋಗ. ಸಾಯಂಕಾಲವಾಯಿತೆಂದರೆ ಕಂದೀಲಿನ ಪಾವು (ಗ್ಲಾಸು) ಒರೆಸುವುದು. ಅವುಗಳಿಗೆ ಎಣ್ಣೆಹಾಕುವುದು ನಮ್ಮಂತಹ ವಿದ್ಯಾರ್ಥಿಗಳ ಕೆಲಸ. ಅದು ನಮಗೆಂದು ಬೇಸರವನ್ನುಂಟು ಮಾಡಲಿಲ್ಲ.

ಗುರುಗಳದು ಪರಿಶುದ್ಧ ಹೃದಯ. ಎಲ್ಲರೂ ತಮ್ಮಂತೆಯೇ ಇರಬೇಕೆಂಬುದು ಅವರ ಆಶಯ. ನಡೆ-ನುಡಿಯಲ್ಲಿ ಎಲ್ಲಿಯೆ ತಪ್ಪು ಕಾಣಿಸಿದರೆ ಅವರು ಅದನ್ನೆಂದೂ ಸಹಿಸರು. ಕೂಡಲೆ ನೇರಪ್ರತಿಭಟಿಸುವರು. 'ಅಂಧಸಿದ್ಧಾಂಜನ'ವು ಪಂ. ಪುಟ್ಟರಾಜ ಗವಾಯಿಗಳು ರಚಿಸಿದ 'ಲಿಂಗಸೂಕ್ತ'ಕ್ಕೆ ಪಾಖಂಡ ಕೃತಿಖಂಡನ 'ವೀರಶೈವಮತಮಂಡನ'ವು ಶ್ರೀ ಪಂಢರಿನಾಥಾಚಾರ್ಯ ಗಲಗಲಿಯವರು ವಿರಚಿಸಿದ 'ಶಂಭುಲಿಂಗ ವಿಜಯ ಚಂಪೂ' ಮಹಾಕಾವ್ಯಕ್ಕೂ ಬರೆದ ಪ್ರತಿಕ್ರಿಯಾರೂಪ ಉತ್ತರಗಳಾಗಿವೆ. ಈ ಗ್ರಂಥಗಳಲ್ಲಿ ಶ್ರೀಗಳ ಪಾಂಡಿತ್ಯದಂತೆಯೆ ಧರ್ಮದ ಬಗೆಗಿರುವ ಕಳಕಳಿಯು ಎದ್ದು ಕಾಣುತ್ತದೆ; ಮಾಹೇಶ್ವರಸ್ಥಲಿಯಾಗಿ ವ್ಯಕ್ತವಾಗುತ್ತದೆ.

ಕ್ರಿ. ಶ. ೧೯೪೮ ನೆಯ ಇಸ್ವಿ. ಗುರುಗಳಿಗೆ ೪೮ ವರ್ಷ. ನಿರಂಜನ ಪೀಠಾರೋಹಣ-ಶೂನ್ಯಸಿಂಹಾಸನಾರೋಹಣಕ್ಕೆ ತಕ್ಕ ಸಮಯ. ಶಿಷ್ಯವರ್ಗವೆಲ್ಲ ಸೇರಿ ಈ ಉತ್ಸವವನ್ನು ಒಳ್ಳೆ ಉತ್ಸಾಹಪೂರ್ವಕ ನೆರವೇರಿಸಿದರು. ಇಲ್ಲಿಯೂ ಹೆಚ್ಚಿನ ಆಡಂಬರಕ್ಕೆ ಆಸ್ಪದವಿರಲಿಲ್ಲ. ಸಾಮಾನ್ಯ, ಸರಳ ರೀತಿಯಲ್ಲಿ ಪೂರೈಸಿತು.

ಶ್ರೀಗಳಿಗೆ ಲಿಂಗಪೂಜೆ, ಲಿಂಗಾನುಷ್ಠಾನಗಳಲ್ಲಿ ವಿಶೇಷ ಆಸಕ್ತಿ. ಬೆಳಗಿನ ಜಾವ ಬ್ರಾಹ್ಮೀಮುಹೂರ್ತದಲ್ಲಿ ಪೂಜೆ ಅಖಂಡವಾಗಿ ೫ ಗಂಟೆಯಿಂದ ೭ ಗಂಟೆಯವರೆಗೆ. ೪ ಗಂಟೆಗೆ ನಾವು ಏಳಬೇಕು. ಸೇವೆಯಲ್ಲಿದ್ದವರೆಲ್ಲರದೂ ಇದೇ ಪರಿಪಾಠ. ಸೇವೆಮಾಡುವಲ್ಲಿ ನಮಗೆಂದೂ ಬೇಸರವಿರಲಿಲ್ಲ.

ಅನುಷ್ಠಾನ ಪೂಜ್ಯರಿಗೆ ಪ್ರಿಯವಾದ ವಿಷಯ. ತಮಗೆ ಎಲ್ಲಿ ಅನುಷ್ಠಾನ ಮಾಡಬೇಕೆಂಬುದನ್ನು ಸೂಚಿಸುತ್ತಿದ್ದರು. ಕೂಡಲೆ ಅಲ್ಲಿ ಸಿದ್ಧತೆಯಾಗುತ್ತಿತ್ತು. ನಾಲ್ಕೆಂಟು ಜನ ಅದಕ್ಕಾಗಿ ಸಿದ್ಧ. ಮಠದಲ್ಲಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಗದ್ದುಗೆಯ ಕೆಳಗಿರುವ ಗವಿಯಲ್ಲಿ ಅನುಷ್ಠಾನ ಮಾಡಿದ್ದು ಹೆಚ್ಚು. ಒಮ್ಮೆ ಪಶ್ಚಿಮದಿಕ್ಕಿನ ಪತ್ರಿಗಿಡಗಳ ಕೆಳಗೆ ಮಾಡಿದರು. ಇನ್ನೊಮ್ಮೆ ಶಿನಾಳದ ಪೇರುಬನದಲ್ಲಿ ನೆರವೇರಿಸಿದರು. ಸಾಕಷ್ಟು ಸಾರೆ ಗುಡ್ಡಾಪುರದ ದಾನಮ್ಮತಾಯಿಯ ಪವಿತ್ರಸ್ಥಾನವಾದ ಸಂಗತೀರ್ಥದಲ್ಲಿಯೂ ಗುಹೇಶ್ವರಕ್ಷೇತ್ರವಾದ ಕಂಕಣವಾಡಿಯಲ್ಲಿಯೂ ಅನುಷ್ಠಾನಗೈದಿದ್ದಾರೆ.

ಗುರುಗಳು ' ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ ' ಸಣ್ಣ ತಪ್ಪಿಗೂ ಕೋಪಾವಿಷ್ಟರಾದದ್ದುಂಟು. ಅವರಿಂದ ನಮ್ಮಂಥ ವಿದ್ಯಾರ್ಥಿಗಳು ಬಡಿತ ತಿಂದುದು ಹಲವು ಸಾರೆ. ಆದರೆ ಭೋರ್ಗರೆವ ಮಳೆಯಾಗಿ ಭೂಮಿಯಲ್ಲಿ ತೆಪ್ಪನೆ ತೊಯ್ದು ಶಾಂತವಾಗುವಂತೆ ಮರುಕ್ಷಣವೆ ಶಾಂತ.

ಒಂದು ಪ್ರಸಂಗ :

ನನ್ನ ಆರೋಗ್ಯ ಸರಿಯಾಗಿರಲಿಲ್ಲ. ಅದನ್ನು ನಾನು ಗುರುಗಳ ಹತ್ತಿರ ಹೇಳಿಕೊಂಡಿರಲಿಲ್ಲ. ಕಾಗದದಲ್ಲಿ ಸಕ್ಕರೆಯನ್ನು ತೆಗೆಯುವಂತೆ ಹೇಳಿದರು. ತೆಗೆದೆ. ಆದರೆ, ಆ ಕಾಗದ ಸ್ವಲ್ಪ ಧೂಳಾಗಿದ್ದಿತು. ಅದನ್ನು ಜಾಡಿಸಬೇಕಾಗಿತ್ತು. ಅನಾರೋಗ್ಯದಿಂದ ಮಾನಸಿಕ ಮಾಡಿದೆ. ಅದನ್ನು ನೋಡಿದರು. ಕೈಯಲ್ಲಿಯ ಕೋಲು ಹಲವು ಸಾರೆ ನನ್ನ ಬೆನ್ನನ್ನಪ್ಪಿತು. ಪಿಟ್ಟೆನ್ನಲಿಲ್ಲ. ಮೊದಲೆ ಅನಾರೋಗ್ಯ. ಅದರಲ್ಲಿ ಈ ಏಟು. ಹೋಗಿ ನನ್ನ ಕೋಣೆಯಲ್ಲಿ ಮಲಗಿಕೊಂಡೆ. ನಂತರ ಗುರುಗಳಿಗೆ ನನ್ನ ಆರೋಗ್ಯ ಕೆಟ್ಟುದರ ಬಗ್ಗೆ ಗೆಳೆಯರಿಂದ ತಿಳಿಯಿತು. ಕೂಡಲೆ ಕೋಣೆಗೆ ಬಂದರು. ನನಗೆ ಮತ್ತೆ ಎಲ್ಲಿಲ್ಲದ ಭಯ. ತಡವರಿಸಿ ಎದ್ದೆ. ಮಲಗಲು ಹೇಳಿದರು. ತಮಗೆ ಅನಾರೋಗ್ಯದ ವಿಷಯ ಗೊತ್ತಾಗದೆ ಇರುವದರಿಂದ ಹೀಗಾಯಿತೆಂದು ವಿಷಾದಿಸಿ, ಮೈದಡವಿ ಸಂತೈಸಿದರು. ಇದು ಅವರ ಮಾತೃಹೃದಯದ ಪ್ರೀತಿ. ನಿಜವಾಗಿಯೂ ನನಗೆ ಅಂದು ಹಾಗೆನಿಸಿತು. ನಾನು ಆಗ ಮನೆಯಲ್ಲಿ ಯಾರಿಗೂ ಹೇಳದೆ ಮನೆಬಿಟ್ಟು ಬಂದಿದ್ದೆ. ಈ ವಿಷಯ ತಿಳಿದ ಮೇಲೆ ನಮ್ಮ ಅಣ್ಣನನ್ನು ಕರೆಸಿಕೊಂಡು ಮನೆಗೆ ಕಳುಹಿಸಿದರು.

ಇನ್ನೊಂದು ಪ್ರಸಂಗ :

ಎಳ್ಳಮಾವಾಸ್ಯೆಯ ಕಾಲ. ಕಟಗುಡುವ ಚಳಿ. ಶಿನಾಳದ ಹೊಲದಲ್ಲಿ ಅನುಷ್ಠಾನಗೈಯುತ್ತಿದ್ದರು. ಅಘಹರಿಣಿ ಹಳ್ಳದಿಂದ ತಂಪು ಊಟೇರುತ್ತಿತ್ತು. ಕೈ

ಕಾಲುಗಳಿಗೆ ಸೇಡು ಹಿಡಿಯುತ್ತಿತ್ತು. ಆದರೂ ನಸುಕಿನಲ್ಲಿ ಅಘಹರಿಣಿಯಲ್ಲಿ ಮುಳುಗುಹಾಕುತ್ತಿದ್ದೆ. ಪೂಜೆಗಾಗಿ ನೀರು ತರುತ್ತಿದ್ದೆ. ಹದಿವಯದ ಕಾಪು ಅದನ್ನು ಸಹಿಸಿಕೊಂಡಿತ್ತು. ಒಂದು ವಾರ ಗತಿಸಿರಬೇಕು. ಗುರುಗಳಿಗೆ ಏನೆನಿಸಿತೊ ಏನೋ ' ಗೌಡಾ, (ನನ್ನನ್ನು ಗುರುಗಳು ಕರೆಯುತ್ತಿದ್ದುದು ಹಾಗೆಯೆ). ನೀನು ಮುಂಜಾನೆ ಸ್ನಾನಮಾಡುವುದು ಬೇಡ. ಸ್ವಚ್ಛವಾಗಿ ಕೈಕಾಲುಮುಖ ತೊಳೆದುಕೊಂಡು ನೀರು ತಂದು ಪೂಜೆಗೆ ಅಣಿಗೊಳಿಸಿದರೆ ಸಾಕು. ಮಧ್ಯಾಹ್ನದ ಬಿಸಿಲಲ್ಲಿ ಸ್ನಾನಮಾಡಿದರಾಗುತ್ತದೆ' ಎಂದು ನನಗೆ ಹೇಳಿದರು. ಇದು ಅವರ ಕುಸುಮ ಕೋಮಲ ಹೃದಯದ ಒಂದು ನಿದರ್ಶನ. ಪೂಜ್ಯರದು ಕೇವಲ ಶಾಸ್ತ್ರಕ್ಕಾಗಿ ಆಚರಣೆಯಲ್ಲ; ಕಾಯಕ್ಷೇಮತೆಗಾಗಿ ಆಚರಣೆ. ಪ್ರಸಂಗಾನುಸಾರ ವಿಧಿ-ನಿಷೇಧಗಳಿಗೆ ಶೈಥಿಲ್ಯ.

ಗುರುಗಳಿಗೆ ಚಿತ್ರಕಲೆಯಲ್ಲಿ ಆಸಕ್ತಿ. ಅದರಲ್ಲಿಯೂ ಬಣ್ಣದ ಕೆಲಸ ಅವರಿಗೆ ಪ್ರಿಯವಾದುದು. ಯಾರಿಂದಲೂ ಹೇಳಿಸಿಕೊಳ್ಳದಿದ್ದರೂ ಸಹಜವಾಗಿಯೆ ಆ ಕಲೆ ಅವರಿಗೆ ಕರಗತವಾಗಿತ್ತು. ಅವರ ಈ ಕಲೆ ಅನೇಕ ಹಿರಿಯ ಕಲಾವಿದರ ಮೆಚ್ಚುಗೆ ಪಡೆದಿತ್ತು. ಅದನ್ನು ಬೆಳೆಸಿಕೊಂಡಿದ್ದರೆ ಅವರೊಬ್ಬ ಶ್ರೇಷ್ಠ ಚಿತ್ರಕಲಾಕಾರರಾಗಬಹುದಿತ್ತು. ಆದರೆ ಮಠದ ಅಧಿಪತಿಗಳಾದವರಿಗೆ ಈ ಹವ್ಯಾಸ ತಕ್ಕುದಲ್ಲವೆಂಬ ಸ್ವಾಮಿಗಳ ಮತ್ತು ಪ್ರಮುಖರ ಅಭಿಪ್ರಾಯ. ಇದರಿಂದ ತಾವು ಇದಕ್ಕೆ ನೀರೆರೆಚಬೇಕಾಯಿತೆಂದು ಗುರುಗಳು ಅನೇಕಸಾರೆ ನಮ್ಮ ಮುಂದೆ ನೊಂದು ನುಡಿದುದುಂಟು. ಅವರ ಕಲೆಗೆ ಸಾಕ್ಷಿಯಾಗಿ ಶ್ರೀಲಕ್ಷ್ಮೀದೇವಿ ಮತ್ತು ಧರ್ಮಗುರು ಶ್ರೀ ಬಸವೇಶ್ವರ ಈ ವರ್ಣಚಿತ್ರಗಳು ಪಳಿಯುಳಿಕೆಗಳಾಗಿ ಇಂದೂ ಮಠದಲ್ಲಿವೆ.

ಸಾಹಿತ್ಯ, ಚಿತ್ರಕಲೆಗಳಂತೆ ಸಂಗೀತವೂ ಅವರ ಮೈಗೂಡಿ ಬಂದ ಕಲೆ. ಅವರದು ಮಧುರಕಂಠ. ಲಯಾನುವರ್ತಿಯಾಗಿ ತಂಬೂರಿಯೊಂದಿಗೆ ಹಾಡುವರು, ಅದೂ ತಮ್ಮ ಆತ್ಮತೃಪ್ತಿಗಾಗಿ. ರಾತ್ರಿ ಪ್ರಶಾಂತವಾದ ವೇಳೆಯಲ್ಲಿ ಹಾಡುತ್ತ ಕುಳಿತರೆ ಅದರಲ್ಲಿ ತನ್ಮಯರಾಗುತ್ತಿದ್ದರು. ನಾವೂ ಅದರಲ್ಲಿ ಮುಳುಗುತ್ತಿದ್ದೆವು. ಪಂ. ಮಲ್ಲಿಕಾರ್ಜುನ ಮನ್ಸೂರರಂತಹ ಹೆಸರಾಂತ ಗವಾಯಿಗಳನ್ನು ಕರೆಯಿಸಿ ವರ್ಷದಲ್ಲಿ ಆಗಾಗ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಿದ್ದರು. ಜಲತರಂಗವನ್ನು ನಾನು ನೋಡಿದ್ದು, ಕೇಳಿದ್ದು ಇಲ್ಲಿಯೇ ಮೊದಲಸಾರೆ.

೮೫ವಸಂತಗಳ ಸಾರ್ಥಕವಾದ ತುಂಬುಜೀವನ ನಡೆಸಿ ಕ್ರಿ. ಶ. ೧೯೮೫ರ ಫಾಲ್ಗುಣ ವದ್ಯ ಚೌತಿ ಶನಿವಾರ ಪ್ರಾತಃಕಾಲದಲ್ಲಿ ಗುರುಬಸವಸ್ವಾಮಿಗಳು ಲಿಂಗದಲ್ಲಿ ಲೀನರಾದರು.

ಶ್ರೀ ಬಸವಲಿಂಗ ಶಾಸ್ತ್ರಿಗಳು

● **ಸುಭಾಷ ಮೋಟಗಿ**

ಒಂದು ಕಾಲದಲ್ಲಿ ವಾಣಿಜ್ಯ ಕ್ಷೇತ್ರದಲ್ಲಿ ಹೆಸರು ಪಡೆದ ಅಥಣಿಯು ಶೈಕ್ಷಣಿಕ, ಸಾಹಿತ್ಯಿಕ, ಆಧ್ಯಾತ್ಮಿಕ ರಂಗದಲ್ಲೂ ತನ್ನ ಹಿರಿಮೆಯನ್ನು ಉಳಿಸಿಕೊಂಡು ಬಂದಿರುವದು ಗಮನಾರ್ಹವಾಗಿದೆ. ಇಲ್ಲಿಯ ಅನೇಕ ಪ್ರಮುಖ ಮಠಗಳು ಇಂದಿಗೂ ಧರ್ಮ ಪ್ರಸಾರಕಾರ್ಯದಲ್ಲಿ ನಿರಂತರ ತೊಡಗಿ ಸಾಮಾಜಿಕ ಜಾಗೃತಿಗಾಗಿ ಶ್ರಮಿಸುತ್ತಿರುವದನ್ನು ನಾವು ಕಾಣುತ್ತೇವೆ.

ಸ್ವಾಮಿ ವಿವೇಕಾನಂದರು ಹೇಳುವಂತೆ ಅರಣ್ಯದಲ್ಲಿ ಅರಳಿದ ಪುಷ್ಪವು ಯಾರೂ ಅರಿಯದಂತೆ ತನ್ನ ಸುಗಂಧವನ್ನು ಸುತ್ತಲೂ ಪಸರಿಸಿ ಮರೆಯಾಗುವಂತೆ, ಅಥಣಿಯ ಮೋಟಗಿ ಮಠದ ಶ್ರೀ ಬಸವಲಿಂಗ ಶಾಸ್ತ್ರಿಗಳು ತಮ್ಮ ಅಪೂರ್ವ ಸಾಹಿತ್ಯ ಸೇವೆಯಿಂದ ಕನ್ನಡ ಲೋಕಕ್ಕೆ ಆರು ಅಮೂಲ್ಯವಾದ ಕೃತಿಗಳನ್ನು ನೀಡಿ ಕನ್ನಡ ಸಾಹಿತ್ಯ ಶಾರದೆಯ ಮುಡಿ ಅಲಂಕರಿಸಿದ್ದು, ಅತ್ಯಂತ ಶ್ಲಾಘನೀಯವೂ ಸ್ಮರಣೀಯವೂ ಆದ ಸಂಗತಿಯಾಗಿದೆ.

ಅಂದಿನ ಜಮಖಂಡಿ ಸಂಸ್ಥಾನಕ್ಕೆ ಸೇರಿದ ಮೈಗೂರು ಗ್ರಾಮದಲ್ಲಿ ೨-೯-೧೮೯೭ ರಂದು ಶ್ರೀ ಬಸವಲಿಂಗ ಶಾಸ್ತ್ರಿಗಳು (ತಂದೆ ಚನ್ನವೀರಯ್ಯ, ತಾಯಿ ಗಂಗಮ್ಮ) ಜನಿಸಿದರು. ಜಮಖಂಡಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದರು. ವಚನ ಶಾಸ್ತ್ರವನ್ನು ಆಳವಾಗಿ ಅಧ್ಯಯನ ಗೈದರು. ವೇದಶಾಸ್ತ್ರಗಳನ್ನೂ ಅಭ್ಯಸಿಸಿದರು. ಇವರ ಪಾಂಡಿತ್ಯಕ್ಕಾಗಿ ಇವರಿಗೆ ಸಿದ್ಧಾಂತ ಎಂಬ ಬಿರುದು ಪ್ರಾಪ್ತವಾಗಿತ್ತು.

ಗುರು ಕರುಣೆ :

ಅಥಣಿಯ ಅತ್ಯಂತ ಶ್ರೇಷ್ಠ ಮಠವೆನಿಸಿದ ಶ್ರೀ ಮೋಟಗಿ ಮಠದ ಹಿರಿಯ ಪೀಠಾಧಿಕಾರಿಗಳಾದ ಪೂಜ್ಯ ಮುರುಘೇಂದ್ರ ಶಿವಯೋಗಿಗಳು ಶಿವಯೋಗಲೀಲಾ ಸಂಪನ್ನರು. ತ್ರಿಕಾಲ ಲಿಂಗಪೂಜಾ ನಿಷ್ಠರು. ಭಕ್ತ ಜನತೆಯ ಇಷ್ಟಾರ್ಥಗಳು ಪೂರೈಸುವ ಕಲ್ಪವೃಕ್ಷ ಕಾಮಧೇನುವಿನಂತಿದ್ದರು. ಆ ಪೂಜ್ಯರು ಬಸವಲಿಂಗ ಶಾಸ್ತ್ರಿಗಳ ಅಜ್ಜಂದಿರಾಗಿದ್ದರು.

ಪೂಜ್ಯ ಮುರುಘೇಂದ್ರ ಶಿವಯೋಗಿಗಳು ಬಾಲಕ ಬಸವಲಿಂಗ ಶಾಸ್ತ್ರಿಗಳನ್ನು ಕರುಣೆಯಿಂದ ಕರೆದು ' ನೀನು ಸಂಸಾರಸ್ಥನಾಗದೇ ವಿರಕ್ತನಾಗಿ ಸಮಾಜೋದ್ಧಾರಕನಾಗಿ

ನಿನ್ನ ಸೇವೆಯನ್ನು ಮುಡುಪಾಗಿರಿಸು ' ಎಂದು ಆಶೀರ್ವದಿಸಿದರು. ಆದರೆ ಬಾಲಕ ಬಸವಲಿಂಗ ಶಾಸ್ತ್ರಿಗಳು ಬೆಳೆವ ಸಿರಿಯನ್ನು ಮೊಳಕೆಯಲ್ಲಿ ಕಾಣು ಎಂಬಂತೆ ನಿರಂತರ ಅಧ್ಯಯನ ಅಭ್ಯಾಸಗಳಿಂದ ಸಾಹಿತ್ಯರಚನೆಗಾಗಿ ತಮ್ಮನ್ನು ನಾಡಿಗೆ ಸಮರ್ಪಿಸಿಕೊಂಡರು.

ಸಾಹಿತ್ಯ ಕೃಷಿ :

ಶ್ರೀ ಬಸವಲಿಂಗ ಶಾಸ್ತ್ರಿಗಳ ಅಪಾರವಾದ ಸಾಹಿತ್ಯಾಸಕ್ತಿಯಿಂದಾಗಿ ಅವರಲ್ಲಿಯ ಸುಪ್ತ ಪ್ರತಿಭೆ ಪ್ರಕಟಗೊಳ್ಳತೊಡಗಿತು. ಶಾಸ್ತ್ರಿಗಳು ಶಿವಯೋಗಿಗಳ ಬೋಧಾಮೃತ ಭಾಗ - ೧, ಭಾಗ - ೨. ತತ್ವಪದಗಳು. ಸತಿಪತಿಗಳ ಸದ್ಧರ್ಮ, ಮಹಾತ್ಮರ ಸ್ಥಳಗಳು. ಶರಣ ತತ್ವ ಚಿಂತನ-ಹೀಗೆ ಒಂದರ ಮೇಲೊಂದು ಆರು ಮೌಲಿಕ ಗ್ರಂಥಗಳನ್ನು ರಚಿಸಿದರು.

ಶಿವಯೋಗಿಗಳ ಬೋಧಾಮೃತ ಕೃತಿಯಲ್ಲಿ ಅಥಣಿ ಗಚ್ಚಿನಮಠದ ಮುರುಘೇಂದ್ರ ಮಹಾಶಿವಯೋಗಿಗಳ ಲಿಂಗಾಂಗ ಸಾಮರಸ್ಯ ಯೋಗದ ಅಪೂರ್ವ ಚಿತ್ರಣವಿದೆ. ' ಇವನಾರವ ಎಂದೆನಿಸದೆ ಇವ ನಮ್ಮವ ಇವ ನಮ್ಮವ ' ಎಂದೆನಿಸಯ್ಯ ಎಂಬ ಬಸವಣ್ಣನವರ ವಾಣಿಯಂತೆ ಸಕಲರಿಗೂ ಲೇಸನೆರೆಯಬೇಕು. ಬೇಡೆಂಬ ಭವಬೀಜಗಳನ್ನು ಹುರಿದು, ಮಹಾ ಜಂಗಮ ಜ್ಯೋತಿಯಾಗಿ ಮೆರೆದು ಬಾಳಿದ ತ್ಯಾಗ ಮೂರ್ತಿ ಮುರುಘೇಂದ್ರ ಶಿವಯೋಗಿಗಳ ಚಿತ್ರವನ್ನು ರಸವತ್ತಾಗಿ ನಾಡಿಗೆ ನೀಡಿದ ಶ್ರೀ ಬಸವಲಿಂಗ ಶಾಸ್ತ್ರಿಗಳ ಜೀವನ ಅತ್ಯಂತ ಪವಿತ್ರವಾದುದು. ಪುಣ್ಯಮಯವಾದುದು.

ತತ್ವ ಪದಗಳು ಇಂದಿನ ಸಂಕೀರ್ಣವಾದ ಬದುಕಿಗೆ ಅಧ್ಯಾತ್ಮದ ತಿರುಳನ್ನು ಸಾರುವ ಮೌಲಿಕ ಕೃತಿ.

' ಮಹಾತ್ಮರ ಸ್ಥಳಗಳು ' ಮಹಾಪುರುಷರ ಪಾವನ ಸ್ಥಳಗಳನ್ನು ಪರಿಚಯಿಸುವದರೊಂದಿಗೆ ನಮ್ಮ ಬದುಕಿನ ದಾರಿಗೆ ಮುಕ್ತಿಯ ಮಾರ್ಗವನ್ನು ತೋರುವ ಕೃತಿ; ಅದರಿಂದ ಬೆಳೆಯಲು ಸಹಾಯಕ ನಮ್ಮಲ್ಲಿ ಸನ್ಮತಿ.

' ಸತಿಪತಿಗಳ ಸದ್ಧರ್ಮ ' ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂಬ ಶರಣರ ಉಕ್ತಿಯನ್ನು ಸತ್ಯಗೊಳಿಸುವ ತತ್ವವನ್ನು ಮನಮುಟ್ಟುವಂತೆ ಚಿತ್ರಿಸುವ ಸುಂದರ ಗ್ರಂಥ. ಶುದ್ಧ ಸಾತ್ವಿಕ. ನೈತಿಕ ಪೂರ್ಣವಾದ ಸಮಾಜನಿರ್ಮಾಣವಾಗಬೇಕೆಂಬ ಶಾಸ್ತ್ರಿಗಳ ಕಳಕಳಿ ಈ ಕೃತಿಯಲ್ಲಿ ಹಾಸುಹೊಕ್ಕಾಗಿರುವವನ್ನು ನಾವು ಕಾಣುತ್ತೇವೆ.

ಸತತ ಪರಿಶ್ರಮಿಗಳಾದ ಶ್ರೀ ಶಾಸ್ತ್ರಿಗಳು ಮೃದು ಹೃದಯದ ಕರುಣಾಮೂರ್ತಿಗಳಾಗಿದ್ದರು. ತಮ್ಮ ವಿದ್ವತ್ಪೂರ್ಣ ಕೃತಿ ರಚನೆಯಿಂದ ಕನ್ನಡಿಗರ ಕೃತಜ್ಞತೆಗೆ ಪಾತ್ರರಾದರು.

ವಿವಾಹ :

ಸಂಸಾರದಲ್ಲಿದ್ದೂ ಅಲೌಕಿಕವಾದ ಪಾರಮಾರ್ಥವನ್ನು ಸಾಧಿಸಬಹುದು. ಇದು ಶರಣ ಸಿದ್ಧಾಂತವೂ ಅಹುದು. ' ಜಾಣನು ಲೌಕಿಕ ಪಾರಮಾರ್ಥವೆರಡನು ಮಾಣದೆ

ನಡೆಸುತಿಹನು' ಎಂಬ ನಿಜಗುಣ ಶಿವಯೋಗಿಗಳ ವಾಣಿ ಸದಾ ನಮ್ಮನ್ನು ಜಾಗೃತಗೊಳಿಸುವ ಸನ್ಮಾರ್ಗಕ್ಕೆ ಪಥವಲ್ಲವೆ ?

ಅಂತೆಯೇ ಶ್ರೀ ಬಸವಲಿಂಗ ಶಾಸ್ತ್ರಿಗಳು ತಮ್ಮ ೨೫ ನೇ ವಯಸ್ಸಿನಲ್ಲಿ ಅಥಣಿಯ ಪ್ರತಿಷ್ಠಿತ ಸಾಲಿಮಠ ಮನೆತನದ ಬಸವಲಿಂಗಮ್ಮ ಅವರನ್ನು ವಿವಾಹವಾದರು. ಸಾಧ್ವಿ, ಶರಣೆ ಬಸವಲಿಂಗಮ್ಮನವರು ಪತಿಗೆ ತಕ್ಕ ಸತಿಯಾಗಿ ಬಾಳಿದರು. ಶಾಸ್ತ್ರಿಗಳ ಗ್ರಂಥರಚನಾ ಕಾರ್ಯ, ಸಾಹಿತ್ಯ ಸೇವೆಗಳಿಗೆ ಬೆನ್ನುಲುಬಾಗಿ ನಿಂತರು.

ಶ್ರೀ ಬಸವಲಿಂಗ ಶಾಸ್ತ್ರಿಗಳು ತಾವೇ ಸ್ವತಃ ಗ್ರಂಥ ಪ್ರಕಾಶನ ಕೈಕೊಂಡು ತಮ್ಮ ಎಲ್ಲ ಗ್ರಂಥಗಳನ್ನು ತಮ್ಮ ಪ್ರಕಾಶನದಡಿಯಲ್ಲಿಯೇ ಪ್ರಕಟಿಸಿದರು. ಅಷ್ಟೇ ಅಲ್ಲ ಸಾಹಿತ್ಯವು ಜನಮಾನಸವನ್ನು ತಿದ್ದಿ ಅರಳಿಸುವ ಅತ್ಯಂತ ಶ್ರೇಷ್ಠವಾದ ಮಾಧ್ಯಮ ಎಂಬುದನ್ನರಿತ ಶಾಸ್ತ್ರಿಗಳು ತಮ್ಮ ಗ್ರಂಥಗಳನ್ನು ತಾವೇ ಸ್ವತಃ ನಾಡಿನ ತುಂಬ ಮಾರಾಟ ಮಾಡುವ ಸಾಹಸಗೈದು ಅದಕ್ಕಾಗಿ ನಾಡಿನಲ್ಲೆಲ್ಲ ಸಂಚಾರ ಕೈಕೊಂಡರು.

ಕರ್ನಾಟಕದ ಅನೇಕ ನಗರಗಳಲ್ಲಿ ಸಂಚರಿಸಿದ ಶಾಸ್ತ್ರಿಗಳು ಶಿವಶರಣೆ ದಾನಮ್ಮ ದೇವಿಯ ಪವಿತ್ರ ಜನ್ಮಸ್ಥಳವಾದ ಉಮರಾಣಿಯಲ್ಲೂ ವಾಸಿಸುತ್ತಿದ್ದರು. ಪುಸ್ತಕಗಳನ್ನು ಮಾರಾಟ ಮಾಡಿ ಬಂದ ನಂತರ ಅಥಣಿಯಲ್ಲಿ ಸ್ವಲ್ಪ ದಿನವಿದ್ದು ಮತ್ತೆ ಸಂಚಾರ ಕೈಕೊಳ್ಳುತ್ತಿದ್ದರು. ಇಲ್ಲಿ ಜಂಗಮ ಚಲನಶೀಲತೆಯ ಸೂಕ್ಷ್ಮ ತತ್ವವನ್ನು ನಾವು ಚೆನ್ನಾಗಿ ಮನಗಾಣಬಹುದು. ಶಾಸ್ತ್ರಿಗಳ ಪರಿಶ್ರಮ ಹಾಗೂ ಸಾಹಸ ನಿಜಕ್ಕೂ ಅಗಾಧವೆನ್ನಬಹುದು.

ಏಕಮೇವ ಪುತ್ರಿ ಶಿವಗಂಗಮ್ಮ :

ಶ್ರೀ ಬಸವಲಿಂಗ ಶಾಸ್ತ್ರಿಗಳಿಗೆ ಐದು ಜನ ಗಂಡು ಮಕ್ಕಳಿದ್ದರೂ ಅವರೆಲ್ಲ ಅಕಾಲ ಶಿವಾಧೀನರಾದರು. ಇದರಿಂದ ಶಾಸ್ತ್ರಿಗಳು ಅಷ್ಟೇನೂ ವ್ಯಥಿತರಾಗಲಿಲ್ಲ. ಶರಣ ಜೀವನವನ್ನು ಸಂಪೂರ್ಣ ಬಾಳಿದ ಶಾಸ್ತ್ರಿಗಳಲ್ಲಿ ಸಂಯಮ, ಧೈರ್ಯ, ಶಾಂತಿಯಂತಹ ಗುಣಗಳು ಸಹಜವಾಗಿಯೇ ಅವರಲ್ಲಿ ನೆಲೆಗೊಂಡಿದ್ದವು.

ಶಿವಗಂಗಮ್ಮನವರು ಮೈಗೂರಿನಲ್ಲಿ ೧-೧-೭೫ರಂದು ಗಂಡು ಮಗುವಿಗೆ ಜನ್ಮವಿತ್ತರು. ಅವರೇ ಇಂದು ಮೋಟಗಿಮಠದ ಉತ್ತರಾಧಿಕಾರಿಯಾಗಿ ನಾಡಿನಾದ್ಯಂತ ಖ್ಯಾತರಾದ ಶ್ರೀ ಚನ್ನಬಸವದೇವರು ಅವರು.

ಶ್ರೀ ಮೋಟಗಿಮಠಕ್ಕೂ ಸಾಹಿತ್ಯಕ್ಕೂ ಎಂದೆಂದೂ ಬಿಡಿಸಲಾಗದ ನಂಟು. ಶ್ರೀಮಠದ ಹಿಂದಿನ ಪೀಠಾಧಿಕಾರಿಗಳಾದ ಪೂಜ್ಯ ಶ್ರೀ ಗುರುಬಸವಮಹಾಸ್ವಾಮಿಗಳು ತಮ್ಮ ಅಪಾರ ಪಾಂಡಿತ್ಯ ಹಾಗೂ ಶಿವಯೋಗಪ್ರಭೆಯಿಂದ ಸದ್ಭಕ್ತರ ಮನೋಮಂದಿರದಲ್ಲಿ ಶಾಶ್ವತವಾಗಿ ರಾರಾಜಿಸುತ್ತಿರುವದುಂಟು.

ಪೂಜ್ಯ ಗುರುಬಸವ ಮಹಾಸ್ವಾಮಿಗಳು ಕಾಶಿಯಲ್ಲಿ ಹನ್ನೆರಡು ವರ್ಷಗಳ ಕಾಲ ಸಂಸ್ಕೃತ ಅಧ್ಯಯನಗೈದು, ಸಂಸ್ಕೃತ, ಕನ್ನಡ, ಹಿಂದಿ ಮೂರು ಭಾಷೆಗಳಲ್ಲಿ ಅಪಾರ ಪ್ರಭುತ್ವ ಪಡೆದವರು. 'ಪಾರ್ವತಿ ಪರಿಣಯ' ಎಂಬ ಚಂಪೂ ಕಾವ್ಯವನ್ನು ರಚಿಸಿ, ವಿದ್ವತ್ ಲೋಕದಲ್ಲಿ ವಂದ್ಯರಾಗಿರುವರು. 'ಚನ್ನಬಸವೇಶ್ವರ ಚಾರಿತ್ರ್ಯ' ಎಂಬ ತಮ್ಮ

ಪೂಜ್ಯ ಗುರುಗಳ ಕುರಿತಾಗಿ ರಚಿಸಿಲಾದ ಕೃತಿ ಪೂಜ್ಯರ ಜೀವನ ಚಿತ್ರವನ್ನು ಅರಹುದರೊಂದಿಗೆ ವೀರಶೈವ ಸಿದ್ಧಾಂತ-ಸುಧಾರಸವನ್ನೇ ನಮಗೆ ಪಾನ ಮಾಡಿಸುತ್ತದೆ.

ಪೂಜ್ಯ ಗುರುಬಸವ ಮಹಾಸ್ವಾಮಿಗಳು ಪಂ. ಪುಟ್ಟರಾಜ ಗವಾಯಿಗಳಿಂದ ವೀರಶೈವ ಧರ್ಮಕ್ಕೆ ಚ್ಯುತಿಬರುವಂತಹ ಗ್ರಂಥಪ್ರಕಟವಾದಾಗ ಕೂಡಲೇ ' ಅಂಧ ಸಿದ್ಧಾಂಜನ ' ಎಂಬ ಗ್ರಂಥವನ್ನು ರಚಿಸಿ ಅದನ್ನು ಖಂಡಿಸಿದರು. ಪಂ. ಪಂಡರಿನಾಥಾಚಾರ್ಯ ಗಲಗಲಿ ಅವರು ಧರ್ಮಕ್ಕೆ ಅವಮಾನವಾಗುವಂತಹ ಗ್ರಂಥ ಬರೆದಾಗ ಅದನ್ನೂ ಉಗ್ರವಾಗಿ ಖಂಡಿಸಿದರು. ವೀರಶೈವ ಧರ್ಮದ ನೈಜ ಸಿದ್ಧಾಂತವನ್ನು ನಾಡಿನಲ್ಲಿ ಮಂಡಿಸಿದರು. ಗುರುಬಸವ ಮಹಾಸ್ವಾಮಿಗಳು ಧರ್ಮಕ್ಕೆ ಯಾರಿಂದಲೇ ಚ್ಯುತಿ ಬಂದರೂ ಕೆರಳಿ ಕೆಂಡವಾಗುತ್ತಿದ್ದರು. ಪೂಜ್ಯರು ಸಂಗೀತ ಪ್ರಿಯರೂ ಆಗಿದ್ದರಲ್ಲದೆ ಸ್ವತಃ ಶ್ರೇಷ್ಠ ಚಿತ್ರ ಕಲಾವಿದರೂ ಆಗಿದ್ದರು. ಅಶ್ವಾರೂಢ ಬಸವಣ್ಣ, ಲಕ್ಷ್ಮೀ, ಸರಸ್ವತಿ ಮೊದಲಾದ ಚಿತ್ರಗಳನ್ನು ಶ್ರೀ ಗುರುಬಸವ ಶ್ರೀಗಳು ರಚಿಸಿದ್ದು ಅವರ ಅಪ್ರತಿಮ ಕಲಾ ಪ್ರತಿಭೆಯನ್ನು ನಾವು ಗುರುತಿಸಬಹುದು.

ತ್ರಿಕಾಲ ಲಿಂಗ ಪೂಜಾಲೋಲರಾದ ಪೂಜ್ಯ ಗುರುಬಸವ ಶ್ರೀಗಳು ತಮಗೆ ಒಪ್ಪುವಂತಹ ಶ್ರೀ ಚನ್ನಬಸವದೇವರನ್ನು ಶ್ರೀ ಮೋಟಗಿಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿ ನಮಗೆ ನೀಡಿದ್ದು ನಾಡಿನ ಭಾಗ್ಯವೇ ಸರಿ.

ಶರಣ ತತ್ವ ಚಿಂತನ :

ಮೋಟಗಿಮಠದ ಪೂಜ್ಯ ಗುರುಬಸವ ಶ್ರೀಗಳ ಸಹೋದರಾದ ಶ್ರೀ ಬಸವಲಿಂಗ ಶಾಸ್ತ್ರಿಗಳು ಮಹಾತ್ಮರ ಚರಿತ್ರೆ ಬರೆದು ಕೀರ್ತಿಕಾಯರಾದರು. ತೀರ್ಥಯಾತ್ರೆಗಳ ಕುರಿತು ಬರೆದು ಭಕ್ತರ ಪ್ರೀತಿ ವಿಶ್ವಾಸಗಳನ್ನು ಹೊಂದಿ ತೀರ್ಥ ಸುಧೆಯನ್ನು ನೀಡಿದರು.

ಶ್ರೀ ಶಾಸ್ತ್ರಿಗಳು ಬರೆದ ಅಮೂಲ್ಯ ಕೃತಿ ' ಶರಣ ತತ್ವಚಿಂತನ '. ಆ ಕೃತಿಯನ್ನು ಅಥಣಿಯ ಪ್ರೆಸ್ಸಿನ ಒಡೆಯರೊಬ್ಬರಿಗೆ ಪ್ರಕಟಣೆಗಾಗಿ ನೀಡಿದ್ದರು. ಅದರ ಪ್ರಕಟಣೆಯ ವೆಚ್ಚದ ಎಲ್ಲ ಹಣವನ್ನು ಆ ಪ್ರೆಸ್ಸಿನ ಮಾಲೀಕ ಶ್ರೀ ಶಾಸ್ತ್ರಿಗಳಿಂದ ಪಡೆದಿದ್ದ. ಆದರೆ ಆ ಮುದ್ರಣಾಲಯದ ಮಾಲಿಕ ಆ ಗ್ರಂಥವನ್ನೇ ಮುದ್ರಿಸಲಿಲ್ಲ. ಹಣವನ್ನು ಮರಳಿಸಲಿಲ್ಲ. ಶಾಸ್ತ್ರಿಗಳಿಂದ ಒಯ್ದಿದ್ದ ಕೈ ಬರಹದ ಆ ಗ್ರಂಥವನ್ನೂ ಅವರಿಗೆ ತಲುಪಿಸಲಿಲ್ಲ.

ಇದರಿಂದ ಬಸವಲಿಂಗಶಾಸ್ತ್ರಿಗಳು ತಾವು ಕೊಟ್ಟ ಹಣಕ್ಕಾಗಿ ಅವರೇನೂ ವ್ಯಥೆ ಪಡಲಿಲ್ಲ. ಆದರೆ ಶಿವಶರಣರ ಕುರಿತು ಬರೆದ ಆ ಅಮೂಲ್ಯ ಕೃತಿ ಕಳೆದು ಹೋದುದಕ್ಕಾಗಿ ತುಂಬ ನೊಂದುಕೊಂಡರು. ಶರಣರ ತತ್ವ ಪ್ರಸಾರಕ್ಕಾಗಿ ತಮ್ಮ ಬಾಳನ್ನೇ ಮುಡಿಪಾಗಿರಿಸಿದ ಶಾಸ್ತ್ರಿಗಳು ' ಶರಣ ತತ್ವಚಿಂತನ ' ಚಿಂತೆಯಿಂದ ಕೊರಗಿ ಹೋದರು. ಅದೇ ಶರಣರ ಚಿಂತೆಯಿಂದ ಬಸವಲಿಂಗ ಶಾಸ್ತ್ರಿಗಳು ೧೬-೪-೧೯೭೫ರಲ್ಲಿ ಲಿಂಗೈಕ್ಯರಾದರು.

ಶ್ರೀ ಬಸವಲಿಂಗಶಾಸ್ತ್ರಿಗಳ ವಿಯೋಗದಿಂದ ಶರಣರ ಜೀವನದ ಮಹಾಚೇತನವೊಂದು ನಮ್ಮಿಂದ ಮರೆಯಾಯಿತು.

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಗಚ್ಚಿನಮಠದ ಶ್ರೀ ಮುರುಘೇಂದ್ರ ಶಿವಯೋಗಿಗಳು

• ಬ. ಗಿ. ಯಲ್ಲಟ್ಟಿ

ಭಾರತದಲ್ಲಿ ಮತ್ತು ವಿಶೇಷವಾಗಿ ಕನ್ನಡ ನಾಡಿನಲ್ಲಿ ಶರಣರೂ, ಸಂತರೂ, ಅನುಭಾವಿಗಳೂ ಆಗಿಹೋಗಿದ್ದಾರೆ. ಅವರು ಬಿತ್ತಿ ಬೆಳೆದು ಹೋದ ಉದಾತ್ತ ಸಂಸ್ಕೃತಿ, ಉನ್ನತ ಆಚಾರ-ವಿಚಾರಗಳಿಂದ ಪ್ರಸಿದ್ಧವಾಗಿದೆ. ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಮಹಾದೇವಿಯಕ್ಕನಂತಹ ಶರಣ ಶರಣೆಯರು ಬೆಳಗಿ ಹೋದ ನಾಡು ಇದಾಗಿದೆ. ನಿಜಗುಣರೂ ಸರ್ಪಭೂಷಣರೂ, ಷರೀಫ ಸಾಹೇಬರೂ ಇಲ್ಲಿ ನೆಲಸಿ ಪಾವನಗೊಳಿಸಿದ ನಾಡಿನಲ್ಲಿ ಹುಟ್ಟಿದ ನಾವು ಪುಣ್ಯವಂತರು. 'ಮಾನವ ಜನ್ಮ ದೊಡ್ಡದು, ಇದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ಹಾಡಿದ ಪುರಂದರದಾಸರಂಥ ಅನುಭಾವಿಗಳೂ ಈ ನಾಡಿನವರೇ !

ಇಪ್ಪತ್ತನೇ ಶತಮಾನದಲ್ಲಿ ಬೆಳಗಿ, ಬೆಳಕು ನೀಡಿದ ಅಥಣಿಯ ಮುರುಘೇಂದ್ರ ಶಿವಯೋಗಿಗಳ ಚರಿತ್ರೆಯನ್ನು ಅವಲೋಕಿಸಿದರೆ ಶರಣ ಸಂಸ್ಕೃತಿ ಮಹತ್ವ ನಮಗೆ ಅರಿವಾಗುತ್ತದೆ.

ಇವರದು ಭಾಗೋಜಿ ಮನೆತನ. ಇವರು ಐದು ಮಂದಿ ಅಣ್ಣ-ತಮ್ಮಂದಿರು. ಶಿವರುದ್ರಯ್ಯ, ಸಂಗನಬಸಯ್ಯ, ಗುರುಲಿಂಗಯ್ಯ, ದುಂಡಯ್ಯ, ಶಿವಲಿಂಗಯ್ಯ. ಒಬ್ಬರು ಮಾತ್ರ ಹೆಣ್ಣು ಮಗಳು, ಹೆಸರು ಶಿವಬಾಯವ್ವ. ಎಲ್ಲರೂ ಶಿವ ಸಂಸ್ಕೃತಿಯವರು. ಇವರಿಗೆ ಬೇಕೆಂಬುದಿಲ್ಲ, ಬೇಡವೆಂಬುದಿಲ್ಲ. ಬಸವ ಪಥ ಇವರ ಮತ.

ಇವರಲ್ಲಿ ಗುರುಲಿಂಗಯ್ಯನವರು ಘನವಾದ ವರ್ತನೆಯಿಂದ ಶೋಭಿಸುವಂಥ ಮುರುಘೇಂದ್ರ ಶಿವಯೋಗಿಗಳು ! ಬಾಲ್ಯದಲ್ಲಿ ಇವರ ಶಿಕ್ಷಣವಾದದ್ದು ತೆಲಸಂಗ ಸ್ವಾಮಿಗಳ ಮಠದಲ್ಲಿ. ಗುರುಗಳು ಘನ ವಿದ್ವಾಂಸರು, ವೇದಾಧ್ಯಯನ, ವಚನಾಧ್ಯಯನ ಮಾಡಿದ ಘನಪಂಡಿತರು. ಆದರೆ ಇವರು ಕುಷ್ಠರೋಗ ಪೀಡಿತರು. ಮುರುಘೇಂದ್ರರು ಗುರುಗಳ ಮೈಮುಟ್ಟಿ ಗುಳ್ಳೆಗಳನ್ನು ಹಿಸುಕಿ ರಸಿಕೆಯನ್ನು ತೆಗೆದು ಬಿಸಿ ನೀರಿನಿಂದ ಜಳಕ ಮಾಡಿಸುತ್ತಿದ್ದರು. ಕೆಲದಿನಗಳ ಆರೈಕೆಯಿಂದ ಇವರು ಗುಣಮುಖರಾದರು. ಗುರುಗಳು ಸಂತೋಷಪಟ್ಟು, ಮುರುಘೇಂದ್ರಾ ಎಂಥ ದೊಡ್ಡ ಮನಸ್ಸು ನಿನ್ನದು. ಉಳಿದ ಯಾವ

ಶಿಷ್ಯನೂ ಉಪಚಾರ ಮಾಡದೆ, ದೂರ ಕುಳಿತು ಪಾಠ ಹೇಳಿಸಿಕೊಳ್ಳುತ್ತಿದ್ದಾಗ ನೀನು ಮಾತ್ರ ಶುಶ್ರೂಷೆ ಮಾಡಿದೆ. ನೀನು ಶಿವಯೋಗಿಯಾಗಿ ಖ್ಯಾತಿ ಪಡೆಯೆಂದು ಆಶೀರ್ವದಿಸಿದರು.

ಇವರು ಅಧಿಕಾರ ಪ್ರಿಯರಲ್ಲ. ಅಥಣಿಯ ಗಚ್ಚಿನಮಠಕ್ಕೆ ಮಠಾಧಿಪತಿಯಾಗುವ ಅವಕಾಶ ಬಂದಾಗ ಅದನ್ನು ನಿರಾಕರಿಸಿದರು. ಸಿದ್ಧಲಿಂಗಪ್ಪನವರನ್ನು ಪೀಠಾಧಿಪತಿಯನ್ನಾಗಿ ಮಾಡಿ, ಶಿವಯೋಗಿಗಳು ನಿರಾಳವಾಗಿದ್ದರು. ಬಸವ ವಚನಗಳನ್ನು ಭಕ್ತಿಯಿಂದ ಓದುವುದರಲ್ಲಿ ಆಸಕ್ತರಾಗಿ ಬಸವ ಪಥದಂತೆ ನಡೆಯುತ್ತಿದ್ದರು.

ತಮ್ಮ ದೇಸಗತಿಯ ಆಸ್ತಿಯನ್ನು ಶಿವಯೋಗಿಗಳಿಗೆ ಅರ್ಪಿಸಲು ಲಿಂಗರಾಜರು ಗಚ್ಚಿನಮಠಕ್ಕೆ ಆಗಮಿಸಿದರು. 'ಮಠಗಳು ದೊಡ್ಡದಾಗುವುದು ಆಸ್ತಿಯಿಂದಲ್ಲ; ದಾಸೋಹದಿಂದ, ಬಸವತತ್ವ ಪಾಲನೆಯಿಂದ, ಅಧಿಕಾರ ತ್ಯಾಗದಿಂದ, ವೈರಾಗ್ಯಪಾಲನೆಯಿಂದ. ಮಠಕ್ಕೆ ಈ ದೇಸಗತಿಯ ಆಸ್ತಿ ಬೇಡ, ಮಕ್ಕಳಿಲ್ಲವೆಂದು ನೀವು ದತ್ತಕ ತೆಗೆದುಕೊಂಡಿಲ್ಲ ಇದು ನಿಮ್ಮ ದೊಡ್ಡಗುಣ. ಇದು ವಿದ್ಯೆಗಾಗಿ ಉಪಯೋಗವಾಗಲಿ, ವಿದ್ಯೆ ಕಲಿತ ಮಕ್ಕಳು ನಿಮ್ಮನ್ನು ಹಾರೈಸುವರು' ಹೀಗೆ ಹೇಳಿದರು. ಶಿವಯೋಗಿಗಳ ಸಲಹೆಯಂತೆ ಅರಟಾಳ ರುದ್ರಗೌಡರು, ಬಸವಲಿಂಗಪ್ಪ ಸಿಗ್ಗಲಿ ಮೊದಲಾದ ಏಳು ಜನರ ಟ್ರಸ್ಟ್ ಮಾಡಿ, ಅದರ ನೇತೃತ್ವದಲ್ಲಿ ಆ ಹಣವು ಪ್ರತಿವರ್ಷ ಬಡವಿದ್ಯಾರ್ಥಿಗಳ ಸಹಾಯಾರ್ಥವಾಗಿ ವಿನಿಯೋಗವಾಗತೊಡಗಿತು. ಇಂದಿಗೂ ಈ ಹಣವು ವಿದ್ಯಾರ್ಥಿಗಳಿಗೆ ಹಂಚಲಾಗುತ್ತದೆ. ಅಲ್ಲದೆ ಸೊಲ್ಲಾಪುರದ ವಾರದ ಮಲ್ಲಪ್ಪನವರು ತಮ್ಮ ಸಂಪತ್ತನ್ನು ಸಂಸ್ಕೃತ ಪಾಠಶಾಲೆಗೆ ದಾನಮಾಡಿದರು.

ಗಚ್ಚಿನ ಮಠದಲ್ಲಿ ಒಬ್ಬ ಭಕ್ತರು ಗಣಾರಾಧನೆ ಕೈಕೊಂಡರು. ಲಿಂಗಾರ್ಚನೆ ಮುಗಿದ ಮೇಲೆ ತಂದಿರಿಸಿದ ವಿಶೇಷ ಎಡೆಯನ್ನು ನೋಡಿ ಶಿವಯೋಗಿಗಳು ಪ್ರಸಾದಕ್ಕೆ ಕೈಹಚ್ಚಲಿಲ್ಲ. ಒಳಗೆ ಭಕ್ತರ ಪಂಕ್ತಿ ಸಾಂಗವಾಯಿತು. ಆರಾಧನೆ ಮಾಡಿಸಿದ, ಭಕ್ತರು ಶಿವಯೋಗಿಗಳಿಗೆ ಪ್ರಸಾದ ಸ್ವೀಕರಿಸಲು ವಿನಂತಿಸಿಕೊಂಡರು. 'ನನ್ನೊಳಗಿನ ಶಿವ ಉಳಿದವರೊಳಗೂ ಇದ್ದಾನೆ. ಅಂದ ಮೇಲೆ ಭಕ್ತರಿಗೆ ಹೂರಣ ಹೋಳಿಗೆ, ನನಗೆ ಮಾತ್ರ ಬದಾಮಿ ಹೋಳಿಗೆ! ನನ್ನೊಳಗಿನ ಶಿವ ಬೇರೆ ಏನು ?' ಎಂದು ಕೇಳಿದರು. ಪ್ರಸಾದ ಭೇದ ಸಲ್ಲದು. ಭಕ್ತರು ಶಿವಯೋಗಿಗಳಿಗೆ ಕ್ಷಮೆ ಕೇಳಿದರು. 'ಎಲ್ಲ ಭಕ್ತರಿಗೆ ಬಡಿಸಿದ ಹೂರಣದ ಹೋಳಿಗೆಯನ್ನು ನನಗೂ ತಕ್ಕೊಂಡು ಬನ್ನಿ' ಎಂದು ಶಿವಯೋಗಿಗಳು ಅಪ್ಪಣೆ ಕೊಟ್ಟರು. ಕೊನೆಗೆ ಸರ್ವರ ಪಂಕ್ತಿ ಸಾಂಗವಾಯಿತು. ತಪ್ಪಿದವರನ್ನು ತಿದ್ದುವುದು ಅವರ ಸದಿಚ್ಛೆ! ಬಸವಣ್ಣನಂತೆ ಸಮಾನತೆ ಶಿವಯೋಗಿಗಳ ತತ್ವ.

ಶಿವಯೋಗಿಯೆಂದರೆ ಮುರುಘೇಂದ್ರ ಸ್ವಾಮಿಗಳು, ದಾಸೋಹಿ ಎಂದರೆ ಸಿದ್ಧಲಿಂಗಪ್ಪನವರು. ಇಬ್ಬರೂ ಶಿವತತ್ವ ಚಿಂತಕರೆ. ಶಿವಯೋಗಿಗಳು ಸಂಕಲ್ಪ ರೂಪ, ಸಿದ್ಧಲಿಂಗಪ್ಪನವರು ಆ ಸಂಕಲ್ಪವನ್ನು ಕೃತಿಯಲ್ಲಿ ತರುವ ಸಾಕಾರ ರೂಪ. ಇಂಥ

ಶಿವಸ್ವರೂಪಿಗಳು ಕರ್ನಾಟಕದ ಎರಡು ನಂದಾದೀಪಗಳು. ಧಾರವಾಡದ ಮೃತ್ಯುಂಜಯಪ್ಪನವರು ಶಿವಯೋಗಿಗಳು ಹಚ್ಚಿದ ಶುಭ ಮಂಗಲದೀಪ. ಆ ಜ್ಯೋತಿ ಈ ಜ್ಯೋತಿ ಕೂಡಿ ಸದಾ ಬೆಳಗುತ್ತಿರುವ ಜ್ಯೋತಿ.

ದೊಡ್ಡವರು ದೊಡ್ಡವರನ್ನು ಗೌರವಿಸುತ್ತಾರೆ ಎನ್ನುವುದಕ್ಕೆ ಶಿವಯೋಗಿಗಳು ಹಾಗೂ ಲೋಕಮಾನ್ಯ ತಿಲಕರು ಸಾಕ್ಷಿ. ಒಬ್ಬರು ಯೋಗ ಸಾಧನೆಯಿಂದ ಶಿವಯೋಗಿಯಾದವರು. ಇನ್ನೊಬ್ಬರು ರಾಜನೀತಿ ನಿಪುಣರು. ಸಾಹಿತ್ಯ ರಚನೆಯಲ್ಲಿ ಖ್ಯಾತರಾದವರು. ಲೋಕಕಲ್ಯಾಣಕ್ಕೆ ಮಹಾನುಭಾವಿಗಳಿಬ್ಬರೂ ಅಗತ್ಯವೆ. ನಮಸ್ಕರಿಸಿದ ತಿಲಕರನ್ನು ಉದ್ದೇಶಿಸಿ " ನೀವೇನು ಸಣ್ಣವರಲ್ಲ, ಜಗದ್ವಂದ್ಯರು, ಯೋಗಿಯಾದ ಮಾತ್ರಕ್ಕೆ ನಾನು ದೊಡ್ಡವನಲ್ಲ" ವಿಭೂತಿ, ಧೂಪ, ಗಂಧದ ಕೊರಡು, ರುದ್ರಾಕ್ಷಿ, ಹಣ್ಣು ಮೊದಲಾದವುಗಳನ್ನು ಕಾಣಿಕೆಯನ್ನಾಗಿ ಶಿವಯೋಗಿಗಳಿಗೆ ಅರ್ಪಿಸಿ ತಲೆವಾಗಿದರು.

'ನೀವು ಗೈವ ರಾಜಕೀಯ ಸೇವೆ ನಿಜವಾಗಿ ದೇಶ ಸೇವೆ, ಸ್ವಾತಂತ್ರ್ಯ ಸೇವೆ. ಇಂದಿಲ್ಲ, ನಾಳೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕೇ ಸಿಗುವುದು. ಚಿಂತಿಸಬೇಡಿ ಲೋಕಮಾನ್ಯರೆ' ಶಿವಯೋಗಿಗಳು ತಿಲಕರ ಉಡಿಯಲ್ಲಿ ತೆಂಗು ವಿಭೂತಿ ಫಲ ಪುಷ್ಪಗಳನ್ನು ಹಾಕಿ ಆಶೀರ್ವಾದ ಮಾಡಿದರು. ತಿಲಕರು ಧನ್ಯ ನಾನು ಎಂದರು.

ಮೋಟಗಿ ಮಠದ ಮುರುಘೇಂದ್ರ ಸ್ವಾಮಿಗಳಿಗೂ, ಗಚ್ಚಿನ ಮಠದ ಮುರುಘೇಂದ್ರ ಸ್ವಾಮಿಗಳಿಗೂ ನಿಕಟ ಸಂಬಂಧವಿತ್ತು. ಮುರುಘೇಂದ್ರ ಶಿವಯೋಗಿಗಳು ಗಚ್ಚಿನ ಮಠದಲ್ಲಿದ್ದು ಅನೇಕ ಭಕ್ತರನ್ನು ಉದ್ಧರಿಸಿದವರು. ಅವರೇನು ಮಠದ ಪಟ್ಟಾಧಿಕಾರಿಯಲ್ಲ. ಸೇವೆ ಮಾಡುವುದಕ್ಕೆ ಅಧಿಕಾರವೆ ಬೇಕಿಲ್ಲ. ಒಮ್ಮೆ ಮೋಟಗಿ ಮಠದ ಶಿವಯೋಗಿಗಳಿಂದ ಬೆಳಸಿತಿನ್ನುವುದಕ್ಕೆ ಗಚ್ಚಿನ ಮಠದ ಮುರುಘೇಂದ್ರ ಶಿವಯೋಗಿಗಳಿಗೆ ಆಮಂತ್ರಣ ಬಂತು. ಶಿವಯೋಗಿಗಳಿಬ್ಬರ ಕೂಡ ಬೆಳಸಿ ತಿನ್ನುವುದೊಂದು ಭಾಗ್ಯವೆ ಸರಿ ! ಬಿಳ್ಳೂರಿನ ಗುರು ಬಸವ ಸ್ವಾಮಿಗಳು ಗಚ್ಚಿನ ಮಠದ ಸಿದ್ಧಲಿಂಗ ಸ್ವಾಮಿಗಳು ಹಾಗೂ ಶ್ರೀಮಂತರೂ ಸಾಮಾನ್ಯರೂ ಈ ಕಾರ್ಯಕ್ರಮಕ್ಕೆ ತಯಾರಾದರು. ಸುಮಾರು ಐವತ್ತು ಬಂಡಿಗಳು ಸಜ್ಜಾದವು. ಒಂದು ಬಂಡಿಯಲ್ಲಿ ಶಿವಯೋಗಿಗಳೂ, ಸ್ವಾಮಿಗಳೂ ಬಂಡಿಗಳಿಗೆ ಸವಾರಿಹಾಕಲಾಗಿತ್ತು. ಭಕ್ತರು ಒಬ್ಬೊಬ್ಬರಾಗಿ ಅನುಭವ ಪದಗಳನ್ನು ಹಾಗೂ ವಚನಗಳನ್ನು ಹಾಡತೊಡಗಿದರು. ಮೋಟಗಿಮಠದವರ ಹೊಲ ಬಂದೊಡನೆ ಬಂಡಿಗಳಲ್ಲಿಯ ಖಾದ್ಯಪದಾರ್ಥಗಳನ್ನು ಪಂಚಪಕ್ವಾನ್ನಗಳನ್ನು ಕೆಳಗಿಳಿಸಲಾಯಿತು.

ನದಿಯ ದಂಡೆಯ ಮೇಲೆ ಹಕ್ಕಿ-ಪಕ್ಕಿಗಳ ಸವಿ ರಾಗಗಳನ್ನು ಮತ್ತು ಭಕ್ತರ ಹಾಡುಗಳನ್ನು ಕೇಳುತ್ತ ಬೆಳಸಿಯನ್ನು ಸವಿಯುವ ಕಾರ್ಯಕ್ರಮ ಪ್ರಾರಂಭವಾಯಿತು. ಇದೊಂದು ದಾಸೋಹವೆ ಸರಿ. ಲಕ್ಷಗ್ರಾಮದ ದಾರಿಯ ಹೋಗಿ, ಭಕ್ತ ಭಕ್ತರು ಕೂಡಿ ಬೆಳಸಿ ತಿನ್ನುವುದು ಪರಸ್ಪರರಲ್ಲಿ ಅನುಭವಗಳನ್ನು ಹಂಚಿಕೊಳ್ಳುವುದು. ಸದಾಚಾರವೂ

ಅಹುದು, ದಾಸೋಹವೂ ಅಹುದು. ಇದೊಂದು ಜಂಗಮ ದಾಸೋಹ, ಜಂಗಮ ಸ್ಥಲ. ಕೂಡಿ ಉಣ್ಣುವದರಿಂದ ಕೆಲವು ಭಕ್ತರು ಖುಷಿ ಪಟ್ಟರು. ಆದರೆ ಕೆಲವರು ಮನಸ್ಸನ್ನು ಕಹಿ ಮಾಡಿಕೊಂಡರು. ಬೆಳಸಿಯಿಂದ ತಮ್ಮ ಹೊಲಗಳೆಲ್ಲ ಬರಲಾದುವು ಎಂದು ಅಥಣಿಯ ಮಾಮಲೆದಾರರ ಮುಂದೆ ದೂರನ್ನು ಸಲ್ಲಿಸಿದರು. 'ರಾಶಿಯ ಫಲ ಹೆಚ್ಚು ಬಂದರೆ ಮಠಕ್ಕೆ ಸಲ್ಲಿಸಿರಿ, ಕಡಿಮೆ ಬಂದರೆ ನಮ್ಮಿಂದ ಪಡೆದುಕೊಳ್ಳಿರಿ' ಎಂದು ಮಾಮಲೆದಾರರೇ ತೀರ್ಪುಕೊಟ್ಟರು. ಹೊಲದ ರಾಶಿ ಇಮ್ಮಡಿಯಾದವು. ಆದರೆ, ಹೆಚ್ಚಿಗೆ ಬಂದ ಧಾನ್ಯವನ್ನು ಮಠಕ್ಕೆ ಅರ್ಪಿಸಲಿಲ್ಲ. ನಮ್ಮ ಅನ್ಯಾಯವು ನಮ್ಮನ್ನು ಕಾಡುತ್ತದೆ. ಒಂದು ವರ್ಷವಾದ ಮೇಲೆ ಅತಿವೃಷ್ಟಿಯಿಂದ ದೂರು ಕೊಟ್ಟವರ ಹೊಲಗಳು ಬೆಳೆಯಲಿಲ್ಲ. ಕೊಟ್ಟ ಮಾತನ್ನು ಮೀರಿದವರಿಗೆ ದೇವರೆ ಶಿಕ್ಷಿಸುತ್ತಾರೆ. ಶಿವಯೋಗಿಗಳ ಮುಂದೆ ತಮ್ಮ ಗೋಳು ತೋಡಿಕೊಂಡು, ಇಲ್ಲಿ ನೋಡ್ರೆಪಾ ನಿಮಗೆ ಎರಡು ಪಟ್ಟು ಫಸಲು ಬಂದಿತ್ತು. ಆದರೂ ಮಠಕ್ಕೆ ಧಾನ್ಯವನ್ನು ಕೊಡಲೇ ಇಲ್ಲ. ನನ್ನ ಕೈಯೊಳಗೆ ಏನೂ ಇಲ್ಲ. ನಮ್ಮ ಭಾವದಂತೆ ದೇವರು ಶಿವಾ ಮತ್ತೆ ನಿಮ್ಮ ಕೈಹಿಡಿಯುತ್ತಾನೆ. ಚಿಂತಿಸಬೇಡಿ. ಮಠದೊಳಗೆ ಪ್ರಸಾದ ತಕ್ಕೊಂಡು ಹೋಗಿರಿ. ಆ ಪ್ರಸಾದದಿಂದ ನಿಮ್ಮ ಕಲ್ಯಾಣವಾಗುತ್ತದೆ ಎಂದು ಅವರಿಗೆ ಹರಸಿ ಕಳಿಸಿದರು.

"ಶಿವಾ ಅಲ್ಲೇ ಅದಾನ, ಇಲ್ಲಿಗ್ಯಾಕ ಬಂದಿರಿ ? ಶಾಸ್ತ್ರಾ ಕೇಳಾಕಬಂದ್ರಾ ? ಬರ್ರಿ ಬರ್ರಿ, ಶಿವಯೋಗಿ ಹುಟ್ಟಿದ ನಾಡಿನವರು ಪುಣ್ಯವಂತರು ನೀವು" ಹೀಗೆಂದು ನುಡಿದವರು ಹುಬ್ಬಳ್ಳಿ ಸಿದ್ಧಾರೂಢ ಸ್ವಾಮಿಗಳು. ಸೇರದವರು ಸಿದ್ಧಾರೂಢರ ನೆತ್ತಿಯ ಮೇಲೆ ಬೆಂಕಿಯಿಟ್ಟರೂ ಅವರ ಮೇಲೆ ರೇಗಲಿಲ್ಲ, ಅವರನ್ನೇ ಕಾಯ್ದವರು, ಮಠಕ್ಕೆ ಭಜನೆಯ ಮೇಳ ಬಂತೆಂದು ಅಪಾಯದಿಂದ ಪಾರುಮಾಡಿದವರು ಸ್ವಾಮಿಗಳು ! ಸತ್ಪುರುಷರನ್ನು ಸತ್ಪುರುಷರು ಗುರುತಿಸುತ್ತಾರೆ. ಇಂಗಳಗಾವಿಯಿಂದ ಶಿವರುದ್ರಯ್ಯ ಮಠಪತಿಯವರೊಂದಿಗೆ ಕೆಲ ಭಕ್ತರು ಸಿದ್ಧಾರೂಢರ ದರ್ಶನಕ್ಕೆ ಬಂದಾಗ ಈ ಪ್ರಸಂಗ ನಡೆಯಿತು. ಸಿದ್ಧಾರೂಢರು ನಿಜವಾಗಿ ಆರೂಢರೆ ! ಎತ್ತರೆತ್ತರವಾಗಿ ಬೆಳೆದ ಮಹಾ ಮಹಿಮರು. ಅವರು ಜ್ಞಾನಿಗಳು, ಶಿವಯೋಗಿಗಳು ಕ್ರಿಯಾನಿಷ್ಠರು. ಆತ್ಮೋನ್ನತಿಗೆ ಜ್ಞಾನವೂ ಬೇಕು ಕ್ರಿಯೆಯೂ ಬೇಕು. ಸಿದ್ಧಾರೂಢರ ಅಭಿಪ್ರಾಯದಿಂದ ಶಿವಯೋಗಿಗಳ ಘನತೆ ಎಷ್ಟೆಂದು ತಿಳಿದುಬರುವುದು. ಶಿವಯೋಗಿಗಳಿಗೆ ಜೀವಕುಲವೆಲ್ಲ ಜಂಗಮ. ಸಕಲ ಜೀವಾತ್ಮರಿಗೆಲ್ಲ ಲೇಸನ್ನು ಬಯಸುವ ಬಸವತತ್ವದವರು. ಸಿದ್ಧಾರೂಢರು ನಿರ್ಮತ್ಸರವುಳ್ಳವರು, ಅಹಿತ ಬಗೆದವರಿಗೆ ಹಿತವನ್ನೇ ಗೈದವರು. ಇವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ! ಒಂದೇ ಕಾಲದಲ್ಲಿ ಇದ್ದವರು. ಸಿದ್ಧಾರೂಢರಿಂದ ಶಾಸ್ತ್ರ ಕೇಳಿ ಕಲಿಯಬೇಕು. ಶಿವಯೋಗಿಗಳನ್ನು ನೋಡಿ ಕಲಿಯಬೇಕು. ದಿ. ೨೩-೪-೧೯೨೧ ಶನಿವಾರ, ಸೂರ್ಯ ಅಸ್ತನಾಗುವ ಗೋಧೂಳಿಯ ಶುಭ ಮುಹೂರ್ತದಲ್ಲಿ ಲಿಂಗಾರ್ಚನೆಯ ಮಾಡಿಕೊಳ್ಳುತ್ತಿರುವಾಗ ಶಿವಯೋಗಿಗಳು ಲಿಂಗದಲ್ಲಿ ಕೂಡಿ ಲಿಂಗವಾದರು. ಎಮ್ಮವರಿಗೆ ಸಾವಿಲ್ಲವೆಂಬ ಬಸವವಾಣಿ ಸತ್ಯವಾದುದು !

ಒಳ್ಳೆಯದನ್ನು ಒಳ್ಳೆಯವರನ್ನು ನೋಡಿ ತಿಳಿಯಬೇಕು. ತಾಯಿ ಮಕ್ಕಳ ನಡುವಣ ಪ್ರೀತಿ ಮಮತೆಯ ಸ್ವರೂಪವರಿಯಬೇಕಾದರೆ, ನೋಡಿಯೆ ಅರಿಯಬೇಕು. ನೀಲಮ್ಮನವರು ಶಿವಯೋಗಿಗಳ ಹಡೆದ ತಾಯಿ. ಮಗನನ್ನು ನೋಡಲೆಂದು ಬಂಡಿಹೂಡಿಸಿಕೊಂಡು ಪ್ರೀತಿಯ ಪ್ರತೀಕವಾದ ತರತರದ ಅಡಿಗೆಯ ಮಾಡಿ ಬುತ್ತಿಕಟ್ಟಿಕೊಂಡು ಅಥಣಿಗೆ ಆಗಮಿಸಿದರು. ಒಂದು ಬುತ್ತಿಯನ್ನು ಗಚ್ಚಿನಮಠಕ್ಕೆ ಇನ್ನೊಂದನ್ನು ಮೋಟಗಿಮಠಕ್ಕೆ ಕೊಟ್ಟು ಕೃತಾರ್ಥರಾದರು. ಬಂಡಿಯಲ್ಲಿ ಕರೆದುಕೊಂಡು ಬಂದ ಗುರುಪಾದಪ್ಪನು ಸಿದ್ಧಲಿಂಗಪ್ಪನವರಿಗೆ ನಮಸ್ಕರಿಸಿದನು. ತಾಯಿಯವರೂ ನಮಸ್ಕರಿಸಿದರು. ಮಗನಿಗೆ ತಾಯಿ ನಮಸ್ಕಾರ ಮಾಡಬಾರದು. ಮರಳಿ ಸಿದ್ಧಲಿಂಗಪ್ಪನವರು ತಾಯಿಗೆ ವಂದಿಸಿದರು. ತಾಯಿಯವರು ಶಿವಯೋಗಿಗಳಿಗೂ ನಮಸ್ಕಾರ ಮಾಡಲು ತಾಯಿ ಕಣ್ಣೀರಿನಿಂದ ಶಿವಯೋಗಿಗಳ ಪಾದಾಭಿಷೇಕ ಮಾಡಿದರು. ಆ ಹನಿಗಳಲ್ಲಿ ತಾಯಿಯ ವಾತ್ಸಲ್ಯ ತುಂಬಿತ್ತು. ಶಿವಯೋಗಿಗೆ ಸಲ್ಲುವ ಗೌರವವಾಗಿತ್ತು. ಗುರುಪಾದಪ್ಪನಿಗೆ ಇದೊಂದು ಸಂಸ್ಕೃತಿಯ ಪಾಠವಾಗಿತ್ತು. ' ಮಜ್ಜಿಗೆಯಿಂದ ಬೆಣ್ಣೆ ಹುಟ್ಟುವುದು ನಿಜ. ಆದರೆ ಮಜ್ಜಿಗೆಯ ಸಂಬಂಧ ಬೇಡವೆನ್ನಬಹುದೆ ? ಮಜ್ಜಿಗೆಗೆ ಬೆಣ್ಣೆಗೆ ಇರುವ ಸಂಬಂಧದಂತೆ ತಾಯಿಗೆ ಶಿವಯೋಗಿಗೆ ಸಂಬಂಧ. ಆದರೆ ಮಜ್ಜಿಗೆಯಲ್ಲಿ ಬೆಣ್ಣೆ ಮುಳುಗದೆ ತೇಲುವಂತೆ ಶಿವಯೋಗಿಯಾಗಲಿ ಸಂಸಾರಿಯಾಗಲಿ ಮೋಹದಲ್ಲಿ ಮುಳುಗದೆ ತೇಲಬೇಕು ' ಹೀಗೆ ಅನುಮಾನಿಸುತ್ತ ನಿಂತ ಗುರುಪಾದಪ್ಪನಿಗೆ ಶಿವಯೋಗಿಗಳು ಎಲ್ಲವನ್ನು ಬಿಡಿಸಿ ಹೇಳಿದರು. ಕೇಳಿ ಗುರುಪಾದಪ್ಪ ಧನ್ಯನಾನೆಂದನು.

ಸಿದ್ಧಲಿಂಗಪ್ಪನವರು ತಾಯಿಗೆ ಬಳೆ ಇಡಿಸಿ ರೇಶಿಮೆಯ ಸೀರೆ, ಖಣಕೊಟ್ಟು ಸತ್ಕರಿಸಿದರು. ಅದೇ ರೀತಿ ಮೋಟಗಿ ಮಠದ ಸ್ವಾಮಿಗಳು ರೇಶಿಮೆಯ ಸೀರೆ-ಕುಪ್ಪಸ ಮಾಡಿ ಸತ್ಕಾರ ಮಾಡಿದರು. ಶಿವಯೋಗಿಗಳ ಪ್ರತಿರೂಪ ಸಿದ್ಧಲಿಂಗಪ್ಪನವರು.

ಮಠದ ಆವರಣದಲ್ಲಿ ಬೆಳೆದ ಮೋಸಂಬಿ ಹಣ್ಣುಗಳನ್ನು ಒಬ್ಬ ಹುಡುಗ ಕದ್ದು ಒಯ್ಯುತ್ತಿದ್ದನು. ಮಠದ ಸೇವಕನು ಅವನನ್ನು ಹಿಡಿದು ತಂದು ಶಿವಯೋಗಿಗಳ ಮುಂದೆ ನಿಲ್ಲಿಸಿದನು. ಸೇವಕ ಎಂದರೆ ಅಡಿವೆಪ್ಪ ಮಾಸ್ತರು. ಮೋಸಂಬಿ ಹುಳಿಯಿರುವುದರಿಂದ ಸಕ್ಕರೆ ತರಿಸಿ ಹುಡುಗನಿಗೆ ಕೊಟ್ಟರು. ಬಾಡಿದ ಹುಡುಗನ ಮುಖ ಅರಳಿತು. ಆ ಬಾಲಕನು ಶಿವಯೋಗಿಗಳಿಗೆ ನಮಸ್ಕಾರ ಮಾಡಿ, ಅವರ ದೊಡ್ಡಸ್ತಿಕೆಯನ್ನು ಸ್ಮರಿಸುತ್ತ ಹೋದನು. ತಪ್ಪಿದವರನ್ನು ದಂಡಿಸುವುದು ಒಂದು ಮಾರ್ಗ. ಇದು ಶಾಸ್ವತ ಪರಿಹಾರವಲ್ಲ. ತಪ್ಪಿದವರನ್ನು ಪ್ರತಿಯಾಗಿ ಏನಾದರೂ ಕೊಟ್ಟು ಪ್ರೀತಿಮಾಡುವುದು ಇನ್ನೊಂದು ಮಾರ್ಗ ! ಇದು ತಪ್ಪಿದವರನ್ನು ಶಾಶ್ವತವಾಗಿ ತಿದ್ದಿ ದಾರಿಗೆ ತರುವುದುಂಟು.

ದಾಸೋಹವು ನಿರಪೇಕ್ಷ ಭಾವತಾಳಿದ್ದು ಶಿವಶರಣರಿಂದ, ದಾನ ಹೊಸ ಆವಿಷ್ಕಾರ ಪಡೆದು, ದಾಸೋಹವಾದದ್ದು ದಾಸೋಹಂಭಾವದಿಂದ, ಅಂಥ

ಮನೋಧರ್ಮವುಳ್ಳವರಿಂದ ! ಅಂಥ ದಾಸೋಹಿಯೆನಿಸಿದವರು ಶೆಟವಾಜಿ ಎಂಬವರು ! ಅಥಣಿ ತಾಲೂಕಿನ ಘಟ್ಟನಟ್ಟಿ ಎಂಬ ಗ್ರಾಮದವರು. ಅವರದೊಂದು ಬರಡು ಹೊಲವಿತ್ತು. ನೀರಿಲ್ಲದ ಬಾವಿಯಿತ್ತು. ಏರಿದ ಹೊಳೆ ಇಳಿದಂತೆ ಶ್ರೀಮಂತಿಕೆ ಹೋಗಿ ಅವರಿಗೆ ಬಡತನ ಬಂದಿತ್ತು. ಮನಸು ಮಾತ್ರ ಸಿರಿವಂತಿಕೆಯ ಕಳೆದುಕೊಂಡು ಬಡವಾಗಿರಲಿಲ್ಲ. ಶೆಟವಾಜಿಯವರು ಆಗಾಗ ಶಿವಯೋಗಿಗಳಿಗೆ ದೇಸಿ ಕರ್ಪುರ, ದಶಾಂಗ ಮುಂತಾದವುಗಳನ್ನು ಭಕ್ತಿಯ ಕಾಣಿಕೆಯಾಗಿ ಅರ್ಪಿಸುತ್ತಿದ್ದರು. ಜಾತಿಯಿಂದ ವೀರಶೈವರಲ್ಲ. ಭಕ್ತಿಯಿಂದ ಶುದ್ಧ ವೀರಶೈವರು ! ಭಕ್ತಿಗೆ ಜಾತಿಯೆಂಬುದುಂಟೆ ? ಅಥಣಿಯಲ್ಲಿ ಒಂದು ಹಾಯಸ್ಕೂಲು ಕಟ್ಟಡಕ್ಕಾಗಿ ಜಾಗಬೇಕಾಗಿತ್ತು. ಕೆ.ಎಲ್.ಇ. ಸೊಸೈಟಿಯವರು ಶೆಟವಾಜಿಯವರ ಹೊಲವೆ ಉತ್ತಮ ಜಾಗವೆಂದು ಪಾಸುಮಾಡಿದರು. ಶೆಟವಾಜಿಯವರು ಸಂತೋಷದಿಂದ ಕೊಟ್ಟರು. ಶೆಟವಾಜಿಯವರಿಗೆ ಕೊಡಬೇಕೆಂದು ಶಿವಯೋಗಿಗಳೇನು ಹೇಳಿರಲಿಲ್ಲ. ಕೊಡುವವರಿಗೆ ಆಗ್ರಹ ಬೇಕಾಗಿರಲಿಲ್ಲ. ತ್ಯಾಗಬೇಕಾಗಿತ್ತು. ಅಂಥ ತ್ಯಾಗಿ ಶೆಟವಾಜಿ. ಪ್ರತಿಯಾಗಿ ಎರಡು ಸಾವಿರ ರೂಪಾಯಿ ಕೊಡಲು ಬಂದ ಹಣವನ್ನು ನಿರಾಕರಿಸಿದರು. ಒತ್ತಾಯ ಹೆಚ್ಚಾಗಲು ಶಿವಯೋಗಿಗಳ ಪ್ರಸಾದವೆಂದು ಸ್ವೀಕರಿಸಿದರು. ಪರುಷ ಮುಟ್ಟಿದ ಲೋಹ ಚಿನ್ನವಾಗುವಂತೆ ಶಿವಯೋಗಿಗಳ ಒಡನಾಟದಿಂದ ಶೆಟವಾಜಿ ದಾಸೋಹಿಯಾದವರು !

ಶಿವಯೋಗಿಗಳ ಮಠದಲ್ಲಿ ' ನಿತ್ಯವೂ ನಡೆಯುವ ದಾಸೋಹಕ್ಕೆ ದವಸ ಧಾನ್ಯ ಏನೂ ಇಲ್ಲ. ನಾಳೆ ದಾಸೋಹ ಪ್ರಸಾದಕ್ಕೆ ಏನು ಮಾಡಬೇಕು ಅಪ್ಪನವರೆ ಏನು ಮಾಡಬೇಕು ? ' ಸಿದ್ಧಲಿಂಗಪ್ಪನವರು ಶಿವಯೋಗಿಗಳನ್ನು ವಿಚಾರಿಸಿದರು. " ಇಂದಿನ ಚಿಂತೆ ಇಂದಿಗೆ; ನಾಳಿನ ಚಿಂತೆ ನಾಳೆಗೆ. ದಾಸೋಹ ನಡೆಸುವವ ಶಿವ. ನೀವು ನಾವಲ್ಲ. ಶಿವನ ಚಿಂತೆ ಶಿವನಿಗಿರಲಿ. ನಿಮಗೆ ಚಿಂತೆ ಬೇಡ " ಎಂದು ಸಮಾಧಾನ ಹೇಳಿ ಸಿದ್ಧಲಿಂಗಪ್ಪನವರನ್ನು ಕಳಿಸಿದರು. ಶಿವಯೋಗಿಗಳ ಅಂತರ್‌ದೃಷ್ಟಿಗೆ ಬೆರಗಾದರು ಸಿದ್ಧಲಿಂಗಪ್ಪನವರು. ಮರುದಿನ ಒಂದು ಲೋಡು ತುಂಬ ದವಸಧಾನ್ಯ ಬಂತು. ಎಂದಿನಂತೆ ದಾಸೋಹ ನಡೆಯಿತು ! ದೇವರ ಮೇಲೆ ಭಾರಹಾಕಿದರೆ ಆತ ಎಲ್ಲವನ್ನು ಪರಿಹರಿಸುತ್ತಾನೆ ಎಂದು ನಂಬಬೇಕು !

ಬಡತನದಲ್ಲಿ ಬಳಲುತ್ತಿರುವ ಶಿವಪ್ಪನಿಗೆ ಒಂದು ಆಕಳನ್ನು ಶಿವಯೋಗಿಗಳು ಕೊಟ್ಟು, ನಿನ್ನ ಬಡತನ ಹಿಂಗಿ ನಿನ್ನ ಸಂಸಾರ ಸುಗಮವಾಗಲಿ ಎಂದು ಆಶೀರ್ವದಿಸಿದರು. ತಮ್ಮ ಪೂಜೆಗಾಗಿ ಪ್ರತಿ ಸೋಮವಾರ ಮತ್ತು ಶ್ರಾವಣ ಮಾಸ ಪೂರ್ತಿ ಕೃಷ್ಣಾ ನದಿಯ ನೀರನ್ನು ತಂದುಕೊಡುವೆನೆಂದು ಹೇಳಿ ಶಿವಯೋಗಿಗಳಿಗೆ ಶಿವಪ್ಪ ನಮಸ್ಕಾರ ಮಾಡಿದನು. ಈ ಆಕಳಿನಿಂದ ನಿಮ್ಮ ವಂಶಪರಂಪರೆಯವರೆಗೆ ಸುಖವಾಗಿ ಬದುಕುವಿರಿ ಎಂದು ಅವನ ಚಿಂತನೆಯನ್ನು ಬಿಡಿಸಿದರು. ಮಾತುಕೊಟ್ಟಂತೆ ಶಿವಪ್ಪ ಕೃಷ್ಣಾನದಿಯ ನೀರು ಒದಗಿಸುತ್ತ ಬಂದನು. ಶಿವಪ್ಪನಿಗೆ ಮುಪ್ಪು ಬಂತು. ಅವನ ಕಾಯಕವನ್ನು ಅವನ ಮಗ ಶಿವರಾಯ ಕೈಕೊಂಡನು. ಮಹಾಪೂರ ಬರಲಾಗಿ ಶಿವರಾಯ ಹೊಳೆಯಲ್ಲಿ ಈಜಿ ಶಿವಯೋಗಿಗಳ ನೆನೆಯುತ್ತ ನೀರನ್ನು ತಂದುಕೊಟ್ಟನು. ಅವರ ಲಿಂಗಾರ್ಚನೆ

ಸಾಂಗವಾಯಿತು. ಭಕ್ತಿಯಿಂದ ಮಾಡಿದ ಸೇವೆ ನಿಷ್ಫಲವಾಗದು. ಶಿವರಾಯನಿಗೆ ಉಡಲು ಬೇರೆ ಹೊಸ ಬಟ್ಟೆಯನ್ನು ಹಾಗೂ ವಿಭೂತಿ ತೆಂಗು ಹಣ್ಣು-ಹಂಪಲ ಅವನ ಉಡಿಯಲ್ಲಿ ಹಾಕಿ ಶಿವಯೋಗಿಗಳು ಅವನಿಗೆ ಆಶೀರ್ವಾದ ಮಾಡಿದರು.

ಅಥಣಿಯಲ್ಲಿ ಒಮ್ಮೆ ನಡೆದ ಬಸವಪುರಾಣಕ್ಕಾಗಿ ಸಮಾಜದವರು ಹಣಕೊಟ್ಟಿದ್ದರು. ಪುರಾಣ ಸಮಾಪ್ತವಾದ ಮೇಲೆ ಬಹಳಷ್ಟು ಧಾನ್ಯ ಉಳಿಯಿತು. ಅದನ್ನು ಮಾರಿ ಬಂದ ಹಣದಿಂದ ಪ್ರಸಾದ ವ್ಯವಸ್ಥೆ ಮಾಡಿ ಹಿಂದೂ, ಮುಸಲ್ಮಾನ, ಜೈನ, ಮಾರವಾಡಿ, ಮರಾಠಾ, ಪತ್ತಾರ, ದುಡ್ಡು ಕೊಟ್ಟವರನ್ನು ಕೊಡಲಾರದವರನ್ನು ಎಲ್ಲರನ್ನು ಕರೆಯಿರಿ, ಬಸವಣ್ಣನಿಗೆ ಜಾತಿ, ಮತ, ಭೇದವಿಲ್ಲ. ಅವನ ಭಕ್ತರಾದ ನಮ್ಮಲ್ಲಿ ಯಾವ ಭೇದವಿರಬಾರದು. ಸಿದ್ಧಲಿಂಗಪ್ಪನವರು ಹಾಗೂ ಉಳಿದ ಭಕ್ತರೂ ಒಪ್ಪಿ ಶಿವಯೋಗಿಗಳಿಗೆ ನಮಸ್ಕಾರ ಮಾಡಿದರು. ಆ ರೀತಿ ಜರುಗಿ ಎಲ್ಲರಿಗೂ ಸಮಾಧಾನವಾಯಿತು.

ಒಮ್ಮೆ ಶಿವಯೋಗಿ ಮಂದಿರದ ಕುಮಾರ ಸ್ವಾಮಿಗಳು ಶಿವಯೋಗಿಗಳ ದರ್ಶನ ಪಡೆಯಲು ಗಚ್ಚಿನ ಮಠಕ್ಕೆ ಬಂದಿದ್ದರು. ಆವಾಗ ಶಿವಯೋಗಿಗಳು ಥಟ್ಟನೆ ಎದ್ದು ನಮಸ್ಕಾರ ಮಾಡಿ ಅವರನ್ನು ತಮ್ಮ ಆಸನದ ಮೇಲೆ ಕುಳ್ಳಿರಿಸಿದರು. " ತಾವು ಶಿವಯೋಗಿಗಳು ನನಗೆ ನಮಸ್ಕಾರ ಮಾಡುವುದೆ ಅಪ್ಪಾ" ಎಂದು ಕುಮಾರ ಸ್ವಾಮಿಗಳು ಪಾದಗಳಿಗೆ ನಮಸ್ಕಾರ ಮಾಡಿದರು. ಸತ್ಪುರುಷರು ಸತ್ಪುರಷರನ್ನು ಆದರಿಸುತ್ತಾರೆ ! ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ಸಂಸ್ಕೃತ ಪಾಠಶಾಲೆ ನಡೆಸುತ್ತಿದ್ದರು. ಅದೊಂದು ವೀರಶೈವರಿಗೆ ಯಾತ್ರಾ ಸ್ಥಳವಾಗಿದೆ.

ಒಮ್ಮೆ ಒಬ್ಬ ಜಂಗಮ ಮಠಕ್ಕೆ ಬಂದರು. ನನಗೆ ಮಾವಿನ ಹಣ್ಣಿನ ಸೀಕರಣೆ ಹೋಳಿಗೆಯನ್ನು ಉಣ್ಣಬೇಕೆಂಬ ಹಂಬಲವಾಗಿದೆ ಎಂದು ಹೇಳಿದರು. ಸಿದ್ಧಲಿಂಗಪ್ಪನವರು ಕೇಳಿ ದಿಗಿಲುಗೊಂಡರು. ಆವಾಗ ಮಾವಿನ ಹಣ್ಣಿನ ಸುಗ್ಗಿಯಲ್ಲ. " ಸಿದ್ಧಲಿಂಗಪ್ಪನವರೆ, ಚಿಂತೆ ಬೇಡ, ಶಿವನೆ ಈ ಜಂಗಮ ರೂಪದಲ್ಲಿ ಬಂದಿದ್ದಾನೆ. ಅವನೆಲ್ಲವನ್ನು ನಿಸ್ತರಿಸಬಲ್ಲ, ಹಣ್ಣು ಕೊಡುವವ ಶಿವನೆ, ಸೀಕರಣೆ ಉಣ್ಣುವವ ಅವನೆ ! ನೀವು ಹೋಳಿಗೆಯ ತಯಾರಿ ನಡೆಸಿರಿ " ಎಂದು ಶಿವಯೋಗಿಗಳು ಹೇಳಿದರು. ಒಂದು ಗಳಿಗೆ ಬಿಟ್ಟು ಒಂದು ಹಣ್ಣಿನ ಕರಂಡಿಯನ್ನು ಹೊತ್ತುಕೊಂಡು ಒಬ್ಬ ವ್ಯಕ್ತಿ ಬಂದನು. ಅತ್ತ ಹೋಳಿಗೆಯ ತಯಾರಿ ನಡೆದಿತ್ತು. ಆ ಜಂಗಮ ಮಜ್ಜನ ಮಾಡಿ ಲಿಂಗಾರ್ಚನೆ ಮಾಡಿಕೊಂಡು ಪ್ರಸಾದಕ್ಕೆ ಕುಳಿತುಕೊಂಡನು. ಸೇವಕರು ಅವರಿಗೆ ಸೀಕರಣೆ ಹೋಳಿಗೆ ಉಣಲಿಕ್ಕೆ ಸಂತೋಷಪಟ್ಟರು. ಜಂಗಮಮೂರ್ತಿ ಹೊಟ್ಟೆ ತುಂಬ ಉಂಡು ತೃಪ್ತಿಪಟ್ಟರು. ನಂಬಿದವರನ್ನು ಶಿವನು ಎಂದೂ ಕೈಬಿಡಲಾರ.

" ನಂಬಿ ಕರೆದರೆ ಓ ಎನ್ನನೆ ಶಿವನು " ಬಸವವಾಣಿ ಹುಸಿಯಾಗದು. ಆ ಜಂಗಮನಿಗೆ ವಿಭೂತಿ ರುದ್ರಾಕ್ಷಿ ವಸ್ತ್ರ ಕೊಟ್ಟು ಕೃತಾರ್ಥರಾದರು ಸಿದ್ಧಲಿಂಗಪ್ಪನವರು. ಇಂಥ ಸತ್ವ ಪರೀಕ್ಷೆ ಜೀವನದಲ್ಲಿ ಬರುವುದುಂಟು. ಅಧೀರನಾಗದೆ ನಿಶ್ಚಿಂತನಾಗಿರಬೇಕು.

ಗಚ್ಚಿನ ಮಠಕ್ಕೆ ಆಗಾಗ ಭಕ್ತರು ಬರುವುದುಂಟು. ಒಮ್ಮೆ ಕೆಲವರು ಜಳಕ ಮಾಡಿ ತಮ್ಮ ಅರಿವೆಗಳನ್ನು ಒಗೆಯದೆ, ಹಾಗೆಯೆ ಬಚ್ಚಲಲ್ಲಿ ಬಿಟ್ಟು ಹೋಗಿದ್ದರು. ಮಠದಲ್ಲಿಯ ಸೇವಕರು ಹಿಂಡಿ ಹಾಕುವರೆಂದು ತಿಳಿದಿರಬೇಕು. ಆದರೆ ಶಿವಯೋಗಿಗಳು ಆ ಬಟ್ಟೆಗಳನ್ನು ನೋಡಿ ತಾವೇ ಹಿಂಡಿಹಾಕಿದರು. ಅವರು ಇವರು ಎಂಬ ಭೇದ-ಭಾವ ಶಿವಯೋಗಿಗಳಿಗೆ ಇರಲಿಲ್ಲ. ಭಕ್ತರು ಶಿವಯೋಗಿಗಳ ಸೇವೆಮಾಡಬೇಕು. ಆದರೆ ಶಿವಯೋಗಿಗಳೆ ಭಕ್ತರ ಸೇವೆ ಮಾಡಿದರು. ಬಸವ ತತ್ವವಿದು. ಶಿವಯೋಗಿಗಳಿಗೆ ಬಸವ ಬೇರೆ ಅಲ್ಲ, ಭಕ್ತರು ಬೇರೆ ಅಲ್ಲ. ‘ ಜಂಗಮ ಮುಖದಲ್ಲಿ ಲಿಂಗವ ಕಾಣು ’ ಎಂಬ ತತ್ವ ಶಿವಯೋಗಿಗಳದು.

ಒಟ್ಟಂದದಲ್ಲಿ ಶಿವಯೋಗಿಗಳು ಶಿವಯೋಗಿಗಳೇ ಬಸವಣ್ಣನವರ ವಚನಗಳನ್ನು ಓದಿದ ಅವರು ಬಸವಣ್ಣನ ಪ್ರತಿರೂಪ ! ನಯವಿನಯ ಶಾಲಿಗಳು. ‘ ಸದುವಿನಯವೇ ಸದಾಶಿವನ ಒಲುಮೆ ’ ಬಸವ ತತ್ವವನ್ನು ಪಾಲಿಸುತ್ತ ಬಂದವರು. ಯಾರಿಗೂ ಬಿರುನುಡಿ ಆಡದವರು. ಅಂತರ್‌ಜ್ಞಾನಿಗಳು. ಶಿವನ ಮೇಲೆ ಪೂರ್ಣ ನಂಬಿಗೆಯುಳ್ಳವರು. ಆತ್ಮವಿಶ್ವಾಸ ಅವರಲ್ಲಿ ಅಚಲವಾಗಿತ್ತು. ಶಿವಯೋಗಿಗಳು ಅಂತರ್‌ಜ್ಞಾನಿಗಳು; ಸಿದ್ಧಲಿಂಗಪ್ಪನವರು ಕ್ರಿಯಾಶೀಲರು, ಏಕೋಭಾವ ಅವರಿಬ್ಬರಲ್ಲಿ ನೆಲೆಯೂರಿತ್ತು. ಈ ಅಪರೂಪದ ಜೋಡಿ ಜಗತ್ತಿಗೇ ಮಾದರಿಯಾಗಿತ್ತು ! ಅವರಿಬ್ಬರು ಈಗಲೂ ಮಾದರಿಯಾಗಿದ್ದಾರೆ.

■■

ಗೋಟಖಿಂಡಿಮಠದ ಶ್ರೀ ಮಹಾಂತ ಸ್ವಾಮಿಗಳು

• ಮೋಹನ ಅಣೆಪ್ಪನವರ

ಬಸವಾ ಮುಕ್ತಿದಾತಾ ದ್ವಿತೀಯಾ ಶಂಭುವೆ
ಬಸವಾ ಮುಕ್ತಿದಾತಾ ಮಾದರಸ ಸುತಾ ।

ನಿತ್ಯ ನಿನ್ನಯ ನಾಮ ನೆನೆದು ಸತ್ಯತನದಲಿ ಸೇವೆಗೈದು
ಭೃತ್ಯಭಾವದಿ ಪಾದವಿಡಿದು ನಿತ್ಯ ನಿನ್ನನು ಭಜಿಪೆವು
ಸತ್ಯ ಸಂಧನುತ ಮಾದರಸ ಸುತಾ ।

ಮಂದಮತಿಯ ಕಂದ ನಾನು ಎಂದು ನಿನ್ನನು ಕಾಂಬೆನು
ಚಂದ-ಚಂದದ ಕುಸುಮಗಳನು ತಂದು ನಿನಗರ್ಪಿಸುವೆನು
ಆಜ್ಞಾ ಮಾಡಿದಾತಾ ಮಾದರಸ ಸುತಾ ।

ಯಜ್ಞ ಯಾಗಾದಿಗಳಲಿ ಅಜ್ಞ ಮೂಕ ಪ್ರಾಣಿವಧೆಯು
ಸುಜ್ಞಜನಕೆ ಸೇರದೆಂದು ಯಜ್ಞ ಮಾಡಕೂಡದೆಂದು
ಆಜ್ಞಾಮಾಡಿದಾತಾ ಮಾದರಸ ಸುತಾ ।

ಸದಯ ಹೃದಯವಿದುವೆ ಜನರ ಮಾನಕಾಯ್ದ ಮಾನ್ಯನೆ
ಹದಿಬದೆಯರಾದ ಅಬಲೆಯರಿಗೆ ಮಾರ್ಗತೋರಿದ ವೀರನೆ
ಮೋದ ತಾಳಿದಾತಾ ಮಾದರಸ ಸುತಾ ।

ವೀರಶೈವ ಧರ್ಮಗುರುವೆ ಮಾರಹರ ಸಮ ಶಕ್ತಿಯುತನೆ
ವೀರಶೈವವಾಚಾರ ಯುಕ್ತ ಭಕ್ತ ಸಂಕುಲ ಪ್ರೀತನೆ
ಗುರುವೆ ವಂದಿಸುವೆ ಮಾದರಸ ಸುತಾ ।

ಅಥಣಿ ಗೋಟಖಿಂಡಿ ಮಠದಲ್ಲಿ ಪೂರ್ವದಲ್ಲಿದ್ದ ಶಾಲೆಯ ಪ್ರಾರ್ಥನಾ ಗೀತೆ ಇದು. ಇಲ್ಲಿ ಕಲಿತ ಅಥಣಿಯ ಹಿರಿಯರೆಲ್ಲರೂ ಬಲ್ಲರು ಈ ಪ್ರಾರ್ಥನಾ ಗೀತೆಯನ್ನು. ಶ್ರೀ ಶಿವಯೋಗಿಗಳವರ ವರಪುತ್ರರಾದ ಶ್ರೀ ಮರುಳಶಂಕರದೇವರೂ ಇದೇ

ಪಾಠಶಾಲೆಯಲ್ಲಿ ಕಲಿತವರು. ಈ ಗೋಟಖಿಂಡಿ ಮಠದ ಎರಡನೇ ಸ್ವಾಮಿಗಳೇ ಶ್ರೀ ಮಹಾಂತ ಸ್ವಾಮಿಗಳು. ಇವರ ಗುರುಗಳು ಶ್ರೀ ಶಿವಲಿಂಗಯ್ಯ ಸ್ವಾಮಿಗಳು. ಇವರಿಗೆ ಅಥಣಿಯ ಸುಪ್ರಸಿದ್ಧ ಗೋಟಖಿಂಡಿ ಮನೆತನದ ಹಿಂದಿನ ಪೂರ್ವಜರು ತಮ್ಮದೇ ಆದ ಸ್ಥಳದಲ್ಲಿ ಮಠವನ್ನು ಕಟ್ಟಿಸಿಕೊಟ್ಟು ದಾನಮಾಡಿ ದಾನಗುಣವನ್ನು ಮೆರೆದವರು. ಅದಕ್ಕಾಗಿ ಈ ಮಠಕ್ಕೆ ' ಗೋಟಖಿಂಡಿ ಮಠ ' ಎಂಬ ಹೆಸರು ಬಂದಿದೆ. ಶ್ರೀ ಶಿವಲಿಂಗಯ್ಯ ಸ್ವಾಮಿಗಳ ಬಳಿಕ ಅಪ್ಪಟ ಬಸವ ಭಕ್ತರೂ, ಲಿಂಗಾಚಾರ ನಿಷ್ಠರೂ ಆದ ಶ್ರೀ ಮಹಾಂತ ಸ್ವಾಮಿಗಳು ಈ ಮಠಕ್ಕೆ ನಿಯುಕ್ತರಾಗಿದ್ದರು. ವಿದ್ಯಾಭಾಂಡಾರಿಗಳೂ, ವಿದ್ಯಾಪ್ರೇಮಿಗಳೂ ಆದ ಶ್ರೀಗಳು ಮಠದಲ್ಲಿದ್ದ ಪಾಠಶಾಲೆಗೆ ಅನುಕೂಲ ಆಗಲು ಅಥಣಿಯ ಮೋಟಗಿಮಠದಲ್ಲಿ ವಾಸವಾಗಿ ' ತ್ಯಾಗ ' ಶಬ್ದದ ನಿಜ ಅರ್ಥವನ್ನು ಆಚರಿಸಿ ತೋರಿಸಿದರು. ಇವರು ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಅಪ್ರತಿಮ ಪಂಡಿತರಾಗಿದ್ದರು.

' ಅಥಣಿ ' ಎಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲನೆರೆದು ಆಚಾರವೆಂಬ ಬತ್ತಿಗೆ ' ಮುರುಘೇಂದ್ರ ' ಎಂಬ " ಜ್ಯೋತಿಯ ಬೆಳಗಿಸಲು ತೊಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ. ಆ ಪ್ರಕಾಶದೊಳು ಹೊಳೆಯುತಿರ್ದರಯ್ಯ ಅಸಂಖ್ಯಾತ ಭಕ್ತಗಣಂಗಳು. ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರ ಎಂಬುದು ಹುಸಿಯೆ ? ಶಿವಭಕ್ತರಿದ್ದ ಕ್ಷೇತ್ರ ಪಾವನ ಎಂಬುದು ಹುಸಿಯೆ ? " ಪ್ರಭುವಿನ ವಚನವಾಣಿಯನ್ನು ಈ ರೀತಿ ಬದಲಾವಣೆ ಮಾಡಿ, ನೋಡಿದಲ್ಲಿ ಯಾವ ಚ್ಯುತಿಯೂ ಆಗದು. ಏಕೆಂದರೆ ಅಥಣಿ ಆಗ ನಿಜವಾಗಿಯೂ ಹೀಗೆ ಇದ್ದಿತು. ಹನ್ನೆರಡನೇ ಶತಮಾನದಲ್ಲಿ ಕನ್ನಡನಾಡಿನ ಕಲ್ಯಾಣದಲ್ಲಾದ ಇತಿಹಾಸದ ಪುನರಾವೃತ್ತಿ ಕಳೆದ ಶತಮಾನದ ಪೂರ್ವಾರ್ಧದಲ್ಲಿ ಕನ್ನಡ ನಾಡಿನ ಅಥಣಿಯಲ್ಲಿ ಆಯಿತು. ಇದು ಅತಿಶಯೋಕ್ತಿ ಅಲ್ಲ. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಅವತರಿಸಿ ಧರ್ಮದ ನಿಜ ಅರ್ಥ ಬಿತ್ತರಿಸಿ ಅಗ್ರಜ-ಅಂತ್ಯಜ ಎಂಬ ಜಾಡ್ಯವನ್ನು ಕಿತ್ತೆಸೆದು ಲಿಂಗಾಚಾರದ ನಿಜಾಚರಣೆಯನ್ನು ತೋರಿದರು. ಇದೇ ರೀತಿ ಕಳೆದ ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು, ಬೀಳೂರು ಶ್ರೀ ಗುರುಬಸವ ಸ್ವಾಮಿಗಳು, ಬಿದರಿಯ ಶ್ರೀ ಕುಮಾರ ಸ್ವಾಮಿಗಳು, ಹಾನಗಲ್ಲದ ಶ್ರೀ ಕುಮಾರ ಸ್ವಾಮಿಗಳು, ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳು, ಇಳಕಲ್ಲದ ಶ್ರೀ ವಿಜಯಮಹಾಂತ ಸ್ವಾಮಿಗಳು, ಅಥಣಿಯ ಮೋಟಗಿ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಇನ್ನೂ ಅನೇಕ ಸ್ವಾಮಿಗಳು ಅವತರಿಸಿ ಧರ್ಮದ ನಿಜ ಅರ್ಥವನ್ನು ಆಚರಿಸಿ ತೋರಿಸಿ, ಬಸವಾದಿ ಶರಣರ ಪಥ ಎತ್ತಿ ಹಿಡಿದರು. ಈ ಎಲ್ಲ ಸ್ವಾಮಿಗಳ ಸಾಲಿನಲ್ಲೇ ಬರುವವರು ಅತಿ ಕಿರಿಯ ವಯಸ್ಸಿನ ಅಥಣಿ ಗೋಟಖಿಂಡಿ ಮಠದ ಶ್ರೀ ಮಹಾಂತ ಸ್ವಾಮಿಗಳು. ಇವರು ಎಲೆಯ ಮರೆಯ ಹಣ್ಣಿನಂತೆ ಇದ್ದರು. ಅಥಣಿ ತಾಲೂಕಿನ ಕೃಷ್ಣಾ ನದಿತಟಾಕದ ಇಂಗಳಗಾವಿಯಲ್ಲಿ ಶ್ರೀ ಮಹಾಂತ ಸ್ವಾಮಿಗಳು ಶೆ ೧೮೧೭ರಲ್ಲಿ (ಇಸ್ವಿ ೧೮೯೫) ಜನ್ಮತಾಳಿದರು. ಲೋಕಪ್ರಸಿದ್ಧರೂ, ಮಹಾತಪಸ್ವಿಗಳೂ ಆದ ಅಥಣಿ ಗಚ್ಚಿನಮಠದ ಶ್ರೀ ಮುರುಘೇಂದ್ರ ಶಿವಯೋಗಿಗಳ ಪೂರ್ವಾಶ್ರಮ ಬಂಧುಗಳಾದ ಭಾಗೋಜಿಮಠದ ಶ್ರೀ ದುಂಡಯ್ಯನವರ ಕೊನೆಯ

ಸುತರಿವರು. ಇಷ್ಟೇ ಅಲ್ಲ. ಅಥಣಿ ಮೋಟಗಿ ಮಠದ ಪರಮ ಪೂಜ್ಯ ಶ್ರೀ ಚನ್ನಬಸವ ಸ್ವಾಮಿಗಳು ಶ್ರೀಗಳ ಪೂರ್ವಾಶ್ರಮದ ಹಿರಿಯ ಬಂಧುಗಳು. ಶ್ರೀಗಳ ಪೂರ್ವಾಶ್ರಮದ ಹೆಸರು ಅಪ್ಪಯ್ಯ. ಲಿಂಗಮ್ಮ ಇವರ ತಾಯಿಯ ಹೆಸರು. ಈ ರೀತಿ ಪುಣ್ಯವಂಶ ಲಲಾಮರಾದ ಅಪ್ಪಯ್ಯನವರು ಬಿದಿಗೆಯ ಚಂದ್ರನಂತೆ ಬೆಳೆದರು. ಚಿಕ್ಕವರಾಗಿದ್ದಾಗಲೇ ತುಂಬ ಬುದ್ಧಿವಂತರಾಗಿ ಎಲ್ಲರ ಮನಾಕರ್ಷಿಸಿದ್ದರು. ಪ್ರಾಥಮಿಕ ಶಿಕ್ಷಣದ ' ಓಂ 'ಕಾರ ನದಿ ಇಂಗಳಗಾವಿಯಲ್ಲಿ ಆಯಿತು. ಈ ವೇಳೆಗೇ ಇವರ ಭಕ್ತಿ, ಸುಶೀಲ ವರ್ತನೆ ಹಾಗೂ ಅಧ್ಯಾತ್ಮದ ಆಸಕ್ತಿಯನ್ನು ಕಂಡ ತಾಯ್ತಂದೆಗಳು ಈತ ಅಸಾಧಾರಣನೆಂದು ತಿಳಿದುಕೊಂಡರು. ಇಂತಹ ಸತ್ಪುತ್ರನನ್ನು ಗುರುಕುಲಾವಾಸಕ್ಕೆ ಸೇರಿಸುವುದು ಯೋಗ್ಯವೆಂದುಕೊಂಡು ಅಥಣಿಗೆ ಕರೆದುಕೊಂಡು ಬಂದರು. ಆಗ ಗಚ್ಚಿನ ಮಠದಲ್ಲಿ ಕನ್ನಡ-ಸಂಸ್ಕೃತ ಪಾಠಶಾಲೆ ಇದ್ದಿತು. ಅಲ್ಲಿನ ಗುರುಕುಲ ಪಾಠಶಾಲೆಗೆ ಸೇರಿಸಿದರು. ಶ್ರೀಗಳು ಅಲ್ಲಿ ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಪ್ರಾವಿಣ್ಯ ಪಡೆಯುವುದರೊಂದಿಗೆ ಯೋಗ ಸಾಧನೆಯನ್ನೂ ಮೈಗೂಡಿಸಿದರು. ಮುಂದೆ ಬಾಗಿಲುಕೋಟೆಯ ವೈರಾಗ್ಯ ಮಲ್ಲಣಾರ್ಯರ ಪಾಠಶಾಲೆಗೆ ಸೇರಿ ಅಲ್ಲೂ ವಿದ್ಯಾವಂತರಲ್ಲಿ ಅಗ್ರಗಣ್ಯರೆನಿಸಿದರು. ಅಲ್ಲಿಂದ ಹೆಚ್ಚಿನ ವ್ಯಾಸಂಗಕ್ಕಾಗಿ ಕಾಶಿಕ್ಷೇತ್ರಕ್ಕೆ ತೆರಳಿ ಜಂಗಮವಾಡಿ ಮಠದಲ್ಲಿದ್ದುಕೊಂಡು ಸಾಂಖ್ಯ, ನ್ಯಾಯ ಮುಂತಾದ ಶಾಸ್ತ್ರಗಳಲ್ಲಿ ಪಾರಂಗತರಾದರು. ಅದಾಗಲೇ ಅವರು ಬಸವಾದಿ ಶರಣರ ತತ್ವಗಳನ್ನೆಲ್ಲ ಓದಿ ಅರಗಿಸಿಕೊಂಡು ಒಪ್ಪಿ, ಅಪ್ಪಿಕೊಂಡರು. ಶಿವಯೋಗವನ್ನು ಕರತಲಾಮಲಕವನ್ನಾಗಿಸಿಕೊಂಡರು. ಅಲ್ಲಿಂದ ಅಥಣಿಗೆ ಬಂದು ಯೋಗಸಾಧನೆಯಲ್ಲಿ ನಿರತರಾಗಿದ್ದುಕೊಂಡು ಬಿಟ್ಟರು. ತಮ್ಮ ಹುಟ್ಟೂರಿಗೆ ಹೋಗಲೇ ಇಲ್ಲ. ಮೋಟಗಿ ಮಠದಲ್ಲಿದ್ದುಕೊಂಡು ಶಿವಯೋಗ ಸಾಧನೆಯಲ್ಲಿ ಮುಂದುವರಿಯತೊಡಗಿದರು. ತ್ರಿಕಾಲ ಲಿಂಗಪೂಜೆ, ಶರಣರ ವಚನ ಪಾರಾಯಣ ಮಾಡುತ್ತ, ಹಿರಿಯರಾದ ಮೋಟಗಿಮಠದ ಶ್ರೀ ಮುರುಘೇಂದ್ರ ಸ್ವಾಮಿಗಳ ಹಾಗೂ ಗಚ್ಚಿನಮಠದ ಶ್ರೀ ಶಿವಯೋಗಿಗಳ ಸೇವೆಯನ್ನು ಮನಃಪೂರ್ವಕ ಮಾಡುತ್ತಿದ್ದರು. ಶಿವಯೋಗಿಗಳ ಸನ್ನಿಧಿಯಲ್ಲಿ ಈ ಪರಿ ಅಧ್ಯಾತ್ಮ ಮಾರ್ಗದಲ್ಲಿ ಸಾಗುತ್ತಿದ್ದ ತಮ್ಮ ಮಗನನ್ನು ಕಂಡ ಜನನಿ-ಜನಕರು ಈತ ಸಂಸಾರಿಯಾಗತಕ್ಕವನಲ್ಲವೆಂದು ಮನಗಂಡು ಶಿವಯೋಗಿಗಳ ಅಪ್ಪಣೆ ಪಡೆದು ಮರಿದೇವರನ್ನಾಗಿಸಿ ಮಠಕ್ಕೊಪ್ಪಿಸಿದರು. ವಯದಲ್ಲಿ ಚಿಕ್ಕವರಾದರೂ ಗುರುಸೇವೆಯ ಪ್ರವೃತ್ತಿ ಲಿಂಗಪೂಜೆಯಲ್ಲಿನ ಮಹಾಸಾಧನೆ ಕಂಡ ಶಿವಯೋಗಿಗಳು ಇವರಿಗೆ ' ಮಹಾಂತ ಸ್ವಾಮಿ ' ಎಂದು ಹೆಸರಿಟ್ಟು ಕರೆದು ಆಶೀರ್ವದಿಸಿದರು.

ಶ್ರೀ ಶಿವಯೋಗಿಗಳ ಆಶೀರ್ವಾದ ಪಡೆದ ಮಹಾಂತ ಸ್ವಾಮಿಗಳು ತಮ್ಮ ಶಿವಯೋಗ ಸಾಧನೆಯನ್ನು ಮಾರ್ಗದರ್ಶನದಲ್ಲೇ ಮುಂದುವರೆಸಿದರು. ಅಷ್ಟಾವರಣಗಳನ್ನೇ ಅಂಗವನ್ನಾಗಿಸಿ, ಪಂಚಾಚಾರಗಳನ್ನೇ ಪ್ರಾಣವನ್ನಾಗಿಸಿಕೊಂಡು ಅದರಲ್ಲೂ ಪಂಚಾಚಾರದ ಪ್ರಥಮಾಚಾರವಾದ ಲಿಂಗಾಚಾರವನ್ನು ಬಹುವಾಗಿ ಮೆಚ್ಚಿಕೊಂಡು ಅಚ್ಚ ಶರಣರ ಮಾರ್ಗದಲ್ಲಿ ನಿಚ್ಚಳವಾಗಿ ಮುನ್ನಡೆದರು. ತ್ರಿಕಾಲ ಸ್ನಾನ,

ಲಿಂಗಾರ್ಚನೆ, ಶರಣರ ವಚನಗಳ ಅಧ್ಯಯನ, ಅನುಸರಣೆ ಇಂತಪ್ಪ ಪರಿಶುದ್ಧ ಮಾರ್ಗದಲ್ಲಿ ಮುನ್ನಡೆದ ಮಹಾಂತ ಸ್ವಾಮಿಗಳು ಮಹಾಂತ - ಮಹಾತ್ಮರಾದರು. ಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಅದರಲ್ಲಿಯೇ ಲೀನವಾದ ಮನೋವೃತ್ತಿಯುಳ್ಳವರಾಗಿ ಬಾಹ್ಯಕ್ರಿಯೆಗಳ ಪೇಚಾಟದಲ್ಲಿ ಸಿಲುಕದೆ ಲಿಂಗಾಂಗ ಸಾಮರಸ್ಯದಲ್ಲಿ ಒಡನಾಡುತ್ತಿದ್ದರು. ಕಾಮ-ಕ್ರೋಧಾದಿ ಅರಿಷಡ್ವರ್ಗವನ್ನು ಧ್ವಂಸಮಾಡಿ ಮಾಯೆ ಎಂಬ ಹಗ್ಗ ಹರಿದು ಶಮ-ದಮ-ತಿತಿಕ್ಷೆ-ಉಪರತಿ ಎಂಬ ಸೋಪಾನಗಳಿಂದ ವೈರಾಗ್ಯ ಎಂಬ ಪರ್ವತವನ್ನು ಹತ್ತಿ ಅಲ್ಲಿ ಸುಜ್ಞಾನವೆಂಬ ದಿವ್ಯರತ್ನವನ್ನು ಹುಡುಕಿ ಪಡೆದು ತಮ್ಮ ಹೃದಯವೆಂಬ ಅಭೇದ್ಯವಾದ ಪೆಟ್ಟಿಗೆಯಲ್ಲಿಟ್ಟು ಅದರ ಬೆಳಕಿನಿಂದಲೇ ಪರವಸ್ತುವನ್ನು ಚೆನ್ನಾಗಿ ಗ್ರಹಿಸಿ ಅದರಲ್ಲಿ ಸಮರಸ ಹೊಂದಿ ಆನಂದಪರವಶರಾಗಿದ್ದರು. ಈ ರೀತಿ ಶಿವಯೋಗ ಸಾಧಿಸಿದ ಅವರ ಸಾಧನೆ ಎಷ್ಟಿತ್ತೆಂದರೆ ಅವರು ನೆಲದಿಂದ ಒಂದು ಫೂಟು ಅಂತರದಲ್ಲಿ ಕುಳಿತು ಲಿಂಗಪೂಜಾಲೋಲರಾಗುತ್ತಿದ್ದರು. ಒಟ್ಟಿನಲ್ಲಿ ಶಿವಭಕ್ತಿ, ಶಿವಾರ್ಚನ, ಶಿವವ್ರತ, ಶಿವಧ್ಯಾನ, ಶಿವಜ್ಞಾನ ಎಂಬೀ ಪಂಚ ಶಿವಯೋಗಗಳ ಸಿದ್ಧಿಯನ್ನು ಸಾಧಿಸಿದ್ದರು.

" ಗುರು ಆದರೂ ಕಾಯಕ ಮಾಡಬೇಕು " ಎಂಬ ಶರಣ ವಾಣಿಯನ್ನು ಅಕ್ಷರಶಃ ಸ್ವಾಮಿಗಳು ಪಾಲಿಸುತ್ತಿದ್ದರು. ಗುರುವಿನ ಕಾಯಕ ಎಂದರೆ ಅಧ್ಯಯನ-ಅಧ್ಯಾಪನ, ಸತತ ಶರಣರ ವಚನ ಅಧ್ಯಯನ, ಶಾಸ್ತ್ರಾಧ್ಯಾಯನ ಮಾಡುತ್ತ ಜಿಜ್ಞಾಸು ಭಕ್ತರನೇಕರಿಗೆ ಧರ್ಮದ ನಿಜಾಚರಣೆಯನ್ನು, ವಚನ ಶಾಸ್ತ್ರದ ಅರ್ಥವನ್ನು ತಿಳಿಸಿಹೇಳುತ್ತಿದ್ದರು. ಇಂತಹ ಭಕ್ತ ಜಿಜ್ಞಾಸಿಗರಲ್ಲಿ ಸಂಗಯ್ಯ ಅವಟಿಮಠರವರು ಒಬ್ಬರು. ಈ ರೀತಿ ಶರಣ ಪಥ ಪಥಿಕರಾಗಿ, ಭಕ್ತೋದ್ಧಾರ ಗೈಯ್ಯುತ್ತ ನಿಜವಿರಕ್ತ ಸ್ವಾಮಿಗಳೆನಿಸಿದರು. ಮಹಾಂತ ಸ್ವಾಮಿಗಳು.

ಹೀಗಿರುತ್ತಿರುವಾಗ ಶ್ರೀ ಮಹಾಂತಸ್ವಾಮಿಗಳ ಭಕ್ತಿ ಪರೀಕ್ಷೆ ಗೋಸುಗ ಏನೋ ಅವರಿಗೆ ಗಲಬಾವು (ಮಂಗನ ಬಾವು) ರೋಗ ಕಾಣಿಸಿಕೊಂಡಿತು. ಶ್ರೀಗಳು ಸಾಕಷ್ಟು ವೇದನೆಗೊಳಗಾದರೂ ಬಸವ ಬಸವಾ ಎನ್ನುತ್ತ ಶಿವನಾಮ ಸ್ಮರಣೆಗೈಯ್ಯುತ್ತ ಅದನ್ನು ಸೈರಿಸಿಕೊಳ್ಳುತ್ತಿದ್ದರು. ಸಾಕಷ್ಟು ಜ್ವರಗಳಿದ್ದಾಗಲೂ ತ್ರಿಕಾಲ ಸ್ನಾನ, ಲಿಂಗಾರ್ಚನೆ ನಿಯಮಗಳನ್ನು ಒಳ್ಳೆ ನಿಷ್ಠೆಯಿಂದಲೇ ಮಾಡುತ್ತಿದ್ದರು. ಆ ಸಮಯದಲ್ಲಿ ಅಥಣಿಯ ಸುಪ್ರಸಿದ್ಧ ಡಾಕ್ಟರರೂ, ಸ್ವಾತಂತ್ರ್ಯ ಹೋರಾಟಗಾರರೂ, ಶಾಂತರೂ ಭಕ್ತಿ ನಿಷ್ಠರೂ ಆದ ಬಾಳಬಾ ಅವರು ಶ್ರೀಗಳ ಆರೋಗ್ಯ ತಪಾಸಿಸಿ ಸ್ನಾನ ಮಾಡದಿರಲು ತಿಳಿಸಿದರು. ಆಗ ಶ್ರೀಗಳು ಸ್ನಾನವೇ ಇಲ್ಲವೆಂದ ಮೇಲೆ ಲಿಂಗಾರ್ಚನೆ ಹೇಗೆಂದು ಚಿಂತಿಸುತ್ತ ಹಾಗೆ ಪವಡಿಸಿದರು. ಸ್ನಾನ, ಲಿಂಗಾರ್ಚನೆ ಇಲ್ಲವೆಂದ ಮೇಲೆ ಪ್ರಸಾದ ಹೇಗೆ ? ಶ್ರೀಗಳು ಪೂರ್ತಿ ಹಾಗೇ ಇದ್ದರು. ಮರುದಿನ ಈ ವಿಷಯ ತಿಳಿದ ಡಾಕ್ಟರರು ದಿಗ್ಭ್ರಾಂತರಾಗಿ, ಅಂಜಿ ಸ್ನಾನಮಾಡಲು ತಿಳಿಸಿದರು. ಸ್ವಾಮಿಗಳು ಆಗ ಸ್ನಾನ ಮಾಡಿ ಶಿವಾರ್ಚನೆಗೈದಾದ ಮೇಲೆಯೇ ಪ್ರಸಾದ ಸ್ವೀಕರಿಸಿದರು. ಮತ್ತೆ ಯಥಾಪ್ರಕಾರ ತ್ರಿಕಾಲ ಸ್ನಾನ, ಲಿಂಗಾರ್ಚನೆ ಯಾವ ನಿಯಮವೂ ತಪ್ಪದೆ ಶ್ರೀಗಳು ನೆರವೇರಿಸಹತ್ತಿದರು. ಡಾಕ್ಟರರ ಹೇಳಿಕೆಯ

ಯಾವ ಔಷಧಿಯನ್ನೂ ತೆಗೆದುಕೊಳ್ಳಲಿಲ್ಲ. ಶಿವನಾಜ್ಞೆ ಇದ್ದಂತಾಗಲಿ ಎಂದು ಸುಮ್ಮನೆ ನಿಯಮಾಚಾರ ಬಿಡದೆ ನಡೆಸುತ್ತಲಿದ್ದರು. ಯಾರು ಎಷ್ಟೇ ಹೇಳಿದರೂ ಅವರೆಲ್ಲರಿಗೆ " ಲಿಂಗವೇ ತನ್ನಿಚ್ಛೆಯಿಂದ ಲಿಂಗರೂಪವನ್ನು ಧರಿಸಿ ಲಿಂಗ-ಸಂಗಿಯಾಗಿ ಕೆಲಕಾಲವಿದ್ದು ಸಾಕೆನಿಸಿದಾಗ ಪುನಃ ಲಿಂಗವೇ ಆಗುವುದು ಇದೇ ಲಿಂಗಾಂಗ ಸಾಮರಸ್ಯ" ಎಂದು ಅಪ್ಪಣೆ ಕೊಡಿಸುತ್ತಿದ್ದರು. ಈ ರೀತಿ ನಡೆಯುತ್ತಿರಲು ಶಾಲಿವಾಹನ ಶಕೆ ೧೮೪೫ ನೆಯ ಆಶ್ವೀನ ಶುದ್ಧ (೧೯೨೩) ದಿನ ಮುಂಜಾನೆ ಸ್ನಾನ ತೀರಿಸಿ ಲಿಂಗಾರ್ಚನೆ ನೆರವೇರಿಸುತ್ತ, ಲಿಂಗನಿರೀಕ್ಷಿಸುತ್ತ, ಶಿವ-ಶಿವಾ, ಬಸವಾ-ಬಸವಾ ಎನ್ನುತ್ತಾ ಲಿಂಗದಲ್ಲಿ ಬೆರೆತರು; ಲಿಂಗೈಕ್ಯರಾದರು. ಆಗ ಸರ್ವ ಭಕ್ತ-ಮಾಹೇಶ್ವರರು ' ಜಯ ನಮಃ ಪಾರ್ವತಿ ಪತಿ ಹರ-ಹರ-ಮಹಾದೇವ ' ಎಂದು ಜಯಘೋಷ ಮಾಡಿದರು.

ಶ್ರೀಗಳಿಗೆ ಆಗ ಕೇವಲ ೨೮ ವಯಸ್ಸು. ಹನ್ನೆರಡನೆಯ ಶತಮಾನದಲ್ಲಿ ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದ ಶಿವ-ಶರಣೆಯರು ಕಿರಿವಯದಲ್ಲೆ ಹಿರಿದಾದ ಶಿವಯೋಗ ಸಾಧಿಸಿ ಹಿರಿಯರಾದಂತೆ, ಶ್ರೀಗಳು ಹಿರಿದಾದ ಶಿವಯೋಗ ಸಾಧಿಸಿ ಹಿರಿಯರಾದರು; ಜಗತ್ಪೂಜ್ಯರಾದರು, ಆ ಪಂಕ್ತಿಯಲ್ಲೆ ಒಂದಾದರು. ಅಥಣಿಯ ಶಿವಯೋಗಿಗಳವರಂತೆ ಶ್ರೀಗಳು ಆಚಾರ ಹಾಗೂ ಧರ್ಮನಿಷ್ಠರು. ಶಿವಾರ್ಚನೆ, ಶಿವಮಂತ್ರಜಪ, ಶಿವಜ್ಞಾನ, ವೈರಾಗ್ಯ ವೈಭವದಿಂದ ಹೊಳೆಯುತ್ತಿದ್ದ ಶ್ರೀಗಳು ತಮ್ಮನ್ನು ಆಶ್ರಯಿಸಿದವರಿಗೆ, ಭಕ್ತಿಯಿಂದ ನಡೆದುಕೊಳ್ಳುವವರಿಗೆ ಇಷ್ಟಾರ್ಥಗಳನ್ನು ಆಶೀರ್ವದಿಸಿದರು.

ಪೂಜ್ಯರ ಚರಿತ್ರೆಯು ಇದುವರೆಗೂ ಪ್ರಕಟವಾಗಿಲ್ಲ. ಪೂಜ್ಯ ಶ್ರೀ ಚನ್ನಬಸವ ದೇವರ ಅಪ್ಪಣೆಯಂತೆ ಹಾಗೂ " ಮಹಾತ್ಮರಂ ನೆನೆವುದೆ ಘನ ಮುಕ್ತಿಪದಂ " ಎಂದು ಮೊಗ್ಗೆಯ ಮಾಯಿದೇವರು ಬರೆದಂತೆ ಪೂಜ್ಯರನ್ನು ಕೆಲಮಟ್ಟಿಗೆ ಸ್ಮರಿಸುವ ಭಾಗ್ಯ ನನ್ನದಾಗಿದೆ. " ಕೆಲವಂ ಸಜ್ಜನ ಸಂಗದಿಂದಲರಿಯಲ್...." ಎಂದು ಪುಲಿಗೆರೆ ಸೋಮ ಕವಿಯ ವಾಣಿಯಂತೆ ಅವರನ್ನು ಪ್ರತ್ಯಕ್ಷ ಕಂಡ, ಅವರ ಪುಣ್ಯಾಚರಣೆ ಕಂಡು ಧನ್ಯರಾದ ಪುಣ್ಯಾತ್ಮರ ನುಡಿಗಳನ್ನು ಸಂಗ್ರಹಿಸಿಡುವ ಸಾಹಸಕ್ಕೆ ಕೈ ಹಾಕಿರುವೆ. ಅವರ ಪರಿಪೂರ್ಣತೆಯ ಜೀವನದ ಬೃಹದ್ದರ್ಶನ ಆಗಲು ಸದ್‌ಭಕ್ತಿಯಿಂದ ಹೃದಯದಲ್ಲಿ ದರ್ಶಿಸಬೇಕು.

■■

ಮೌನಮುನಿ ಶ್ರೀ ಮರುಳಶಂಕರದೇವರು

● ಮಹಾಂತೇಶ ಉಕ್ಕಲಿ

ಅಥಣಿಯ ಮುಗ್ಧ ಮಹಾಚೇತನ ಶ್ರೀ ಮರುಳಶಂಕರದೇವರು ಶ್ರೀ ಮುರುಘೇಂದ್ರ ಶಿವಯೋಗಿಗಳ ತಪೋವನದಲ್ಲಿ ಬೆಳೆದ ಬಿಲ್ವವೃಕ್ಷ. ಮೌನ ಮುನಿ ಶ್ರೀ ಮರುಳಶಂಕರ ದೇವರುಗಳವರ ಪೂರ್ವಜರು ಮೂಲತಃ ರಾಯಬಾಗ ತಾಲೂಕಿನ ಇಟ್ನಾಳ ಗ್ರಾಮದವರು. ತಂದೆ ಕಾಡಯ್ಯ; ತಾಯಿ ಮುರುಗೆಮ್ಮ. ಇವರ ಐದನೆಯ ಶಿಶುವಾಗಿ ಶ್ರೀ ಮರುಳಶಂಕರ ದೇವರುಗಳವರು ಸುಮಾರಾಗಿ ಕ್ರಿ. ಶ. ೧೯೧೩ ಶ್ರಾವಣ ಶುದ್ಧ ತ್ರಯೋದಶಿಯಂದು ಜನಿಸಿದರು.

ಶ್ರೀ ಕ್ಷೇತ್ರ ಅಥಣಿ ಗಚ್ಚಿನಮಠದ ಮುರುಘೇಂದ್ರ ಶಿವಯೋಗಿಗಳಿಗೂ ಹಾಗೂ ಕಾಡಯ್ಯನವರಿಗೂ ನಿಕಟ ಸಂಬಂಧವಿತ್ತು. ಕಾಡಯ್ಯನವರು ಶ್ರೀ ಶಿವಯೋಗಿಗಳ ಅಂತರ್ಯವನ್ನು ಅವರ ದಿವ್ಯ ವ್ಯಕ್ತಿತ್ವವನ್ನು ಬಲ್ಲಿದವರಾಗಿ ಅವರ ಮೇಲೆ ತುಂಬಾ ಶ್ರದ್ಧೆ ಇಟ್ಟಿದ್ದರು. ಸದಾಕಾಲವು ಶಿವನ ಧ್ಯಾನದಲ್ಲಿರುವ ಶ್ರೀ ಶಿವಯೋಗಿಗಳಿಗೆ ತಮಗೆ ಜನಿಸಿದ ಐದನೆಯ ಶಿಶುವಿನ ಜನನ ತಿಳಿಸಿ, ತಮ್ಮ ಶಿಶು ಉಜ್ವಲವಾಗಿ ಬೆಳೆಯಬೇಕೆಂಬ ಹಿರಿದಾಸೆಯಿಂದ ಅವರಿಂದಲೇ ' ಮರುಳಶಂಕರ 'ರೆಂದು ನಾಮಕರಣ ಮಾಡಿಸಿದರು. (ಮರುಳಶಂಕರ ಎಂಬುದು ಶಿವಯೋಗಿಗಳ ಗುರುಗಳ ಹೆಸರು.)

ಕಾಡಯ್ಯನವರು ತಮ್ಮ ಶಿಶು ಹೆಮ್ಮರವಾಗಿ ಬೆಳೆದು ಸಮಾಜೋದ್ಧಾರ ಮಾಡಬೇಕೆಂದು ಬಗೆದರೆ ವಿಧಿ ಮತ್ತೊಂದು ಬಗೆದಿತ್ತು. ಮರುಳಶಂಕರ ಒಂದು ವರ್ಷದ ಶೈಶವಾವಸ್ಥೆಯಲ್ಲಿಯೇ ಡೋಗಿ ಹುಣ್ಣಿನ ರೋಗದಿಂದ ಬಳಲಿದ. ಚಿಕ್ಕ ಶಿಶುವಿನ ತಲೆಯ ಮೇಲೆ ಮಾಯವಾಗಲಾರದ ಚಿಕ್ಕ ಚಿಕ್ಕ ಗಾಯಗಳು ಉಂಟಾಗಿ ಶಿಶು ಅರೆಪ್ರಜ್ಞಾವಸ್ಥೆಯಲ್ಲಿಯೇ ಉಳಿಯಿತು, ವಿವಿಧ ರೀತಿಯ ಔಷಧೋಪಚಾರ ಮಾಡಿದರು. ಮಗು ಗುಣಮುಖವಾಗಲಿಲ್ಲ. ದೇಹವು ಅಲುಗಾಡದಾಯಿತು. ಆ ದಿನ ಮುಂಜಾವು ಕಾಡಯ್ಯನವರು ಏನೂ ತೋಚದಂತಾಗಿ ಶಿಶು ಸಮೇತರಾಗಿ ಶ್ರೀ ಶಿವಯೋಗಿಗಳ ದರ್ಶನಕ್ಕೆ ಬಂದರು. ಆಗತಾನೆ ತಮ್ಮ ಇಷ್ಟಲಿಂಗಾರ್ಚನೆಯನ್ನು ಮುಗಿಸಿಕೊಂಡು ತಮ್ಮ ಯೋಗಮಂಟಪದಿಂದ ಹೊರಬಂದಾಗ ಕಾಡಯ್ಯನವರನ್ನು

ಕಂಡರು. ಕಾಡಯ್ಯನವರು ತಮ್ಮ ರೋಗಗ್ರಸ್ಥ ಶಿಶುವಿನ ಕುರಿತು ಶಿವಯೋಗಿಗಳ ಹತ್ತಿರ ದುಃಖ ತೋಡಿಕೊಂಡರು. ಎಲ್ಲವು ಶಿವನ ಇಚ್ಛೆಯೆನ್ನುತ್ತಾ ಶಿವಯೋಗಿಗಳು ಕಾಡಯ್ಯನವರ ಕೈಯಲ್ಲಿರುವ ಶಿಶುವನ್ನು ಕಂಡು ಆ ಶಿಶುವಿಗೆ ವಿಭೂತಿ ಹಚ್ಚಿ, ಪಾದೋದಕ ಬಾಯಿಯಲ್ಲಿ ಹಾಕಿ ಮೈಮೇಲೆ ಸಿಂಪಡಿಸಿದರು. " ನೀನೊಲಿದರೆ ಕೊರಡು ಕೊನರುವದಯ್ಯ, ನೀನೊಲಿದರೆ ಬರಡು ಹಯನವುದಯ್ಯಾ, ನೀನೊಲಿದರೆ ವಿಷವು ಅಮೃತವಹುದಯ್ಯಾ" ಎನ್ನುವಂತೆ ಶಿವಯೋಗಿಗಳ ಸ್ಪರ್ಶದಿಂದ, ಆ ಶಿವನ ಓಲುಮೆಯಿಂದ ಆ ಶಿಶುವಿನಲ್ಲಿ ಚೈತನ್ಯ ತುಂಬಿತು. ಕಾಡಯ್ಯನವರು ಮತ್ತು ಸದ್ಭಕ್ತರು ಶ್ರೀ ಶಿವಯೋಗಿಗಳವರ ತಪಃಶಕ್ತಿಯನ್ನು ಕಂಡು ನಿಬ್ಬೆರಗಾಗಿದ್ದರು.

ಮಹಾತ್ಮರಾದ ಶ್ರೀ ಶಿವಯೋಗಿಗಳವರ ಕೃಪಾದೃಷ್ಟಿಯಿಂದ ಪುನರ್ಜನ್ಮವನ್ನು ಪಡೆದ ಶ್ರೀ ಮರುಳಶಂಕರ ದೇವರು ತಮ್ಮ ತಾಯಿ ಮುರುಗೆಮ್ಮನವರ ವಾತ್ಸಲ್ಯದ ಅಡಿಯಲ್ಲಿ ಬೆಳೆದರು. ತಮ್ಮ ಶೈಶವಾವಸ್ಥೆಯನ್ನು ಮುಗಿಸಿ ಬಾಲ್ಯಾವಸ್ಥೆಗೆ ಕಾಲಿರಿಸಿದಾಗ ಕಾಡಯ್ಯನವರು ತಮ್ಮ ಮಗ ಮರುಳಶಂಕರನನ್ನು ಶ್ರೀ ಮುರುಘೇಂದ್ರ ಶಿವಯೋಗಿಗಳವರ ಪಾದಕ್ಕೆ ಅರ್ಪಿಸಿದರು. ಅಂದಿನಿಂದಲೇ ಮರುಳಶಂಕರ ದೇವರುರವರ ಇರುವಿಕೆ ಶ್ರೀಗಚ್ಚಿನಮಠವಾಯಿತು. ಶ್ರೀ ಮುರುಘೇಂದ್ರ ಶಿವಯೋಗಿಗಳವರು ಲಿಂಗೈಕ್ಯರಾದ ಕಾಲದಿಂದ ಇಂದಿನವರೆಗೆ ಹೊತ್ತು ಹೋಗದ ಮುನ್ನವೇ ಗದ್ದುಗೆಯ ಪೂಜೆ ದಿನನಿತ್ಯ ಮಾಡುತ್ತಾರೆ. ಇದೇ ಅವರ ಜೀವಾಳವಾಗಿದೆ. ಇಷ್ಟೆ ಅಲ್ಲದೆ ಚಿಕ್ಕವಯಸ್ಸಿನಲ್ಲಿ ಅಥಣಿಯಿಂದ ಹತ್ತು ಕಿಲೋಮೀಟರ ದೂರದಲ್ಲಿರುವ ಕೃಷ್ಣಾನದಿಯ ಜಲವನ್ನು ಪ್ರತಿದಿನ ತಪ್ಪದೇ ಓಡುತ್ತಾ ಹೋಗಿ ತಂದು ಪೂಜಿಸುತ್ತಿದ್ದರೆಂದು ಇಂದಿಗೂ ಅಥಣಿಯ ಹಿರಿಯರು ಹೇಳುತ್ತಾರೆ. ಹೀಗೆ ಶ್ರೀ ಮರುಳ ಶಂಕರದೇವರು ಅವರು ಶ್ರೀ ಶಿವಯೋಗಿಗಳನ್ನು ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯಾ ಎಂದು ಅವರ ಪಾದಸೇವೆಯಲ್ಲಿ ಇರುತ್ತಾರೆ.

ಶ್ರೀ ಮರುಳಶಂಕರ ದೇವರು ಸಮಾಜಕ್ಕೆ ಭಕ್ತರ ಸೊತ್ತಾಗಿ ಅರ್ಪಿತವಾದ ಕಾರಣ ಅವರನ್ನು ಇದೇ ಶ್ರೀ ಗಚ್ಚಿನಮಠಕ್ಕೆ ಇಲ್ಲವೇ ಯಾವುದಾದರೂ ಮಠಕ್ಕೆ ಪೀಠಾಧಿಪತಿಯನ್ನಾಗಿ ಮಾಡಬೇಕೆಂದು ಶ್ರೀ ಗಚ್ಚಿನಮಠದ ಹಿಂದಿನ ಮಠಾಧಿಪತಿಗಳಾದ ಲಿಂಗೈಕ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಸಂಕಲ್ಪವಾಗಿತ್ತು. ಆದರೆ ದಯವಿರಬೇಕು ಸಕಲ ಪ್ರಾಣಿಗಳಲ್ಲಿ, ದಯವೇ ಧರ್ಮದ ಮೂಲ ಎಂಬುದ ಅರಿತು ಇವರು ಚಿಕ್ಕವಯಸ್ಸಿನಿಂದಲೂ ಹಾವುಗಳ ಜೊತೆಗೆ ಸರಸವಾಡುವುದು, ಮೊಲ ನವಿಲುಗಳನ್ನು ಸಾಕುವುದು, ಕುದುರೆ ದನಕರುಗಳಿಗೆ ಹುಲ್ಲು ತಿನ್ನಿಸುವುದು ಇವರ ಗುಣ. ಭಕ್ತರೊಬ್ಬರು ಶ್ರೀ ಗಚ್ಚಿನಮಠದಲ್ಲಿ ಕುದುರೆ ಕಟ್ಟಿದಾಗ ಪ್ರೀತಿಯಿಂದ ಕಡಲೆ ಕಾಳುಗಳನ್ನು ತಿನ್ನಿಸುತ್ತಿದ್ದರು. ಅವರ ಕೈಬೆರಳನ್ನೊಂದು ಕುದುರೆ ಕಚ್ಚಿತು, ಬೆರಳು ಕತ್ತರಿಸಿತು, ನೋವಾಯಿತು. ಆದರೆ ಅದನ್ನು ಸಹಿಸಿಕೊಂಡರು. ಆದರೆ ಅವಯವ ಭಿನ್ನವಾದ ವ್ಯಕ್ತಿ ಪೀಠಕ್ಕೆ ಅನರ್ಹನೆಂದು ಯಾವ ಮಠಾಧೀಶರು ಇವರನ್ನು

ಮಠಾಧಿಪತಿಯನ್ನಾಗಿ ಮಾಡಿಕೊಳ್ಳಲು ಮುಂದೆ ಬರಲಿಲ್ಲ. ಇವರಿಗೂ ಸಹಿತ ಶ್ರೀ ಶಿವಯೋಗಿಗಳ ಸೇವೆಯನ್ನು ಮಾಡಬೇಕೆಂಬ ಹೆಬ್ಬಯಕೆ. ಅಧಿಕಾರ, ಅಂತಸ್ತು ಒಲ್ಲದೆ ಶ್ರೀ ಗಚ್ಚಿನಮಠದಲ್ಲಿಯೇ ಉಳಿದರು. ಅವರು ಮನಸ್ಸು ಮಾಡಿದ್ದರೆ ಸಂಸಾರಿಗಳಾಗಬಹುದಿತ್ತು. " ಸಂಸಾರವೆಂಬ ಹೆಣ ಬಿದ್ದಿರಲು ತಿನ್ನಬಂದ ನಾಯಿ ಜಗಳವನ್ನು ಅರಿತವರು ". ಅವರು ಯಾವ ಪದವಿಯನ್ನು ಬಯಸಿದವರಲ್ಲ. ಬಸವಣ್ಣನವರು ನುಡಿದಂತೆ " ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ ಕೂಡಲಸಂಗಮದೇವ " ಎನ್ನುವಂತೆ ನಡೆಸಿಕೊಟ್ಟರು. ಇವತ್ತಿಗೂ ಸಹಿತ ಅನೇಕ ಭಕ್ತರು ನೀಡಿದ ಕಾಣಿಕೆಯನ್ನು ಅದು ಭಕ್ತರ ಸೊತ್ತು. ಭಕ್ತರಿಗೆ ಸಲ್ಲಬೇಕೆಂದು ದಾನ ಕೊಡುವುದುಂಟು.

ಈ ಮುಗ್ಧ ಮಹಾಚೇತನ ಶ್ರೀ ಮರುಳಶಂಕರದೇವರುರವರ ಕೃಪೆಗೆ ಪಾತ್ರರಾಗಲು ಬಹಳಷ್ಟು ಜನ ಹಾತೊರೆಯುತ್ತಾರೆ. ಅಥಣಿ ಹಾಗೂ ದೂರದ ಊರಿನ ಜನರು ಶ್ರೀ ಗಚ್ಚಿನ ಮಠಕ್ಕೆ ಬರುತ್ತಾರೆ. ತಮ್ಮ ನೋವು ನಲಿವುಗಳನ್ನು ತಮ್ಮ ವಿಚಾರಗಳನ್ನು ಅವರಿಗೆ ಹೇಳಿ ಅವರ ಒಳ್ಳೆಯ ನುಡಿಯಿಂದ ಕೃತಾರ್ಥರಾಗಲು ಬಯಸುತ್ತಾರೆ. ಅಥಣಿ ಪಟ್ಟಣದಲ್ಲಿಯಂತು ಜಾತಿ-ಮತ-ಪಂಥ, ಎಂಬ ಭೇದ-ಭಾವವಿಲ್ಲದೆ ಯಾವದೇ ಸಮಾಜದವರ, ಸಂಘದವರ, ಮಠದವರ ಕಾರ್ಯಕ್ರಮವಿದ್ದರೆ ಅಲ್ಲಿ ಶ್ರೀ ಮರುಳಶಂಕರ ದೇವರು ಇರಲೇಬೇಕು. ಅಂದಾಗ ಮಾತ್ರ ಆ ಕಾರ್ಯ ಪೂರ್ಣವಾದಂತೆ ಎಂಬುದು ಇಲ್ಲಿಯ ಜನರ ಭಾವನೆ.

ದರ್ಶನ

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-೧೯

ಅಥಣಿ ತಾಲೂಕು : ಕೃಷಿ ಮತ್ತು ವಾಣಿಜ್ಯ

• ಬಿ. ಎಂ. ಹಿರೇಮಠ

ಅಥಣಿ, ಪೂಜ್ಯಶ್ರೀ ಶಿವಯೋಗಿಗಳ ಪಾದಸ್ಪರ್ಶದಿಂದ ಪಾವನವಾದ ಪುಣ್ಯಕ್ಷೇತ್ರ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಕಂದಾಯ ಉಪವಿಭಾಗದಲ್ಲಿ ಬರುವ ಈ ತಾಲೂಕು ಒಟ್ಟು ೧೯೯೫.೭೩ ಚ. ಕಿ. ಮೀ. ವಿಸ್ತೀರ್ಣವನ್ನು ಹೊಂದಿದೆ. ಇದು ಒಟ್ಟು ೮೯ ಹಳ್ಳಿಗಳನ್ನು ಹಾಗೂ ೨೭ ಮಜರೆಗಳನ್ನು ಒಳಗೊಂಡಿದೆ.

ಕೃಷಿ, ಭಾರತೀಯ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿದೆ. ಅತ್ಯಂತ ತೀವ್ರ ಗತಿಯಲ್ಲಿ ಸಾಗಿರುವ ಕೈಗಾರೀಕರಣದ ಪ್ರಭಾವದ ಹೊರತಾಗಿಯೂ ಸ್ವಾತಂತ್ರ್ಯೋತ್ತರ ಅರ್ಧಶತಕದ ನಂತರವೂ ನಮ್ಮ ದೇಶದ ಅರ್ಥವ್ಯವಸ್ಥೆಯಲ್ಲಿ ಕೃಷಿಯು ತನ್ನ ಗೌರವಾನ್ವಿತ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ. ದೇಶದ ಒಟ್ಟಾರೆ ದುಡಿಯುವ ಜನಸಂಖ್ಯೆಯಲ್ಲಿ ಪ್ರತಿಶತ ೬೬ ಜನರಿಗೆ ಕೆಲಸ ಸಲ್ಲಿಸುವ ಹೆಗ್ಗಳಿಕೆ ಕೃಷಿ ಕ್ಷೇತ್ರಕ್ಕೆ ಸಲ್ಲುತ್ತದೆ. ದೇಶದಲ್ಲಿನ ಸಾವಿರಾರು ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತಿರುವ, ಅವುಗಳ ಉತ್ಪನ್ನಗಳನ್ನು ಬಳಸುತ್ತಿರುವ, ಸರಕು ಸಾರಿಗೆ ಕ್ಷೇತ್ರಕ್ಕೂ ಬೆನ್ನೆಲುಬಾಗಿ ನಿಂತಿರುವ ಕೃಷಿ ಕ್ಷೇತ್ರ ದೇಶದ ಆರ್ಥಿಕ ವ್ಯವಸ್ಥೆಯ ಜೀವನಾಡಿ ಎಂದರೆ ತಪ್ಪಾಗಲಾರದು.

ಅಥಣಿ ತಾಲೂಕಿನಲ್ಲಿ ಕೂಡ ಕೃಷಿಯೇ ಪ್ರಧಾನವಾದ ಉದ್ಯೋಗ. ವ್ಯಾಪಾರ, ಸರಕಾರಿ, ಅರೆಸರಕಾರಿ, ಖಾಸಗಿ ನೌಕರಿ, ಕೂಲಿ ಇವುಗಳನ್ನು ಹೊರತಾಗಿಸಿ ಉಳಿದವರಲ್ಲಿ ಹೆಚ್ಚಾಗಿ ಚರ್ಮಗಾರಿಕೆ, ಬಡಿಗತನ, ಕಮ್ಮಾರಿಕೆ, ಕುಂಬಾರಿಕೆ, ಹಗ್ಗತಯಾರಿಕೆ, ಬಟ್ಟೆ ಹೊಲಿಯುವಿಕೆ, ನೇಕಾರಿಕೆ, ಗೌಂಡಿ ಕೆಲಸ ಮುಂತಾಗಿ ಹತ್ತು ಹಲವಾರು ವಿವಿಧ ಕುಶಲ ಕರ್ಮಗಳಲ್ಲಿ ನಿರತರಾಗಿ ಜೀವನೋಪಾಯ ಕಂಡುಕೊಂಡಿದ್ದಾರೆ.

ಬೆಳಗಾವಿ ಜಿಲ್ಲೆಯ ಉತ್ತರ ಶುಷ್ಕವಲಯದಲ್ಲಿರುವ ಅಥಣಿ ತಾಲೂಕಿನ ದಕ್ಷಿಣಕ್ಕೆ ಪವಿತ್ರವಾದ ಕೃಷ್ಣಾನದಿ ಹರಿಯುತ್ತಿದೆ. ಹೀಗಾಗಿ ಅಲ್ಲಿನ ಭೂಮಿ ಫಲವತ್ತಾಗಿದೆ. ಪಶ್ಚಿಮ ಭಾಗದಲ್ಲಿ ಅತೀ ಫಲವತ್ತಾದ ಕಪ್ಪು ಭೂಮಿ ಇದೆ. ತಾಲೂಕಿನ ಬಹುಭಾಗ ಭೂಮಿ ಮಧ್ಯಮ ಕಪ್ಪು ಮಣ್ಣು ಹೊಂದಿದ್ದು, ಅದರಲ್ಲಿ ಪ್ರತಿಶತ ೫೦ ಭಾಗ ಜೇಡಿಯ ಪ್ರಮಾಣವಿದೆ.

ಅಥಣಿ ತಾಲೂಕಿನಲ್ಲಿ ಸಾಮಾನ್ಯವಾಗಿ ಬೀಳುವ ಮಳೆಯ ಪ್ರಮಾಣ ೫೭೭.೯ ಮಿ. ಮೀ. ಈ ತಾಲೂಕು ಮಿಶ್ರ ಹವಾಗುಣವನ್ನು ಹೊಂದಿದ್ದು, ನವ್ಹೆಂಬರ್‌ದಿಂದ ಮೇ ತಿಂಗಳವರೆಗೆ ಹೆಚ್ಚಾಗಿ ಒಣಹವೆ ಹಾಗೂ ಜೂನದಿಂದ ಅಕ್ಟೋಬರ್‌ವರೆಗೆ ಮೋಡ ಕವಿದ ತಂಪಾದ ವಾತಾವರಣವನ್ನು ಹೊಂದಿರುತ್ತದೆ. ತಾಲೂಕಿನಲ್ಲಿ ಒಟ್ಟಾರೆ ಮಳೆಯ ಪ್ರಮಾಣ ಅತೀ ಕಡಿಮೆ ಇರುವುದರಿಂದ ಈ ಪ್ರದೇಶವು ಸಾಕಷ್ಟು ಅಭಿವೃದ್ಧಿಗೊಂಡಿಲ್ಲ. ಆಗಾಗ ಕಾಡುವ ಬರಗಾಲವು ರೈತಸಮುದಾಯಕ್ಕೆ ಪ್ರತ್ಯಕ್ಷವಾಗಿಯೂ ವಾಣಿಜ್ಯ ಹಾಗೂ ಇತರೆಲ್ಲ ರಂಗಗಳಿಗೆ ಪರೋಕ್ಷವಾಗಿಯೂ ಬೆನ್ನಿಗಂಟಿದ ಶಾಪವಾಗಿದೆ ಎಂದರೆ ಅತೀಶಯೋಕ್ತಿಯಲ್ಲ.

ತಾಲೂಕಿನ ಒಟ್ಟಾರೆ ಕ್ಷೇತ್ರ ೧೯೯೫.೭೩ ಹೆಕ್ಟೇರ್‌ಗಳಾದರೆ ಅದರಲ್ಲಿ ಬಿತ್ತನೆಯಾಗುವ ಪ್ರದೇಶ ೧೮೬೬.೩೪ ಹೆಕ್ಟೇರ್‌ಗಳಷ್ಟು. ಸಾಗುವಳಿಗೆ ಲಭ್ಯವಿಲ್ಲದ ಹಾಗೂ ಸಾಗುವಳಿ ಮಾಡದ ಇತರ ಭೂಮಿಯನ್ನು ಬಿಟ್ಟರೆ ಉಳಿದ ೨೬೩.೨೮ ಹೆಕ್ಟೇರ್‌ಗಳಷ್ಟು ಭೂಮಿ ಬೀಳು ಭೂಮಿಯಾಗಿದೆ.

ಕೃಷ್ಣೆಯ ಕೃಪೆಯಿಂದ ತಾಲೂಕಿನ ದಕ್ಷಿಣ ಭಾಗ ನೀರಾವರಿ ಸೌಲಭ್ಯ ಹೊಂದಿದೆ. ತಾಲೂಕಿನಲ್ಲಿ ಸುಮಾರು ೬೪೦ ಹೆಕ್ಟೆರ್ ಭೂಮಿಗೆ ನೀರಾವರಿ ಸೌಲಭ್ಯವಿದೆ. ಇದರಲ್ಲಿ ೨೦೯.೦೫ ಹೆಕ್ಟೇರ್ ಭೂಮಿ ಬಾವಿಗಳಿಂದ, ೪೦.೨೦ ಹೆಕ್ಟೇರ್ ಭೂಮಿ ಕೊಳವೆ ಬಾವಿಗಳಿಂದ, ೩೨.೧೦ ಹೆಕ್ಟೇರ್ ಕಾಲುವೆಗಳಿಂದ, ೧೦.೮೫ ಹೆಕ್ಟೇರ್ ಕೆರೆಗಳಿಂದ ಹಾಗೂ ೩೪೭.೧೯ ಹೆಕ್ಟೇರ್ ಭೂಮಿ ಏತನೀರಾವರಿ ಸೇರಿದಂತೆ ಇತರೆ ಮೂಲಗಳಿಂದ ನೀರಾವರಿ ಸೌಲಭ್ಯವನ್ನು ಪಡೆದುಕೊಂಡಿದೆ.

ಗೋವಿನ ಜೋಳ, ಜೋಳ, ಗೋದಿ, ಸಜ್ಜೆ ತಾಲೂಕಿನ ಮುಖ್ಯ ಆಹಾರ ಬೆಳೆಗಳಾದರೆ, ಕಬ್ಬು, ಹತ್ತಿ, ಶೇಂಗಾ, ಕುಸುಬಿ, ಸೂರ್ಯಕಾಂತಿ, ಸೋಯಾಬಿನ್. ಮೆಣಸಿನಕಾಯಿ ಇವು ಮುಖ್ಯ ವಾಣಿಜ್ಯ ಬೆಳೆಗಳು. ಕಬ್ಬನ್ನು ಬೆಳೆಯುವ ಹಂಬಲ ಹಾಗೂ ಒತ್ತಡಗಳಿಂದಾಗಿ ಉಳಿದ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಕ್ಷೇತ್ರ ವರ್ಷದಿಂದ ವರ್ಷ ಕಡಿಮೆಯಾಗುತ್ತಲಿದೆ. ಇದು ಆಹಾರ ಬೆಳೆಗಳನ್ನು ಬೆಳೆಸುವುದರ ಮೇಲೂ ನೇತ್ಯಾತ್ಮಕ ಪರಿಣಾಮ ಬೀರುತ್ತಲಿದೆ. ಬಾಳೆಹಣ್ಣು, ಮಾವಿನಹಣ್ಣು, ದ್ರಾಕ್ಷಿ ಹಾಗೂ ದಾಳಿಂಬೆ ಇವು ತಾಲೂಕಿನ ಮುಖ್ಯ ಹಣ್ಣಿನ ಬೆಳೆಗಳಾಗಿವೆ. ಬಿತ್ತನೆಯಾದ ಪ್ರದೇಶ ಹಾಗೂ ಉತ್ಪಾದನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಆಹಾರ ಧಾನ್ಯಗಳಲ್ಲಿ ಜೋಳ, ವಾಣಿಜ್ಯ ಬೆಳೆಗಳಲ್ಲಿ ಕಬ್ಬು, ಎಣ್ಣೆ ಕಾಳುಗಳಲ್ಲಿ ಶೇಂಗಾ ಹಾಗೂ ದ್ವಿದಳ ಧಾನ್ಯಗಳಲ್ಲಿ ಕಡಲೆ ಪ್ರಥಮ ಸ್ಥಾನಗಳನ್ನು ಗಳಿಸುತ್ತವೆ. ಅದರಂತೆ ಹಣ್ಣುಗಳಲ್ಲಿ ದ್ರಾಕ್ಷಿ ಹಾಗೂ ಸಾಂಬಾರ ಪದಾರ್ಥಗಳಲ್ಲಿ ಮೆಣಸಿನಕಾಯಿ ಪ್ರಥಮ ಪ್ರಾಶಸ್ತ್ಯ ಹೊಂದಿವೆ.

ಆಹಾರ ಆಧಾರಿತ ಕೃಷಿಗಿಂತ ಇಂದು ವಾಣಿಜ್ಯ ಕೃಷಿಯತ್ತ ರೈತರ ಆಕರ್ಷಣೆ ಹೆಚ್ಚುತ್ತಿರುವದು ಸುಸ್ಪಷ್ಟವಾಗಿದೆ. ಪ್ರಮುಖ ಆಹಾರ ಬೆಳೆಯಾದ ಜೋಳದ (ಬಿತ್ತನೆಯ ಕ್ಷೇತ್ರ ೪೪೨.೫೧ ಹೆಕ್ಟೇರ್) ಸರಿಸಮನಾಗಿಯೇ ಬಂದು ನಿಲ್ಲುವಲ್ಲಿ

ಪ್ರಮುಖ ವಾಣಿಜ್ಯ ಬೆಳೆ ಕಬ್ಬು (ಬಿತ್ತನೆಯ ಕ್ಷೇತ್ರ ೩೦೧.೬೮ ಹೆಕ್ಟೇರ್) ಹಂತಹಂತವಾಗಿ ಸಫಲವಾಗುತ್ತಲಿದೆ. ಆದರೆ ಮಳೆಯ ತೀವ್ರಕೊರತೆ, ಚಿತ್ರವಿಚಿತ್ರ ರೋಗಗಳ ಬಾಧೆ, ಕೇಂದ್ರ ಸರಕಾರದ ವ್ಯಾಪಾರ ನೀತಿ ಇವುಗಳೆಲ್ಲ ತಾಲೂಕಿನ ಕಬ್ಬು ವ್ಯವಸಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿ ಕಬ್ಬು ಬೆಳೆಗಾರರನ್ನೂ ಜೊತೆ ಜೊತೆಗೇ ಸಕ್ಕರೆ ಕಾರಖಾನೆಗಳನ್ನೂ ಅತಂತ್ರ ಸ್ಥಿತಿಗೆ ನೂಕುತ್ತಲಿವೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಕಬ್ಬು ಬೆಳೆಯುವ ಈ ತಾಲೂಕಿನ ರೈತರು ಇಂದು ಮಳೆಯ ಕೊರತೆ, ಕೀಟ ಬಾಧೆಯಿಂದಾಗಿ ಕಡಿಮೆ ಇಳುವರಿಯನ್ನು ಪಡೆಯುವ ಪರಿಸ್ಥಿತಿ ಬಂದಿದೆ.

ಸದಾಕಾಲವೂ ಆರ್ಥಿಕ ಮುಗ್ಗಟ್ಟನ್ನು ಎದುರಿಸುವ ತಾಲೂಕಿನ ಬಹುತೇಕ ರೈತರಿಗೆ ಸಹಾಯ ಮಾಡಲೆಂದೇ ತಾಲೂಕಿನಲ್ಲಿ ೬೭ ವ್ಯವಸಾಯ ಸೇವಾ ಸಹಕಾರಿ ಸಂಘಗಳು ಹಾಗೂ ಒಂದು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಇವೆ. ಇವುಗಳ ಹೊರತಾಗಿ ವಾಣಿಜ್ಯ ಬ್ಯಾಂಕುಗಳು (೨೩), ಗ್ರಾಮೀಣ ಬ್ಯಾಂಕುಗಳು (೧೩), ಸಹಕಾರಿ ಬ್ಯಾಂಕುಗಳು (೧೦) ಹಾಗೂ ನೂರಾರು ಸಹಕಾರಿ ಸೊಸೈಟಿಗಳು ರೈತರಿಗೆ ಸಾಲ ಸೌಲಭ್ಯ ನೀಡುತ್ತಲಿವೆ. ಆದರೆ ಮಳೆಯ ಕೊರತೆ ಹಾಗೂ ಬೆಳೆಯ ವೈಫಲ್ಯಗಳಿಂದ ಹೆಚ್ಚಾನು ಹೆಚ್ಚು ರೈತರು ಪಡೆದುಕೊಂಡ ಸಾಲದ ಅಡಕೊತ್ತಿನಿಂದ ಹೊರಬರಲಾಗದೇ ಆರ್ಥಿಕವಾಗಿ ಶೋಚನೀಯ ಸ್ಥಿತಿಯಲ್ಲಿರುವದನ್ನು ಕಾಣಬಹುದು.

ವರ್ಷಗಟ್ಟಲೆ ಕಷ್ಟಪಟ್ಟು, ಬೆವರು ಹರಿಸಿ ದುಡಿದು ಬೆಳೆದ ಬೆಳೆ ಸಕಾಲದಲ್ಲಿ, ಸೂಕ್ತ ಬೆಲೆಗೆ ಮಾರಾಟವಾದಾಗಲೇ ರೈತರ ಬಾಳಿನಲ್ಲಿ ಆಶಾದೀಪ ಬೆಳಗುತ್ತದೆ. ರೈತರನ್ನು ಮಧ್ಯವರ್ತಿಗಳ, ವ್ಯಾಪಾರಿಗಳ ಕಪಿಮುಷ್ಟಿಯಿಂದ ತಪ್ಪಿಸಿ ಅವರಿಗೆ ಸೂಕ್ತ ಬೆಲೆ ದೊರಕಿಸಿಕೊಡುವ ಉದ್ದೇಶದಿಂದ ೧೯೪೮ರಲ್ಲಿಯೇ ಅಥಣಿಯಲ್ಲಿ ಕೃಷಿ ಹುಟ್ಟುವಳಿ ಮಾರಾಟ ಸಮಿತಿಯ ಮಾರುಕಟ್ಟೆ ಸ್ಥಾಪಿತವಾಗಿದೆ. ನಂತರ ಕಾಗವಾಡದಲ್ಲಿ ಉಪಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲಾಗಿದೆ. ಆದರೆ ಈ ನಿಯಂತ್ರಿತ ಮಾರುಕಟ್ಟೆಯ ಉಪಯೋಗವನ್ನು ರೈತರು ಸಂಪೂರ್ಣವಾಗಿ ಪಡೆಯದೆ ಇರುವುದು ದುರದೃಷ್ಟಕರ. ಇಲ್ಲಿನ ಮಾರುಕಟ್ಟೆ ಪ್ರಾಂಗಣಕ್ಕೆ ನಿಯಂತ್ರಿತ ಹುಟ್ಟುವಳಿಗಳ ಆವಕ ಅಲ್ಪ ಪ್ರಮಾಣದಲ್ಲಿ ಆಗುತ್ತದೆ. ೧೧೩ ಕೃಷಿ ಉತ್ಪನ್ನಗಳನ್ನು ಸರಕಾರವು ಮಾರಾಟ ನಿಯಂತ್ರಣ ಕಕ್ಷೆಯಲ್ಲಿ ತಂದಿದೆ. ಆದರೂ ಇಲ್ಲಿನ ಮಾರುಕಟ್ಟೆ ಪ್ರಾಂಗಣದಲ್ಲಿ ಕಾಣುವ ವ್ಯಾಪಾರಿ ಚಟುವಟಿಕೆ ನಿರುತ್ಸಾಹಕ.

ಅಥಣಿಯ ಮಾರುಕಟ್ಟೆ ಮೊದಲು ಪ್ರಮುಖ ಹತ್ತಿ ಮಾರುಕಟ್ಟೆಯಾಗಿತ್ತು. ಹತ್ತಿಯ ಜಿನ್ನಿಂಗ ಹಾಗೂ ಪ್ರೆಸ್ಸಿಂಗ್ ಕೂಡ ಅಥಣಿಯಲ್ಲಿಯೇ ನಡೆಯುತ್ತಿತ್ತು. ಆದರೆ ನೀರಾವರಿ ಸೌಲಭ್ಯದಿಂದಾಗಿ ರೈತರು ಹತ್ತಿಯನ್ನು ಬಿಟ್ಟು ಕಬ್ಬನ್ನು ಬೆಳೆಯತೊಡಗಿದ್ದರಿಂದ ಮಾರುಕಟ್ಟೆಗೆ ಹೆಚ್ಚಿನ ಹೊಡೆತ ಬಿದ್ದಂತಾಯಿತು. ಅದರೊಂದಿಗೆ ಹೆಚ್ಚಿದ ಸಾಗಾಣಿಕೆ ಸೌಲಭ್ಯ, ಮಹಾರಾಷ್ಟ್ರದಲ್ಲಿನ ಸಾಂಗಲಿ, ಜತ್ತ ಮುಂತಾದ ದೊಡ್ಡ ಮಾರುಕಟ್ಟೆಗಳ ಆಕರ್ಷಣೆ, ಅಲ್ಲಿ ಸಿಗುವ ಹೆಚ್ಚಿನ ಬೆಲೆ, ಶೀಘ್ರ ಹಣ ಸಂದಾಯ ಹಾಗೂ ಅಲ್ಲಿನ ಕಡಿಮೆ ಮಾರಾಟಕರ ಹಾಗೂ ಮಾರಾಟ ಶುಲ್ಕ ಕಡಿಮೆ

ಇರುವುದರಿಂದ ತಾಲೂಕಿನ ರೈತರು ತಮ್ಮ ಹುಟ್ಟುವಳಿಗಳನ್ನು ಅಥಣಿ ಮಾರುಕಟ್ಟೆಗೆ ತರದೇ ಸಾಂಗಲಿ, ಜತ್ತ ಮುಂತಾದ ಹೊರ ರಾಜ್ಯದ ಮಾರುಕಟ್ಟೆಗಳಿಗೆ ಸಾಗಿಸುತ್ತಿದ್ದಾರೆ. ಈ ಹೊರರಾಜ್ಯದ ಮಾರುಕಟ್ಟೆಯ ಆಕರ್ಷಣೆ ಕೇವಲ ಅಥಣಿ ನಿಯಂತ್ರಿತ ಮಾರುಕಟ್ಟೆಯ ಮೇಲೆಯಷ್ಟೇ ಅಲ್ಲ, ಹೊರತಾಗಿ ಅಥಣಿಯ ಖಾಸಗಿ ಮಾರುಕಟ್ಟೆಯ ಮೇಲೂ ಆಗಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ವಿಶಾಲವಾದ ಪ್ರಾಂಗಣ, ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಇಲ್ಲಿನ ನಿಯಂತ್ರಿತ ಮಾರುಕಟ್ಟೆ ರೈತ ಮಿತ್ರ ಮುಂತಾದ ಯೋಜನೆಗಳ ಹಾಗೂ ರೈತರ ಬೆಂಬಲದಿಂದ ಉತ್ತಮವಾಗಿ ಕಾರ್ಯನಿರ್ವಹಿಸುವ ಎಲ್ಲ ಸಾಧ್ಯತೆಗಳೂ ಇವೆ.

ಈ ತಾಲೂಕಿನ ಹೆಚ್ಚಿನ ಹುಟ್ಟುವಳಿಗಳನ್ನು ಸಾಂಗಲಿ ಹಾಗೂ ಜತ್ತ ಮಾರುಕಟ್ಟೆಗೆ ಕಳಿಸಲಾಗುತ್ತಿದೆ. ಹತ್ತಿಯನ್ನು ಸ್ಥಳೀಯ ವ್ಯಾಪಾರಸ್ಥರು ಕೊಂಡು ಅದನ್ನು ನೇರವಾಗಿ ಬೈಲಹೊಂಗಲ, ಬಿಜಾಪೂರ ಹಾಗೂ ಗೋಕಾಕ ಮಾರುಕಟ್ಟೆಗಳಿಗೆ ಕಳಿಸುತ್ತಾರೆ. ನೀರಾವರಿ ಇದ್ದಲ್ಲೆಲ್ಲ ಕಬ್ಬು ಹೆಚ್ಚಾಗಿದ್ದರಿಂದ ಹಾಗೂ ಮಳೆ ಆಧಾರಿತ ಜಮೀನಿನಲ್ಲಿ ಮಳೆ ಕೊರತೆಯಿಂದಾಗಿ ಹಾಕಿದ ಬೀಜವೂ ಕೈಗೆ ಹತ್ತದೇ ಇರುವ ಪ್ರಸಂಗದಿಂದಾಗಿ ಶೇಂಗಾ ಬೆಳೆಯ ಹುಟ್ಟುವಳಿಯೂ ಕಡಿಮೆಯಾಗಿದೆ. ಇಲ್ಲಿನ ಎಣ್ಣೆ ಗಿರಣಿಯವರು ಹೊರಗಿನಿಂದ ಶೇಂಗಾ ತಂದು ಎಣ್ಣೆ ತೆಗೆದು ಅದನ್ನು ತಾಲೂಕಿನಲ್ಲಿಯೂ ಹಾಗೂ ಹೊರಗೂ ಮಾರಾಟ ಮಾಡುತ್ತಾರೆ.

ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಕಬ್ಬು ಬೆಳೆಯುವ ಅಥಣಿ ತಾಲೂಕಿನಲ್ಲಿ ಇಲ್ಲಿಯವರೆಗೆ ಕಬ್ಬು ಬೆಳೆಗಾರರಿಗೆ ತಾವು ಬೆಳೆದ ಕಬ್ಬಿಗೆ ಸೂಕ್ತ ಮಾರುಕಟ್ಟೆ ಕಂಡುಕೊಳ್ಳಲು ಭಗೀರಥ ಪ್ರಯತ್ನ ಮಾಡುವ ಪರಿಸ್ಥಿತಿ ಇತ್ತು. ಮೊದಲಿನಿಂದ ಇದ್ದ ಉಗಾರ ಸಕ್ಕರೆ ಕಾರಖಾನೆಯೊಂದಿಗೆ ಇದೀಗ ಪ್ರಾರಂಭಗೊಂಡಿರುವ ಕೆಂಪವಾಡದ ಫಾರ್ಮರ್ಸ್ ಸಕ್ಕರೆ ಕಾರಖಾನೆ ಹಾಗೂ ಹಲ್ಯಾಳದ ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆಗಳು ಸೇರಿ ಈಗ ಒಟ್ಟಾರೆ ೧೭ ಸಾವಿರ ಮೆಟ್ರಿಕ್ ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿವೆ. ತಾಲೂಕಿನ ರಾಮತೀರ್ಥದ ಹತ್ತಿರ ಮತ್ತೊಂದು ಸಕ್ಕರೆ ಕಾರಖಾನೆ ಸ್ಥಾಪಿಸುವ ಕಾರ್ಯವು ಭರದಿಂದ ಸಾಗಿದೆ. ಆದರೆ ಮಳೆಯ ಕೊರತೆ, ಕೀಟ ಬಾಧೆ, ಕಡಿಮೆ ಇಳುವರಿ, ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಕುಸಿತ, ತನ್ಮೂಲಕ ಬೆಳೆದ ಕಬ್ಬಿಗೆ ಕಡಿಮೆ ದರ ಇವುಗಳೆಲ್ಲವೂ ಬೆಳೆಗಾರರನ್ನು ಚಿಂತೆಯ ಮಡುವಿಗೆ ದೂಡಿವೆ. ರೈತರ ಜೊತೆ ಜೊತೆಗೇ ಸ್ಪರ್ಧಾತ್ಮಕ ಬೆಲೆ ನೀಡಲಾಗದೇ ಸಕ್ಕರೆ ಕಾರಖಾನೆಗಳು ಕೂಡ ಆರ್ಥಿಕ ಸಂಕಟಕ್ಕೆ ಈಡಾಗುವ ಸಾಧ್ಯತೆ ಇಲ್ಲದಿಲ್ಲ.

ಈಗಾಗಲೇ ಸಾಂಕೇತಿಕವಾಗಿ ಹಸಿರು ನಿಶಾನೆ ಪಡೆದಿರುವ ಕರಿಮಸೂತಿ, ಕೆಂಪವಾಡ ಯಾತ ನೀರಾವರಿ ಯೋಜನೆಗಳನ್ನು ಆದಷ್ಟು ಶೀಘ್ರ ಕಾರ್ಯಾನ್ವಿತಗೊಳಿಸಿದಲ್ಲಿ ರೈತರು ಸ್ವಲ್ಪವಾದರೂ ನೆಮ್ಮದಿಯ ಉಸಿರು ಬಿಡಬಹುದಾಗಿದೆ. ಅದರಂತೆಯೇ ಸಕ್ಕರೆಯ ಜೊತೆಗೇ ವಿದ್ಯುತ್, ಮದ್ಯಸಾರ ಹಾಗೂ ಇಥೆನಾಲ್ ಉತ್ಪಾದಿಸುತ್ತಿರುವ ಉಗಾರ ಸಕ್ಕರೆ ಕಾರಖಾನೆಯ ಆದರ್ಶವನ್ನೇ ತಾಲೂಕಿನ

ಉಳಿದೆರಡು ಸಕ್ಕರೆ ಕಾರಖಾನೆಗಳು ಅಳವಡಿಸಿಕೊಂಡಲ್ಲಿ ಅವೂ ಕೂಡ ಆರ್ಥಿಕವಾಗಿ ಸುಭದ್ರವಾಗಿ ನೆಲೆ ನಿಲ್ಲುವಂತಾಗಲು ಸಾಧ್ಯ.

ಕೈಗೆ ಬಂದ ತುತ್ತು ಬಾಯಿಗಿಲ್ಲ ಎಂಬಂತೆ ಹಲವಾರು ಕಾರಣಗಳಿಂದಾಗಿ ಬೆಳೆಯ ವೈಫಲ್ಯವನ್ನು ಎದುರಿಸಿ ಹತಾಶೆಗೊಳ್ಳುವ ರೈತನಿಗಾಗಿಯೇ ಸರಕಾರ ರೂಪಿಸಿದ ' ಬೆಳೆ ವಿಮಾ ' ಯೋಜನೆ ಅಥಣಿ ತಾಲೂಕಿನಲ್ಲಿ ಜಾರಿಯಲ್ಲಿದ್ದರೂ ಅದು ರೈತರನ್ನು ತಲುಪುವಲ್ಲಿ ರೈತರು ಅದಕ್ಕೆ ಸೂಕ್ತವಾಗಿ ಪ್ರತಿಸ್ಪಂದಿಸುವದರಲ್ಲಿ ವೈಫಲ್ಯ ಕಾಣುತ್ತಲಿದೆ. ಈ ಯೋಜನೆಯ ನಿಯಮಾವಳಿಗಳನ್ನು ಇನ್ನಷ್ಟು ಸಡಿಲಿಸಿ ಅದಕ್ಕೆ ಹೆಚ್ಚಿನ ಪ್ರಚಾರ ನೀಡಿದಲ್ಲಿ ಹತಾಶೆಗೊಂಡ ರೈತರಿಗೆ ಸ್ವಲ್ಪಮಟ್ಟಿಗಾದರೂ ಸಹಾಯ ಹಸ್ತ ಸಿಕ್ಕಂತಾಗುವದರಲ್ಲಿ ಸಂಶಯವಿಲ್ಲ. ಅಲ್ಲದೇ ಸರಕಾರವು ಪ್ರಮುಖ ಬೆಳೆಗಳಿಗೆ ಸಕಾಲದಲ್ಲಿ ಸೂಕ್ತ ಬೆಂಬಲ ಬೆಲೆ ಘೋಷಿಸಿ ದೇಶದ ಬೆನ್ನೆಲುಬಾದ ರೈತರನ್ನು ಆರ್ಥಿಕ ಸಂಕಷ್ಟದಿಂದ ಮೇಲೆತ್ತುವುದೂ ಅತ್ಯಾವಶ್ಯಕವಾಗಿದೆ. ಮಳೆಯ ವೈಫಲ್ಯದಿಂದಾಗಿ ಸದಾ ಬರಗಾಲದ ದವಡೆಯಲ್ಲಿ ನಲುಗುತ್ತಿರುವ ತಾಲೂಕಿನ ಅನೇಕ ಭಾಗಗಳಲ್ಲಿ ಸಾಧ್ಯವಿರುವಲ್ಲೆಲ್ಲ ಕೆರೆಗಳ ಹೂಳೆತ್ತುವದು, ಬಾಂಧಾರಗಳ ನಿರ್ಮಾಣ, ಚಿಕ್ಕ ನೀರಾವರಿ ಯೋಜನೆಗಳು ಮುಂತಾದವುಗಳ ಹಮ್ಮಿಕೊಳ್ಳಬೇಕು. ಅವು ಕೇವಲ ಕಾಗದ ಮೇಲಿನ ಯೋಜನೆಗಳಾಗದೆ ಸಮಯಾಧಾರಿತ ಯೋಜನೆಗಳಾಗಿ ತೀವ್ರ ಅನುಷ್ಠಾನಗೊಳ್ಳುವಂತಾದರೆ ಸರಕಾರ ನೊಂದ ರೈತರ ಕಣ್ಣೀರನ್ನು ಒರೆಸಿದಂತಾಗುತ್ತದೆ. ಆರ್ಥಿಕ ಸಂಕಟದಲ್ಲಿ ಸಿಲುಕಿರುವ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಸಿಗುವಂತಾಗಬೇಕಿದೆ. ಈಗಾಗಲೇ ತನ್ನ ಬೆನ್ನ ಮೇಲೆ ಹೊತ್ತಿರುವ ಸಾವಿರಾರು ಸಮಸ್ಯೆಗಳೊಂದಿಗೆ ವಿದ್ಯುತ್ ಕಡಿತದ ಸಮಸ್ಯೆಯೊಂದು ರೈತರನ್ನು ಬಲವಾಗಿ ಕಾಡುತ್ತಲಿದೆ. ಮೇಲಿಂದ ಮೇಲೆ ವಿದ್ಯುತ್ ಸಂಪರ್ಕ ಕಡಿತ, ನೀರಾವರಿ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಕೆ ಇವು ತಾಲೂಕಿನ ರೈತರಲ್ಲಿ ಪ್ರತಿಭಟನೆಯ ಬೆಂಕಿ ಹೊತ್ತಿಸುತ್ತಲಿವೆ.

ಒಟ್ಟಾರೆ ತಾಲೂಕಿನ ಕೃಷಿ ಹಾಗೂ ಕೃಷಿ ಆಧಾರಿತ ವಾಣಿಜ್ಯದ ಪರಿಸ್ಥಿತಿ ಅಷ್ಟೊಂದು ಸಮರ್ಪಕವಾಗಿಲ್ಲ. ಇದು ಅಥಣಿ ತಾಲೂಕಿನ ಒಟ್ಟಾರೆ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸುತ್ತಲಿದೆ. ಈ ನಿಟ್ಟಿನಲ್ಲಿ ಸರಕಾರ, ಜನಪ್ರತಿನಿಧಿಗಳು, ರೈತ ಮುಖಂಡರು, ಕೃಷಿ ತಜ್ಞರು, ವ್ಯಾಪಾರಿಗಳು, ವಾಣಿಜ್ಯೋದ್ಯಮಿಗಳು, ಹಣಕಾಸು ಸಂಸ್ಥೆಗಳು ಮುಂತಾದವರೆಲ್ಲ ಸೇರಿ ಆಳವಾಗಿ ಚಿಂತಿಸುವ, ಸೂಕ್ತ ಪರಿಹಾರಗಳನ್ನು ಹುಡುಕುವ, ಅವುಗಳನ್ನು ಪ್ರಾಮಾಣಿಕವಾಗಿ, ತೀವ್ರವಾಗಿ ಅನುಷ್ಠಾನಕ್ಕೆ ತರುವ ತುರ್ತು ಅವಶ್ಯಕತೆ ಕಂಡುಬರುತ್ತಲಿವೆ.

■■

ಅಥಣಿ ತಾಲೂಕು : ಜ್ಞಾನ ಪ್ರಸಾರದ ನೆಲೆಗಳು

● ಎಸ್. ಎ. ಗೋರೆ

ಅಥಣಿ ತಾಲೂಕು ಪ್ರಾಚೀನ ಕಾಲದಿಂದಲೂ ಸಾಹಿತ್ಯ, ಸಂಸ್ಕೃತಿ. ಪರಂಪರೆ, ಧಾರ್ಮಿಕತೆ, ಸಾಮಾಜಿಕ ರೀತಿ-ನೀತಿಗಳನ್ನು ಉಳಿಸಿಕೊಂಡು ಬಂದ ಕರ್ನಾಟಕದ ಆದರ್ಶ ನೆಲೆ. ಸಾಹಿತ್ಯ. ಸಂಸ್ಕೃತಿ, ಧಾರ್ಮಿಕತೆಗಳಿಗೆ ಅಪೂರ್ವ ಕೊಡುಗೆಯನ್ನು ನೀಡಿದ ಈ ಪುಣ್ಯಭೂಮಿಯಲ್ಲಿನ ಶೈಕ್ಷಣಿಕ ಸಾಧನೆಗಳನ್ನು ಅವಲೋಕಿಸುವದು ಅತ್ಯಂತ ಅವಶ್ಯಕವಾದ ಸಂಗತಿ. ಸುಮಾರು ಎರಡು ಶತಮಾನಗಳ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆದ ಸಾಧನೆಗಳ ಅವಲೋಕನ; ಶಿಕ್ಷಣ ಪ್ರಸಾರ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳು, ಅವುಗಳ ಅಭಿವೃದ್ಧಿಗೆ ಉದಾರ ದಾನದೇಣಿಗೆಗಳನ್ನು ನೀಡಿದ ಮಹನೀಯರು; ಇಂಥ ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾರ್ಜನೆ ಮಾಡಿ ವಿಶಿಷ್ಟ ಸೇವಾ ಕಾರ್ಯಗಳಲ್ಲಿ ತೊಡಗಿದ ಮಹನೀಯರು; ಶಿಕ್ಷಣ ಕೊಡುವುದರ ಜೊತೆಗೆ ಸಾಹಿತ್ಯ ಸಾಮಾಜಿಕ ರಂಗಗಳಲ್ಲಿ ಅಪ್ರತಿಮ ಸಾಧನೆಗೈದ ಗುರುವೃಂದದ ಕುರಿತು ಈ ಪುಟ್ಟ ಲೇಖನದಲ್ಲಿ ಚರ್ಚಿಸಲಾಗಿದೆ.

ಕನ್ನಡನಾಡು ವಿವಿಧ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಹರಿದು ಹಂಚಿಹೋದ ಕಾಲದಲ್ಲಿ ಬೆಳಗಾವಿ ಜಿಲ್ಲೆಯು ಮುಂಬಯಿ ಪ್ರಾಂತದಲ್ಲಿತ್ತು. ಆಗ ಕನ್ನಡ ನುಡಿ ಮತ್ತು ಸಾಹಿತ್ಯವನ್ನು ಮೈಸೂರು ಸಂಸ್ಥಾನಿಕರು ಪೋಷಿಸಿಕೊಂಡು ಬಂದರು. ಆಗ ಮುಂಬಯಿ ಕರ್ನಾಟಕದಲ್ಲಿ ರಾಜಾಶ್ರಯವಿಲ್ಲದ್ದರಿಂದ ಹಾಗೂ ಮರಾಠಿ ಪ್ರಾಬಲ್ಯದಿಂದಾಗಿ ಕನ್ನಡದ ಸ್ಥಿತಿ ಶೋಚನೀಯವಾಗಿತ್ತು. ಕರ್ನಾಟಕದ ಈ ಭಾಗದಲ್ಲಿ ಆರಂಭವಾದ ಶಾಲೆಗಳು ಮರಾಠಿ ಶಾಲೆಗಳಾಗಿದ್ದವು.

ಪ್ರಥಮ ಬಾರಿಗೆ ಅಂದರೆ ೧೮೬೫ರಲ್ಲಿ ಈ ತಾಲೂಕಿನಲ್ಲಿ ಶಾಲೆಗಳು ಆರಂಭವಾದವು. ಅಥಣಿ ತಾಲೂಕಿನ ಜನರ ಮಾತೃ ಭಾಷೆ ಕನ್ನಡವೆಂಬ ಸಂಗತಿ ಅಂದಿನ ಅಧಿಕಾರಿಗಳಿಗೆ ಮನವರಿಕೆಯಾದದ್ದು ೧೮೬೫ರಲ್ಲಿ.

ಹದಿನಾರಾಯಣ ಬಿಚ್ಚು ಎಂಬ ಶಿಕ್ಷಣ ಪ್ರೇಮಿಗಳು ಮಹಾರಾಷ್ಟ್ರದಲ್ಲಿರುವ ನೆರೆಯ ತಾಲೂಕು ಮಿರಜದಿಂದ ಅಥಣಿಗೆ ಬಂದು ನೆಲೆಸಿ ಕ್ರಿ. ಶ. ೧೮೩೬ರಲ್ಲಿ

ಪ್ರಪ್ರಥಮವಾಗಿ ಕನ್ನಡ ಶಾಲೆಯೊಂದನ್ನು ಆರಂಭಿಸಿದರು. ಅದುವೇ ಇಂದಿನ ಅಥಣಿಯ ಕೇಂದ್ರಶಾಲೆ ನಂ. ೧. ಇದನ್ನು ಸ್ಥಾಪಿಸಿದ ಕೀರ್ತಿ ಹದಿನಾರಾಯಣ ಬಿಚ್ಚು ಅವರಿಗೆ ಸಲ್ಲುತ್ತದೆ. ಇಂದು ಅದು ಸರಕಾರಿ ಮಾದರಿ ಶಾಲೆಯಾಗಿದ್ದು ಅಸಂಖ್ಯಾತ ಮಕ್ಕಳು ಅಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಶಾಲೆಯ ಆರಂಭದ ತರುವಾಯ ಮುಂದಿನ ನೂರು ವರ್ಷಗಳಲ್ಲಿ ಹಲವಾರು ಶಾಲೆ ಕಾಲೇಜುಗಳು ಆರಂಭವಾದವು.

ಜಾಧವಜಿ, ಆನಂದಜಿ ಶಿಕ್ಷಣ ಸಂಸ್ಥೆ :

ಆತ್ಮ ಸಂಯಮಯೋಗ ಐದನೇ ನುಡಿ ಆರನೇ ಅಧ್ಯಾಯದ ಭಗವದ್ಗೀತೆಯ ಶ್ಲೋಕ. ' ಉದ್ಧರೇದಾತ್ಮನಾತ್ಮಾನಂ ' ಎಂದರೆ ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕು. ತನ್ನಿಂದಲೇ ತನ್ನ ಆತ್ಮೋನ್ನತಿಯಾಗಬೇಕು ಎಂಬ ಧ್ಯೇಯವಾಕ್ಯವನ್ನಿರಿಸಿಕೊಂಡು ೧೯೧೮ ರಲ್ಲಿ ಜಾಧವಜಿ. ಆನಂದಜಿ ಹೈಸ್ಕೂಲ್ ಆರಂಭವಾಯಿತು. ಅಥಣಿಯ ಹಿರಿಯ ಉದ್ಯಮಿಗಳಾಗಿದ್ದ ಉದ್ಭವಜಿ - ಆನಂದಜಿ ಭಾಟೆಯವರು ತಮ್ಮ ಸಹೋದರ ಜಾಧವಜೀ ಅವರ ಹೆಸರಿನಿಂದ ಭವ್ಯ ಕಟ್ಟಡ ಕಟ್ಟಿಸಿಕೊಟ್ಟರು. ಪ್ರಾರಂಭದಲ್ಲಿ ಈ ಸಂಸ್ಥೆಯ ಅಭ್ಯುದಯಕ್ಕೆ ನಿಷ್ಕಾಮ ಸೇವೆ ಸಲ್ಲಿಸಿದ ಗುರುಗಳೆಂದರೆ ಶ್ರೀ ಎನ್. ಬಿ. ಜೇರೆ, ಶ್ರೀ ವ್ಹಿ. ಜಿ. ಜೋಶಿ, ಶ್ರೀ ವ್ಹಿ. ಜಿ. ಜೇರೆ, ಶ್ರೀ ಪಿ. ಎ. ಕೊಕಟನೂರ, ಶ್ರೀ ಜಿ. ವ್ಹಿ. ದೇಶಪಾಂಡೆ ಮುಂತಾದವರು. ದಿ. ಬಾಬಾಸಾಹೇಹ ಸಂಗೋರಾಮರ ಪರಿಶ್ರಮದಿಂದ ಆಗ ತಾಲೂಕಿನ ಶಾಸಕರಾಗಿದ್ದ ಶ್ರೀ ಡಿ. ಬಿ. ಪವಾರ ದೇಸಾಯಿಯವರ ದಾನದ ಸಹಾಯದಿಂದ ೧೯೬೧ ರಲ್ಲಿ ಅಥಣಿ ತಾಲೂಕಿನಲ್ಲಿ ಪ್ರಪ್ರಥಮ ಹೆಣ್ಣುಮಕ್ಕಳ ಪ್ರೌಢಶಾಲೆ ಆರಂಭವಾಯಿತು. ೧೯೬೨ ರಲ್ಲಿ ಶಿಶುವಿಹಾರ ಆರಂಭವಾಯಿತು. ಅಂದಿನ ಶಿಕ್ಷಣ ಸಚಿವರಾಗಿದ್ದ ಶ್ರೀ ಎಸ್. ಆರ್. ಕಂಠಿಯವರು ಇದನ್ನು ಉದ್ಘಾಟಿಸಿದರು. ೧೯೬೫ ರಲ್ಲಿ ರಾಜ್ಯ ಶಿಕ್ಷಣ ಇಲಾಖೆಯು ಜೆ. ಎ. ಹೈಯರ್ ಸೆಕೆಂಡರಿ ಸ್ಕೂಲ ಎಂಬ ಮನ್ನಣೆ ನೀಡಿ ಗೌರವಿಸಿತು. ೧೯೭೨ ರಲ್ಲಿ ಜೆ. ಎ. ಕಾಂಪೋಜಿಟ್ ಜ್ಯೂನಿಯರ್ ಕಾಲೇಜು, ೧೯೭೮ ರಲ್ಲಿ ಶ್ರೀ ಶ್ರೀನಿವಾಸ ಸಂಸ್ಕೃತ ಪಾಠಶಾಲೆ, ೧೯೮೬ ರಲ್ಲಿ ಕಿರಿಯ ಪ್ರಾಥಮಿಕ ಶಾಲೆ, ೧೯೯೨ ರಲ್ಲಿ ವೃತ್ತಿ ಶಿಕ್ಷಣ ತರಬೇತಿಗಳು ಆರಂಭವಾದವು. ಈಗ ಇಲ್ಲಿನ ಶಾಲೆ ಕಾಲೇಜುಗಳಲ್ಲಿ ೨೪೦೦ ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಕೆ. ಆರ್.ಇ. ಶಿಕ್ಷಣ ಸಂಸ್ಥೆ, ಐನಾಪುರ :

ಬೆಳಗಾವಿ ಜಿಲ್ಲೆಯಲ್ಲಿ ಪ್ರಪ್ರಥಮ ಶಾಲೆ ಐನಾಪುರ ಗ್ರಾಮದಲ್ಲಿ ಆರಂಭವಾಯಿತು. ಈ ಗ್ರಾಮದಲ್ಲಿ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ ಕೀರ್ತಿ ದಿ. ಜಿ. ಎಂ. ದೇಶಪಾಂಡೆ ಗುರುಗಳಿಗೆ ಸಲ್ಲುತ್ತದೆ. ಸ್ವಾತಂತ್ರ್ಯ ಹೋರಾಟಗಾರರಾದ ಇವರು ಪುಣೆಯಿಂದ ಈ ಹಳ್ಳಿಗೆ ಬಂದು ಒಂದು ಶಿಕ್ಷಣ ಸಂಸ್ಥೆಯನ್ನು ಬೆಳೆಸಿದರು.

ಶ್ರೀ ದೇಶಪಾಂಡೆಯವರು ಕೆ.ಆರ್.ಇ. ಸೊಸಾಯಿಟಿಯನ್ನು ಸ್ಥಾಪಿಸಿ ೧೯೬೪ ರ ವರೆಗೆ ತಾವೇ ಮುಖ್ಯಾಧ್ಯಾಪಕರಾಗಿದ್ದುಕೊಂಡು ಸಂಸ್ಥೆಯನ್ನು ಬೆಳೆಸಿದರು. ಸಾಮಾಜಿಕ

ಕಾರ್ಯಕರ್ತರೂ ಆದ ಇವರು ೧೯೫೮ ರಲ್ಲಿ ' ಜಾಳ ಪೋಳ ' ಸಂದರ್ಭದಲ್ಲಿ ಕೃಷ್ಣಾ ಕಿತ್ತೂರಿನ ಸಕ್ಕರೆ ಕಾರ್ಖಾನೆಯನ್ನು ಉಳಿಸಲು ಶ್ರಮಿಸಿದರು. ಇದರ ಸ್ಮರಣಾರ್ಥವಾಗಿ ಇವರ ಅಭಿಮಾನಿಗಳು ಶಾಲೆಯ ಆವರಣದಲ್ಲಿ ಇವರ ಅಮೃತ ಶಿಲಾ ಮೂರ್ತಿಯನ್ನು ಸ್ಥಾಪಿಸಿದ್ದಾರೆ.

ಈ ಸಂಸ್ಥೆಯ ವತಿಯಿಂದ ೧೯೮೩ರಲ್ಲಿ ಜ್ಯೂನಿಯರ್ ಕಾಲೇಜು ಆರಂಭವಾಯಿತು. ೧೯೯೧ ರಲ್ಲಿ ಕನ್ನಡ ಮಾಧ್ಯಮ ಕಾನ್ವೆಂಟ ಶಾಲೆ ಆರಂಭವಾಗಿದೆ. ಈ ಸಂಸ್ಥೆಯ ಕಟ್ಟಡದಲ್ಲೇ ಕಳೆದ ೫-೬ ವರ್ಷಗಳಿಂದ ಸರಕಾರಿ ಪ್ರಥಮ ದರ್ಜೆಯ ಕಾಲೇಜು ನಡೆಯುತ್ತಲಿದೆ.

ಕೆ.ಎಲ್.ಇ. ಶಿಕ್ಷಣ ಸಂಸ್ಥೆಯಿಂದ ನಡೆಯುತ್ತಿರುವ ಶಾಲೆ ಕಾಲೇಜುಗಳು :

ಗೋಪಾಲ ಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ, ರಾನಡೆ ಮುಂತಾದ ಸ್ವಾತಂತ್ರ್ಯಯೋಧರು ಮಹಾರಾಷ್ಟ್ರದಲ್ಲಿ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯನ್ನು ಸ್ಥಾಪಿಸಿದ್ದರು. ಇವರ ಪ್ರಭಾವದಿಂದ ಕೆ.ಎಲ್.ಇ. ಸಂಸ್ಥೆಯ ಸಪ್ತರ್ಷಿಗಳಾದ ಶಿ. ಶಿ. ಬಸವನಾಳ, ಬಿ. ಬಿ. ಮಮದಾಪೂರ, ಎಮ್.ಆರ್. ಸಾಖರೆ, ಬಿ. ಎಸ್. ಹಂಚಿನಾಳ, ಎಚ್. ಎಫ್. ಕಟ್ಟೀಮನಿ, ಪಿ. ಆರ್. ಚಿಕ್ಕೋಡಿ, ಎಸ್. ವಿ. ಪಾಟೀಲ ಇವರೆಲ್ಲ ನಾವೂ ಕೂಡ ಕರ್ನಾಟಕದಲ್ಲಿ ಒಂದು ಶಿಕ್ಷಣ ಸಂಸ್ಥೆಯನ್ನೇಕೆ ಸ್ಥಾಪಿಸಬಾರದು ಎಂಬ ಉದ್ದೇಶದಿಂದ ಕರ್ನಾಟದಲ್ಲಿ ಖ್ಯಾತಿವೆತ್ತ ಕೆ.ಎಲ್.ಇ. ಸಂಸ್ಥೆಯನ್ನು ೧೯೧೬ ರಲ್ಲಿ ಪ್ರಾರಂಭಿಸಿದರು. ಇಂದು ಈ ಸಂಸ್ಥೆ ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರವಾಗಿ ಜ್ಞಾನ ದೇಗುಲವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ಸಂಸ್ಥೆಯು ೧೯೫೮ ರಲ್ಲಿ ಅಥಣಿ ತಾಲೂಕಿನ ಗ್ರಾಮೀಣ ಅದರಲ್ಲೂ ಬಡ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಧ್ಯೇಯವನ್ನಿಟ್ಟುಕೊಂಡು ಅಥಣಿಯಲ್ಲಿ ನ್ಯೂ ಹೈಸ್ಕೂಲನ್ನು ಆರಂಭಿಸಿತು. ಈ ಶಾಲೆಯನ್ನು ಆರಂಭಿಸಲು ಶಿಕ್ಷಣ ಪ್ರೇಮಿಗಳಾದ ಶ್ರೀ ಚಂಬಣ್ಣ ಕಾವೇರಿ, ದಿವಂಗತರಾದ ಸಿ. ಎಸ್. ಮಂಗಸೂಳಿ, ಜಿ. ಸಿ. ತೆಲಸಂಗ, ಜಿ. ಜಿ. ಹುಲಕುಂದ, ಮಾಜಿ ಸಂಸತ್ ಸದಸ್ಯರಾಗಿದ್ದ ಎಸ್. ವ್ಹಿ. ಪಾಟೀಲ, ಡಾ. ಸಿ. ಎಸ್. ಪಾಂಗಿಯವರು ಅವಿರತ ಪರಿಶ್ರಮ ಪಟ್ಟರು. ಇವರ ಪರಿಶ್ರಮದ ಫಲವಾಗಿ ಇಂದು ಈ ಶಾಲೆ ಬೆಳೆದು ನಿಂತಿದೆ.

ಪ್ರಾರಂಭದಲ್ಲಿ ' ಗೌರಿಶಂಕರ ಜಿನ್ನಿಂಗ್ ಮಿಲ್ಲಿ'ನಲ್ಲಿ ೧೯೫೮ ರಲ್ಲಿ ಕೇವಲ ೧೨೮ ವಿದ್ಯಾರ್ಥಿಗಳಿಂದ ಈ ಶಾಲೆ ಆರಂಭವಾಯಿತು. ೧೯೬೦ ರ ಎಪ್ರೀಲ್ ತಿಂಗಳಲ್ಲಿ ತ್ಯಾಗಿ, ಮಹಾದಾನಿ, ಶಿಕ್ಷಣ ಪ್ರೇಮಿಗಳಾದ ಶ್ರೀ ಬಿ. ವ್ಹಿ. ಭೂಮರಡ್ಡಿಯವರ ಅಮೃತ ಹಸ್ತದಿಂದ ಭವ್ಯವಾದ, ಸುಂದರವಾದ ಹೊಸ ಕಟ್ಟಡದ ಶಂಕು ಸ್ಥಾಪನೆಯಾಯಿತು. ಈ ಕಟ್ಟಡದ ಉದ್ಘಾಟನಾ ಸಮಾರಂಭವು ೨೬-೧-೧೯೬೧ ರಂದು ಶ್ರೀ ಮ. ನಿ. ಪ್ರ. ಗುರುಸಿದ್ಧಸ್ವಾಮಿಗಳು, ಹಲ್ಯಾಳ ಇವರ ಅಮೃತ ಹಸ್ತದಿಂದ ನೆರವೇರಿತು. ಇಂದು ವಿಶಾಲವಾದ ಕೋಣೆಗಳು, ಸುವ್ಯವಸ್ಥಿತ ಗ್ರಂಥಾಲಯ, ಪ್ರಯೋಗಶಾಲೆ, ಚಿತ್ರಕಲಾ ಭವನ, ವಿಶಾಲವಾದ ಆಟದ ಮೈದಾನದಿಂದ ಕಂಗೊಳಿಸುತ್ತಲಿದೆ.

ಕೆ.ಎಲ್.ಇ. ಸಂಸ್ಥೆಯ ಆಡಳಿತಗಾರರ ಚಾಣಾಕ್ಷತನದಿಂದ ಉತ್ತಮ ಹೋರಾಟಗಾರ, ಸಂಘಟನಾಕಾರ, ನಿತ್ಯ ನೂತನ ಚೇತನ ಶಾಲಿಯಾದ ಶ್ರೀ ಬ. ಗಂ. ತುರಮುರಿಯವರು ಅಥಣಿಗೆ ಬರುವಂತಾಯಿತು. ಇವರು ತಮ್ಮ ಜೊತೆಗೆ ಎಂಥ ಸಮಸ್ಯೆಗಳೆದುರಾದರೂ ಅಂಜದೆ, ಅಳುಕದೆ ಮುನ್ನುಗ್ಗುವ ಕರ್ತೃತ್ವ ಶಕ್ತಿಯನ್ನು ಪಡೆದ ಶ್ರೀ ಬಿ. ಸಿ. ಗಂಗಲರನ್ನೂ, ಶ್ರೀ ಗಿರಿಯಪ್ಪನವರನ್ನೂ, ಶ್ರೀ ಗಾಮನಗಟ್ಟಿಯವರನ್ನೂ ಕರೆದುಕೊಂಡು ಬಂದರು. ಈ ಶಿಕ್ಷಕರೆಲ್ಲ ಕೂಡಿಕೊಂಡು ಅಥಣಿಯ ಶಿಕ್ಷಣ ಪ್ರೇಮಿಗಳಾದ ಶ್ರೀ ಸಿ. ಎ. ವಸ್ತ್ರದ, ಆಯ್. ಎಸ್. ಶಿವಣಗಿ, ಬಸವರಾಜ ಹಿಪ್ಪರಗಿ, ಶ್ರೀ ಸಿ. ಪಿ. ಹಂಜಿ ಹಾಗೂ ಶಾಲೆ ಪ್ರಾರಂಭವಾಗುವವರೆಗೆ ಪಾದುಕೆಗಳನ್ನೇ ತೊಡುವದಿಲ್ಲವೆಂದು ಪೂಣ್ದ ಶ್ರೀ ಚಂಬಣ್ಣಾ ಕಾವೇರಿ ಮುಂತಾದ ಉತ್ಸಾಹಿ ತರುಣರನ್ನು ಕೂಡಿಸಿಕೊಂಡು ಅಥಣಿಯ ಉದ್ದಗಲಕ್ಕೂ ಸಂಚರಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸಿದರು. ಇಂಥವರ ನಿಸ್ವಾರ್ಥ ಸೇವೆಯಿಂದ ಒಂದು ಪವಿತ್ರ ವಿದ್ಯಾಸಂಸ್ಥೆ ಉಳಿಯುವಂತಾಯಿತು. ಶ್ರೀ ಚನ್ನಪ್ಪ ಶಿವರುದ್ರಪ್ಪಾ ಕಿತ್ತೂರವರು ಈ ವಿದ್ಯಾಮಂದಿರಕ್ಕೆ ಅಪಾರ ದಾನ ನೀಡಿದರು.

೧೯೬೮ ನೇ ಇಸ್ವಿಯಲ್ಲಿ ಕೆ.ಎಲ್.ಇ. ಸಂಸ್ಥೆಯವರು ಶ್ರೀ ಶಿವಯೋಗಿ ಮುರುಘೇಂದ್ರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಅಥಣಿಯ ಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳು ವಾಯುವಿಹಾರಕ್ಕೆಂದು ಸತ್ತಿ ರಸ್ತೆಯಲ್ಲಿರುವ ಈಗಿನ ಮಹಾವಿದ್ಯಾಲಯದ ಪ್ರಶಾಂತವಾದ ಸ್ಥಳಕ್ಕೆ ಬಂದು ವಿಶ್ರಮಿಸುತ್ತಿದ್ದರು. ಆ ಪವಿತ್ರ ಸ್ಥಳದಲ್ಲೇ ವಿಶ್ರಮಿಸುವ ಕಾರಣವನ್ನು ಅವರ ಶಿಷ್ಯರು ಕೇಳಿದಾಗ ಇದು ಸರಸ್ವತಿ ನೆಲೆಸಿರುವ ಪವಿತ್ರ ತಾಣವೆಂದು ಹೇಳುತ್ತಿದ್ದರು. ಈ ಸ್ಥಳದಲ್ಲಿ ದೈವೇಚ್ಛೆಯಂತೆ ಪೂಜ್ಯರು ಹೇಳಿದ ಮಾತಿನಂತೆ ಎಸ್.ಎಸ್.ಎಮ್.ಎಸ್. ಕಾಲೇಜು ಆರಂಭವಾಯಿತು. ಒಟ್ಟು ೩೫ ಎಕರೆ ಜಮೀನಿನಲ್ಲಿ ನಿರ್ಮಾಣವಾದ ಈ ಮಹಾವಿದ್ಯಾಲಯದಲ್ಲಿ ಕಲ್ಯಾಣ ಮಂಟಪವಿದ್ದದ್ದು ಒಂದು ವಿಶೇಷ. ಇದನ್ನು ಒಳಕ್ರೀಡಾಂಗಣವಾಗಿ ಬಳಸಲಾಗುತ್ತಿದೆ.

ಸನ್ಮತಿ ಶಿಕ್ಷಣ ಸಂಸ್ಥೆ, ಶೇಡಬಾಳ :

ಜೈನ ಧರ್ಮದ ಕೇಂದ್ರ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ ಶೇಡಬಾಳ ಗ್ರಾಮದಲ್ಲಿ ೧೯೫೧ ರಲ್ಲಿ ಸನ್ಮತಿ ಶಿಕ್ಷಣ ಸಂಸ್ಥೆಯು ' ಸನ್ಮತಿ ಸಹಕಾರಿ ಸೇವಾ ಸಂಘ ' ಎಂಬ ಹೆಸರಿನಿಂದ ಪ್ರಾರಂಭವಾಯಿತು. ಕಟ್ಟಡಕ್ಕಾಗಿ ನಿವೇಶನ ಹಾಗೂ ಧನಸಹಾಯ ಮಾಡಿದ ಶ್ರೀಯುತ ಸಂಘೋರಾಮರು ಅಖಂಡ ೨೫ ವರ್ಷಗಳವರೆಗೆ ಸಂಸ್ಥೆಯ ಚೇರಮನ್‌ರಾಗಿ ಕಾರ್ಯನಿರ್ವಹಿಸಿದರು. ಈ ಸಂಸ್ಥೆಯ ವತಿಯಿಂದ ಉಗಾರದಲ್ಲಿ ಪದ್ಮಾವತಿ ವಿದ್ಯಾಲಯವು ಆರಂಭವಾಯಿತು. ಸನ್ಮತಿ ವಿದ್ಯಾಲಯದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಉನ್ನತವಾದ ಹುದ್ದೆಗಳಲ್ಲಿದ್ದಾರೆ. ಉಗಾರ ಖುರ್ದದಲ್ಲಿ ಶುಗರ ವರ್ಕ್ಸ ಲಿಮಿಟೆಡ್ ವತಿಯಿಂದ ಶ್ರೀ ಹರಿವಿದ್ಯಾಲಯ, ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆ ಆರಂಭವಾಗಿ ಶಿಸ್ತು-ದಕ್ಷತೆಗೆ ಹೆಸರು ಪಡೆದಿದೆ.

ಜಿ.ಎಸ್.ಕೆ. ಪ್ರೌಢ ಶಾಲೆ, ಸತ್ತಿ :

ಸತ್ತಿ ಗ್ರಾಮದಲ್ಲಿ ಶಿಕ್ಷಣ ಪ್ರಸಾರದ ಉದ್ದೇಶದಿಂದ ವಿದ್ಯಾವರ್ಧಕ ಸಮೀತಿಯಿಂದ ೧೯೬೫ ರಲ್ಲಿ ಜಿ.ಎಸ್.ಕೆ. ಪ್ರೌಢಶಾಲೆ ಆರಂಭವಾಯಿತು. ಈ ಶಾಲೆ ಆರಂಭವಾಗಲು ಪ್ರಯತ್ನಿಸಿ ಉದಾರ ದಾನ ನೀಡಿದವರು ನಾಗಪ್ಪನವರ ಬಂಧುಗಳು.

ಬಸವೇಶ್ವರ ಶಿಕ್ಷಣ ಸಂಸ್ಥೆ, ಅನಂತಪುರ :

೧೯೬೮ ರಲ್ಲಿ ಈ ಸಂಸ್ಥೆಯಿಂದ ನ್ಯೂ ಹೈಸ್ಕೂಲ ಆರಂಭವಾಯಿತು. ೧೯೭೫-೭೬ ನೇ ಸಾಲಿನಲ್ಲಿ ಪದವಿಪೂರ್ವ ಕಾಲೇಜು ಆರಂಭವಾಯಿತು. ಸಂಸ್ಥೆಯ ಆರಂಭದಿಂದಲೂ ಶ್ರೀ ಡಿ. ಆರ್. ಪಾಟೀಲ, ವಕೀಲರು ಸಂಸ್ಥೆಯ ಚೇರಮನ್‌ರಾಗಿದ್ದಾರೆ.

ಮಹಾತ್ಮಾಗಾಂಧೀಜಿ ಶಿಕ್ಷಣ ಸಂಸ್ಥೆ, ತೆಲಸಂಗ :

ಈ ಸಂಸ್ಥೆಯು ತೆಲಸಂಗದ ಪಟ್ಟದ ದೇವರ ಪ್ರೇರಣೆಯಿಂದ ಶ್ರೀ ಶಾಂತವೀರ ಮಹಾಸ್ವಾಮಿಗಳ ಆಶೀರ್ವಾದ ಹಾಗೂ ಅಮೃತ ಹಸ್ತದಿಂದ ದಿನಾಂಕ ೩೧-೫-೧೯೬೯ ರಂದು ಪೂಜ್ಯ ಮಹಾತ್ಮಾಗಾಂಧೀಜಿಯವರ ಹೆಸರಿನಲ್ಲಿ ಪ್ರಾರಂಭವಾಯಿತು. ಆರಂಭದಲ್ಲಿ ತೆಲಸಂಗ ಪಟ್ಟದದೇವರು, ಶ್ರೀ ವಿರೂಪಾಕ್ಷ ಖ್ಯಾಡಿ ಮುಂತಾದವರು ಊರಲ್ಲಿ ಕಜ್ಜ ಸಂಗ್ರಹಿಸಿ ೩೩ ವಿದ್ಯಾರ್ಥಿಗಳ ಪ್ರಸಾದ ನಿಲಯವನ್ನು ಸ್ಥಾಪಿಸಿದರು. ಶ್ರೀ ಜಿ. ಎಂ. ಬೈರೋಡಗಿ ಮುಖ್ಯಾಧ್ಯಾಪಕರು ಶಾಲೆಯನ್ನು ಒಂದು ಸುವ್ಯವಸ್ಥಿತ ಹಂತಕ್ಕೆ ತಂದರು.

ಅಥಣಿ ತಾಲೂಕಿನ ಒಂದೊಂದು ಶಾಲೆಯ ಆರಂಭದ ಹಿಂದೆ ತ್ಯಾಗ ಪರಿಶ್ರಮಗಳ ಕಥೆಗಳಿವೆ. ಈ ಅನುದಾನಿತ ಖಾಸಗಿ ಶಾಲೆಗಳೊಂದಿಗೆ ಮೋಳೆ, ಮಂಗಸೂಳಿ, ಕಾಗವಾಡ ಗ್ರಾಮಗಳಲ್ಲಿ ಶಾಲೆ-ಕಾಲೇಜುಗಳು ಆರಂಭವಾದವು. ಈಗ ಒಟ್ಟು ೨೦ ಅನುದಾನಿತ ಪ್ರೌಢಶಾಲೆಗಳಿವೆ.

ಕಾಗವಾಡದಲ್ಲಿ ಶ್ರೀ ಮಲ್ಲಿಕಾರ್ಜುನ ಆಶ್ರಮ ಟ್ರಸ್ಟ್‌ನ ವತಿಯಿಂದ ಶಿವಾನಂದ ಕಲಾ-ವಾಣಿಜ್ಯ ಮಹಾವಿದ್ಯಾಲಯವು ೧೯೬೨ ರಲ್ಲಿ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳಿಂದ ಸ್ಥಾಪನೆಯಾಯಿತು. ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಇದರ ಅಧ್ಯಕ್ಷರು. ಇಂಥ ಮಹಾನ್ ಸಂತರ ಕೃಪೆ ಹಾಗೂ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಈ ವಿದ್ಯಾಲಯವು ನೀಡುತ್ತಿರುವ ಪ್ರಾಮಾಣಿಕ ಅಮೂಲ್ಯ ವಿದ್ಯೆಯಿಂದ ಸಚ್ಚಾರಿತ್ರ್ಯವಂತರಾದ ಅನೇಕ ವಿದ್ಯಾರ್ಥಿಗಳು ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ.

ವಿಮೋಚನಾ ಸಂಸ್ಥೆ, ಅಥಣಿ :

ವಿಮೋಚನಾ ಸಂಸ್ಥೆಯಿಂದ ಮಲಾಬಾದ ಗ್ರಾಮದಲ್ಲಿ ಮರಭೂಮಿಯಲ್ಲಿನ ಓಯಾಸಿಸ್ಸದಂತೆ ವಿಮೋಚನಾ ವಸತಿ ಪ್ರೌಢ ಹಾಗೂ ಪ್ರಾಥಮಿಕ ಶಾಲೆ

ಆರಂಭವಾಯಿತು. ಶೋಷಿತ, ವಂಚಿತ, ಉನ್ನತ ವರ್ಗದವರ ದೌರ್ಜನ್ಯಕ್ಕೆ ಒಳಗಾಗಿ ಸಮಾಜದ ಮುಖ್ಯವಾಹಿನಿಯಿಂದ ಬಹುದೂರ ಉಳಿದಿರುವ ನತದೃಷ್ಟ, ದೌರ್ಭಾಗ್ಯ ಮಹಿಳೆಯರ ಮತ್ತು ಅವರ ಮಕ್ಕಳ ಸರ್ವಾಂಗೀಣ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡು ಮಾರ್ಚ ೧೯೮೫ ರಲ್ಲಿ ವಿಮೋಚನಾ ದೇವದಾಸಿ ಪುನರ್ವಸತಿ ಸಂಘವು ಸ್ಥಾಪಿತವಾಯಿತು.

ಈ ಸಂಸ್ಥೆಯ ವತಿಯಿಂದ ಪ್ರಾರಂಭವಾದ ಶಾಲೆ ದೇವದಾಸಿ ಸಂಪ್ರದಾಯದಲ್ಲಿ ಸಿಲುಕಿದ ಮಹಿಳೆಯರ, ಮಕ್ಕಳಿಗಾಗಿ ಅವರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳನ್ನು ಹೆಚ್ಚಿಸುವದಕ್ಕಾಗಿ ಶ್ರಮಿಸುತ್ತಲಿದೆ. ರಾಷ್ಟ್ರದಲ್ಲಿ ಇಂಥ ಮಾದರಿಯ ಪ್ರಥಮ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ಶಾಲೆಯ, ಸಂಸ್ಥೆಯ ಅದ್ಭುತ ಕಾರ್ಯ ಸಾಧನೆಯ ಹಿಂದಿನ ಶಕ್ತಿಯೇ ಖ್ಯಾತ ನ್ಯಾಯವಾದಿ, ಶಿಕ್ಷಣ ಪ್ರೇಮಿ, ಆದರ್ಶ ಸಮಾಜ ಸ್ಥಾಪನೆಗೆ ಕಂಕಣಬದ್ಧರಾಗಿ ನಿಂತಿರುವ ಶ್ರೀ ಬಿ. ಎಲ್. ಪಾಟೀಲ ನ್ಯಾಯವಾದಿಗಳು. ಸಿ. ಸಿ. ಎಫ್. ಸಂಸ್ಥೆಯಿಂದ ಧನಸಹಾಯ ಪಡೆದು ದೇಶ ವಿದೇಶಗಳಲ್ಲಿನ ಉದಾರ ದಾನಿಗಳನ್ನು ಸಂಪರ್ಕಿಸಿ, ಅಹೋರಾತ್ರಿ ಶ್ರಮಿಸಿ ಮಲಾಬಾದದಂಥ ಚಿಕ್ಕಗ್ರಾಮದಲ್ಲಿ ಸಾಧಕರು ಬೆರಳು ಕಚ್ಚುವಂಥ ಭವ್ಯ ವಿದ್ಯಾಮಂದಿರವನ್ನು ಸ್ಥಾಪಿಸಿದ್ದಾರೆ.

ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನ ಮಹತ್ವಕೊಟ್ಟು ವಿಶ್ವಮಾನವ ಧರ್ಮದ ಮಹತಿಯನ್ನು ಸಾರುವ ಈ ಸರಸ್ವತಿ ಮಂದಿರವು ಮಕ್ಕಳಿಗೆ ಎಲ್ಲಾ ಸೌಕರ್ಯಗಳನ್ನು ಉಚಿತವಾಗಿ ನೀಡುತ್ತಿರುವುದು ಒಂದು ವೈಶಿಷ್ಟ್ಯ. ‘ ಓದು, ಜ್ಞಾನದ ಹೆಬ್ಬಾಗಿಲು ’ ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ‘ ೯೦೦೦ ’ ಪುಸ್ತಕಗಳ ಬೃಹತ್ ಗ್ರಂಥಾಲಯವನ್ನು ನಿರ್ಮಿಸಿದ್ದಾರೆ.

ಇಂದು ಅಥಣಿ ತಾಲೂಕಿನಲ್ಲಿ ೧೯೩ ಸರಕಾರಿ ಪ್ರಾಥಮಿಕ ಶಾಲೆಗಳಿವೆ. ೫೦ ಮರಾಠಿ ಪ್ರಾಥಮಿಕ ಶಾಲೆಗಳಿವೆ, ೨೮ ಉರ್ದು ಪ್ರಾಥಮಿಕ ಶಾಲೆಗಳಿವೆ. ಸರಕಾರದಿಂದ ನಡೆಯುತ್ತಿರುವ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ ೨೭೧. ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೩, ಅನುದಾನ ರಹಿತವಾಗಿ ೧೬ ಪ್ರಾಥಮಿಕ ಶಾಲೆಗಳಿವೆ. ೩ ಇಂಗ್ಲಿಷ ಮಾಧ್ಯಮ ಶಾಲೆಗಳಿವೆ. ಅಲ್ಲದೆ ೧೬ ಪೂರ್ವ ಪ್ರಾಥಮಿಕ ಶಾಲೆಗಳಿವೆ.

ಸರಕಾರಿ ಪ್ರೌಢ ಶಾಲೆಗಳತ್ತ ಗಮನ ಹರಿಸಿದಾಗ ಖಾಸಗೀ ಶಾಲೆಗಳಿಗಿಂತ ಅವುಗಳ ಸಂಖ್ಯೆ ಕಡಿಮೆ. ಪ್ರಸ್ತುತ ೬ ಕನ್ನಡ ಮಾಧ್ಯಮ ಪ್ರೌಢಶಾಲೆಗಳು, ೧ ಮರಾಠಿ ಪ್ರೌಢಶಾಲೆ ಇದೆ. ಅನುದಾನಿತ ಪ್ರೌಢಶಾಲೆಗಳ ಸಂಖ್ಯೆ ೨೦. ಅನುದಾನರಹಿತ ಪ್ರೌಢಶಾಲೆಗಳ ಸಂಖ್ಯೆ ೧೧. ಅಥಣಿ ತಾಲೂಕಿನಲ್ಲಿ ೧೦೦ ವಯಸ್ಕರ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸಿವೆ. ಕರ್ನಾಟಕ ರಾಜ್ಯ ಸಮಾಜಕಲ್ಯಾಣ ಇಲಾಖೆಯಿಂದ ೧೦೦ ಕ್ಕಿಂತ ಹೆಚ್ಚು ಶಿಶುಕಲ್ಯಾಣ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ‘ ಭಗಿನಿ ನಿವೇದಿತಾ ಪ್ರತಿಷ್ಠಾನ ’ ಸಾಂಗಲಿ ಇವರು ಅಥಣಿ ತಾಲೂಕಿನಲ್ಲಿ ೧೫ ತೊಟ್ಟಿಲ ಮನೆಗಳನ್ನು ನಡೆಸಿರುತ್ತಾರೆ. ತಾಲೂಕಿನಲ್ಲಿ ೫೦ ಕ್ಕೂ ಹೆಚ್ಚು ಗ್ರಂಥಾಲಯಗಳಿವೆ.

ಕ್ರಿ. ಶ. ೧೯೧೬ರಲ್ಲಿ ಲೋಕಮಾನ್ಯ ತಿಲಕರಿಂದ ಉದ್ಘಾಟಿತವಾದ ಶ್ರೀ ಸಿದ್ಧೇಶ್ವರ ಮೋಫತ ವಾಚಾಲಯವು ೧೫೦೦೦ ಕ್ಕಿಂತ ಹೆಚ್ಚು ಉಪಯುಕ್ತ ಗ್ರಂಥಗಳನ್ನು ಹೊಂದಿದ್ದು ಆದರ್ಶಪ್ರಾಯವಾಗಿದೆ. ಇಲ್ಲಿ ಲೋಕಮಾನ್ಯ ತಿಲಕರ ಅಸ್ಥಿಗಳ ಸ್ಮಾರಕವಿದೆ. ಅಲ್ಲದೆ ಶ್ರೀ ಮೋಟಗಿಮಠದಲ್ಲಿ ವೀರಶೈವ ಧರ್ಮದ ಪುರಾತನ ಗ್ರಂಥಗಳ ಸಂಗ್ರಹವಿದೆ.

ನಮ್ಮ ತಾಲೂಕಿನಲ್ಲಿ ವೃತ್ತಿ ಶಿಕ್ಷಣ ಶಾಲೆಗಳು ಕಡಿಮೆ ಎಂದು ಹೇಳಬಹುದು. ಒಟ್ಟು ೫ ವೃತ್ತಿ ಶಿಕ್ಷಣ (ಐ.ಟಿ.ಆಯ್.) ಕಾಲೇಜುಗಳಿವೆ ಅದರಲ್ಲಿ ಕೆಲವು ಮುಚ್ಚಿವೆ. ಅಥಣಿಯಲ್ಲಿ ಶ್ರೀ ಶಿವಯೋಗಿ ಮುರುಘೇಂದ್ರ ಚಿತ್ರಕಲಾ ಮಹಾವಿದ್ಯಾಲಯವಿದೆ. ಕಿಂಡರ್ ಗಾರ್ಟನ್ ಶಾಲೆಯೊಂದು ಈಗ ಇಲ್ಲಿ ಆರಂಭವಾಗಿದೆ.

ಉದ್ಭಜಿ ಆನಂದಜಿ ಭಾತೆ, ಡಿ. ಬಿ. ಪವಾರ ದೇಸಾಯಿ, ಇನ್‌ಫೋಸಿಸ್ ಪ್ರತಿಷ್ಠಾನದ ಧರ್ಮದರ್ಶಿ ಸುಧಾಮೂರ್ತಿ, ಚನ್ನಪ್ಪ ಶಿವರುದ್ರಪ್ಪ ಕಿತ್ತೂರ, ಐನಾಪುರ ಹುಯಿಲಗೋಳಕರ ಬಂಧುಗಳು ಈ ತಾಲೂಕಿನ ಶ್ರೇಷ್ಠ ದಾನಿಗಳು.

ಶ್ರೀಮತಿ ಸಾತವ್ವಾ ಅಲ್ಲಪ್ಪ ಮಹಾಜನ ಇವರು ಕೆ.ಎಲ್.ಇ. ಸಂಸ್ಥೆಗಲ್ಲದೆ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಿಗೆ ಉದಾರ ದಾನ ನೀಡಿದ ಮಹಾತಾಯಿ. ಶ್ರೀಮತಿ ಭೀಮವ್ವ ಅಗಸರ ಬಟ್ಟೆ ತೊಳೆಯುವ ಕಾಯಕದಲ್ಲಿದ್ದ ಸಾಮಾನ್ಯ ಮನೆತನದ ಹೆಣ್ಣುಮಗಳು. ತನ್ನ ಕಾಯಕದಿಂದ ಗಳಿಸಿದ್ದ ಅಲ್ಪ ಸ್ವಲ್ಪ ಹಣವನ್ನು ಕಿತ್ತೂರ ಹೈಸ್ಕೂಲ ಕಟ್ಟಡಕ್ಕೆ ನೀಡಿ ಎಲ್ಲರಿಂದ ಭಲೆ ಎನ್ನಿಸಿಕೊಂಡಳು. ಶ್ರೀಮತಿ ಸಂಗವ್ವಾ ಚಮಕೇರಿ ಸಾಮಾನ್ಯ ಮನೆತನದಿಂದ ಬಂದವಳಾದರೂ ತನ್ನ ಕೊನೆಯ ದಿನಗಳಲ್ಲಿ ತನ್ನ ಮನೆಯನ್ನೇ ಸಂಸ್ಥೆಗೆ ದಾನವಾಗಿ ನೀಡಿ ಇತಿಹಾಸದಲ್ಲಿ ದಾನಿಗಳ ಪಟ್ಟಿಯಲ್ಲಿ ಸೇರಿದಳು. ಶ್ರೀಮತಿ ಮುರಿಗೆವ್ವಾ ಬಾಳಪ್ಪಾ ಕಮತೆ ಕಿತ್ತೂರ ಹೈಸ್ಕೂಲಿನ ಕಟ್ಟಡಕ್ಕಾಗಿ ೫೦೦೦ ರೂ. ಗಳನ್ನು ದಾನವಾಗಿ ನೀಡಿದರು. ಬಾಬುರಾವ ವಿಠ್ಠಲರಾವ ಜನವಾಡಕರ, ಶ್ರೀಮತಿ ದಾನವ್ವಾ ಮುರಿಗೆಪ್ಪಾ ಚಿಲ್ಲಾಳಶೆಟ್ಟಿ ಇವರು ನೀಡಿದ ದಾನ ಅಜರಾಮರ. ಹೀಗೆ ಅಥಣಿ ಪುಣ್ಯಕ್ಷೇತ್ರದಲ್ಲಿ ಹೆಣ್ಣು-ಗಂಡೆಂಬ ಬೇಧವಿಲ್ಲದೆ ದಾನದ ಮಹಾಪೂರ ಹರಿದು ಬಂದಿತು.

ತೆಲಸಂಗ ಗ್ರಾಮದಲ್ಲಿ ಆರಂಭವಾದ ಮಹಾತ್ಮಾ ಗಾಂಧಿ ವಿದ್ಯಾಲಯಕ್ಕೆ ಶ್ರೀಯುತ ಅರ್ಜುಣಗಿ ಹಾಗೂ ಖ್ಯಾಡಿ ಗುರುಗಳು ಅಪಾರ ಧನ ಸಹಾಯ ಮಾಡಿದರು. ಶೇಡಬಾಳದ ಸನ್ಮತಿ ವಿದ್ಯಾಲಯಕ್ಕೆ ಹಣ ಮತ್ತು ನಿವೇಶನ ನೀಡಿ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಕಾರಣೀಭೂತರಾದ ಶ್ರೀ ಸಿ. ಎ. ಜಮಖಂಡಿಯವರನ್ನು ಶ್ರೀಯುತ ಸಂಗೋರಾಮರನ್ನು ಅಲ್ಲಿನ ಜನತೆ ಸ್ಮರಿಸುತ್ತದೆ.

ಮಲಾಬಾದ ಗ್ರಾಮದಲ್ಲಿ ಆರಂಭವಾದ ವಿಮೋಚನಾ ವಸತಿಶಾಲೆಗೆ ದಾನಗಳ ಮಹಾಪೂರವೇ ಹರಿದು ಬಂದಿದೆ. ಶ್ರೀಮತಿ ಸೇವಂತಾಬಾಯಿ ಲ. ಪಾಟೀಲರು ತಮ್ಮ ಸುಪುತ್ರ ಶ್ರೀ ಬಿ. ಎಲ್. ಪಾಟೀಲರ ಕಾರ್ಯಕ್ಕೆ ಪ್ರೋತ್ಸಾಹದ ರೂಪದಲ್ಲಿ ತಮ್ಮ

ಹೆಸರಿನಲ್ಲಿದ್ದ ಮನೆಯನ್ನು ಶಾಲೆಗೆ ದಾನವಾಗಿ ನೀಡಿದರು. ೪೦ ಲಕ್ಷ ರೂ. ಗಳಲ್ಲಿ ನಿರ್ಮಾಣವಾಗಬೇಕಿದ್ದ ಕಟ್ಟಡಕ್ಕೆ ಶ್ರೀ ಬಿ. ಎಲ್. ಪಾಟೀಲರ ಧರ್ಮಪತ್ನಿ ಶ್ರೀಮತಿ ಶಾಂತಾದೇವಿಯವರು ೮ ಎಕರೆ ಭೂಮಿಯನ್ನು ದಾನವಾಗಿ ನೀಡಿದರು. ಮಲಾಬಾದ ಗ್ರಾಮದ ಗಣ್ಯ ವ್ಯಕ್ತಿಗಳಾದ ಶ್ರೀ ಬಸಗೊಂಡಾ ಭೀಮಪ್ಪಾ ಕುಳ್ಳೊಳ್ಳಿಯವರು ತಮ್ಮ ಧರ್ಮಪತ್ನಿ ಶ್ರೀಮತಿ ತಾರಾಬಾಯಿಯವರ ಹೆಸರಿನಿಂದ ೧೨ ಎಕರೆ ಜಮೀನನ್ನು ದಾನವಾಗಿ ನೀಡಿದರು. ಖ್ಯಾತ ಸಾಹಿತಿಗಳಾಗಿದ್ದ ದಿ. ದು. ನಿಂ. ಬೆಳಗಲಿಯವರು ಇಲ್ಲಿನ ಗ್ರಂಥಾಲಯಕ್ಕೆ ೧ ಲಕ್ಷ ಮೌಲ್ಯದ ಗ್ರಂಥಗಳನ್ನು ದಾನವಾಗಿ ನೀಡಿದರು. ಕೆ.ಎಲ್.ಇ. ಸಂಸ್ಥೆಯ ಎಸ್.ಎಸ್.ಎಮ್.ಎಸ್. ಮಹಾವಿದ್ಯಾಲಯಕ್ಕೆ ಕೊಕಟನೂರ ಗ್ರಾಮದ ಶ್ರೀ ಕಲ್ಲಪ್ಪಾ ಕಾಡಪ್ಪಾ ದೇಸಾಯಿ ಮತ್ತು ಮಲ್ಲಪ್ಪಾ ಕಾ. ದೇಸಾಯಿಯವರು ತಮ್ಮ ತಂದೆ ದಿ. ಕಾಡಪ್ಪಾ ಬಾ. ದೇಸಾಯಿಯವರ ಸ್ಮರಣಾರ್ಥ ಸತ್ತಿಯಲ್ಲಿರುವ ೯೪ ಎಕರೆ ಭೂಮಿಯನ್ನು ದಾನವಾಗಿ ಕೊಟ್ಟರು.

ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಜಿಲ್ಲಾ ಸ್ಥಳದಿಂದ ದೂರದಲ್ಲಿರುವ, ಈ ತಾಲೂಕಿನ ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಗಳನ್ನು ಕಂಡಾಗ ಸಂತೋಷವೂ ಆಗುತ್ತದೆ; ನಿರಾಶೆಯೂ ಆಗುತ್ತದೆ. ಸರಕಾರಕ್ಕಿಂತ ಖಾಸಗಿ ಶಿಕ್ಷಣ ಸಂಸ್ಥೆಗಳ ತ್ಯಾಗ, ಪರಿಶ್ರಮಗಳು ಅಧಿಕವೆಂಬುದು ಈ ತಾಲೂಕಿನ ಶೈಕ್ಷಣಿಕ ಇತಿಹಾಸದಿಂದ ಮನದಟ್ಟಾಗುತ್ತದೆ. ಈ ತಾಲೂಕಿನ ಹಿರಿಯರು, ಈ ಭಾಗದಲ್ಲಿ ಜ್ಞಾನ ಜ್ಯೋತಿ ಬೆಳಗಿಸಲು ಮಾಡಿದ ಪ್ರಯತ್ನಗಳು ಅಮೋಘ. ಆದರೆ ತಾಲೂಕಿನಲ್ಲಿ ಮಕ್ಕಳ ಭವಿಷ್ಯಕ್ಕೆ ನೆರವಾಗುವ ವೃತ್ತಿ ತರಬೇತಿ ಕೇಂದ್ರಗಳು ಕಡಿಮೆ. ಸಂಘ ಸಂಸ್ಥೆಗಳು, ಸರಕಾರ ಈ ಕುರಿತಾಗಿ ಮಾಡಿದ ಪ್ರಯತ್ನ ತೃಪ್ತಿಕರವಾಗಿಲ್ಲ.

ಆ ದಿನಗಳಲ್ಲಿ ವಿದ್ಯಾಪ್ರಸಾರದ ಘನ ಉದ್ದೇಶವನ್ನಿಟ್ಟುಕೊಂಡು ಹುಟ್ಟಿದ ಶಿಕ್ಷಣ ಸಂಸ್ಥೆಗಳ ಮಧ್ಯ ಆರೋಗ್ಯಕರ ಪೈಪೋಟಿ ಇತ್ತು. ಕೆಲವೊಮ್ಮೆ ಅಡ್ಡದಾರಿ ಹಿಡಿದ ಪ್ರಸಂಗಗಳು ಉಂಟಾಗಿದ್ದವೆಂದು ಹಿರಿಯರು ಜ್ಞಾಪಿಸುತ್ತಾರೆ. ಆದರೆ ಇತ್ತೀಚಿಗೆ ನಮ್ಮ ತಾಲೂಕಿನಲ್ಲಿ ಅಷ್ಟೇ ಅಲ್ಲ ಎಲ್ಲ ಕಡೆಗೂ ಕೆಲವೊಂದು ಶಿಕ್ಷಣ ಸಂಸ್ಥೆಗಳು ವ್ಯಾಪಾರಕ್ಕಾಗಿ, ಲಾಭಕ್ಕಾಗಿ ಹುಟ್ಟಿದಂತೆ ತೋರುತ್ತದೆ. ಇದರಿಂದ ಸಾರ್ವಜನಿಕರಿಗೆ ಶಿಕ್ಷಣ ಸಂಸ್ಥೆಗಳ ಬಗ್ಗೆ ಇದ್ದ ಆದರ ಕಡಿಮೆಯಾಗುತ್ತಲಿದೆ. ವಿದ್ಯಾರ್ಥಿಗಳನ್ನು ಆಕರ್ಷಿಸಲು ರಾಜಕೀಯ, ಕಪಟ, ತಂತ್ರಗಳು ಕುಟಿಲೋಪಾಯಗಳು ಹೆಚ್ಚಾಗುತ್ತಲಿವೆ. ಇಂಥ ಅಹಿತಕರ ಬೆಳವಣಿಗೆಗಳಿಂದ ಶಿಕ್ಷಣ ಪ್ರೇಮಿಗಳಿಗೆ ಪ್ರಾಜ್ಞರಿಗೆ ಅಸಮಾಧಾನ ಉಂಟಾಗುತ್ತಲಿದೆ.

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಅಥಣಿ ತಾಲೂಕು : ಸಾಹಿತ್ಯ ಮತ್ತು ಸಂಸ್ಕೃತಿ

● ವಿ. ಎಸ್. ಮನವಾಡೆ

ಭೌಗೋಲಿಕ ಸಂಲಗ್ನತೆಯು ಜನಮನದ ಬದುಕು ಬಾಗಿನಗಳ ಮೇಲೆ. ಅವರ ಧರ್ಮ ಕ್ರಿಯಾಚಾರ. ಅರ್ಥ ಸಂಪನ್ನತೆಯ ವ್ಯಾಪಾರ ವ್ಯವಹಾರಗಳ ಮೇಲೆ ಅದಮ್ಯವಾದ ನಿರಂತರವಾದ ಪ್ರಭಾವ ಬೀರುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾಗದು. ಈ ಪ್ರಭಾವ ಅದರ ಇತಿಹಾಸ ಚಕ್ರದ ಮೇಲೆಯೂ ಬಿದ್ದಿರುತ್ತದೆಂಬುದನ್ನೂ ಅಲ್ಲಗಳೆಯುವಂತಿಲ್ಲ. ಮೇಲ್ನೋಟಕ್ಕೆ ಅಥಣಿಯ ಪ್ರದೇಶ ಅರ್ಧಭಾಗದಲ್ಲಿ ಸದಾವ ಕಾಲದಲ್ಲಿಯೂ ಭೀಕರ ಕ್ಷಾಮ ಅನುಭವಿಸುತ್ತಿದ್ದರೆ ಇನ್ನರ್ಧ ಭಾಗವು ಸದಾಕಾಲವೂ ಕೃಷ್ಣೆಯ ಪುಣ್ಯದ ಸಂಚಲಿತ ಹರಿದ್ವರ್ಣದಿಂದ ಸಮೃದ್ಧಿಯಿಂದ ಸುಶೋಭಿಸುತ್ತಿರುವದು. ಇತಿಹಾಸದ ಉದ್ದಕ್ಕೂ ಈ ಪ್ರದೇಶ ಮತ್ತು ಅಥಣಿ ಪಟ್ಟಣವು ಭೌಗೋಲಿಕವಾಗಿ ಆಯಕಟ್ಟಿನ ಸ್ಥಾನವನ್ನು ಹೊಂದಿ ಪ್ರಸಿದ್ಧಿ ಪಡೆದಿದೆ. ಪಶ್ಚಿಮದ ಗೋವೆ. ರತ್ನಾಗಿರಿ. ಕೊಂಕಣ ನಾಡನ್ನು ಪೂರ್ವದ ವಿಜಾಪುರ. ಹೈದರಾಬಾದ. ವಿಜಯವಾಡ ಪ್ರದೇಶಗಳನ್ನು ಸೇರಿಸುವ ರಾಜಮಾರ್ಗದ ಮೇಲೆ ಅಲ್ಲದೆ ದಕ್ಷಿಣೋತ್ತರ ಪ್ರದೇಶಗಳನ್ನು ಕೂಡಿಸುವ ಕೊಂಡಿಯಾಗಿ ನೆಲೆ ನಿಂತು ರಾಜಕೀಯ ಮತ್ತು ವ್ಯಾಪಾರ ವಹಿವಾಟಿನ ಆಯಕಟ್ಟಿನ ಸ್ಥಾನದಲ್ಲಿರುವದನ್ನು ಕಾಣುತ್ತೇವೆ.

ಅಥಣಿ ಪರಿಸರದಲ್ಲಿನ ದೇವಸ್ಥಾನಗಳ ಶಿಲ್ಪಕಲಾ ವೈಭವವನ್ನು ಗಮನಿಸಿದಾಗ ಈ ಪ್ರದೇಶವು ಗತ ಕಾಲದಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ತುಂಬಿ ತುಳುಕುತ್ತಿತ್ತೆಂಬುದಕ್ಕೆ ಅಥಣಿಯ ಅಮೃತೇಶ್ವರ ದೇವಸ್ಥಾನ. ಕಾಡಸಿದ್ಧೇಶ್ವರ. ನಂದಗಾಂವಿಯ ಹಾಳು ಸುರಿಯುತ್ತಿರುವ ಶಿವಾಲಯ. ಜಿನಾಲಯಗಳು. ಮಂಗಸೂಳಿಯ ಮಲ್ಲಯ್ಯ. ಬಳ್ಳಿಗೇರಿಯ ಬಸವಣ್ಣ. ಖಿಳೇಗಾಂವಿಯ ಬಸವಣ್ಣ. ಕೊಕಟನೂರಿನ ಶ್ರೀ ಯಲ್ಲಮ್ಮದೇವಿ ದೇವಸ್ಥಾನಗಳು ಇತಿಹಾಸಕ್ಕೆ ಮೂಕ ಸಾಕ್ಷಿಯಾಗಿ ನಿಂತಿವೆ. ಇವಕ್ಕೆ ಪೂರಕವಾಗಿ ಬೆಳೆದು ಬಂದ ಅಥಣಿಯ ಗಚ್ಚಿನಮಠ. ಮೋಟಗಿಮಠ. ಶೆಟ್ಟರಮಠ. ತೆಲಸಂಗದ ಹಿರಿಯಮಠ. ಶೇಗುಣಸಿಯ ವಿರಕ್ತಮಠ. ತೀರ ಇತ್ತೀಚಿನ ರಾಯರಮಠ ಈ ಮಠ-ಮಂದಿರಗಳು ಜನತೆಯ ಸುಸಂಸ್ಕೃತಿಯನ್ನು

ಬೆಳೆಸಿಕೊಂಡು ಉಳಿಸಿಕೊಂಡು ಬಂದುದನ್ನು ನಿಚ್ಚಳವಾಗಿ ಸಾರುತ್ತಿವೆ. ರಾಜಕೀಯ ಏರಿಳಿತಗಳು ಅಂದಂದಿನ ಆಳರಸರ ಒಳಾಸೆ. ಒತ್ತಾಸೆಗಳ ಪರಿಣಾಮವಾಗಿ ಮೂಡಿ ಬಂದ ಮಸೀದಿ-ಮಂದಿರಗಳು ಕಣ್ಣಿಗೆ ಗೋಚರಿಸುತ್ತವೆ. ಸಾಂಸ್ಕೃತಿಕ ಭಾವೈಕ್ಯವನ್ನು ಸಾರುತ್ತಿವೆ. ಆಶ್ಚರ್ಯದ ಮಾತೆಂದರೆ ಈ ಭಾಗದಲ್ಲಿ ಚರ್ಚಿನ ಪ್ರವೇಶವಾಗಿಲ್ಲದೆ ಇರುವದು. (ಈ ಲೇಖನ ಬರೆಯುವ ಸಂದರ್ಭದಲ್ಲಿ ಚರ್ಚೆ ಒಂದು ಮೂಡಿ ಬಂದಿದೆ ಎನ್ನುವುದು ಸತ್ಯ.)

ಈ ಹಿನ್ನೆಲೆಯಲ್ಲಿ. ಇತಿಹಾಸದ ಗಜಗರ್ಭದಲ್ಲಿ ಕವಿ. ಸಾಹಿತಿಗಳ ಅನಂತ ಕೃತಿಗಳೂ ಹುದುಗಿ ಹೋಗಿರಬಹುದೆನ್ನುವದಕ್ಕೆ ಈ ಶ್ರೀಮಂತ ಸಂಸ್ಕೃತಿಯೇ ಸಾಕ್ಷಿ. ಆದರೆ ಅದಕ್ಕೆ ಬಳ್ಳಿಗೇರಿಯ ಕೆಲವು ಶಿಲಾಶಾಸನಗಳು. ವೀರಗಲ್ಲುಗಳು. ಮಾಸ್ತಿಕಲ್ಲುಗಳು ಅಲ್ಲಲ್ಲಿ ನಿಂತು ಮೂಕ ಸಾಕ್ಷಿ ಆಗಿವೆ ಹೊರತು ನಿರ್ದಿಷ್ಟ ಪುರಾವೆಗಳು ಸಲ್ಲದೆ ೧೯ನೆಯ ಶತಮಾನದ ಅಂತ್ಯದ ಕೆಲವು ದಶಕಗಳಿಂದ ಸಾಹಿತ್ಯಿಕ ಕೃತಿಗಳ. ವ್ಯಕ್ತಿಗಳ ಇತಿಹಾಸ ಮಾತ್ರ ಕಾಣಬರುತ್ತದೆ. ಆದ್ದರಿಂದ ಈ ದಿಸೆಯಲ್ಲಿ ಸಂಶೋಧನೆ ತೀರ ಅಗತ್ಯ.

ಅಥಣಿ ಸಾಹಿತ್ಯಿಕ ಪರಿಸರ ಬಹಳ ವಿಶಾಲವಾಗಿದೆ. ಇದರ ಮೇರೆಗಳು ಪೂರ್ವದ ವಿಜಾಪುರ. ದಕ್ಷಿಣಕ್ಕೆ ಬಾಗಲಕೋಟೆ ಜಿಲ್ಲೆಯ ಜಮಖಿಂಡಿ. ಮುಧೋಳ ತಾಲೂಕುಗಳು. ಅಲ್ಲದೆ ಬೆಳಗಾವಿ ಜಿಲ್ಲೆಯ ರಾಯಬಾಗ. ಗೋಕಾಕ ತಾಲೂಕುಗಳು, ಪಶ್ಚಿಮಕ್ಕೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕು ಹಾಗೂ ಉತ್ತರಕ್ಕೆ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪೂರ ಹಾಗೂ ಸಾಂಗಲಿ ಜಿಲ್ಲೆಗಳ ಪ್ರದೇಶಗಳ ಮಧ್ಯದ ಕೃಷ್ಣೆಯ ಹರಿದ್ವರ್ಣ ಪ್ರದೇಶ ಹಾಗೂ ಸದಾ ಕ್ಷಾಮದ ಭೀತಿಯ ಬಯಲು ಗುಡ್ಡಗಾಡು ಪ್ರದೇಶವನ್ನು ಒಳಗೊಂಡಿದೆ. ಇಲ್ಲಿನ ಸಾಹಿತಿಗಳು. ಕವಿಗಳು ತಮ್ಮ ಕೃತಿಗಳಲ್ಲಿ ಇಲ್ಲಿನ ಸಮೃದ್ಧತೆಯನ್ನೂ ಬರದ ಬವಣೆಯನ್ನು ಸಂಪ್ರದಾಯಬದ್ಧ ಶೋಷಣೆ. ಮೂಢನಂಬಿಕೆಗಳನ್ನು ಪುಷ್ಕಳವಾಗಿ ಚಿತ್ರಿಸಿದ್ದಾರೆ. ಈ ಪ್ರದೇಶವನ್ನು ಕಾಲಕಾಲಕ್ಕೆ ಆಳಿದ ಆಳರಸರ ಭಾಷೆ ವೈವಿಧ್ಯತೆಗಳೇನೇ ಇದ್ದರೂ ಇಲ್ಲಿನ ಮಣ್ಣಿನ ಭಾಷೆ ಕನ್ನಡವೇ ಆಗಿತ್ತು. ಆಗಿದೆ. ಇತರ ಭಾಷೆಗಳಾದ ಉರ್ದು. ಮರಾಠಿ. ಇಂಗ್ಲೀಷ ಹಾಗೂ ಪ್ರಾಚೀನ ಭಾಷೆಯಾದ ಸಂಸ್ಕೃತಗಳ ಪ್ರಭಾವ ಕನ್ನಡದ ಮೇಲೆ ಆಗಿದ್ದರೂ ಅದರ ಅಸ್ತಿತ್ವಕ್ಕೇನೂ ಕುಂದು ಬರದೇ ಅದು ಸಮೃದ್ಧವೇ ಆಯಿತು. ಹೊರ ಭಾಷೆಗಳ ಪ್ರಭಾವದಿಂದ ಈ ಪ್ರದೇಶದ ಮೂಲ ಭಾಷೆಯ ಮೇಲೆ ಬಿದ್ದ ಪ್ರಭಾವ ಹೊಸ ರೀತಿಯ ಆಡುಭಾಷೆಯಾಗಿ ಬೆಳೆದು ನಿಂತು. ಅಂತಹ ಆಡು ಭಾಷೆಯನ್ನೇ ಸಮೃದ್ಧವಾಗಿ ತಮ್ಮ ಶ್ರೇಷ್ಠ ಕೃತಿಗಳಲ್ಲಿ ಬಳಸಿಕೊಂಡು ಸಾಹಿತಿಗಳೂ ಶ್ರೇಷ್ಠರೆನಿಸಿಕೊಂಡರು. ಆ ಕೃತಿಗಳಿಗೆ ಕನ್ನಡ ಸಾಹಿತ್ಯದಲ್ಲಿ ಪ್ರಾದೇಶಿಕ ಶ್ರೇಷ್ಠತೆ ಲಭಿಸಿದ್ದನ್ನು ನಾವು ಕಾಣುತ್ತೇವೆ. ಉದಾ: ಮಿರ್ಜಿ ಅಣ್ಣಾರಾಯರ ನಿಸರ್ಗ. ದು.ನಿಂ.ಬೆಳಗಲಿ ಅವರ ಜೋಗಿ ಮರಡಿ. ದೇವದಾಸಿ. ಕಾತ್ರಾಳರತ್ನಿಯ ಚಾದಂಗಡಿ. ಮೌನ ಕ್ರಾಂತಿ ಇತ್ಯಾದಿ. ಬ್ರಿಟಿಷ್

ಆಡಳಿತದಲ್ಲಿ ಶಿಕ್ಷಣವು ಸಾರ್ವತ್ರಿಕತೆಯನ್ನು ಪಡೆದಂತೆ ಜನ ಸಾಮಾನ್ಯರಲ್ಲೂ ಸಾಹಿತ್ಯ ನಿರ್ಮಾಣ ಶಕ್ತಿ. ಗುಂಗಾಗಿ ಮೂಡತೊಡಗಿದ್ದನ್ನು ಅದರ ಪರಿಣಾಮವಾಗಿ ಅನೇಕ ಸಾಹಿತಿಗಳು ರಂಗದ ಮೇಲೆ ಮೂಡ ತೊಡಗಿದರು. ಸಾಂಸ್ಕೃತಿಕ ಜೀವನಕ್ಕೆ. ಬದುಕಿಗೆ ಹೊಸ ರಂಗು ಮೂಡತೊಡಗಿತು. ಅಂತೆಯೇ ರಂಗಭೂಮಿ ಹೊಸ ಆಯಾಮಗಳನ್ನು ಪಡೆದುಕೊಳ್ಳತೊಡಗಿತು. ಪುರಾಣ ಪ್ರವಚನಕ್ಕೆ ಸೀಮಿತಗೊಂಡಿದ್ದ ಸಾಂಸ್ಕೃತಿಕ ಬದುಕು ಮೆಲ್ಲನೆ ಸಂಗೀತ. ನಾಟಕಗಳ ಬೆಳವಣಿಗೆಯಿಂದ ಅರಳತೊಡಗಿತು. ಮರಾಠಿ ಜಾನಪದ ರಂಗಭೂಮಿಯ 'ತಮಾಶಾ' ಜಲಸಾಗಳು ಸಾಮಾನ್ಯ ಜನರನ್ನು ಅವರ ಕೀಳು ಅಭಿರುಚಿಗಾಗಿ ಆಕರ್ಷಿಸಿದರೆ ಮರಾಠಿ ಶಿಷ್ಟ ಸಾಹಿತ್ಯದ ಬೆಳವಣಿಗೆಯಿಂದ ಸಮೃದ್ಧಗೊಂಡ ರಂಗಭೂಮಿ ಸಾಮಾಜಿಕ ಕೌಟುಂಬಿಕ ನಾಟಕಗಳನ್ನು ನೀಡುತ್ತ ನವೀಕರಣಗೊಂಡಿತು. ಇದರ ಪ್ರಭಾವ ಕನ್ನಡ ಪ್ರದೇಶದ ಮೇಲೂ ಮತ್ತು ರಂಗಭೂಮಿಯ ಮೇಲೂ ಸಾಕಷ್ಟು ಆಗಿ ಪರಿವರ್ತನೆಯನ್ನು ಕಾಣತೊಡಗಿತು.

ಮರಾಠಿ ಆಳರಸರ ಪ್ರಭಾವವಿದ್ದಾಗ್ಯೂ ಅಥಣಿ ಪ್ರದೇಶ ಕನ್ನಡತನವನ್ನು ಉಳಿಸಿಕೊಂಡು ಬಂದಿತೆಂಬುದನ್ನು ದಿ॥ ಆಲೂರ ವೆಂಕಟರಾಯರು ತಮ್ಮ ಆತ್ಮ ವೃತ್ತಾಂತದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "೧೯೧೬ರಲ್ಲಿ ಪುಣೆಯಲ್ಲಿ ಹೋಮ್‌ರೂಲ್ ಲೀಗ್‌ನ ಸ್ಥಾಪನೆಯಾಯಿತು. ಪುಣೆಯಲ್ಲಿ ಕೂಡಿದ ಈ ಹೋಮರೂಲ್ ಲೀಗ್‌ನ ಸಭೆಯಲ್ಲಿ ನಾನು ಕರ್ನಾಟಕದ ದೃಷ್ಟಿಯಿಂದ ಒಂದು ಮಹತ್ವದ ಬದಲಾವಣೆಯನ್ನು ಮಾಡಿದೆ. ಅದೇನೆಂದರೆ ಕರ್ನಾಟಕಕ್ಕೆ ಪ್ರತ್ಯೇಕವಾದ ಶಾಖೆಯಿರಬೇಕೆಂದು ಶ್ರೀ ಗಂಗಾಧರರಾವ ದೇಶಪಾಂಡೆ ಹಾಗೂ ಶ್ರೀ ಮಜಲಿ ಇವರ ಮನಸ್ಸಿನಲ್ಲಿ ಹಾಗೆ ಮಾಡುವದು ಇರಲಿಲ್ಲ. ಆದರೆ ನಾನು ಹಟ ಹಿಡಿದು ಮಾಡಿಸಿಕೊಂಡೆ. ಲೋಕಮಾನ್ಯ ಟಿಳಕರಿಗೆ ನನ್ನ ಮತವು ಸಮ್ಮತವಾಯಿತು. ಗಂಗಾಧರರಾಯರನ್ನು ಕರ್ನಾಟಕದ ಶಾಖೆಗೆ ಅಧ್ಯಕ್ಷರನ್ನಾಗಿ ಮಾಡಲಾಯಿತು. ಅದರಂತೆ ಕರ್ನಾಟಕಕ್ಕೆ ಪ್ರತ್ಯೇಕ ರಾಜಕೀಯ ಪರಿಷತ್ತುಬೇಕೆಂಬ ನನ್ನ ಬೇಡಿಕೆ ಕಾರ್ಯರೂಪಕ್ಕಿಳಿಯಿತು." ಆ ರಾಜಕೀಯ ಪರಿಷತ್ತಿನ ಸಭೆಗಳು ಅಥಣಿ ಮತ್ತು ಚಿಕ್ಕೋಡಿಗಳಲ್ಲಿ ಜರುಗಿದವು. ಅವುಗಳಲ್ಲಿ ಶ್ರೀ ಆಲೂರು ವೆಂಕಟರಾಯರು ಹಾಜರಾಗಿದ್ದರು. ಜೊತೆಗೆ ಕನ್ನಡದಲ್ಲಿ ಸ್ವರಾಜ್ಯದ ಕಲ್ಪನೆ ನೀಡಿ ಸುಮಾರು ಐದಾರು ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಅಷ್ಟರಲ್ಲಿ 'ರೌಲೆಟ್ ಆಕ್ಟ್' ಬಂದ ಕಾರಣ ಪ್ರೆಸ್ಸಿನವರು ಮಿಕ್ಕವುಗಳನ್ನು ಮುದ್ರಿಸಲಿಕ್ಕೆ ಅಂಜಿದರು.

ಲೋಕಮಾನ್ಯ ಟಿಳಕರು ಅಥಣಿಗೆ ೧೯೧೭ರಲ್ಲಿ ಭೆಟ್ಟಿ ನೀಡಿದರು. ಆಗ ಪರಮ ತಪಸ್ವಿ ಶ್ರೀ ಮುರುಘೇಂದ್ರ ಶಿವಯೋಗಿಗಳವರ ದರ್ಶನ .ಪಡೆದು ಭಾರತ ಸ್ವಾತಂತ್ರ್ಯದ ಬಗೆಗೆ ಅವರ ಜೊತೆ ಚರ್ಚೆ ನಡೆಸಿದಾಗ ಪೂಜ್ಯ ಶಿವಯೋಗಿಗಳವರು ನುಡಿದ ಮಾತು ನಿಜವಾಗಿ ಪರಿಣಮಿಸಿತು. ಸ್ವಾತಂತ್ರ್ಯ ಬಂದಾಗ ಟಿಳಕರು ಇದ್ದಿರಲಿಲ್ಲ. ಆದರೆ ಲೋಕಮಾನ್ಯರು ಹೋರಾಟದ ಅಂಗವಾಗಿ ಹಾಕಿಕೊಟ್ಟ

ಸಾಂಸ್ಕೃತಿಕ ಹೆಜ್ಜೆಗಳಾದ ಗಣೇಶೋತ್ಸವ ಹಬ್ಬ ಆಚರಣೆ ಸಾರ್ವತ್ರಿಕಗೊಂಡು ಗಲ್ಲಿಗಲ್ಲಿಗೂ. ಕೇರಿ ಕೇರಿಗೂ ಪಸರಿಸಿ ಜನ ಸಾಮಾನ್ಯರ ಪ್ರೀತಿ ಆದರವನ್ನು ಗಳಿಸಿಕೊಂಡಿದೆ. ಅವರಂತೆ ಅಂದು ಲೋಕಮಾನ್ಯರ ಅಮೃತಹಸ್ತದಿಂದ ಸ್ಥಾಪಿಸಲ್ಪಟ್ಟ ಸಿದ್ಧೇಶ್ವರ ಮೋಫತ ವಾಚನಾಲಯವು ಮುಷ್ಠಿ ಫಂಡ್ ವ್ಯವಸ್ಥೆಯಿಂದ ರೂಪಿಸಲ್ಪಟ್ಟು ಇಂದು ಸುಸಜ್ಜಿತ ಗ್ರಂಥಾಲಯವಾಗಿ ಬೆಳೆದಿದೆ. ಟಿಳಕರ ಮರಣಾನಂತರ ಅವರ ಅಸ್ಥಿಯನ್ನು ಇಲ್ಲಿ ಸಂರಕ್ಷಿಸಿಡಲ್ಪಟ್ಟು ಅದೊಂದು ಸ್ವಾತಂತ್ರ್ಯ ಸ್ಮಾರಕವಾಗಿ ಪರಿವರ್ತಿಸಲಾಗಿದೆ. ಡಾ|| ಪ್ರ. ಗೋ. ಕುಲಕರ್ಣಿ ಅವರು ವ್ಯಾಕರಣ ಶಾಸ್ತ್ರ ಕುರಿತು ರಚಿಸಿದ ಗ್ರಂಥಕ್ಕೆ ಈ ಗ್ರಂಥಾಲಯದ ಉಪಯೋಗ ತೆಗೆದುಕೊಂಡಿರುವುದು ಅತ್ಯಂತ ಸಂಸ್ಮರಣೀಯ ಅಂಶವಾಗಿದೆ. ಇಂದು ಅಥಣಿಯಲ್ಲಿ ಸಿದ್ಧೇಶ್ವರ ವಾಚನಾಲಯವು ಒಂದು ಸಾಂಸ್ಕೃತಿಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ. ತನ್ನ ಗರ್ಭದಲ್ಲಿ ಅಪರೂಪದ ಅನಂತ ಸಾಹಿತ್ಯ ಮತ್ತು ಶಾಸ್ತ್ರಗಳ ಹೊತ್ತಿಗೆಗಳನ್ನು ತುಂಬಿಕೊಂಡು ಶ್ರೀಮಂತ ಗ್ರಂಥಾಲಯವಾಗಿ ಅಥಣಿ ಇತಿಹಾಸದ ಸಾಕ್ಷಿ ಕಂಬವಾಗಿ ನಿಂತಿದೆ. ಸ್ವಾತಂತ್ರ್ಯ ಹೋರಾಟಗಾರರು ಬಹಳಷ್ಟು ಜನ ಈ ಗ್ರಂಥಾಲಯಕ್ಕೆ ಭೆಟ್ಟಿ ನೀಡಿದ್ದಾರೆ. ಸ್ವಾತಂತ್ರ್ಯ ನಂತರವೂ ಅನೇಕ ಹಿರಿಯ ಅಧಿಕಾರಿಗಳು ವಿದ್ವಜ್ಜನರು ಇಲ್ಲಿ ಭೆಟ್ಟಿ ನೀಡಿದ್ದಾರೆ. ಅವರೆಲ್ಲರ ಹಸ್ತಾಕ್ಷರಗಳ ಸಹಿಗಳನ್ನು ಅಲ್ಲಿ ಸಂಗ್ರಹಿಸಲಾಗಿದ್ದು ಅದೊಂದು ಇತಿಹಾಸ ದಾಖಲೆಯಾಗಿದೆ. ಲೋಕಮಾನ್ಯ ಟಿಳಕರಿಂದ ಪ್ರೇರಣೆಗೊಂಡು ಈ ಪ್ರದೇಶದ ಅನೇಕ ಜನ ತರುಣರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಲ್ಲಿ ಕೆಲವರು ಇನ್ನೂ ಜೀವಂತವಿರುವದು ನಮ್ಮ ಪುಣ್ಯ ವಿಶೇಷ!

ಅಥಣಿ ಪ್ರದೇಶವು ೧೭ನೆಯ ಶತಮಾನದಿಂದ ೧೯ನೆಯ ಶತಮಾನದ ೫ನೆಯ ದಶಕದ ವರೆಗಿನ ಸುಮಾರು ೨೫೦ ವರುಷಗಳು ಸೃಜನಾತ್ಮಕ ಸಾಹಿತ್ಯದ ಕುರಿತು ಶೂನ್ಯ ಕಾಲವಿದ್ದಂತೆ ಕಂಡು ಬರುತ್ತದೆ. ಇದರ ಬಗ್ಗೆಯೂ ಸಂಶೋಧನೆಯ ಅಗತ್ಯವಿದೆ. ಈ ಅವಧಿಯಲ್ಲಿ ಸಾಂಸ್ಕೃತಿಕ ಜೀವನವೆಂಬುದು ಕೇವಲ ಪುರಾಣ-ಪ್ರವಚನಗಳ ಶ್ರವಣ. ಹಬ್ಬ-ಹರಿದಿನಗಳ ಆಚರಣೆ. ಜಾತ್ರೆ. ರಥೋತ್ಸವ. ಬಯಲಾಟಗಳ ಪ್ರವರ್ಶನಕ್ಕೆ ಮಾತ್ರ ಮೀಸಲಾಗಿದ್ದು. ಇಂತಹ ಪರಿಸರ ಮಂಗಳಾರತಿ ಪದಗಳ ರಚನೆಗೆ ಪಕ್ವವಾಗಿತ್ತು. ಆಶು ಕವಿಗಳಿಗೆ ಪ್ರಶಸ್ತ ಪರಿಸರವಿತ್ತು.

ಕ್ರಮೇಣ ಆಂಗ್ಲ ಶಿಕ್ಷಣದ ಪ್ರಭಾವದಿಂದ ಕೆಲವು ಶ್ರೀಮಂತ ತರುಣರು ಪುಣೆ. ಮುಂಬಯಿಗಳಿಗೆ ಹೋಗಿ ಉನ್ನತ ಶಿಕ್ಷಣ ಪಡೆಯುತ್ತಿದ್ದರು. ಇದು ಕನ್ನಡ ಸಾಹಿತ್ಯದ ನವೋದಯ ಕಾಲವಾಗಿತ್ತು. ಕಾದಂಬರಿ ಸಾಹಿತ್ಯ ಪ್ರಕಾರವು ಕನ್ನಡದಲ್ಲೂ ರೂಪು ಪಡೆಯುತ್ತಿದ್ದ ಕಾಲ. ಶ್ರೀ ಗಂಗಾಧರ ಮಡಿವಾಳೇಶ್ವರ ತುರಮರಿ ಅವರು 'ಬಾಣ' ಕಾದಂಬರಿಯನ್ನು ಕನ್ನಡದಲ್ಲಿ ಸ್ವತಂತ್ರ ಕೃತಿ ಎನ್ನುವಷ್ಟರ ಮಟ್ಟಿಗೆ ಉತ್ಕೃಷ್ಟವಾಗಿ ಅನುವಾದಿಸಿದ್ದರು. ತುರಮರಿಯವರು ಕೆಲವು ಕಾಲ ಅಥಣಿಯಲ್ಲಿ ಕಳೆದ ಬಗ್ಗೆ ತಿಳಿದು ಬರುತ್ತದೆ. ಆಗಿನ್ನೂ ಇಲ್ಲಿ ಯಾವುದೇ ಶಿಕ್ಷಣ

ಸಂಸ್ಥೆಗಳು ಇದ್ದ ಬಗ್ಗೆ ತಿಳಿಯುವುದಿಲ್ಲ. ಇದ್ದ ನಾಲ್ಕು ಮಠಗಳಲ್ಲಿಯೇ ಧಾರ್ಮಿಕ ಶಿಕ್ಷಣ ಸಂಸ್ಕೃತ ಅಧ್ಯಯನ ಜರುಗುತ್ತಿತ್ತು.

ಕರ್ನಾಟಕದ ಗಾಂಧಿ ಎಂದು ಕರೆಯಿಸಿಕೊಂಡ. ತೀವ್ರ ಕ್ರಾಂತಿಕಿಡಿಗಳನ್ನು ತನ್ನ ಹೃದಯದಲ್ಲಿ ತುಂಬಿಕೊಂಡಿದ್ದ ದಿ॥ ಹರ್ಡೇಕರ ಮಂಜಪ್ಪನವರು ಪೂಜ್ಯ ಲಿ॥ ಮೃತ್ಯುಂಜಯ ಅಪ್ಪಗಳವರ ಸತ್ಪ್ರೇರಣೆಯಂತೆ ಅಥಣಿಯ ತಪೋಸಿಧಿ ಶಿವಯೋಗಿ ಮುರುಘೇಂದ್ರ ಸ್ವಾಮಿಗಳವರ ದರ್ಶನ ಪಡೆದು ಲಿಂಗದೀಕ್ಷೆಕೊಂಡು ಶರಣರಾದಿ ಘಟನೆ ನಿಜಕ್ಕೂ ಪವಾಡವೇ ಸರಿ. ಮಂಜಪ್ಪನವರಲ್ಲಿ ಆಮೂಲಾಗ್ರವಾದ ಬದಲಾವಣೆ ತಂದು ಅವರ ವಿಚಾರ ಸರಣಿಯೇ ಬದಲಾಯಿತು. ಅವರ ದಿನಚರಿ ಬದಲುಗೊಂಡಿತು. ಇದು ಕನ್ನಡ ಸಾಹಿತ್ಯದ ಮೇಲೆ ಕನ್ನಡ ಪತ್ರಿಕಾ ರಂಗದ ಮೇಲೆ ಮತ್ತು ಸಮಗ್ರ ವೀರಶೈವ ಸಾಹಿತ್ಯ ಸಂಶೋಧನೆಯ ಮೇಲೆ ವಚನ ವಾಙ್ಮಯದ ಸಂಶೋಧನೆ ಮೇಲೆ ಅಭೂತಪೂರ್ವ ಪರಿವರ್ತನೆಯನ್ನು ತಂದಿತು. ಈ ಪರಿವರ್ತನೆಗೆ ಅಥಣಿ ಪರಿಸರ ಕಾರಣವಾದುದು ಐತಿಹಾಸಿಕ ಸತ್ಯ.

೨೦ನೆಯ ಶತಮಾನದ ೨ ಮತ್ತು ೩ನೆಯ ದಶಕದಲ್ಲಿ ಅಥಣಿ ಮತ್ತು ಐನಾಪುರಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾದವು. ಅಥಣಿಯಲ್ಲಿ ಜೆ.ಇ.ಶಿಕ್ಷಣ ಸಂಸ್ಥೆಯೂ (೧೯೧೮). ಐನಾಪುರದಲ್ಲಿ ಕೆ.ಆರ್.ಇ ಸಂಸ್ಥೆಯೂ (೧೯೨೨) ಪ್ರಾರಂಭಗೊಂಡವು. ಸಾಮಾನ್ಯರಿಗೂ ಶಿಕ್ಷಣ ಪಡೆದುಕೊಳ್ಳಲು ಅನುಕೂಲವಾಗಿ ದೂರದ ಸಾಂಗಲಿ. ಸೊಲ್ಲಾಪುರ. ಕೊಲ್ಲಾಪುರ. ವಿಜಾಪುರ. ಬೆಳಗಾವಿ ಪುಣೆ. ಮುಂಬಯಿಗಳಿಗೆ ಹೋಗುವದು ತಪ್ಪಿ ಮ್ಯಾಟ್ರಿಕ್ ವರೆಗಿನ ಶಿಕ್ಷಣದ ವ್ಯವಸ್ಥೆಯಾಯಿತು. ಕಾಲೇಜು ಶಿಕ್ಷಣಕ್ಕೆ ಮಾತ್ರ ಕೊಲ್ಲಾಪುರ. ಪುಣೆ. ಮುಂಬಯಿಗಳಿಗೆ ಕೆಲವೇ ಕೆಲವು ಕುಶಾಗ್ರಮತಿಗಳು ಮತ್ತು ಅನುಕೂಲಸ್ಥರು ಹೋಗುತ್ತಿದ್ದರು. ಇಂತಹ ಕೆಲವು ವ್ಯಕ್ತಿಗಳು ಆದರ್ಶವನ್ನು ಮೈಮನಗಳಲ್ಲಿ ತುಂಬಿಕೊಂಡು ಶಿಕ್ಷಣ ಪೂರೈಸಿಕೊಂಡು ಬಂದು ಅಥಣಿಯಲ್ಲಿ ಶಿಕ್ಷಣ ಪ್ರಸಾರದ ಸಾಹಿತ್ಯಾಭಿವೃದ್ಧಿಯ ಕೆಲಸಗಳಿಗೆ ತಮ್ಮನ್ನು ತಾವು ತೊಡಗಿಸಿಕೊಂಡರು.

ಒಂದೆಡೆ ಶಿಕ್ಷಣ ಸಂಸ್ಥೆಗಳು. ಇನ್ನೊಂದೆಡೆ ಮಠ-ಮಂದಿರಗಳು. ಮಗದೊಂದೆಡೆ ಭಜನಾ ಮಂಡಳಿ. ತರುಣ ಸಂಘಗಳು. ಶ್ರೀ ಗಜಾನನ ಡಿಬೇಟಿಂಗ್ ಕ್ಲಬ್. ಗೀತಾ ಧರ್ಮ ಮಂಡಳಿ ಮುಂತಾದವುಗಳು ಸ್ಥಾಪನೆಗೊಂಡು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ರಂಗವು ವಿಕಾಸಗೊಳ್ಳತೊಡಗಿತು. ಮಧ್ಯ ಮಧ್ಯದಲ್ಲಿ ವೃತ್ತಿರಂಗಭೂಮಿ ಕಂಪನಿಗಳು ಬಂದು ನಾಟಕಗಳನ್ನಾಡಿ ಈ ರಂಗವನ್ನು ಇನ್ನಷ್ಟು ರಂಗುಗೊಳಿಸಿದವು.

ಕನ್ನಡ ಸಾಹಿತ್ಯದ ಇತಿಹಾಸವು ಪ್ರಮುಖವಾಗಿ ವೀರಶೈವ ವೈಷ್ಣವ ಮತ್ತು ಜೈನ ಧರ್ಮದ ಮೂಲ ತತ್ವಗಳನ್ನಾಧರಿಸಿ ಸೃಜಿತ ಸಾಹಿತ್ಯವನ್ನು ಒಳಗೊಂಡಿದೆ. ಈ ದೇಶಕ್ಕೆ ಮುಸಲ್ಮಾನ ಮತ್ತು ಕ್ರಿಶ್ಚಿಯನ್ ಆಡಳಿತ ಬಂದರೂ ಈ ಮೂಲ

ಸೆಲೆಯ ಮೇಲೆ ಯಾವುದೇ ಗಾಢ ಪ್ರಭಾವ ಬೀರಲಿಲ್ಲ. ಆದಾಗ್ಯೂ ಇಂಗ್ಲೀಷ ಸಾಹಿತ್ಯ ಮತ್ತು ಕವಿಗಳ ಪ್ರಭಾವ ನವೋದಯ ಕಾಲದ ಸಾಹಿತ್ಯದ ಮೇಲಾಗಿ ನವ್ಯಸಾಹಿತ್ಯಕ್ಕೆ ಇಂಬುಗೊಂಡಿತು. ಸಾಂಪ್ರದಾಯಿಕ ಕಾವ್ಯ ಛಂದಸ್ಸಿನ ಮೇರೆಯನ್ನು ಮೀರಿ ಸ್ವಚ್ಛಂದಕ್ಕೆ ಕ್ರಮಿಸಿತು. ಕಥೆ, ಕಾದಂಬರಿ ಪ್ರಕಾರಗಳ ಸಮೃದ್ಧ ಸಾಹಿತ್ಯ ನಿರ್ಮಿತಿಗೆ ಕಾರಣವಾದರೆ ಗೋಪಾಲಕೃಷ್ಣ ಅಡಿಗರಂಥ ನವ್ಯಕವಿಗಳು ರಂಗದ ಮೇಲೆ ರಾರಾಜಿಸಿದರು. ಈ ಬೆಳವಣಿಗೆ ಇಡಿ ಕನ್ನಡ ನಾಡಿನುದ್ದಕ್ಕೂ ಆವರಿಸಿತು.

ಬೆಳಗಾವಿ ಜಿಲ್ಲೆಯಲ್ಲಿದ್ದು ಮಹಾರಾಷ್ಟ್ರದ ಗಡಿಯಲ್ಲಿ ಕನ್ನಡದ ದುಂದುಭಿಯಾಗಿ ಅಥಣಿ ಕನ್ನಡ ಸಾಹಿತ್ಯಕ್ಕೆ ಒಳ್ಳೆಯ ಪರಿಸರವನ್ನೇ ನೀಡಿತ್ತು. ೧೯೩೫ ಡಿಸೆಂಬರ ತಿಂಗಳಲ್ಲಿ ಪ್ರಪ್ರಥಮ ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಅಥಣಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಸಂಘಟಿಸಲಾಗಿತ್ತು. ಕನ್ನಡದ ಕಣ್ವ ಶ್ರೀ ಬಿ. ಎಂ. ಶ್ರೀಕಂಠಯ್ಯ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಉದ್ದಾಮ ಕವಿಗಳಾದ ದಿ॥ ರೈನಾಪೂರ ಶಿರಸ್ತೇದಾರರು ಸ್ವಾಗತಾಧ್ಯಕ್ಷರಾಗಿದ್ದರು.

ಅಖಿಲ ಭಾರತ ಕೀರ್ತಿವೆತ್ತ ಪಂಡಿತ ತಾರಾನಾಥರ ಅಥಣಿ ಭೇಟ್ಟಿಯು ಫ್ರೆಂಡ್ಸ್ ಯುನಿಯನ್ ಕ್ಲಬ್ (ಗೆಳೆಯ ಗುಂಪು)ನ್ನು ಸ್ಥಾಪನೆಗೊಳಿಸಿ ಗಣೇಶೋತ್ಸವಕ್ಕೆ ನಾಂದಿ ಹಾಡಿತು.

ಇಷ್ಟೊತ್ತಿಗೆ ಸ್ವಾತಂತ್ರ್ಯ ಚಳುವಳಿಯು ಅಂತಿಮ ಘಟ್ಟಕ್ಕೆ ಬಂದು ನಿಂತಿತ್ತು. ಮಹಾತ್ಮಾ ಗಾಂಧೀ ಅವರ 'ಮಾಡು ಇಲ್ಲವೆ ಮಡಿ' ಕರೆಯು ದೇಶದ ಚೇತನವನ್ನೇ ನೂರ್ಮಡಿಗೊಳಿಸಿತ್ತು. ದೇಶದ ಎಲ್ಲ ಜನ ಸಂಘಟನೆಗಳು. ಸಂಘ-ಸಂಸ್ಥೆಗಳು. ಶಿಕ್ಷಣ ಸಂಸ್ಥೆಗಳು. ವಿದ್ಯಾರ್ಥಿ ಬಳಗ ತಮ್ಮ ತಮ್ಮದೇ ಆದ ರೀತಿಯಲ್ಲಿ ಸಮಯೋಚಿತ ಕಾರ್ಯಕ್ರಮಗಳ ಮೂಲಕ ಹೋರಾಟದಲ್ಲಿ ಧುಮುಕುವ ಜಾಗೃತಿ ಮೂಡಿತ್ತು. ಅದೇ ರೀತಿ ಅಥಣಿಯ ಸಂಘ-ಸಂಸ್ಥೆಗಳು ತರುಣರು ಚಳವಳಿಯಲ್ಲಿ ಧುಮುಕಿದ್ದರು.

ದೇಶ ಸ್ವಾತಂತ್ರ್ಯಗೊಂಡ ಮೇಲೆ ರಾಜ್ಯ ಮತ್ತು ಕೇಂದ್ರ ಸರಕಾರಗಳು ಜನಜಾಗೃತಿಗಾಗಿ ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಗೆ ಪೂರಕವಾಗಿ ಪ್ರೋತ್ಸಾಹ ನೀಡಿದವು.

ಈ ಹಿನ್ನೆಲೆಯಲ್ಲಿ ಅಥಣಿಯಲ್ಲಿ ೧೯೫೭ ನವೆಂಬರದಲ್ಲಿ ಸಾಹಿತ್ಯ ಸಾಂಸ್ಕೃತಿಕ ಸಂಘವು ವರಕವಿ ದ.ರಾ.ಬೇಂದ್ರೆಯವರ ಅಮೃತ ಹಸ್ತದಿಂದ ಪ್ರಾರಂಭವಾಯಿತು. ಈ ಸಂಘಕ್ಕೆ ಕುವೆಂಪು ಹೊರತಾಗಿ ಕನ್ನಡದ ಹಿರಿಯ ಸಾಹಿತಿ-ಕವಿಗಳೆಲ್ಲರೂ ಭೆಟ್ಟಿ ನೀಡಿದ ವೈಶಿಷ್ಟ್ಯವಿದೆ. ಅಲ್ಲದೆ ಕನ್ನಡ-ಮರಾಠಿ ಸಮನ್ವಯ ಕವಿ ಸಾಹಿತಿಗಳೂ ಭೆಟ್ಟಿ ನೀಡಿದ್ದಾರೆ. ೧೯೮೩ರ ಡಿಸೆಂಬರದಲ್ಲಿ ಕನ್ನಡದ ಶರಣ ಕವಿ ಭೂಸನೂರಮಠ ಅವರ ಭವ್ಯ ಮಾನವ ಮಹಾಕಾವ್ಯವನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿ ವಿಚಾರ ಸಂಕಿರಣವನ್ನು ಹಮ್ಮಿಕೊಂಡು ಮಹಾಕವಿಯನ್ನು ಸೂಕ್ತವಾಗಿ ಸನ್ಮಾನಿಸುವ

ಕಾರ್ಯಕ್ರಮ. ಅದರಂತೆ ೧೯೮೪ರ ಏಪ್ರಿಲ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಜರುಗಿದ ರಾಜ್ಯಮಟ್ಟದ ದಾಸಸಾಹಿತ್ಯ ವಿಚಾರ ಸಂಕಿರಣಗಳು ನ ಭೂತೋ ನ ಭವಿಷ್ಯತೆ ಯಶಸ್ವಿಯಾಗಿ ಸಂಘಟನೆಗೊಂಡಿದ್ದವು. ಈ ಸಂದರ್ಭದಲ್ಲಿ ಡಾ॥ ಕುಲಕರ್ಣಿಯವರು ಸಂಘದ ಅಧ್ಯಕ್ಷರೂ ನಾನು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದೆವು.

ಸ್ವಾತಂತ್ರ್ಯ ನಂತರದ ಒಂದೆರಡು ದಶಕಗಳಲ್ಲಿ ಅಥಣಿ ತಾಲೂಕಿನಲ್ಲಿ ಶೈಕ್ಷಣಿಕ ಕ್ರಾಂತಿಯೇ ಜರುಗಿತು. ಇಡೀ ಏಷಿಯಾ ಖಂಡದಲ್ಲಿಯೇ ಮುಂಚೂಣಿ ಶಿಕ್ಷಣ ಸಂಸ್ಥೆ ಎಂದು ಹೆಸರುವಾಸಿ ಆಗಿದ್ದ ಕೆ.ಎಲ್.ಇ. ಸಂಸ್ಥೆಯು ಅಥಣಿಯಲ್ಲಿ ಪ್ರೌಢಶಾಲೆಯನ್ನು ತೆರೆಯಿತು. ಇದೇ ಅವಧಿಯಲ್ಲಿ ಉರ್ದು ಶಾಲೆಯೂ ಪ್ರಾರಂಭಗೊಂಡಿತು. ಸತ್ತಿ. ತೆಲಸಂಗ. ಐಗಳಿ. ಅನಂತಪುರ. ಮದಭಾವಿಗಳಲ್ಲಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿದವು. ಸ್ವಾತಂತ್ರ್ಯ ಚಳವಳಿಯ ಅಂತಿಮ ಘಟ್ಟದ ಸಮಯದಲ್ಲಿಯೇ ಶೇಡಬಾಳ ಕಾಗವಾಡಗಳಲ್ಲಿ ಶಿಕ್ಷಣ ಸಂಸ್ಥೆಗಳು ಪ್ರಾರಂಭಗೊಂಡಿದ್ದವು. ಇದರಿಂದಾಗಿ ಶಿಕ್ಷಣ ಮತ್ತು ಸಾಂಸ್ಕೃತಿಕ ರಂಗದ ದಿಕ್ಕನ್ನೇ ಬದಲಾಯಿಸಲು ಸಾಧ್ಯವಾಯಿತು.

೧೯೫೦ರ ದಶಕದಲ್ಲಿ ಶ್ರೀ ಭೀಮದಾಸರಿಂದ ಸ್ಥಾಪಿಸಲ್ಪಟ್ಟ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವು 'ಎರಡನೆಯ ಮಂತ್ರಾಲಯ'ವೆಂದು ಖ್ಯಾತಿಗೊಂಡಿತು.

ಇಂತಹ ಸುಸಂಸ್ಕೃತ ಪರಿಸರದಲ್ಲೂ ಕೊಕಟನೂರ ಗ್ರಾಮದ ಯಲ್ಲಮ್ಮವಾಡಿ ಶ್ರೀ ಯಲ್ಲಮ್ಮದೇವಿ ದೇವಸ್ಥಾನದಲ್ಲಿ ಸನಾತನ ಸಂಪ್ರದಾಯದ ಕಪಿ ಮುಷ್ಠಿಯಲ್ಲಿ ಮಹಿಳಾ ಕುಲಕ್ಕೆ ಕಳಂಕ ಪ್ರಾಯವಾದ ದೇವದಾಸಿ ಪದ್ಧತಿಯು ಯಾವುದೇ ಭಯವಿಲ್ಲದೇ ನಿರಾತಂಕವಾಗಿ ಸಾಗುತ್ತಿತ್ತು. ನೂರಾರು ನತದೃಷ್ಟ ಹದಿಹರೆಯಕ್ಕೆ ಕಾಲಿಡಲಿರುವ ಪರಿಶಿಷ್ಟರ ಕನ್ಯಾಮಣಿಗಳು ದೇವದಾಸಿಯರಾಗಿ ಮುಂಬಯಿ-ಪುಣೆ-ಕೊಲ್ಹಾಪುರ ಸಾಂಗಲಿಗಳ ವೇಶ್ಯಾಗೃಹಗಳಿಗೆ ಪೂರೈಕೆ ಆಗುತ್ತಿದ್ದರು.

ತಾಲೂಕಿನ ಇಂತಹ ವಾತಾವರಣದಲ್ಲಿ ಶತಮಾನದ ಉದ್ದಕ್ಕೂ ಕನ್ನಡ ಸಾಹಿತ್ಯವು ನವೋದಯ. ನವ್ಯ. ಪ್ರಗತಿಶೀಲ. ಬಂಡಾಯ ಶಿಷ್ಟ ಪರಂಪರೆಗಳೆಲ್ಲವುಗಳಲ್ಲಿ ಹರಿದುಕೊಂಡು ಬಂದು ಎಲ್ಲ ಪ್ರಕಾರದ ಸಾಹಿತಿಗಳನ್ನು ಸಾಹಿತ್ಯ ಕೃತಿಗಳನ್ನು ನಿರ್ಮಿಸಿಕೊಂಡು ಮುನ್ನಡೆದಿದೆ. ಅವರ ಕುರಿತು ಈಗ ಗಮನ ಹರಿಸೋಣ.

ಶ್ರೀ ಕೆ. ಡಿ. ಸಂಗೋರಾಮ :

ಅನೇಕ ಸಂಘ ಸಂಸ್ಥೆಗಳ ಸ್ಥಾಪಕರೂ. ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಅವಧಿಯ ಕಾಲ ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳ ಆಧಾರಸ್ತಂಭರೂ. ಭೀಷ್ಮಪಿತಾಮಹರಂತೆ ಆದರಣೀಯರೂ ಆದ ದಿ॥ ಕೆ.ಡಿ.ಸಂಗೋರಾಮರು ರಚಿಸಿದ

"Path way to God in Vedas" (ವೇದಗಳಲ್ಲಿ ಸಾಕ್ಷಾತ್ಕಾರ ಮಾರ್ಗದರ್ಶನ)ವು ಅಖಿಲ ಭಾರತ ಮನ್ನಣೆ ಪಡೆದ ಗ್ರಂಥವಾಗಿದೆ.

ಶ್ರೀ ಮನೋಹರರಾವ ದೇಶಪಾಂಡೆ :

ಸಾಧು-ಸಂತ-ಅನುಭಾವಿಗಳ ಚರಿತ್ರೆಗಳನ್ನು ಸರಳ ಮತ್ತು ಸುಂದರ ಶೈಲಿಯಲ್ಲಿ ಬರೆಯುವಲ್ಲಿ ಸಿದ್ಧಹಸ್ತರು. ಇಂಗ್ಲೀಷ. ಕನ್ನಡ. ಮರಾಠಿಯಲ್ಲಿ ಸುಲಲಿತವಾಗಿ ಬರೆಯುವದನ್ನು ರೂಢಿಸಿಕೊಂಡಿದ್ದರು. ಇವರ `Light of India` ಎಂಬ ಮಹಾತ್ಮಾ ಗಾಂಧೀ ಅವರ ಮೇಲೆ ಬರೆದ ಗ್ರಂಥವು 'Bhavan's Book University'ಯಲ್ಲಿ ಪ್ರಕಾಶನಗೊಂಡಿತು. ಇವರ ಇನ್ನೊಂದು ಕೃತಿ `ಪ್ರಭುವಿನ ಪ್ರಭೆ` ಶ್ರೇಷ್ಠತೆಯನ್ನು ಮೆರೆದಿದೆ.

ಶ್ರೀ ಬ.ಗಂ.ತುರಮರಿ :

ಕನ್ನಡದ ಕಟ್ಟಾಳುವೆಂದೇ ಪ್ರಸಿದ್ಧಿ ಪಡೆದ ಶ್ರೀ ಬ.ಗಂ.ತುರಮರಿ ಅವರು ಕೆ.ಎಲ್.ಇ. ಸಂಸ್ಥೆಯ ಪ್ರೌಢಶಾಲೆಯ ಪ್ರಾಂಶುಪಾಲರಾಗಿ ಅಥಣಿಗೆ ಬಂದು ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸುಮಾರು ಮೂರು ದಶಕಗಳವರೆಗೆ ಸಲ್ಲಿಸಿದ ಸೇವೆಯು ಅದ್ವಿತೀಯವಾಗಿದೆ. ಅವರು ಸ್ವತಃ ಕವಿ. ವಿಮರ್ಶಕರಾಗಿದ್ದರೂ ಬರೆದುದು ತೀರ ಅಲ್ಪ. ಆದರೆ ಅವರು ಕವಿ. ಸಾಹಿತಿಗಳ ನಿರ್ಮಾಪಕರು. ಬಹಳಷ್ಟು ಹೊಸ ಹೊಸ ಬರಹಗಾರರನ್ನು ಗುರುತಿಸಿ ಅವರನ್ನು ಬೆಳಕಿಗೆ ತಂದವರು. ಡಾ|| ಬುದ್ಧಣ್ಣ ಹಿಂಗಮಿರೆ. ಶ್ರೀ ವೀರೇಶ ಬಡಿಗೇರ ಮುಂತಾದ ಇನ್ನೂ ಹಲವರು. ಇವರು ಸ್ಥಾಪಿಸಿದ "ಸಿರಿನುಡಿ" ಪ್ರಕಾಶನ ಒಂದು ಸಾಹಸಗಾಥೆ. ಇದರಡಿಯಲ್ಲಿ ಹೊಸ ಹೊಸ ಬರಹಗಾರರ ಸುಮಾರು ೨೫ ಕೃತಿಗಳನ್ನು ಪ್ರಕಾಶನಗೊಳಿಸಿದ ಕೀರ್ತಿ ಇವರದು. ಸಾಹಿತ್ಯ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಒಂದು ಅವಧಿಗೆ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಮಂಟಪವೆಂಬ ವೇದಿಕೆಯನ್ನು ನಿರ್ಮಿಸಿ ಪ್ರತಿ ತಿಂಗಳಿಗೆ ಒಂದರಂತೆ ಒಂದು ದಶಕಕ್ಕೂ ಹೆಚ್ಚಿನ ಕಾಲ ಸಾಹಿತ್ಯ ಚರ್ಚೆಯ ಕಾರ್ಯಕ್ರಮವನ್ನು ಜರುಗಿಸಿಕೊಂಡು ಬಂದ ಹಿರಿಮೆ ಅವರದು.

ದಿ|| ಎಂ. ವಿ. ಪಾಟೀಲ :

ವೃತ್ತಿಯಿಂದ ವಕೀಲರಾದರೂ ಪ್ರವೃತ್ತಿಯಿಂದ ಸಾಹಿತ್ಯಾಸಕ್ತರು. ವಿಚಾರಶೀಲ ಚಿಂತಕರು. ಮರಾಠಿ ಹಿರಿಯ ಸಾಹಿತಿಗಳಾದ ಸಹಸ್ರಬುದ್ಧೆ ಅವರ ಶ್ರೇಷ್ಠ ಚಿಂತನಶೀಲ ಕೃತಿ "ಪರಾಧೀನ ಸರಸ್ವತಿ"ಯನ್ನು ಕನ್ನಡಕ್ಕೆ ಅನುವಾದಿಸಿ ಉಪಕರಿಸಿದ್ದಾರೆ.

ಶ್ರೀ ಅ.ರಾ.ಬಿಡಕರ :

ವೃತ್ತಿಯಿಂದ ಶಿಕ್ಷಕ. ಪ್ರವೃತ್ತಿಯಿಂದ ಪ್ರಾಸಾದಿಕ ಕವಿ. ಕಥೆ, ಕವನ. ನಾಟಕಗಳ ರಚನಾಕಾರರು. ಅಂಬಿಕಾತನಯ ದತ್ತರ `ನಾಕುತಂತಿ`ಯ ಕುರಿತು ಬರೆದ ನಾಟಕವನ್ನು ಬೇಂದ್ರೆ ಅವರ ಸಮ್ಮುಖದಲ್ಲಿ ವಾಚನಗೈದಾಗ ಅವರು ಬಹುವಾಗಿ

ಮೆಚ್ಚಿಕೊಂಡರು. ಇವರು ರಚಿಸಿದ ನಾಟಕಗಳು– ಬಡವರ ಬಾಸಿಂಗ. ಛದ್ಮಶ್ರೀ. ಚಂದ್ರಗುಪ್ತ ಶಸ್ತ್ರ ಸನ್ಯಾಸ. ಬೆನ್ನುಮೂಳೆ ಇತ್ಯಾದಿ.

ಖಂಡಕಾವ್ಯಗಳು : ಭಾರತ ದರ್ಶನ. ಪವನದೂತ. ವಿಶ್ವದರ್ಶನ. ವಾಲ್ಮೀಕಿ ರಾಮಾಯಣ. ಹರಿಕಥಾಮೃತಸಾರ ಟೀಕರ ಇತ್ಯಾದಿ.

ಕಿರು ಕಾದಂಬರಿಗಳು : ಸಂಧಿಪ್ರಕಾಶ. ಇದಕಾರು ಹೊಣೆ. ಅದಲು ಬದಲು ಕಂಚಿ ಬದಲು ಹಾಗೂ ಕಲಾ ಇತ್ಯಾದಿ.

ಶ್ರೀ ಆರ್. ಪಿ. ಕುಲಕರ್ಣಿ :

ರಾಮಣ್ಣ ಎಂದೇ ಪ್ರಸಿದ್ಧರಾಗಿದ್ದ ಇವರ ಕೃತಿಗಳು– 'ಸಂತ ಪ್ರಣೀತ ಸಾಕ್ಷಾತ್ಕಾರ ಮಾರ್ಗ'ವು ಮರಾಠಿ ಭಾಷೆಯಿಂದ ಕನ್ನಡಕ್ಕೆ ಅನುವಾದ. ಕನ್ನಡ ಮಾತೃ ಭಾಷೆಯಾಗಿದ್ದರೂ ಮರಾಠಿಯಲ್ಲಿ ಬರೆದ 'ಗುರುದೇವ ದರ್ಶನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ಶ್ರೀ ಮೋಟಗಿ ಮಲ್ಲಿಕಾರ್ಜುನ :

ವೃತ್ತಿ ವ್ಯಾಪಾರವಾದರೂ ಪ್ರವೃತ್ತಿಯಿಂದ ಸಾಹಿತಿಗಳು. 'ಕನ್ನಡ ಕವಿ ಕಾಳಿದಾಸನೆಂದು ಕಾವ್ಯನಾಮ. ಇವರ ವೈಚಾರಿಕತೆ ಆಧ್ಯಾತ್ಮಿಕ ಮತ್ತು ಶರಣರ ಜೀವನ ಕುರಿತು ಮುಡುಪಾಗಿದೆ. ಲಿಂಗವಿಲಾಸ. ಅಂತಃಪುರಗೀತೆ. ಆತ್ಮ ಸ್ವಾತಂತ್ರ್ಯ. ಧರ್ಮರಹಸ್ಯ. ಶಿವಾನುಭವ ದರ್ಪಣ ಇವು ಅವರ ಚಂಪೂ ಕಾವ್ಯಗಳು. 'ದೇವದೂತ' ರಶಿಯನ್ ಮಹಾಕವಿ ಟಾಲ್‌ಸ್ಟಾಯನ ಚಿಕ್ಕ ಕಥೆಯೊಂದನ್ನಾಧರಿಸಿ ಬರೆದ ಕೃತಿ ಕನ್ನಡಕ್ಕೆ ನೀಡಿದ ಶ್ರೇಷ್ಠ ಕೃತಿಯಾಗಿದೆ. ದಿವ್ಯವಾಣಿ ವಚನಶೈಲಿಯ ಗದ್ಯಕೃತಿ ಇವರ ಕೊನೆಯ ಕೃತಿ ಬಸವರಾಜ ದರ್ಶನಂ ಮಹಾಕಾವ್ಯ.

ಲ. ಸಾ. ಹಲ್ಯಾಳ :

ಲಚ್ಚಪ್ಪ ಮಾಸ್ತರರೆಂದೇ ಪ್ರಸಿದ್ಧಿ. ನಿಷ್ಠೆಗೆ ಇನ್ನೊಂದು ಹೆಸರು ಲಚ್ಚಪ್ಪ ಮಾಸ್ತರರು. ಇವರು ಕನ್ನಡದ ನಿಷ್ಠಾವಂತ ಸೇವಕರು. ಅಥಣಿಯ ಸಾಂಸ್ಕೃತಿಕ ರಂಗವು ಇವರ ಸೇವೆಯಿಂದ ಶ್ರೀಮಂತವಾಗಿದೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಸಂಸ್ಥಾಪಕ ಕಾರ್ಯದರ್ಶಿಯಾಗಿ ಸಲ್ಲಿಸಿದ ಸೇವೆ ಅನುಪಮ. ಕನ್ನಡದ ಬಹುತೇಕ ಹಿರಿಯ ಸಾಹಿತಿಗಳನ್ನು ಅಥಣಿಯಲ್ಲಿ ಬರಮಾಡಿಕೊಂಡ ಹಿರಿಮೆ ಅವರದು. ಜೀವಿತದ ಕೊನೆಯ ದಿನಗಳಲ್ಲಿ ಎಲ್ಲರ ಒತ್ತಾಸೆಯ ಮೇರೆಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷತೆಯನ್ನು ವಹಿಸಿದ್ದು ಅವರ ನಿಸ್ಪೃಹತೆಗೆ ಸಾಕ್ಷಿ.

ಶ್ರೀ ಕೆ. ಬಿ. ಫಡಕೆ :

ಉತ್ತಮ ಶಿಕ್ಷಕ. ಜೀವನಾದರ್ಶವೇ ಸಾಹಿತ್ಯವೆಂದು ಪ್ರೀತಿ. ಶ್ರದ್ಧೆಯಿಂದ ಕಾಣುವವರು. ಇವರ ಕೃತಿಗಳು ವಿಚಾರಶೀಲ ಮತ್ತು ಅಧ್ಯಯನಶೀಲ ಹಾಗೂ ಆಚರಣೆಗೆ ಹತ್ತಿರ. 'ವಿಚಾರ ಕರಾಲ ?' ಎಂಬ ಮರಾಠಿ ಕೃತಿ ಹಾಗೂ 'ಬದುಕುವದಕ್ಕೆ

ಇದೊಂದೇ ಮಾರ್ಗ' ಎಂಬ ಕನ್ನಡ ಕೃತಿಗಳು ಅವರ ವ್ಯಕ್ತಿತ್ವವನ್ನು ಎತ್ತಿ ಹೇಳುತ್ತವೆ.

ಡಾ. ಭುಜೇಂದ್ರ ಮಹಿಷವಾಡಿ :

ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರು. ನಂತರ ಕರ್ನಾಟಕ ವಿಶ್ವವಿದ್ಯಾಲಯದ ಜೈನಶಾಸ್ತ್ರ ವಿಭಾಗದ ಮುಖ್ಯಸ್ಥರು. ಇವರು ಕವಿಗಳು. ಮಾಯಾಮಂದಿರ. ಬೆರಕಿಮಂದಿ ಹಾಗೂ ಹಂಸಮಿಥುನ ಇವು ಅವರ ಕವನ ಸಂಕಲನಗಳು. ಸಂಶೋಧನಾ (ಪಿಎಚ್.ಡಿ.) ಪ್ರಬಂಧ ಸೇರಿ ಒಟ್ಟು ೩೫ ಕೃತಿಗಳನ್ನು ನೀಡಿದ್ದಾರೆ.

ಮಿರ್ಜಿ ಅಣ್ಣಾರಾಯರು :

ಮುಖ್ಯತ: ಶಿಕ್ಷಕರು ಉನ್ನತ ಶಿಕ್ಷಣ ಪಡೆಯದಿದ್ದರೂ ಉನ್ನತ ಮಟ್ಟದ ಜೀವನಾನುಭವ ಇವರನ್ನು ಶ್ರೇಷ್ಠ ಸಾಹಿತಿಯನ್ನಾಗಿಸಿತು. ಇವರು ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರು. 'ನಿಸರ್ಗ'ವು ಇವರ ಶ್ರೇಷ್ಠ ಪ್ರಾದೇಶಿಕ ಕಾದಂಬರಿ. ಅಶೋಕ ಚಕ್ರ ಮತ್ತು ಜೈನಧರ್ಮ ಇವರ ಇನ್ನಿತರ ಕೃತಿಗಳು. ಶೇಡಬಾಳದಲ್ಲಿ ಸನ್ಮತಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಶಿಕ್ಷಣ ರಂಗದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ.

ಜಿ. ಎಂ. ದೇಶಪಾಂಡೆ ಮಾಸ್ತರರು :

ಈ ತಾಲೂಕು ಅಷ್ಟೇ ಏಕೆ ಈ ಪ್ರದೇಶವು ಕಂಡ ಅದ್ವಿತೀಯ ಶಿಕ್ಷಕ. ಅಪ್ಪಟ ದೇಶಪ್ರೇಮಿ. ಖಾದಿಪ್ರೇಮಿ. ಇವರು ಮನಸ್ಸು ಮಾಡಿದ್ದರೆ ನಾಡಿನ ಓರ್ವ ಮುಖಂಡನಾಗಿ ಐಷಾರಾಮಿ ಜೀವನ ಸಾಗಿಸಬಹುದಾಗಿತ್ತು. ಆದರೆ ನಿಷ್ಠುರತೆ. ನಿಷ್ಠುರತೆ. ಪರಿಶ್ರಮತೆ. ವಿದ್ಯಾರ್ಥಿ ಪ್ರಿಯತೆಗಳು ಇವರನ್ನು ಸದಾ ಬಡತನದಲ್ಲಿಯೇ ಇಡುವಂತಾಯಿತು. ಅದನ್ನು ಅವರು ಸ್ವಸಂತೋಷದಿಂದ ಸ್ವೀಕರಿಸಿದರು. ಒಳ್ಳೆಯ ಬರಹಗಾರನ ಶೈಲಿ ಲಕ್ಷಣಗಳಿದ್ದರೂ ಬರಹಗಾರನಾಗಲಿಲ್ಲ. ಆದರೆ ಈ ನಾಡು ಮೆಚ್ಚುವಂತಹ ಬರಹಗಾರರನ್ನು ನಿರ್ಮಿಸಿದ ಕೀರ್ತಿ ಇವರದು. '೬೦ ವರುಷಗಳ ಹಿಂದಿನ ವಿಜಾಪುರ' ಎಂಬ ಲೇಖನ ಇವರ ಆತ್ಮ ಚರಿತ್ರೆಯ ಒಂದು ಭಾಗವಾಗಿದ್ದರೆ ಅಂದಿನ ವಿಜಾಪುರದ ಸ್ಥಿತಿ-ಗತಿಗಳ ವಾಸ್ತವ ಚಿತ್ರಣವು ಇವರೊಬ್ಬ ಶ್ರೇಷ್ಠ ಬರಹಗಾರನೆಂದು ಹೇಳಬಹುದು. ಇವರ ಗರಡಿಯಲ್ಲಿ ಮೂಡಿ ಬಂದ ಮ.ನಿಂ.ಬೆಳಗಲಿ ಅವರೂ ಒಬ್ಬ ಆದರ್ಶ ಶಿಕ್ಷಕ ಶ್ರೇಷ್ಠ ಸಾಹಿತಿ ಆಗಿದ್ದಾರೆ.

ಶ್ರೀ ಕೆ. ಎಲ್. ಕುಂದರಗಿ :

ವೃತ್ತಿಯಿಂದ ವಕೀಲರಾದರೂ ಪ್ರವೃತ್ತಿಯಿಂದ ಇವರು ನಟರು. ನಾಟಕಕಾರರು. ಗಾಂಧೀ ಮರಳಿ ಬಂದಾಗ. ಸ್ವಾಮೀಜಿ. ಬಿಡುಗಡೆ ಇವರ ನಾಟಕಗಳು. ಗಾಂಧೀ ಮರಳಿ ಬಂದಾಗ ನಾಟಕವು ಹಲವಾರು ಪ್ರಯೋಗಗಳನ್ನು ನಡೆಸಿ ಪ್ರಸಿದ್ಧಿ ಪಡೆದಿದೆ. ಬಣ್ಣ ಬಳೆದುಕೊಳ್ಳಲು ಈಗಲೂ ಆಸಕ್ತಿ ತೋರುವ ಇವರಿಗೂ ಶ್ರೀ ಜಿ.ಎಂ. ದೇಶಪಾಂಡೆ ಮಾಸ್ತರರು ಆದರ್ಶಪ್ರಾಯರು.

ಶ್ರೀ ಬಸವಣ್ಣೆಪ್ಪ ಕಲ್ಯಾಣಿ :

ಹಿರಿಯ ವಕೀಲರೂ. ಶರಣ ಜೀವಿಗಳೂ. ಶುದ್ಧ ಹಸ್ತ ಸಮಾಜ ಸೇವಕರೂ. ಅಥಣಿ ಮಹಾತಪಸ್ವಿ ಮುರುಘೇಂದ್ರ ಶಿವಯೋಗಿಗಳವರ ಪರಮ ಭಕ್ತರು. ಶಿವಯೋಗಿಗಳ ಚರಿತಾಮೃತ ಇವರ ಕೃತಿ. ಸೊಲ್ಲಾಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯಿಂದ ಹೊರಡಿಸುವ 'ಶರಣ' ತ್ರೈಮಾಸಿಕದ ಸಂಪಾದಕತ್ವವನ್ನು ಅಖಂಡ ೨೧ ವರುಷಗಳವರೆಗೆ ನಿರ್ವಹಿಸಿಕೊಂಡು ಬಂದ ಹಿರಿಮೆ ಅವರದು.

ಮೋಟಗಿ ಮಠಾಧೀಶ ಶ್ರೀ ಗುರುಬಸವ ಸ್ವಾಮಿಗಳು :

ಸಕಲಶಾಸ್ತ್ರ ಪಂಡಿತರು. ಉತ್ತಮವಾದ ಪ್ರವಚನಕಾರರು. ಸಂಸ್ಕೃತದಲ್ಲಿ ಆಳವಾದ ಅಧ್ಯಯನ ಪರಮ ವೈರಾಗ್ಯ ಮೂರ್ತಿಗಳು. ಇವರ ಜ್ಞಾನಸಿಂಧುವಿನಿಂದ ರಚಿತವಾದ ಕೃತಿಗಳು ಮೂರು. ಚನ್ನಬಸವೇಶ್ವರ ಚಾರಿತ್ರ್ಯ. ಅಂಧಸಿದ್ಧಾಂಜನ ಹಾಗೂ ಸುಪ್ರಭಾತ.

ದಿ|| ಎ. ಎಸ್. ಕುಲಕರ್ಣಿ :

ವಕೀಲರು. ಸ್ವಾತಂತ್ರ್ಯ ಯೋಧರು. ಸಹೃದಯಿ ಸ್ನೇಹಿತರು. ಪತ್ರಕರ್ತರು. ಚಲೇಜಾವ ವೀರಕ್ರಾಂತಿ. ಸತ್ತಿ ಕುಲಕರ್ಣಿ ಮನೆತನ. ಕರನಿರಾಕರಣ ಕಥೆಯು ಇತಿಹಾಸ ಇವು ಇವರ ಕೃತಿಗಳು.

ಅಥಣಿ ಪರಿಸರದಲ್ಲಿ ನಿಂತು ಇವರ ಪ್ರಭಾವದಿಂದ ಶ್ರೇಷ್ಠ ಸಾಹಿತಿಗಳಾಗಿ ಕಾರಣಾಂತರಗಳಿಂದ ಈ ಪ್ರದೇಶದಿಂದ ದೂರ ಹೋಗಿ ಇಲ್ಲಿನ ಪ್ರಥೆಯನ್ನು ಅಲ್ಲಿ ಬೆಳಗುತ್ತಿರುವ ಸಾಹಿತಿ ಮಹನೀಯರುಗಳ ಸಂಖ್ಯೆಯೂ ಅಪಾರ. ಅವರಲ್ಲಿ ಅತಿ ಮುಖ್ಯರಾಗಿ ಈ ಕೆಳಗಿನವರನ್ನು ಉದಾಹರಿಸಬಹುದು.

ಡಾ. ಬುದ್ಧಣ್ಣ ಹಿಂಗಮಿರೆ :

ರಾಜಾಪುರ ಗಡಿಭಾಗದವರು. ಕನ್ನಡದಲ್ಲಿ ಶೋಕಕಾವ್ಯ ಇವರ ಪಿಎಚ್.ಡಿ. ಪ್ರಬಂಧ. ಈ ನದಿಯ ಮಡಿಲಲ್ಲಿ ಕವನ ಸಂಕಲನ. ದೀನದಲಿತರ ನಾಯಕ ಹಾಗೂ ಜಿಪ್ಸಿ ನಾಟಕಗಳು ಇವರ ಇನ್ನಿತರ ಕೃತಿಗಳು. ಇವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪಡೆದ ಸಾಹಿತಿಗಳು ಅನೇಕರು. ಅವರಲ್ಲಿ ಕಾಗವಾಡದ ಡಾ. ಎಂ.ಜಿ.ಹೂಗಾರ ಒಬ್ಬರು.

ಡಾ. ವ್ಹಿ. ಎಸ್. ಮಾಳಿ :

ಕನ್ನಡ ಸಾಹಿತ್ಯದಲ್ಲಿ ಕರ್ಣ ಪಿಎಚ್.ಡಿ. ಪ್ರಬಂಧ. ಹಾರೂಗೇರಿ ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿ. ವ್ಯಾಕರಣ ರಚನಾಗಂಧ. ಕೂಡಲದ ಕಲ್ಪತರು. ವಿವಿಧ ಸಂಶೋಧನಾತ್ಮಕ ಲೇಖನಗಳು ಇವರ ಲೇಖನಿಯಿಂದ ಮೂಡಿ ಬಂದ ಇತರ ಕೃತಿಗಳು. ಹಳಗನ್ನಡ ಕಾವ್ಯ ಸಂಚಯ ಬಿ. ಎ. ೨ ಕ್ಕೆ ಪಠ್ಯವಾಗಿದೆ. ಉತ್ತಮ ವಾಗ್ಮಿಗಳು. ವಿಮರ್ಶಕರು.

ದು. ನಿಂ. ಬೆಳಗಲಿ :

ಆದರ್ಶ ಶಿಕ್ಷಕರಾಗಿ ರಾಷ್ಟ್ರಪ್ರಶಸ್ತಿ ಪಡೆದವರು. ಸ್ನೇಹ ಜೀವಿಗಳು ಅತ್ಯಂತ ಸಾದಾ ಜೀವನ: ನಿಗರ್ವಿ ವ್ಯಕ್ತಿತ್ವ. ದಿ|| ಜೆ.ಎಂ. ದೇಶಪಾಂಡೆ ಮಾಸ್ತರರ ಅಚ್ಚುಮೆಚ್ಚಿನ ಶಿಷ್ಯ. ೧೦ ಕಥಾ ಸಂಕಲನಗಳು. ೧೫ ಕಾದಂಬರಿಗಳು. ೫ ಅನುವಾದ ಕೃತಿಗಳು. ೮ ಮಕ್ಕಳ ಸಾಹಿತ್ಯ ಕೃತಿಗಳು. ೩ ಆತ್ಮ ಕಥೆಗಳು. ೨ ಸಂಶೋಧನಾ ಪ್ರಬಂಧಗಳು. ಇನ್ನೂ ಪ್ರಕಟವಾಗದ ಅಪಾರ ಸಂಖ್ಯೆಯ ಕಥೆಗಳು. ೨ ಪ್ರವಾಸ ಕಥನಗಳು ಹಲವಾರು ಬಿಡಿ ಲೇಖನಗಳನ್ನೊಳಗೊಂಡ ಅಪಾರವಾದ ಸೃಜನ ಸಾಹಿತ್ಯ ರಚಿಸಿ ಕನ್ನಡದ ಶ್ರೇಷ್ಠ ಕತೆಗಾರ. ಶ್ರೇಷ್ಠ ಪ್ರಾದೇಶಿಕ ಕಾದಂಬರಿಕಾರ. ರಾಜ್ಯೋತ್ಸವ ಪ್ರಶಸ್ತಿ ವಿಜೇತ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪುರಸ್ಕೃತ ಸಾಹಿತಿಯಾಗಿ ಜನಮನ ಸೂರೆಗೊಂಡ ಸಾಹಿತಿ. ಬನಹಟ್ಟಿಯಲ್ಲಿ ನೆಲೆ ನಿಂತಿದ್ದರೂ ಅಥಣಿ ಪರಿಸರವೇ ಅವರ ಸಾಹಿತ್ಯಿಕ ಮೂಲ ನೆಲೆ.

ಶ್ರೀ ಅ. ರಾ. ತೋರೋ :

ಐನಾಪುರದವರು. ಕನ್ನಡ. ಮರಾಠಿ ಸಮನ್ವಯ ಸಾಹಿತಿಗಳಾಗಿದ್ದು. ಈ ದಿಸೆಯಲ್ಲಿ ಮಹಾರಾಷ್ಟ್ರದಲ್ಲಿ ಅತ್ಯಂತ ಸ್ತುತ್ಯ ಕೆಲಸ ಕೈಗೊಂಡಿದ್ದಾರೆ. ಅವರೀಗ ಪುಣೆಯ ಕನ್ನಡ ಸಂಸ್ಕೃತಿ ಸಂವರ್ಧನ ಕೇಂದ್ರದ ಸದಸ್ಯರು.

ಕಳೆದೆರಡು ದಶಕಗಳಲ್ಲಿ ಇಲ್ಲಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗದಲ್ಲಿ ಅಪಾರವಾದ ಬದಲಾವಣೆ ಆಗಿದೆ. ಸಾಹಿತಿಗಳ ಸಂಖ್ಯೆ ಅಪಾರವಾಗಿ ಬೆಳೆಯುತ್ತಿದೆ. ಅಂತೆಯೇ ಅದನ್ನು ಓದುಗರ ಕೈಗಿಡುವ ಕಾರ್ಯವು ಅಷ್ಟೇ ಮಹತ್ವದ್ದಾಗಿದ್ದು, ಆರ್ಥಿಕವಾಗಿ ಅತೀ ಕಠಿಣ ಕಾರ್ಯವಾಗಿದೆ. ಈ ದಿಸೆಯಲ್ಲಿ ಸಾಹಸವನ್ನು ಪ್ರದರ್ಶಿಸುತ್ತಿರುವ ಎರಡು ಪ್ರಕಾಶನ ಸಂಸ್ಥೆಗಳ ಕುರಿತು ಇಲ್ಲಿ ಹೇಳಲೇಬೇಕಾಗುತ್ತದೆ.

ವಿಮೋಚನಾ ಪ್ರಕಾಶನ :

ಸಾಮಾಜಿಕ ಪರಿವರ್ತನೆಯ ಹಾಗೂ ಸಾಮಾಜಿಕ ಕಳಂಕವಾದ ದೇವದಾಸಿ ಪದ್ಧತಿಯನ್ನು ಅಳಿಸಿ ಹಾಕಲು ಜನ್ಮ ತಳೆದ ವಿಮೋಚನಾ ದೇವದಾಸಿ ಪುನರ್ವಸತಿ ಸಂಘದ ಒಂದು ಘಟಕವಾಗಿ ೧೯೮೫ರಲ್ಲೇ ಪ್ರಾರಂಭವಾದ ವಿಮೋಚನಾ ಪ್ರಕಾಶನವು ವಿಮೋಚನೆ. ವಿವೇಚನೆ ಎಂಬ ೪ ಪುಟಗಳ ಕರಪತ್ರದೊಡನೆ ಪ್ರಾರಂಭಿಸಿ ಮಾನವ್ಯ ಕವಿ ಬಿ.ವಿ.ಸನದಿಯವರ 'ಸಂಚಾರಿ' ವರೆಗೆ ೪೪ ಕೃತಿಗಳನ್ನು ಪ್ರಕಟ ಪಡಿಸಿದೆ. ಇವರಲ್ಲಿ ೬ ಸಂಶೋಧನಾ ಪ್ರಬಂಧಗಳು. ೨ ಕಾದಂಬರಿ. ೪ ಕಥಾ ಸಂಕಲನಗಳು, ೪ ಕವನ ಸಂಕಲನಗಳು. ೩ ಜೀವನ ಚರಿತ್ರೆಗಳು. ೮ ಮಕ್ಕಳ ಸಾಹಿತ್ಯ ಕೃತಿಗಳು ಹಾಗೂ ವೈಚಾರಿಕ ಕೃತಿಗಳು ಸೇರಿವೆ. ಇವುಗಳಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ವಿವಿಧ ಪ್ರತಿಷ್ಠಾನಗಳಿಂದ ಪುರಸ್ಕೃತ ೬ ಕೃತಿಗಳಿವೆ ಹಾಗೂ ದು.ನಿಂ. ಬೆಳಗಲಿ ಅವರ 'ಮುಳ್ಳ ದಾರಿಯಲ್ಲಿ ಬಿರಿದ ಹೂಗಳು' ಎಂಬ ಕಥಾ ಸಂಕಲನವು ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ. ಅಂತಿಮ ತರಗತಿಗೆ ಪಠ್ಯಪುಸ್ತಕವಾಗಿದೆ.

ಈ ಅನುಪಮ ಸಾಧನೆಯ ನಿರ್ದೇಶಕರು ಶ್ರೀ ಪ್ಪಿ. ಎಸ್. ಮನಸಾಡೆ ಪಿಮೋಚನಾ ಸಂಘದ ಗೌರವ ಸಹ ಕಾರ್ಯದರ್ಶಿ.

ಅನುಪಮ ಪ್ರಕಾಶನ :

ಕನ್ನಡದ ಅಧ್ಯಾಪನ ವೃತ್ತಿಯ ಶ್ರೀ ಎಸ್.ಜಿ.ಉತ್ನಾಳರು ಈ ಪ್ರಕಾಶನದಡಿಯಲ್ಲಿ ಇದುವರೆಗೆ ಸುಮಾರು ೨೦ ಕೃತಿಗಳನ್ನು ಪ್ರಕಟಿಸಿದ್ದು. ಉತ್ತಮ ಪ್ರಕಾಶನವೆಂದು ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅವರು ಸ್ವತಃ ಸಾಹಿತಿಗಳಾಗಿದ್ದು. ಸುಮಾರು ೮ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಪ್ರಸ್ತುತ ಪುಸ್ತಕ ಪ್ರಾಧಿಕಾರ ಸಮಿತಿಯ ಸದಸ್ಯರಾಗಿ ಕಾರ್ಯ ನೆರವೇರಿಸುತ್ತಿದ್ದಾರೆ.

ನವೋದಯ. ನವ್ಯ. ಪ್ರಗತಿಪರ ಚಿಂತನೆಯ ಸಾಹಿತ್ಯದ ಪ್ರಭಾವದಲ್ಲಿ ಬೆಳೆದು ಬಂದ ಇತ್ತೀಚಿನ ಲೇಖಕರನ್ನು ಕವಿಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

ಡಾ. ಎಂ. ಬಿ. ಹೂಗಾರ :

ಕಾಗವಾಡದ ಶಿವಾನಂದ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರು. 'ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ' ವಿಷಯದ ಮೇಲೆ ಡಾ. ಬುದ್ಧಣ್ಣ ಹಿಂಗಮಿರೆ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಜನಪದ ತ್ರಿಪದಿಗಳು. ಮೀಸಲಾತಿ ಒಂದು ಪ್ರಶ್ನೆ. ಹಳಗನ್ನಡ ಕಾವ್ಯ ಸಂಚಯ. ನನ್ನವ್ವ ಇವರ ಇತರ ಕೃತಿಗಳು. ಬಹುತೇಕ ಎಲ್ಲ ಕೃತಿಗಳಿಗೆ ಪ್ರಶಸ್ತಿ ಪಡೆದ ಹಿರಿಮೆ ಅವರದು. ಇವರ ಸಾಹಿತ್ಯದಲ್ಲಿ ಪ್ರಗತಿಪರ ಚಿಂತನೆಯ ಸೆಳಕು ಬಂಡಾಯದ ಮಿಂಚೂ ಎರಡು ಸೇರಿವೆ.

ಡಾ. ವಸಂತ ಕುಲಕರ್ಣಿ :

ವೃತ್ತಿಯಿಂದ ವೈದ್ಯ ಶಿಕ್ಷಕರಾದರೆ ಪ್ರವೃತ್ತಿಯಿಂದ ಸಾಹಿತಿಗಳು. ಸಾಹಿತ್ಯ ಕಾರ್ಯಕ್ರಮಗಳ ಅಪೂರ್ವ ಸಂಘಟನಾಕಾರರು. ಅಥಣಿ ಸಾಹಿತ್ಯ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಒಂದು ಅವಧಿಗೆ ಸೇವೆ ಸಲ್ಲಿಸಿದ್ದಾರೆ. ವೈದ್ಯಕೀಯ ವಿಷಯಗಳ ಮೇಲೆ ಆಧಾರಿತ ಕನ್ನಡದಲ್ಲಿ ಸುಮಾರು ೮ ಕೃತಿಗಳನ್ನು ನೀಡಿ ವೈದ್ಯ ಸಾಹಿತಿಯೆಂದೇ ಖ್ಯಾತರಾಗಿರುವರು. ೩ ಸಂಪಾದನಾ ಕೃತಿಗಳನ್ನೂ. ಒಂದು ವಿಡಂಬನಾ ಕೃತಿಯನ್ನೂ ನೀಡಿದ್ದಾರೆ.

ಶ್ರೀ ಲಕ್ಷ್ಮಣ ಬಳ್ಳೊಳ್ಳಿ :

ಯಾವ ಕಾರಣಕ್ಕೂ ತನ್ನ ಹೆಸರನ್ನು ಪ್ರಸಿದ್ಧಿಗೆ ಬಿಡದ. ನಿರ್ಭೀತಿ. ನಿಷ್ಠುರ ಪತ್ರಿಕಾಕರ್ತನಾಗಿ ಸಾಹಿತ್ಯಿಕ. ಸಾಮಾಜಿಕ. ರಾಜಕೀಯ. ಧಾರ್ಮಿಕ ಕ್ಷೇತ್ರದ ಸಮಗ್ರ ಇತಿಹಾಸವನ್ನು ತನ್ನ ಸ್ಮರಣೆಯಲ್ಲಿ ತುಂಬಿಕೊಂಡಿರುವ ಅಪರೂಪದ ಆಶು ಕವಿ. ನಿಷ್ಕಾಮ ಸಾಹಿತಿ.

ಶ್ರೀ ಸುಭಾಷ ಮೋಟಗಿ :

'ಕನ್ನಡ ಕವಿ ಕಾಳಿದಾಸ'ನೆಂಬ ಕಾವ್ಯನಾಮದ ಕವಿ ಶ್ರೀ ಮಲ್ಲಿಕಾರ್ಜುನ ಮೋಟಗಿ ಅವರ ಚಿರಂಜೀವ. ವ್ಯಾಪಾರದ ವೃತ್ತಿಯಲ್ಲಿ ಬಿಡುವು ಮಾಡಿಕೊಂಡು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹವ್ಯಾಸ. ಅವರ ಕವನಗಳು. ಬಿಡಿ ಲೇಖನಗಳು. ಪ್ರಪಂಚ ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಶ್ರೀ ರಾಜಮಾನೆ :

ಅಥಣಿ ತಾಲೂಕಾ ಚುಟುಕು ಸಾಹಿತ್ಯ ಸಂಘಟನೆಯ ನೇತಾರ. ಬಂಡಾಯ ಮತ್ತು ಪ್ರಗತಿಪರ ವಿಚಾರವಾದಿ. ಸಾಹಿತಿಯಾಗಿ ಇತ್ತೀಚಿಗೆ ಬೆಳಕಿಗೆ ಬರುತ್ತಿರುವ ಕವಿ. ವೃತ್ತಿಯಿಂದ ಶಿಕ್ಷಕರು.

ಶ್ರೀ ಅಪ್ಪಾಸಾಹೇಬ ಅಲಿಬಾದಿ :

'ಬಸವನೀಲಾಂಬಿಕಾತನಯ' ಕಾವ್ಯನಾಮದ ಕವಿ. ' ಮಿಂಚು ' ಕವನದಿಂದ ಮಿಂಚುತ್ತಿರುವ ಪ್ರಗತಿಪರ ಮತ್ತು ಶಿಷ್ಟ ಸಾಹಿತ್ಯದ ಸಮನ್ವಯ ಕವಿ.

ಕು. ವರ್ಷಾ ಹೂಗಾರ :

ಬಾಲ ಕವಯತ್ರಿಯಾಗಿ ಬೆಳಕಿಗೆ ಬಂದಾಗ ಕೇವಲ ೧೦ ವರ್ಷ ವಯಸ್ಸು. 'ಹೂಬುಟ್ಟಿ' 'ಬಾನಂಗಳ' ಇವಳ ಎರಡು ಕವನ ಸಂಕಲನಗಳು ವಿಮರ್ಶಕರ ಮನ ಸೆಳೆದಿವೆ. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಹೃದಯಾರೆ ಮೆಚ್ಚಿಕೊಂಡು ಉನ್ನತ ಭವಿಷ್ಯ ಹಾರೈಸಿದ್ದಾರೆ.

ತೆಲಸಂಗದ ಹಿರಿಯ ಮಠದ ಶ್ರೀ ಬಸವಲಿಂಗ ಪಟ್ಟದ್ದೇವರು :

ತಮ್ಮ ಪ್ರವಚನ ಪಟುತ್ವದಿಂದ ಈ ನಾಡಿನ ಧಾರ್ಮಿಕ ಮತ್ತು ಸಾಮಾಜಿಕ ರಂಗದಲ್ಲಿ ಭಕ್ತಜನ ಬಾಂಧವರನ್ನು ಪಾವನಗೊಳಿಸುವ ಕಾಯಕದಲ್ಲಿ ನಿಮಗ್ನರಾಗಿದ್ದಾರೆ. ಅನೇಕ ಗ್ರಂಥಗಳನ್ನು ಶ್ರೀ ಮಠದಿಂದ ಪ್ರಕಟಗೊಳಿಸಲು ನೆರವು ನೀಡಿದ್ದಾರೆ. ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಸಾರಸಜ್ಜನರನ್ನು. ವಿದ್ವಾಂಸ ವಿದ್ವಜ್ಜನರನ್ನು, ಸಾಹಿತಿಗಳನ್ನು ಶ್ರೀ ಮಠಕ್ಕೆ ಆಮಂತ್ರಿಸಿ ಗೌರವಿಸಿದ್ದಾರೆ. ಅಲ್ಲದೆ ಶಿಕ್ಷಣ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ.

ಶ್ರೀ ಚನ್ನಬಸವದೇವರು ಮೋಟಗಿಮಠ :

ಇವೆಲ್ಲಕ್ಕೂ ಮಿಗಿಲಾಗಿ ಧಾರ್ಮಿಕ ಮತ್ತು ಸಾಮಾಜಿಕ ರಂಗದಲ್ಲಿ ಅಥಣಿಯಲ್ಲಿ ಧ್ರುವತಾರೆಯೊಂದು ಮೂಡಿ ಬಂದಿದೆ. ಶ್ರೀ ಚನ್ನಬಸವದೇವರ ರೂಪದಲ್ಲಿ 'ಅಥಣೀಶ'ನೆಂಬ ಕಾವ್ಯನಾಮದಿಂದ ಅತ್ಯಂತ ಕಿರಿಯ ವಯಸ್ಸಿನಲ್ಲಿ ಹಿರಿಯ ಸಾಧನೆಗೈದು. ವೀರ ವಿರಾಗಿಯಾಗಿ. ಭವರೋಗ ವೈದ್ಯನಾಗಿ, ಉನ್ನತ

ವಾಗ್ಮಿಯಾಗಿ. ಪ್ರವಚನ ಪಟುವರು. ಮೇಲಾಗಿ ಆಚಾರ-ವಿಚಾರಗಳ ಸಮನ್ವಯಿಯಾಗಿ. ಆಧುನಿಕ ವೈಚಾರಿಕ ವಚನಕಾರನಾಗಿ ಅಥಣಿಯ ಮೋಟಗಿ ಮಠದ ಅಧಿಪತಿಯಾಗಿ ಅಪೂರ್ವ ಲೇಖಕರಾಗಿ ಮೂಡಿ ಬಂದಿದ್ದಾರೆ. ವಚನ ಚೈತ್ರ. ವರ್ತಮಾನ. ಶ್ರೀ ಗುರು. ನುತಿನಮನ. ವಚನ ತರಂಗ ಹಾಗೂ ಸಂಪ್ರದಾಯದ ಸುಳಿಯಲ್ಲಿ ಮುಂತಾಗಿ ೬ ಕೃತಿಗಳನ್ನು ನೀಡಿದ್ದಾರೆ. ಅವರ ಕೃತಿಗಳು ಕೇವಲ ಜನ ಸಾಮಾನ್ಯರನ್ನು ಸೂರೆಗೊಂಡಿಲ್ಲ. ವಿದ್ವಾಂಸರನ್ನು ವಿಚಾರಶೀಲರನ್ನು ಸೂರೆಗೊಂಡಿವೆ.

ಶ್ರೀ ಆರ್.ಜಿ.ಗುಂಡಾ. ಶಿಕ್ಷಕರಾದ ಶ್ರೀ ಗುರವ. ಶ್ರೀ ಅನಂತರಾವ ಘೋಸಗೆ. ಎಸ್.ಪಿ.ಪಾಟೀಲ. ಶ್ರೀ ಸಿ. ವಿ. ಇಟ್ನಾಳಮಠ ಇನ್ನೂ ಹಲವಾರು ಕವಿ ಸಾಹಿತಿಗಳನ್ನು ಗುರುತಿಸಬಹುದು.

ಈ ಎಲ್ಲರು ಅಥಣಿ ಪ್ರದೇಶದ ಸಾಹಿತ್ಯ. ಸಾಂಸ್ಕೃತಿಕ ಬದುಕಿಗೆ ಎಡಬಿಡದೆ ಕೊಡುಗೆಗಳನ್ನು ಸೇವೆಯನ್ನು ನೀಡಿ ಕೃತಾರ್ಥರಾದವರು. ಬದುಕನ್ನು ಪ್ರೀತಿಸಲು ಕಲಿಸಿದವರು. ಸಂಸ್ಕೃತಿಯನ್ನು ಶ್ರೀಮಂತವಾಗಿಸಿದವರು. ಇವರೆಲ್ಲರಿಗೆ ಪರಮಾತ್ಮನು ಸದಾ ಸಮೃದ್ಧಿಯನ್ನು ಕರುಣಿಸಲೆಂದು ಹಾರೈಸುವೆನು.

ಈ ಲೇಖನದಲ್ಲಿ ಅದೆಷ್ಟೋ ವಿಷಯಗಳು ಮರೆಮಾಚಿ ಹೋಗಿವೆ ಎಂಬ ಅರಿವು ನನಗಿದೆ. ನನ್ನ ಇತಿ-ಮಿತಿಯಲ್ಲಿ ಶಕ್ತ್ಯಮೀರಿ ವಿಷಯ ಸಂಗ್ರಹಿಸಲು ಪ್ರಯತ್ನಿಸಿದ್ದೇನೆ. ಕೈಬಿಟ್ಟು ಹೋದ ವಿಷಯಗಳಿಗೆ ತೀವ್ರ ವಿಷಾದಿಸುತ್ತೇನೆ. ವಿಷಯ ನೀಡಿ ಸಹಕರಿಸಿದವರಿಗೆ ಶರಣು ಸಮರ್ಪಿಸುತ್ತೇನೆ. ಲೇಖನ ಮೆಚ್ಚುಗೆಯಾದರೆ ಶ್ರಮ ಸಾರ್ಥಕವಾಯಿತೆಂದು ಹಿಗ್ಗುತ್ತೇನೆ. ಅವಕಾಶ ಒದಗಿಸಿಕೊಟ್ಟು ಪ್ರೇರಣೆ. ಪ್ರೋತ್ಸಾಹ. ಆದರ ನೀಡಿದ ಪೂಜ್ಯ ಶ್ರೀ ಚನ್ನಬಸವದೇವರು ಮೋಟಗಿಮಠ ಅವರ ಪಾದ ಪಂಕಜಗಳಲ್ಲಿ ಅನಂತ ಶರಣು ಸಮರ್ಪಿಸುತ್ತೇನೆ.

ಅಥಣಿ ತಾಲೂಕು : ರಂಗಭೂಮಿ

● ನಾರಾಯಣ ಆನೀಖಿಂಡಿ

" ಕಾವ್ಯೇಷು ನಾಟಕಂ ರಮ್ಯಂ " ಇದೊಂದು ನಾಟಕದ ಕುರಿತಾದ ಅನುಭಾವದ ಮಾತು. ಪರಿಣಾಮಕಾರಿ ಸಂಭಾಷಣೆ, ಸಹಜ ಅಭಿನಯ ಹಾಗೂ ನೃತ್ಯ, ಸಂಗೀತಗಳಿಂದ ನಾಟಕ ಪ್ರೇಕ್ಷಕನ ಮೇಲೆ ಅಚ್ಚಳಿಯದ ಪರಿಣಾಮ ಬೀರುತ್ತದೆ. ವರದಾಚಾರ್ಯ, ಗುಬ್ಬಿ ವೀರಣ್ಣ, ಬಾಲ ಗಂಧರ್ವ ಪ್ರುಥ್ವಿರಾಜಕಪೂರ ಮೊದಲಾದ ನಟರೆಲ್ಲಾ ಮೂಲತಃ ಅತ್ಯಂತ ಆಕರ್ಷಕವಾದ ರಂಗಸಾನಿಧ್ಯವನ್ನು ಪಡೆದವರಾಗಿದ್ದರು. ಯಾವುದೇ ಪಾತ್ರವನ್ನು ಮಾಡಲಿ ತಮ್ಮ ಮೋಹಕ ಭಂಗಿ, ಭಾವದಿಂದ ಪ್ರೇಕ್ಷಕರಿಗೆ ಮೋಡಿ ಹಾಕಬಲ್ಲವರಾಗಿದ್ದರು. ಅಂತೆಯೇ ನಟ ಸಾಮ್ರಾಟ ಬಾಲಗಂಧರ್ವರ ಸ್ತ್ರೀ ಪಾತ್ರದ ಮನಮೋಹಕ ಸೌಂದರ್ಯಕ್ಕೆ ಅದೆಷ್ಟೋ ತರುಣರು ಮಾರು ಹೋಗಿದ್ದುಂಟು.

ಅಭಿನಯ, ರಂಗ ತಂತ್ರಗಳು, ಸಾಹಿತ್ಯಗಳನ್ನೊಳಗೊಂಡ ಸಂಘಟಿತ ಮಾಧ್ಯಮವಾಗಿ ರಂಗಭೂಮಿ ರೂಪಗೊಂಡಿದ್ದು ಗ್ರೀಕ ನಾಗರೀಕತೆಯ ಕಾಲದಲ್ಲಿ. ಆದರೆ ಅದಕ್ಕೂ ಪೂರ್ವದಲ್ಲಿ ಪ್ರದರ್ಶಕ ಮತ್ತು ಪ್ರೇಕ್ಷಕರ ನಡುವೆ ಸಂವಹನೆಯ ಪ್ರಕ್ರಿಯೆಯ ವ್ಯಾಖ್ಯೆಗೆ ಹೊಂದುವ ರಂಗಕ್ರಿಯೆ ಅಸ್ತಿತ್ವದಲ್ಲಿದ್ದುದನ್ನು ಕಾಣುತ್ತೇವೆ. ನಾಟಕದ ಭಾವನೆಗಳನ್ನು, ಅಭಿಪ್ರಾಯಗಳನ್ನು ಸಮರ್ಪಕವಾಗಿ ಪ್ರೇಕ್ಷಕರಿಗೆ ತಲುಪಿಸುವ ಮುಖ್ಯವಾದ ಕಾರ್ಯ ಗಿಡದ ಬೊಡ್ಡೆಯಂತಿರುವ ದಿಗ್ದರ್ಶಕನದು. ನಟ ಆ ಮರದ ಸುಂದರವಾದ ಟೊಂಗೆ. ಇವರಿಬ್ಬರ ಸಂಮಿಶ್ರ ಅಭಿವ್ಯಕ್ತಿಯೇ ಗಿಡದ ಸುಂದರವಾದ ಎಲೆಗಳು. ಅದುವೇ ನಾಟಕದ ಜೀವಾಳ. ನಟನಿಲ್ಲದೇ ನಾಟಕವೇ ಇಲ್ಲ. ಅವನೇ ಪ್ರಾಣ ಮತ್ತು ಆತ್ಮ.

ನಟನಲ್ಲಿ ಹುಟ್ಟು ಗುಣವಾಗಿ ಬಂದಿರುವಂತಹದು ನಟನೆಯ ಚಾತುರ್ಯ. ನಟನು ಅಭಿನಯಿಸುವ ಪಾತ್ರದೊಂದಿಗೆ ಅವನು ಸಂಪೂರ್ಣವಾಗಿ ತಾದಾತ್ಮ್ಯ ಹೊಂದದಿದ್ದರೆ ಸುಂದರ ಕಲಾಭಿವ್ಯಕ್ತಿ ಸಾಧ್ಯವಾಗದು. ನಟನ ಯಾವ ಪಾತ್ರ ಪ್ರೇಕ್ಷಕರಿಗೆ ಎಂದೂ ಮರೆಯದಂತೆ ನೆನಪು ಉಳಿಯುತ್ತದೆಯೋ ಅದಕ್ಕೆ ಅವಿಸ್ಮರಣೀಯ ಅಭಿನಯ ಎನ್ನುವದು. ಗುಬ್ಬಿ ವೀರಣ್ಣನವರ ಕಳ್ಳನ ಪಾತ್ರ, ಕೈಲಾಸಂ ಅವರ ನಾಗತ್ತೆಯ ಪಾತ್ರ

ಎಂದೂ ಪ್ರೇಕ್ಷಕರು ನೆನಸಿಕೊಳ್ಳುವರು. ನಾಟಕದಲ್ಲಿ ಯಾವುದೇ ಪಾತ್ರವಿರಲಿ ಅದು ನಾಟಕಕಾರನ ಮನಸ್ಸನ್ನು ಅಭಿವ್ಯಕ್ತಪಡಿಸುತ್ತದೆ. ಅದನ್ನು ಪ್ರೇಕ್ಷಕರಿಗೆ ತನ್ನ ಕಲೆ, ಕೌಶಲದಿಂದ ನಿರೂಪಿಸುವದು ನಟನ ಜವಾಬ್ದಾರಿ. ವ್ಯಕ್ತಿತ್ವ ಅಂತರ್ಮುಖಿ ಮತ್ತು ಅಭಿನಯ ಬಹಿರ್ಮುಖಿ. ಈ ಎರಡು ಮುಖಿಗಳ ಚಲನೆಯ ಲಯವೇ ನಟನ ಉಸಿರಾಟವಾಗಬೇಕು. ಆಗ ನಟನೇ ನಾಟಕದ ಜೀವಾಳವಾಗುತ್ತಾನೆ.

ಪಾರ್ಸಿ ರಂಗಭೂಮಿ ಮೂಲಕ ಆಧುನಿಕ ಭಾರತೀಯ ರಂಗಭೂಮಿಯು ನಿರ್ಣಾಯಕವಾಗಿ ರೂಪುಗೊಂಡಿದ್ದು, ೧೮೫೦ ಮತ್ತು ೧೮೭೦ ರ ಕಾಲದಲ್ಲಿ. ಆದರೆ ಈ ಬೆಳವಣಿಗೆಯ ಪ್ರಾರಂಭ ೧೮ ನೆಯ ಶತಮಾನದ ಕಡೆಯ ಭಾಗದಲ್ಲಿಯೇ ಕಾಣತೊಡಗಿತ್ತು. ೧೮೮೦ರ ಹೊತ್ತಿಗೆ ರಂಗ ಪ್ರಕಾರವು ಒಂದು ರಾಷ್ಟ್ರವ್ಯಾಪಿ ಚಳವಳಿಯಾಗಿ ತನ್ನ ಕಲೆ ಹಾಗೂ ಉದ್ಯಮ ಸಾಧ್ಯತೆಗಳ ಹಿನ್ನೆಲೆಯಲ್ಲಿ ರೂಪುಗೊಳ್ಳತೊಡಗಿತ್ತು. ಪ್ರಮುಖವಾದ ಅಂಶವೆಂದರೆ ರಾಜಾರವಿವರ್ಮ ಹಾಗೂ ದಾದಾಸಾಹೇಬ ಫಾಲ್ಕೆ ಇವರಿಬ್ಬರಿಗೂ ಇದ್ದ ಒಂದು ಸಮಾನ ಪ್ರೇರಣೆ ಕಂಪನಿ ನಾಟಕದ್ದು.


ಮಹಾರಾಷ್ಟ್ರದಲ್ಲಿ ನಡೆದ ಪ್ರಯೋಗಗಳು ನಾಟಕ ಕ್ಷೇತ್ರಕ್ಕೆ ನಿರ್ಣಾಯಕ ತಿರುವನ್ನು ಕೊಟ್ಟವು. ೧೮೪೩ ರಲ್ಲಿ ಸಾಂಗ್ಲಿಯ ಆಸ್ಥಾನಕ್ಕೆ ಭೇಟಿ ಕೊಟ್ಟು ಕರ್ನಾಟಕದ ಯಕ್ಷಗಾನದಿಂದ ಪ್ರಭಾವಿತರಾದ ವಿಷ್ಣುದಾಸ ಭಾವೆ ಸೀತಾ ಸ್ವಯಂವರ ಎಂಬ ಹೊಸ ನಾಟಕ ಬರೆದು ಪ್ರಯೋಗಿಸಿದ್ದು ಗಮನಾರ್ಹ.

೧೮೮೦ ಮತ್ತು ೧೯೨೦ ರ ನಡುವೆ ಕನ್ನಡ ಸಾಹಿತ್ಯವು ವಿವಿಧ ಮೂಲಗಳಿಂದ ಆಧುನಿಕತೆಯನ್ನು ಆವಾಹಿನಿಸಿಕೊಳ್ಳುತ್ತಿದ್ದ ಈ ಕಾಲದಲ್ಲೇ, ಕನ್ನಡ ನಾಟಕ ಮತ್ತು ರಂಗಭೂಮಿಗಳನ್ನು ಆಧುನಿಕತೆಯು ವಿವಿಧ ದಿಕ್ಕುಗಳಿಂದ ಪ್ರವೇಶಿಸತೊಡಗಿತ್ತು. ೧೮೭೭ ಮತ್ತು ೧೮೭೯ ರಲ್ಲಿ ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಮೊದಲ ನಾಟಕ ತಂಡಗಳು ಜನ್ಮ ತಳೆದವು. ಇದೇ ಕಾಲದಲ್ಲಿ " ಸಂಗ್ಯಾಬಾಳ್ಯಾ" ಎಂಬ 'ಆಧುನಿಕ ಜಾನಪದ' ಕೃತಿಯೊಂದು ಸೃಷ್ಟಿಯಾಯಿತು. ೧೮೭೦ ರಿಂದ ೧೮೮೦ರ ನಡುವೆ ಮಹಾರಾಷ್ಟ್ರದಿಂದ ಹೊಸ ಮಾದರಿಯ ನಾಟಕಗಳು ಪ್ರವಾಸಕ್ಕೆ ಬಂದವು. ಈ ಪ್ರವಾಸಿ ನಾಟಕ ತಂಡಗಳೇ ಕರ್ನಾಟಕದ ಹೊಸ ನಾಟಕ ತಂಡಗಳ ಹುಟ್ಟಿಗೆ ಪ್ರೇರಕವಾದವು.

ಶಾಂತಕವಿಗಳು ೧೮೭೭ರಲ್ಲಿ ಗದಗದಲ್ಲಿ ಪ್ರಾರಂಭಿಸಿದ ಕೃತಪುರ ನಾಟಕ ಮಂಡಳಿ ಹಾಗೂ ೧೮೭೯ರಲ್ಲಿ ಹುಟ್ಟಿದ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ, ಇವು ಕನ್ನಡಾಭಿಮಾನವನ್ನು ಪ್ರಸಾರ ಮಾಡುವ ಉದ್ದೇಶ ಹೊಂದಿದ್ದವು. ಈ ಸ್ಥಿತಿ ಬದಲಾಗತೊಡಗಿದ್ದು ೨೦ ನೇ ಶತಮಾನದ ಮೊದಲ ದಶಕದಲ್ಲಿ. ಆಗ ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಹುಟ್ಟಿದ ಹೊಸ ನಾಟಕ ತಂಡಗಳು ಗಟ್ಟಿಯಾದ ಉದ್ಯಮಶೀಲತೆಯನ್ನು, ಹೊಸ ತಂತ್ರಗಳನ್ನು ಸಾಧಿಸಿಕೊಳ್ಳುವ ಪ್ರಯೋಗ ಮಾಡತೊಡಗಿದವು. ೧೯೦೦ ರಿಂದ ೧೯೪೦ ರ ನಡುವೆ ಜನಪ್ರೀಯತೆಯನ್ನು ಗಳಿಸಿ

ಮೆರೆದ ಕನ್ನಡ ಕಂಪನಿ ನಾಟಕಗಳು ಬಹುಸಂಖ್ಯೆಯ ವೃತ್ತಿ ತಂಡಗಳನ್ನು, ನಟ-ನಟಿಯರನ್ನು, ತಂತ್ರಜ್ಞರನ್ನು ನಾಟಕಕಾರರನ್ನು ಸೃಷ್ಟಿಸಿವೆ.

ಅಂತಹ ನಾಟಕಕಾರರನ್ನು, ನಾಟಕ ತಂಡಗಳನ್ನು ಕಲಾವಿದರನ್ನು ಸೃಷ್ಟಿಸಿದ, ನಾಟಕ ಕಂಪನಿಗಳನ್ನು ಪೋಷಿಸಿ, ಬೆಳೆಯಿಸಿದ ಶ್ರೇಯಸ್ಸು ಅಥಣಿ ನಗರಕ್ಕಿದೆ. ಅಂತೆಯೇ ಅಥಣಿಗೂ, ರಂಗಭೂಮಿಗೂ ಅನ್ಯೋನ್ಯ ಸಂಬಂಧವಿದೆ. ಇಲ್ಲಿಯ ವೈವಿಧ್ಯಮಯ ಚಟುವಟಿಕೆಗಳು ಇಲ್ಲಿಯ ಜನರ ಸದಭಿರುಚಿ, ಹವ್ಯಾಸ, ಸಾಮಾಜಿಕ ಜೀವನ ಶೈಲಿಯ ಪ್ರತಿಬಿಂಬವಾಗಿವೆ.



೧೯೩೪ರಲ್ಲಿ ಅಥಣಿಯಲ್ಲಿ ದಿ. ಭೀಮರಾವ ಹೂಗಾರ ಇವರು " ಭಾಗ್ಯೋದಯ ನಾಟಕ ಮಂಡಳಿ " ಸ್ಥಾಪಿಸಿ ತಮ್ಮ ಕಲೆ, ಸಂಗೀತದಿಂದ ಇಂದಿಗೂ ಜನರ ಮನದಲ್ಲಿ ಮುದ್ರೆಯೊತ್ತಿದ್ದಾರೆ. ಕರ್ನಾಟಕದಲ್ಲಿ ' ಶ್ರೀ ಸತ್ಯ ನಾರಾಯಣ ವ್ರತ ಮಹಾತ್ಮೆ ' ನಾಟಕ ಪ್ರಯೋಗದಿಂದ ದಾಖಲೆ ನಿರ್ಮಿಸಿದ ಶ್ರೀ ಗಜಾನನ ನಾಟ್ಯ ಸಂಘ ಜಮಖಂಡಿಯ ಸಂಸ್ಥಾಪಕರು ಅಥಣಿಯ ರಾಮತೀರ್ಥ ಗ್ರಾಮದ ಒಡೆಯರ ಬಂಧುಗಳು.

ದಿ. ಆರ್. ಪಿ. ಕುಲಕರ್ಣಿಯವರ ' ಗೌರಿ ' ನಾಟಕವು ಆಕಾಶವಾಣಿ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿ ದೊರಕಿಸಿ ಅಥಣಿಗೆ ಕೀರ್ತಿ ತಂದಿದೆ. ದಿ. ಕೃ. ದಾ. ಸಂಗೋರಾಮರು ಒಳ್ಳೆಯ ನಟ, ನಿರ್ದೇಶಕರಾಗಿದ್ದರೆ, ದಿ. ಲಚ್ಚಪ್ಪ ಮಾಸ್ತರ ಹಲ್ಯಾಳರು ಅಥಣಿಯ ಕಲೆ, ಸಂಸ್ಕೃತಿಯ ಪ್ರತಿನಿಧಿಯಾಗಿದ್ದರು. ಈ ಕ್ಷೇತ್ರದಲ್ಲಿ ಅವರ ಸೇವೆ ಅಪಾರ. ಟಿ. ಪಿ. ಕೈಲಾಸಂರವರ ' ಟೊಳ್ಳುಗಟ್ಟಿ ', ' ಶ್ರೀ ಕೃಷ್ಣಪಾರಿಜಾತ 'ದ ಪ್ರಸಂಗಗಳನ್ನು ಮನೋಜ್ಞವಾಗಿ ಅಭಿನಯಿಸಿ ಜನರ ಮೆಚ್ಚುಗೆ ಪಡೆದಿದ್ದರು. ಶ್ರೀ ಅ. ರಾ. ಬೀಡಕರ

ಶಿಕ್ಷಕರು ಸ್ವತಃ ನಾಟಕಕಾರರು, ನಿರ್ದೇಶಕರು ಹಾಗೂ ರಂಗ ಪ್ರಸಾದನಕಾರರು. ಇಂದಿಗೂ ತಮ್ಮ ಕಲೆಯಿಂದ ಕಲಾ ಸೇವೆ ಸಲ್ಲಿಸುತ್ತಿದ್ದಾರೆ.

ಅಥಣಿಯಲ್ಲಿ ೧೯೩೭ರಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಪ್ರದರ್ಶನಗೊಂಡ ' ಉದರ ವೈರಾಗ್ಯ' ನಾಟಕ ಇಂದಿಗೂ ಹೃದಯಸ್ಪರ್ಶಿಯಾಗಿದೆ. ಹಾಗೆಯೇ ಇಲ್ಲಿ ನಟರಾಜ ಯುವಕ ನಾಟ್ಯ ಮಂಡಳಿ ಸ್ಥಾಪನೆಗೊಂಡು ' ನಾಗರ ಪಂಚಮಿ ' ನಾಟಕದಿಂದ ಮೆಚ್ಚುಗೆ ಪಡೆಯಿತು.

ಶಾಲೆ ಕಾಲೇಜುಗಳ ಸ್ನೇಹ ಸಮ್ಮೇಲನಗಳಲ್ಲಿ ಅತ್ಯುತ್ತಮ ನಾಟಕಗಳು ಪ್ರದರ್ಶನಗೊಂಡ ದಾಖಲೆಗಳಿವೆ. ಆಗಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತಮ್ಮ ಪ್ರತಿಭೆ, ಕಲೆ ಪ್ರದರ್ಶಿಸಲು ಇದೊಂದು ಒಳ್ಳೆಯ ಅವಕಾಶ. ಏಕಲವ್ಯ, ಕಿವುಡರ ಸಾಮ್ರಾಜ್ಯ, ಕಿಸಾಗೌತಮಿ, ವಾಲ್ಮೀಕಿಭಾಗ್ಯ, ನಾಪತ್ತೆ ಹೀಗೆ ಅಪರೂಪದ ನಾಟಕಗಳು ಪ್ರದರ್ಶನಗೊಂಡು ಅಪಾರ ಮೆಚ್ಚುಗೆ ಗಳಿಸಿದವು. ' ಮುತ್ತಾಳ 'ರು ನಾಟಕ ಪ್ರದರ್ಶನದಿಂದ ಸಂಗ್ರಹಿಸಿದ ಧನವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ನೀಡಲಾಯಿತು.

ಅದೇ ಕಾಲದಲ್ಲಿ ಕರ್ನಾಟಕದ ಪ್ರಸಿದ್ಧ ನಾಟಕ ಕಂಪನಿಗಳಾದ, ನಾಟ್ಯಭೂಷಣ ಶ್ರೀ ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘ, ಶಾರದಾ ನಾಟಕ ಮಂಡಳಿ ಗೋಕಾಕ, ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ, ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಇವರು ಇಲ್ಲಿ ಹಲವಾರು ನಾಟಕಗಳನ್ನು ಪ್ರದರ್ಶಿಸಿರುವ ಸ್ಥಳೀಯ ಶ್ರೇಷ್ಠ ಕಲಾವಿದರಾದ ದಿ. ಹಣಮದಾಸರು ಅಭಿನಯಿಸಿದ ಟಿಪ್ಪು ಸುಲ್ತಾನ ಹಾಗೂ ಬಬ್ರುವಾಹನ ಪಾತ್ರಗಳು ಇನ್ನೂ ಜೀವಂತವಾಗಿವೆ.

ಇದಕ್ಕೆ ಪೂರಕವೆಂಬಂತೆ ಸ್ಥಳೀಯ ಹವ್ಯಾಸಿ ಯುವಕರು ಶ್ರೀ ಗಜಾನನ ಹವ್ಯಾಸಿ ನಾಟಕ ಮಂಡಳಿ ಎಂಬ ತಂಡವನ್ನು ಹುಟ್ಟು ಹಾಕಿದ್ದು, ೧೯೭೧ ರಲ್ಲಿ. ಸುಮಾರು ೧೫-೨೦ ಯುವಕರು ಸತತವಾಗಿ ೨೦ ವರ್ಷಗಳ ಅವಧಿಗೆ ಪ್ರತಿವರ್ಷ ಗಜಾನನ ಉತ್ಸವದಲ್ಲಿ ಸುಂದರ ಸಾಮಾಜಿಕ, ಕೌಟುಂಬಿಕ ನಾಟಕಗಳನ್ನು ಪ್ರದರ್ಶಿಸಿ ಇಂದಿಗೂ ಜನರಲ್ಲಿ ಮನೆ ಮಾತಾಗಿದ್ದಾರೆ. ಅಲ್ಲದೇ ಇಲ್ಲಿಯ ಅನೇಕ ಹಿರಿಯ ಕಲಾವಿದರು ನಾಟಕ ರಚಿಸಿದ್ದಾರಲ್ಲದೇ ತಮ್ಮ ಅತ್ಯುತ್ತಮ ಅಭಿನಯದಿಂದ ಕಲೆಯನ್ನು ಪೋಷಿಸಿದ್ದಾರೆ. ಇದಕ್ಕಾಗಿ ' ರಂಗವೇದಿಕೆ ' ಎಂಬ ಸಂಸ್ಥೆಯು ಅನೇಕ ನಾಟಕ ವಾಚನ ಕಾರ್ಯಕ್ರಮ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಕಲಾವಿದರನ್ನು ಗೌರವಿಸಿದೆ.

ಅಥಣಿಯ ಸುತ್ತಮುತ್ತಲಿನ ಅನೇಕ ಗ್ರಾಮಗಳಲ್ಲಿ ಸ್ಥಳೀಯರಿಂದ ನಾಟಕಗಳ ಪ್ರದರ್ಶನಗಳು ಜರುಗಿ ಜನರಲ್ಲಿ ಹವ್ಯಾಸವನ್ನು ಉತ್ಸಾಹವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಿವೆ. ಉಗಾರ ಶುಗರ ವರ್ಕ್ಸ ಉಗಾರದಲ್ಲಿ ಗಜಾನನ ಉತ್ಸವದಲ್ಲಿ ಪ್ರದರ್ಶನಗೊಳ್ಳುವ ಮರಾಠಿ ಹಾಗೂ ಕನ್ನಡ ನಾಟಕಗಳು ಹಾಗೂ ಸಾಂಗ್ಲಿ, ಮಿರಜದಲ್ಲಿ ನಡೆಯುವ ನಾಟಕಗಳು ಇಲ್ಲಿಯ ರಸಿಕರನ್ನು ಕಲಾಭಿಮಾನಿಗಳನ್ನು ಆಕರ್ಷಿಸುತ್ತವೆ.

ಮನುಷ್ಯನಿಗೆ ತಲೆ, ಎಷ್ಟು ಅವಶ್ಯಕವೋ ಅಷ್ಟೇ ಜೀವನಕ್ಕೆ ಕಲೆ ಸ್ಫೂರ್ತಿಯ ಸೆಲೆ. ಇಂತಹ ಸ್ಫೂರ್ತಿಯ ಸೆಲೆಯಾದ ನಾಟಕ ಕಲೆ ಇಂದು ನಶಿಸುತ್ತಿರುವುದು ತುಂಬಾ ಕಳವಳಕಾರಿ. ಸಿನೀಮಾ, ದೂರದರ್ಶನ, ಕಂಪ್ಯೂಟರ್ ಇಂಟರನೇಟ್‌ದಂಥ ಆಧುನಿಕ ಮಾಧ್ಯಮಗಳು ರಂಗಭೂಮಿಯ ಬೆಳವಣಿಗೆಗೆ ಆತಂಕಕಾರಿಯಾಗಿವೆ. ಅಸಹಜ, ಅತೀರಂಜಿತ, ಕಾಲ್ಪನಿಕ, ವೈಭವಯುತ ಚಲನ ಚಿತ್ರಗಳು, ಕಲಾವಿದರ ನಟನಾಸಾಮರ್ಥ್ಯ ಅಭಿನಯ ಕೌಶಲ್ಯಕ್ಕೆ ಸವಾಲಾಗಿವೆ.

ಇಂತಹ ಅಡ್ಡಿ, ಆತಂಕ, ವಿಷಮತೆಗಳ ಮಧ್ಯೆ ಅಥಣಿಯ ರಂಗ ಭೂಮಿ ತನ್ನದೇ ಆದ ಇತಿಹಾಸ ಹಾಗೂ ಕೊಡುಗೆಯಿಂದ ಮೆರೆದಿದೆ. ಇಲ್ಲಿಯ ಕಲಾವಿದರು ಈ ಕಲೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿದ್ದಾರೆ. ಪ್ರೌಢ ಪ್ರೇಕ್ಷಕ ವರ್ಗದ ಜೊತೆಗೆ ಮನರಂಜನೆ, ತಿಳಿಹಾಸ್ಯವನ್ನು ಅಪೇಕ್ಷಿಸುವ ರಸಿಕರನ್ನು ಆಕರ್ಷಿಸಿ ಅವರ ಅಭಿರುಚಿಗೆ ಸ್ಪಂದಿಸಿದ್ದಾರೆ.

ಅಪಾರ ಹಾಗೂ ಅಭೂತಪೂರ್ವ ಇತಿಹಾಸದ ಪುಟಗಳನ್ನು ತಿರುವುತ್ತಿದ್ದಂತೆ ಮೈ ರೋಮಾಂಚನವಾಗಿ ಮನ ಪುಲಕಿತವಾಗುತ್ತದೆ. ನಾಡಿನ ಹೆಸರಾಂತ ಕಲಾವಿದರ ಅವಿಸ್ಮರಣೀಯ ಪ್ರದರ್ಶನಗಳ ಹಾಗೂ ಸುತ್ತಮುತ್ತಲಿನ ಕಲಾವಿದರ ಸಹಜ ಅಭಿನಯದ ಪಕ್ಷಿನೋಟ ಇದಾಗಿದೆ.

■■

ಅಥಣಿ ತಾಲೂಕು : ಸಮಸ್ಯೆಗಳು

● ಎಸ್. ಡಿ. ಚಕ್ರವರ್ತಿ

ಕರ್ನಾಟಕದ ಗಡಿಭಾಗದಲ್ಲಿರುವ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕು ಮಹಾತಪಸ್ವಿ ಶ್ರೀ ಶಿವಯೋಗಿ ಮುರುಘೇಂದ್ರಸ್ವಾಮಿಗಳ ಪುಣ್ಯಭೂಮಿಯೆಂದೇ ಖ್ಯಾತವಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಭವ್ಯವಾದ ಶ್ರೀ ರಾಘವೇಂದ್ರಸ್ವಾಮಿಗಳ ಮಠವಿರುವ ಅಥಣಿ ಪಟ್ಟಣವೂ ಸಹ 'ಅಭಿನವ ಮಂತ್ರಾಲಯ'ವೆಂದು ಹೆಸರುವಾಸಿಯಾಗಿದೆ. ಇದಲ್ಲದೆ ಸಮೀಪದ ಖಿಳೇಗಾಂವ್‌ನ ಬಸವೇಶ್ವರ ದೇವಾಲಯ. ಮಂಗಸೂಳಿಯ ಮಲ್ಲಯ್ಯನ ದೇವಾಲಯ ಮತ್ತು ಕೊಕಟನೂರಿನ ಯಲ್ಲಮ್ಮ ದೇವಾಲಯಗಳೂ ಸಹ ಈ ಪ್ರದೇಶವನ್ನು ಪುಣ್ಯಕ್ಷೇತ್ರಗಳ ತಾಣವೆಂದು ಪರಿಚಯಿಸುತ್ತವೆ. ದಿ. ಮಿರ್ಜಿ ಅಣ್ಣಾರಾಯರಂತಹ ಶ್ರೇಷ್ಠ ಸಾಹಿತಿಯನ್ನು ಕನ್ನಡಕ್ಕೆ ನೀಡಿದ್ದು ಸಾಂಸ್ಕೃತಿಕವಾಗಿಯೂ ಮೂಂಚೂಣಿಯಲ್ಲಿರುವ ಅಥಣಿ ತಾಲೂಕು ಅಭಿವೃದ್ಧಿಯ ದೃಷ್ಟಿಯಿಂದ ಮಾತ್ರ ಹೆಚ್ಚಿನ ಪ್ರಗತಿಯನ್ನು ಕಾಣದೆ ಹಿಂದುಳಿದಿದೆ.

ಅಥಣಿ ತಾಲೂಕಿನಲ್ಲಿ ಸುಮಾರು ೬೦ ಕಿಲೋಮೀಟರುಗಳಷ್ಟು ದೂರದವರೆಗೆ ಹರಿಯುವ ಜೀವನದಿ ಕೃಷ್ಣೆಯ ಸಾಮೀಪ್ಯದ ಪ್ರಯೋಜನ ಪಡೆದು ಕಾಗವಾಡ ವಿಧಾನಸಭಾಕ್ಷೇತ್ರವು ಕೆಲವು ಗ್ರಾಮಗಳನ್ನು ಹೊರತುಪಡಿಸಿ ಕೃಷಿಯಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಆದರೆ ಅದಕ್ಕಿಂತ ವಿಶಾಲವಾದ ಅಥಣಿ ವಿಧಾನಸಭಾಕ್ಷೇತ್ರವು ಮಳೆಯ ಅಭಾವದಿಂದ ಪದೇ ಪದೇ ಬರಗಾಲಕ್ಕೆ ತುತ್ತಾಗಿ ವೇಗವಾಗಿ ಅಭಿವೃದ್ಧಿ ಹೊಂದುವುದು ಸಾಧ್ಯವಾಗಿಲ್ಲ.

ಕೃಷ್ಣಾ ನದಿಯಿಂದ ಸಾಧ್ಯವಾದಷ್ಟು ಹೆಚ್ಚು ಪ್ರದೇಶವನ್ನು ನೀರಾವರಿಗೆ ಒಳಪಡಿಸಿ ಬರಗಾಲಕ್ಕೆ ಶಾಶ್ವತ ಪರಿಹಾರವಾಗಿ ೧೯೭೫ ರಲ್ಲಿ ಕೈಗೆತ್ತಿಕೊಂಡ ಹಿಪ್ಪರಗಿ ಯೋಜನೆಯ ಕಾಮಗಾರಿಗಳು ಕುಂಟುತ್ತಾ ಸಾಗಿರುವುದು ಅಥಣಿ ತಾಲ್ಲೂಕಿನಲ್ಲಿ ಕೃಷಿಯ ಅಭಿವೃದ್ಧಿಗೆ ಒಂದು ಗಂಭೀರ ಸಮಸ್ಯೆಯೆನಿಸಿದೆ. ೫೯,೬೯೩ ಹೆಕ್ಟೇರ್‌ಗಳಷ್ಟು ಭೂಮಿಗೆ ನೀರುಣಿಸಿ ಈ ಪ್ರದೇಶಕ್ಕೆ ವರದಾನವೆನಿಸಬಲ್ಲ ಈ ಯೋಜನೆಯಡಿಯಲ್ಲಿ ಜಲಾಶಯದ ನಿರ್ಮಾಣವು ಇತ್ತೀಚಿಗೆ ಕಡೆಗೂ ಪೂರ್ಣಗೊಂಡಿರುವುದು ಭವಿಷ್ಯದ

ದೃಷ್ಟಿಯಿಂದ ಆಶಾದಾಯಕವೆನಿಸಿದೆ. ಈ ಯೋಜನೆಯಡಿಯಲ್ಲಿಯೂ ನೀರಾವರಿಯಿಂದ ವಂಚಿತವಾಗಿದ್ದ ಅಥಣಿ ತಾಲ್ಲೂಕಿನ ಉತ್ತರ ಮತ್ತು ಪೂರ್ವ ಭಾಗಗಳ ಗ್ರಾಮಗಳಿಗೆ ಪ್ರಯೋಜನವಾಗುವಂತೆ ಕರಿಮಸೂತಿ ಏತ ನೀರಾವರಿ ಯೋಜನೆಗೆ ಸಹ ಕಳೆದ ವರ್ಷ ಮಂಜೂರಾತಿಯು ದೊರೆತಿರುವುದು ಕೃಷಿ ಅಭಿವೃದ್ಧಿಗೆ ಅವಕಾಶಗಳು ಹೆಚ್ಚಾಗುವ ಆಶೆಯನ್ನು ಮೂಡಿಸಿದೆ. ಆದರೆ ಈ ಯೋಜನೆಯ ಜೊತೆಗೆ ೯೦೧ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ೧೨ ಟಿ.ಎಮ್.ಸಿ. ನೀರಿನಿಂದ ಒಟ್ಟು ೭೫,೬೯೭ ಹೆಕ್ಟೇರ್‌ಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವು ದೊರೆಯುವಂತೆ ಪರಿಷ್ಕೃತಗೊಂಡಿರುವ ಹಿಪ್ಪರಗಿ ಯೋಜನೆಯಡಿಯಲ್ಲಿ ಹಲ್ಯಾಳ ಮತ್ತು ಐನಾಪೂರ ಏತ ನೀರಾವರಿ ಯೋಜನೆಗಳನ್ನೂ ಸಮರೋಪಾದಿಯಲ್ಲಿ ಪೂರ್ಣಗೊಳಿಸುವುದು ಬಹಳ ಮಹತ್ವದ್ದೆನಿಸಿದೆ. ಇವುಗಳ ಪ್ರಯೋಜನವನ್ನು ಅಥಣಿ ತಾಲ್ಲೂಕಿನ ರೈತರು ಪಡೆಯಬೇಕಾದರೆ ಕೃಷ್ಣಾ ಕಣಿವೆಯ ಈ ಬೃಹತ್ ಯೋಜನೆಯಿಂದ ಭೂಮಿ ಕಳೆದುಕೊಂಡಿರುವ ಸಾವಿರಾರು ಜನರಿಗೆ ಪರಿಹಾರ ಮತ್ತು ಪುನರ್ವಸತಿ ಕಾರ್ಯವನ್ನೂ ತ್ವರಿತವಾಗಿ ಪೂರ್ಣಗೊಳಿಸಬೇಕಾಗಿದೆ.

ಬರಗಾಲದ ಗಂಭೀರ ಸಮಸ್ಯೆಗೆ ಶಾಶ್ವತ ಪರಿಹಾರದ ದಿಸೆಯಲ್ಲಿ ಅಥಣಿಗೆ ಸಮೀಪದ ಅಗ್ರಾಣಿ ಹಳ್ಳಕ್ಕೆ ರಾಜ್ಯ ಸರಕಾರವು ೪.೩೪ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ೧೧ ನಾಲಾ ಬಾಂಧಾರಗಳನ್ನು ತ್ವರಿತವಾಗಿ ನಿರ್ಮಿಸುವುದು ಸಹ ಅತ್ಯವಶ್ಯಕವಾಗಿದೆ.

ಅಥಣಿ ತಾಲ್ಲೂಕಿನ ಅಗ್ರಾಣಿ ಹಳ್ಳದಿಂದ ಮತ್ತು ಕೃಷ್ಣಾನದಿ ದಂಡೆಯಿಂದ ಅವ್ಯಾಹತವಾಗಿ ಉಸುಕು ತೆಗೆಯಲ್ಪಟ್ಟು ಪಕ್ಕದ ಮಹಾರಾಷ್ಟ್ರದಲ್ಲಿ ನಿರ್ಮಾಣ ಕಾಮಗಾರಿಗಳಿಗೆ ರವಾನೆಯಾಗುತ್ತಿರುವುದು ಸಹ ಒಂದು ಗಂಭೀರ ಸಮಸ್ಯೆಯೆನಿಸಿದ್ದು ಜನರು ಬರಗಾಲ, ಪ್ರವಾಹ ಮೊದಲಾದ ನೈಸರ್ಗಿಕ ಪ್ರಕೋಪಗಳಿಗೆ ಗುರಿಯಾಗುವ ಅಪಾಯವನ್ನು ಹೆಚ್ಚಿಸಿದೆ. ಹೀಗೆ ಕೆಲವು ಹಿತಾಸಕ್ತಿಗಳು ಇಡೀ ಜನಜೀವನಕ್ಕೆ ಮಾರಕವೆನಿಸುವಂತೆ ನಿಸರ್ಗದ ಶೋಷಣೆಯಲ್ಲಿ ತೊಡಗಿರುವುದನ್ನು ನಿಲ್ಲಿಸುವುದು ನಮ್ಮ ಅಧಿಕಾರಾರೂಢರ ಗುರುತರ ಜವಾಬ್ದಾರಿಯಾಗಿದೆ.

ಕೃಷ್ಣಾ ನದಿಯಿಂದ ಏತ ನೀರಾವರಿ ಸೌಲಭ್ಯವಿರುವ ಅಥಣಿ ತಾಲ್ಲೂಕಿನ ಕೃಷಿಕರು ಆರ್ಥಿಕ ಲಾಭದ ದೃಷ್ಟಿಯಿಂದ ಪ್ರತಿ ವರ್ಷ ಕಬ್ಬನ್ನೇ ಬೆಳೆಯುತ್ತಿರುವುದು ಸಹ ಕೃಷಿಗೆ ಮತ್ತೊಂದು ಜಟಿಲ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಸಾವಿರಾರು ಎಕರೆಗಳಷ್ಟು ಭೂಮಿಯು ತನ್ನ ಸತ್ವವನ್ನು ಕಳೆದುಕೊಂಡು ಕೃಷಿಗೆ ನಿರುಪಯುಕ್ತವಾಗುತ್ತಿರುವುದು ಅವರಿಗೆ 'ಅತಿ ಆಸೆಯು ಗತಿ ಕೆಡಿಸಿತು' ಎಂಬ ಎಚ್ಚರಿಕೆಯ ಘಂಟೆಯನ್ನು ಮೊಳಗಿಸುತ್ತಿದೆ.

ಅಥಣಿ ತಾಲ್ಲೂಕಿನಲ್ಲಿ ಪ್ರತಿ ವರ್ಷ ಸಮೃದ್ಧವಾಗಿ ಬೆಳೆಯುವ ಕಬ್ಬು ಬೆಳೆಗಾರರಲ್ಲಿ ಸಂತಸ ತರುವ ಬದಲಾಗಿ ಆತಂಕ ಮೂಡಿಸುತ್ತಿರುವುದು ಒಂದು

ವಿಪರ್ಯಾಸವೆನಿಸಿದೆ. ಇತ್ತೀಚಿನವರೆಗೆ ಉಗಾರಖುರ್ದ್‌ನ ಉಗಾರ ಸಕ್ಕರೆ ಕಾರ್ಖಾನೆಯು ಏಕೈಕ ಸಕ್ಕರೆ ಕಾರ್ಖಾನೆಯಾಗಿದ್ದು ತಾಲ್ಲೂಕಿನಲ್ಲಿ ಹೆಚ್ಚುವರಿ ಕಬ್ಬಿಗೆ ಪ್ರತಿಫಲವು ಅನಿಶ್ಚಿತವೆನಿಸಿ ಬೆಳೆಗಾರರು ಕಳವಳಗೊಳ್ಳುವುದು ಸಾಮಾನ್ಯವಾಗಿತ್ತು. ವಯಸ್ಸಿಗೆ ಬಂದ ಹೆಣ್ಣು ಮಗಳನ್ನು ಮದುವೆ ಮಾಡಿ ಕೊಡದ ತಂದೆ-ತಾಯಿಗಳಂತೆ ಅವರು ಹೆಚ್ಚುವರಿ ಕಬ್ಬನ್ನು ನುರಿಸುವ ಬಗ್ಗೆ ಚಿಂತೆಗೀಡಾಗುವ ಪರಿಸ್ಥಿತಿಯಿತ್ತು. ೨೦೦೧ ರಲ್ಲಿ ರೈತರ ಸಂಕಲ್ಪಶಕ್ತಿಯ ಪ್ರತೀಕವಾಗಿ ಅಥಣಿಗೆ ಸಮೀಪದ ಕೆಂಪವಾಡದಲ್ಲಿ ಅಥಣಿ ಫಾರ್ಮರ್ಸ್ ಸಕ್ಕರೆ ಕಾರ್ಖಾನೆ ಮತ್ತು ಕಳೆದ ವರ್ಷ ಎರಡು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಅಥಣಿಯ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ಕಾರ್ಯಾರಂಭ ಮಾಡಿರುವುದು ಈ ಗಂಭೀರ ಸಮಸ್ಯೆಯು ತಕ್ಕಮಟ್ಟಿಗಾದರೂ ಶೀಘ್ರ ಪರಿಹಾರ ಕಾಣುವುದೆಂಬ ಆಶೆಯನ್ನು ಮೂಡಿಸಿದೆ.

ತಮಗೆ ಸ್ವಾತಂತ್ರ್ಯದ ಐದು ದಶಕಗಳ ನಂತರವೂ ಇಲ್ಲದಿರುವ ಜೀವನದ ಕನಿಷ್ಠ ಸೌಲಭ್ಯಗಳನ್ನು ತ್ವರಿತವಾಗಿ ಕಲ್ಪಿಸಬೇಕು ಇಲ್ಲವೇ ಪರಿಸ್ಥಿತಿಯು ಉತ್ತಮವಿರುವ ಪಕ್ಕದ ಮಹಾರಾಷ್ಟ್ರಕ್ಕೆ ತಮ್ಮನ್ನು ಸೇರಿಸಬೇಕೆಂಬ ವಿಲಕ್ಷಣ ಬೇಡಿಕೆಯೊಂದಿಗೆ ಅಥಣಿ ತಾಲ್ಲೂಕಿನ ೨೨ ಗಡಿಗ್ರಾಮಗಳ ಜನರು ರಾಜ್ಯ ಸರಕಾರವನ್ನು ಇತ್ತೀಚಿಗೆ ಪೇಚಿಗೆ ಸಿಲುಕಿಸಿದ್ದುಂಟು. ಪಾಂಡೆಗಾಂವ್, ಖಿಳೇಗಾಂವ್, ಖೋತವಾಡಿ, ಆಜೂರು, ಅನಂತಪುರ, ರಾಮತೀರ್ಥ, ಮದಬಾವಿ, ಕೆಂಪವಾಡ, ಸಂಬರಗಿ, ಜಂಬಗಿ, ಅರಳಿಹಟ್ಟಿ ಮೊದಲಾದ ಗ್ರಾಮಗಳ ಜನರು ಈ ನಿಟ್ಟಿನಲ್ಲಿ ಚಳುವಳಿಗೆ ಸಹ ಮುಂದಾದ ಸಂಗತಿಯು ಹತಾಶೆಯ ಅಂಚನ್ನು ತಲುಪಿರುವ ಅವರ ದುಃಸ್ಥಿತಿಗೆ ಕನ್ನಡಿ ಹಿಡಿದಿದೆ. ಪಕ್ಕದ ಮಹಾರಾಷ್ಟ್ರಕ್ಕೆ ಹೋಗಲು ರಸ್ತೆಗಳು ಉತ್ತಮವಿದ್ದರೆ ಅದೇ ಅಥಣಿ ತಾಲ್ಲೂಕಿನ ಇತರ ಸ್ಥಳಗಳಿಗೆ ಹೋಗಲು ಅವರು ದುರ್ಗಮವಾದ ದಾರಿಯನ್ನು ಕ್ರಮಿಸಬೇಕಾಗಿದೆ. ಇದಲ್ಲದೆ ಕುಡಿಯುವ ನೀರು, ವಿದ್ಯುತ್, ಅಂಚೆ ಸೌಲಭ್ಯ ಮತ್ತು ಸಾರಿಗೆ ಮೊದಲಾದ ಪ್ರತಿಯೊಂದು ಕನಿಷ್ಠ ಸೌಲಭ್ಯಕ್ಕೂ ಪರದಾಡಬೇಕಾದ ಹೀನಾಯ ಪರಿಸ್ಥಿಯು ಈ ಗ್ರಾಮಸ್ಥರದು. ಅವರ ನ್ಯಾಯಯುತ ಹೋರಾಟಕ್ಕೆ ಸ್ಪಂದಿಸಿ ಕರ್ನಾಟಕ ಸರಕಾರವು ಈ ಗಡಿಗ್ರಾಮಗಳ ಸುಧಾರಣೆಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದು ಈ ಸಮಸ್ಯೆ ಪರಿಹಾರ ದೊರಕಿಸಲು ಶುಭಸೂಚಕವೆನಿಸಿದೆ.

ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ವಿಕಾಸ ಯೋಜನೆಯಡಿನಲ್ಲಿ ಕಳೆದ ವರ್ಷ ಅಥಣಿ ತಾಲ್ಲೂಕಿಗೆ ಒಟ್ಟು ೧೦ ಕೋಟಿ ರೂಪಾಯಿಗಳ ಅನುದಾನವು ಬಿಡುಗಡೆಯಾಗಿರುವುದು ಸಹ ಅದರ ಗ್ರಾಮಗಳ ನಡುವೆ ಕೂಡುರಸ್ತೆಗಳ ನಿರ್ಮಾಣಕ್ಕೆ ಅವಕಾಶಗಳನ್ನು ಕಲ್ಪಿಸಿದೆ. ಸತತ ಪ್ರಯತ್ನಗಳ ಮೂಲಕ ಈ ಬೃಹತ್ ಅನುದಾನವನ್ನು ಪಡೆಯುವಲ್ಲಿ ಸಫಲರಾಗಿರುವ ಶಾಸಕರಾದ ಶಹಜಹಾನ ಡೊಂಗರಗಾಂವ್, ಭರಮಗೌಡ ಕಾಗೆ ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯದ ವಿಶೇಷ ಅಧಿಕಾರಿ ಸುಧೀಂದ್ರ ಕುಲಕರ್ಣಿ ನಿಜಕ್ಕೂ ಅಭಿನಂದನಾರ್ಹರು.

ಸರಕು ಸಾಮುಗ್ರಿಗಳು, ಸಾರಿಗೆ, ಕಾರ್ಮಿಕರು ಮತ್ತಿತರ ಸೌಲಭ್ಯಗಳೊಂದಿಗೆ ಸಂಪನ್ಮೂಲಗಳ ಆಗರವಾಗಿದ್ದರೂ ಸಹ ಔದ್ಯಮಿಕ ಅಭಿವೃದ್ಧಿಯಲ್ಲಿ ಹಿಂದೂಳಿದಿರುವಿಕೆಯು ಅಥಣಿ ತಾಲ್ಲೂಕಿನ ಮತ್ತೊಂದು ಗಂಭೀರ ಸಮಸ್ಯೆಯೆನಿಸಿದೆ. ಬ್ರಿಟಿಷ್ ಪ್ರವಾಸಿಗ ಓಗ್ಲಿಲ್ಬಿ ಮತ್ತು ಫ್ರೆಂಚ್ ಪ್ರವಾಸಿಗ ಮ್ಯಾಂಡೆಸ್ಲೋ ಅಥಣಿ ಪಟ್ಟಣವು ಬಿಜಾಪುರ ಮತ್ತು ಗೋವಾ ನಡುವೆ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು ಎಂಬುದನ್ನು ಇತಿಹಾಸದಲ್ಲಿ ದಾಖಲಿಸಿದ್ದಾರೆ. ಆದರೆ ಅದರ ಆರ್ಥಿಕ ಉನ್ನತಿಯು ಇಂದು ಗತವೈಭವವಾಗಿ ಮಾತ್ರ ಉಳಿದಿದೆ. ಅನಿಶ್ಚಿತ ಮಳೆಯಿಂದ ಪದೇ ಪದೇ ಬರಗಾಲಕ್ಕೆ ಸಿಲುಕಿ ಅದರ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಯು ಕುಂಠಿತಗೊಂಡಿದೆ. ರಾಜ್ಯ ಸರಕಾರದ ದೋಷಪೂರಿತ ಮಾರಾಟತೆರಿಗೆ ನೀತಿಯಿಂದ ಅಥಣಿ ತಾಲ್ಲೂಕಿನ ವೀಳೆದೆಲೆ, ಹತ್ತಿ, ಅರಿಶಿನ ಮೊದಲಾದವುಗಳ ವ್ಯಾಪಾರವು ಮಹಾರಾಷ್ಟ್ರದ ಸಾಂಗ್ಲಿ, ಇಚಲಕರಂಜಿ ಮತ್ತು ಕೊಲ್ಲಾಪುರ ಮೊದಲಾದ ನಗರಗಳಿಗೆ ಸ್ಥಳಾಂತರಗೊಂಡಿದೆ. ಇದರ ಪರಿಣಾಮವಾಗಿ ಅಥಣಿ ಪಟ್ಟಣದ ಪೇಟೆಗಳು ಹಾಳು ಸುರಿಯುತ್ತಿವೆ.

ಆದರೆ ಈ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಅಥಣಿ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಪರಂಪರಾಗತ ಗುಡಿ ಕೈಗಾರಿಕೆಯಾದ ಚರ್ಮೋದ್ಯೋಗವನ್ನು ಅಭಿವೃದ್ಧಿಪಡಿಸುವ ದಿಶೆಯಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ. ಶ್ರೇಷ್ಠ ಗುಣಮಟ್ಟಕ್ಕೆ ಹೆಸರಾಗಿದ್ದು ವಿಶ್ವಪ್ರದಕ್ಷಿಣೆ ಮಾಡುತ್ತಿರುವ ಕೊಲ್ಲಾಪುರಿ ಚಪ್ಪಲಿಗಳು ವಾಸ್ತವಿಕವಾಗಿ ಅಥಣಿ, ಮದಬಾವಿ ಮತ್ತಿತರ ಗ್ರಾಮಗಳಲ್ಲಿ ಸಿದ್ಧಗೊಳ್ಳುತ್ತಿರುವುದು ಅಭಿಮಾನದ ಸಂಗತಿಯಾಗಿದೆ. ಚರ್ಮೋದ್ಯೋಗದಲ್ಲಿ ಅಥಣಿ ತಾಲ್ಲೂಕಿನ ಹಿರಿಮೆಯನ್ನು ಎತ್ತಿಹಿಡಿಯುವಲ್ಲಿ ಖಾದಿ ಹಾಗೂ ಚರ್ಮೋದ್ಯೋಗ ಆಯೋಗದ ಘಟಕವಾದ ಚರ್ಮಾಲಯ ಮತ್ತು ಅಥಣಿಯ ಲಿಡ್ಕರ್ ಶಾಖೆಯ ಸಾಧನೆಗಳು ಉಲ್ಲೇಖನೀಯವೆನಿಸಿವೆ.

ಇತ್ತೀಚಿನವರೆಗೆ ಅಥಣಿ ತಾಲೂಕಿನ ಏಕೈಕ ಸಕ್ಕರೆ ಕಾರ್ಖಾನೆಯೆನಿಸಿದ್ದ ಉಗಾರಖುರ್ದ್‌ನ ಉಗಾರ ಸಕ್ಕರೆ ಕಾರ್ಖಾನೆಯು ಪ್ರಗತಿಯ ದಾಪುಗಾಲು ಹಾಕುತ್ತಿದ್ದು ಔದ್ಯಮಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಪ್ರೇರಕವೆನಿಸಿದೆ. ಪ್ರತಿ ವರ್ಷ ಕನಿಷ್ಠ ೧೦ ಲಕ್ಷ ಟನ್‌ಗಳಷ್ಟು ಕಬ್ಬನ್ನು ಅರೆದು ಉತ್ತಮ ಗುಣಮಟ್ಟದ ಸಕ್ಕರೆಯನ್ನು ಉತ್ಪಾದಿಸುತ್ತಿರುವ ಅದು ಕಬ್ಬಿನ ಸಿಪ್ಪೆಯಿಂದ ೨೮ ಮೆಗಾವ್ಯಾಟ್‌ಗಳಷ್ಟು ವಿದ್ಯುತ್‌ನ್ನೂ ಪಡೆಯುತ್ತಿದ್ದು. ಅದರ ಸಿಂಹಪಾಲನ್ನು ರಾಜ್ಯಕ್ಕೆ ಒದಗಿಸುತ್ತಿದೆ. ತಾಲ್ಲೂಕಿನ ಕೆಂಪವಾಡದಲ್ಲಿ ಅಥಣಿ ಫಾರ್ಮರ್ಸ್ ಸಕ್ಕರೆ ಕಾರ್ಖಾನೆ ಮತ್ತು ಅಥಣಿಯ ಬಳಿ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯೂ ಇತ್ತೀಚೆಗೆ ಕಾರ್ಯಾರಂಭ ಮಾಡಿರುವುದು ಸಹ ಈ ಭಾಗದ ಆರ್ಥಿಕ ಉನ್ನತಿಯ ದೃಷ್ಟಿಯಿಂದ ಆಶಾದಾಯಕವೆನಿಸಿದೆ. ಕೇಂದ್ರ ಸರಕಾರದ ರಾಜಕೀಯ ಸಂಕಲ್ಪದಿಂದ ಅಥಣಿಯ ಮೂಲಕ ಶೇಡಬಾಳ-ಬಿಜಾಪುರ ರೈಲು ಮಾರ್ಗವು ತ್ವರಿತವಾಗಿ ಪೂರ್ಣಗೊಳ್ಳುವುದು ಸಹ ಈ ದಿಶೆಯಲ್ಲಿ ಅತ್ಯವಶ್ಯವೆನಿಸಿದೆ.

ಧರ್ಮದ ಹೆಸರಿನಲ್ಲಿ ಬಡ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಯ ಕೂಪಕ್ಕೆ ತಳ್ಳುವ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಅಥಣಿಯ ವಿಮೋಚನಾ ಸಂಸ್ಥೆಯ ಸುದೀರ್ಘ ಸೇವೆಯು ಫಲಪ್ರದವಾಗಿರುವುದು ರಾಷ್ಟ್ರಾದ್ಯಂತ ಮಾತ್ರವಲ್ಲದೆ ಅಂತರ್‌ರಾಷ್ಟ್ರೀಯ ಗಮನವನ್ನೂ ಸೆಳೆದಿದೆ. ಆದರೆ ಆರ್ಥಿಕ ಮೂಲದ ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಾಗೂ ಸಾಮಾಜಿಕ ಸಂಘಸಂಸ್ಥೆಗಳು ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ.

ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಗಡಿಪ್ರದೇಶವಾಗಿರುವ ಅಥಣಿ ತಾಲ್ಲೂಕಿನಲ್ಲಿ ಶಿಕ್ಷಣದ ಪ್ರಸಾರವೂ ಸಹ ದಿಕ್ಕು-ದೆಸೆಯಿಲ್ಲದೆ ನಾಡು-ನುಡಿಯ ಹಿತದೃಷ್ಟಿಯಿಂದ ಪ್ರೇರಕವಾಗಿಲ್ಲವೆಂದೇ ಹೇಳಬೇಕಾಗಿದೆ. ಅದರಲ್ಲಿಯೂ ಗ್ರಾಮೀಣ ಪ್ರದೇಶಗಳ ಕನ್ನಡ ಶಾಲೆಗಳ ದುಃಸ್ಥಿತಿಯ ನಿವಾರಣೆಗಾಗಿ ಪ್ರಾಮಾಣಿಕ ಕಾಳಜಿಯು ವ್ಯಕ್ತವಾಗದಿರುವುದು ಆತಂಕಕಾರಿಯಾಗಿದೆ. ವಿಪರ್ಯಾಸವೆಂದರೆ ರಾಜ್ಯ ಸರಕಾರವು ಮರಾಠಿ ಶಾಲೆಗಳಿಗೆ ನೀಡುತ್ತಿರುವ ಗಮನವನ್ನು ಕನ್ನಡ ಶಾಲೆಗಳಲ್ಲಿನ ಶಿಕ್ಷಕರ ಕೊರತೆಯಂತಹ ಸಮಸ್ಯೆಗಳ ಪರಿಹಾರಕ್ಕೆ ನೀಡುತ್ತಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದಂತಹ ಸಂಸ್ಥೆಗಳು ಈ ಗಡಿ ಭಾಗದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಮತ್ತು ಪೋಷಿಸಲು ಹೆಚ್ಚಿನ ಗಮನವನ್ನು ಹರಿಸಬೇಕಾಗಿದೆ.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನ ಹಿರಿಮೆಯನ್ನು ಮೆರೆದಿರುವ ಮೂಲಕ ಈ ಹಿಂದೆ ವರಕವಿ ದಿ. ದ. ರಾ. ಬೇಂದ್ರೆ ಅವರಿಂದ ' ಅಥೆನ್ಸ್' ಎಂಬ ಪ್ರಶಂಸೆಗೆ ಪಾತ್ರವಾಗಿರುವ ಅಥಣಿ ತಾಲೂಕು ತನ್ನ ಗತವೈಭವವನ್ನು ಮತ್ತೆ ಪಡೆದುಕೊಳ್ಳುವಂತೆ ನಮ್ಮ ಅಧಿಕಾರಾರೂಢರು. ರಾಜಕೀಯ ಮತ್ತು ಸಾಮಾಜಿಕ ಮುಖಂಡರು, ಮಠಾಧೀಶರು ಹಾಗೂ ಸ್ಥಳೀಯ ಜನತೆಯು ತಮ್ಮ ಅಮೂಲ್ಯ ಕೊಡುಗೆಯನ್ನು ನೀಡುವರೆಂದು ಹಾರೈಸೋಣ.

■■

ಬಿ. ಎಂ ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಚಿಂತನ

ಮಠಾಧಿಪತಿಗಳು : ಸಮಾಜ ಸೇವೆ

- **ಶ್ರೀ ಸಿದ್ಧರಾಮ ಸ್ವಾಮಿಗಳು**, ಬೆಳಗಾವಿ

ಮಠ ಮತ್ತು ಆಶ್ರಮಗಳ ಇತಿಹಾಸ ಇಂದು ನಿನ್ನೆಯದಲ್ಲ. ಪ್ರಾಚೀನ ಕಾಲದಿಂದಲೂ ವ್ಯಕ್ತಿ ಮತ್ತು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಇವು ಶ್ರಮಿಸುತ್ತ ಬಂದಿರುವುದನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ಮುಮುಕ್ಷುಗಳಿಗೆ ಲೋಕಾತೀತವಾದ ಬ್ರಹ್ಮಜ್ಞಾನವನ್ನು ಹಾಗೂ ಅದಕ್ಕೆ ಪೂರಕವಾದ ಶಿಕ್ಷಣ ಕೊಡುತ್ತಿದ್ದ ಆಶ್ರಮಗಳು ಕಾಲಾಂತರದಲ್ಲಿ ಆತ್ಮಕಲ್ಯಾಣ ಹಾಗೂ ಸಮಾಜ ಕಲ್ಯಾಣಗಳೆರಡನ್ನೂ ಸಾಧಿಸಲು ಮಠಗಳಾಗಿ ಗ್ರಾಮಪಟ್ಟಣಗಳ ಮಧ್ಯದಲ್ಲಿ ವಿಕಸಿತಗೊಂಡವು. ಅನಂತರ ಹನ್ನೆರಡನೆಯ ಶತಮಾನದ ಶರಣರ ಸಾಮಾಜಿಕ ಕ್ರಾಂತಿಯ ಫಲವಾಗಿ ಹೊಸ ಆಶಯಗಳನ್ನು ಹೊತ್ತ ನೂರಾರು ಮಠಪೀಠಗಳು ಸ್ಥಾಪನೆಗೊಂಡವು. ಆ ಕಾಲದಲ್ಲಿ ಪ್ರಚಲಿತವಿದ್ದ ಅನೇಕ ಶೈವಮಠಗಳು ವೀರಶೈವ ಮಠಗಳಾಗಿ ಪರಿವರ್ತನೆಗೊಂಡವು. ಅದುವರೆಗೆ ಕೇವಲ ಧಾರ್ಮಿಕ ಶಿಕ್ಷಣಕ್ಕೆ ಸೀಮಿತಗೊಂಡಿದ್ದ ಮಠಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತೃತಗೊಳಿಸಿ ಸಾಮಾಜಿಕ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದವು. ಪ್ರಗತಿಪರ ವಿಚಾರ ಹಾಗೂ ಪ್ರಜಾತಾಂತ್ರಿಕ ಮೌಲ್ಯಗಳಿಗೆ ಸ್ಪಂದಿಸುತ್ತಿರುವ ಇಂದಿನ ಮಠಗಳಿಗೆ ಬಸವಣ್ಣನ ' ಅನುಭವ ಮಂಟಪವೇ ' ಮೂಲ ಪ್ರೇರಣೆ ಎಂದರೆ ಅತಿಶಯೋಕ್ತಿಯಲ್ಲ.

ಹದಿನೈದು ಮತ್ತು ಹದಿನಾರನೆಯ ಶತಮಾನದಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳು ತಮ್ಮ ನೂರಾರು ಜನ ಶಿಷ್ಯರೊಡಗೂಡಿ ನಾಡಿನುದ್ದಗಲಕ್ಕೂ ಸುತ್ತಾಡಿ ಸಾವಿರಾರು ಮಠಗಳನ್ನು ಸ್ಥಾಪಿಸಿದರು. ಆ ಕಾಲದ ಮಠಾಧಿಪತಿಗಳೆಲ್ಲರೂ ತಪೋನಿಷ್ಠರಾಗಿ, ಸಾಹಿತ್ಯ ಸಂಸ್ಕೃತಿಯ ಸಂವರ್ಧಕರಾಗಿ ಜ್ಞಾನಜ್ಯೋತಿಯನ್ನು ಬೆಳಗಿದ್ದಾರೆ. ವಚನ ಸಾಹಿತ್ಯವನ್ನು ಸಂಗ್ರಹಿಸಿ, ಸಂಸ್ಕರಿಸಿ, ಸಂಪಾದಿಸಿ ಮನೆಮನೆಗೆ ತಲುಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮುಂದೊದಗಿದ ರಾಜಕೀಯ ಸ್ಥಿತ್ಯಂತರಗಳಿಂದಾಗಿ ಮಠ ಹಾಗೂ ಮಠಾಧಿಪತಿಗಳಲ್ಲಿ ಜಡತೆ ಕಾಣಿಸಿಕೊಂಡು ಸಮಾಜದ ಅಭಿವೃದ್ಧಿ ಕುಂಠಿತವಾಯಿತು. ವೈದಿಕ ಧರ್ಮ ಹಾಗೂ ಪುರೋಹಿತಶಾಹಿ ಪ್ರವೃತ್ತಿಗಳು ಸಮಾಜದ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದವು. ಅಂಧಶ್ರದ್ಧೆ, ಅಜ್ಞಾನ ಕಾರಣವಾಗಿ ಸಮಾಜ ನೂರಾರು ಪಂಗಡ, ಒಳಪಂಗಡಗಳಾಗಿ ಒಡೆದು

ಹೋಯಿತು. ಮೇಲು-ಕೀಳು, ಉಚ್ಚ-ನೀಚಗಳ ಭಾವನೆ ತಲೆದೋರಿ ಸಮಾಜ ಹೀನ ಸ್ಥಿತಿಗೆ ತಲುಪಿತು. ಮಠ-ಮಠಾಧಿಪತಿಗಳು ತಮ್ಮ ಕರ್ತವ್ಯವನ್ನೇ ಮರೆತು ಅರ್ಥಹೀನ ಆಚರಣೆಗಳಿಂದ ಸಮಾಜದ ಹಾಗು ಧರ್ಮದ ಅವನತಿಗೆ ಕಾರಣರಾಗಿದ್ದ ಸಮಯದಲ್ಲಿಯೇ ಮತ್ತೆ ಅನೇಕ ಜನ ತಪೋನಿಷ್ಠ ಶಿವಯೋಗಿ ಪುಂಗವರು ಈ ನಾಡಿನಲ್ಲಿ ಹತ್ತೊಂಭತ್ತನೇ ಶತಮಾನದ ಉತ್ತರಾರ್ಧದಲ್ಲಿ ಜ್ಞಾನಸೂರ್ಯರಾಗಿ ಉದಿಸಿ ಬಂದರು. ಅಥಣಿಯ ಮುರುಘೇಂದ್ರ ಶಿವಯೋಗಿಗಳು, ಇಲಕಲ್ಲಿನ ವಿಜಯ ಮಹಾಂತ ಶಿವಯೋಗಿಗಳು, ಘನಮಠದಾರ್ಯರು, ಹಾವೇರಿಯ ಶಿವಬಸವ ಸ್ವಾಮಿಗಳು, ಹಾನಗಲ್ಲ ಕುಮಾರ ಸ್ವಾಮಿಗಳು, ಬೀಳೂರ ಗುರುಬಸವ ಸ್ವಾಮಿಗಳೇ ಮೊದಲಾದವರು ತಮ್ಮ ಶಿವಯೋಗ ಸಿದ್ಧಿಯಿಂದ ಸಮಾಜವನ್ನು ಬೆಳಗಿದರು. ಇವರೆಲ್ಲರ ಸುಳಿವು ವಸಂತದ ಗಾಳಿಯಂತೆ ಜಡ ಸಜಮಾಜದಲ್ಲಿ ಚೇತನವನ್ನು ತುಂಬಿತು. ಬಸವಾದಿ ಶರಣರು ಕಟ್ಟಬಯಸಿದ ಸುಂದರ ಸಮಾಜದ ನಿರ್ಮಾಣಕಾರ್ಯ ಚಳವಳಿಯ ರೂಪದಲ್ಲಿ ಭರದಿಂದ ಸಾಗಿತು. ಇಂಥ ಅಪೂರ್ವ ಚಳವಳಿಯ ನೇತೃತ್ವವನ್ನು ವಹಿಸಿದವರೇ ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳು. ಅವರು ಮಠ-ಮಠಾಧಿಪತಿಗಳಿಗೆ ಹೊಸ ಅರ್ಥವಂತಿಕೆಯನ್ನು ತಂದುಕೊಟ್ಟರು. ಮಠಗಳು ಸಮಾಜದ ಸೇವಾಕೇಂಧ್ರಗಳು, ಮಠಾಧಿಪತಿಗಳು ಸಮಾಜದ ನಿಷ್ಕಾಮವಂತ ಸಮಾಜ ಸೇವಕರು, ಮಾನವೀಯ ಅನುಕಂಪ, ಪರಿಶುದ್ಧ ಜೀವನ ಶೈಲಿ ಹಾಗೂ ಸೇವಾ ಮನೋಭಾವಗಳನ್ನು ಅಳವಡಿಸಿಕೊಂಡು ನಿರಂತರ ಸಮಾಜಸೇವೆ ಮಾಡುವುದೇ ಮಠಾಧಿಪತಿಗಳ ಕರ್ತವ್ಯವೆಂದು ಪ್ರತಿಪಾದಿಸಿದರು. ಈ ದಿಶೆಯಲ್ಲಿಯೇ ಅನೇಕ ಮಠಾಧಿಪತಿಗಳನ್ನು ಸಮಾಜಸೇವೆಗೆ ದೀಕ್ಷಾಬದ್ಧಗೊಳಿಸಿದರು. ಮಠಾಧಿಪತಿಗಳು ಜನಹಿತಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜಸೇವೆ ಮಾಡುವಂತಹ ಅನುಕೂಲಕರ ವಾತಾವರಣ ನಿರ್ಮಿಸಿದರು. ಮಠಾಧಿಪತಿಗಳಿಗೆ ಬೇರೆ ಯಾವ ವ್ರತ ನಿಯಮಗಳೂ ಇಲ್ಲ; ಸಮಾಜ ಸೇವೆಯೊಂದೇ ಅವರ ವ್ರತ ಎಂದು ಘೋಷಿಸಿದರು. ಮಠಾಧಿಪತಿಗಳು ಸರಳ ಸಾದಾ ಜೀವನಶೈಲಿಯನ್ನು ಹಾಗೂ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವೆಂದು ಬಗೆದರು. ಹಾಗೆಯೇ ಮಠಾಧಿಪತಿಗಳಿಗೆ ನೈತಿಕ ಮತ್ತು ಧಾರ್ಮಿಕ ಶಿಕ್ಷಣ ನೀಡಲು ' ಶಿವಯೋಗ ಮಂದಿರ ' ಎಂಬ ತರಬೇತಿ ಸಂಸ್ಥೆಯನ್ನೇ ಅವರು ಪ್ರಾರಂಭಿಸಿದರು. ಜಡ ಸಮಾಜಕ್ಕೆ ಚೇತನ ತುಂಬಿದ ಕುಮಾರಸ್ವಾಮಿಗಳು ನಿಜ ಜಂಗಮರಾಗಿ ಮಠಾಧಿಪತಿಗಳೆಲ್ಲರಿಗೂ ಆದರ್ಶಪ್ರಾಯರೆನಿಸಿದರು.

ಇಂದು ಉಚ್ಚ ಶಿಕ್ಷಣ ಹಾಗೂ ಉನ್ನತ ಆದರ್ಶಗಳನ್ನು ಮೈಗೂಡಿಸಿಕೊಂಡ ಅನೇಕ ಮಠಾಧಿಪತಿಗಳು ಬಡವ ಬಲ್ಲಿದರೆನ್ನದೆ ಸಮಾಜದಲ್ಲಿ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನು ಗಮನಿಸಿದರೆ ಮಠಗಳ ಕನಸಿನ ಕಲ್ಪನೆ ಸಾಕಾರಗೊಂಡಿದೆ ಎನಿಸುತ್ತದೆ. ಧರ್ಮ ಪ್ರಸಾರದೊಂದಿಗೆ ಶಿಕ್ಷಣ-ಸಾಹಿತ್ಯ ಪ್ರಸಾರ, ನ್ಯಾಯ ಪರಿಪಾಲನೆ, ಪರಿಸರ ಸಂರಕ್ಷಣೆ, ಕಲಾಪೋಷಣೆ ಹಾಗೂ ಸಂಸ್ಕೃತಿ ಸಂವರ್ಧನೆಯಂತಹ

ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಮಹತ್ವಪೂರ್ಣವಾದುದೆಂದರಿತು ಶಾಲೆ ಕಾಲೇಜುಗಳನ್ನು ಅದಕ್ಕೆ ಪೂರಕವಾಗಿ ಪ್ರಸಾದ ನಿಲಯಗಳನ್ನು ಪ್ರಾರಂಭಿಸಿದ್ದಾರೆ. ಜ್ಞಾನ ದಾಸೋಹ ಅನ್ನದಾಸೋಹಗಳು ಜೊತೆ ಜೊತೆಯಾಗಿ ನಡೆದಿರುವುದು ವೀರಶೈವ ಮಠಗಳ ವೈಶಿಷ್ಟ್ಯ. ಸಮಾಜದ ನಿರುದ್ಯೋಗ ನಿವಾರಣೆಗಾಗಿ ಮಠಾಧಿಪತಿಗಳು ವೃತ್ತಿಪರ ಕಾಲೇಜುಗಳ ಮೂಲಕ ಶ್ರಮಿಸುತ್ತಿದ್ದಾರೆ. ಸುಖಮಯ ಹಾಗೂ ಸ್ವಯಂಪೂರ್ಣ ಸಮಾಜ ನಿರ್ಮಾಣಕ್ಕಾಗಿ ಕಾಯಕ ವಿದ್ಯಾಲಯ ಹಾಗೂ ವೃತ್ತಿಪರ ಕಾಲೇಜುಗಳ ಪಾತ್ರ ಪ್ರಧಾನವಾದುದು. ಸಿರಿಗೆರೆಯ ತರಳಬಾಳು ಬೃಹನ್ಮಠ, ಸುತ್ತೂರು ವೀರಸಿಂಹಾಸನಮಠ, ಸಿದ್ಧಗಂಗಾಮಠ, ನಿಡಸೋಸಿಯ ಸಿದ್ಧಸಂಸ್ಥಾನಮಠ, ಬೆಂಗಳೂರಿನ ಬೇಲಿಮಠ ಹಾಗೂ ಗದುಗಿನ ತೋಂಟದಾರ್ಯ ಮಠಗಳನ್ನು ಈ ದಿಶೆಯಲ್ಲಿ ಹೆಸರಿಸಬಹುದಾಗಿದೆ. ಭಾಲ್ಕಿಯ ಹಿರೇಮಠ, ಮುರುಘಾಮಠ, ಮೂರುಸಾವಿರಮಠ, ಬೆಳಗಾವಿ ನಾಗನೂರು ರುದ್ರಾಕ್ಷಿಮಠ, ಸಿದ್ಧಗಂಗಾಮಠಗಳಲ್ಲಿ ಪ್ರತಿದಿನ ಏಳುಸಾವಿರ ವಿದ್ಯಾರ್ಥಿಗಳಿಗೆ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಿರುವುದೊಂದು ಅದ್ಭುತ ಪವಾಡವೇ ಸರಿ. ಸಿದ್ಧಗಂಗೆಯ ಡಾ. ಶಿವಕುಮಾರ ಸ್ವಾಮಿಗಳು ಸಾಕ್ಷಾತ್ ದೇವಮಾನವರೆನಿಸಿ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಯ ಮುಂಚೂಣಿಯಲ್ಲಿದ್ದಾರೆ. ಗೌರೀಶಂಕರ ಶಿಖರದಂತೆ ವಿರಾಜಮಾನರಾಗಿದ್ದಾರೆ. ಮೇಲೆ ಉಲ್ಲೇಖಿಸಿದ ಮಠಗಳಲ್ಲದೆ ಕರ್ನಾಟಕದ ಇನ್ನೂ ಹಲವಾರು ವೀರಶೈವ ಮಠಗಳು ಪ್ರಸಾದ ನಿಲಯ, ಶಾಲೆ ಕಾಲೇಜುಗಳನ್ನು ನಡೆಸುತ್ತ ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತಿವೆ. ಒಟ್ಟಾರೆ ಹಿಂದಿನ ಹಾಗೂ ಇಂದಿನ ವೀರಶೈವ ಮಠಾಧಿಪತಿಗಳು ಸಮಾಜ ಸೇವೆ ಹಾಗೂ ಆದರ್ಶ ಸಮಾಜ ನಿರ್ಮಾಣಕ್ಕಾಗಿ ಶೈಕ್ಷಣಿಕ ಕ್ಷೇತ್ರವನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನಗಳಿಂದ ಸಮಾಜದಲ್ಲಿ ಜಾಗೃತಿಯುಂಟಾಗಿ ಅನೇಕ ಶೈಕ್ಷಣಿಕ ಸಂಸ್ಥೆಗಳು ಕಾರ್ಯಾರಂಭ ಮಾಡಿದವು. ಇವುಗಳಲ್ಲಿ ಕೆ.ಎಲ್.ಇ. ಸಂಸ್ಥೆ ಬೆಳಗಾವಿ, ಬಿ.ಎಲ್.ಡಿ.ಇ. ಸಂಸ್ಥೆ ವಿಜಾಪುರ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ ಇವು ಮುಖ್ಯವಾದವುಗಳು. ಅಖಿಲ ಭಾರತ ವೀರಶೈವ ಮಹಾಸಭೆಯ ಜನಕರಾದ ಹಾನಗಲ್ಲ ಕುಮಾರಸ್ವಾಮಿಗಳು ಕೂಡ ಮಠಾಧಿಪತಿಗಳಾಗಿರುವುದೊಂದು ವಿಶೇಷ.

ಅನೇಕ ಮಠಾಧಿಪತಿಗಳು ತಮ್ಮ ತಪಶ್ಶಕ್ತಿಯನ್ನೆಲ್ಲ ವಿದ್ಯಾಪ್ರಸಾರಕ್ಕಾಗಿ ವಿನಿಯೋಗಿಸುವುದಲ್ಲದೆ ಸಮಾಜದ ಶ್ರೀಮಂತ ದಾನಿಗಳನ್ನು ದಾನ ಕೊಡಲು ಪ್ರೇರೇಪಿಸಿದ್ದಾರೆ. ಲಿಂ. ಬಂಥನಾಳದ ಸಂಗನಬಸವ ಶಿವಯೋಗಿಗಳು ಅತ್ಯಂತ ಹಿಂದುಳಿದ ಬಿಜಾಪುರ ಜಿಲ್ಲೆಯ ಬರಡುಭೂಮಿಯಲ್ಲಿ ಶಿಕ್ಷಣದ ಹುಲುಸಾದ ಬೆಳೆಯನ್ನು ಬೆಳೆದ ಪುಣ್ಯಪುರುಷರು. ಜಿಲ್ಲೆಯಾದ್ಯಂತ ಅವಿರತವಾಗಿ ಸುತ್ತಾಡಿ, ತಮ್ಮ ಉದ್ಬೋಧಕ ಪ್ರವಚನಗಳ ಮೂಲಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಹಾಗೂ ಅವುಗಳ ಅಭಿವೃದ್ಧಿಗಾಗಿ ದಾನ ದತ್ತಿಗಳನ್ನು ಪಡೆದ ಕೀರ್ತಿ ಅವರದು. ಲಿಂ. ಹಾನಗಲ್ಲ ಕುಮಾರ ಸ್ವಾಮಿಗಳವರ ಪ್ರೇರಣೆಯ ಮೇರೆಗೆ ತ್ಯಾಗವೀರ ಶಿರಸಂಗಿ ಲಿಂಗರಾಜರು ತಮ್ಮ

ಸಂಸ್ಥಾನದ ಸರ್ವಸ್ವವನ್ನೂ ವಿದ್ಯಾಭಿವೃದ್ಧಿಗಾಗಿ ದಾನ ನೀಡಿರುವುದು ಇದಕ್ಕೊಂದು ನಿದರ್ಶನ. ಬಡತನ, ಅಜ್ಞಾನಗಳ ನಿವಾರಣೆಗಾಗಿ ಸ್ತ್ರೀ-ಪುರುಷ, ಜಾತಿ-ಮತ-ಪಂಥಗಳ ಭೇದವನ್ನು ಗಮನಿಸದೆ ಸರ್ವರಿಗೂ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿರುವುದು ವೀರಶೈವ ಮಠಾಧಿಪತಿಗಳ ಸಾಮಾಜಿಕ ಕಳಕಳಿಗೆ ಚಿರಂತನ ಸಾಕ್ಷಿಯಾಗಿದೆ.

ಹಸಿದವರಿಗೆ ಅನ್ನ, ದುಃಖಿತರಿಗೆ ಅಭಯ, ಬಡವರಿಗೆ ಸಹಾಯ ನೀಡುತ್ತಿರುವ ವೀರಶೈವ ಮಠಾಧಿಪತಿಗಳು ಸಾಮಾಜಿಕ ಬದುಕಿನ ನೆಮ್ಮದಿಗೆ ಕಾರಣರಾಗಿದ್ದಾರೆ. ಅವರು ವೈರಾಗ್ಯಭಾವವನ್ನು ಹೊಂದಿಯೂ ಲೌಕಿಕವನ್ನು ತ್ಯಜಿಸಿದವರಲ್ಲ. ಲಿಂಗಪೂಜಾ ನಿರತರಾಗಿಯೂ ಸಮಾಜ ಸೇವೆಯನ್ನು ಕೈಬಿಟ್ಟವರಲ್ಲ. ವ್ಯಕ್ತಿಯ ಲೌಕಿಕ ಹಾಗೂ ಪಾರಲೌಕಿಕ ಬದುಕಿನ ಉನ್ನತಿಗಾಗಿ ನಿರಂತರ ಕ್ರಿಯಾಶೀಲರಾಗಿರುವುದೇ ಅವರ ಹಿರಿಮೆ. ಕೆಲವರಂತೂ

ಅಯಂ ನಿಜಃ ಪರೋವೇತಿ ಗಣನಾ ಲಘುಚೇತಸಾಂ ।
ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ ॥

ಎಂಬಂತೆ ಎಲ್ಲರನ್ನೂ ತನ್ನವರೆಂದು ಭಾವಿಸಿದ ವಿಶ್ವಕುಟುಂಬಿಗಳಾಗಿದ್ದಾರೆ. ಮಠಾಧಿಪತಿಗಳ ಈ ಉದಾತ್ತ ಆದರ್ಶ, ವಿಶಾಲ ಮನೋಭಾವ ಇತರರಿಗೆ ಮಾದರಿ ಎನಿಸಿದೆ.

ವೀರಶೈವ ಮಠಾಧಿಪತಿಗಳಲ್ಲಿ ಕೆಲವರು ವರದಕ್ಷಿಣೆ, ದೇವದಾಸಿ ಪದ್ಧತಿ, ಅಸ್ಪೃಶ್ಯತೆಯಂತಹ ಸಾಮಾಜಿಕ ಅನಿಷ್ಟಗಳನ್ನು ತೊಡೆದು ಹಾಕಿ ಸಮಾಜವನ್ನು ದಿಟ್ಟತನದಿಂದ ಖಂಡಿಸಿ ಧರ್ಮದ ಉಜ್ವಲ ಆದರ್ಶದ ಕಡೆಗೆ ಗಮನ ಸೆಳೆದಿದ್ದಾರೆ. ನೈತಿಕ ಆಚರಣೆಗಳು ವ್ಯಕ್ತಿಯ ಬದುಕಿಗೆ ಅವಶ್ಯವೆಂದರಿತು ಸದ್ವಿನಯ ಸದಾಚಾರಗಳನ್ನು ಬೋಧಿಸಿ ಸನ್ಮಾರ್ಗ ತೋರಿದ್ದಾರೆ. ಅನೇಕರ ದುರ್ವ್ಯಸನ, ದುರಾಚಾರ, ದುಶ್ಚಟಗಳನ್ನು ಬಿಡಿಸಿ ಅವರ ಹೃದಯ ಪರಿವರ್ತನೆಗೆ ಕಾರಣವಾಗಿದ್ದಾರೆ. '' ಮಹಾಂತ ಜೋಳಿಗೆ ''ಯ ಮೂಲಕ ಈ ರಚನಾತ್ಮಕ ಕಾರ್ಯ ಕೈಕೊಂಡಿರುವ ಇಳಕಲ್ಲಿನ ಪೂಜ್ಯ ಮಹಾಂತಪ್ಪಗಳು ಇದಕ್ಕೊಂದು ಉಜ್ವಲ ಉದಾಹರಣೆ. ಧಾರ್ಮಿಕ ಸಂಪ್ರದಾಯದ ಕಟ್ಟಳೆಗಳನ್ನು ಕತ್ತರಿಸಿ ಜನಸಾಮಾನ್ಯರನ್ನು ಉದ್ಧರಿಸಿದ ಪವಿತ್ರ ಶಕ್ತಿ ಮಹಾಂತಪ್ಪಗಳು. ಧರ್ಮಗುರು ಬಸವಣ್ಣನವರ ಆದರ್ಶಕ್ಕನುಗುಣವಾಗಿ ಸಮಾಜದ ಕೆಳವರ್ಗದ ಬಂಧುಗಳಿಗೂ ಸಂಸ್ಕಾರ ನೀಡಿ ಮಠಾಧಿಪತಿಗಳನ್ನಾಗಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಈ ದಿಶೆಯಲ್ಲಿ ಕಾರ್ಯಮಾಡುತ್ತಿರುವ ಗದಗ ಹಾಗೂ ಚಿತ್ರದುರ್ಗದ ಶ್ರೀಗಳೂ ಪ್ರಶಂಸನೀಯರೆನಿಸಿದ್ದಾರೆ. ಅನೇಕ ದಲಿತರಿಗೆ ಲಿಂಗದೀಕ್ಷೆ ನೀಡಿ ಅವರನ್ನು ಸಮಾಜದ ಮುಖ್ಯಪ್ರವಾಹಕ್ಕೆ ಸೇರಿಸಿದ ಭಾಲ್ಕಿಯ ಲಿಂ. ಚನ್ನಬಸವ ಪಟ್ಟಾಧ್ಯಕ್ಷರೂ ಈ ಸಂದರ್ಭದಲ್ಲಿ ನಮಗೆ ಸ್ಮರಣೀಯರೆನಿಸುತ್ತಾರೆ. ಜಾತಿಮತ ಪಂಥಗಳ ಭೇದಭಾವವನ್ನು ಅಳಿಸಿ ಸಮಾನತೆಯ ತತ್ವವನ್ನು ಸಮಾಜದಲ್ಲಿ ಅನುಷ್ಠಾನಗೊಳಿಸಿದ ಇವರೆಲ್ಲರೂ ಸಮಾಜದ ಅಭಿನಂದನೆಗೆ ಅರ್ಹರಾಗಿದ್ದಾರೆ. ಸಾವಳಗಿ ಶಿವಲಿಂಗೇಶ್ವರಮಠ, ಶಿರಹಟ್ಟಿಯ ಫಕೀರೇಶ್ವರ ಮಠ ಹಾಗೂ ಇನ್ನಿತರ ಅನೇಕ ಮಠಗಳ ಮಠಾಧೀಶರು

ವಿವಿಧ ಧರ್ಮ ಹಾಗೂ ಸಂಸ್ಕೃತಿಗಳಲ್ಲಿ ಸಮನ್ವಯ ಸಾಧಿಸಿ ಸಮನ್ವಯ ಸಂಸ್ಕೃತಿಯ ಹರಿಕಾರರೆನಿಸಿದ್ದಾರೆ. ಸಾರ್ವಜನಿಕ ಜೀವನದಲ್ಲಿ ತಾವು ಬಹುಮುಖ ಸಮಾಜದ ಪ್ರತಿನಿಧಿಗಳೆಂಬುದನ್ನು ತೋರ್ಪಡಿಸಿದ್ದಾರೆ.

ಸಮಾಜದಲ್ಲಿ ವಿಧವಾ ವಿವಾಹ, ಅಂತರ್ಜಾತೀಯ ವಿವಾಹಗಳನ್ನು ಜರುಗಿಸುವ ಮೂಲಕ ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳ ಪುನರುತ್ಥಾನಕ್ಕೆ ಕಾರಣರಾಗಿರುವ ಕೆಲವು ಮಠಾಧಿಪತಿಗಳು ನ್ಯಾಯ ಪರಿಪಾಲನೆಯಲ್ಲಿ ಹಾಗೂ ಪರಿಸರ ಪ್ರಜ್ಞೆ ಬೆಳೆಸುವಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಸಿರಿಗೆರೆಯ ಡಾ. ಶಿವಮೂರ್ತಿ ಶಿವಾಚಾರ್ಯರು ಇಂದಿಗೂ ಇಂತಹ ಪ್ರಗತಿಪರ ಕಾರ್ಯಗಳನ್ನು ತಮ್ಮ ಶ್ರೀಮಠದಲ್ಲಿ ನೆರವೇರಿಸುತ್ತಿದ್ದಾರೆ. ಸುತ್ತೂರಿನ ಶ್ರೀಗಳು, ಗದುಗಿನ ತೋಂಟದಾರ್ಯಮಠದ ಶ್ರೀಗಳು ಸಾಹಿತ್ಯ ಸಂಸ್ಕೃತಿಯ ಪ್ರಸಾರದಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ನಮ್ಮ ಉದಾತ್ತ ಸಂಸ್ಕೃತಿಯ ಸಂವಹನದ ಪ್ರಮುಖ ಮಾಧ್ಯಮವಾಗಿರುವ ಸಾಹಿತ್ಯದ ಪ್ರಸಾರ ಶ್ರೀಮಠಗಳಿಂದ ಅತ್ಯಂತ ವ್ಯಾಪಕವಾಗಿ ನಡೆದಿದೆ. ಇದೇ ಮಾದರಿಯಲ್ಲಿ ಇನ್ನಿತರ ಮಠಾಧಿಪತಿಗಳೂ ತಮ್ಮ ಇತಿಮಿತಿಯಲ್ಲಿ ಸಾಹಿತ್ಯ ಸೇವೆ, ಪರಿಸರ ಸಂರಕ್ಷಣೆ ಹಾಗೂ ಜ್ಞಾನ ವಿಜ್ಞಾನಗಳ ಪ್ರಸಾರಕ್ಕೆ ಮುಂದಾಗಿದ್ದಾರೆ.

ವೀರಶೈವ ಮಠಾಧಿಪತಿಗಳ ಹಾಗೂ ಸಮಾಜದ ಸಂಬಂಧ ಅನ್ಯೋನ್ಯವಾದುದು. ಒಂದು ರೀತಿಯಲ್ಲಿ ಅದು ನೀರು ಮತ್ತು ಮೀನುಗಳ ಸಂಬಂಧ. ಮೀನು ನೀರಿನಲ್ಲಿರುವ ಕಲ್ಮಶವನ್ನು ತೊಡೆದು ಅದನ್ನು ನಿರ್ಮಲಗೊಳಿಸುವಂತೆ ಮಠಾಧಿಪತಿಗಳು ಸಮಾಜದಲ್ಲಿರುವ ಅನೇಕ ಲೋಪದೋಷಗಳನ್ನು ತಿದ್ದಿ ತೀಡಿದ್ದಾರೆ. ಅದರ ಸಂರಕ್ಷಣೆಗೆ ಆಧಾರವಾದಂತೆ ಸಮಾಜವೂ ವೀರಶೈವ ಮಠಾಧಿಪತಿಗಳನ್ನು ಅತ್ಯಂತ ಆದರಿಂದ ಗೌರವಿಸಿ ಅವರಿಗೆ ಆಶ್ರಯ ಒದಗಿಸಿದೆ. ಹೀಗೆ ಮಠಾಧಿಪತಿ ಇಲ್ಲದ ಸಮಾಜವನ್ನು, ಸಮಾಜ ವಿಮುಖನಾದ ಮಠಾಧಿಪತಿಯನ್ನು ಕಲ್ಪಿಸುವುದೂ ಅಸಂಗತ; ಅಸಾಧ್ಯ.

ಒಟ್ಟಾರೆ ನೈತಿಕ, ಧಾರ್ಮಿಕ ಹಾಗೂ ಕಾಯಕ ದಾಸೋಹಗಳ ತಳಹದಿಯ ಮೇಲೆ ಸುಂದರ ಸಮಾಜವನ್ನು ಕಟ್ಟಬಯಸಿದ ಮಠಾಧಿಪತಿಗಳ ನೈತಿಕ ಹಾಗೂ ಧಾರ್ಮಿಕ ಶಿಕ್ಷಣದ ಪರಿಣಾಮವಾಗಿ ಸಮಾಜದಲ್ಲಿ ಜಾತ್ಯತೀತ ಮನೋಭಾವನೆ, ಸರಿಸಮಾನತೆ, ಸೌಹಾರ್ದತೆ, ಭಾವೈಕ್ಯ, ಸಹಕಾರ, ಸದಾಚಾರ, ತ್ಯಾಗಭಾವ ಹಾಗೂ ದೈವಭಕ್ತಿಗಳು ಬೆಳೆದು ಬಂದಿರುವಲ್ಲಿ ಎರಡು ಮಾತಿಲ್ಲ. "ಮಠವೆಂದರೆ ಕೇವಲ ಒಂದು ಭವ್ಯ ಕಟ್ಟಡವಲ್ಲ. ಅದು ಮಾನವ ಕುಲದ ನಂದಾದೀಪ-ಮಠಗಳಿಂದಲೇ ನಮ್ಮ ಭಾರತೀಯ ಸಂಸ್ಕೃತಿ ಉಳಿದಿದೆ, ಬೆಳೆದಿದೆ" ಎಂಬ ಡಾ. ರಾಜೇಂದ್ರ ಪ್ರಸಾದ ಅವರ ಮಾತನ್ನು ಸಾಕಾರಗೊಳಿಸಿದ ಕೀರ್ತಿ ವೀರಶೈವ ಮಠಾಧಿಪತಿಗಳಿಗೆ ಸಲ್ಲುತ್ತದೆ. ಈ ದಿಶೆಯಲ್ಲಿ ಇತರರಿಗೆ ಮಾದರಿಯಾಗಿರುವ ವೀರಶೈವ ಮಠಾಧಿಪತಿಗಳ ಸಮಾಜ ಸೇವೆ ಎಂದೆಂದಿಗೂ ಸ್ಮರಣೀಯ, ಹಾಗೆಯೇ ಪ್ರಶಂಸನೀಯ.

■■

ಮಠಾಧಿಪತಿಗಳು : ಕೃಷಿ ಸೇವೆ

● **ಶ್ರೀ ಮೃತ್ಯುಂಜಯ ಸ್ವಾಮಿಗಳು**, ಅವರಾದಿ

ಕಾಯಕವು ಮನುಷ್ಯನ ಬದುಕಿನಷ್ಟೆಯೇ ಬೆಲೆಯುಳ್ಳದ್ದು. ಕಾಯಕ ಬಿಟ್ಟು ಬದುಕಿಲ್ಲ, ಅಂಥ ಬದುಕಿಗೆ ಬೆಲೆಯೂ ಇಲ್ಲ. ಕಾಯಕರಹಿತವಾದ ಮನಸ್ಸು ದೆವ್ವಗಳ ದೇಗುಲ. ಆದ್ದರಿಂದಲೇ ವಿಶ್ವಗುರು ಬಸವಣ್ಣನವರು "ಕಾಯಕವೇ ಕೈಲಾಸ" ಎಂದಿರುವರು. ರಷ್ಯಾ ದೇಶದ ರೂವಾರಿ ಲೆನಿನ್ "ದುಡಿಯುವವನಿಗೆ ಮಾತ್ರ ಜೀವಿಸುವ ಹಕ್ಕು" ಎಂದು ಪ್ರತಿಪಾದಿಸಿದ್ದಾನೆ. ಉತ್ತಮ ಕಾಯಕದಿಂದ ಉತ್ತಮ ಜೀವನ ನಡೆಸಲು ಸಾಧ್ಯ. ಈ ಮಾಲಿಕೆಯಲ್ಲಿ ಕೃಷಿ ಕಾಯಕವೇ ಶ್ರೇಷ್ಠವಾದದ್ದೆಂದು ನಮ್ಮ ಹಿರಿಯರು ಪರಿಗಣಿಸಿದ್ದಾರೆ. ಈ ಸೇವೆಗೆ ಮಠಗಳೇ ಇಂದು ಪ್ರಯೋಗಾಲಯಗಳಾಗಬೇಕಾಗಿವೆ. ಮಠಾಧೀಶರೇ ಇದರ ಮೇಲ್ವಿಚಾರಕರಾದರೆ ತಪ್ಪಾಗಲಾರದು.

ಸೇವೆಯೆಂಬುದು ದೇವರಿಗೆ ಅತ್ಯಂತ ಪ್ರಿಯವಾದದ್ದು. ಸೇವಾ ಭಾವನೆಯನ್ನು ಹೊಂದುವುದರಿಂದ ವ್ಯಕ್ತಿಯ ಅಂತರಂಗ ಪರಿಶುದ್ಧಗೊಳ್ಳುವದು. ಇದರಿಂದ ಜಗತ್ತನ್ನೇ ಗೆಲ್ಲಬಹುದು. ಬುದ್ಧ, ಬಸವ, ಗಾಂಧಿ, ವಿವೇಕಾನಂದ, ಮದರ್ ಥೆರೇಸಾ ಇತ್ಯಾದಿ ವಿಭೂತಿ ಪುರುಷರು ಜನಸೇವೆಯಿಂದಲೇ ಜಗತ್ಪೂಜ್ಯರಾಗಿರುವುದು, ಅಲ್ಲದೆ ಶಾಂತಿಯನ್ನು ಈ ಲೋಕಕ್ಕೆ ನೀಡಿದ್ದು ಸತ್ಯ ಸಂಗತಿ. ಅಂತೆಯೇ ಸೇವೆಯೆಂಬ ಶಬ್ದದ ಶಕ್ತಿ ಅಗಾಧವಾದುದು.

ಸೇವಾ ಕಾರ್ಯದಲ್ಲಿ ತೊಡಗಿದವನು ಅದರಿಂದ ಯಾವುದೇ ಪ್ರತಿಫಲ ನಿರೀಕ್ಷಿಸಬಾರದು. ಆತನು ಅಹಂಕಾರಿಯಾಗಿರಬಾರದು, ರಾಗ-ದ್ವೇಷಗಳಿಂದ ಮತ್ತು ಜಾತಿ, ಮತ, ಪಂಥಗಳಿಂದ ಬಹು ದೂರನಾಗಿರಬೇಕು. ಇಂಥವನು ಮುಟ್ಟಿದ ಕಹಿ ಜೇನಾಗುವುದು. ಕಠೋರ ಮನಸ್ಸು ಕುಸುಮವಾಗುವುದು; ಇವನು ಹೋದಲ್ಲೆಲ್ಲಾ ಶಾಂತಿ-ಸಮೃದ್ಧಿ ನೆಲೆಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ಹಿಂದಿನ ಕಾಲದಲ್ಲಿ ಮಠಾಧೀಶರು ಕೇವಲ ಲಿಂಗಪೂಜಾನುಷ್ಠಾನದಲ್ಲಿ ಕಾಲ ಕಳೆದು ತೃಪ್ತಜೀವನ ನಡೆಸಿದ್ದರು. ಅವರ ಕಾರ್ಯವ್ಯಾಪ್ತಿ ಬಹು ಚಿಕ್ಕದಾಗಿತ್ತು. ಅಷ್ಟೇ ನಿರ್ಮಲವಾಗಿತ್ತು. ಕೆಲವು ಮಠಾಧಿಪತಿಗಳು ಕೃಷಿಯನ್ನು ಹವ್ಯಾಸವನ್ನಾಗಿ ಅಳವಡಿಸಿಕೊಂಡಿದ್ದರು. ಬಹಿರಂಗದ ಕೃಷಿಯು ಅಂತರಂಗದ ಶುದ್ಧತೆಯನ್ನು ತರುತ್ತದೆ ಎಂದು ನಂಬಿದ್ದರು. ಸರ್ಪಭೂಷಣ ಶಿವಯೋಗಿಗಳು ಶರೀರವನ್ನೇ ಹೊಲವೆಂದು ಭಾವಿಸಿ ಆಧ್ಯಾತ್ಮಿಕ ಕೃಷಿಯನ್ನು ಚೆನ್ನಾಗಿ ಮಾಡಿಕೊಂಡಿದ್ದರು ಎಂಬುದಕ್ಕೆ ಅವರ ಈ ಪದ್ಯವೇ ಸಾಕ್ಷಿ.

ಶರೀರವೆಂತೆಂಬುವ ಹೊಲವನೆ ಹಸನು ಮಾಡಿ,
ಪರತತ್ವ ಬೆಳೆಯನು ಬೆಳೆದುಣ್ಣಿರೋ,
ಶಮೆ-ದಮೆಯೆಂತೆಂಬುವ ಎರಡೆತ್ತುಗಳ ಹೂಡಿ,
ವಿಮಲ ಮಾನಸವೆಂಬ ನೇಗಿಲವನೆ ಹೂಡಿ,
ಮಮಕಾರವೆಂತೆಂಬ ಕರಿಕೆಯ ಕಳೆದು,
ಸಮತೆವೆಂಬ ಗೊಬ್ಬರವ ಚೆಲ್ಲಿ,
ಗುರುವರನುಪದೇಶವೆಂಬ ಬೀಜವ ಬಿತ್ತಿ,
ಅರುವೆಂಬ ಪೈರವನೆ ಬೆಳೆಸುತ
ದುರ್ಗುಣವೆಂಬ ಕಳೆಯನೆ ಕಿತ್ತು,
ಸ್ಥಿರಮುಕ್ತಿವೆಂತೆಂಬ ಧಾನ್ಯವ ಬೆಳೆದುಂಡು,
ಪರಮಾನಂದದೊಳ್ ದಣ್ಣನೆ ದಣಿದು,
ಗುರುಸಿದ್ಧನಡಿಗಳಿಗೆ ಎರಗುತ್ತ ಭವವೆಂಬ
ಬರವನು ನಿಮ್ಮ ಸೀಮೆಗೆ ಕಳುಹಿ

ಪಿ. ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

ಈ ಪದ್ಯವು ಮಠಾಧೀಶರುಗಳಿಗೆ ಮಾರ್ಗದರ್ಶಿಯಾಗಿದೆ. ಕೃಷಿ ಸೇವೆಯು ಸ್ವಾಮಿಗಳಿಗೆ ಅನಿವಾರ್ಯ ಮತ್ತು ಅವಶ್ಯ ಎಂದು ಸಾರುತ್ತದೆ. ಪಕ್ಕಾ ಒಕ್ಕಲಿಗನು ಮಾಡುವ ಕೃಷಿ ಸೇವೆಯೇ ಬೇರೆ. ಆತನು ತನ್ನ ಹೊಟ್ಟೆಪಾಡಿನ ಉದ್ದೇಶವೊಂದನ್ನೇ ಇಟ್ಟುಕೊಂಡು ತಾನು, ತನ್ನ ಹೆಂಡರು, ಮಕ್ಕಳು ಬದುಕಬೇಕೆಂಬ ಸೀಮಿತ ಭಾವ ಅವನಲ್ಲಿರಬಹುದು. ಅವನು ತನ್ನ ಹೊಲದಲ್ಲಿರುವ ಕಳೆಯನ್ನು (ಹೊಲಸು) ತೆಗೆಯಲು ಮಾತ್ರ ಪ್ರಯತ್ನಿಸುತ್ತಾನೆ. ಆದರೆ ತನ್ನ ಅಂತರಂಗದ ಶುದ್ಧತೆಗೆ ಗಮನ ಕೊಡಲಿಕ್ಕಿಲ್ಲ. ಆದರೆ ಮಠಾಧಿಪತಿಯಾದವನಿಗೆ ಬಾಹ್ಯ ಕೃಷಿ ಮಾಡುವದು ಒಂದು ನೆಪ. ಅದರಿಂದ ಮಠದ ದಾಸೋಹ ಮಾಡಬಹುದಷ್ಟೇ. ಆದರೆ ಮುಖ್ಯವಾಗಿ ಸ್ವಾಮಿತ್ವಕ್ಕೆ ಬೇಕಾಗುವಂಥ ಅಂತರಂಗದ ಶುದ್ಧತೆ ಕಾಪಾಡಿಕೊಂಡು ಸಮಾಜದಲ್ಲಿ ಆದರ್ಶ ವ್ಯಕ್ತಿಯಾಗಿ ರೂಪುಗೊಳ್ಳಲು ಅವನಿಗೆ ಬಾಹ್ಯ ಕೃಷಿಯು ಅನಿವಾರ್ಯ ಮತ್ತು ಅವಶ್ಯ. ಆ ದೃಷ್ಟಿಯಲ್ಲಿ ಕೃಷಿ ಸೇವೆಯೆಂಬುದನ್ನು ಮಠಾಧಿಪತಿಗಳು ಅಳವಡಿಸಿಕೊಂಡು ಆಚರಣೆಯಲ್ಲಿ ತರುವ ಪರ್ವಕಾಲ ಈಗ ಬಂದಿದೆ. ನಮ್ಮ ನಾಡಿನಲ್ಲಿ ಅಸಂಖ್ಯಾತ

ಮಠಗಳಿವೆ. ಅವುಗಳಿಗೆ ಅಧಿಪತಿಗಳೂ ಸಹ ಇದ್ದಾರೆ. ಅವರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಮ್ಮ ನಾಡಿನ ಸಮೃದ್ಧಿಗಾಗಿ ಕೈಲಾದ ಮಟ್ಟಿಗೆ ಶ್ರಮವಹಿಸುತ್ತಿರುವುದು ಶುಭ ಲಕ್ಷಣವೇ ಸರಿ.

ಪಟ್ಟಣವಾಸಿಗಳಾಗಿರುವ ಮಠಾಧಿಪತಿಗಳು ಕೆಲವರು ಶಾಲೆ-ಕಾಲೇಜುಗಳನ್ನು ತೆರೆದು ವಾಣಿಜ್ಯ ಸಂಕೀರ್ಣಗಳನ್ನು ಕಟ್ಟಿಸಿ, ಪ್ರಸಾದ ನಿಲಯಗಳನ್ನು ಬೆಳೆಸಿ, ಸಮಾಜ ಸೇವೆ ಮಾಡುವುದರ ಜೊತೆಗೆ ತಾವೂ ದೊಡ್ಡವರಾಗುತ್ತಿದ್ದಾರೆ. ಆದರೆ ಕೃಷಿಸೇವೆ ಮಾಡುವ ಧೈರ್ಯವನ್ನು ಬಹುತೇಕ ಯಾರೂ ಮಾಡಿರುವದಿಲ್ಲವೆಂಬುದು ನನ್ನ ಭಾವನೆ. ಯಾಕೆಂದರೆ ಕೃಷಿಕಾಯಕ ಬಲು ಕಷ್ಟ, ಲಾಭವಿಲ್ಲದ ದಂಧೆ. ಅದೊಂದು ಹಾಳು ಹಗೆಯಿದ್ದಂತೆ, ಎಷ್ಟು ದುಡಿದರೂ ಪ್ರತಿಫಲ ಶೂನ್ಯ. ವಂಶಪಾರಂಪರ್ಯವಾಗಿ ಒಕ್ಕಲುತನವನ್ನೇ ತಮ್ಮ ಮನೆತನದ ಮೂಲ ದಂಧೆಯನ್ನಾಗಿ ಮಾಡಿಕೊಂಡಿರುವ ರೈತರೇ ಇಂದು ನಿರ್ಗತಿಕರಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಮಠಾಧೀಶರು ಕೃಷಿ ಸೇವೆಗೆ ಕೈ ಹಾಕಿದರೆ, "ಜೇನು ಹುಟ್ಟೆಂದು ಭಾವಿಸಿ ಕಂಜುರಗಿ ಹುಟ್ಟಿಗೆ ಕೈ ಹಾಕಿದಂತಾಗುವದಿಲ್ಲವೇ ?" ಅದಕ್ಕಾಗಿಯೇ ಈ ದಿಶೆಯಲ್ಲಿ ಮಠಾಧಿಪತಿಗಳು ಕೃಷಿರಂಗವನ್ನು ಕಡೆಗಣಿಸಿರುವದು.

ಕೃಷಿ ಸೇವೆಯೆಂದರೆ ಹೊಲಕ್ಕೆ ಹೋಗಿ ರೆಂಟೆ, ಕುಂಟೆ ಹೊಡೆಯುವ ಇತ್ಯಾದಿ ಕಠಿಣ ಕೆಲಸದಲ್ಲಿ ತೊಡಗುವದೆಂದು ಭಾವಿಸಬಾರದು. ಇದೊಂದು ಹವ್ಯಾಸ, ಮನಸ್ಸಿಗೆ ನೆಮ್ಮದಿ ತರುವ ಕೆಲಸದ ಪರಿವರ್ತನೆ ಎಂದು ಭಾವಿಸಿದರೆ ಸಾಕು. ಸ್ವಾಮಿಗಳಾದವರಿಗೆ ಇವೆಲ್ಲ ಕಠಿಣ ಕಾರ್ಯಗಳು; ಒಗ್ಗಲಾರವು. ಅವರು ಮಾಡುವ ಕಾರ್ಯವಿದಲ್ಲ, ಕೇವಲ ಮಠಕ್ಕೆ ಬರುವ ಭಕ್ತರಿಗೆ ದರ್ಶನ-ಆಶೀರ್ವಾದ ನೀಡಿದರೆ ಸಾಕು; ಅದನ್ನು ಬಿಟ್ಟು ಹೊಲಕ್ಕೆ ಹೋಗಿ ಆಳು-ಕಾಳುಗಳನ್ನು ದುಡಿಸುವದು, ಮೇಲ್ವಿಚಾರಣೆ ಮಾಡುವದು, ಇದು ಕೀಳು ಕೆಲಸವೆಂದು ಭಾವಿಸುವ ಭಕ್ತರಿದ್ದಾರೆ, ಸ್ವಾಮಿಗಳೂ ಇದ್ದಾರೆ. ಪ್ರಾಮಾಣಿಕ ಕೃಷಿ ಸೇವೆಯೇ ವ್ಯಕ್ತಿಯನ್ನು ಎತ್ತರದ ನಿಲುವಿಗೆ ಕೊಂಡೊಯ್ದು, ಮನಃಶಾಂತಿಯನ್ನು ನೀಡಿ ಅಂತರಂಗವನ್ನು ಶುದ್ಧಗೊಳಿಸುತ್ತದೆ. ಶಾರೀರಿಕವಾಗಿ, ಮಾನಸಿಕವಾಗಿ ವ್ಯಕ್ತಿಯು ನವಚೈತನ್ಯವನ್ನು ಪಡೆಯುತ್ತಾನೆ. ಸಂತ ವಿನೋಬಾ ಭಾವೆ ಹಾಗೂ ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ ಇವರುಗಳು ತಮ್ಮ ದಿನಚರಿಯಲ್ಲಿ ಕೃಷಿಸೇವೆಗೆಂದೇ ಒಂದೆರಡು ಗಂಟೆಯಷ್ಟು ಸಮಯವನ್ನು ಮೀಸಲಿಡುತ್ತಿದ್ದರೆಂಬುದು ಅವರ ಚರಿತ್ರೆಯಿಂದ ನಮಗೆ ತಿಳಿದು ಬರುತ್ತದೆ.

"ಕಾಯಕ ಮತ್ತು ದಾಸೋಹ" ವೀರಶೈವ ಧರ್ಮದ ಮೂಲಮಂತ್ರ ಎಂದು ಬಹಿರಂಗ ಭಾಷಣಗಳಲ್ಲಿ ಜನರಿಗೆ ಸ್ಫೂರ್ತಿ ತುಂಬುವ ಕಾರ್ಯವನ್ನು ಮಠಾಧಿಪತಿಗಳಾದ ನಾವು ಬಹು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡುತ್ತೇವೆ. ಇದರಲ್ಲಿ ತಪ್ಪಿಲ್ಲ. ಆದರೆ ನಮ್ಮ ಮಠದ ಆವರಣದಲ್ಲಿರುವ ಪತ್ರಿ-ಪುಷ್ಪಾದಿಗಳ ಗಿಡಕ್ಕಾದರೂ ನೀರುಣಿಸುವ ಸೇವೆಯನ್ನು ಸ್ವಾಮಿಗಳಾದ ನಾವು ಎಷ್ಟು ಜನ

ಮಾಡುತ್ತೇವೆ ? ಶರೀರವಿದ್ದವರೆಲ್ಲರೂ ಕಾಯಕ ಮಾಡುವದು ಅನಿವಾರ್ಯ, ಇದು ಬಸವ ತತ್ವ. ಶರೀರದಂಡನೆಯಿಂದ (ಕಾಯಕದಿಂದ) ಬರುವ ಪ್ರತಿಫಲ (ಹಣ)ವೇ ದಾಸೋಹಕ್ಕೆ ಯೋಗ್ಯವಾದದ್ದು. ಅದಕ್ಕೇ ವಿಶ್ವಗುರು ಬಸವಣ್ಣನವರು "ಕೃಷಿ ಕೃತ್ಯ ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಲಿಂಗಾರ್ಪಿತ" ಎಂದಿದ್ದಾರೆ. ಇಲ್ಲಿ ಬಸವಣ್ಣ 'ಕೃಷಿ ಕೃತ್ಯ' ಎಂಬ ಪದವನ್ನು ಬಹಳ ಒತ್ತಿ ಹೇಳಿ ನಮ್ಮ ಗಮನವನ್ನು ಕೃಷಿ ಸೇವೆಯೆಡೆಗೆ ಸೆಳೆದಿರುತ್ತಾರೆ. ಈ ಸೇವೆಯಿಂದ ಬಂದ ಕನಿಷ್ಠ ಪ್ರತಿಫಲವಾದರೂ ಅದು ಇಷ್ಟಲಿಂಗಕ್ಕೆ ನೈವೇದ್ಯ ಮಾಡಲು ಯೋಗ್ಯವಾದದ್ದು. 'ಕಾರೆಯ ಸೊಪ್ಪು' ಇದೊಂದು ಬೆಲೆಯಿಲ್ಲದ ವಸ್ತು, ಇಂದು ಇದಕ್ಕೆ ದುಡ್ಡು ಕೊಟ್ಟು ಕೊಳ್ಳುವವರೂ ಇಲ್ಲ. ಇಂಥ ಕನಿಷ್ಠ ಪದಾರ್ಥವು ಕೃಷಿ ಸೇವೆಯಿಂದ ಬಂದಾಗ ಅದು ಅಮೂಲ್ಯವಾಗಿರುತ್ತದೆ. ಪರಮಾತ್ಮನಿಗೆ ಅತ್ಯಂತ ಪ್ರಿಯ ವಸ್ತುವಾಗುತ್ತದೆ. ಅನ್ಯ ಕಾಯಕ (ವ್ಯಾಪಾರ, ನೌಕರಿ ಮುಂತಾದ ದೇಹದಂಡನೆರಹಿತವಾದದ್ದು)ದಿಂದ ಬಂದ ಮೃಷ್ಟಾನ್ನ ಭೋಜನ ಪರಮಾತ್ಮ (ದಾಸೋಹ) ನಿಗೆ ಇಷ್ಟವಾಗದು. ಈ ಉಕ್ತಿಯ ಕಡೆಗೆ ಮಠಾಧೀಶರಾದ ನಾವು ಗಮನ ಹರಿಸಬೇಕು.

"ಒಕ್ಕಲಿಗನೇ ಜಗತ್ತಿನ ಜಗದ್ಗುರು, ಬಾದಷಹ" ಎಂದು ಘನಮಠ ಶಿವಯೋಗಿಗಳು ಹೇಳಿದ ಮಾತನ್ನು ಇಂದು ನಾವು ಮೆಲುಕು ಹಾಕಬೇಕಾಗಿದೆ. ಶ್ರೀ ಘನಮಠದಾರ್ಯರು ಒಬ್ಬ ಸಂಚಾರಿ ಸ್ವಾಮಿಗಳಾಗಿದ್ದು ಕೃಷಿವಿಜ್ಞಾನದ ಭಾಂಡಾರವೇ ತಾವಾಗಿದ್ದರು. 'ಚಲಿಸುವ ಕೃಷಿ ವಿಶ್ವವಿದ್ಯಾಲಯ'ವೇ ಆಗಿದ್ದರು. ಈ ನಾಡಿನ ಸರ್ವ ಬೆಳೆಗಳ ಸಂಪೂರ್ಣ ಮಾಹಿತಿಯ ಜೊತೆಗೆ ಪಶು ಸಂಗೋಪನೆ, ಭೂ ಅಭಿವೃದ್ಧಿ, ಬಾಗಯತ ನೀರಾವರಿ ಯೋಜನೆ ಇತ್ಯಾದಿಗಳನ್ನು ಕುರಿತು ಅವರು ಬರೆದಿರುವ ಗ್ರಂಥ 'ಕೃಷಿಜ್ಞಾನ ಪ್ರದೀಪಿಕೆ' ಇದು ನಮ್ಮ ರೈತ ಸಮುದಾಯಕ್ಕೆ ಬೈಬಲ್‌ಯಿದ್ದಂತೆ, ಭಗವದ್ಗೀತೆ ಇದ್ದಂತೆ. ಸನ್ಯಾಸವನ್ನು ಸ್ವೀಕರಿಸಿ ಮಠಾಧಿಪತಿಗಳಾಗಿದ್ದ ಘನಮಠ ಶ್ರೀಗಳು ಹೊಲದಲ್ಲಿ ಸ್ವತಃ ರೆಂಟೆ-ಕುಂಟೆ ಹೊಡೆದು ಉತ್ತಿ, ಬಿತ್ತಿ, ಸಮೃದ್ಧವಾದ ಬೆಳೆ ತೆಗೆದು ಅಪಾರ ಕೃಷಿಯ ಅನುಭವವನ್ನು ಹೊಂದಿ ರೈತರಿಗಷ್ಟೇ ಅಲ್ಲದೆ ಮಠಾಧಿಪತಿಗಳಿಗೂ ಆದರ್ಶಪ್ರಾಯರಾಗಿದ್ದಾರೆ. ಒಕ್ಕಲುತನ ಮತ್ತು ರೈತನ ಜೀವನದ ಬಗ್ಗೆ ಎಲ್ಲ ಮಗ್ಗಲುಗಳನ್ನು ಅರಿತವರಾಗಿದ್ದಾರೆ. ಅವರು ರೈತನ ಬಗ್ಗೆ ಗೌರವ ಭಾವನೆ ತಳೆದಿದ್ದರು. ರೈತನ ಜೀವನವೇ ಸರ್ವಶ್ರೇಷ್ಠವಾದುದೆಂದು ಭಾವಿಸಿದ್ದರು. ಆದ್ದರಿಂದಲೇ 'ಒಕ್ಕಲಿಗನೇ ಜಗತ್ತಿನ ನಿಜವಾದ ಜಗದ್ಗುರು, ಬಾದಷಹ' ಎಂದು ಕರೆದಿದ್ದಾರೆ. ರೈತ ಇಡೀ ಜೀವ ಸಂಕುಲಕ್ಕೆ ಅನ್ನದಾತನಾದರೆ, ಜಗದ್ಗುರು ಕೇವಲ ತನ್ನ ಭಕ್ತರಿಗೆ ಖಾಲಿ ಕೈಯಿಂದ ಆಶೀರ್ವಾದ ಮಾತ್ರ ಮಾಡಿಯಾನು. ಈ ಮಾತು ಇಂದು ಮಠಾಧಿಪತಿಗಳ ಆತ್ಮಾವಲೋಕನಕ್ಕೆ ದಾರಿ ಮಾಡಿಕೊಡುತ್ತದೆ; ಜೊತೆಗೆ ನಮ್ಮ ಘನ ಸರಕಾರದಲ್ಲಿರುವ ರಾಜಕೀಯ ಧುರೀಣರು ರೈತ ಸಮುದಾಯದ ಕುರಿತು ಚಿಂತನೆ ಮಾಡಲು ಪ್ರೇರೇಪಿಸುತ್ತದೆ.

ಇಂದು ಮನುಷ್ಯ ಕೇವಲ ಭೌತಿಕ ಸಂಪತ್ತನ್ನು ಪ್ರಾಪ್ತಮಾಡಿಕೊಳ್ಳುವದರಲ್ಲಿಯೇ ತಲ್ಲೀನನಾಗಿದ್ದಾನೆ. ತನ್ನ ಜೀವನದ ಪರಮ ಸುಖವನ್ನು ಪಡೆಯಲು ವಾಮಮಾರ್ಗದಿಂದಾಗಲಿ ಅದನ್ನು ಪಡೆದೇ ತೀರಬೇಕೆಂಬ ಛಲ ಆತನಲ್ಲಿ ಅತಿಯಾಗಿ ಬೆಳೆಯುತ್ತಿದೆ. ಈ ಮೋಹದಿಂದ ಮಠಾಧೀಶರೂ ಹೊರತಾಗಿಲ್ಲವೆಂದು ಭಾವಿಸಿದರೆ ತಪ್ಪಲ್ಲ. ಇಂದಿನ ಯಾಂತ್ರಿಕ ಬದುಕು ನಮ್ಮ ಮನಃಶಾಂತಿಯನ್ನು ಲೂಟಿ ಮಾಡಿದೆ. ಅನಾವಶ್ಯಕವಾಗಿ ಜನರ ಮಧ್ಯೆ ಸ್ಪರ್ಧಾತ್ಮಕ ಪೈಪೋಟಿ ಹೆಚ್ಚಾಗಿದೆ. ಇದರಿಂದ ಮನುಷ್ಯ ಕುಬ್ಜನಾಗುತ್ತಿದ್ದಾನೆ. ಇದಕ್ಕೆ ಪರಿಹಾರವೆಂದರೆ ಮನುಷ್ಯ ತನ್ನ ಆತ್ಮಾವಲೋಕನವನ್ನು ಮಾಡಿಕೊಂಡು ನೈಜ ಜೀವನವನ್ನು ನಡೆಸುವದರ ಜೊತೆಗೆ ನಿಸರ್ಗದ ಕಡೆಗೆ ಅನಿವಾರ್ಯವಾಗಿ ಹೋಗಲೇಬೇಕಾಗುತ್ತದೆ. ಪ್ರಕೃತಿಯ ಸುಂದರ ತಾಣಗಳಲ್ಲಿ ಕೆಲವು ಸಮಯ ಕಳೆಯುವುದು, ಮನದ ಕೊಳೆಯನ್ನು ತೊಳೆಯಲು ಸಹಾಯಕವಾಗುವದು ಪ್ರಕೃತಿಯ ಇತರ ಸಾಕು ಜೀವಿಗಳೆಡೆಗೆ ನಾವು ಗಮನ ಹರಿಸಬೇಕಾಗಿದೆ. ಅವುಗಳ ಪ್ರಶಾಂತ ಜೀವನ ಮಾನವನ ಬಾಳಿಗೆ ದಾರಿದೀಪ. ಈ ಸುಖ ನಮಗೆ ದೊರೆಯಬೇಕಾದರೆ ಅತ್ಯಲ್ಪವಾದರೂ ಇಂದು ಪ್ರಕೃತಿಮಾತೆ (ಕೃಷಿಸೇವೆ)ಯ ಸೇವೆ ಮಾಡಬೇಕಾಗಿದೆ. ಮಠದ ಆವರಣದಲ್ಲಿರುವ ಖಾಲಿ ಜಾಗೆಯಲ್ಲಿ ಫಲ-ಪುಷ್ಪಾದಿಗಳ ಗಿಡ-ಮರಗಳಿಗೆ ನೀರುಣಿಸುವುದು, ಅವುಗಳ ಅಭಿವೃದ್ಧಿಯ ಕಡೆಗೆ ಗಮನ ಹರಿಸುವುದು, ಅವುಗಳಲ್ಲಿ ಅರಳುವ ಹೂ-ಹೀಚುಗಳನ್ನು ನೋಡಿ ಆನಂದಿಸುವುದು, ಜೊತೆಗೆ ನಮ್ಮ ಸುತ್ತಮುತ್ತಲಿನ ನಿಸರ್ಗದ ನಿತ್ಯನೂತನ ಚೈತನ್ಯದಾಯಕವಾಗಿರುವ ರಮಣೀಯತೆಯನ್ನು ಆಹ್ಲಾದಿಸಿ, ಆಸ್ವಾದಿಸಿ ನಾವೂ ಅದರಂತೆ ನಿರ್ಮಲರಾಗುವ ಪರಿಯನ್ನು ಕಂಡುಕೊಳ್ಳುವದು ಕೃಷಿ ಸೇವೆಯ ಒಂದು ಭಾಗವೇ ಸರಿ. ಸುಂದರ ಪ್ರಕೃತಿಯ ಮಧ್ಯ ನಿಂತಾಗ ಎಂಥ ದೊಡ್ಡ ಮನುಷ್ಯನಾದರೂ ಅದರ ಭವ್ಯತೆ ದಿವ್ಯತೆಯ ಮುಂದೆ ಸಣ್ಣವನಾಗಿ ಗೋಚರಿಸಿಯಾನು ! ಅದರ ಗಾಂಭೀರ್ಯ, ಔದಾರ್ಯ, ನಿರ್ಮಲತೆ, ನಿರಾಡಂಬರತೆ ಇವೆಲ್ಲವುಗಳೂ ಇಂದಿನ ಯಾಂತ್ರೀಕೃತ ಜೀವನದಿಂದ ನಮ್ಮನ್ನು ಬಿಡುಗಡೆಗೊಳಿಸೀತು. ಆ ಸುಂದರ ಕ್ಷಣದಲ್ಲಿ ಪ್ರಕೃತಿಯೇ ನಮಗೆ ಗುರುವಾಗಿ ತನ್ನ ವಿರಾಟ ಸ್ವರೂಪವನ್ನು ತೋರಿಸೀತು. ಇದನ್ನು ಅನುಭವಿಸಲು, ಆಸ್ವಾದಿಸಲು ಮನುಷ್ಯನಿಗೆ ಒಳಗಣ್ಣು ಇರಬೇಕು. ಹೃದಯವಿರಬೇಕು. ಇಂಥ ಪ್ರಕೃತಿಯನ್ನು ಉಳಿಸಿ-ಬೆಳೆಸುವ ಹವ್ಯಾಸವಿರಬೇಕು; ಇದೂ ಒಂದು ರೀತಿಯ ಕೃಷಿ ಸೇವೆಯೇ ಸರಿ.

ವೀರಶೈವರಿಗೆ ವಿಭೂತಿ ಒಂದು ಅತ್ಯಂತ ಪೂಜ್ಯನೀಯ ವಸ್ತು. ಇದು ಇಲ್ಲದೆ ಶಿವಪೂಜೆ ಪೂರ್ಣಗೊಳ್ಳದು. ಪರಿಶುದ್ಧ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಿದ ಭಸ್ಮದಿಂದ ಅನೇಕ ಶಾರೀರಿಕ ರೋಗಗಳು ಗುಣ ಹೊಂದುವದೆಂಬ ನಂಬಿಕೆ ನಮ್ಮಲ್ಲಿದೆ. ಇಂದು ಈ ಪರಿಶುದ್ಧ ಭಸ್ಮ ಸಿಗುವುದು ಅತ್ಯಂತ ದುರ್ಲಭ. ಕಾರಣ ಮಠಾಧಿಪತಿಗಳಾದ ನಾವು ಗೋ ಸೇವೆಯನ್ನು ಅಲಕ್ಷ್ಯ ಮಾಡಿದ್ದೇವೆ. ಗೋಸೇವೆ ಒಂದು ಪವಿತ್ರ ಕಾರ್ಯ.

ಅಲ್ಲದೆ ಇದು ಕೃಷಿ ಸೇವೆಯ ಒಂದು ಅಂಗವೇ ಆಗಿದೆ. ಆಕಳಿಲ್ಲದೆ ಎತ್ತುಗಳು ಹೇಗೆ ಬಂದಾವು ? ಅವನ್ನು ಕಾರ್ಖಾನೆಯಲ್ಲಿ ತಯಾರಿಸಲು ಸಾಧ್ಯವೇ ? ಎತ್ತು ಇಲ್ಲದೇ ಒಕ್ಕಲುತನ ನಡೆದೀತೇ ? ಇವೆಲ್ಲದಕ್ಕೂ ಗೋರಕ್ಷಣೆ, ಗೋಸೇವೆಗಳು ಮುಖ್ಯವಾದದ್ದು. ಶಿವಯೋಗ ಮಂದಿರದಲ್ಲಿ ಈ ದಿಶೆಯಲ್ಲಿ ನಡೆಯುವ ಪ್ರಯತ್ನಗಳು ಸ್ತುತ್ಯಾರ್ಹ. ಆದರೆ ಅಲ್ಲಿಯ ವಟುಗಳು, ಸಾಧಕರು ಗೋಸೇವೆಯಿಂದ ವಂಚಿತರಾಗಿರುವದು ತುಂಬಲಾರದ ನಷ್ಟವೇ ಸರಿ. ಆಕಳು ಕೃಷಿ ಕಾರ್ಯದ ಒಂದು ಅವಿಭಾಜ್ಯ ಅಂಗ. ಅದರಿಂದ ಅಮೃತಸದೃಶ್ಯವಾದ ಹಾಲು, ಗೋಮಯ ಇತ್ಯಾದಿ ವೀರಶೈವರಿಗೆ ಪಂಚಪ್ರಾಣ. ನಮ್ಮ ನಾಡಿನಲ್ಲಿ ಸುಮಾರು ಎರಡು ಸಾವಿರಕ್ಕೂ ಮಿಕ್ಕಿ ಮಠಗಳಿವೆ. ಆದರೆ ಬೆರಳೆಣಿಕೆಯ ಕೆಲವು ಮಠಗಳಲ್ಲಿ ಗೋರಕ್ಷಣೆ ಹಾಗೂ ಗೋಮಯದಿಂದ ಪರಿಶುದ್ಧ ವಿಭೂತಿ ತಯಾರಿಸುವುದನ್ನು ಕಾಣಬಹುದು. ಉಳಿದ ಮಠಗಳು ಈ ದಿಶೆಯಲ್ಲಿ ಕಾರ್ಯೋನ್ಮುಖರಾದರೆ ನಮ್ಮ ಸಮಾಜಕ್ಕೆ ಒಂದು ಉತ್ತಮವಾದ ಸೇವೆ ದೊರೆತಂತಾಗುತ್ತದೆ. ಭಸ್ಮ ತಯಾರಿಸುವ ಪರಿಶುದ್ಧತೆಯನ್ನು ಕಾಪಾಡಿದಂತಾಗುತ್ತದೆ.

ಈ ಎಲ್ಲ ಹವ್ಯಾಸಗಳು ಮಠಾಧೀಶರ ಮನದಲ್ಲಿ ಚಿಗುರೊಡೆದರೆ ಅದುವೇ ಪರೋಕ್ಷವಾಗಿ ಕೃಷಿ ಸೇವೆ ಮಾಡಿದಂತೆ, ಲಿಂಗಾನುಷ್ಠಾನ ಮಾಡಿದಂತೆ, ಬಸವತತ್ವ ಆಚರಿಸಿದಂತೆ, ಪೂರ್ಣತ್ವದ ಕಡೆಗೆ ಒಂದು ಬಲವಾದ ಹೆಜ್ಜೆ ಇರಿಸಿದಂತೆ.

■■

ಬನ್ನಿ! ಒಂದಿಷ್ಟು ನಾಚಿಕೆ ಪಟ್ಟುಕೊಳ್ಳೋಣ !

● ಶ್ರೀ ಶಿವಕುಮಾರ ಸ್ವಾಮಿಗಳು, ಜಿಡಗಕುಂದಿ

'ಬನ್ನಿ, ಒಂದಿಷ್ಟು ನಾಚಿಕೆಪಟ್ಟುಕೊಳ್ಳೋಣ ! ಈ ತಲೆ ಬರಹ ನೋಡಿ ನಿಮಗೆ ಆಶ್ಚರ್ಯವಾದರೆ ನನಗೆ ಸಂತೋಷವಾಗುತ್ತದೆ. ಯಾಕೆಂದರೆ ನಿಮ್ಮಲ್ಲಿ ಇನ್ನೂ ಒಳ್ಳೆಯದರ ಬಗ್ಗೆ ಚಿಂತನೆ ಜೀವಂತವಾಗಿದೆ ಎಂಬ ಕಾರಣಕ್ಕಾಗಿ! ಅಪ್ಪಟ ಭಾರತೀಯರಾದ ನಾವು ಸ್ವಾತಂತ್ರ್ಯಾನಂತರ ಈ ನಾಚಿಕೆಪಟ್ಟುಕೊಳ್ಳುವುದನ್ನೇ ಬಿಟ್ಟಿದ್ದೇವೆ ? ' ನಾಚಿಕೆಪಟ್ಟುಕೊಳ್ಳುವುದು ಕೇವಲ ಮಡಿವಂತರಿಗೆ ಮಾತ್ರ; ನಮಗಲ್ಲ' ಎಂದು ಹೇಳುವವರೂ ಇದ್ದಾರೆ. ನಮಗೆ ಈಗ ಯಾವುದಕ್ಕೆ ನಾಚಿಕೆ ಎನ್ನಿಸಬೇಕಾಗಿತ್ತೋ ಅದಕ್ಕೆ ಅನ್ನಿಸುವುದಿಲ್ಲ. ಯಾವುದಕ್ಕೆ ನಾವು ನಾಚಿಕೊಳ್ಳಬಾರದೋ ಆ ಕಾರ್ಯಕ್ಕೆ ನಾಚುತ್ತೇವೆ. ಇದನ್ನು ಸ್ಪಷ್ಟವಾಗಿ ಹೇಳುವುದಾದರೆ ಒಳ್ಳೆಯದನ್ನು ಮಾಡಲು, ಸತ್-ಚಿಂತನೆ, ಸದ್ವರ್ತನೆ, ಸತ್ಸಂಗ ಮಾಡಿದರೆ ನಮ್ಮ ಜೀವನವೇ ಧನ್ಯವಾಗುತ್ತದೆ. ಹಾಗೆ ನಾವು ಮಾಡಲು ತಯಾರಿಲ್ಲ. ಆಡಬಾರದ್ದನ್ನು ಆಡುತ್ತೇವೆ. ಮಾಡಬಾರದ್ದನ್ನು ಮಾಡುತ್ತೇವೆ. ಅದೂ ಓದು ಬರಹಬಲ್ಲ ನಮ್ಮ ನಿಮ್ಮಂಥವರು.

17739

ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರವು ಒಂದೇಯಾಗಿದ್ದರೂ ಇವೆರಡರಲ್ಲಿ ಸೂಕ್ಷ್ಮವಾದ ವ್ಯತ್ಯಾಸವಿದ್ದರೂ ಕೂಡ ಅವು ಒಂದೇ ಎಂದು ಹೇಳಬಹುದು. ಇವೆರಡನ್ನು ನಿರ್ದಿಷ್ಟವಾಗಿ ವಿಭಾಗಿಸುವ ಗೆರೆ ಎಳೆಯಲು ಬಾರದಂತೆ ಇವು ಪರಸ್ಪರಾವಲಂಬಿಗಳಾದುದರಿಂದ ಇವುಗಳನ್ನು ಒಟ್ಟಾಗಿ ನೋಡುವುದೇ ಹೆಚ್ಚು ಉಚಿತವೆನಿಸುತ್ತದೆ.

ಒಟ್ಟು ಮಾನವಜನಾಂಗದ ಹಿತದೃಷ್ಟಿಯನ್ನೇ ಮೂಲವಾಗಿ ಇಟ್ಟುಕೊಂಡು ನಮ್ಮ ಮಠ-ಆಶ್ರಮಗಳು ಸ್ಥಾಪಿತವಾಗಿವೆ. ಅವೀಗ ವಿಶ್ವಮಾನವತೆಯ ಚೌಕಟ್ಟಿನಲ್ಲಿ ಲೋಕಸೇವೆಯನ್ನು ಮಾಡಬೇಕಾಗಿದೆ. ಈ ಲೋಕಸೇವೆಯನ್ನು ಮಾಡುವವರ ಮೂಲ ಉದ್ದೇಶವು ಬರೀ ಬಹುಜನಸುಖಾಯ ಬಹುಜನಹಿತಾಯವಲ್ಲ. ಅದೀಗ ಸರ್ವಜನಸುಖಾಯ ಸರ್ವಜನ ಹಿತಾಯವಾಗಿರಬೇಕಾಗಿದೆ. ನಮ್ಮ ಮಠ-ಆಶ್ರಮಗಳು ಜೈಜಗತ್ ಎಂದೆನ್ನಬೇಕಾಗಿದೆ. ನಮ್ಮ ಈ ವಿಶ್ವವು ಶೀಲ-ಶಾಂತಿ-ಅಹಿಂಸೆ-ಸಭ್ಯ-ಸಾತ್ವಿಕ

ಸುಖೀ-ಸಂಪದ್ಭರಿತ, ಸಂಘಟಿತ, ಸೌಹಾರ್ದದ, ಸಾಹಸಶೀಲ, ಸಂತುಷ್ಟ ಸುಸಂಗತ, ಸಂಚಲನೆಯ, ಸಂದೇಹರಹಿತ, ಸಂವೇದನಾಶೀಲ, ಶ್ರಮನಿಷ್ಠ ನಡೆನುಡಿ ಒಂದಾದ ಶಾಸನಮುಕ್ತ, ಶೋಷಣೆಯಿಲ್ಲದ, ವ್ಯಸನರಹಿತ, ಸಾಕ್ಷರತೆಯ ನಿರ್ಭಯತೆಯ, ಸಮಾನತೆಯ ಮತ್ತು ಸುಸಂಸ್ಕೃತವಾದುದಾಗಲೆಂಬ ಮಹದಾಶೆಯ ನಮ್ಮ ಮಠ-ಆಶ್ರಮಗಳದ್ದಾಗಿದೆ. ಇವನಾರವ ಇವನಾರವ ಎಂದೆನ್ನದೆ ಇವ ನಮ್ಮವ ಇವ ನಮ್ಮವನೆಂಬ ವಿಶ್ವಭ್ರಾತೃತ್ವವನ್ನು ನಮ್ಮ ಮಠ-ಆಶ್ರಮಗಳು ಜಗತ್ತಿಗೆ ಸಾರಿ ಹೇಳಬೇಕಾಗಿದೆ. ಕೇವಲ ವಿಜ್ಞಾನದ ಹಾದಿಯಲ್ಲಿ ಮನುಷ್ಯ ಸಾಗಿದರೆ ಆತನಿಗೆ ಶಾಂತಿ-ಸಮಾಧಾನ ಖಂಡಿತವಾಗಿಯೂ ಇಲ್ಲ. ವಿಜ್ಞಾನದ ಜೊತೆಗೆ ಆತ್ಮಜ್ಞಾನವೂ ಸೇರಿದಾಗ ಮಾತ್ರ ಮನುಕುಲದ ಕಲ್ಯಾಣವಾದೀತೆಂಬ ಕಟುಸತ್ಯವನ್ನು ಇಡೀ ಜಗತ್ತಿಗೆ ಮಾತ್ರ ಮನಗಾಣಿಸುವ ಹೊಣೆಗಾರಿಕೆಯೂ ನಮ್ಮ ಮಠ-ಆಶ್ರಮಗಳ ಮೇಲಿದೆ. ವಿಜ್ಞಾನದ ಜೊತೆಗೆ ಆತ್ಮಜ್ಞಾನ ಕಾಣಬೇಕಾದರೆ ನಾವು ಅವರನ್ನು ಬುದ್ಧಿವಂತರನ್ನಾಗಿ ಮಾಡಬೇಕು. ಬರೀ ಬುದ್ಧಿವಂತಿಕೆಯಷ್ಟೇ ಸಾಲದು. ಅವರನ್ನು ಸುಶೀಲ ಮತ್ತು ಸುಸಂಸ್ಕೃತರನ್ನಾಗಿ ಮಾಡುವ ನೈತಿಕ ಜವಾಬ್ದಾರಿಯನ್ನು ನಮ್ಮ ಮಠ-ಆಶ್ರಮಗಳು ತಾವೇ ಸ್ವಯಂಪ್ರೇರಣೆಯಿಂದ ಹೊರಬೇಕಿದೆ. ಜಗತ್ತಿನ ಜನರು ಸ್ವತಂತ್ರವಾಗಿ ಹುಟ್ಟಿ ಬರಬಹುದು. ಆದರೆ ಬುದ್ಧಿವಂತರಾಗಿ ಹುಟ್ಟಿ ಬರುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಸ್ವತಂತ್ರರಾಗಿ ಹುಟ್ಟಿ ಬರುವ ಜನರನ್ನು ಬುದ್ಧಿವಂತರನ್ನಾಗಿಸುವ ಜೊತೆಗೆ ಸುಶೀಲ ಮತ್ತು ಸುಸಂಸ್ಕೃತರನ್ನಾಗಿ ಮಾಡುವ ನೈತಿಕ ಜವಾಬ್ದಾರಿಯು ನಮ್ಮ ಮಠ-ಆಶ್ರಮಗಳ ಎದುರು ಇರುವ ಬಹು ದೊಡ್ಡ ಆಹ್ವಾನವಾಗಿದೆ. ಈ ಬಹುದೊಡ್ಡ ಆಹ್ವಾನವನ್ನು ತ್ಯಾಗ ಮತ್ತು ಸೇವೆಯ ಮೂಲಕ ಪೂರೈಸುವ ಪಣತೊಡಬೇಕಿದೆ. ಶ್ರಮನಿಷ್ಠ ಮತ್ತು ಕಾಂಚನಮುಕ್ತರಾದ ಹೃದಯಸ್ಪರ್ಶಿ ಸೇವೆ ಮಾಡುವ ಸ್ವಯಂಸೇವಕರ ಪಡೆ ನಮ್ಮ ಮಠ-ಆಶ್ರಮಗಳಲ್ಲಿ ತಯಾರಾಗಬೇಕಿದೆ. ಶಾಂತಿಸೈನಿಕರಾದ ಈ ಸ್ವಯಂಸೇವಕರ ಪಡೆ ತನ್ನ ವಿಧಾಯಕ ಮತ್ತು ರಚನಾತ್ಮಕ ಕಾರ್ಯಗಳ ಮೂಲಕ ಜಗತ್ತಿನ ಗಮನ ಸೆಳೆದು, ಸದಾ ಶಾಂತಿಸ್ಥಾಪನೆಯತ್ತ ಮುನ್ನಡೆಯಬೇಕಿದೆ.

ಇಂದು ಮಠಗಳಲ್ಲಿ ಬಹಳಷ್ಟು ಮಠಗಳು ಅಲ್ಲದಿದ್ದರೂ, ಇದ್ದ ಕೆಲವೇ ಕೆಲವು ಮಠಗಳು ತಮ್ಮದೇ ಆದ ಪರಂಪರೆಯಲ್ಲಿ ಸಾಹಿತ್ಯದ, ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಸೇವೆಯನ್ನು ತಮ್ಮ ಶಕ್ತಿಮೀರಿ ಮಾಡುತ್ತಿವೆ. ಯಾವ ಆದಾಯದ ಮೂಲವು ಇಲ್ಲದ ಕೆಲಮಠಗಳ ಸೇವೆ ಸ್ಮರಣೀಯವಾಗಿದೆ. ಗದುಗಿನಮಠವಂತೂ ಪುಸ್ತಕ ಪ್ರಕಟಣೆಯಲ್ಲಿ ವಿಶ್ವವಿದ್ಯಾಲಯವನ್ನೂ ಮೀರಿಸಿದೆ. ಕೋಮುಸೌಹಾರ್ದತೆಗೆ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮೀಜಿ ನಮ್ಮ ಸ್ವಾಮಿಗಳಲ್ಲಿಯೇ ಮಾದರಿಯಾಗಿದ್ದಾರೆ. ನಾಗನೂರು ಮಠದ ಸ್ವಾಮಿಗಳು ದೊಡ್ಡದೊಂದು ವಾಚನಾಲಯ-ಗ್ರಂಥಾಲಯ ಸ್ಥಾಪಿಸಿ ಓದುಗರ ಆದರಕ್ಕೆ ಪಾತ್ರರಾಗಿದ್ದಾರೆ. ಇನ್ನು ಹಲವು ಮಠಗಳು ಅನ್ನದಾನ-ವಿದ್ಯಾದಾನಗಳಲ್ಲಿ ತಮಗೆ ಸರಿಮಿಗಿಲಿಲ್ಲದಂತೆ ಸೇವೆ ಮಾಡುತ್ತಿವೆ. ಚಿತ್ತರಗಿ-ಇಲಕಲ್ಲದ ಶ್ರೀ ಮಹಾಂತ

ಮಹಾಸ್ವಾಮಿಗಳವರು ಈ ಇಳಿ ವಯಸ್ಸಿನಲ್ಲಿಯೂ ಕೂಡಾ ಜನರ ದುಶ್ಚಟ ಬಿಡಿಸಲು ಊರೂರು ಸಂಚರಿಸುತ್ತಾ ವ್ಯಸನಮುಕ್ತ ಸಮಾಜದ ನಿರ್ಮಾಣಕ್ಕೆ ಶ್ರಮಿಸುತ್ತಿದ್ದಾರೆ. ಇನ್ನೂ ಹಲವು ಸ್ವಾಮಿಗಳು ಶರಣರ ತತ್ವ ಪ್ರಸಾರಕ್ಕೆ ಗಂಧದ ಕೊರಡಿನಂತೆ ತಮ್ಮನ್ನೇ ತೇಯುತ್ತಿದ್ದಾರೆ. ನೊಂದವರ ನೋವು ನಿವಾರಿಸಲು ಪ್ರಯತ್ನಿಸುವವರೂ ಇದ್ದಾರೆ.

ಹಾಗೆಯೇ ಆಶ್ರಮಗಳೂ ಸಹ ಸಾಹಿತ್ಯದ ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಸೇವೆಯನ್ನು ತಮ್ಮ ಶಕ್ತಿಮೀರಿ ಮಾಡುತ್ತಿವೆ. ಯಾವ ಆದಾಯದ ಮೂಲವೂ ಇಲ್ಲದ ಗದುಗಿನ ವೀರಶೈವ ಪುಣ್ಯಾಶ್ರಮದ ಸೇವೆ ಸ್ಮರಣೀಯವಾಗಿದೆ. ಕಣ್ಣಿಲ್ಲದ ಅನಾಥ ಮಕ್ಕಳ ಬದುಕಿಗೊಂದು ಭರವಸೆಯಾಗಿ ಡಾ. ಪುಟ್ಟರಾಜ ಗವಾಯಿಗಳವರು ನಮ್ಮ ಮಧ್ಯದ ಆಶ್ಚರ್ಯವಾಗಿದ್ದಾರೆ. ಅವರು ಕಣ್ಣಿಲ್ಲದ ಅನಾಥ ಮಕ್ಕಳಿಗೆ ಏನೆಲ್ಲವೂ ಆಗಿದ್ದಾರೆ. ಕೆಲ ಆಶ್ರಮಗಳು ಯುವ ಪುನಶ್ಚೇತನ ಶಿಬಿರ ಸಂಘಟಿಸುವಲ್ಲಿ, ಪುಸ್ತಕ ಪ್ರಕಟಣೆಯಲ್ಲಿ ದಾಖಲೆ ನಿರ್ಮಿಸುವತ್ತ ದಾಪುಗಾಲು ಹಾಕುತ್ತಿವೆ. ಟಿ.ವಿ. ಪ್ರಭಾವವಿರುವ ಈ ದಿನಗಳಲ್ಲಿ ಕೋಮುಸೌಹಾರ್ದತೆಗೆ, ಭಾವಸಾಮರಸ್ಯಕ್ಕೆ ಪೂರಕವಾಗುವ ಪ್ರವಚನ, ಅನ್ನದಾನ, ವಿದ್ಯಾದಾನಗಳಲ್ಲಿ ತೊಡಗಿಸಿಕೊಂಡ ಆಶ್ರಮಗಳೂ ಇವೆ.

ಇದೆಲ್ಲಾ ಸರಿಯೇ ಇದನ್ನು ಎಲ್ಲ ಮಠವಾಸಿ-ಆಶ್ರಮವಾಸಿಗಳು ಒಪ್ಪುತ್ತಾರೆ. ಮಾತನ್ನೇ ಸಾಧನೆಯನ್ನಾಗಿ ಮಾಡಿಕೊಂಡು ಕೆಲವರು ಸಾಧನೆಯಿಂದ ವಿಶ್ವಭ್ರಾತೃತ್ವ ತೋರಿಸಬೇಕೇ ವಿನಾ ವಿಶ್ವಭ್ರಾತೃತ್ವದ ಬಗ್ಗೆ ಮಾತಾಡುವುದೇ ಒಂದು ಸಾಧನೆಯಾಗಬಾರದು. ಆದರೆ ಅದೀಗ ನಡೆದಿದೆ. ವಿಶ್ವಭ್ರಾತೃತ್ವವನ್ನು ಬೋಧಿಸುವವರು ಮೊದಲು ತಮ್ಮ ಆಶ್ರಮವಾಸಿಗಳನ್ನು, ಭಕ್ತರನ್ನು ಪ್ರೀತಿಸಲು ಕಲಿಯಲಿ. ಆಮೇಲೆ ವಿಶ್ವಮಾನವತೆಯ ದೃಷ್ಟಿಯಿರದಿದ್ದರೂ ಚಿಂತೆಯಿಲ್ಲ. ಮಾನವೀಯ ದೃಷ್ಟಿಯಿಂದಲಾದರೂ ತಮ್ಮವರೇ ಮಾಡುವ ಸೇವಾಕಾರ್ಯಗಳನ್ನು ಗುರುತಿಸುವ ಸಹೃದಯತೆ ಬೆಳೆಸಿಕೊಳ್ಳಲಿ. ಸಹೃದಯತೆ, ಸದ್ಭಾವಗಳು ಮಾತಾಡುವ ಸರಕಲ್ಲವೆಂಬುದನ್ನು ತಮ್ಮ ನಡಾವಳಿಯಿಂದ ಲೋಕದ ಜನತೆಗೆ ತೋರಿಸಲಿ. ಮಠವಾಸಿ-ಆಶ್ರಮವಾಸಿಗಳು ಎಲ್ಲವನ್ನೂ ಮಾನವೀಯ ಹಿನ್ನೆಲೆಯಲ್ಲಿ, ಪ್ರಾಮಾಣಿಕ ನೆಲೆಯಲ್ಲಿ ಗ್ರಹಿಸಬೇಕು. ಅನ್ಯರ ಕಣ್ಣೀರನ್ನು ಒರೆಸಲು ಇದ್ದ ಮಠವಾಸಿ ಆಶ್ರಮವಾಸಿಗಳು ಅನ್ಯರ ಕಣ್ಣೀರನ್ನು ಒರೆಸಲು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ; ಅನ್ಯರ ಕಣ್ಣಲ್ಲಿ ನೀರು ಬರದಂತೆ ಇದ್ದರೆ ಸಾಕು. ಪ್ರಾಮಾಣಿಕವಾಗಿ ಬೆಳೆಯಬೇಕೆನ್ನುವವರಿಗೆ ಪ್ರೋತ್ಸಾಹ ಕೊಡದಿದ್ದರೂ ಚಿಂತೆಯಿಲ್ಲ. ಅನಾವಶ್ಯಕವಾಗಿ ಅವರ ಚಾರಿತ್ರ್ಯಹರಣವಾಗದಿರಲಿ. ಕೊಡುವ ದಾನಿಗಳ ಔದಾರ್ಯದಿಂದ ಪುಸ್ತಕ ಪ್ರಕಟಿಸುವವರನ್ನು ಉದಾರತೆಯಿಂದ ನೋಡುವುದು ಸಾಧ್ಯವಾಗದಿದ್ದರೂ ಅವರ ಬಗ್ಗೆ ಅನಾದರವಿಲ್ಲದಿರಲಿ. ಬರೀ ಮೃದುವಚನದಿಂದಲಷ್ಟೇ ಬಹುಜನರ ಆದರ ಸಿಕ್ಕಬಹುದಾದರೂ, ಆ ಮೃದುವಚನದ ಹಿಂದೆ ನಿಜವಾದ ಮಾನವೀಯತೆ ಇದ್ದಾಗ ಮಾತ್ರ ಅವರಿಂದ ವ್ಯಕ್ತಿಯು ತಾನು ಔನ್ನತ್ಯಕ್ಕೆ ಏರಲು ಸಾಧ್ಯವಾಗುತ್ತದೆ. ತನ್ನ

ಕೂಪಮಂಡುಕತೆಯಿಂದ ತಾನೇ ಹೊರಬಂದು ಸರ್ವಮಾನವ ಜನಾಂಗವನ್ನು ಕಳಕಳಿಯಿಂದ, ವಾತ್ಸಲ್ಯದಿಂದ ನೋಡುವಂತಾಗಲು ಇದಾವುದೂ ನಟನೆಯಾಗದೆ ನಿಜವಾಗಿರಲಿ.

ಇಲ್ಲಿ ಹಲವು ಮಠಗಳ ಸ್ಥಿತಿಯು ಬಹಳ ವಿಚಿತ್ರವಾದರೂ ಸತ್ಯವಾಗಿದೆ. ಒಂದು ಮಠ, ಅದಕ್ಕೊಬ್ಬ ಅಧಿಪತಿಯು ಇರುತ್ತಾರೆ. ಅವರು ಆ ಮಠವನ್ನು ತಮ್ಮ ಕರ್ತೃತ್ವಶಕ್ತಿಯಿಂದ ವಿಶ್ವಮಾನವತೆಯ ಮಹಾ ಎತ್ತರಕ್ಕೆ ಒಯ್ಯಬಹುದಾಗಿದೆ. ವಿಶ್ವಮಾನವತೆಯ ಮಹಾ ಎತ್ತರಕ್ಕೆ ಒಯ್ಯುವುದು ಬೇಡ; ಮಾನವತೆಯ ಆ ಔನ್ನತ್ಯಕ್ಕೆ ಒಯ್ದರೂ ಸಾಕಷ್ಟಾಯಿತು. ಆದರೆ ಆಗುತ್ತಿರುವುದೇನು ? ಬರೆಯಲು ನಾಚಿಕೆಯೆನ್ನಿಸುತ್ತಿದೆ. ಜಾತಿಗೊಂದು ಮಠವಾಗಿ, ಮಠಕ್ಕೊಬ್ಬ ಮರಿಯಾಗಿ ಬರುತ್ತಾನೆ. ಜಾತಿಗೊಂದು ಮಠಮಾಡಲು ನನ್ನದೇನೂ ತಕರಾರಿಲ್ಲ. ಆದರೆ ಇದ್ದ ಮಠಗಳೆಲ್ಲವೂ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ತಾಪತ್ರಯದಿಂದ ತಾಕಲಾಡುತ್ತಿರುವಾಗ ಹೊಸಮಠದ ಔಚಿತ್ಯವೇನು ? ಜಾತಿಗೊಂದು ಮಠವಾಗಿ, ಮಠಕ್ಕೊಬ್ಬ ಮರಿಯಾಗಿ ಬಂದಾಕ್ಷಣ ಆತನ ಹಿಂದೆ ಓಟನಬೇಟೆಯಾಡುವ ನಾಯಿಗಳಂತೆ ಆಯಾ ಜಾತಿಯ ರಾಜಕೀಯ ಪುಢಾರಿಗಳು ಸೇರಿಕೊಂಡು ಸ್ವಜಾತಿಗಳ ಓಟಿನ ಬಲದಿಂದ ಅಧಿಕಾರದ ಗದ್ದುಗೆಯೇರಲು ಹವಣಿಸುತ್ತಾರೆ. ಹೊರಗೆ ತಾವು ಜಾತ್ಯಾತೀತರೆಂದು ಹೇಳುತ್ತಾರೆ. ಒಳಗೊಳಗೆ ಸ್ವಜಾತಿ ರಾಜಕಾರಣ ಆರಂಭವಾಗುತ್ತದೆ. ಮಾನವತೆಯು ಇಲ್ಲಿ ನಾಚಿ ತಲೆತಗ್ಗಿಸಿ ನಿಲ್ಲುತ್ತದೆ. ಈ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ನಡೆಯಬೇಕಿದೆ.

ವಿಶ್ವಮಾನವತೆಯಿಂದ ಮಾನವತೆಯ ನೆಲೆಯಲ್ಲಿದ್ದರೂ ಸಾಕು. ಆದರೆ ಎಷ್ಟೋ ಮಠಗಳು ಮಾನವತೆಯ ನೆಲೆಯಿಂದ ಮತೀಯ ಮಿತಿಗೊಳಗಾಗುತ್ತವೆ; ಆಗಿವೆ. ಆಗಲಿ, ಆದರೆ ಆಯಾ ಮತದ ಉಗಮ, ಅದರ ಪರಿಕಲ್ಪನೆ, ಆಳವಾದ ಅಧ್ಯಯನ, ಅದನ್ನು ಭಕ್ತರಿಗೆ ಹೃದಯಂಗಮವಾಗಿ ತಿಳಿಸಿಹೇಳುವ ಕೌಶಲ ಇವು ಆ ಮಠದೊಡೆಯನಿಗೆ ಅವಶ್ಯವಾಗಿ ಬೇಕು. ಆ ಮತದ ದುರಂತವು ಮಾನವತೆಯ ನೆಲೆಯಿಂದ ಮತೀಯ ಮಿತಿಗೊಳಗಾದಾಗಲೇ ಸುರುವಾಗಿರುತ್ತದೆ. ಮುಂಬಾಗಿಲಿನಿಂದ ಹಾಯ್ದುಹೋದ ಮತಾಂಧತೆಯು ಮಠದ ಹಿಂಬಾಗಿಲಿನಿಂದ ಹಾಯಾಗಿ ಹಿಂದಿರುಗುತ್ತದೆ. ಇದರ ಪರಿಣಾಮವಾಗಿ ಎಲ್ಲೆಲ್ಲೂ ಮತಾಂಧತೆಯು ಮೈಮರೆಯುತ್ತದೆ. ಆಯಾ ಮತದ ವಂಧಿಮಾಗಧರು ಸೇರಿಕೊಂಡು ಮಠವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಅದೀಗ ಜಾತಿಯ ಅಖಾಡವಾಗುತ್ತಿದೆ. ಇದು ಎಲ್ಲಾ ಜಾತಿಗಳ ಮಠಗಳಲ್ಲಿಯೂ ನಡೆಯುತ್ತದೆ ! ಇರಲಿ.

ಮಠವೊಂದು ಮಾನವತೆಯ ನೆಲೆಯಿಂದ ಮತಿಯ ಮಿತಿಗೊಳಗಾದಗಲೇ ದುರಂತವು ಸುರುವಾಗಿದ್ದುದು, ಅಷ್ಟಕ್ಕೆ ಮುಗಿಯುವುದಿಲ್ಲ. ಅದು ಇನ್ನೂ ಕೆಳಗಿಳಿಯುತ್ತಾ ಮತಿಯ ನೆಲೆಯಿಂದ ಕೌಟುಂಬಿಕ ನೆಲೆಗೆ ಬರುತ್ತದೆ. ಹಾಗೆ ಕೌಟುಂಬಿಕ ನೆಲೆಗೆ ತಂದು ನಿಲ್ಲಿಸುವವರಿಗೆ ನಾಚಿಕೆ ಅನ್ನಿಸುವುದೇ ಇಲ್ಲ. ವಿರಕ್ತಮಠವಾಗಲಿ, ಪಟ್ಟದ

ಮಠವಾಗಲಿ, ಇನ್ನುಳಿದ ಯಾವುದೇ ಕೋಮಿನ ಮಠವಾದರೂ ಸರಿಯೇ ಮಠವೆಂದರೆ ಅದು ಅಧ್ಯಾತ್ಮದ ಕ್ಷೇತ್ರ ! ಒಂದು ಮಠವು ಅದು ಮಠವಾಗಿರಬೇಕಾಗಿದ್ದರೆ ಅಲ್ಲಿ ಅಧ್ಯಯನ-ಅಧ್ಯಾಪನಗಳು, ಅರ್ಚನ-ಅರ್ಪಣ-ಅನುಭಾವಗೋಷ್ಠಿಗಳು ನಿತ್ಯ ನಿರಂತರ ಮಾಡುತ್ತಿರಬೇಕು. ಜನತೆಯನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ಒಯ್ಯುವ, ನೊಂದವರ ಕಣ್ಣೀರನ್ನು ಒರೆಸುವ ಕಾರ್ಯ ನಡೆಯುತ್ತಿರಬೇಕು. ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸಾರವು, ಅನ್ನದಾನ (ದಾಸೋಹ) ವಿದ್ಯಾದಾನವು ಸಾಂಗವಾಗಿ ಸಾಗುತ್ತಿರಬೇಕು.

ಕೌಟುಂಬಿಕ ನೆಲೆಗೆ ಬಂದ ಮಠವು ಮನೆಯಾಗಿ ಮಾರ್ಪಟ್ಟು ಮಠದಲ್ಲಿಯೇ ತೊಟ್ಟಿಲಕಾರ್ಯವೂ ಸೇರಿದಂತೆ ಎಲ್ಲಾ ಲೌಕಿಕ ಕಾರ್ಯಗಳು ರಾಜಾರೋಷವಾಗಿ ರೋಚಕವಾಗಿಯೇ ನಡೆಯುತ್ತವೆ. ಇದಕ್ಕೆ ಕುಮ್ಮಕ್ಕು ಕೊಡುವ ಭಕ್ತರೂ ಇರುತ್ತಾರೆ. ಆ ಮಠದೊಡೆಯನ ಸಮಕ್ಷಮದಲ್ಲಿಯೇ ಇದೆಲ್ಲವೂ ನಡೆಯುತ್ತದೆ. ನೀವೂ ಇದನ್ನು ನೋಡಿದ್ದರೆ ' ಬನ್ನಿ, ಒಂದಿಷ್ಟು ನಾಚಿಕೆಪಟ್ಟುಕೊಳ್ಳೋಣ !'

ಇಲ್ಲಿ ಕಾವಿಬಟ್ಟೆಯೊಂದು ಮುದ್ರೆಯಾದರೆ, ಮಠದೊಡೆಯನೆಂಬುದೊಂದು ಮುಖವಾಡವಾಗುತ್ತದೆ. ಇಲ್ಲಿ ಮಾನವತೆಯು ತಲೆತಗ್ಗಿಸಿ ಮುದ್ರೆಯು ಮೌನವಾಗಿ, ಮುಖವಾಡವು ಗೌಣವಾಗುತ್ತದೆ. ಇದಕ್ಕೆಲ್ಲಾ ಮೂಲಕಾರಣವೇನೆಂದರೆ ಮಠಕ್ಕೆ ಮಠದೊಡೆಯನನ್ನು ಆರಿಸುವಾಗ ಅನುಸರಿಸುವ ಪ್ರಕ್ರಿಯೆ ತಪ್ಪುಹಾದಿಯಲ್ಲಿ ನಡೆಯುತ್ತಿರುವುದು. ಹಾಗೆ ಮಾಡುವವರಿಗೆ ತಾವು ತಪ್ಪು ಮಾಡುತ್ತಿದ್ದೇವೆಂದು ಅನ್ನಿಸುವುದೇ ಇಲ್ಲವಲ್ಲ. ' ನಾವು ಶ್ರಮಪಟ್ಟುಗಳಿಸಿದ ಆಸ್ತಿಯಿದು, ನಮ್ಮ ವಂಶದ ಮರಿಯನ್ನು ನಮ್ಮ ಮಠಕ್ಕೆ ಮಾಡುವುದರಲ್ಲಿ ತಪ್ಪೇನು ? ಹೌದು, ತಪ್ಪೇನೂ ಇಲ್ಲ. ಆದರೆ ಮಠದೊಡೆಯರನ್ನು ಯಾರೂ ಮಾಡಬಾರದು. ಮಾಡಿ ಕೂಡ್ರಿಸಲು ಅವನೇನೂ ಮಣ್ಣಿನ ಗಣಪತಿಯಲ್ಲವಲ್ಲ; ಅದೊಂದು ಚಿನ್ಮಯ ಮೂರ್ತಿ. ಲೋಕಕಲ್ಯಾಣ-ಆತ್ಮಕಲ್ಯಾಣಕ್ಕಾಗಿ ಜೊತೆಗೆ, ಆ ಮಠದೊಡೆಯನ ಕೀರ್ತಿಯನ್ನು ದಿಗ್‌ದಿಗಂತಕ್ಕೆ ಹರಡಬೇಕಾದ ಸ್ಫೂರ್ತಿಯ ಚಿಲುಮೆಯಾಗಿರಬೇಕು. ಹಾಗಾಗಲು ಆ ವಟುವಿಗೆ ಬಹುಭಾಷೆಗಳು ಬರದಿದ್ದರೂ ಇಂಗ್ಲೀಷ, ಹಿಂದಿ, ಕನ್ನಡ ಭಾಷೆಗಳ ಮೇಲೆ ಪ್ರಭುತ್ವಬೇಕಾಗುತ್ತದೆ.

ಇಂಥ ಮಠದೊಡೆಯನನ್ನು ಯೋಗ್ಯತೆಯ ಮೇಲೆ ಆರಿಸಬೇಕೇ ವಿನಾ ಅಯೋಗ್ಯನನ್ನು ತಂದು ಆ ಪೀಠದ ಮೇಲೆ ಕೂಡ್ರಿಸಬಾರದು. ಹಾಗೆ ಕೂಡ್ರಿಸಿದರೆ ಪ್ರಣವಸ್ವರೂಪಿಯಾಗಬೇಕಾದವನು ಪ್ರಣಯಸ್ವರೂಪಿಯಾಗಿಬಿಡುತ್ತಾನೆ. ಮಠದೊಡೆಯನಾಗಲು ಬೇಕಾದ ಅರ್ಹತೆಯ ಮಾನದಂಡಕ್ಕೆ ಮಠದೊಡೆಯನ ಮನೆಯ ಹುಡುಗನೊಬ್ಬ ಹೊಂದಲಿಲ್ಲವೆಂದರೆ ಆಗ ಬೇರೆ ಕಡೆಯಿಂದ ಯೋಗ್ಯ ವಟುವನ್ನು ತಂದು ಮಠದೊಡೆಯನನ್ನಾಗಿ ಮಾಡಬೇಕು. ಆದರೆ ಈಗ ಹಾಗಾಗುತ್ತಿಲ್ಲವಲ್ಲ. ಅರ್ಹತೆ-ಅನರ್ಹತೆಯಾಗಲಿ, ಯೋಗ್ಯತೆ-ಅಯೋಗ್ಯತೆಯಾಗಲಿ ಇಲ್ಲಿ ಮುಖ್ಯವಾಗುತ್ತಿಲ್ಲ. ಮಠದೊಡೆಯನು ನಮ್ಮ ವಂಶದವನು. ಮಠದೊಡೆಯನ

ಆಸ್ತಿಯು ಆತನ ವಂಶದವರಿಗೆ ಉಳಿಯಬೇಕು. ನಿಜಾಂಶವೇನೆಂದರೆ ವಂಶದಲ್ಲಿಯಂತೂ ಮೊದಲೇ ಮಾಡಬಾರದು. ಕಾಯಿಯೊಂದು ತಾನೇ ತಾನಾಗಿ ಹಣ್ಣಾದರೆ ಅದರ ರುಚಿಯೇ ವಿಶಿಷ್ಟವಾಗಿರುತ್ತದೆ. ಹಾಗೆಯೇ ಮಠದೊಡೆಯನಾಗುವವನನ್ನು ಒತ್ತಾಯ ಪೂರ್ವಕ ಮಾಡಬಾರದು. ತಾನೇ ಆತ ಸಾಧನೆಯಿಂದ ಆಗಬೇಕು; ಹಾಗಾಗುವುದು ಅಪರೂಪ. ಅಪರೂಪವಾದವರು ಅನರ್ಘ್ಯರತ್ನಗಳೇ ಆಗುತ್ತಾರೆ. ಈಗಲೂ ಅಂಥ ಅನರ್ಘ್ಯ ರತ್ನಗಳೋಪಾದಿಯ ಅನೇಕ ಮಠಾಧೀಶರು ನಮ್ಮ ಮಧ್ಯೆ ಇದ್ದುದರಿಂದ ಮಾನವತೆ ಇನ್ನೂ ಜೀವಂತವಾಗಿದೆ.

ಒತ್ತಾಯಪೂರ್ವಕ ವಂಶದ ಮರಿಯನ್ನು ತಂದು ಪೀಠದ ಮೇಲೆ ತಂದು ಕುಳ್ಳಿರಿಸಿದಾಗ ಆತ ಏನಾಗುತ್ತಾನೆ ಗೊತ್ತೆ ? ಇನ್ನೇನೂ ಆಗುವುದಿಲ್ಲ. ಮನುಷ್ಯತ್ವವಂತೂ ಮೊದಲೇ ಇರುವುದಿಲ್ಲ. ಹಾಗಿರುವಾಗ ಉಪದ್ವ್ಯಾಪಿ ಬೇಜವಾಬ್ದಾರಿ ವಿಷಯಾಸಕ್ತ, ಆಲಸಿ, ಅಕ್ಷರಶತ್ರು, ಪುಸ್ತಕ ದ್ವೇಷಿಯೊಬ್ಬ ಮಠದೊಡೆಯನಾಗುತ್ತಾನೆ. ಇಲ್ಲಿ ಮುದ್ರೆಯು ಮುಖವಾಡವಾಗಿ, ಮುಖವಾಡವು ಅಮಾನವೀತೆಯತ್ತ ತಿರುಗಿದಾಗ ಘಟಿಸುವ ಅಮಾನುಷ ದುರಂತಗಳ ಬಗ್ಗೆ ನಮಗೆ ನಾಚಿಕೆಯಾಗಬೇಕು. ಅದಕ್ಕಾಗಿ ' ಬನ್ನಿ, ಒಂದಿಷ್ಟು ನಾಚಿಕೆಪಟ್ಟುಕೊಳ್ಳೋಣ !'

■■

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಮಠಾಧಿಪತಿಗಳು : ಪರಿಸರ ಪ್ರಜ್ಞೆ

- **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು,** ಬೆಂಗಳೂರು

ಇಂದು ಹೆಚ್ಚು ಚರ್ಚೆಗೆ ಆಹಾರವಾಗಿರುವ, ಆಗುತ್ತಿರುವ ವಿಷಯ ಪರಿಸರ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇದರ ಬಗೆಗೆ ಗಂಭೀರ ಚಿಂತನೆಗಳು ನಡೆಯುತ್ತಲಿವೆ. ಓಝೋನ್ ಪರದೆಯಲ್ಲಿ ರಂಧ್ರಗಳಾಗುತ್ತಿವೆ. ಆಮ್ಲಯುಕ್ತ ಮಳೆ ಸುರಿಯುತ್ತಿದೆ. ವಾತಾವರಣ ಬಿಸಿಯಾಗುತ್ತಿದೆ. ಹವಾಮಾನದಲ್ಲಿ ಇದ್ದಕ್ಕಿದ್ದಂತೆ ಏರುಪೇರುಗಳಾಗುತ್ತಿವೆ. ಅರಣ್ಯ ನಾಶವಾಗುತ್ತಿದೆ. ಅತಿವೃಷ್ಟಿ-ಅನಾವೃಷ್ಟಿ, ಜಲಮಾಲಿನ್ಯ, ನೆಲಮಾಲಿನ್ಯ, ವಾಯುಮಾಲಿನ್ಯ ಇವುಗಳಿಂದಾಗುತ್ತಿರುವ ದುಷ್ಪರಿಣಾಮಗಳು ಮನುಕುಲವನ್ನು ತಲ್ಲಣಗೊಳಿಸುತ್ತಿವೆ. ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಆಗುತ್ತಿರುವ ಜಲ ಮತ್ತು ವಾಯುಮಾಲಿನ್ಯ ಜನತೆಯ ಬದುಕಿಗೆ ಬೆಂಕಿಯಾಗಿ ಸುಡುತ್ತಿದೆ. ಈ ಹಿನ್ನೆಲೆಯಲ್ಲಿ ಅಲ್ಲಲ್ಲೇ ಸಾಕಷ್ಟು ಪ್ರತಿರೋಧಗಳು ವ್ಯಕ್ತವಾಗುತ್ತಿವೆ. ಅಂಥ ಕಾರ್ಖಾನೆಗಳಿಗೆ ಬೀಗ ಜಡಿಯುವ ಕಾರ್ಯವೂ ನಡೆಯುತ್ತಿದೆ. ಪೆಟ್ರೋಲ್ ಮತ್ತು ಡಿಸೈಲ್ ಬಳಕೆಯನ್ನು ಕಡಿಮೆ ಮಾಡುವಂತೆ ಘೋಷಣೆಗಳು ಹೊರಹೊಮ್ಮುತ್ತಿವೆ. ವಾಹನಗಳಿಂದ ಆಗುತ್ತಿರುವ ವಾಯುಮಾಲಿನ್ಯವನ್ನು ತಡೆಗಟ್ಟುವಂತೆ ಕೂಗು ಕೇಳಿಬರುತ್ತಲಿದೆ.

ಕೆರೆ ಕಟ್ಟೆಗಳು ಪ್ರಕೃತಿಯ ಜೀವಕೋಶಗಳಿದ್ದಂತೆ. ಆದುದರಿಂದ ಅವುಗಳ ಹೂಳೆತ್ತಿಸಿ ಅವು ನೀರಿನಿಂದ ತುಂಬುವಂತೆ ಮಾಡಬೇಕೆನ್ನುವ ಚಿಂತನೆ ಪ್ರಾರಂಭವಾಗಿದೆ. ಗಣಿಗಾರಿಕೆಯನ್ನು ತಡೆಗಟ್ಟಬೇಕು ಎಂದು ಹೋರಾಟಗಳು ನಡೆಯುತ್ತಿವೆ. ರಸ್ತೆ ವಿಸ್ತರಣ, ವಾಣಿಜ್ಯಮಳಿಗೆಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಯೋಜನೆಗಳನ್ನು ಕೈಬಿಡುವಂತೆ ಪರಿಸರವಾದಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿ ಹೋರಾಟ ಮಾಡುತ್ತಿದ್ದಾರೆ. ೧೯೭೨ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ನಡೆದ 'ವಿಶ್ವಪರಿಸರ ಸಮ್ಮೇಳನ', ೧೯೯೨ ರಲ್ಲಿ ರಿಯೋಡಿಜನೈರೋದಲ್ಲಿ ನಡೆದ 'ಭೂಶೃಂಗ ಸಮ್ಮೇಳನ' ಮುಂತಾದವು ಪರಿಸರ ಸಮಸ್ಯೆಗಳನ್ನು ನಿವಾರಿಸುವಲ್ಲಿ ನಡೆದ ಮಹತ್ವದ ಪ್ರಯತ್ನಗಳಾಗಿವೆ. ಇಂಥವುಗಳಿಂದ ಏನಾದರೂ ಸಮಸ್ಯೆಗಳು ನಿವಾರಣೆ ಆಗಿವೆಯೇ ಎಂದರೆ 'ಹೌದು' ಎಂದು ಖಚಿತವಾಗಿ ಉತ್ತರಿಸುವುದು ಕಷ್ಟ. ಬದಲಾಗಿ ಪರಿಸರ

ದಿನದಿಂದ ದಿನಕ್ಕೆ ವಿನಾಶದ ಅಂಚನ್ನು ತಲುಪುವುದು ಹೆಚ್ಚುತ್ತಲೇ ಇದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಪ್ರಗತಿ ಎಂದು ಏನೇನೋ ಹೇಳುತ್ತ ನಮ್ಮ ಸುತ್ತಮುತ್ತ ನಾವೇ ನರಕವನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದೇವೆ.

ಪ್ರಗತಿಯ ಹೆಸರಿನಲ್ಲಿ ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ಮಿತಿಮೀರುತ್ತಿದೆ. ಈ ಪ್ರಗತಿಯ ನೆಪದಲ್ಲಿ ಶ್ರೀಮಂತ ರಾಷ್ಟ್ರಗಳ ತಿಪ್ಪೆಗಳಲ್ಲಿ ಬಡರಾಷ್ಟ್ರಗಳು ಪಿತಿಗುಟ್ಟುವ ಕ್ರಿಮಿಕೀಟಗಳೋಪಾದಿಯಲ್ಲಿ ಬದುಕುವಂತಾಗಿದೆ. ಮಾನವ ಕಲ್ಯಾಣಕ್ಕಾಗಿ ಬಳಕೆಯಾಗಬೇಕಾಗಿದ್ದ ವಿಜ್ಞಾನ, ತಂತ್ರಜ್ಞಾನಗಳು ಮಾರಾಕಾಸ್ತ್ರಗಳನ್ನು ತಯಾರಿಸಲು ದುರುಪಯೋಗವಾಗುತ್ತಲಿವೆ. ಈ ಮಾರಾಕಾಸ್ತ್ರಗಳಿಂದ ವಿಶ್ವವೇ ನಡುಗುವಂತಾಗಿದೆ. ಇಡೀ ಪ್ರಪಂಚವನ್ನು ಹಲವು ಬಾರಿ ಸುಟ್ಟು ಭಸ್ಮ ಮಾಡಬಲ್ಲಂಥ ಅಣ್ವಸ್ತ್ರಗಳ ಉಗ್ರಾಣಗಳು ಹಿಂದುಳಿದ, ಮುಂದುವರಿದ ದೇಶಗಳಲ್ಲಿ ಇವೆ. ಇವು ವಿಶ್ವಶಾಂತಿಯನ್ನು ಕದಡಿವೆ. ನಮ್ಮ ಶಿಕ್ಷಣ ನಮ್ಮನ್ನು ಯಾವ ದಾರಿಯತ್ತ ಕರೆದೊಯ್ಯುತ್ತಿದೆ ಎಂದು ಯೋಚಿಸದಷ್ಟು ಭ್ರಮಾಂಧರಾಗಿ ಬದುಕುತ್ತಿದ್ದೇವೆ. ನಿಜಕ್ಕೂ ಇಂದು ದೊರೆಯುತ್ತಿರುವ ಶಿಕ್ಷಣದಿಂದ ನಮ್ಮ ಪೀಳಿಗೆಯ ಭವಿಷ್ಯ ಶಾಂತಿ, ನೆಮ್ಮದಿ, ಸಂತೋಷದಿಂದ ಕೂಡಿರಬಲ್ಲುದೇ ಎಂದು ಯೋಚಿಸಬೇಕಾಗಿದೆ. ಜಗತ್ತಿನ ಜೀವ ಜಾಲಕ್ಕೆ ಆಗುತ್ತಿರುವ ಬಿಕ್ಕಟ್ಟು ಮನುಕುಲವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಲಿದೆ. ಇದು ನಮ್ಮ ಅರಿವಿಗೆ ಬರದಿದ್ದರೆ ನಮ್ಮಂಥ ದುಃಖಿತರು ಮತ್ತೊಬ್ಬರಿಲ್ಲ. ಈ ನೆಲೆಯಲ್ಲಿ ಪರಿಸರ ಪ್ರಜ್ಞೆ ಪ್ರತಿಯೊಬ್ಬರಲ್ಲೂ ಮೈದಾಳಬೇಕಾಗಿದೆ. ಅದರಲ್ಲೂ ಹಲವು ಜನರ ಗೌರವ, ಪ್ರಿತ್ಯಾದರಗಳಿಗೆ ಭಾಜನರಾಗಿರುವ ಮಠಾಧೀಶರಲ್ಲಿ ಈ ಪರಿಸರ ಪ್ರಜ್ಞೆ ಬೇರೆಯವರಿಗಿಂತಲೂ ಹೆಚ್ಚಾಗಿ ಬೆಳೆದು ಬರಬೇಕಾಗಿದೆ.

ಮಠಾಧಿಪತಿಗಳು, ಮಠಾಧೀಶರು ಎಂದಾಕ್ಷಣ ಇಂದು ನಮ್ಮ ಕಣ್ಣೆದುರು ಬರುವ ಚಿತ್ರ ಪುರಾತನ ಪರಂಪರೆಯ ಸಾಧು ಸಂತರುಗಳಿಗಿಂತಲೂ ಭಿನ್ನರಾದವರು. ಹಿಂದಿನ ಸಾಧು ಸಂತರ ವಾಸ ಗುಡ್ಡ-ಬೆಟ್ಟಗಳಲ್ಲಿ, ಗುಹೆಗಳಲ್ಲಿ, ಅರಣ್ಯಗಳಲ್ಲಿ. ಅವರದು ಸರಳ ಜೀವನ. ಇಂದಿನವರ ವಾಸ ಭವ್ಯವಾದ ಮಠ-ಮಂದಿರಗಳಲ್ಲಿ. ಇವರದು ಬಹು ವೈಭವದ ಜೀವನ. ಹಿಂದಿನವರು ಗಿಡ, ಮರ, ಬಳ್ಳಿ, ನವಿಲು, ಜಿಂಕೆ, ಮೊಲ, ಹಕ್ಕಿ-ಪಕ್ಷಿ ಮುಂತಾದವುಗಳನ್ನು ಪ್ರೀತಿಸುತ್ತ ಅವುಗಳೊಂದಿಗೆ ಅನ್ಯೋನ್ಯ ಸಂಬಂಧ ಬೆಳೆಸುತ್ತಿದ್ದ ಚಿತ್ರ ಕಣ್ಮುಂದೆ ಸುಳಿಯುತ್ತಿದೆ. ಸ್ವಚ್ಛ ಗಾಳಿ, ನಿರ್ಮಲ ಪರಿಸರ, ಜುಳು ಜುಳು ಹರಿಯುವ ಮಾಲಿನ್ಯರಹಿತ ನೀರು, ಗಿಡ-ಮರಗಳ ಎಲೆಗಳಿಂದ ನಿರ್ಮಿತವಾದ ಪರ್ಣಕುಟೀರ, ನಾರುಮಡಿಯುಟ್ಟು ಸುಸಂಸ್ಕೃತ ಜೀವನ ಸಾಗಿಸುತ್ತಿದ್ದ ಹಿಂದಿನ ಸಂತ ಪರಂಪರೆಗೂ ನಾಗರಿಕ ಸೌಲಭ್ಯಗಳೊಂದಿಗೆ ನಾಗರಿಕರಾಗಿ ಬಾಳುತ್ತಿರುವ ಇಂದಿನ ಮಠ ಪರಂಪರೆಯ ಮಠಾಧಿಪತಿಗಳಿಗೂ ಎಲ್ಲಿಂದೆಲ್ಲಿಯ ಸಂಬಂಧ ?

ಪುರಾತನ ಋಷಿ ಮುನಿಗಳಿಗೆ ಸರಳ ಜೀವನ, ಉನ್ನತ ಚಿಂತನೆ, ಪರಿಸರ ಪ್ರೇಮ ರಕ್ತಗತವಾಗಿದ್ದವು. ಗಿಡ ಮರಗಳ ಮೇಲಿಂದ ಬೀಸಿಬರುವ ತಂಗಾಳಿಯೇ ಅವರಿಗೆ ಪ್ರಾಕೃತಿಕ ಫ್ಯಾನು. ಕಲ್ಲುಗಳೇ ಆಸನಗಳು, ಹುಲ್ಲುಹಾಸಿನ ನೆಲವೇ ಮೆತ್ತನೆಯ ಗಾದೆ. ಗಿಡ ಮರಗಳು ಕೊಡುವ ಹಣ್ಣು ಹಂಪಲು, ಗಡ್ಡೆ ಗೆಣಸುಗಳೇ ಆಹಾರ. ಪ್ರಕೃತಿಪೂಜೆಯೇ ಶಿವಪೂಜೆ. ತಮ್ಮ ಶಿವಪೂಜೆಗಾಗಿ ಹೂವಿನ ಗಿಡಗಳನ್ನು ಪ್ರೀತಿಯಿಂದ ಸಾಕುವುದು. ಫಲ ನೀಡುವ ಲೌಕಿಕ ಮತ್ತು ಪಾರಲೌಕಿಕ ಶಿಕ್ಷಣ ಕೊಡುವುದು ಅವರಿಗೆ ಬಹು ಪ್ರಿಯವಾದ ಕಾರ್ಯ. ಆ ಶಿಷ್ಯರಿಂದ ಗಿಡಗಳಿಗೆ ಪಾತಿ ಮಾಡಿಸುವುದು, ಸಸಿಗಳನ್ನು ಬೆಳೆಸುವುದು, ಅವುಗಳಿಗೆ ನೀರುಣಿಸುವುದು ಶಿಕ್ಷಣದ ಅವಿಭಾಜ್ಯ ಅಂಗವಾಗಿತ್ತು.

'ಪರಿಸರ ಸಂರಕ್ಷಣೆ', 'ಪರಿಸರ ಪ್ರಜ್ಞೆ' ಎನ್ನುವ ಪದಗಳು ಪುರಾತನ ಸಂತರು ಮತ್ತು ಮಠಾಧಿಪತಿಗಳಿಗೆ ಗೊತ್ತಿಲ್ಲದಿರಬಹುದು. ಆದರೆ ಅವರೆಲ್ಲ ತಮಗರಿವಿಲ್ಲದೆಯೇ ಪರಿಸರ ಪ್ರೇಮಿಗಳಾಗಿ ಆ ಪರಿಸರವನ್ನು ಸಂರಕ್ಷಿಸುವ ಮಣಿಹದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಂತೂ ಸತ್ಯ. ಪರಿಸರ ಪ್ರಜ್ಞೆ, ಸಂರಕ್ಷಣೆ ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಬೊಗಸೆಯಿಂದ ನೀರು ಕುಡಿಯುವ ಅವರೇನೂ ಅನಾಗರಿಕರಾಗಿರಲಿಲ್ಲ. ಮರದ ಎಲೆಗಳಲ್ಲಿ ಉಣ್ಣುವುದು ಅವರಿಗೆ ಅಹಿತವಾಗಿರಲಿಲ್ಲ. ಹೀಗಾಗಿ ಮಠಾಧಿಪತಿಗಳು ಮತ್ತು ಪರಿಸರ ಪರಸ್ಪರ ಅವಲಂಬಿತವಾಗಿದ್ದು ಗಮನಾರ್ಹ. ಪರಿಸರ ಎಂದರೆ ಕೇವಲ ಗಿಡ-ಮರಗಳಷ್ಟೇ ಅಲ್ಲ. ಭೂಮಿ, ನೀರು, ಆಕಾಶ, ಗಾಳಿ, ಮಳೆ, ಪ್ರಾಣಿ ಪಕ್ಷಿಗಳಾದಿಯಾಗಿ ಚರಾಚರವೆಲ್ಲವೂ ಸೇರಿದ್ದೇ ಪರಿಸರ. ಈ ಪರಿಸರದಲ್ಲಿ ನೆಲ, ಗುಡ್ಡ-ಬೆಟ್ಟ, ಅರಣ್ಯಗಳು, ನದಿಗಳು, ಸಮುದ್ರ, ಹಾವು, ಹದ್ದು, ಮೀನು, ಮೊಸಳೆ, ಹಸು, ಹುಲಿ, ಜಿಂಕೆ, ನವಿಲು, ನಾಯಿ, ಪಾರಿವಾಳ ಹೀಗೆ ವೈವಿಧ್ಯಮಯ ಜೀವಕೋಟಿ ಇದೆ. ಇವುಗಳಲ್ಲಿ ಮಾನವನೂ ಒಬ್ಬ. ಆದರೆ ಈ ಮಾನವ ತನ್ನ ಬದುಕಿಗಾಗಿ ಉಳಿದೆಲ್ಲವುಗಳನ್ನೂ ಮನಬಂದಂತೆ ಬಳಸಿಕೊಳ್ಳಲಾರಂಭಿಸಿದ. ತಾನೇ ಪ್ರಕೃತಿಯ ಕಿರೀಟವೆಂದು ಭಾವಿಸಿ ಉಳಿದವುಗಳು ತನ್ನ ಉಪಭೋಗಕ್ಕಾಗಿಯೇ ಇವೆ ಎಂದು ತಿಳಿದು ಸ್ವೇಚ್ಛಾಚಾರಿಯಂತೆ, ಸರ್ವಾಧಿಕಾರಿಯಂತೆ ವರ್ತಿಸಲಾರಂಭಿಸಿದ.

ಪರಿಸರದಲ್ಲಿ ಹಲವು ಪ್ರಾಣಿ ಪಕ್ಷಿಗಳು ಪರಸ್ಪರ ಪ್ರೀತಿ, ದ್ವೇಷದಿಂದ, ಒಂದು ಮತ್ತೊಂದು ಕೊಂದು ತಿಂದು ಬದುಕುತ್ತಿದ್ದರೂ ಅವು ಪರಿಸರದ ಅಸಮತೋಲನಕ್ಕೆ ಕಾರಣವಾಗಿರಲಿಲ್ಲ. ಬದಲಾಗಿ ಆ ವಿಧಾನ ಪರೋಕ್ಷವಾಗಿ ಪರಿಸರದ ಸಮತೋಲನ ಕಾಪಾಡಲು ಕಾರಣವಾಗಿತ್ತು. ಸಾಧುಗಳ ಆಶ್ರಮದಲ್ಲಿ ಹುಲಿ, ಜಿಂಕೆ, ಹಾವು, ಮುಂಗುಸಿ, ಪಾರಿವಾಳ, ನಾಯಿ ಮುಂತಾದವುಗಳು ತಮ್ಮ ದ್ವೇಷವನ್ನು ಮರೆತು ಪರಸ್ಪರ ಪ್ರೀತಿಯಿಂದ ಒಂದಾಗಿ ಬಾಳುವ ಮೂಲಕ ಪರಿಸರದ ಪಾವಿತ್ರ್ಯವನ್ನು ತಮಗರಿವಿಲ್ಲದೆ ಕಾಪಾಡುತ್ತಿದ್ದವು. ಹಾಗಾಗಿ ಆ ಬದುಕು ಸಹ್ಯವಾಗಿತ್ತು. ನೆಲ, ಜಲ, ಸಂಪತ್ತುಗಳು ಕರಗದೆ ತಮ್ಮ ಸಮತೋಲನ ಕಾಯ್ದುಕೊಳ್ಳುತ್ತಿದ್ದವು. ಕಾಲ ಗತಿಸಿದಂತೆ, ಜನಸಂಖ್ಯೆ

ಹೆಚ್ಚಿದಂತೆ ಮನುಷ್ಯನ ದುರಾಸೆ ಮತ್ತು ಸ್ವಾರ್ಥ ಕೂಡ ಹೆಚ್ಚುತ್ತಾ ಬಂತು. ಈ ಸ್ವಾರ್ಥ, ದುರಾಸೆಯೇ ಪ್ರಕೃತಿಯ ಅಸಮತೋಲನಕ್ಕೂ ಕಾರಣವಾಯಿತು. ಇದನ್ನರಿಯದೆ ಮಾನವ ತಾನು ಪ್ರಕೃತಿಯ ಕಿರೀಟವೆಂದು ಭ್ರಮಿಸಿ ಮತ್ತಷ್ಟು ಪ್ರಕೃತಿಯನ್ನು ಹಾಳು ಮಾಡುತ್ತಲೇ ಬಂದ. ಈಗ ಅದರ ಪರಿಣಾಮವನ್ನು ಮನುಕುಲ ಅನುಭವಿಸುತ್ತಿದ್ದರೂ ತಾನೆಸಗಿದ ತಪ್ಪನ್ನು ತಿಳಿದು ತಿದ್ದಿಕೊಳ್ಳುವ ವಿವೇಕ ಉದಯಿಸದಿರುವುದು ನಿಜಕ್ಕೂ ಅತ್ಯಂತ ನೋವಿನ ಸಂಗತಿಯಾಗಿದೆ.

ಹಿಂದಿನ ಆಶ್ರಮ ಪದ್ಧತಿಯಾಗಲಿ, ಗುರುಕುಲಗಳಾಗಲಿ, ಗುರುಕುಲ ಶಿಕ್ಷಣದ ವಿಧಾನವಾಗಲಿ ಇಂದಿಲ್ಲ. ಬಹುತೇಕ ಮಠಾಧಿಪತಿಗಳು ನಗರವಾಸಿಗಳಾಗಿದ್ದಾರೆ. ಪರ್ಣಕುಟೀರಗಳು ಕಣ್ಮರೆಯಾಗಿ ಕಾಂಕ್ರಿಟ್ ಕಾಡುಗಳು ಆಕಾಶದೆತ್ತರಕ್ಕೇರುತ್ತಿವೆ. ಸಂಚಾರಕ್ಕೆ ಹೊಗೆಯುಗುಳುವ ವಾಹನಗಳು ಬಂದಿವೆ. ಜುಳು ಜುಳು ಹರಿಯುವ ನೀರಿನ ತಾಣವನ್ನು ಮಿನರಲ್ ವಾಟರ್ ಬಾಟಲ್‌ಗಳು ಆಕ್ರಮಿಸಿವೆ. ಆಗರ್ಭ ಶ್ರೀಮಂತರನ್ನೂ ನಾಚಿಸುವಂಥ ಪೀಠೋಪಕರಣಗಳು ಮಠವನ್ನು ತುಂಬಿವೆ. ಅವು ಅವರಿಗಿರುವ ಪ್ರಕೃತಿ ಪ್ರೀತಿ ಎಷ್ಟರಮಟ್ಟಿನದು ಎನ್ನುವುದನ್ನು ತೋರುವಂತಿವೆ! ಪರಿಸರಕ್ಕೆ ಅಪಾರ ಧಕ್ಕೆಯನ್ನುಂಟುಮಾಡುವ ಪ್ಲಾಸ್ಟಿಕ್ ವಸ್ತುಗಳ ಬಳಕೆ ಮಠಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿಯೇ ಹೇರಳವಾಗಿದೆ. ಪ್ಲಾಸ್ಟಿಕ್ ಕಪ್ಪು, ಪ್ಲಾಸ್ಟಿಕ್ ಪೇಪರ್, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಜಗ್, ಪ್ಲಾಸ್ಟಿಕ್ ಬ್ಯಾಗ್, ಪ್ಲಾಸ್ಟಿಕ್ ಚಮಚ. ಆಶೀರ್ವಾದದ ರೂಪದಲ್ಲಿ ಕರುಣಿಸುವ ತೀರ್ಥದ ಬಾಟಲ್, ಪ್ರಸಾದದ ಪ್ಯಾಕೆಟ್‌ಗಳು ಸಹ ಪ್ಲಾಸ್ಟಿಕ್‌ಮಯ, ಇದು ಮಠಾಧಿಪತಿಗಳಿಗಿರುವ ಪರಿಸರ ಪ್ರಜ್ಞೆಯ ಪ್ರತೀಕವೋ, ಪರಿಸರದ ಬಗೆಗಿನ ಅವಜ್ಞೆಯೋ ?

ಪುರಾತನ ಮಠಾಧೀಶರುಗಳ ಪ್ರಕೃತಿಯೊಂದಿಗಿನ ಸರಳ, ಸಹಜ ಬದುಕು ಪರಿಸರಕ್ಕೆ ಹೆಚ್ಚಿನ ಧಕ್ಕೆಯನ್ನು ಉಂಟುಮಾಡುತ್ತಿರಲಿಲ್ಲ. ಅವರ ಮಿತವ್ಯಯದ ಜೀವನ ಪರಿಸರದ ಸಂರಕ್ಷಣೆಗೆ ಪರೋಕ್ಷವಾಗಿ ಕಾರಣವಾಗಿತ್ತು. ಇದನ್ನು ಇಂದಿನ ಮಠಾಧೀಶರು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ನಾಗರಿಕತೆಯ ಸೋಂಕಿಗೆ ಮನಸೋಲುತ್ತಿರುವ ಧಾರ್ಮಿಕ ನೇತಾರರು ಆಧ್ಯಾತ್ಮಿಕ ಜೀವನಕ್ಕಿಂತಲೂ ಲೌಕಿಕ ಬದುಕಿಗೆ ಅಂಟಿಕೊಳ್ಳುವುದು ಎಲ್ಲೆಡೆ ಎದ್ದುತೋರುತ್ತಿದೆ. ಇದರಿಂದಾಗಿ ಅರಣ್ಯನಾಶಕ್ಕೆ, ಪರಿಸರದ ಅಸಮತೋಲನಕ್ಕೆ ಇವರೂ ಕಾರಣರಾಗುತ್ತಿದ್ದಾರೆ. ಮೊದಲೇ ಹೇಳಿದಂತೆ ಪರ್ಣಕುಟೀರಗಳ ತಾಣದಲ್ಲಿ ಹಲವು ಅಂತಸ್ತುಗಳ ಭವ್ಯ ಭವನಗಳು, ಸೌಧಗಳು ಕಣ್ಣು ಕೋರೈಸುವಂತೆ ಮೇಲೇಳುತ್ತಲಿವೆ. ಕಾರು, ವಿಮಾನಗಳನ್ನು ಬಳಸಲೇಬೇಕಾದುದು ಅನಿವಾರ್ಯವಾಗಿರುವಂತೆ ಪರಿಸರ ಪ್ರೀತಿ, ಪರಿಸರ ಪ್ರಜ್ಞೆಯೂ ಅನಿವಾರ್ಯ ಎನ್ನುವ ಅರಿವು ಮಠಾಧೀಶರಿಗೆ ಮೊದಲು ಬರಬೇಕಾಗಿದೆ. ಇತ್ತೀಚೆಗೆ ಇಂಥ ಅರಿವು ಹಲವು ಮಠಾಧೀಶರಿಗೆ ಬರುತ್ತಿರುವುದು ಮೆಚ್ಚಬೇಕಾದ ಸಂಗತಿಯಾಗಿದೆ.

ಈ ನೆಲೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಎಲ್ಲ ಸ್ವಾಮಿಗಳವರು ಪರಿಸರ ಕಾಳಜಿಯುಳ್ಳವರಾಗಿ ಅದಕ್ಕಾಗಿ ಹಲವಾರು ರೀತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿರುವುದು ಗಮನಾರ್ಹ. " ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ"ಯ ಮೂಲಕ ಗೋಮಾಳ ಅಭಿವೃದ್ಧಿ. ಬಂಜರು ಭೂಮಿ ಅಭಿವೃದ್ಧಿ, ಶಾಲಾವನ ನಿರ್ಮಾಣ, ವನಮಹೋತ್ಸವ, ಔಷಧಿ ಸಸ್ಯಗಳ ವನ ಬೆಳೆಸುವುದು, ಆ ಸಸ್ಯಗಳನ್ನು ಜನರಿಗೆ ವಿತರಿಸುವುದು, ಶೌಚಾಲಯ ನಿರ್ಮಾಣ. ಮತ್ತಿತರ ಚಟುವಟಿಕೆಗಳ ಮೂಲಕ ಪರಿಸರ ಸಮತೋಲನ ಕಾಪಾಡುವಲ್ಲಿ ಅಹರ್ನಿಶಿ ಪರಿಶ್ರಮಿಸುತ್ತಿರುವುದು ಸ್ತುತ್ಯರ್ಹ. ಇವರ ದಾರಿಯಲ್ಲೇ ಹಲವಾರು ಸ್ವಾಮಿಗಳು ಮುಂದಾಗಿರುವುದು ಸ್ವಾಗತಾರ್ಹ. ಆದಿಚುಂಚನಗಿರಿ ಮಠದ ಸ್ವಾಮೀಜಿಯವರು ಐದು ಕೋಟಿ ಸಸಿಗಳನ್ನು ನೆಟ್ಟು ಬೆಳೆಸುವ ಬೃಹತ್ ಯೋಜನೆಯೊಂದನ್ನು ಕೈಗೆತ್ತಿಕೊಂಡು ಕಾರ್ಯೋನ್ಮುಖರಾಗಿರುವುದು ಪರಿಸರ ಪ್ರಜ್ಞೆಯ ದ್ಯೋತಕವಾಗಿದೆ. ಮಠಾಧೀಶರು ಹಲವು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವಂತೆ ಅವುಗಳಲ್ಲಿರುವ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಪರಿಸರ ಪ್ರಜ್ಞೆ ಮೂಡಿಸುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಮಠಗಳು ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿ ವಿತರಿಸುವ ಕಾರ್ಯದಲ್ಲಿ ಸಕ್ರೀಯವಾಗಿ ತೊಡಗಿಕೊಳ್ಳಬೇಕು. ಪರಿಸರ ಕಾಳಜಿಗೆ ಸಂಬಂಧಿಸಿದ ಉಪನ್ಯಾಸಗಳನ್ನು ಏರ್ಪಡಿಸಬೇಕು. ತಮ್ಮ ವಲಯದಲ್ಲಾದರೂ ಹೆಚ್ಚು ಹೆಚ್ಚು ಗಿಡ ಮರಗಳನ್ನು ಬೆಳೆಸಲು ಭಕ್ತರಿಗೆ ಪ್ರೇರಣೆ ತುಂಬಬೇಕು. ಪರಿಸರಕ್ಕೆ ಹಾನಿಯುಂಟುಮಾಡುವಂಥ ಕೆಲಸ ಕಾರ್ಯಗಳನ್ನು ಬಹಿಷ್ಕರಿಸಬೇಕು. ಪರಿಸರ ಸಂರಕ್ಷಣಾ ಸಮಿತಿಗಳನ್ನು ಸ್ಥಾಪಿಸಬೇಕು. ಎಲ್ಲಿಯಾದರೂ ಪರಿಸರಕ್ಕೆ ಧಕ್ಕೆಯುಂಟಾಗುತ್ತಿದ್ದರೆ ಈ ಸಮಿತಿಗಳ ಮೂಲಕ ಪ್ರತಿಭಟಿಸುವ, ಪರಿಸರ ಸಂರಕ್ಷಣೆಗಾಗಿ ಹೋರಾಡುವ ಮಹಾಮಣಿಹಕ್ಕೆ ಮುಂದಾಗಬೇಕು. ಜನರಲ್ಲಿಯೂ ಅಂಥ ಮನಸ್ಥಿತಿ ಬೆಳೆಸಬೇಕು. ಉದ್ಯಾನವನ ನಿರ್ಮಾಣ, ಪ್ರಾಣಿಸಂಗ್ರಹಾಲಯ ತೆರೆಯುವುದು ಪರಿಸರ ಸಂರಕ್ಷಣೆಯ ಕಾರ್ಯವೆಂಬ ಭಾವನೆ ಬರಬೇಕು. ಕೇವಲ ಮೆಡಿಕಲ್ ಮತ್ತು ಎಂಜನಿಯರಿಂಗ್ ಕಾಲೇಜುಗಳನ್ನು ತೆರೆಯುವುದೇ ಮಹಾನ್ ಸಾಧನೆ ಎಂದು ಭಾವಿಸದೆ ಅಲ್ಲಿಯೂ ಪರಿಸರ ಪ್ರೇಮಕ್ಕೆ ಒತ್ತು ನೀಡುವ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಬೇಕು.

ಸ್ವಾಮಿಗಳ ಬಗೆಗೆ ಜನರಲ್ಲಿ ಇನ್ನೂ ಸಾಕಷ್ಟು ಭಕ್ತಿ ಗೌರವಾದರಗಳು ಇದ್ದೇ ಇವೆ. ಜನರ ಈ ಭಾವನೆಯನ್ನು ಪರಿಸರ ಪ್ರೀತಿಯಾಗಿ ಪರಿವರ್ತಿಸುವ ಕಾರ್ಯ ಸ್ವಾಮಿಗಳಿಂದಾಗಬೇಕಾಗಿದೆ. ಏಕೆಂದರೆ ಸ್ವಾಮಿಗಳ ಮಾತನ್ನು ಹೆಚ್ಚು ಜನರು ಪಾಲಿಸುವರು. ಪರಿಸರ ಶಾಶ್ವತ. ನಾವು ಅಶಾಶ್ವತ. ಅಶಾಶ್ವತ ಬದುಕಿನಲ್ಲಿ ಶಾಶ್ವತವಾಗಿ ಉಳಿಯುವ ಕೆಲಸಗಳನ್ನು ಮಾಡುವ ಮೂಲಕ ನಾವೂ ಶಾಶ್ವತವಾಗಿ ಉಳಿಯಬಹುದು. ಸಾಲುಮರದ ತಿಮ್ಮಕ್ಕ ಸಾಮಾನ್ಯ ಮಹಿಳೆ. ಆದರೆ ಆ ತಾಯಿ ಸಾಲುಮರಗಳನ್ನು

ಬೆಳೆಸುವ ಮೂಲಕ ಅಸಾಮಾನ್ಯಳಾಗಿರುವುದು ಗಮನಾರ್ಹ. ಆ ತಾಯಿಯ ಕಾರ್ಯ ಎಲ್ಲರಿಗೂ ದಾರಿದೀವಿಗೆಯಾಗಬೇಕು. ಸ್ವಾಮಿಗಳು ಹಲವಾರು ಸಮಾರಂಭಗಳಿಗೆ ಹೋಗುವುದು ಸಹಜ. ಅದರಲ್ಲೂ ಮದುವೆ ಸಂದರ್ಭದಲ್ಲಿ ದಂಪತಿಗಳಿಗೆ ಉಡುಗೊರೆಯಾಗಿ ಒಳ್ಳೊಳ್ಳೆಯ ಸಸಿಗಳನ್ನು ಕೊಡಬೇಕು. ಅವುಗಳು ಬೆಳೆದಂತೆ ನಿಮ್ಮ ಬದುಕು, ನಿಮ್ಮ ಮನೆತನ ಬೆಳೆಯುತ್ತದೆ ಎನ್ನುವ ಹಿತೋಕ್ತಿಗಳನ್ನು ಮನಮುಟ್ಟುವಂತೆ ಹೇಳಬೇಕು. ಸತ್ತವರ ಸಂಸ್ಕಾರ ಮಾಡಿ ಅಲ್ಲೊಂದು ಮಂಟಪ ಕಟ್ಟಿಸುವ ಬದಲು ಆ ಸ್ಥಳದಲ್ಲಿ ಒಂದು ಸಸಿ ನೆಟ್ಟು ಬೆಳೆಸುವಂತೆ ಪ್ರೋತ್ಸಾಹಿಸಬೇಕು.

ಹಿಂದೆ ತಾಯಂದಿರು ತಮ್ಮ ಮಕ್ಕಳಿಗೆ ಶಾಲೆಗಳನ್ನು ಕಟ್ಟಿಸು, ಸಾಲುಮರಗಳನ್ನು ಬೆಳೆಸು, ಅರವಟ್ಟಿಗೆಗಳನ್ನು ತೆರೆ, ಬಾವಿಗಳನ್ನು ತೋಡಿಸು, ಆಚಾರಕ್ಕೆ ಅರಸಾಗು. ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು ಎಂದು ಹೇಳುತ್ತಿದ್ದಂತೆ ಸ್ವಾಮಿಗಳು ತಮ್ಮ ಭಕ್ತ ಸಮೂಹಕ್ಕೆ ಪರಿಸರ ಪ್ರಜ್ಞೆ ನಿಮ್ಮ ಉಸಿರಾಗಲಿ. ಪರಿಸರ ಕಾಳಜಿ ಬದುಕಿನ ಅವಿಭಾಜ್ಯ ಅಂಗವಾಗಲಿ ಎನ್ನುವ ಕಿವಿಮಾತು ಹೇಳಬೇಕಾಗಿದೆ. ತಮ್ಮ ಮಠ ಮತ್ತು ಕಲ್ಯಾಣ ಮಂಟಪಗಳಲ್ಲಿ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಮಿತವಾಗಿ ಬಳಸುವಂತೆ. ಕೆಲವು ಪ್ಲಾಸ್ಟಿಕ್ ಸಾಮಗ್ರಿಗಳನ್ನು ಬಹಿಷ್ಕರಿಸುವಂತೆ ಆದೇಶವೀಯಬೇಕು. ತಾವೂ ಅದನ್ನು ಪಾಲಿಸಬೇಕು. ಉದಾ : ಊಟದ ಟೇಬಲ್ ಮೇಲೆ ಪ್ಲಾಸ್ಟಿಕ್ ಪೇಪರ್ ಹಾಸದಿರುವುದು, ಬಳಸಿ ಬಿಸಾಕುವ ಪ್ಲಾಸ್ಟಿಕ್ ಕಪ್ಪು, ತಟ್ಟೆಗಳ ಉಪಯೋಗವನ್ನು ಸಂಪೂರ್ಣ ನಿಷೇಧಿಸುವುದು, ಏಕೆಂದರೆ ಈ ಪ್ಲಾಸ್ಟಿಕ್ ಕೊಳೆಯುವುದಿಲ್ಲ. ಸುಟ್ಟರೆ ವಾಯುಮಾಲಿನ್ಯ. ಅಲ್ಲಲ್ಲೇ ಬಿಸಾಕುವುದರಿಂದ ದನಕರುಗಳು ಅವುಗಳನ್ನು ನುಂಗಿ ಹಲವು ರೋಗಗಳಿಗೆ ಬಲಿಯಾಗಿ ಪ್ರಾಣವನ್ನೇ ತೆರುವ ಪ್ರಸಂಗಗಳು ಬಂದೊದಗಿವೆ. ಆದಷ್ಟೂ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಸಹ ಬಳಸದಂತೆ ಎಚ್ಚರವಹಿಸಬೇಕು. ಪರಿಸರಕ್ಕೆ ಧಕ್ಕೆಯನ್ನುಂಟುಮಾಡುವ ಕಾರ್ಖಾನೆಗಳ ವಿರುದ್ಧ ಜನಜಾಗೃತಿ ಮೂಡಿಸಿ ಅವುಗಳ ವಿರುದ್ಧ ಹೋರಾಟವನ್ನು ಸಂಘಟಿಸಬೇಕು.

ನಮ್ಮ ಹಿರಿಯರು ಹಲ್ಲುಜ್ಜಲು ವಿವಿಧ ಕಡ್ಡಿಗಳನ್ನು ಬಳಸುತ್ತಿದ್ದರು. ನಮ್ಮಂತೆ ಅವರು ಬ್ರಷ್, ಪೇಸ್ಟ್‌ಗಳನ್ನು ಉಪಯೋಗಿಸುತ್ತಿರಲಿಲ್ಲ. ಉಪ್ಪು, ಇದ್ದಿಲು, ಎಕ್ಕೆ, ಬೇವು, ತಂಗಡಿಕೆ, ಜಾಲಿ, ಗಂಡೌಡ್ಲಕಡ್ಡಿಗಳಿಂದ ಹಲ್ಲುಜ್ಜುತ್ತಿದ್ದರು. ಇದರಿಂದ ಆರೋಗ್ಯಕ್ಕೂ ಒಳಿತಾಗುತ್ತಿತ್ತು. ಇಂದಿನವರು ಪೇಸ್ಟ್, ಬ್ರಷ್‌ಗಳನ್ನು ಬಳಸಿ ಅವುಗಳ ಕವರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಕುವುದರಿಂದ ಅವುಗಳಿಂದ ಪರಿಸರಕ್ಕೆ ಆಗುವ ಅನಾಹುತ ಲೆಕ್ಕಕ್ಕೆ ಸಿಕ್ಕುವಂತಹುದಲ್ಲ. ಅಂತೆಯೇ ಅವರು ಮೈತೊಳೆಯಲು ಬಳಸುತ್ತಿದ್ದುದು ಕಡ್ಲೆಹಿಟ್ಟು, ಚೌಳು ಮಣ್ಣು ಇತ್ಯಾದಿ ನೈಸರ್ಗಿಕ ಚಿಕಿತ್ಸೆಯಲ್ಲಿ ಮಣ್ಣಿಗೆ ಮಹತ್ವವಿದೆ. ಇದನ್ನು ನಮ್ಮ ಹಿರಿಯರು ಬಹು ಹಿಂದೆಯೇ ಅರಿತಿದ್ದರು. ಇಂದು ಸಾಬೂನು ಮತ್ತು ಸೌಂದರ್ಯವರ್ಧಕಗಳಿಗಾಗಿ ಮರಗಳು, ಅಮಾಯಕ ಪ್ರಾಣಿಗಳು ಬಲಿಯಾಗುತ್ತಿವೆ. ಇಂಥವುಗಳ ಬಗೆಗೆ ಸ್ವಾಮಿಗಳು ಜನಜಾಗೃತಿಯನ್ನುಂಟು ಮಾಡಬೇಕಾಗಿದೆ.

ಈಗೀಗಲಂತೂ ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ನೆಪದಲ್ಲಿ ನಮ್ಮ ದೇಶಕ್ಕೆ, ನಮ್ಮ ಜನರಿಗೆ, ನಮ್ಮ ಪರಿಸರಕ್ಕೆ ಆಗುತ್ತಿರುವ ಅನಾಹುತದ ಕಲ್ಪನೆ ಅನೇಕರಿಗಿಲ್ಲ. ಇವು ನಾಳೆ ನಮ್ಮ ಭಾರತವನ್ನು ಬದುಕಲು ಅನರ್ಹ ನೆಲವನ್ನಾಗಿಸಬಹುದು. ಇದು ಕಾರಣ ಇಂಥವುಗಳ ಬಗೆಗೂ ಜನರಿಗೆ ಅರಿವು ಮೂಡಿಸಬೇಕು. ಪರಿಸರ ಉಳಿದರೆ ನಾವು ಉಳಿಯುತ್ತೇವೆ, ಪರಿಸರ ಹಾಳಾದರೆ ನಾವೂ ಹಾಳಾಗುತ್ತೇವೆ. ಮಿತ ಬಳಕೆ ಹಿತಜೀವನಕ್ಕೆ ನಾಂದಿ. ಈ ನೆಲೆಯಲ್ಲಿ ಸ್ವಾಮಿಗಳು ಮೊದಲು ಸರಳ ಜೀವನ, ಪರಿಸರ ಪ್ರೀತಿ, ಪರಿಸರ ಕಾಳಜಿ ಬೆಳೆಸಿಕೊಳ್ಳಬೇಕಾಗಿದೆ. ನಮಗೆ ಬದುಕುವುದಕ್ಕೆ ಹಕ್ಕಿರುವಂತೆ ಆ ಬದುಕು ಪರಿಸಕ್ಕೆ ಹಾನಿಯುಂಟುಮಾಡಬಾರದು ಎನ್ನುವ ಎಚ್ಚರವೂ ಇರಬೇಕು. ಪರಿಸರ ಚೆನ್ನಾಗಿದ್ದರೆ ನಾವೂ ಚೆನ್ನಾಗಿರಬಲ್ಲೆವು. ಪರಿಸರ ನಮ್ಮನ್ನು ಹೆತ್ತ ತಂದೆ ತಾಯಿಗಳಿಗಿಂತಲೂ ಮಹತ್ವದ್ದು, ಬೆಲೆಯುಳ್ಳದ್ದು. ಈ ಪ್ರಜ್ಞೆ ಸದಾ ನಮಗಿರಬೇಕು.

ನಾವೆಲ್ಲ ಪರಿಸರದ ಕೈಗೂಸುಗಳು. ಆ ಪರಿಸರ ನಮ್ಮನ್ನು ಕ್ಷೇಮದಿಂದ ಸಾಕಬೇಕಾದರೆ ನಾವು ತಾಯಿಗೆ ತೊಂದರೆ ಕೊಡಬಾರದು. ಆದರೆ ಎಷ್ಟೋ ಮಕ್ಕಳು ಬೆಳೆದು ದೊಡ್ಡವರಾಗುತ್ತಲೇ ಹೆತ್ತು, ಹೊತ್ತು ಸಾಕಿ ಸಲುಹಿದ ತಂದೆ ತಾಯಿಗಳ ಕತ್ತು ಹಿಸುಕುವ, ಅವರಿಗೆ ಹಿಂಸೆ ಕೊಡುವ, ಮನೆಯಿಂದ ಹೊರಹಾಕುವ ಕಾರ್ಯವನ್ನು ಹೇಸದೆ ಮಾಡುವುದನ್ನು ಕಾಣುತ್ತಿದ್ದೇವೆ. ಅದೇ ತೆರನಾಗಿ ನಮ್ಮ ಬದುಕಿಗೆ ಬೇಕಾದುದೆಲ್ಲವನ್ನೂ ಕರುಣಿಸುವ ಮಹಾತಾಯಿ ಪ್ರಕೃತಿಮಾತೆಯ ಮೇಲೂ ಅತ್ಯಾಚಾರ, ದೌರ್ಜನ್ಯ ಮಾಡುವುದು ಮಾನವನಿಗೆ ರಕ್ತಗತವಾಗಿಬಿಟ್ಟಿದೆ. ಇದು ಕೊನೆಗೆ ನಾವೇ ನಮ್ಮ ತಲೆಯ ಮೇಲೆ ಚಪ್ಪಡಿ ಎಳೆದುಕೊಂಡಂತೆ ಆಗುವುದರಲ್ಲಿ ಅನುಮಾನವಿಲ್ಲ. ಈ ಅರಿವನ್ನು ಸಮಾಜಬಾಂಧವರಲ್ಲಿ ಮೂಡಿಸಿ ಅವರು ಪರಿಸರ ಕಾಳಜಿಯುಳ್ಳವರಾಗುವಂತೆ ಮಾಡುವ ಮಹಾಮಣಿಹಕ್ಕೆ ಮಠಾಧಿಪತಿಗಳು ಮೊದಲು ಮುಂದಾಗಬೇಕು. ಇದು ಶಿವಪೂಜೆಗಿಂತಲೂ ಶ್ರೇಷ್ಠ ಕಾರ್ಯ.

ಪರಿಸರ ಎರಡು ತೆರನಾದುದು. ಒಂದು ಬಾಹ್ಯ ಪರಿಸರ, ಮತ್ತೊಂದು ಮಾನಸಿಕ ಪರಿಸರ, ಬಾಹ್ಯ ಪರಿಸರದ ಸಮತೋಲನ ತಪ್ಪಲು ಕಾರಣ ಮನುಷ್ಯನ ಮಾನಸಿಕ ಪರಿಸರ. ಮಾನವ ತನ್ನ ಸುಖಕ್ಕಾಗಿ ಹಲವು ಹವ್ಯಾಸಗಳ ದಾಸನಾಗುವುದು ಸಹಜ. ಈ ಹವ್ಯಾಸಗಳು ನಮ್ಮನ್ನು ಮನುಷ್ಯತ್ವದಿಂದ ದೈವತ್ವಕ್ಕೂ ಏರಿಸಬಲ್ಲವು ಇಲ್ಲವೇ ರಾಕ್ಷಸತ್ವವನ್ನೂ ಬೆಳೆಸಬಲ್ಲವು. ಧ್ಯಾನ, ಪ್ರಾರ್ಥನೆ, ಅಧ್ಯಯನ, ಸತ್‌ಚಿಂತನೆ, ಸದಾಚಾರ, ಸಹಕಾರ, ಸೇವೆ, ಕಾಯಕ ಇಂಥ ಹವ್ಯಾಸಗಳಲ್ಲಿ ನಿತ್ಯವೂ ತೊಡಗಿಕೊಂಡಿದ್ದರೆ ವ್ಯಕ್ತಿಯ ಬದುಕು ದಿವ್ಯವಾಗಬಲ್ಲುದು. ಅದರಿಂದ ಪರಿಸರ ವಿನಾಶವೂ ಕಡಿಮೆಯಾಗಬಲ್ಲುದು. ಇದರ ಬದಲು ಜೂಜಾಟ, ಮಾದಕ ವಸ್ತುಗಳ ಸೇವನೆ, ಗುಟಕಾ ಜಗಿಯುವುದು, ದುರಾಚಾರ, ಕಳವು, ವ್ಯಭಿಚಾರದಂತಹ ದುಷ್ಕಾರ್ಯಗಳಲ್ಲಿ ನಿರತರಾದರೆ ತಮ್ಮ ಸಮಾಧಿಯನ್ನು ತಾವೇ ತೋಡಿಕೊಳ್ಳಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಯುವಪೀಳಿಗೆ ದುಶ್ಚಟ,

ದುರಭ್ಯಾಸಗಳ ದಾಸರಾಗಿ ತಮ್ಮ ದೇಹ, ಮನಸ್ಸು, ಬುದ್ಧಿಯನ್ನು ಕೆಡಿಸಿಕೊಂಡು ಸಮಾಜಬಾಹಿರ ಕಾರ್ಯಗಳಲ್ಲಿ ಮಗ್ನರಾಗುತ್ತಿರುವುದು ಹೆಚ್ಚು ಹೆಚ್ಚಾಗಿ ಕಾಣುತ್ತಿದೆ. ಇಂಥದರ ವಿರುದ್ಧವಾಗಿಯೂ ಹೋರಾಡುವ, ಯುವಪೀಳಿಗೆಯನ್ನು ಎಚ್ಚರಿಸಿ ಸನ್ಮಾರ್ಗದಲ್ಲಿ ಕೈಹಿಡಿದು ಮುನ್ನಡೆಸುವ ಗುರುತರ ಜವಾಬ್ದಾರಿಯನ್ನು ಮಠಾಧೀಶರು ನಿರ್ವಹಿಸಬೇಕಾಗಿದೆ.

ಜನರ ಸುಂದರ ಬದುಕು ಮತ್ತು ಸಮಾಜದ ಅಭ್ಯುದಯಕ್ಕೆ ಮಾರಕವಾಗುತ್ತಿರುವ ಮಾದಕ ವಸ್ತುಗಳ ಉತ್ಪಾದನೆ, ಮಾರಾಟ, ಸೇವನೆಯನ್ನು ತಡೆಗಟ್ಟುವಂತೆ, ಅಂಥವರ ಮೇಲೆ ನಿರ್ದಾಕ್ಷಿಣ್ಯವಾಗಿ ಉಗ್ರ ಕ್ರಮ ಜರುಗಿಸುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು. ಕಾನೂನುಬದ್ಧವಾಗಿಯೇ ಅವುಗಳನ್ನು ನಿಷೇಧಿಸಬೇಕು. ಈ ದಿಶೆಯಲ್ಲಿ ಮಠಾಧೀಶರು ಜನಜಾಗೃತಿಯನ್ನು ಮಾಡುವ ಸಂಕಲ್ಪ ತಳೆಯಬೇಕು. ಭೋಗಜೀವನಕ್ಕಿಂತ ಯೋಗಜೀವನಕ್ಕೆ ಭಾರತೀಯರು ಬದ್ಧರಾಗಿದ್ದವರು. ಆದರೀಗ ಯೋಗಕ್ಕಿಂತ ಭೋಗಜೀವನವೇ ಪರಮ ಪುರುಷಾರ್ಥ ಎನ್ನುವಂತಾಗಿದೆ. ಆದುದರಿಂದ ಮಠಾಧೀಶರು ಸಚ್ಚಾರಿತ್ರ್ಯ, ಸನ್ನಡತೆ, ನೈತಿಕತೆ, ಧಾರ್ಮಿಕತೆಯತ್ತ ಜನರನ್ನು ಕರೆದೊಯ್ಯುವಂತಹ ಕಾರ್ಯಕ್ರಮಗಳನ್ನು ಎಲ್ಲೆಡೆ ಹಮ್ಮಿಕೊಳ್ಳುವ ಮನಸ್ಸು ಮಾಡಬೇಕು. ಮಾನವನ ಮನಸ್ಸು ಮಲೀನಗೊಳ್ಳದೆ, ಅವನ ಆಂತರಿಕ ಪರಿಸರ ಶುದ್ಧವಾಗಿರುವಂತೆ ಕಾಳಜಿವಹಿಸಬೇಕು. ಇದಕ್ಕಾಗಿ ವಿವಿಧ ತರಬೇತಿ ಶಿಬಿರಗಳನ್ನು ನಾಡಿನ ಬೇರೆ ಬೇರೆ ಭಾಗಗಳಲ್ಲಿ ನಡೆಸಬೇಕು. ಮಠಗಳು ಪ್ರಜ್ಞೆ ಮೂಡಿಸುವ ಕೇಂದ್ರಗಳಾಗಬೇಕು. ಆ ಪ್ರಜ್ಞೆ ಮೂಡಿಸುವ ಕಾರ್ಯದಲ್ಲಿ ಮಠಾಧೀಶರು ತಮ್ಮನ್ನು ತಾವು ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು.

ವರ್ಷ ವರ್ಷಕ್ಕೂ ಮಳೆಯ ಪ್ರಮಾಣ ಕಡಿಮೆ ಆಗುತ್ತಿದೆ. ಬರದ ಬವಣೆ ಮರುಕಳಿಸುತ್ತಿದೆ. ಜನರು ಸಾಲಗಾರರಾಗಿ ಅದನ್ನು ತೀರಿಸುವ ದಾರಿ ಕಾಣದೆ ಮರ್ಯಾದೆಗಂಜಿ ಸಾವಿನಲ್ಲಿ ಸುಖ ಕಾಣುವಂತಾಗಿದೆ. ಆದುದರಿಂದ ಮಠಾಧೀಶರು ಆ ಜನರಲ್ಲಿ ಮೊದಲು ಮನೋಬಲ, ಆತ್ಮಸ್ಥೈರ್ಯ, ಕಾಯಕ ಶ್ರದ್ಧೆ, ಹಾಸಿಗೆ ಇದ್ದಷ್ಟು ಕಾಲು ಚಾಚುವ ಪ್ರವೃತ್ತಿ, ಪರಿಸರ ಪ್ರೀತಿ ಬೆಳೆಸುವತ್ತ ಆದ್ಯತೆ ನೀಡಬೇಕು. ಜೀವದಯೆ ಮೂಡಿಸುವ, ಸಹಜ ಬದುಕು ಸಾಗಿಸುವ, ಭೌತವಸ್ತುಗಳ ಸಂಗ್ರಹದಿಂದ ದೂರವಿರುವ, ಪ್ರಕೃತಿ ಆರಾಧನೆಯೇ ಪರಮಾತ್ಮನ ಆರಾಧನೆ ಎನ್ನುವ ಭಾವನೆಯನ್ನು ಬೆಳೆಸಬೇಕು. ಊರುಗಳಲ್ಲಿ ಇಂಗುಬಚ್ಚಲುಗಳಿಲ್ಲದೆ, ಚರಂಡಿಗಳಿಲ್ಲದೆ ಬೀದಿಗಳೆಲ್ಲ ಕೊಚ್ಚೆಯ ತಾಣಗಳಾಗಿ ಜನರು ಹಲವು ರೋಗಗಳಿಗೆ ತುತ್ತಾಗಬೇಕಾಗಿದೆ. ಸರ್ಕಾರ ಇವುಗಳಿಗಾಗಿ ಬೇಕಾದಷ್ಟು ಅನುದಾನ ನೀಡುತ್ತಿದ್ದರೂ ಪ್ರಾಮಾಣಿಕತೆಯ ಕೊರತೆಯಿಂದಾಗಿ ಕೆಲಸ ಕಾರ್ಯಗಳು ಕಳಪೆಯಾಗಿ ಊರುಗಳು ತಿಪ್ಪೆಗುಂಡಿಗಳಂತಾಗುತ್ತಿವೆ. ಆದುದರಿಂದ ಜನರಿಗೆ ನೈತಿಕ, ಧಾರ್ಮಿಕ ಶಿಕ್ಷಣ ಒದಗಿಸುವತ್ತ ಒತ್ತುಕೊಡಬೇಕು.

ಬೆಳಿಗ್ಗೆ ಸಂಜೆ ಯಾವುದೇ ರಸ್ತೆಯಲ್ಲಿ ಹೋಗುತ್ತಿದ್ದರೆ ಆ ರಸ್ತೆಯ ಎಡ ಬಲಗಳಲ್ಲಿ ಎಷ್ಟೋ ಜನರು ಬಹಿರ್ದೆಶೆಗೆ ಕುಳಿತಿರುತ್ತಾರೆ. ಅವರಲ್ಲಿ ಮಕ್ಕಳು, ಮುದುಕರು, ಹೆಣ್ಣು-ಗಂಡು ಎನ್ನುವ ತಾರತಮ್ಯವಿರುವುದಿಲ್ಲ. ಯಾರಾದರೂ ದಾರಿಯಲ್ಲಿ ಬರುತ್ತಿದ್ದಾರೆಂದು ಅವರೇನೂ ಮೇಲೇಳುವುದಿಲ್ಲ. ಮಾನವಂತರೇ ಮುಖತಗ್ಗಿಸಿ ನಡೆಯುವ ಪರಿಸ್ಥಿತಿ ಎಲ್ಲ ಊರುಗಳಲ್ಲಿಯೂ ಇದೆ. ಹೀಗೆ ಕಂಡಕಂಡಲ್ಲಿ ಬಹಿರ್ದೆಶೆಗೆ ಕೂರುವುದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮ, ತನ್ಮೂಲಕ ಮಾನವರ ಆರೋಗ್ಯದ ಮೇಲಾಗುವ ಅನಾಹುತ ಅಪರಿಮಿತ. ಅಂತೆಯೇ ಶೌಚಾಲಯದ ಮಹತ್ವವನ್ನು ಜನರಿಗೆ ತಿಳಿಸಬೇಕು. ಹೀಗೆ ಪರಿಸರ ಪ್ರಜ್ಞೆಯನ್ನು ಸಾರ್ವಜನಿಕರಲ್ಲಿ ಬೆಳೆಸುವ ಗುರುತರ ಜವಾಬ್ದಾರಿಯನ್ನು ಮಠಗಳು, ಮಠಾಧೀಶರು ತೆಗೆದುಕೊಂಡರೆ ನಿಜಕ್ಕೂ ಅವರು ವಿಶ್ವಕ್ಕೆ ಬಹುದೊಡ್ಡ ಕಾಣಿಕೆ ಸಲ್ಲಿಸಿದಂತೆ ಆಗುತ್ತದೆ. ಇದರಿಂದ ಮುಂದಿನ ಪೀಳಿಗೆ ಸಾಧ್ಯವಾದಷ್ಟು ನೆಮ್ಮದಿಯಿಂದ ಬದುಕಲು ಅವಕಾಶವಾಗಿ ಅವರು ತಮ್ಮ ಹಿರಿಯರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ನಾವು ಮುಂದಿನವರ ನಿಂದೆಗೆ ಗುರಿಯಾಗಬೇಕಾಗಬಹುದು.

■■

ಮಠಾಧೀಶರು : ಆಧುನಿಕತೆ

● ಶಶಿಕಾಂತ ಪಟ್ಟಣ

ಭಾರತವು ಸಂತರ, ಶರಣರ, ಸೂಫಿಗಳ ಪವಿತ್ರವಾದ ಭೂಮಿ. ನಮ್ಮ ಭವ್ಯ ಸಂಸ್ಕೃತಿಯಲ್ಲಿ ಧರ್ಮದ ಪಾತ್ರ ಅನನ್ಯವಾಗಿದೆ. ಮಠಗಳು ನಮ್ಮ ಧರ್ಮವನ್ನು ನಿರಂತರವಾಗಿ ಕ್ರಿಯಾಶೀಲಗೊಳಿಸುವ ಆಧ್ಯಾತ್ಮಿಕ ಕೇಂದ್ರಗಳು. ಆದರೆ ಭಾರತದ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ " ಮಠಾಧೀಶರು : ಆಧುನಿಕತೆ " ಎಂಬ ವಿಷಯದ ಅವಲೋಕನ ಅಗತ್ಯವೆಂದು ಭಾವಿಸಿರುವೆ. ಪ್ರಸ್ತುತ ಲೇಖನದಲ್ಲಿ ನಾನು ಶರಣಧರ್ಮ ಮತ್ತು ಅದಕ್ಕೆ ಪೂರಕವಾಗಿ ಪ್ರತಿನಿಧಿಸುವ ಮಠಾಧೀಶರು ಹಾಗೂ ಅವರ ಕರ್ತವ್ಯ ಪ್ರಜ್ಞೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತಿರುವೆ.

ಬುದ್ಧನಿಂದ ಸ್ಥಾಪಿತಗೊಂಡ ಧರ್ಮವು ಬೌದ್ಧ ಧರ್ಮವಾದಂತೆ ಕ್ರಿಸ್ತನಿಂದ ರೂಪಿತಗೊಂಡ ಧರ್ಮವು ಕ್ರೈಸ್ತ ಧರ್ಮವಾಯಿತು. ಆದರೆ ಬಸವಣ್ಣನಿಂದ ರೂಪಿತಗೊಂಡ ' ಲಿಂಗಾಯತ ' ಧರ್ಮವು ' ವೀರಶೈವ 'ವೆಂಬ ಅಭಿದಾನ ಪಡೆದು ಈಚೆಗೆ ಚರ್ಚೆಗೆ ಆಸ್ಪದ ನೀಡಿದ್ದು ದುರದೃಷ್ಟಕರ ಸಂಗತಿ.

ಸಮಾಜವಾದದ ಚಳುವಳಿಯಲ್ಲಿ ಬುದ್ಧನ ನಂತರ ಅವನಿಗಿಂತಲೂ ಹೆಚ್ಚು ಕ್ರಾಂತಿಕಾರ ಬಸವಣ್ಣ, ಮಾರ್ಕ್ಸ್‌ನಿಗಿಂತಲೂ ಆಧುನಿಕ, ಭಿನ್ನ ಚಿಂತಕ ಬಸವಣ್ಣ.

ಶತಶತಮಾನದ ಶೋಷಣೆಯ ಕತ್ತಲು ಹರಿದು ಸುಪ್ರಭಾತವು ಹನ್ನೆರಡನೆಯ ಶತಮಾನದಲ್ಲಿ ಮೂಡಿ ಬಂದಿತು. ಅನುಭವಿಗಳು, ಸಾಧಕರು, ಜ್ಞಾನಿಗಳು ಶರಣರ ಸಮೂಹವನ್ನು ನಿರ್ಮಿಸಿತು. ಶರಣಧರ್ಮವು ಸಮಾಜವಾದದ ಸಿದ್ಧಾಂತವನ್ನು ರೂಪಿಸುವ ಅತ್ಯಾಧುನಿಕ ಪ್ರಜ್ಞೆ ಹಾಗೂ ಗುರಿಯನ್ನು ಹೊಂದಿತ್ತು. ಇಂತಹ ಹಿನ್ನೆಲೆ ಹೊಂದಿರುವ ಸ್ವತಂತ್ರವಾದ ಶರಣಧರ್ಮಕ್ಕೆ, ಬಸವಧರ್ಮಕ್ಕೆ ರಾಷ್ಟ್ರಮಟ್ಟದ ಮನ್ನಣೆ ದೊರೆಯದೆ ಇರುವುದು ವಿಷಾದದ ಸಂಗತಿ.

ಬಸವಾದಿ ಪ್ರಮಥರಿಂದ ರೂಪಗೊಂಡ. ಲಿಂಗಾಯತ ಶರಣ ಧರ್ಮವು ಇಂದಿನ ಎಲ್ಲಾ ಆಧುನಿಕ ಮೌಲ್ಯಗಳನ್ನೊಳಗೊಂಡಿದ್ದರೂ ಅದನ್ನು ಹಿಂದೂ ಧರ್ಮದ ಅಡಿಯಲ್ಲಿ ವ್ಯಾಖ್ಯಾನಿಸುವ, ಗುರುತಿಸುವ ಪ್ರಕ್ರಿಯೆ ಸೂಕ್ತವಾಗಿ ತೋರುವುದಿಲ್ಲ.

ಶರಣರಿಗೆ ಲಿಂಗಾಯತ ಧರ್ಮವನ್ನು ಸ್ಥಾಪಿಸಬೇಕೆನ್ನುವ ಗುರಿ, ಕನಸು, ಆಶಯಗಳು ಇರಲಿಲ್ಲ. ಶೈವ ಧರ್ಮದ ವಿವಿಧ ಪ್ರಭೇದಗಳೆನಿಸಿದ ಪಾಶುಪತ, ಕಾಪಾಲಿಕ, ಕಾಳಾಮುಖಿ, ಲಕುಲೀಶದಂತೆ " ವೀರಶೈವ " ವೆಂದೆನ್ನುವುದೂ ಕೂಡಾ ಪ್ರಮುಖ ಅಂಗ. ಇತರ ಎಲ್ಲಾ ಶೈವ ಪಂಗಡದವರು ಶರಣರ ಕ್ರಾಂತಿಯ ಪ್ರವಾಹದಲ್ಲಿ ಸೇರಿಕೊಂಡರು.

ಶರಣರ ಕ್ರಾಂತಿಯ ನಂತರ, ಸಾಧಕರು, ವಚನಕಾರರು ಬೇರೆ ಬೇರೆ ದಿಕ್ಕಿಗೆ ಚದುರಿದರು. ವಚನ ಸಾಹಿತ್ಯ ಕಾಲಗರ್ಭದಲ್ಲಿ ಅಡಗಿಹೋಯಿತು. ೧೪ನೇ ಶತಮಾನದಲ್ಲಿ ಕಾಳಾಮುಖ ಶೈವ ಪರಂಪರೆಯ ಮಠಗಳು ಅಸ್ತಿತ್ವಕ್ಕೆ ಬಂದವು. ಶರಣಸಿದ್ಧಾಂತ ಹೊತ್ತು ' ವಿರಕ್ತಮಠ ' ಗಳು ರೂಪಗೊಂಡವು. ಯಾವುದೇ ತಾತ್ವಿಕ ವೈಚಾರಿಕ ತತ್ವವಿಲ್ಲದೆ ' ಗುರುಪೀಠ - ವಿರಕ್ತಪೀಠ 'ದ ಮಠಾಧೀಶರು ಇಂದು ಬಯಲು ಕಾಳಗಕ್ಕೆ ಇಳಿದಿದ್ದಾರೆ. ಸಂಶೋಧಕರ ವಿವಾದಾತ್ಮಕ ಹೇಳಿಕೆಗಳು, ಮಠಾಧೀಶರ ಆಷಾಢಭೂತಿತನದಿಂದಾಗಿ, ಧರ್ಮವು ವ್ಯಂಗ್ಯ ಪ್ರಹಸನವಾಗಿದೆ. ಈ ಗೊಂದಲ, ವಿವಾದ, ಚರ್ಚೆ ಮುಗಿಯಲಾರದ ಸಮಸ್ಯೆ.

ಲಿಂಗಾಯತ ಮಠಾಧೀಶರು ಇಂದು ಶರಣರು ಕಲ್ಪಿಸಿದ ' ಜಂಗಮತ್ವದ ' ಸಿದ್ಧಾಂತವನ್ನು ಸಂಪೂರ್ಣ ಕಡೆಗಣಿಸಿ ಜಾತಿಯಾಧಾರಿತ ಮಹೇಶ್ವರ ವರ್ಗಕ್ಕೆ ಸೇರಿದ ಹಿರೇಮಠದ ವ್ಯಕ್ತಿಗಳು ಮಠಾಧೀಶರಾಗಬೇಕೆನ್ನುವ ಪರಂಪರೆಯು ಮೌಢ್ಯ ಅವಿವೇಕತನದ ಪ್ರತೀಕವಾಗಿದೆ.

ಈಗ ಶರಣಧರ್ಮದ ಆಧುನಿಕತೆ, ತಾತ್ವಿಕ ತೀವ್ರತೆ, ಸಿದ್ಧಾಂತಗಳ ಜಾಗತಿಕ ತುಲನೆಯ ಬಗ್ಗೆ ಗಮನಹರಿಸುತ್ತಾ, ನಮ್ಮ ಲಿಂಗಾಯತ ಮಠಾಧೀಶರು ಇಂತಹ ಸಿದ್ಧಾಂತ ಪರಿಪಾಲನೆಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿದ್ದಾರೆ ? ಅವರಲ್ಲಿ ಬೇಕಾದ ಶೈಕ್ಷಣಿಕ, ಪರಿಸರ, ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ ಪ್ರಜ್ಞೆಗಳು ಅವುಗಳನ್ನು ಅಳವಡಿಸುವ ತಾಂತ್ರಿಕ ನೈಪುಣ್ಯ ಹಾಗೂ ಚಾಣಾಕ್ಷತನದ ಬಗ್ಗೆ ನೋಡೋಣ. ಮಠಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವುದರಿಂದ ಮೊದಲ್ಗೊಂಡು, ಅವರಲ್ಲಿ ಧಾರ್ಮಿಕ ಸಹಿಷ್ಣುತೆ, ಭಾವೈಕ್ಯ, ವೈಚಾರಿಕತೆಯ ನೆಲೆಗಟ್ಟುಗಳಾಗಬೇಕು. ಮಠಾಧೀಶರು ಕರ್ನಾಟಕದಲ್ಲಿ ಶೈಕ್ಷಣಿಕ ಕ್ಷೇತ್ರದ ಬೆನ್ನೆಲುಬಾಗಿ ಪ್ರಸಾದನಿಲಯಗಳನ್ನು ಸ್ಥಾಪಿಸಿ, ಶೈಕ್ಷಣಿಕ ಸಂಸ್ಥೆಗಳನ್ನು ಹುಟ್ಟುಹಾಕಿ ಬಹುದೊಡ್ಡ ಕೆಲಸವನ್ನೇ ಮಾಡಿರುವರು. ಈ ನಿಟ್ಟಿನಲ್ಲಿ ಸುತ್ತೂರು ಮಠದ ಶಿಕ್ಷಣ ಕೇಂದ್ರಗಳು ಹಾಗೂ ಬೆಳಗಾವಿ ನಾಗನೂರ ಮಠದಡಿಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಲಿಂಗಾಯತ ಕೇಂದ್ರ ಸಂಶೋಧನ ಗ್ರಂಥಾಲಯಗಳು ಜ್ಞಾನದಾಸೋಹದ ಪ್ರತೀಕವಾಗಿವೆ. ಒಳ್ಳೆಯ ಧ್ಯೇಯ ಧೋರಣೆ, ಆಶಯದೊಂದಿಗೆ ಆರಂಭವಾದ ಸಂಸ್ಥೆಗಳು ಇಂದು ವ್ಯಾಪಾರೀ ಮಳಿಗೆಗಳಾಗಿವೆ. ಆಧುನಿಕರಲ್ಲಿ ಆಧುನಿಕರಂತೆ (Modest among the Modern) ಶರಣರು ತಮ್ಮ ತತ್ವ ಪ್ರತಿಪಾದಿಸಿದ್ದಾರೆ. ಶರಣರು, ವಚನಕಾರರು ಬೋಧಿಸಲಿಲ್ಲ; ನಡೆ-ನುಡಿಗಳಲ್ಲಿ ಸಮನ್ವಯ ಕಂಡುಕೊಂಡರು.

೨೦ ನೇ ಶತಮಾನದ ಆರಂಭದಲ್ಲಿ ನಿಜಾಮಶಾಹೀ ಆಡಳಿತದ ದಟ್ಟ ಪ್ರಭಾವದಲ್ಲಿ ಹೊರಗೆ ಉರ್ದು ನಾಮಫಲಕ ಹಾಕಿ ಒಳಗೆ ಕನ್ನಡ ಶಾಲೆಗಳನ್ನು ನಡೆಸಿದ್ದ ದಿಟ್ಟ ವಿರಕ್ತರಾದ ಭಾಲ್ಕಿ ಹಿರೇಮಠದ ಲಿಂ. ಶ್ರೀ ಮ. ಘ. ಚ. ಚನ್ನಬಸವ ಪಟ್ಟದ ದೇವರು ನಮಗೆ ಆದರ್ಶದ ಚೇತನವಾಗಿದ್ದಾರೆ. ದಾರಿಯುದ್ದಕ್ಕೂ ಸಂಚಾರ ಮಾಡಿ ಹಳ್ಳಿ-ಪಟ್ಟಣಗಳಲ್ಲಿ ಬಸವತತ್ವ ಪ್ರಚಾರಗೈದ ಅಥಣಿಯ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳ ಘನಕಾರ್ಯ ಸ್ತುತ್ಯಾರ್ಹ. ಶತಮಾನೋತ್ಸವಕ್ಕೆ ನೀಡಲು ಬಂದ ಭಕ್ತರ ಹಮ್ಮಿಣಿಯ ಹಣವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ನೀಡಿ, ಅಲ್ಲಿ ' ಬಸವ ಅಧ್ಯಯನ ಪೀಠ ' ಸ್ಥಾಪಿಸಿದ ಮುರಗೋಡದ ಶ್ರೀ ಮಹಾಂತಶಿವಯೋಗಿಗಳು ಆಧುನಿಕ ಚಿಂತಕರು. ಇದೇ ರೀತಿ ಹಾನಗಲ್ಲ ಕುಮಾರ ಮಹಾಸ್ವಾಮಿಗಳು ಅಂಧರಿಗಾಗಿ ' ಗದಗದಲ್ಲಿ ವೀರೇಶ್ವರ ಪುಣ್ಯಾಶ್ರಮ ಸ್ಥಾಪಿಸಿದ ಪಂಚಾಕ್ಷರ ಗವಾಯಿ, ಡಾ. ಪುಟ್ಟರಾಜ ಗವಾಯಿಯವರಂತಹ ಶ್ರೇಷ್ಠಮಟ್ಟದ ಗಾಯಕ ವಿದ್ವಾಂಸರನ್ನು ರೂಪುಗೊಳಿಸಿದರು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಟಿಳಕರೊಂದಿಗೆ ಹುಬ್ಬಳ್ಳಿಯಲ್ಲಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ವಿಮೋಚನೆಗಾಗಿ ಕರೆನೀಡಿದ ಪೂಜ್ಯ ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳು ಇಂದು ದಂತಕತೆಯಾಗಿದ್ದಾರೆ. ಚಿತ್ತರಗಿ ಇಳಕಲ್ಲ ಮಹಾಸ್ವಾಮಿಗಳು, ಸಂತೆಕೆಲ್ಲೂರಿನ ಘನಮಠದ ನಾಗಭೂಷಣ ಶಿವಯೋಗಿಗಳು, ಚಿತ್ರದುರ್ಗ, ಸಿದ್ಧಗಂಗಾ, ಸುತ್ತೂರು, ಗದಗ, ನಾಗನೂರ ಶ್ರೀಗಳು, ತಪೋವನದ ಲಿಂ. ಶ್ರೀ ಕುಮಾರ ಮಹಾಸ್ವಾಮಿಗಳು, ಹೀಗೆ ಅನೇಕ ಮಠಾಧೀಶರು ಸಾಮಾಜಿಕ ವ್ಯವಸ್ಥೆಗೆ ನಿರಂತರವಾಗಿ ದುಡಿದ, ದುಡಿಯುತ್ತಿರುವ ಮಹಾಚೇತನಗಳು.

ಇತ್ತೀಚಿನ ನಿದರ್ಶನವೆಂದರೆ ಗದುಗಿನ ತೋಂಟದಾರ್ಯಮಠದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ೧೯೮೨-೮೩ರಲ್ಲಿ ಗೋಕಾಕ ವರದಿಯ ಭಾಷಾ ಚಳುವಳಿಯಲ್ಲಿ ನೇರವಾಗಿ ಪಾಲ್ಗೊಂಡು ಆಮರಣ ಉಪವಾಸ ಕೈಗೊಂಡರು. ಶ್ರೀಮಠದಲ್ಲಿ ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯಿಕ ಹೀಗೆ ಅನೇಕ ಮೌಲಿಕ ಚಟುವಟಿಕೆಗಳು, ನಿರಂತರವಾಗಿ ನಡೆಯುತ್ತಿವೆ. ಇದರಂತೆಯೇ ಜಗದ್ಗುರು ಪೀಠವನ್ನು ತ್ಯಜಿಸಿದ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ರಾಜ್ಯಾದ್ಯಂತ ಬಸವತತ್ವವನ್ನು ಪ್ರಸಾರಗೊಳಿಸುವ ಪುಣ್ಯಕಾರ್ಯ ಕೈಗೊಂಡಿರುವರು. ಚಿತ್ತರಗಿ ಇಳಕಲ್ಲ ಮಠದ ಶ್ರೀ ಮಹಾಂತ ಸ್ವಾಮಿಗಳು ಮಹಾಂತ ಜೋಳಿಗೆ ಹೊತ್ತು ಭಕ್ತರಲ್ಲಿಯ ದುಶ್ಚಟಗಳನ್ನು ತಮ್ಮ ಮಹಾಂತ ಜೋಳಿಗೆಯಲ್ಲಿ ತುಂಬಿಕೊಳ್ಳುತ್ತಿದ್ದಾರೆ.

ಇಷ್ಟೇ ಅಲ್ಲದೆ ಮಠಗಳು ಪರಿಸರ ಪ್ರಜ್ಞೆಯ ಪರಿಕರಗಳಾಗಬೇಕು. ನಮ್ಮ ನೆಲ-ಜಲಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಹಾಗೂ ಜನರಲ್ಲಿ ಇವುಗಳ ಬಗ್ಗೆ ಜಾಗೃತಿ ಮೂಡಿಸುವ ಕೇಂದ್ರಗಳಾಗಬೇಕು. ವನಮಹೋತ್ಸವವನ್ನು ಆಚರಿಸುವ, ಪ್ರಾಣಿ-ಪಕ್ಷಿಗಳಲ್ಲಿ ದಯೆ ತಾಳಿ ಅವುಗಳನ್ನು ಸಾಕುವ ಮತ್ತು ನಮ್ಮ ಸುತ್ತ-ಮುತ್ತಲಿನ ಪರಿಸರ ನೈರ್ಮಲ್ಯೀಕರಣದ ಬಗ್ಗೆ ಅರಿವು ಮೂಡಿಸುವುದಾದರೆ ಮಠಗಳು ಧನ್ಯ. ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ಶ್ರೀಗಳು ಸಸಿನೆಡುವ ಕಾರ್ಯಕ್ರಮಗಳ

ಮೂಲಕ ಪರಿಸರ ಕಾಳಜಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜಲಾಸಯುಸ ಪ್ರದೇಶಗಳಲ್ಲಿನ ಕೆರೆ-ಬಾವಿಗಳ ಹೂಳೆತ್ತುವ ಕಾರ್ಯಕ್ರಮಗಳೂ ಮಠಾಧೀಶರಿಂದ ಆಗಬೇಕಾಗಿವೆ. ಮಠಗಳೆಂದರೆ ಸೇವಾ ಕೇಂದ್ರಗಳಂತೆ; ಅವು ಹಸಿದ ಹೊಟ್ಟೆಯ ಅನ್ನವಾಗಬೇಕು, ಕೂಲಿಗಳಿಗೆ ಕಾಳು ಕೊಡುವುದರ ಜತೆಗೆ ಗಂಜಿ ಕೇಂದ್ರಗಳಂತೆ ವರ್ತಿಸುವ ಪುಣ್ಯ ಆಲಯಗಳಾಗಬೇಕು.

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿಸಿದಾಗ, ಧಾರವಾಡದ ಊರ ಹೊರವಲಯದಲ್ಲಿರುವ 'ಡಬಗಳ್ಳಿ ಮಠ'ವು ಲಿಂ. ಮೃತ್ಯುಂಜಯ ಸ್ವಾಮಿಗಳ ಕರ್ತೃತ್ವಶಕ್ತಿಯಿಂದಾಗಿ ಬಡವಿದ್ಯಾರ್ಥಿಗಳ ದಾಸೋಹ ಕೇಂದ್ರವಾಗಿ ಪರಿಣಮಿಸಿತು. ಬಹುಶಃ ಈಗ ಆಧುನಿಕತೆಯ ಅರ್ಥ, ವ್ಯಾಪ್ತಿ, ಅಗತ್ಯತೆಯ ವಿವರ ತಿಳಿದಿರಬಹುದು. ಸಮಷ್ಟಿಯ ಸಮಗ್ರ ಬೆಳವಣಿಗೆ, ವಿಕಾಸದಲ್ಲಿ ಮಠಾಧೀಶರ ಆಧುನಿಕ ಚಿಂತನೆಯ ಪಾತ್ರ ಬಲು ದೊಡ್ಡದು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ 'ಬೀಜ ಮೊದಲು, ವೃಕ್ಷ ಮೊದಲು' ಎಂಬ ಗೊಡ್ಡು ಚರ್ಚೆಯನ್ನು ತಿರಸ್ಕರಿಸಿ ಮಠಾಧೀಶರು ತಮ್ಮನ್ನು ಸಮಾಜದಲ್ಲಿ ಹೇಗೆ ತೊಡಗಿಸಬಲ್ಲರು ಎಂಬುದರ ಬಗ್ಗೆ ಗಮನ ಹರಿಸಬೇಕು. ಅತ್ಯಂತ ಜ್ವಲಂತ ಸಮಸ್ಯೆ ಎನಿಸಬಹುದಾದ 'ಬಡತನ' ಒಂದು ಸಾಮಾಜಿಕ ಪಿಡುಗು. ಇದನ್ನು ಬಸವಾದಿ ಪ್ರಮಥರ 'ಕಾಯಕ ದಾಸೋಹ'ದ ನಿಲುವಿನಲ್ಲಿ ಹೇಗೆ ಪರಿಹರಿಸಬೇಕೆಂಬ ವಿಚಾರ ಮಠಾಧೀಶರಿಗಿರಬೇಕು. ಸ್ವಯಂ ಉದ್ಯೋಗ, ಕೃಷಿ, ವಾಣಿಜ್ಯ, ಸಹಕಾರ ಕ್ಷೇತ್ರಗಳನ್ನು ಉತ್ತಮಗೊಳಿಸಬೇಕು. ಪ್ರತಿಯೊಬ್ಬರಿಗೂ ದುಡಿಮೆಯ ಅವಕಾಶಗಳು ದೊರಕುವ ಹಾಗಾಗಬೇಕು.

ರೈತ, ಕೃಷಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಆಧುನಿಕ ಸೌಲಭ್ಯಗಳನ್ನು ಪೂರೈಸಬೇಕು. ಅಥಣಿಯ ದೇವದಾಸಿ ವಿಮೋಚನಾ ಸಂಸ್ಥೆಯವರು ಯೋಜಿಸುವ ಕಾರ್ಯಗಳಂತಹ ಅನೇಕಾನೇಕ ಕೆಲಸಗಳನ್ನು ಇಂದು ಮಠಾಧೀಶರು ಕೈಗೊಳ್ಳಬೇಕಾಗಿದೆ. ಸಮಾಜದಲ್ಲಿನ ಪ್ರತಿಯೊಬ್ಬ ನಾಗರಿಕನಿಗೂ ವಸತಿ, ಶಿಕ್ಷಣ, ಆರೋಗ್ಯದ ಸೌಲಭ್ಯ ದೊರಕುವ ನಿಟ್ಟಿನಲ್ಲಿ ಮಠಾಧೀಶರು ಕಾರ್ಯ ಪ್ರವೃತ್ತರಾಗಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹೆರಿಗೆಆಸ್ಪತ್ರೆ, ಜಾನುವಾರು ಆಸ್ಪತ್ರೆಗಳು ಅತ್ಯವಶ್ಯ. ಆರೋಗ್ಯ ಪ್ರಜ್ಞೆಯನ್ನು ಒಳಗೊಂಡಂತೆ ಕುಟುಂಬ ಕಲ್ಯಾಣ ಯೋಜನೆ, ಸಾಂಕ್ರಾಮಿಕ ರೋಗಗಳು ಟಿ. ಬಿ., ಏಡ್ಸ್, ಟೈಫಾಯಿಡ್, ಮಲೇರಿಯಾ, ಮುಂತಾದವುಗಳ ಬಗ್ಗೆ ಅರಿವು ಮೂಡಿಸುವತ್ತ ಮಠಾಧೀಶರು ಕಾರ್ಯಪ್ರವೃತ್ತರಾದರೆ ಬಸವಣ್ಣನವರ ಕನಸಿನ ಸತ್ಯಶುದ್ಧಸಮಾಜ ನಿರ್ಮಾಣ ಸಾಧ್ಯವೆನಿಸುವುದು. ಸರಕಾರದ ಹಲವಾರು ಯೋಜನೆಗಳಡಿಯಲ್ಲಿ ಮಠಾಧೀಶರು ಮುಂದಾಗಿ ಜನ-ಸಾಮಾನ್ಯರ ಕುಂದು ಕೊರತೆಗಳನ್ನು ಪೂರೈಸುವಲ್ಲಿ ಸಫಲರಾಗಬೇಕು.

' ಮರಕ್ಕೆ ಬಾಯಿ ಬೇರೆಂದು ಕೆಳಗೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ ' ಎಂದು ಬಸವಣ್ಣ ಹೇಳುವಂತೆ, ಲಿಂಗದ ಬಾಯಿ ಜಂಗಮ (ಸಮಾಜ) ವೆಂದು ಭಾವಿಸಬೇಕು. ಕಮ್ಮಟ, ಗೋಷ್ಠಿ, ಸಮಾವೇಶಗಳಲ್ಲಿ ಜನಪ್ರದರ್ಶನ ಮಾಡಿ ಆಷಾಢಭೂತಿಯ ಆತ್ಮವಂಚಕತನದ ನಯ-ನುಡಿಗಳನ್ನು ಹೇಳುವುದನ್ನು ಮಠಾಧೀಶರು ನಿಲ್ಲಿಸಲಿ. ಆಧುನಿಕತೆಗೆ ತೀರಾ ಹತ್ತಿರವೆನಿಸುವ ಕಂಪ್ಯೂಟರ್‌ನಂತಹ ಜ್ಞಾನವನ್ನು ಪಡೆಯುವುದರಿಂದ ವಿಶ್ವಸಂಸ್ಥೆಯವರು ಪ್ರಾಯೋಜಿಸುವ ದತ್ತಿ ನಿಧಿಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡಲ್ಲಿ ಮಠಾಧೀಶರು ಹೊಸ ಕ್ರಾಂತಿಯನ್ನೇ ಹುಟ್ಟು ಹಾಕಬಹುದು. ಮಾರ್ಕ್ಸ್ ಆರ್ಥಿಕ ಕ್ರಾಂತಿ ಪ್ರತಿಪಾದಿಸಿದರೆ, ಶರಣರು ಸಾಮಾಜಿಕ ಕ್ರಾಂತಿ ಕೈಗೊಂಡರು. ಡಾ. ಅಂಬೇಡ್ಕರ್ ದಲಿತರ ನ್ಯಾಯಕ್ಕಾಗಿ ಹೋರಾಡಿದರೆ, ಬಸವಣ್ಣ ದಲಿತರೊಂದಿಗೆ ಗುರುತಿಸಿಕೊಂಡನು.

ಮೂರ್ತಿ ಪೂಜೆಯನ್ನು ಸಾರಾಸಗಟವಾಗಿ ತಿರಸ್ಕರಿಸಿದ ಶರಣ ಸಂಪ್ರದಾಯದ ಅನೇಕ ವಿರಕ್ತ ಮಠಗಳಲ್ಲಿಂದು ಗದ್ದುಗೆಪೂಜೆ, ಲಕ್ಷ ದೀಪೋತ್ಸವ, ಕೋಟಿ ಬಿಲ್ವಾರ್ಚನೆ, ರುದ್ರಾಭಿಷೇಕ, ಅಡ್ಡಪಲ್ಲಕ್ಕಿಯಂತಹ ಅವೈಜ್ಞಾನಿಕ ಕ್ರಿಯೆಗಳು ಅವ್ಯಾಹತವಾಗಿ ಜರುಗುತ್ತಿರುವುದು ದುರಂತವೇ ಸರಿ. ಒಳ್ಳೆಯ, ಆದರ್ಶ ಮಠಾಧೀಶರನ್ನು ನೆನಪಿಸುವಂತೆ, ಹೆಣ್ಣು, ಹೊನ್ನು, ಮಣ್ಣಿಗಾಗಿ ಅನೇಕ ಆರೋಪ, ವಿವಾದಗಳನ್ನು ಹೊತ್ತ ಮಠಾಧೀಶರನ್ನು ನಾವು ಮರೆಯುವಂತಿಲ್ಲ.

' ಆಧುನಿಕತೆ ' ಇಂದು ಲೇಖನ, ಭಾಷಣಕ್ಕೆ ಬೇಕಾದ ಪಾರಿಭಾಷಿಕ ಪದವಾಗಿದೆ. '' ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ಪ ಲಿಂಗವು ಘಟಸರ್ಪ ನೋಡಾ '' ಎಂದು ಬಸವಣ್ಣ ಹೇಳಿದಂತೆ, ನಡೆ-ನುಡಿಗಳ ಸಮನ್ವಯತೆಗೆ ಶರಣರು ಆದ್ಯತೆ ನೀಡಿದ್ದಾರೆ. ಅಲ್ಬೇನಿಯಾದಲ್ಲಿ ಹುಟ್ಟಿದ ಮದರ್ ಥೆರೇಸಾ ಭಾರತದ ಕುಷ್ಠರೋಗಿಗಳನ್ನು ಉಪಚರಿಸುವುದು ಮಾನವೀಯತೆಯ ಪ್ರತೀಕವಾಗಿದೆ. ಬಾಬಾ ಅಮ್ಟೆ, ಸುಂದರಲಾಲ ಬಹುಗುಣ, ಮೇಧಾ ಪಾಟ್ಕರ್, ಡಾ. ಸುದರ್ಶನ್ ಇಂದಿಗೂ ನಮ್ಮ ಕಣ್ಣೆದುರು ನಿಲ್ಲುವ ಜೀವಂತ ಸಾಕ್ಷಿಗಳು.

ಲಿಂಗಾಯತ ಮಠಾಧೀಶರು ವಾದ ವಿವಾದದ ಮೊಂಡುತನವನ್ನು ಬಿಟ್ಟು ತಮ್ಮ ಕರ್ತವ್ಯದ ಕಡೆಗೆ ಗಮನ ಹರಿಸಿದರೆ, ಇದೊಂದು ಅತ್ಯಾಧುನಿಕ ಶ್ರೇಷ್ಠ ಧರ್ಮವೆಂದು ಸಾಬೀತಾಗುತ್ತದೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ಅಧ್ಯಯನ ಮಾಡಿ ' ಕಾಯಕ-ದಾಸೋಹ ' ತತ್ವದಡಿಯಲ್ಲಿ ಮಠಾಧೀಶರಿಂದು ಧರ್ಮದ ಕಾರ್ಯಗಳನ್ನು ಮಾಡಲಿ.

ಕರ್ನಾಟಕದಲ್ಲಿಂದು ಆಧುನಿಕ ಚಿಂತನೆಯ ಯುವ ಮಠಾಧೀಶರು ರೂಪಗೊಳ್ಳಬೇಕು. ನಿಡುಮಾಮಿಡಿ ಶ್ರೀವೀರಭದ್ರಚೆನ್ನಮಲ್ಲಸ್ವಾಮಿಗಳು, ಯರನಾಳ ಶ್ರೀ ಸಂಗನಬಸವ ಸ್ವಾಮಿಗಳು, ಅಥಣಿಯ ಮೋಟಗಿಮಠದ ಶ್ರೀ ಚೆನ್ನಬಸವ

ಸ್ವಾಮಿಗಳು ಶರಣ ಸಿದ್ಧಾಂತದಲ್ಲಿ ನಂಬಿಕೆ ಇಟ್ಟವರಿಗೆ ಆಶಾದಾಯಕ ಸ್ಫೂರ್ತಿಯ ಚೇತನಗಳು. ಬೌದ್ಧಧರ್ಮೀಯ ಲಾಮಾಗಳಂತೆ ಶರಣಧರ್ಮದ ಮಠಾಧೀಶರು ಆಧುನಿಕ ಅಗತ್ಯತೆಯನ್ನು ಅರಿತು ಬಾಳಬೇಕು.

ಒಟ್ಟಿನಲ್ಲಿ ಮಠಗಳು ಪರಿವರ್ತನೆಯ ಕೇಂದ್ರಗಳಾಗಿ ಪರಿಣಮಿಸಬೇಕು. ಒಳಹೊಕ್ಕು ಯಾವ ಕಲ್ಲು ಸಹ ಸುಂದರ ಮೂರ್ತಿಯಾಗದೇ ಹೊರಬರಬಾರದು. ಓಡುವ ವಿಶ್ವದ ಜತೆಗೆ ಓಡಬೇಕು. ಕ್ರಿಯಾಶೀಲತೆ, ಬದ್ಧತೆ, ಪ್ರಾಮಾಣಿಕ ಕಳಕಳಿ. ನಿರಂತರ ಪ್ರಯತ್ನದಿಂದಾಗಿ ಇಂದಿನ ಮಠಾಧೀಶರು ಶರಣರು ಹಚ್ಚಿದ ಅಮರ ಜ್ಯೋತಿಗಳನ್ನು ಪ್ರಜ್ವಲಿಸುವ ಸ್ಫೂರ್ತಿ ತೈಲವಾಗಬೇಕು.

■■

ಟಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ವೀರಶೈವ ಮಠಗಳು : ಸಾಮಾಜಿಕ ಪ್ರಜ್ಞೆ

● ಮಹಾಲಿಂಗ ಮಂಗಿ

ಕರ್ನಾಟಕದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಪ್ರತಿಕ್ಷೇತ್ರದಲ್ಲೂ ವೀರಶೈವ ಮಠಾಧೀಶರ ಪಾತ್ರ, ಬೀರಿದ ಪ್ರಭಾವ ಯಾರೂ ಅಲ್ಲಗಳೆಯಲಾಗದು. ಗಣನೀಯ ಪ್ರಮಾಣದ ವೀರಶೈವರಿರುವಂತೆಯೇ, ಚಾರಿತ್ರಿಕವಾಗಿ ಗುರುಪೀಠ-ಮಠಗಳೂ ಗಮನಾರ್ಹ ಸ್ಥಾನ-ಮನ್ನಣೆ ಹೊಂದಿವೆ. ನಮ್ಮ ಜನಜೀವನದ ಅವಿಭಾಜ್ಯ ಅಂಗವಾಗಿ, ಸಂಸ್ಕೃತಿಯ ಭಾಗವಾಗಿ, ಆಗು ಹೋಗುಗಳ ಸೂತ್ರಧಾರನಾಗುವಷ್ಟು ಮಠಗಳು ಪ್ರಾಮುಖ್ಯತೆ ಪ್ರಾಬಲ್ಯ ಸಂಪಾದಿಸಿವೆ ಎಂದರೂ ಉತ್ಪ್ರೇಕ್ಷೆಯಾಗದು.

ನಾಡಿನ ಉದ್ದಗಲಕ್ಕೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ವೀರಶೈವರ ಅನೇಕ ಮಠಗಳಿವೆ. ' ರಂಭಾಪುರಿ ' ಹೊರತುಪಡಿಸಿ ' ಕಾಶಿ, ಉಜ್ಜಯಿನಿ, ಶ್ರೀಶೈಲ, ಕೇದಾರ ' ಪಂಚಾಚಾರ್ಯ ಪೀಠಗಳು ರಾಜ್ಯದ ಹೊರಗಿದ್ದರೂ ಅನುಯಾಯಿಗಳಿಲ್ಲೇ ಇದ್ದು, ಕಾರ್ಯಕ್ಷೇತ್ರ ಕರ್ನಾಟಕವೇ ಆಗಿದೆ. ಮಿಕ್ಕ ವಿರಕ್ತಗುರುಪೀಠಗಳು ನಾಲ್ಕೈದು ಊರಿಗೊಂದಾದರೂ ಉಂಟು. ಹುಕ್ಕೇರಿ-ಅಥಣಿಯಂಥ ಒಂದೇ ಊರಲ್ಲಿ ಹಲವು ಮಠಗಳೂ ಉಂಟು. ಪ್ರತಿ ಮಠಕ್ಕೆ ಅವುಗಳದ್ದೇ ಆದ ಚಾರಿತ್ರಿಕ ಹಿನ್ನೆಲೆ, ವಿಶಿಷ್ಟ ಪರಂಪರೆಗಳಿವೆ. ವಿರಕ್ತಪರಂಪರೆಯಲ್ಲಿ ಅನೂಚಾನವಾಗಿ ಗುರು ಸನ್ಯಾಸ ದೀಕ್ಷೆ, ಪಟ್ಟಾಧಿಕಾರ ಮುಂದುವರೆದು ವೀರಶೈವರ ಹೊರತಾಗಿ ಅನ್ಯ ಅಸಂಘಟಿತ ಜಾತಿ ಜನಕ್ಕೂ ಗುರುವಾಗಿ ಗೌರವ ದಾನಕಾಣಿಕೆ ಪಡೆಯುತ್ತ ಕೈಲಾದಷ್ಟು ಗುರುಬೋಧೆ, ದರ್ಶನಾಶೀರ್ವಾದಗಳನ್ನು ಕರುಣಿಸುತ್ತ ಬಂದಿದ್ದಾರೆ.

ಈ ಶತಮಾನದಲ್ಲಿ ಗುರುಗಳು ಧರ್ಮಾಚರಣೆ ಮಾಡಿ ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದಲ್ಲಿ ಸಾಧಿಸಿದ ಕ್ರಾಂತಿ-ಪ್ರಗತಿ, ಸೇವೆ-ಸಂಘಟನೆ ಅನನ್ಯ! ಸರಕಾರಕ್ಕೆ ಸರಿಜೋಡಿಯಾಗಿ ನಿರೀಕ್ಷೆ ಮೀರಿ ಕಾರ್ಯಮಾಡಿದ್ದಾರೆ.

ಗುರುಪರಂಪರೆ :

ಪ್ರತಿ ಮಠ-ಪೀಠದ ಆದ್ಯಪ್ರವರ್ತಕ ತಪಸ್ವಿ, ಸಿದ್ಧಸಾಧಕ, ಕಾರಣ ಪುರುಷ ಲೀಲಾಮೂರ್ತಿಯಾಗಿದ್ದು ಅನಂತರ ಆ ಪರಂಪರೆಯಲ್ಲಿ ಪೀಠವೇರಿದವರೆಲ್ಲ ಮೂಲ

ಪುರುಷನ ಆತ್ಮೋನ್ನತಿಯ ಎತ್ತರಕ್ಕೆ ಏರಿದರಿಲ್ಲೋ ಹೇಳಲಾಗದು. ಆದರೆ ಆಸ್ಥಾನದ ಗೌರವ, ಅಧಿಕಾರ, ಒಡೆತನ ಹೊಂದಿದ್ದರು. ಅಧಿಕ ಗೌರವ ಸಂಪಾದಿಸಿಕೊಂಡು ಬೆಳೆದರು. ಮಠವನ್ನು ಬೆಳೆಸಿದರು.

ಈ ಶತಮಾನದ ಪೂರ್ವದ ಮಠ-ಮಠಾಧೀಶರ ಚಿತ್ರ, ಪಾತ್ರ, ಪ್ರಭಾವ ಇಷ್ಟಿರಲಿಕ್ಕಿಲ್ಲ. ಅಂದಿನ ಮಠಗಳ ಸ್ಥಿತಿ ಮಠಾಧೀಶರ ಮನಸ್ಥಿತಿಯಲ್ಲಿ ಇಂದಿನಷ್ಟು ಪ್ರಗತಿ ಪರಿಪಕ್ವ ಆಗಿರಲಿಲ್ಲ. ಪ್ರತಿಷ್ಠಿತ ಕೆಲ ಪೀಠ ಬಿಟ್ಟರೆ ಬಹುತೇಕ ಮಠಗಳು ಪೂರ್ವನಿಯೋಜಿತ, ಅದೇ ಹಿರೇಮಠ ಜಂಗಮ ಮನೆತನದ ಆಸ್ತಿಯಿದ್ದಂತೆ.

ಬ್ರಹ್ಮಜ್ಞಾನವಿರಲಿ ಮಂತ್ರ-ತಂತ್ರ, ಶಾಸ್ತ್ರಪುರಾಣ, ವಚನ ಉಪನಿಷತ್ತು ವೇದಾಂತ ದೂರದ ಮಾತಾಗಿತ್ತು. ನಮ್ಮ ಅಜ್ಞ ಸಮಾಜದ ನಿರೀಕ್ಷೆಯೂ ಅಷ್ಟೇ. ಆಸನದ ಮೇಲೆ ಕೂತು ಕಾಲಿಗೆ ಬಿದ್ದವರಿಗೆ ಖಾರೀಕು ಕಲ್ಲುಸಕ್ಕರೆ ಚೂರು ನೀಡಿದರೆ ಸಾಕಿತ್ತು. ಅವರ ಓದು ವಿದ್ಯೆಯೂ ಅಷ್ಟಕಷ್ಟೇ. ಆದರೂ ಅಲ್ಲಲ್ಲಿ ಆತ್ಮಜ್ಞಾನಿ ಅನುಭಾವಿಗಳು, ವಿರಕ್ತ ವಿಭೂತಿಗಳು ಬೆಳಗಿದ್ದಾರೆ.

ಸೂಕ್ತ ಸದ್ಗುರುವಿನ ಮಾರ್ಗದರ್ಶನ, ಜ್ಞಾನಾರ್ಜನೆ ಅವಕಾಶಗಳು ಕಡಿಮೆ, ನೈತಿಕ ಆಧ್ಯಾತ್ಮಿಕ ಶಿಕ್ಷಣ ಸಂಸ್ಕಾರಗಳ ಕೊರತೆ, ಸಂಪರ್ಕ ಮಾಧ್ಯಮಗಳ ಅಭಾವ, ಸಂಕುಚಿತ ಕಣ್ಣು ಪಟ್ಟಿಕಟ್ಟಿಕೊಂಡು ಸ್ವನಿರ್ಮಿತ ಗೋಡೆಗಳ ನಡುವೆ ಬಂಧಿಯಾಗಿದ್ದು. ಸ್ವಾಮಿಗಳ ವಿಕಾಸಕ್ಕೆ ಅಡಚಣೆಗಳು, ಇದು ಎಲ್ಲ ಮಠಾಧೀಶರ ಚಿತ್ರಣವಲ್ಲ. ಇದೇ ಶತಮಾನದಲ್ಲಿ ಜನಿಸಿ ಬಂದು ಈ ಧರೆಯನ್ನು ಪಾವನ ಮಾಡಿದ ಪ್ರಾತಃಸ್ಮರಣೀಯರಾದ ಅಥಣಿಯ ಶಿವಯೋಗಿಗಳು, ಚನ್ನಬಸವ ಶಿವಯೋಗಿಗಳು, ಮರಡಿಮಠದ ಕೆಂಪಯ್ಯಸ್ವಾಮಿಗಳು, ಮೂರುಸಾವಿರ ಮಠದ ಗುರುಸಿದ್ಧೇಶ್ವರ ಸ್ವಾಮಿಗಳು, ಅರಭಾವಿ ಪುಣ್ಯಾರಣ್ಯದ ಮಹಾಂತಜ್ಜ, ಹಾನಗಲ್ ಕುಮಾರ ಸ್ವಾಮಿಗಳು ಮೊದಲಾದವರು ನಾಡನ್ನೇ ಬೆಳಗಿದರು. ವೀರಶೈವ ಮಠಾಧೀಶರಲ್ಲದಿದ್ದರೂ ಶ್ರೀ ಸಿದ್ಧಾರೂಢರು, ಜಡಿಸಿದ್ಧೇಶ್ವರರು. ಶರೀಫರು, ಮಡಿವಾಳಪ್ಪ. ಮುಗಳಖೋಡ ಯಲ್ಲಾಲಿಂಗರು. ಇಂಚಗೇರಿ ಗಿರಿಮಲ್ಲೇಶ್ವರ-ಮಾಧವಾನಂದರು ಲಕ್ಷಾಂತರ ಅನುಯಾಯಿಗಳನ್ನು ಹೊಂದಿದ್ದರು. ಅವರ ಹೆಸರಲ್ಲಿ ಮಠ-ಮಂದಿರ ಕ್ಷೇತ್ರಗಳಾಗಿವೆ.

ಸ್ವಾತಂತ್ರ್ಯೋತ್ತರದಲ್ಲಿ ಮಠಾಧೀಶರು :

ಶೈಕ್ಷಣಿಕ ಕ್ರಾಂತಿ, ಸಂಪರ್ಕ-ಸಮೂಹ ಮಾಧ್ಯಮಗಳಲ್ಲಿ ಪ್ರಗತಿ, ವೈಜ್ಞಾನಿಕ ಬೆಳವಣಿಗೆಗಳಿಂದ ಸಮಾಜದ ಜೀವನ ವಿಧಾನ ಬದಲಾದಂತೆ ಮಠಮಾನ್ಯರ ಧ್ಯೇಯದೃಷ್ಟಿ ಕಾರ್ಯವ್ಯಾಪ್ತಿಗಳೂ ಬದಲಾದವು. ವೀರಶೈವ ಮಠಾಧೀಶರೂ ಕಾಲಮಾನಕ್ಕೆ, ವರ್ತಮಾನದ ಅಗತ್ಯಕ್ಕೆ ಸಹಜವಾಗಿ ಸ್ಪಂದಿಸಿದರು. ಧಾರ್ಮಿಕ ನಂಬಿಕೆ ಸಂಪ್ರದಾಯಗಳ ಹಿನ್ನೆಲೆಯೊಂದಿಗೆ ಹೊಸ ಓದು ವಿಜ್ಞಾನ-ಜ್ಞಾನಗಳೊಂದಿಗೆ ತಮ್ಮ

ಪಾತ್ರ ಹೊಣೆಗಳನ್ನು ಸರಿಯಾಗಿ ಗ್ರಹಿಸಿದರು. ಸಮುದಾಯದ ನಡುವೆ ಮಠಗಳು ದ್ವೀಪಗಳಾಗಿ, ಮಠಾಧೀಶರು ಕೂಪಮಂಡೂಕರಾಗಿ ಉಳಿಯಲಿಲ್ಲ.

ಕರ್ನಾಟಕದ ಇಂದಿನ ಮಠಾಧೀಶರು, ಬಹುಭಾಷಾ ಪಂಡಿತರು, ವಾಙ್ಮಯ ವೇದಾಂತ ಸ್ನಾತಕರು, ಪ್ರಬುದ್ಧ ಶಿಕ್ಷಣ ಸಂಸ್ಕಾರವೇತ್ತ ಪ್ರತಿಭಾಸಂಪನ್ನರು, ಲೋಕಾನುಭವಿಗಳೂ ಜನಾನುರಾಗಿಗಳೂ ಆಗಿದ್ದು, ಯುಗಧರ್ಮಕ್ಕೆ ತಕ್ಕಂತೆ ಪ್ರಗತಿಪರ ಸಮನ್ವಯ ದೃಷ್ಟಿಯನ್ನು ಹೊಂದಿದ್ದಾರೆ. ಕೆಲ ಗುರುಗಳು ತೂಕಬದ್ಧವಾಗಿ ತರ್ಕಬದ್ಧವಾಗಿ ಹಳೆಯದನ್ನು ಪೂರ್ಣ ತ್ಯಜಿಸದೆ ನವ್ಯ ದೃಷ್ಟಿ ವಿಚಾರಗಳನ್ನು ಸಾಧ್ಯವಿದ್ದಷ್ಟು ಅಳವಡಿಸಿಕೊಂಡಿದ್ದಾರೆ. "ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ" ಅಂದಂತೆ ಒಳ್ಳೆಯ ಹಳತನ್ನು ಉಳಿಸಿಕೊಂಡು ಉಚಿತ ಹೊಸತನ್ನು ಬೆಳೆಸಿಕೊಂಡು ಸಮನ್ವಯ ಸಾಧಿಸಿದ್ದಾರೆ.

ಇನ್ನು ಕೆಲವರು ಧರ್ಮ-ದೇವರು ಸಂಪ್ರದಾಯಗಳ ಕುರಿತು ವಿಭಿನ್ನದೃಷ್ಟಿಹೊಂದಿದವರು. ಹೊಸ ಸಮಾಜನಿರ್ಮಾಣದ ದ್ರಷ್ಟಾರರಂತೆ ಅವರ ನಿಲುವು ಧೋರಣೆಗಳು ವಿವಾದಾತ್ಮಕವೆನ್ನಿಸುವಷ್ಟರ ಮಟ್ಟಿಗೆ ಸಮುದಾಯ ಅರಿವಿನ ಆಲೋಚನೆಯ ಮೇಲ್‌ಸ್ತರದಲ್ಲಿರತಕ್ಕ ಮಠಾಧೀಶರೂ ಮೂಡಿಬಂದಿದ್ದಾರೆ.

ಶಿವಯೋಗ ಮಂದಿರ - ಗುರುಕುಲ :

ಮಠಾಧೀಶರಿಗೆ ಸೂಕ್ತ ಶಿಕ್ಷಣ ಸಂಸ್ಕಾರ, ವೇದಾಂತ ತರಬೇತಿ ನೀಡಲು ವಟುಗಳಿಗಾಗಿಯೇ ಶಿವಯೋಗ ಮಂದಿರವೆಂಬ ಗುರುಕುಲವನ್ನು ಹಾನಗಲ್ಲ ಕುಮಾರಸ್ವಾಮಿಗಳು ತೆರೆದರು. ಪರಿಣಾಮ ಇಂದಿನ ಶ್ರೀಗಳು ವಿಜ್ಞಾನ ವೇದಾಂತ ಅರಗಿಸಿಕೊಂಡ ಮೇಧಾವಿಗಳು, ಪ್ರಕಾಂಡ ಪಂಡಿತರು. ಪ್ರಚಂಡವಾಗ್ಮಿಗಳು, ನವಸಮಾಜ ನಿರ್ಮಾಣದ ಅಗತ್ಯ ಅನಿವಾರ್ಯತೆ ಅರಿತವರು. ತಮ್ಮ ಕಾಲದಲ್ಲಿ ಏನಾದರೂ ಮಹತ್‌ನ್ನು ಸಾಧಿಸುವ, ಶ್ರೀಮಠದ ಕೀರ್ತಿ ಪ್ರತಿಷ್ಠೆ ಬೆಳೆಸುವ ಮಹತ್ವಾಕಾಂಕ್ಷೆ ಹೊಂದಿದ ಹೊಸಯುಗಪ್ರವರ್ತಕರ ಪಡೆಯನ್ನೇ ನಾವು ಕಾಣುವಂತಾಗಿದೆ.

ಶೈಕ್ಷಣಿಕ ರಂಗದಲ್ಲಿ ಮಠಾಧೀಶರ ಸಾಧನೆ :

ಶಿಕ್ಷಣ ಪ್ರಗತಿಯ ಅಸ್ತ್ರ, ಸಾಮಾಜಿಕ ಶಕ್ತಿ, ವಿವೇಚನೆಯ ಸಾಧನ, ಮಹೋನ್ನತಿಯ ಮಹಾಮಂತ್ರವೆಂದರಿತ ಸ್ವಾಮಿಗಳು ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡಿದರು. ಸಾಮಾಜಿಕ ಪುರೋಭಿವೃದ್ಧಿಗೆ ಅಕ್ಷರ ಜ್ಞಾನವೇ ಬುನಾದಿಯೆಂದರಿತ ಶ್ರೀಗಳು ವಿದ್ಯಾದಾನಕ್ಕೆ ಮುಂದಾದರು. ಕರ್ನಾಟಕದ ಶೈಕ್ಷಣಿಕ ರಂಗದಲ್ಲಿ ಮಠಾಧೀಶರು ಇಂದು ಸಾಧಿಸಿದ ಸಾಧನೆ ಅದ್ವಿತೀಯ ! ಪೂರ್ವ ಪ್ರಾಥಮಿಕದಿಂದ ತೊಡಗಿ ಸ್ನಾತಕೋತ್ತರ, ಮೆಡಿಕಲ್, ಇಂಜನೀಯರಿಂಗ್ ವೃತ್ತಿಶಿಕ್ಷಣ ಐ.ಟಿ. ವರೆಗೆ ಅವರ ಸೇವಾವ್ಯಾಪ್ತಿ ! ಸಿರಿಗೆರೆ, ಚಿತ್ರದುರ್ಗ, ಸುತ್ತೂರು, ಸಿದ್ಧಗಂಗಾ, ತೋಂಟದಾರ್ಯಮಠ,

ಮೂರುಸಾವಿರಮಠ, ಬೆಳಗಾವಿ ನಾಗನೂರುಮಠ, ಕೋಡಿಮಠ ಹೀಗೆ ನೂರಾರು ಮಠ, ಮಠಾಧೀಶರು ಮಹತ್ಸಾಧನೆ ಮಾಡಿದರು. ಭವ್ಯ ಸುಸಜ್ಜಿತ ವಿದ್ಯಾದೇಗುಲ ಕಟ್ಟಿದ್ದಲ್ಲದೆ ಗ್ರಾಮೀಣ ದೀನ-ದುರ್ಬಲ, ಕೆಳಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ದಾಸೋಹದ ಮಹಾಮನೆ, ವಸತಿಗೃಹ ಪ್ರಸಾದ ನಿಲಯ ಮಾಡಿದ್ದು ಅನನ್ಯ.

ಅಂದಿನ ವಿರಕ್ತ ಮಠಗಳು ದಾರಿಹೋಕರ ಒಂದೆರಡು ದಿನಗಳ ತಂಗುದಾಣದಂತಿದ್ದರೆ, ಇಂದಿನ ಮಠಗಳು ನಿತ್ಯ ಜ್ಞಾನ-ಅನ್ನ ದಾಸೋಹ ನೀಡಿ ಬದುಕುವ ದಾರಿ ತೋರುವ ಕೇಂದ್ರಗಳಾಗಿವೆ. ಪ್ರತಿ ಹಳ್ಳಿ-ಪಟ್ಟಣದ ಸಣ್ಣ ಮಠವೂ ಶಿಕ್ಷಣಕ್ಕಾಗಿ ತನ್ನ ಕೈಲಾದ ಸೇವೆ ಸಲ್ಲಿಸುತ್ತಿವೆ. ಸಮಾಜದ ಶಕ್ತಿ ಸಂಪನ್ಮೂಲ ಸಂಘಟಿಸಿ ಸಂಗ್ರಹಿಸಿ ಸಮುದಾಯದ ಸರ್ವಾಂಗೀಣ ಪ್ರಗತಿಗೆ ಶ್ರಮಿಸುತ್ತಿವೆ. ಕರ್ನಾಟಕದ ಮಠಾಧೀಶರು ಶೈಕ್ಷಣಿಕ ರಂಗದಲ್ಲಿ ಪ್ರವೇಶಿಸದೇ ಇದ್ದಲ್ಲಿ ಕರುನಾಡು ಬೆಂಗಾಡು ಆಗುತ್ತಿತ್ತು. ಮೌಢ್ಯದ ಗೂಡಾಗುತ್ತಿತ್ತು. ಇಂದು ಹೊರದೇಶಗಳೂ ಮಾಹಿತಿ ತಂತ್ರಜ್ಞಾನ, ವೈದ್ಯಕೀಯ, ಇಂಜನೀಯರಿಂಗ್ ಉಚ್ಚ ಶಿಕ್ಷಣಕ್ಕಾಗಿ ಕರ್ನಾಟಕವನ್ನರಿಸಿಕೊಂಡು ಬರುವಂತಾಗಿದೆ. ಮೆಚ್ಚಿಕೊಳ್ಳುವ ಇನ್ನೊಂದು ಅಂಶ, ಕೇವಲ ಲಿಂಗವಂತರನ್ನು ಗುರಿಯಾಗಿಟ್ಟುಕೊಳ್ಳದೆ ಸಮಗ್ರ-ಸಮನ್ವಯ ದೃಷ್ಟಿಯಿಂದ ಸಮುದಾಯದ ಪುರೋಭಿವೃದ್ಧಿಗೆ ಆದ್ಯತೆ ನೀಡಿದ್ದನ್ನು ಸಮಾಜ ಸಂಸ್ಮರಿಸಬೇಕು. ಶ್ರೀಗಳು ಶಿಕ್ಷಣ ಮೂಲಕ ಸಂಸ್ಕೃತಿ ಬೆಳೆಸುವ ನಾಡು-ನುಡಿ ಕಟ್ಟುವ ಘನ ಕಾರ್ಯಸಾಧಿಸಿದ್ದಾರೆ. ಬೇರಿಗೆ ನೀರೆರೆದರೆ ವೃಕ್ಷಕ್ಕೆಲ್ಲ ಪೋಷಣೆ ಸಿಗುವಂತೆ ಪ್ರಜ್ಞಾಪ್ರಸಾರಕ್ಕೆ ಜ್ಞಾನದ ಪಂಜನ್ನು ಹಿಡಿದು ಬೆಳಕನ್ನು ಬೀರಿದ್ದಾರೆ.

ಇಂದಿನ ಗುರುಗಳು ಬರೀ ಉತ್ಸವ ಮೂರ್ತಿಗಳಾಗಿಲ್ಲ. ಬಹುಶ್ರುತರು, ಸ್ನಾತಕರು, ಸಂಶೋಧಕರು, ಪ್ರತಿಭಾವಂತ ಸಾಹಿತಿಗಳು, ಸಮುದಾಯದ ಸೇವಕರು, ಮಾರ್ಗದರ್ಶಕರು ಆಗಿದ್ದಾರೆ. ಡಾ. ಜ. ಚ. ನಿ. ೩೦೦ ಗ್ರಂಥ ರಚಿಸಿದರು. ೧೫ ಸಾವಿರ ವಚನ ಬರೆದರು. ಮೂಜಗಂ ೫೦೦೦ ವಚನ ಬರೆದರು. ಜ. ಚ. ನಿ. ಉತ್ತರಾಧಿಕಾರಿ ಶ್ರೀ ವೀರಭದ್ರ ಚೆನ್ನಮಲ್ಲಸ್ವಾಮಿಗಳು ಚಿಂತನಶೀಲ ಕವಿ, ಬರಹಗಾರರು. ಅಥಣಿ ಮೋಟಗಿ ಮಠದ ಶ್ರೀ ಚನ್ನಬಸವದೇವರು ಇಪ್ಪತ್ತರ ಹರೆಯದಲ್ಲೇ ಎಂಟು ಅಮೂಲ್ಯ ಕೃತಿ ತಂದ ಪ್ರತಿಭಾಸಂಪನ್ನರು. ನೂರಾರು ಮಠಾಧೀಶರು ವೇದಾಂತ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಸಂಶೋಧನೆ - ಸಂಪಾದನ ಮುದ್ರಣಕ್ಷೇತ್ರದಲ್ಲೂ ಮಠಾಧೀಶರ ಸಾಧನೆ ಗಣನೀಯ. ಅನೇಕ ಮಠಾಧೀಶರು ಅಮೂಲ್ಯ ಸಾಹಿತ್ಯ ಕೃತಿ ತಂದು ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. ನೂರಾರು ಪುಸ್ತಕ ಪ್ರಕಟಿಸಿದ್ದಲ್ಲದೆ ಪ್ರಶಸ್ತಿ,

ದತ್ತಿದಾನ, ಸಾಹಿತ್ಯ ಚಿಂತನಗೋಷ್ಠಿ ನಡೆಸಲು ಪತ್ರಿಕೆಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಸಾಹಿತ್ಯ-ಕಲೆ, ಜಾನಪದ, ವಾದ್ಯ, ಸಂಗೀತ, ಗಾಯನ, ಕೀರ್ತನ, ಪ್ರವಚನ, ಕ್ರೀಡಾಪಟುಗಳಿಗೆಲ್ಲ ಪ್ರದರ್ಶನಾವಕಾಶ, ಪ್ರಚಾರ-ಪ್ರೋತ್ಸಾಹ-ಪುರಸ್ಕಾರವಿತ್ತು ಗೌರವಿಸಿದ್ದಾರೆ.

ವಾಣಿಜ್ಯ ರಂಗದಲ್ಲಿ, ಕೃಷಿಕ್ಷೇತ್ರದಲ್ಲಿ, ಸಹಕಾರಿ ರಂಗದಲ್ಲಿ ಪರೋಕ್ಷ ಅಪರೋಕ್ಷ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಹಿಂದಿನ ಮೂರುಸಾವಿರ ಮಠದ ಜಗದ್ಗುರುಗಳು ಇಡೀ ರಾಷ್ಟ್ರದ ಸಹಕಾರಿ ರಂಗದ ಬೃಹತ್ ಆಸ್ಪತ್ರೆ ನಿರ್ಮಿಸಿ ಗ್ರಾಮೀಣ ದುರ್ಬಲ ಜನತೆಗೆ ವೈದ್ಯಕೀಯ ಸೌಲಭ್ಯ ಒದಗಿಸಿಕೊಟ್ಟಿದ್ದಾರೆ.

ಶ್ರೀ ಕ್ಷೇತ್ರದಲ್ಲಿ ನೈತಿಕ ಶಿಕ್ಷಣ, ಯೋಗ ಪ್ರಾಣಾಯಾಮ, ಕೃಷಿ ತರಬೇತಿ, ಪುರಾಣ ಪ್ರವಚನ, ಆರೋಗ್ಯ ಶಿಬಿರ, ವಿಚಾರ ಸಂಕಿರಣ ಏರ್ಪಡಿಸುತ್ತ ವಿಧಾಯಕ ಕಾರ್ಯದಲ್ಲಿ ತೊಡಗಿದ್ದು, ಧರ್ಮಸಮನ್ವಯ, ರಾಷ್ಟ್ರೀಯ ಭಾವೈಕ್ಯತೆ, ಅಣ್ವಸ್ತ್ರ ನಿಷೇಧ, ವಿಶ್ವಶಾಂತಿಯಂಥ ವಿಶಾಲತತ್ವಾದರ್ಶಗಳಿಗೆ ಸ್ಪಂದಿಸುತ್ತ ಬಂದಿದ್ದಾರೆ. ಪ್ರವಾಹ. ಪ್ರಳಯ, ಬರಗಾಲ, ಯುದ್ಧಪೀಡಿತರಿಗಾಗಿ ಜೋಳಿಗೆ ಹಿಡಿದು ನಿಧಿಸಂಗ್ರಹಿಸಿಕೊಟ್ಟಿದ್ದಾರೆ. ಬೆಲೆ ಏರಿಕೆ, ಭಾಷಾ-ಗಡಿ ಚಳವಳಿ, ರೈತ ಕಲ್ಯಾಣಕ್ಕಾಗಿ ಸತ್ಯಾಗ್ರಹ ಮೂಲಕ ಸಂಕಷ್ಟಗಳಲ್ಲಿ ಜನರೊಂದಿಗೆ ನಿಂತು ಮುನ್ನಡೆಸಿದ್ದಾರೆ.

ಕುಡಿತ-ಜೂಜುಗಳಂಥ ದುರ್ವ್ಯಸನಗಳಿಂದ ಕುಟುಂಬಗಳನ್ನು ರಕ್ಷಿಸಲು ಇಳಕಲ್ಲ ಮಹಾಂತ ಸ್ವಾಮಿಗಳಂಥ ಅನೇಕ ಸ್ವಾಮಿಗಳು ಮಹಾಂತ ಜೋಳಿಗೆಯೊಂದಿಗೆ ಬೀದಿಗಿಳಿದಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮ, ಸಂಸ್ಥಾನ ವಿಲಿನೀಕರಣ, ಮಹಾಜನವರದಿ, ಗೋಕಾಕ ವರದಿ ಜಾರಿಗಾಗಿ ಸ್ವಾಮಿಗಳು ಪರೋಕ್ಷ-ಅಪರೋಕ್ಷ ಶಕ್ತಿ-ಸಹಾಯ ಒದಗಿಸಿದ್ದಾರೆ.

ಇಂದಿನ ಮಠಾಧೀಶರು ಪರಿಸರ ಸಂರಕ್ಷಣೆ, ಮಠ-ಕೃಷಿ ಬೆಳೆಸಲು ಬೀಜಮಂತ್ರದೊಂದಿಗೆ ಧಾನ್ಯ ಬೀಜ ನೀಡುತ್ತ, ಸ್ವತಃ ಕೃಷಿಕರಾಗಿ ನೇಗಿಲು ಹಿಡಿವ ಸ್ವಾಮಿಗಳೂ ಇದ್ದಾರೆ. ಜನಮನದ ಕೊಳೆ ತೊಳೆಯಲು ಹುಕ್ಕೇರಿ ಶ್ರೀಗಳಂಥವರು ಕೈಯಲ್ಲಿ ಪೊರಕೆ ಹಿಡಿದು ಹೊಲಗೇರಿ ಉಡುಗಿ, ಅಸ್ಪೃಶ್ಯರಿಗೆ ಪ್ರೀತಿಯಿಂದ ಮೈದಡವಿ ಲಿಂಗದೀಕ್ಷೆ ನೀಡಿದ ಮಾನವತಾವಾದಿಗಳೂ ಸಾಕಷ್ಟು.

ಪೀಠ ಪಲ್ಲಕ್ಕಿ, ಛತ್ರಚಾಮರ, ಬಿರುದು-ಭೋಪರಾಕುಗಳಂಥ ಉಪಾಧಿಗಳನ್ನು ತ್ಯಾಗ ಮಾಡಿದ ಕೀರ್ತಿ ಶನಿಯನ್ನು ದೂರ ಅಟ್ಟಿದ ಮಹಾನುಭಾವರು ಗದುಗಿನ ತೋಂಟದಾರ್ಯರು. ನೀಡುಮಾಮಿಡಿ ಶ್ರೀ ವೀರಭದ್ರ ಚೆನ್ನಮಲ್ಲರು, ಚಿತ್ರದುರ್ಗದ ಗುರುಗಳು ಪೀಠ-ಪಲ್ಲಕ್ಕಿ-ಅಧಿಕಾರ ಆಳುವುದಕ್ಕಲ್ಲ, ಹೆಗಲೇರಿ ಮೆರೆಯುವುದಕ್ಕಲ್ಲ, ಲಿಂಗ-ಜಂಗಮ-ಜನ ಸೇವೆ ಮಾಡುವುದಕ್ಕೆ ಎಂದು ನಂಬಿ ನಡೆದ ಅನೇಕ ಮಹನೀಯರು

ಮಾದರಿಯಾಗಿದ್ದಾರೆ. ಅರ್ಹತೆಯಿದ್ದಲ್ಲಿ ದಲಿತರೂ ಪೀಠಾಧಿಪತಿಗಳಾಗಬಹುದೆಂದು ಘೋಷಿಸಿದ ಮಹಾಂತರೂ ಉಂಟು. ತಾವೇ ಮೌಢ್ಯ ಸಂಪ್ರದಾಯ ಕಂದಾಚಾರ ಮುರಿದು ಮುಂದುವರೆದು ನವಮನ್ವಂತರದ ಪ್ರವಾದಿಗಳಾಗಿ ಆದರಣೀಯರಾಗಿದ್ದಾರೆ.

ಇಂದು ಅತ್ಯುತ್ಸಾಹದಲ್ಲಿ ಕಲುಷಿತ ರಾಜಕೀಯ ಸಖ್ಯ ಬೆಳೆಸಿ ಅಪಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳುವ ಕಾವಿಧಾರಿಗಳೂ ಉಂಟು. ಮಠಗಳು ಜಾತಿ ರಾಜಕೀಯ ಮಾಡುವ ಅಥವಾ ರಾಜಕೀಯಕ್ಕಾಗಿ ಮಠ ಬಳಸಿಕೊಳ್ಳುವ ಅವಕಾಶವಾದಿತನಗಳಿಂದ ಮಠಗಳು ಎಚ್ಚರವಹಿಸಬೇಕು. ಮಾಯೆಯ ಬೆನ್ನುಬಿದ್ದ ಮತಿಭ್ರಷ್ಟರೂ ಇದ್ದಾರೆ. ಅವರು ಪೀಠಬಿಟ್ಟು ಕೆಳಗಿಳಿದರೆ ಸಮಾಜಕ್ಕೆ ಕ್ಷೇಮ. ಲಕ್ಷದೀಪೋತ್ಸವಗಳಂಥ ಪ್ರತಿಗಾಮಿ ಆಚರಣೆಗಳಿಂದ ಹಣ-ಸಮಯ, ಪದಾರ್ಥಗಳನ್ನು ಅಪವ್ಯಯ ಮಾಡುತ್ತ ಸಮಾಜಕ್ಕೆ ಹೊರೆಯಾಗುವ ಕಂದಾಚಾರಿಗಳೂ ಉಂಟು ಅಪವಾದವೆಂಬಂತೆ.

೨೧ನೇ ಶತಮಾನದ ಇಂದಿನ ಪ್ರಬುದ್ಧ ಸಮಾಜ ನಿರ್ಮಾಣದಲ್ಲಿ ಶ್ರೀಮಠಗಳ ಪಾತ್ರ ಎಂದಿಗಿಂತ ಅಧಿಕ. ದುಡ್ಡು-ದೊಡ್ಡಸ್ತಿಕೆ, ಸುದ್ದಿ-ಪ್ರಸಿದ್ಧಿ, ರಾಜಕೀಯ ಪ್ರಲೋಭನೆ, ಐಷಾರಾಮಿ ಆಮಿಷಗಳಿಗೆ ಬಲಿಬೀಳದೆ, ಶುದ್ಧ-ಸಾತ್ವಿಕ, ಸಿದ್ಧಿ ಸಾಧನೆ ಸಂಕಲ್ಪದೊಂದಿಗೆ ಭಕ್ತಿ-ಜ್ಞಾನ-ವೈರಾಗ್ಯಗಳ ವಿಭೂತಿಪುರುಷರಾಗಿ ಮೂಡಿಬರಬೇಕು. ಸಮುದಾಯವನ್ನು ಸೀಳದೆ, ತಾರತಮ್ಯ ತಾಳದೆ ಸಾಮರಸ್ಯ, ರಾಷ್ಟ್ರೀಯತೆ, ವೈಚಾರಿಕತೆ ಸಾರುವ ರಾಜಯೋಗಿಗಳಾಗಬೇಕು. ಸಕಲರಿಗೆ ಲೇಸನ್ನೇ ಬಯಸುತ್ತ ನಿಷ್ಕಾಮ ಸೇವೆಯಿಂದ ಶರಣ ಧರ್ಮ ಬೆಳೆಸುತ್ತ ನುಡಿದು ನಡೆದು ಜಗಜ್ಯೋತಿಗಳಾಗಬೇಕು. ಓಣಿ ಕೇರಿಯನ್ನೇ ಜಗವೆಂದುಕೊಳ್ಳದೇ, ಜಾತಿಕೋಮಿಗೆ ಸೀಮಿತಗೊಳ್ಳದೆ, ವಿಶ್ವಮಾನವ ಸಂದೇಶ ಸಾರುವ ಸದ್ಗುರು ಇಂದು ಅವಶ್ಯ ! ಕರ್ನಾಟಕದ ಇಂದಿನ ಮಠಾಧೀಶರಲ್ಲಿ ಆ ಅರಿವು ಸಂಕಲ್ಪಶಕ್ತಿ, ಮಹತ್‌ನ್ನು ಸಾಧಿಸುವ ಛಲ-ಬಲ ಎಲ್ಲವೂ ಇದೆ.

■■

ಪ್ರ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ವೀರಶೈವ ಮಠಗಳು : ಶೈಕ್ಷಣಿಕ ಸೇವೆ

● ಡಾ. ಬಸವರಾಜ ಜಗಜಂಪಿ

ವೀರಶೈವ ಧರ್ಮ ಹನ್ನೆರಡನೆಯ ಶತಮಾನದಲ್ಲಿ ಮಾಡಿದ ಕ್ರಾಂತಿ ಇಂದಿಗೂ ಸ್ಮರಣೀಯ. ಆದರೆ ನಂತರದ ಶತಮಾನಗಳಲ್ಲಿ ಅದು ಅಜ್ಞಾತವಾಸ ಅನುಭವಿಸಬೇಕಾಯಿತು. ಹದಿನೈದನೆಯ ಶತಮಾನದಲ್ಲಿ ವೀರಶೈವ ಜ್ಯೋತಿ ಮತ್ತೆ ಪ್ರಜ್ವಲಿಸಿತು; ನಂತರ ಪುನಃ ಕಾಲಗರ್ಭದಲ್ಲಿ ಅಡಗಿತು. ಮುಂದೆ ಪೇಶ್ವೆಗಳ ಮತ್ತು ಬ್ರಿಟಿಷರ ಆಳಿಕೆ– ದಬ್ಬಾಳಿಕೆಗಳಿಂದ ಉತ್ತರ ಕರ್ನಾಟಕವಂತೂ ಅಕ್ಷರಶಃ ತತ್ತರಿಸಿ ಹೋಯಿತು.

ಅಜ್ಞಾನ, ಅನಕ್ಷರತೆ, ದಾರಿದ್ರ್ಯಗಳಿಂದ ಈ ದೇಶ ಪರಕೀಯರ ಸೊತ್ತಾಯಿತು. ಕನ್ನಡ ನಾಡಿನಲ್ಲಿ ಕನ್ನಡ ಹೇಳಹೆಸರಿಲ್ಲದಂತಾಗುವ ಕ್ಲಿಷ್ಟ ಪರಿಸ್ಥಿತಿ ನಿರ್ಮಾಣವಾಯಿತು. ಆಗ ಕನ್ನಡದ ನಿಷ್ಠಾವಂತ ಕಾವಲುಗಾರರಾಗಿ ಬಂದವರೆಂದರೆ ಶಿಕ್ಷಣಾಧಿಕಾರಿ ರಸೆಲ್ ಹಾಗೂ ಡೆಪ್ಯೂಟಿ ಚನ್ನಬಸಪ್ಪನವರು. ಅದು ವೀರಶೈವ ಸಮಾಜದ ಜಾಗೃತಿಗೂ ಕಾರಣವಾಯಿತು.

ಈ ಎಲ್ಲ ಸಂದಿಗ್ಧಗಳಿಂದ ಬಿಡುಗಡೆ ಹೊಂದಲು ಶಿಕ್ಷಣವೊಂದೇ ಮದ್ದು ಎಂದು ಮೊದಲು ಮನವರಿಕೆ ಮಾಡಿಕೊಂಡವರು ವೀರಶೈವ ಮಠಾಧೀಶರು. ಅವರು ತಮ್ಮ ತಪಃಶಕ್ತಿಯನ್ನು ವಿದ್ಯಾಪ್ರಸಾರದ ಪವಿತ್ರ ಕಾರ್ಯಕ್ಕೆ ತೊಡಗಿಸಲು ಸಿದ್ಧರಾದರು. ಶ್ರೀಮಂತರನ್ನು, ದಾನಿಗಳನ್ನು, ಶಿಕ್ಷಣ ಪ್ರೇಮಿಗಳನ್ನು ತಮ್ಮ ಮಹಾಮಣಿಹದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದರು. ಯುಗದ ಕರೆಗೆ ಅವರು ಕಿವುಡು ತೋರಲಿಲ್ಲ. ವಿರಕ್ತರು, ಶಿಕ್ಷಣ ತಜ್ಞರು ಕೈಕೊಂಡ ಕಾರ್ಯದಲ್ಲಿ ಪಾಲ್ಗೊಂಡರು. ಅದೊಂದು ಐತಿಹಾಸಿಕ ಘಟನೆ.

ಅಡವಿಯಲ್ಲಿ ಆಶ್ರಮಕಟ್ಟಿ ಆತ್ಮಕಲ್ಯಾಣವನ್ನು ಸಾಧಿಸುವುದು ದೊಡ್ಡದಲ್ಲ. ಊರಲ್ಲಿ ಮಠಕಟ್ಟಿ, ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನು ಸಾಧಿಸುವುದೇ ಶ್ರೇಷ್ಠ. ಇಂಥ ಉದಾತ್ತ ಭಾವನೆಯನ್ನು ತಾಳಿದ ವೀರಶೈವ ಮಠಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಗೈದ ಸಾಧನೆ ಅದ್ಭುತ. ಅಷ್ಟೇ ಗಮನಾರ್ಹ.

ಮತಧರ್ಮಗಳ ಸಂಘಟನೆ ಹಾಗೂ ಧಾರ್ಮಿಕ ತತ್ವಗಳ ಪ್ರಸಾರವೇ ಮಠಗಳ ಕಾರ್ಯವೆಂಬುದು ಸಾಮಾನ್ಯ ತಿಳುವಳಿಕೆ. ಮಠ ಒಂದು ಧಾರ್ಮಿಕ ಸಂಸ್ಥೆಯಾದರೂ ಶಿಕ್ಷಣ ಪ್ರಸಾರ, ಸಂಸ್ಕೃತಿ ಸಂವರ್ಧನೆ, ಸಾಹಿತ್ಯಸೃಷ್ಟಿ, ಆರೋಗ್ಯ ಇವೇ ಮೊದಲಾದ ಜನೋಪಯೋಗಿ ಚಟುವಟಿಕೆಗಳನ್ನು ಕೈಕೊಂಡು ಸಾಮಾಜಿಕ ಸಂಸ್ಥೆಯೆನಿಸಿತು. ಶಿಕ್ಷಣಕ್ಕೆ ಹೆಚ್ಚಿನ ಒತ್ತುಕೊಟ್ಟ ಮಠಗಳು ತೀವ್ರವಾಗಿ ವಿಕಾಸಗೊಂಡವು. ರಾಷ್ಟ್ರದ ಸಾಂಸ್ಕೃತಿಕ ಪುನರ್ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದವು. ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸಿದವು.

ವಿವಿಧ ಮತಧರ್ಮಗಳ ಸಂಗಮ ಕ್ಷೇತ್ರವೆನಿಸಿದ ಕರ್ನಾಟಕದಲ್ಲಿ ಸಣ್ಣದೊಡ್ಡ ಸಾವಿರಾರು ಮಠಗಳಿವೆ. ಅದರಲ್ಲೂ ಕರ್ನಾಟಕದ ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ವೀರಶೈವ ಮಠಗಳ ಪಾತ್ರ ಗುರುತರವಾದುದು. ಮಠಗಳು ತಪಸ್ವಿಗಳ, ಸನ್ಯಾಸಿಗಳ, ವಿದ್ಯಾರ್ಥಿಗಳ ವಾಸಸ್ಥಾನವೆನಿಸಿವೆ. ಸಾಧಕರಿಗೆ ಸಾಧನೆಯ ಕೇಂದ್ರವಾಗಿವೆ. ರಾಷ್ಟ್ರವನ್ನು ಸಾಂಸ್ಕೃತಿಕವಾಗಿ, ರಚನಾತ್ಮಕವಾಗಿ ಕಟ್ಟುವಲ್ಲಿ ನೆರವಾಗಿವೆ.

ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳೊಂದಿಗೆ ಜನಹಿತ ಕಾರ್ಯಗಳಲ್ಲಿ ಕಳಕಳಿಹೊಂದಿದ ವೀರಶೈವ ಮಠಗಳು ಶೈಕ್ಷಣಿಕ ಪ್ರಸಾರವನ್ನು ಒಂದು ವ್ರತವನ್ನಾಗಿ ಸ್ವೀಕರಿಸಿದವು. ಶಿಕ್ಷಣಕ್ಕೆ ಪೂರಕವಾಗಿ ಅನ್ನದಾಸೋಹದ ಪುಣ್ಯಕಾರ್ಯವನ್ನು ಶ್ರದ್ಧೆಯಿಂದ ಕೈಕೊಂಡವು. ಇದು ವೀರಶೈವ ಮಠಗಳ ವೈಶಿಷ್ಟ್ಯ.

ಶಿಕ್ಷಣಕ್ಕೆ ಸಮನಾದುದು ಮತ್ತೊಂದಿಲ್ಲ. ಸಮಾಜದ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರ ತುಂಬ ಮಹತ್ವದ್ದು. ಶಿಕ್ಷಣ ಸುಸಂಸ್ಕೃತ ಜನಾಂಗದ ಪ್ರತೀಕ. ಅದೇ ಎಲ್ಲದಕ್ಕೂ ಅಡಿಪಾಯವೆಂಬುದನ್ನು ವೀರಶೈವ ಮಠಾಧೀಶರು ಅರಿತರು. ಅಂತೆಯೇ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಅವರು ಆದ್ಯತೆ ನೀಡಿದರು. ಅದಕ್ಕೆ ಬದ್ಧರಾಗಿ ಕಾರ್ಯೋನ್ಮುಖರಾದರು.

ಶಿಕ್ಷಣ ವಿಕಾಸಕ್ಕೆ ಪ್ರಾಚೀನ ಮಠಗಳು ವಿಶೇಷ ಪ್ರಾಶಸ್ತ್ಯ ನೀಡಿವೆ. ಅವುಗಳಿಗೆ ಸಾಲಿಮಠ, ಓದುಮಠ ಎಂಬ ಹೆಸರುಗಳಿದ್ದ ಬಗ್ಗೆ ನಿಖರ ದಾಖಲೆಗಳಿವೆ. ವಿದ್ಯಾದಾನ ಮಾಡುತ್ತಿದ್ದ ದೇಗುಲಗಳೂ ಮಠಗಳೆನಿಸಿದವು.

ವೀರಶೈವ ಮಠಾಧೀಶರು ಸ್ವತಃ ವಿದ್ಯಾವಂತರು, ವಿದ್ಯಾಪ್ರೇಮಿಗಳು. ಕೆಲವು ಮಠಾಧೀಶರು ಉನ್ನತ ಶಿಕ್ಷಣ ಪಡೆಯದಿದ್ದರೂ ನಮ್ಮ ಜನರು ವಿದ್ಯಾವಂತರಾಗಬೇಕೆಂಬ ಅದಮ್ಯ ಹಂಬಲವುಳ್ಳವರು. ಅವರ ದೂರದೃಷ್ಟಿ ಅದ್ಭುತವಾದುದು.

ಕರ್ನಾಟಕದ ಶೈಕ್ಷಣಿಕ ಚರಿತ್ರೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವ ವೀರಶೈವ ಮಠಗಳು ಆ ಕ್ಷೇತ್ರದಲ್ಲಿ ಗಮನಾರ್ಹ ಸೇವೆಯನ್ನು ದಾಖಲಿಸಿವೆ. ಸ್ವಧರ್ಮರಕ್ಷಣೆ, ಪರಧರ್ಮ ಸಹಿಷ್ಣುತೆಗಳನ್ನು ಸಮೀಕರಿಸಿಕೊಂಡು ಮಾದರಿಯೆನಿಸಿದ

ವೀರಶೈವ ಮಠಗಳು ಶಿಕ್ಷಣ ನೀಡುವ ನಿಟ್ಟಿನಲ್ಲಿ ಮಾಡಿದ ಸಾಧನೆ ದೊಡ್ಡದು. ನಮ್ಮ ನಾಡಿನ ಶಿಕ್ಷಣ ಕ್ಷೇತ್ರದಲ್ಲಿ ಈ ಮಠಗಳು ವಹಿಸಿದ ಪಾತ್ರ ಗಮನಾರ್ಹ. 'ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ' ಎಂಬುದು ವಿಶ್ವಗುರು ಬಸವಣ್ಣನವರ ವಾಣಿ. ಅದನ್ನು ಚೆನ್ನಾಗಿ ಅರಿತು ಅನುಸರಿಸಿದವರು ವೀರಶೈವ ಮಠಾಧೀಶರು. ಯಾವುದೆ ಸಮಾಜದ ಸರ್ವತೋಮುಖ ಏಳಿಗೆಗೆ ಶಿಕ್ಷಣವೊಂದೇ ಸರ್ವೋತ್ತಮ ಮಾರ್ಗವೆಂದು ನಂಬಿದವರು. ಅಂತೆಯೇ ವೀರಶೈವ ಮಠಾಧೀಶರು ಉಚಿತ ಪ್ರಸಾದನಿಲಯಗಳನ್ನು ಆರಂಭಿಸಿದರು. ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಅದಕ್ಕೆ ಪೂರಕವಾಗುವ ಅಂಗಸಂಸ್ಥೆಗಳನ್ನು ಸ್ಥಾಪಿಸಿ ಕ್ರಾಂತಿಯನ್ನೇ ಮಾಡಿದರು. ಮಠಾಧೀಶರ ಸೇವಾತತ್ಪರತೆ, ಆತ್ಮಬಲ, ಆತ್ಮಗೌರವಗಳ ಪ್ರತೀಕವಾಗಿರುವ ವಿದ್ಯಾಸಂಸ್ಥೆಗಳು, ಪ್ರಸಾದನಿಲಯಗಳು ಸನ್ಮಾರ್ಗದೀಪಿಕೆಯಾಗಿವೆ. ಆತ್ಮೋನ್ನತಿಯ ಮೌಲಿಕ ಶಿಕ್ಷಣದ ಸಂದೇಶವನ್ನು ಸಾರುತ್ತಿವೆ.

ವೀರಶೈವ ಮಠಗಳಿಗೂ ಶಿಕ್ಷಣಕ್ಕೂ ಅನ್ಯೋನ್ಯ ಸಂಬಂಧವಿದೆ. ಆರಂಭದಲ್ಲಿ ಧರ್ಮದ, ಆಧ್ಯಾತ್ಮದ, ದಾಸೋಹದ ಕೇಂದ್ರಗಳಾಗಿದ್ದ ವೀರಶೈವ ಮಠಗಳು ಬರಬರುತ್ತ ಜ್ಞಾನದಾಸೋಹದ ಕಾರ್ಯಗಳನ್ನು ತುಂಬ ಸಮರ್ಥವಾಗಿ ಕೈಕೊಂಡವು. ಅನ್ನದಾಸೋಹದೊಂದಿಗೆ ಜ್ಞಾನದಾಸೋಹವನ್ನು ನಡೆಸಿಕೊಂಡು ಬಂದ ಈ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯ.

ವೀರಶೈವ ಸಮಾಜಕ್ಕೆ ಉಜ್ವಲ ಭವಿಷ್ಯದ ಭದ್ರ ಅಡಿಪಾಯವನ್ನು ಒದಗಿಸಿದವರು ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು. ಅವರೊಂದಿಗೆ ಶ್ರದ್ಧೆಯಿಂದ ಕೈಗೂಡಿಸಿದವರು ಧಾರವಾಡ ಮುರುಘಾಮಠದ ಮೃತ್ಯುಂಜಯ ಅಪ್ಪಗಳು. ಸಿರಸಂಗಿ ಲಿಂಗರಾಜರು ತಮ್ಮ ಸಂಸ್ಥಾನದ ಸಮಸ್ತ ಸಂಪತ್ತನ್ನು ಸಮಾಜದ ಶಿಕ್ಷಣಕ್ಕಾಗಿ ಸಮರ್ಪಿಸುವಂತೆ ಪ್ರೇರೇಪಿಸಿದವರು ಘನವೈರಾಗ್ಯನಿಧಿ ಅಥಣಿಯ ಮುರುಘೇಂದ್ರ ಶಿವಯೋಗಿಗಳು. ತಮ್ಮಂತಹ ವಿರಕ್ತರಿಗೆ, ಜೊತೆಗೆ ಶ್ರೀಮಂತರಿಗೆ, ಶಿಕ್ಷಣ ಪ್ರೇಮಿಗಳಿಗೆ ಶಿಕ್ಷಣ ಕ್ಷೇತ್ರದ ಪುನರುತ್ಥಾನದತ್ತ ಒಲಿಯುವಂತೆ ಮಾಡಿದರು.

ಹಾನಗಲ್ ಶ್ರೀಗಳು ಕರ್ನಾಟಕದ ಒಂದು ದೊಡ್ಡ ಶಕ್ತಿ. ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ರಂಗಗಳಿಗೆ ಅವರು ನೀಡಿದ ಕೊಡುಗೆ ದೊಡ್ಡದು. ಸ್ವಾಮಿತ್ವವನ್ನು ವಹಿಸಿಕೊಂಡ ತಕ್ಷಣ ಶ್ರೀಗಳು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಕಾರ್ಯಗಳನ್ನು ಕೈಕೊಂಡರು. ಸಮಾಜದ ಉನ್ನತಿಗೆ ಶಿಕ್ಷಣವೇ ಮೂಲ ಎಂಬುದನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದರು.

ಧಾರ್ಮಿಕ ಶಿಕ್ಷಣಕ್ಕೆ ಮೂಲ ಆಧಾರವಾದ ಸಂಸ್ಕೃತ ವಿದ್ಯಾಲಯಗಳನ್ನು ಅವರು ಆರಂಭಿಸಿದರು. ಇಂಗ್ಲೀಷ್ ಶಿಕ್ಷಣದ ಅಗತ್ಯವನ್ನು ಮನಗಂಡವರು ಅವರು. ಅದು ಲೌಕಿಕ ಪ್ರಗತಿಗೆ ಮೂಲ. ಆ ದೃಷ್ಟಿಯಿಂದ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಲು ಆಸಕ್ತರಿಗೆ

ಪ್ರೋತ್ಸಾಹನೀಡಿದರು. ಶಿಕ್ಷಣ ಪ್ರೇಮಿ ಶ್ರೀಮಂತರಿಗೆ ದಾನ ನೀಡುವಂತೆ ಪ್ರೇರೇಪಿಸಿದರು. ಶಿಕ್ಷಣ ಪ್ರಸಾರ ಕಾರ್ಯಕ್ಕೆ ಅನುಕೂಲವಾಗುವ ಅನೇಕ ಉಪಾಯಗಳನ್ನು ತಿಳಿಸಿದರು.

ಶಿವಯೋಗಮಂದಿರವನ್ನು ಸ್ಥಾಪಿಸುವ ಮೂಲಕ ಗುರು-ವಿರಕ್ತ ಮಠಾಧೀಶರನ್ನು ತರಬೇತುಗೊಳಿಸುವ ಮಹಾಮಣಿಪಕ್ಕೆ ನಾಂದಿಹಾಡಿದರು. ಅದು ಶಿಕ್ಷಣ ಪ್ರಸಾರ ಕ್ರಾಂತಿಯ ಕೇಂದ್ರವೆನಿಸಿತು. ಅಂತೆಯೇ ಸ್ವಾಮೀಜಿ ಸಮಾಜದ ಗೌರವಾದರಗಳಿಗೆ ಪಾತ್ರರಾದರು.

ತುಮಕೂರಿನ ಶ್ರೀ ಸಿದ್ಧಗಂಗಾಮಠ, ಸುತ್ತೂರಿನ ಶ್ರೀ ಸುತ್ತೂರುಮಠ. ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿಮಠ, ಚಿತ್ರದುರ್ಗದ ಶ್ರೀ ಬೃಹನ್ಮಠ, ಸಿರಿಗೆರೆಯ ತರಳಬಾಳುಮಠ, ಭಾಲ್ಕಿಯ ಹಿರೇಮಠ, ಕೊಪ್ಪಳದ ಗವಿಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಜೇವರಗಿ ಷಣ್ಮುಖಸ್ವಾಮಿಮಠ, ಗುಲಬರ್ಗಾದ ಶರಣಬಸವೇಶ್ವರ ದಾಸೋಹಮಠ, ಬೀದರಿನ ಸಿದ್ಧಾರೂಢ ಆಶ್ರಮ. ಧಾರವಾಡದ ಮುರುಘಾಮಠ, ಬಳ್ಳಾರಿ ಜಿಲ್ಲೆ ಹೊಸಪೇಟೆ ಕೊಟ್ಟೂರ ಸ್ವಾಮಿ ಮಠ, ಇಳಕಲ್ಲಿನ ವಿಜಯ ಮಹಾಂತೇಶ್ವರಮಠ, ಗದುಗಿನ ತೋಂಟದಾರ್ಯಮಠ, ನಿಡಸೋಸಿ ಶ್ರೀ ಸಿದ್ಧಸಂಸ್ಥಾನಮಠ, ನಾಗನೂರು-ಬೆಳಗಾವಿ ರುದ್ರಾಕ್ಷಿಮಠ. ಬೈಲಹೊಂಗಲ ಶಾಖಾ ಮೂರುಸಾವಿರಮಠ, ಮುರುಗೋಡದ ಮಹಾಂತ ದುರುದುಂಡೀಶ್ವರಮಠ ಮೊದಲಾದವುಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿವೆ.

ಸಂಸ್ಕೃತಪಾಠಶಾಲೆ, ವೇದಪಾಠಶಾಲೆ, ಸಂಗೀತಶಾಲೆ, ಪೂರ್ವ ಪ್ರಾಥಮಿಕಶಾಲೆ, ಪ್ರಾಥಮಿಕಶಾಲೆ, ಪ್ರೌಢಶಾಲೆ, ವಸತಿಶಾಲೆ, ಪದವಿಪೂರ್ವ ಕಾಲೇಜು, ಶಿಕ್ಷಣ ಕಾಲೇಜು, ತರಬೇತಿ ಸಂಸ್ಥೆ, ಕಲಾ-ವಿಜ್ಞಾನ-ವಾಣಿಜ್ಯ-ಕಾನೂನು-ದಂತ ವಿಜ್ಞಾನ - ಔಷಧ ವಿಜ್ಞಾನ ಆಯುರ್ವೇದಿಕ್, ಹೋಮಿಯೋಪಥಿ, ನರ್ಸಿಂಗ್, ವೈದ್ಯಕೀಯ ಕಾಲೇಜು ತಾಂತ್ರಿಕ ಸಂಸ್ಥೆ, ಎಂಜಿನೀಯರಿಂಗ್ ಕಾಲೇಜು ಹೀಗೆ ಎಲ್ಲ ಬಗೆಯ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಿವೆ, ತಾವು ಕಟ್ಟಿ ಬೆಳೆಸಿದ ಸಂಸ್ಥೆಗಳನ್ನು ತುಂಬ ಚೆನ್ನಾಗಿ ನಡೆಸುತ್ತಿವೆ. ವಿದ್ಯಾದಾನದ ಪವಿತ್ರಕಾರ್ಯವನ್ನು ಶ್ರದ್ಧೆಯಿಂದ ಮುಂದುವರಿಸಿವೆ.

ಶಿಕ್ಷಣ ಪ್ರಸಾರಕಾರ್ಯದಲ್ಲಿ ತೊಡಗಿಸಿಕೊಂಡ ವೀರಶೈವ ಮಠಾಧೀಶರಿಗೆ ಶುದ್ಧಸಂಕಲ್ಪವಿದೆ. ಒಂದು ಬದ್ಧತೆ ಇದೆ. ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವಲ್ಲಿ, ಬೆಳೆಸುವಲ್ಲಿ, ನಿರ್ವಹಿಸುವಲ್ಲಿ ಮಠಾಧೀಶರ ಆ ಬದ್ಧತೆ ಎದ್ದುಕಾಣುತ್ತದೆ. ಮಠಾಧೀಶರು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಸಾಧ್ಯತೆಗಳ ನಿರಂತರ ಅನ್ವೇಷಕರಾಗಿದ್ದಾರೆ. ಶಿಕ್ಷಣ ಕ್ಷೇತ್ರವನ್ನು ಸಮಾಜಸೇವೆಗೆ, ಸಮಾಜ ಕಟ್ಟುವ ಕಾರ್ಯಕ್ಕೆ ಅತ್ಯಂತ ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ.

ಮಠಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಅಳವಡಿಸಿಕೊಂಡಿರುವುದು ಎದ್ದು ಕಾಣುತ್ತದೆ. ಕೆಲವು ಮಠಗಳು

ಧಾರ್ಮಿಕ, ನೈತಿಕ ತಳಹದಿಯ ಹಿನ್ನೆಲೆಯಲ್ಲಿ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಮಾನವತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ. ಆ ದೃಷ್ಟಿಯಿಂದ ವೀರಶೈವ ಮಠಗಳು ಒಂದರ್ಥದಲ್ಲಿ ಬಸವತತ್ವದ ಪ್ರಯೋಗಶಾಲೆಗಳಾಗಿವೆ.

ವೀರಶೈವ ಮಠಾಧೀಶರಲ್ಲಿ ಬಹುಸಂಖ್ಯಾತರು ವೈಚಾರಿಕ ಪ್ರಜ್ಞೆ ಹೊಂದಿದ್ದಾರೆ. ಚಿಂತನಶೀಲರಾಗಿದ್ದಾರೆ. ಜನರ ಮೌಢ್ಯವನ್ನು ನಿವಾರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಅನೇಕರ ಬಾಳಿಗೆ ಬೆಳಕು ನೀಡುತ್ತಿದ್ದಾರೆ. ಇದು ನಿಜವಾದ ಸೇವೆ. ಕೆಲವು ಮಠಾಧೀಶರು ಆಧುನಿಕ ಪ್ರಜ್ಞೆಯನ್ನು ಹೊಂದಿದವರಿದ್ದಾರೆ. ಹಲವಾರು ಭಾಷೆಗಳನ್ನು ಕಲಿತಿದ್ದಾರೆ. ದೇಶ ವಿದೇಶಗಳನ್ನು ವ್ಯಾಪಕವಾಗಿ ಸಂಚರಿಸಿದ್ದಾರೆ. ಅನುಭವಸಂಪನ್ನರಾಗಿದ್ದಾರೆ. ತಮ್ಮ ಎಲ್ಲಂದದ ಅನುಭವವನ್ನು ಸಮಾಜ ಕಟ್ಟುವ ಕಾರ್ಯದಲ್ಲಿ ಅರ್ಥಪೂರ್ಣವಾಗಿ ಬಳಸಿಕೊಳ್ಳುತ್ತಿದ್ದಾರೆ.

ಇಂದು ತರುಣ ಮಠಾಧೀಶರು ಭರವಸೆ ಮೂಡಿಸುವಂಥವರಿದ್ದಾರೆ. ಅದು ನಿಜಕ್ಕೂ ಸಂತೋಷದಾಯಕ. ಮಠಗಳು ವಾರದ ಶಿವಾನುಭವ, ಮಾಸಿಕ ಶಿವಾನುಭವ, ಶರಣಸಂಸ್ಕೃತಿ ಉತ್ಸವಗಳನ್ನು ನಡೆಸುತ್ತಿವೆ. ಬಸವತತ್ವಕ್ಕೆ ಅನುಗುಣವಾದ ಸರಳ ಹಾಗೂ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುತ್ತಿವೆ. ಕೆಲವು ಮಠಗಳು ಪರಿಸರ ರಕ್ಷಣೆಯ ಕಾರ್ಯದಲ್ಲಿ ತೊಡಗಿವೆ. ನಾಡುನುಡಿಗಳ ರಕ್ಷಣೆ, ಕನ್ನಡಪರ ಚಿಂತನೆ ಮಾಡುತ್ತಿವೆ. ಕೋಮುಸಾಮರಸ್ಯ ಮೂಡಿಸುವಲ್ಲಿ ಶ್ರಮಿಸುತ್ತಿವೆ. ಅಂತೆಯೇ ಅಂಥ ಮಠಗಳು ಭಾವೈಕ್ಯದ ಬೀಡಾಗಿವೆ.

ಸಾಹಿತ್ಯರಚನೆ, ರಕ್ಷಣೆ, ಪ್ರಕಟಣೆ ಹಾಗೂ ಪ್ರಸಾರ ಕಾರ್ಯದಲ್ಲಿ ದಾಖಲಾರ್ಹ ಕಾರ್ಯಮಾಡಿವೆ, ಮಾಡುತ್ತಿವೆ. ವಿಶ್ವವಿದ್ಯಾಲಯಗಳಿಗಿಂತ ಹೆಚ್ಚಿನ ಕಾರ್ಯವನ್ನು ಗ್ರಂಥಪ್ರಕಟಣ ಕ್ಷೇತ್ರದಲ್ಲಿ ಮಾಡಿವೆ.

ಸಿದ್ಧಗಂಗಾ, ಸುತ್ತೂರು, ಚಿತ್ರದುರ್ಗ, ಗದಗ, ನಿಡಸೋಸಿ, ಭಾಲ್ಕಿ, ಸಿರಿಗೆರೆ ಮಠಗಳು ಎಂಜಿನೀಯರಿಂಗ್ ಕಾಲೇಜು ನಡೆಸುತ್ತಿವೆ. ನಿಡಸೋಸಿ ಮಠದ ಗ್ರಾಮೀಣ ಎಂಜಿನೀಯರಿಂಗ್ ಕಾಲೇಜು ಒಳ್ಳೆಯ ಹೆಸರು ಮಾಡಿದೆ. ಸುತ್ತೂರು ಮಠದ ಆಶ್ರಯದಲ್ಲಿರುವ ವೈದ್ಯಕೀಯ ಕಾಲೇಜು-ಭವ್ಯಕಟ್ಟಡ, ಅನುಭವಿ ಅಧ್ಯಾಪಕ ವೃಂದ, ಸ್ಫೂರ್ತಿದಾಯಕ ಪರಿಸರ, ಆಸ್ಪತ್ರೆ, ವಸತಿನಿಲಯ ಮೊದಲಾದವುಗಳಿಂದ ಸುಸಜ್ಜಿತವಾಗಿದೆ. ಅತ್ಯುತ್ತಮ ವೈದ್ಯಕೀಯ ಶಿಕ್ಷಣ ನೀಡುತ್ತಿರುವ ಕಾಲೇಜುಗಳಲ್ಲಿ ಒಂದಾಗಿದೆ.

ಇಂದು ವೃತ್ತಿಪರ ಶಿಕ್ಷಣ ಹೆಚ್ಚು ಜನಪ್ರಿಯವಾಗುತ್ತಿದೆ. ದೂರದೃಷ್ಟಿಯ ವೀರಶೈವ ಮಠಾಧೀಶರು ಅಂಥ ಶಿಕ್ಷಣ ಸಂಸ್ಥೆಗಳನ್ನು ಬಹುಹಿಂದೆಯೇ ಆರಂಭಿಸಿದ್ದು, 'ಕಾಯಕ'ವೆಂದು ಭಾವಿಸಿ ದಾಸೋಹಂಭಾವದಿಂದ ನಿರ್ವಹಿಸುತ್ತಿರುವುದು ಅಷ್ಟೇ ಗಮನಾರ್ಹ.

ಸುತ್ತೂರು, ಹುಬ್ಬಳ್ಳಿ, ಗದಗ, ಬೈಲಹೊಂಗಲ ಮಠಗಳ ಆಶ್ರಯದಲ್ಲಿ ಆಯುರ್ವೇದಿಕ್ ಕಾಲೇಜುಗಳು ನಡೆಯುತ್ತಿವೆ. ಸುತ್ತೂರು, ಸಿದ್ಧಗಂಗಾ, ಚಿತ್ರದುರ್ಗಗಳಲ್ಲಿ ಔಷಧ ವಿಜ್ಞಾನ ಕಾಲೇಜುಗಳಿವೆ. ಸುತ್ತೂರು, ಚಿತ್ರದುರ್ಗ ಮಠಗಳ ಆಶ್ರಯದಲ್ಲಿ ದಂತವಿಜ್ಞಾನ ಕಾಲೇಜುಗಳು ಚೆನ್ನಾಗಿ ನಡೆದಿವೆ.

ಸುತ್ತೂರು, ಗದಗ, ಹುಬ್ಬಳ್ಳಿ, ಬೆಳಗಾವಿ, ನಿಡಸೋಸಿ ಮಠಗಳ ಅಧೀನದ ತಾಂತ್ರಿಕ ಸಂಸ್ಥೆಗಳು ಒಳ್ಳೆಯ ಸೇವೆಮಾಡುತ್ತಿವೆ. ಸುತ್ತೂರುಮಠ ಬುದ್ಧಿಮಾಂದ್ಯ ಮಕ್ಕಳಿಗಾಗಿ ' ಸಹನಾ ' ಹೆಸರಿನ ಶಾಲೆಗಳನ್ನು ನಡೆಸುತ್ತಿರುವುದು ತನ್ಮೂಲಕ ಅಂಗವಿಕಲ ಮಕ್ಕಳ ಭವಿಷ್ಯ ರೂಪಿಸುವಕಾರ್ಯ ತುಂಬ ಗಮನೀಯ.

ಕೆಲವು ಮಠಗಳು ಉಚಿತ ಪ್ರಸಾದ ನಿಲಯಗಳನ್ನು ತೆರೆದಿವೆ. ಕಾಯಕಯೋಗಿಯೆಂದೇ ಖ್ಯಾತರಾದ ನಾಗನೂರು ಶಿವಬಸವಸ್ವಾಮಿಗಳು ಉನ್ನತ ಶಿಕ್ಷಣ ಪಡೆದಿರಲಿಲ್ಲ. ಆದರೆ ಶಿಕ್ಷಣದ ಬಗೆಗೆ ಅವರು ತೀವ್ರ ಆಸಕ್ತಿ ಹೊಂದಿದ್ದರು. ಅಂತೆಯೇ ಬೆಳಗಾವಿಯಲ್ಲಿ ಪ್ರಸಾದ ನೀಲಯವನ್ನು ಆರಂಭಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದರು. ಈ ಭಾಗದ ಶೈಕ್ಷಣಿಕ ಪ್ರಗತಿಗೆ ಕಾರಣರಾದರು.

ವೀರಶೈವ ಪ್ರಸಾದ ನಿಲಯಗಳಲ್ಲಿ, ವಸತಿ ಶಾಲೆಗಳಲ್ಲಿ ವರ್ಗ ವರ್ಣಗಳ ತಾರತಮ್ಯವಿಲ್ಲ. ದೀನರು-ದಲಿತರು-ಶೋಷಿತರು ಇಲ್ಲಿ ಓದುತ್ತಿದ್ದಾರೆ. ಇಲ್ಲಿ ಇದ್ದುಕೊಂಡು ಓದಿದ ಅಸಂಖ್ಯ ವಿದ್ಯಾರ್ಥಿಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದು ಸೇವೆಸಲ್ಲಿಸುತ್ತಿದ್ದಾರೆ. ರಾಷ್ಟ್ರ ಹಾಗೂ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿದ್ದಾರೆ.

ಆ ದೃಷ್ಟಿಯಿಂದ ವೀರಶೈವ ಮಠಾಧೀಶರ ಕಾರ್ಯ ಅನುಪಮ, ಆದರ್ಶಪ್ರಾಯ. ಅಂದು ಧರ್ಮದಾಸೋಹ, ಅನ್ನದಾಸೋಹ ನಡೆಸುತ್ತಿದ್ದ ಮಠಗಳು ಇಂದು ಜ್ಞಾನದಾಸೋಹವನ್ನಾರಂಭಿಸಿವೆ. ತ್ರಿವಿಧದಾಸೋಹದ ಸಾರ್ಥಕತೆಯನ್ನು ಸಾರುತ್ತಿವೆ.

ಆಧುನಿಕ ಕಾಲದ ಪ್ರಗತಿಪರ ವಿಚಾರಗಳಿಗೆ, ಮೌಲ್ಯಗಳಿಗೆ ವೀರಶೈವ ಮಠಾಧೀಶರು ತೀವ್ರವಾಗಿ ಸ್ಪಂದಿಸುತ್ತಿರುವದು ಸ್ಪಷ್ಟ. ಗುಣಾತ್ಮಕ ಶಿಕ್ಷಣ ನೀಡುವುದರತ್ತ ವೀರಶೈವ ಮಠಾಧೀಶರು ದಿಟ್ಟ ಹೆಜ್ಜೆಯಿಟ್ಟಿದ್ದಾರೆ. ಪರಂಪರೆಯನ್ನುಳಿಸಿಕೊಂಡು ಆಧುನಿಕತೆಗೆ ಸ್ಪಂದಿಸಿದ ಮಠಾಧೀಶರು ಶಿಕ್ಷಣ ರಂಗದ ಹೊಸ ಆಯಾಮಗಳನ್ನು ಅಚ್ಚುಕಟ್ಟಾಗಿ, ಅಷ್ಟೇ ಅರ್ಥಪೂರ್ಣವಾಗಿ ಅಳವಡಿಸಿಕೊಂಡಿದ್ದಾರೆ. ಆಧುನಿಕ ಮಾಹಿತಿತಂತ್ರಜ್ಞಾನ-ಯಂತ್ರಜ್ಞಾನ ಕಾಲೇಜುಗಳನ್ನು, ಭಾರೀ ವೆಚ್ಚದ ವೈದ್ಯಕೀಯ ಕಾಲೇಜುಗಳನ್ನೂ ಸ್ಥಾಪಿಸಿದ್ದಾರೆ. ಇಂದಿನ ಪೀಳಿಗೆಯನ್ನು ಸ್ಪರ್ಧಾತ್ಮಕ ಯುಗದತ್ತ ಕೊಂಡೊಯ್ಯುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ.

ತಮಿಳುನಾಡು, ಉತ್ತರ ಪ್ರದೇಶ, ದೆಹಲಿ ಮೊದಲಾದ ಸ್ಥಳಗಳಲ್ಲಿ ವೀರಶೈವ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡಿವೆ. ಕನ್ನಡ ನಾಡಿನಾಚೆ ಸೇವೆಗೆ ಸಜ್ಜಾಗಿವೆ. ಗಟ್ಟಿಯಾದ ನೆಲೆಗಟ್ಟಿನ ಮೇಲೆ ನಿಂತಿವೆ.

ತಾಂತ್ರಿಕ ಶಿಕ್ಷಣದ ಜಾಗತೀಕರಣಕ್ಕಾಗಿ ಸುತ್ತೂರಿನ ಜೆ.ಎಸ್.ಎಸ್. ವಿದ್ಯಾಪೀಠವು ಇಂಗ್ಲಂಡಿನ ಅತ್ಯಾಧುನಿಕ ಟಿಸ್ಸೈಡ್ ಟೆರಿಟರಿಯಲ್ ಕಾಲೇಜಿನೊಂದಿಗೆ ಸಹಯೋಗ ಸಾಧಿಸಿದೆ. ಅಂತರ್‌ರಾಷ್ಟ್ರೀಯ ಮನ್ನಣೆ ಪಡೆದಿದೆ.

ಸುತ್ತೂರು ಹಾಗೂ ನಾಗನೂರು ರುದ್ರಾಕ್ಷಿಮಠಗಳು ಯುವಕ-ಯುವತಿಯರಿಗೆ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ತರಬೇತಿ ನೀಡುತ್ತಿವೆ. ಈ ಸಂಸ್ಥೆಗಳಿಂದ ಅನೇಕ ಅಭ್ಯರ್ಥಿಗಳು ಕೆ.ಎ.ಎಸ್., ಆಯ್.ಎ.ಎಸ್. ಪಾಸುಮಾಡಿದ್ದಾರೆ. ೨೦೦೦ ನೇ ವರ್ಷದ ಪರೀಕ್ಷೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರಥಮಸ್ಥಾನ ಪಡೆದ ವಿಜಯಲಕ್ಷ್ಮಿ ಬಿದರಿ ಜೆ.ಎಸ್.ಎಸ್. ಸಂಸ್ಥೆಯಲ್ಲಿ ತರಬೇತಿ ಪಡೆದುದು ಸ್ಮರಣೀಯ.

ನಾಗನೂರು ರುದ್ರಾಕ್ಷಿಮಠದ ಶ್ರೀಗಳು ಬೆಳಗಾವಿಯಲ್ಲಿ ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯವನ್ನು ಆರಂಭಿಸಿ, ಸಂಶೋಧನ ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿದ್ದಾರೆ. ದೇಶ-ವಿದೇಶಗಳ ವಿದ್ವಾಂಸರು, ಸಂಶೋಧಕರು ಈ ಗ್ರಂಥಾಲಯದ ಪ್ರಯೋಜನ ಪಡೆಯುತ್ತಿದ್ದಾರೆ. ಅದು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ.

ಶಿಕ್ಷಣ ಕ್ಷೇತ್ರದಲ್ಲಿ ವೀರಶೈವ ಮಠಾಧೀಶರು ಗಮನೀಯವಾದುದನ್ನೇ ಸಾಧಿಸಿದ್ದಾರೆ. ಆದರೆ ಅದು ತುಂಬ ಕಡಿಮೆ, ಇನ್ನೂ ನಾವು ಸಾಧಿಸಬೇಕಾದುದು ಅಪಾರವಾಗಿದೆ ಎನ್ನುತ್ತಾರೆ. ಅದು ಪ್ರಗತಿಯ ಲಕ್ಷಣವಲ್ಲವೆ ?

■■

ವಿ. ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

ವೀರಶೈವ ಮಠಗಳು : ಪ್ರಸಾದ ನಿಲಯಗಳು

• ಡಾ. ಎಸ್. ಆರ್. ಗುಂಜಾಳ

ಮಠ ಪ್ರಾಚೀನತೆ :

ಭಾರತದಲ್ಲಿ ಮಠಗಳು ಜನ್ಮತಳೆದ ನಿಶ್ಚಿತ ಕಾಲವನ್ನು ಹೇಳುವುದು ಕಷ್ಟಸಾಧ್ಯ. ಅಂದಾಜು ಎಷ್ಟು ಸಾವಿರ ವರ್ಷಗಳ ಹಿಂದೆ ಅವು ರೂಪುಗೊಂಡವು ಎಂದು ಹೇಳುವುದಕ್ಕೆ ಸಹ ಐತಿಹಾಸಿಕ ಆಧಾರಗಳನ್ನು ಪಡೆಯುವುದು ಅಸಾಧ್ಯ.

ಅಧ್ಯಾತ್ಮ ಚಿಂತನಕ್ಕಾಗಿ, ದೇವರು. ಸೃಷ್ಟಿ, ಆತ್ಮ, ಮೋಕ್ಷ-ಮುಂತಾದ ವಿಷಯಗಳ ಬಗೆಗೆ ಚಿಂತನ ಮಂಥನಕ್ಕಾಗಿ ಸಮಾಜದ ಕೆಲವು ಪ್ರಜ್ಞಾವಂತರು ಪ್ರಶಾಂತವಾದ ಅಡವಿ ಮಧ್ಯದ ತಾಣಗಳನ್ನು ಹುಡುಕಿಕೊಂಡು ಹೋದರು. ಕಾಲಕ್ರಮೇಣ ಅವು ಸ್ಥಿರವಾದ ಆಶ್ರಮಗಳಾಗಿ ಪರಿವರ್ತನೆಗೊಂಡು ಋಷ್ಯಾಶ್ರಮಗಳೆಂದು ಕರೆಯಲ್ಪಟ್ಟವು. ಉಪನಿಷತ್ತು - ಮಹಾಭಾರತಗಳು ಬರೆಯಲ್ಪಟ್ಟ ಕಾಲದಲ್ಲಿ ಆಶ್ರಮಗಳು ನಗರ-ಪಟ್ಟಣಗಳಲ್ಲಿದ್ದ ಅರಸರ, ಹಳ್ಳಿಯ ಸಾಮಾನ್ಯ ಜನರ ಲಕ್ಷ್ಯವನ್ನು ಸೆಳೆದವು. ಅವರ ಸಂಪರ್ಕ ಹೆಚ್ಚಿದಂತೆ ಆಶ್ರಮಗಳು ವಿದ್ಯಾಕೇಂದ್ರಗಳಾದಂತೆ ತೋರುತ್ತದೆ. ಋಷಿಗಳು ವಿದ್ಯೆಯನ್ನು ತಿಳಿಸಿ ಹೇಳುವ ಗುರುಗಳಾದರು. ಗುರುಗಳೇ ಬ್ರಹ್ಮಸ್ವರೂಪ ಪಡೆದರು. ವಿಷ್ಣುಸ್ವರೂಪ ಪಡೆದರು. ಮಹೇಶ್ವರ ಸ್ವರೂಪ ಪಡೆದರು. ಕಣ್ಣಿಗೆ ಕಾಣುವ ವಿಶಾಲ ವಿಚಿತ್ರ ವಿಶ್ವದ ಹುಟ್ಟು-ಬೆಳವಣಿಗೆ ನಾಶಗಳಿಗೆ ಕಾರಣ ಕರ್ತೃಗಳಾದ ಈ ಮೂವರನ್ನು ಮೀರಿದ ಒಬ್ಬನೇ ಒಬ್ಬನಾದ ಪರಬ್ರಹ್ಮನ ಸ್ವರೂಪವೇ ' ಗುರು 'ವೆಂದು ಮನ್ನಿಸಲ್ಪಟ್ಟರು. ಜೀವ-ದೇವ-ಸೃಷ್ಟಿ ಇವುಗಳ ಆಧಾರದ ಮೇಲೆ ಬೆಳೆದು ಬಂದ ವಿಚಾರ ವಿಮರ್ಶೆಯೇ-ಜಿಜ್ಞಾಸೆಯೇ ' ಧರ್ಮ 'ವಾಗಿ ರೂಪುಗೊಂಡಿತು.

ಗುರುಕುಲಗಳಲ್ಲಿ ತರಬೇತಿ ಪಡೆದ ಶಿಷ್ಯ-ಪ್ರಶಿಷ್ಯರು ರಾಜರಿಗೆ ' ರಾಜಗುರು 'ಗಳಾದರು. ಜನಸಾಮಾನ್ಯರಿಗೆ ' ಧರ್ಮಗುರು 'ಗಳಾದರು. ಇವರ ತತ್ವಚಿಂತನೆ. ತತ್ವಬೋಧನೆಗಳಿಗಾಗಿ ಹಳ್ಳಿ-ಪಟ್ಟಣಗಳಲ್ಲಿ ಮಠಗಳು ಜನ್ಮತಳೆದಿರಬಹುದು.

" ಛಾತ್ರಾದಿಗಳ ನಿಲಯವನ್ನು ' ಮಠ ' ಎಂದು ' ಅಮರಕೋಶ ' ಹೇಳುತ್ತದೆ. 'ಛಾತ್ರ' ಎಂದರೆ ಶಿಷ್ಯ ಅಥವಾ 'ವಿದ್ಯಾರ್ಥಿ' ಎಂದರ್ಥ. ಆದುದರಿಂದ ಅಮರಕೋಶಕಾರನ ಪ್ರಕಾರ ಛಾತ್ರಾದಿಗಳು ವಾಸಿಸುವ ನಿಲಯಗಳೇ ಮಠಗಳು. ಸಂಸ್ಕೃತ ಶಬ್ದ ಕೋಶದಲ್ಲಿ ಮಠಗಳೆಂದರೆ, ಸನ್ಯಾಸಿಗಳಾದವರು ಶಿಷ್ಯರಿಗೆ ಜ್ಞಾನಬೋಧೆ ಮಾಡುತ್ತ ವಾಸಿಸುವ ಸ್ಥಳಗಳೆಂದು ಹೇಳಿದೆ. ಮ್ಯಾಕ್ಡೊನಲ್ ಅವರ ಸಂಸ್ಕೃತ ಶಬ್ದಕೋಶದಲ್ಲಿಯೂ ಇದೇ ರೀತಿ ಹೇಳಲಾಗಿದೆ. ವಿದ್ಯಾರ್ಥಿಗಳು ಜ್ಞಾನಬೋಧೆ ಪಡೆಯುವ ಕೇಂದ್ರಗಳೇ ಮಠಗಳೆಂದು ' ಶಬ್ದ ಕಲ್ಪದ್ರುಮ ' ತಿಳಿಸುತ್ತದೆ ".[೧] ಎಂದು ಹೇಳಿದ ವಿದ್ವಾಂಸರಾದ ಡಾ. ಬಿ. ವಿ. ಮಲ್ಲಾಪುರ ಅವರ ಮಾತುಗಳಲ್ಲಿ ಸತ್ಯಾಂಶ ಅಡಗಿದೆ.

ಮೇಲಿನ ವಿವಿಧ ಅರ್ಥಗಳನ್ನು ಕ್ರೋಢೀಕರಿಸಿ ಹೇಳುವುದಾದರೆ ಜ್ಞಾನಬೋಧೆ ಮಾಡುತ್ತ ವಿದ್ಯಾರ್ಥಿಗಳೊಂದಿಗೆ ಸನ್ಯಾಸಿಗಳು ವಾಸವಾಗಿದ್ದ ನಿಲಯಗಳೇ ' ಮಠ 'ಗಳೆಂದು ವ್ಯಾಖ್ಯೆ ಕೊಡಬಹುದು. ವಿರಕ್ತರು-ಸನ್ಯಾಸಿಗಳು-ಸ್ವಾಮಿಗಳು ವಾಸವಾಗಿರುವ, ಓದು, ಬರಹ ಶಾಸ್ತ್ರಗಳನ್ನು ಕಲಿಯಲು ಬಂದ ವಿದ್ಯಾರ್ಥಿಗಳು ವಾಸವಾಗಿರುವ, ಶಿಕ್ಷಣಕ್ಕೆ ಮೀಸಲಾಗಿರುವ ಕೇಂದ್ರವೇ ಮಠ. ಇವು ಬಹು ಸಂಖ್ಯೆಯಲ್ಲಿ ವಿವಿಧ ಧರ್ಮ ಪರಂಪರೆಗಳ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟವೆಂದು ಇತಿಹಾಸದಿಂದ ತಿಳಿದು ಬರುತ್ತದೆ.

ವೀರಶೈವ ಮಠಗಳು :

ವೀರಶೈವ ಮಠಗಳನ್ನು ಎರೇಸೀಮೆ ಚೆನ್ನಪ್ಪನವರು ನಾಲ್ಕು ಗುಂಪುಗಳಲ್ಲಿ ವಿಭಜಿಸಿರುವರು. (ಅ) ಬಸವ ಪೂರ್ವದ ಮಠಮಾನ್ಯಗಳು, (ಆ) ಬಸವಣ್ಣನವರ ಕಾಲದ ಮಠಮಾನ್ಯಗಳು, (ಇ) ತೋಂಟದ ಸಿದ್ಧಲಿಂಗೇಶ್ವರ ಕಾಲದ ಮಠಗಳು, (ಈ) ಕೆಳದಿ ಹಾಗೂ ಕೊಡಗಿನ ಅರಸರ ಕಾಲದ ಮಠಮಾನ್ಯಗಳು.[೨]

ಈಗಾಗಲೇ ಮೇಲೆ ತಿಳಿಸಿದಂತೆ ಶೈವ ಧರ್ಮವೂ ಅತ್ಯಂತ ಪ್ರಾಚೀನವಾಗಿದೆಯೆಂದು ಹೇಳಿದರೂ ಶೈವ ಮಠಗಳು ಅಸ್ತಿತ್ವಕ್ಕೆ ಬಂದು ಕಾರ್ಯ ಪ್ರವೃತ್ತವಾದದ್ದು ಶಂಕರಾಚಾರ್ಯರ ಆಗಮನದ ನಂತರವೇ ಎಂದು ಹೇಳಬೇಕಾಗುತ್ತದೆ. ಅಂದರೆ ಕ್ರಿ. ಶ. ೮ನೇ ಶತಮಾನದಿಂದ ಈಚೆಗೆಂದೇ ತಿಳಿದು ಬರುತ್ತದೆ. ಕೆಲವು ವೀರಶೈವ ಮಠಾಧೀಶರು ತಮ್ಮ ಮಠಗಳು ಬಸವಣ್ಣನವರ ಕ್ರಾಂತಿಗಿಂತಲೂ ಎಷ್ಟೋ ಶತಮಾನಗಳ, ಯುಗ ಯುಗಗಳ ಮೊದಲಿದ್ದವೆಂದು ಹೇಳುವುದರಲ್ಲಿ

---

೧. ಮಲ್ಲಾಪುರ (ಬಿ.ವಿ.) : ವೀರಶೈವ ಮಠಗಳ ಹಿನ್ನೆಲೆ, ಪುಟ ೧೫೯. ನೋಡು : ಹನ್ನೆರಡುಮಠ (ಜೆ.ಎಚ್.) ಸಂಪಾದಿತ, ವಿಶ್ವಪ್ರಭೆ.

೨. ಎರೇಸೀಮೆ (ಚನ್ನಪ್ಪ) : ವೀರಶೈವ ಮಠಗಳು : ಸಮಾಜ ಸೇವೆ, ಪುಟ ೨೪-೨೫, ನೋಡು : ಚನ್ನಬಸಪ್ಪ (ಗೊ.ರು.) ಸಂಪಾದಿತ ' ಸೇವಾ ಸಂಪದ ' ಆರ್.ಎಂ.ಬಿ. ಆರಾಧ್ಯ ಅಭಿನಂದನ ಗ್ರಂಥ. ಬೆಂಗಳೂರು, ೧೯೯೧

ಸಂತೋಷಪಡುತ್ತಾರೆ. ಎಷ್ಟು ಶತಮಾನ ಹಿಂದಿನವು ? ಎಂದು ಕೇಳಿದರೆ ಅವರಲ್ಲಿ ಐತಿಹಾಸಿಕ ದಾಖಲೆಯಾಧಾರಿತ ಉತ್ತರವಿಲ್ಲ. ಇಂದಿಗೂ ಶ್ರೀಶೈಲ, ಕೇದಾರ ಪೀಠಗಳಲ್ಲಿ ಪೂಜೆಗೊಳ್ಳುವ ಲಿಂಗವು ' ಸ್ಥಾವರಲಿಂಗ ' ವಾಗಿದೆ.

ಡಾ. ಬಿ. ವಿ. ಮಲ್ಲಾಪುರರು ಹೇಳುವಂತೆ ಅನೇಕ ಕಾಳಾಮುಖ ಮಠಗಳು ವೀರಶೈವ ಮಠಗಳಾಗಿ ಪರಿವರ್ತಿತವಾಗಿವೆ. " ಹೀಗೆ ಒಂದು ಕಾಲಕ್ಕೆ ಕರ್ನಾಟಕದಲ್ಲಿ ಬಹಳ ಪ್ರಬಲವಾಗಿದ್ದ ಕಾಳಾಮುಖ ಮಠಗಳು ಬಸವಣ್ಣನವರ ಕಾಲದಲ್ಲಾದ ಧಾರ್ಮಿಕ ಕ್ರಾಂತಿಯಿಂದಾಗಿ ಕೆಲವು ಇಲ್ಲವಾದರೆ, ಇನ್ನೂ ಕೆಲವು ವೀರಶೈವ ಮಠಗಳಾಗಿ ಪರಿವರ್ತನೆಗೊಂಡಂತೆ ತೋರುತ್ತವೆ ".[೩]

ಕಳೆದ ಎಂಟುನೂರು ವರುಷಗಳ ದೀರ್ಘಾವಧಿಯಲ್ಲಿ ವೀರಶೈವ ಧರ್ಮಪ್ರಸಾರಕ್ಕಾಗಿ ಬೇರೆ ಬೇರೆ ನಿಟ್ಟಿನಿಂದ ಬೇರೆ ಬೇರೆ ಕಾಲದಲ್ಲಿ ಭಿನ್ನ ಭಿನ್ನ ಪ್ರದೇಶದಲ್ಲಿ ಅದರ ಅನುಯಾಯಿಗಳು ಗುಂಪು (ಸಮುದಾಯ) ಕಟ್ಟಿಕೊಂಡು ಕೆಲಸ ಮಾಡಿರುವುದು ಕಂಡು ಬರುತ್ತದೆ. ಅವರ ತ್ಯಾಗ ಸೇವೆಗಳು ಸ್ಮರಣೀಯವಾಗಿವೆ. ಅವರು ಮಾಡಿದ ಅನುಪಮ ಕಾರ್ಯಗಳಿಂದಾಗಿ ವೀರಶೈವ ಧರ್ಮವು ಜೀವಂತ ಧರ್ಮವಾಗಿ (ಲಿವಿಂಗ್ ರಿಲಿಜನ್) ಇಂದಿಗೂ ಉಳಿದು ಬಂದಿದೆಯೆಂದು ಹೇಳಬಹುದು. ಹನ್ನೆರಡನೆಯ ಶತಮಾನದಲ್ಲಿ ಹರಳಯ್ಯ-ಮಧುವಯ್ಯರೊಂದಿಗೆ ಲಕ್ಷಾವಧಿ ಶಿವಶರಣರ ಆಹುತಿ ತೆಗೆದುಕೊಂಡದ್ದು ಐತಿಹಾಸಿಕ ದಾಖಲೆಯಾಗಿದೆ. ವಿಜಯನಗರದ ಕೆಲವು ಅರಸರ ಕಾಲಕ್ಕೂ ಅದಕ್ಕೆ ಧಕ್ಕೆಯುಂಟಾಗಿದೆಯೆಂದು ತೋರುತ್ತದೆ. ಮೈಸೂರು ಒಡೆಯರ ಕಾಲಕ್ಕೆ ಒಂದೇ ದಿನದಲ್ಲಿ ಸುಮಾರು ೪೦೦ ಮಠಾಧೀಶರನ್ನು ಕೊಂದು, ೭೦೦ ಮಠಗಳನ್ನು ನೆಲಸಮ ಮಾಡಿ, ಲಕ್ಷಾವಧಿ ಲಿಂಗಾಯತರನ್ನು ಹತ್ಯೆ ಮಾಡಿದ ಘಟನೆಯನ್ನು ಮಾರ್ಕ್ಸ್ ವಿಲ್ಸವೆಂಬ ವಿದ್ವಾಂಸನು ತನ್ನ ' ಮೈಸೂರಿನ ಇತಿಹಾಸ ' (ಹಿಸ್ಟರಿ ಆಫ್ ಮೈಸೂರು) ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಇಂಥ ರಾಜಕೀಯ ಆಘಾತಗಳನ್ನು ಎದುರಿಸಿ ವೀರಶೈವ ಧರ್ಮ ಮತ್ತು ಅದರ ಮಠಗಳು ಇಂದಿಗೂ ಉಳಿದು ಬರಬೇಕಾದರೆ ಅದರ ಅನುಯಾಯಿಗಳ ತ್ಯಾಗ ಬಲಿದಾನಗಳೇ ಕಾರಣವೆಂದು ಹೇಳಬಹುದು.

ಗುರುಮಠ-ವಿರಕ್ತಮಠಗಳು :

ಧರ್ಮ ರಕ್ಷಣೆ-ಪ್ರಸಾರಕ್ಕಾಗಿ ಉದಿಸಿದ ಲಿಂಗಾಯತ ಧರ್ಮದ ಮಠಗಳ ಸಂಘಗಳ ಹೆಸರುಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಿಕ್ಕುತ್ತವೆ. ಇವುಗಳಿಗೆ ' ಬುಡಕಟ್ಟು 'ಗಳೆಂದು ವಿದ್ವಾಂಸರು ಕರೆದುದುಂಟು.

' ಲಕ್ಷದ ಮೇಲೆ ತೊಂಬತ್ತಾರು ಸಹಸ್ರ ಜಂಗಮರು ', ' ಏಳನೂರಾ ಒಂದು ವಿರಕ್ತರು ', ' ನೂರೊಂದು ವಿರಕ್ತರು ', ' ಮೂರು ಸಾವಿರದಾ ಗಣವರರು '. ಇವರ ಸಂಖ್ಯೆ ಅಪರಿಮಿತ. ಆದರೆ ಇವರೆಲ್ಲರೂ ಒಂದೊಂದು ' ಬುಡಕಟ್ಟು ', ಪ್ರತಿಯೊಂದು

---

೩. ಮಲ್ಲಾಪುರ (ಬಿ.ವಿ.) : ವೀರಶೈವ ಮಠಗಳ ಹಿನ್ನೆಲೆ. ಪುಟ ೫೦೯. ನೋಡಿ : 'ವಿಶ್ವಪ್ರಭೆ .

ಬುಡಕಟ್ಟಿಗೂ ಅವರದೇ ಆದ ಗೌರವವಿದೆ. ' ಮಠ ', ' ಬೃಹನ್ಮಠ ', ' ಜಗದ್ಗುರುಮಠ ', ಯಾವುದಿದ್ದರೂ ಮೂಲತಃ ಅದೊಂದು ಬುಡಕಟ್ಟು. ' ಬಗೆ ', ' ಸಮಯ ', ' ಸಂಪ್ರದಾಯ ' ಆ ಮೇಲೆ ಬೆಳೆದದ್ದು. ವೀರಶೈವ ಹೃದಯ ಸಿಂಹಾಸನವೇ ಶೂನ್ಯತತ್ವದ ಬುಡಕಟ್ಟು[೧] ಎಂಬುದು ಡಾ. ಶಿವಾನಂದ ವಿರಕ್ತಮಠರ ಅಭಿಪ್ರಾಯವಾಗಿದೆ.

ಈ ವಿವಿಧ ಬುಡಕಟ್ಟುಗಳಿಗೆ ಸಂಬಂಧಿಸಿದ ಅನುಯಾಯಿಗಳು ಲಿಂಗಾಯತ ಧರ್ಮ ರಕ್ಷಣೆಗಾಗಿ ಭಾರತದ ಉದ್ದಗಲಕ್ಕೂ ಮಠಗಳನ್ನು ಕಟ್ಟಿಕೊಂಡು ಅನುಪಮ ಜನಸೇವೆಗೈದಿರುವರು. ಕರ್ನಾಟಕದ ಗಡಿರೇಖೆಗಳಿಗೆ ಹೊಂದಿದ ಆಂಧ್ರ, ಮಹಾರಾಷ್ಟ್ರ, ಕೇರಳಗಳ ಮತ್ತು ತಮಿಳುನಾಡುಗಳಲ್ಲೂ ಮಠಗಳನ್ನು ಸ್ಥಾಪಿಸಿ ಧರ್ಮ ಪ್ರಸಾರ ಮಾಡಿರುವ ಸಂಗತಿ ಅದ್ಭುತವೂ ಅವಿಸ್ಮರಣೀಯವೂ ಆಗಿದೆ.

ಹೀಗೆ ಬುಡಕಟ್ಟುಗಳಿಗೆ ಸಂಬಂಧಿಸಿ ಅಭಿವೃದ್ಧಿ ಹೊಂದಿದ ಮಠಗಳಲ್ಲಿ ವಿರಕ್ತಪೀಠ ಮತ್ತು ಗುರುಪೀಠಗಳಿಗೆ ಸೇರಿದವುಗಳೇ ಅಸಂಖ್ಯಾತ ಕರ್ನಾಟಕದ ಪ್ರತಿಯೊಂದು ಹಳ್ಳಿಯಲ್ಲೂ ಒಂದೆರಡು ಮಠಗಳನ್ನು ಇಂದಿಗೂ ಕಾಣಬಹುದು. ಪಟ್ಟಣಗಳಲ್ಲಿಯೂ ಆಯಾ ಪ್ರಮಾಣದಲ್ಲಿ ಅವುಗಳ ಸಂಖ್ಯೆ ಹೆಚ್ಚಿದೆ. ಸುಪ್ರಸಿದ್ಧ ಸಂಶೋಧಕ ಸಾಹಿತಿಗಳಾದ ಡಾ. ಎಂ. ಚಿದಾನಂದಮೂರ್ತಿಗಳ ಅಭಿಪ್ರಾಯ ಅತ್ಯಂತ ಗಮನಾರ್ಹವಾಗಿದೆ.

" ವಿರಕ್ತ ಪೀಠಗಳಿಗೆ ಮತ್ತು ಗುರುಪೀಠಗಳಿಗೆ ಕರ್ತವ್ಯ ವಿಂಗಡಣೆಯಲ್ಲಿ ಭೇದವಿದೆಯೇ ಹೊರತು ಉದ್ದೇಶ ಭೇದವಿಲ್ಲ. ಎರಡೂ ಸಮಾನ ಗೌರವಕ್ಕೆ ಪಾತ್ರ, ಎರಡೂ ಸಮಾಜದ ಎರಡು ಕಣ್ಣುಗಳು ".[೨]

ವೀರಶೈವ ಮಠಗಳು ನಡೆಸಿಕೊಂಡು ಬಂದ ವಿದ್ಯಾರ್ಥಿ ಪ್ರಸಾದ ನಿಲಯಗಳನ್ನು ಕುರಿತು ಈ ಪ್ರಬಂಧದಲ್ಲಿ ಮುಖ್ಯವಾಗಿ ನಾವು ಚರ್ಚಿಸಬೇಕಾಗಿದೆ. ವಿದ್ಯಾರ್ಥಿ ಉಚಿತ ಪ್ರಸಾದ ನಿಲಯಗಳ ಮತ್ತು ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ವೀರಶೈವ ಧರ್ಮದ ' ಕಾಯಕ ಮತ್ತು ದಾಸೋಹ ' ತತ್ವಗಳು ಮುಖ್ಯ ಕಾರಣವೆಂದು ಹೇಳಬಹುದು. ವೀರಶೈವ ಮಠಾಧೀಶರಿಗೆ ಅವು ಮೂಲಪ್ರೇರಣೆಯಾಗಿವೆ. ಆದುದರಿಂದ ಅವುಗಳ ವಿವರಣೆಯನ್ನಿಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸುವುದು ಉಚಿತವೆಂದು ತೋರುತ್ತದೆ.

ಕಾಯಕ-ದಾಸೋಹ :

ಅಷ್ಟಾವರಣಗಳು, ಪಂಚಾಚಾರಗಳು ಮತ್ತು ಷಟಸ್ಥಲಗಳು ಲಿಂಗಾಯತ ಧರ್ಮದ ಅಂಗ-ಪ್ರಾಣ-ಭಾವವೆಂದು ಹೇಳಲಾಗುತ್ತದೆ. ಈ ಮುಪ್ಪುರಿಯಲ್ಲಿ ಮೂಡಿ

---

೧. ಶಿವಾನಂದ (ವಿ) : ಶೂನ್ಯ ಸಿಂಹಾಸನ ಒಂದು ಸಂಪ್ರದಾಯವೇ ? ಒಂದು ವಿವೇಚನೆ ಪುಟ ೨೪೩-೨೪೪. ನೋಡು : ಶಾಂತರಸರು ಸಂಪಾದಿಸಿದ ' ಕಾಯಕ ಪರಿಣಾಮಿ ', ಶ್ರೀ ಚನ್ನಬಸವ ಪಟ್ಟದ್ದೇವರ ಶತಮಾನೋತ್ಸವ ಸಮಿತಿ, ಭಾಲ್ಕಿ, ೧೯೯೧.

೨. ಚಿದಾನಂದಮೂರ್ತಿ (ಎಂ) : ಪಂಚಾಚಾರ್ಯರ ಬಗೆಗಿನ ವಿವಾದಕ್ಕೆ ಅಂತಿಮ ತೆರೆ, ಪುಟ ೩೯೪-೩೯೨, ನೋಡು : ಶಾಂತರಸರು ಸಂಪಾದಿಸಿದ ' ಕಾಯಕ ಪರಿಣಾಮಿ '

ಬಂದ ' ಕಾಯಕ ' ಮತ್ತು ' ದಾಸೋಹ ' ತತ್ವಗಳು ಎರಡು ಅಮೃತ ಫಲಗಳೆಂದು ಹೇಳಬಹುದು.

ಸತ್ಯ ಶುದ್ಧ ಕಾಯಕವು ವ್ಯಕ್ತಿಯಲ್ಲಿ ಆತ್ಮಗೌರವವನ್ನೂ ಸ್ವಾಭಿಮಾನವನ್ನೂ ಉಂಟು ಮಾಡುತ್ತದೆ. ಭಿಕ್ಷೆ ಬೇಡುವುದು ಅಗೌರವವೆನಿಸುತ್ತದೆ. ಇದರಿಂದ ಆರ್ಥಿಕ ಸುಸ್ಥಿತಿ ಉಂಟಾಗುವುದರಿಂದ ವ್ಯಕ್ತಿ ಅನ್ಯರ ಹಂಗಿನಲ್ಲಿರಬೇಕಾದುದಿಲ್ಲ. ' ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಮನೆಂಬೆ ' ಎಂದು ಬಸವಣ್ಣನವರು ದುಡಿಮೆಗಾರನಲ್ಲಿ ದೈವತ್ವವನ್ನು ಕಂಡಿದ್ದಾರೆ.

ಗಳಿಕೆಗೆ ಕಾಯಕ ಬೇಕು ನಿಜ. ಆದರೆ ಕಾಯಕದಿಂದ ಅವಶ್ಯಕತೆಗಿಂತ ಹೆಚ್ಚಿನ ಧನ ಸಂಪತ್ತಿಯ ಸಂಗ್ರಹವಾಗಬಾರದು. ಉಳಿಕೆಯು ಆಲಸ್ಯಕ್ಕೂ ಅನಾಚಾರಕ್ಕೂ ಕಾರಣವಾಗಬಾರದು. ಅಂತೆಯೇ ಉಳಿಕೆಯನ್ನು ಸಮಾಜದ ಸ್ವಾಸ್ಥ್ಯಕ್ಕಾಗಿ ಮನಃಪೂರ್ವಕವಾಗಿ ಬಳಸಬೇಕು. ಇದಕ್ಕೆ ' ದಾಸೋಹ 'ವೆಂದು ಹೆಸರು.

ಸಕಲ ಜೀವಾವಳಿಗೆ ಲೇಸಬಯಸುವುದೇ ಶರಣ ಸಿದ್ಧಾಂತ. ತನ್ನ ತನುಶುದ್ಧವಾಗಿ, ಮನಶುದ್ಧವಾಗಿ, ಧನಶುದ್ಧವಾಗಿ ಜನ ಸೇವೆಯನ್ನು ಮಾಡಬೇಕು. ' ಸೋಹಂ ' ಎಂದು ಅಂತರಂಗದ ಅಹಂಕಾರವನ್ನು ತೋರುತ್ತ, ' ಶಿವೋಹಂ ' ಎಂದು ಬಹಿರಂಗದ ಮದವನ್ನು ತೋರುತ್ತ ಮಾಡುವ ಜನಸೇವೆ ಕಂದಾಚಾರದ ಕುರುಹು. ಆದುದರಿಂದ ತನು ಮನ ಶುದ್ಧವಾಗಿ ಗಳಿಸಿದ ಸಂಪತ್ತನ್ನು ಅಬಲರ, ಆರ್ತರ, ದೀನರ, ದರಿದ್ರರ, ದಲಿತರ, ಹಿಂದುಳಿದವರ ಉದ್ಧಾರಕ್ಕಾಗಿ ವ್ಯಯಿಸಬೇಕೆಂಬುದು ದಾಸೋಹದ ಗರ್ಭಿತಾರ್ಥ. ಅನ್ನ, ಅರಿವೆ, ಆಸರೆ ಇದ್ದವರು ಇಲ್ಲದವರಿಗೆ ಅನ್ನ, ಆಶ್ರಯಗಳನ್ನಿತ್ತು ಅವರಲ್ಲಿ ಅರಿವನ್ನು ಉದ್ದೀಪನಗೊಳಿಸಬೇಕೆಂಬುದು ದಾಸೋಹದ ವ್ಯಾಖ್ಯೆ. ಈ ಉದ್ದೇಶದ ಕಾರ್ಯಾರ್ಥವಾಗಿ ವೀರಶೈವ ಮಠಗಳು ಜನ್ಮತಳೆದವು. ಕಾಯಕ ದಾಸೋಹ ತತ್ವಗಳನ್ನು ಕ್ರಿಯಾರೂಪಕ್ಕೆ ತರುವಲ್ಲಿ ಅವು ಮುಂಚೂಣಿಯಲ್ಲಿ ನಿಂತವು. ಅನ್ನದಾಸೋಹ, ಜ್ಞಾನ ದಾಸೋಹ, ಶಿಕ್ಷಣ ದಾಸೋಹ, ಸಾಹಿತ್ಯ ದಾಸೋಹ, ಸಂಸ್ಕೃತಿ ದಾಸೋಹ ಎಂದು ದಾಸೋಹ ಶಬ್ದ ವಿವಿಧ ಅರ್ಥವ್ಯಾಪ್ತಿ ಹೊಂದಿರುವುದನ್ನು ಇಂದಿನ ವೀರಶೈವ ಮಠಗಳಲ್ಲಿ ಕಾಣಬಹುದಾಗಿದೆ. ಮಾನವನ ಹಸಿವು ಯಾವ ಯಾವ ಕ್ಷೇತ್ರದಲ್ಲಿ ಉಂಟಾಗಿದೆಯೋ ಆಯಾ ಹಸಿವೆಯನ್ನು ತೃಪ್ತಿಪಡಿಸುವ ಮಣಿಹವನ್ನು ಹೊತ್ತು ನಡೆದಿರುವ ಚಿತ್ರವನ್ನು ಈ ಮಠಗಳಲ್ಲಿ ನೋಡಬಹುದಾಗಿದೆ. ಅವು ಬಡ ವಿದ್ಯಾರ್ಥಿಗಳಿಗಾಗಿ ಊಟ ವಸತಿಗಳನ್ನು ಒದಗಿಸಲು ಪ್ರಸಾದ ನಿಲಯಗಳನ್ನು ತೆರೆದಿವೆ. ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಶಾಲೆ-ಕಾಲೇಜುಗಳನ್ನು ಪ್ರಾರಂಭಿಸಿವೆ. ಜನತೆಯ ಅಂತರಂಗ ಬಹಿರಂಗ ಪರಿಶುದ್ಧತೆಗಾಗಿ ಪುರಾಣ, ಪ್ರವಚನ, ಕೀರ್ತನೆ, ಭಾಷಣ ಇತ್ಯಾದಿಗಳನ್ನೊಳಗೊಂಡ ಶಿವಾನುಭವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ..ಶರಣ ತತ್ವಸಿದ್ಧಾಂತಗಳ ಪ್ರಚಾರಕ್ಕಾಗಿ ಗ್ರಂಥ ಪ್ರಕಟಣೆಗೆ ಮುಂದಾಗಿವೆ. ಇವೆಲ್ಲ ದಾಸೋಹ ತತ್ವದ ವಿವಿಧ ಮುಖಗಳೆಂದು ಹೇಳಬಹುದು.

ವೀರಶೈವ ಮಠಗಳು :

ಭಾರತದಲ್ಲಿ ವೀರಶೈವ ಮಠಗಳು ಹಳ್ಳಿ-ಪಟ್ಟಣಗಳಲ್ಲಿ ಸ್ಥಾಪನೆಗೊಂಡು ಸಮಾಜದ ಸೇವೆಯನ್ನು ಬಹುಮುಖವಾಗಿ ಮಾಡಿವೆ. ವಿಶೇಷವಾಗಿ ಕರ್ನಾಟಕದಲ್ಲಿ ಅವು ಹೊಸ ಸಮಾಜ ನಿರ್ಮಾಣಕ್ಕಾಗಿ ಅವಿರತವಾಗಿ ಶ್ರಮಿಸಿವೆ. ಅವುಗಳಲ್ಲಿ ಕೆಳಗೆ ಕಾಣಿಸಿದ ಕೆಲವು ಪ್ರಮುಖ ಮಠಗಳು ಮಾಡುತ್ತಾ ಬಂದಿರುವ ಬಹುಮುಖ ಸೇವೆಯನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ.

೧. ಶ್ರೀ ಮುರುಘಾಮಠ, ಧಾರವಾಡ
೨. ಶ್ರೀ ಸಿದ್ಧಗಂಗಾಮಠ, ಸಿದ್ಧಗಂಗಾ
೩. ಶ್ರೀ ಸುತ್ತೂರು ವೀರಸಿಂಹಾಸನಮಠ, ಮೈಸೂರು
೪. ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ
೫. ಶ್ರೀ ಜಗದ್ಗುರು ಮೂರುಸಾವಿರಮಠ, ಹುಬ್ಬಳ್ಳಿ
೬. ಶ್ರೀ ತರಳಬಾಳು ಬೃಹನ್ಮಠ, ಸಿರಿಗೆರೆ
೭. ಶ್ರೀ ಗವಿಸಿದ್ಧೇಶ್ವರ ಸಂಸ್ಥಾನಮಠ, ಕೊಪ್ಪಳ
೮. ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ
೯. ಶ್ರೀ ತೋಂಟದಾರ್ಯ ಸಂಸ್ಥಾನಮಠ, ಚಿತ್ರದುರ್ಗ
೧೦. ಶ್ರೀ ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ

ಮೇಲಿನ ಪ್ರತಿಯೊಂದು ಮಠದ ಬಗ್ಗೆ ಅದು ಸ್ಥಾಪನೆಗೊಂಡ ವರುಷ ಮತ್ತು ಪ್ರಸಾದ ನಿಲಯವು ಪ್ರಾರಂಭವಾದ ವರುಷ, ಇಲ್ಲಿಯವರೆಗೆ ಪ್ರಸಾದ ನಿಲಯದಲ್ಲಿದ್ದು ವಿದ್ಯಾಭ್ಯಾಸವನ್ನು ಮುಗಿಸಿದ ವಿದ್ಯಾರ್ಥಿಗಳ ಸಂಖ್ಯೆ, ಈ ಮಠಗಳ ಇನ್ನಿತರ ಶಾಖಾಮಠಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಸದ್ಯಕ್ಕೆ ಮಠಾಧಿಪತಿಗಳ ಹೆಸರು ಇತ್ಯಾದಿಗಳನ್ನು ಆಯಾ ಮಠಾಧೀಶರಿಗೆ ಪತ್ರ ಬರೆದು ತರೆಸಿಕೊಂಡೆವು. ಈ ಅಂಕಿ ಸಂಖ್ಯೆಗಳನ್ನು ತೌಲನಿಕ ದೃಷ್ಟಿಯಿಂದ ವಿಶ್ಲೇಷಿಸಿದೆವು. ಈ ವಿಶ್ಲೇಷಣೆಯಿಂದ ಕಂಡು ಬಂದ ಫಲಿತಾಂಶಗಳನ್ನು ಕ್ರೋಢೀಕರಿಸಿ ಕೆಳಗೆ ನಮೂದಿಸಿದ್ದೇವೆ. ಕೊನೆಯಲ್ಲಿ ಕೆಲವು ಸಲಹೆಗಳನ್ನೂ ನೀಡಿದ್ದೇವೆ.

ಫಲಿತಾಂಶಗಳು :

೧. ಬಡ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದಕ್ಕೆ ಪೂರಕವಾಗಿ ವಿದಾರ್ಥಿ ನಿಲಯಗಳನ್ನು, ವಿದ್ಯಾರ್ಥಿ ಉಚಿತ ಪ್ರಸಾದನಿಲಯಗಳನ್ನು ವೀರಶೈವ ಮಠಾಧೀಶರು ಸ್ಥಾಪಿಸಿ ಸಲ್ಲಿಸಿದ ಸೇವೆ ಅಮೋಘವಾಗಿದೆ, ಅನುಪಮವಾಗಿದೆ.

೨. ವಿದ್ಯಾರ್ಥಿ ಉಚಿತ ಪ್ರಸಾದ ನಿಲಯದ ಪ್ರಯೋಜನವನ್ನು ಮೊಟ್ಟ ಮೊದಲು ಅರಿತುಕೊಂಡು ಕಾರ್ಯ ಪ್ರವೃತ್ತರಾದವರು ಚಿತ್ರದುರ್ಗದ ಜಗದ್ಗುರು ಮಹಾಲಿಂಗ ಸ್ವಾಮಿಗಳು ಮತ್ತು ಬೆಳಗಾವಿಯ ಡೆಪ್ಯೂಟಿ ಚೆನ್ನಬಸಪ್ಪನವರು. ಅವರಿಂದ ೧೮೬೮ ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭಿಸಲ್ಪಟ್ಟ ವಿದ್ಯಾರ್ಥಿ ಉಚಿತ ಪ್ರಸಾದ ನಿಲಯವೇ ಮೊಟ್ಟ ಮೊದಲಿನದು.

೩. ಬೆಳಗಾವಿ ಜಿಲ್ಲಾ ಶಿರಸಂಗಿ ಸಂಸ್ಥಾನದ ಲಿಂಗರಾಜ ದೇಸಾಯಿಯವರು ತಮ್ಮ ಸಂಸ್ಥಾನದ ಅಮ್ಮಣಗಿ ಗ್ರಾಮದ ವಾರ್ಷಿಕ ಉತ್ಪನ್ನದಿಂದ ಧಾರವಾಡದಲ್ಲಿ ೧೯೦೫ ರಲ್ಲಿ ತೆರೆದ ಉಚಿತ ಪ್ರಸಾದ ನಿಲಯವೇ ಎರಡನೆಯದು. ಅನಂತರ ಕ್ರಮೇಣ ವಿದ್ಯಾರ್ಥಿ ಪ್ರಸಾದ ನಿಲಯಗಳು ಕರ್ನಾಟಕದಲ್ಲಿ ಒಂದೊಂದಾಗಿ ಮೂಡಿ ಬಂದವು.

೪. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳ ಆಳವಾದ ಅಭ್ಯಾಸ ಮಾಡಿ ವೀರಶೈವ ವಿದ್ಯಾರ್ಥಿಗಳು ತಮ್ಮ ಭಾವಿ ಜೀವನದಲ್ಲಿ ವಿದ್ವಾಂಸರು, ಪ್ರಜ್ಞಾವಂತರು, ಸೇವಾನಿಷ್ಠರು ಆಗಲು ಪ್ರಸಾದ ನಿಲಯಗಳು ಅತ್ಯಂತ ಸಹಾಯಕಾರಿಯಾದವು.

೫. ವೀರಶೈವರ ವ್ಯಾಟಿಕನ್ ಎಂದು ಪ್ರಸಿದ್ಧಿ ಪಡೆದ ಶಿವಯೋಗ ಮಂದಿರದ ರೂವಾರಿಗಳಾದ ಶ್ರೀ ಹಾನಗಲ್ ಕುಮಾರ ಸ್ವಾಮಿಗಳು ವಿದ್ಯಾರ್ಥಿ ನಿಲಯಗಳ ಹುಟ್ಟು ಬೆಳವಣಿಗೆಗೆ ಸ್ಫೂರ್ತಿಯ ಸೆಲೆಯಾಗಿದ್ದರೆಂದು ಹೇಳಬಹುದು. ಶಿವಯೋಗ ಮಂದಿರದಲ್ಲಿ ಧಾರ್ಮಿಕ ತರಬೇತಿ ಪಡೆದ ವಟುಗಳೇ ಮುಂದೆ ಕರ್ನಾಟಕದ ಸಾವಿರಾರು ಮಠಗಳಿಗೆ ಅಧಿಪತಿಗಳಾಗಿ ಪ್ರಸಾದ ನಿಲಯಗಳನ್ನು ಪ್ರಾರಂಭಿಸಿರುವುದಾಗಿ ಕಂಡು ಬರುತ್ತದೆ.

೬. ಚಿತ್ರದುರ್ಗ ಬೃಹನ್ಮಠ ಶ್ರೀ ಜ. ಜಯದೇವ ಮಹಾಸ್ವಾಮಿಗಳು, ತರಳಬಾಳು ಮಠದ ಶ್ರೀ ಜ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾಮಠದ ಡಾ. ಶಿವಕುಮಾರ ಮಹಾಸ್ವಾಮಿಗಳು, ಸುತ್ತೂರುಮಠದ (ಮೈಸೂರು) ಶ್ರೀ ಜ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಧಾರವಾಡ ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ಬೆಳಗಾವಿ ನಾಗನೂರ ರುದ್ರಾಕ್ಷಿಮಠದ ಡಾ. ಶಿವಬಸವ ಮಹಾಸ್ವಾಮಿಗಳು ಮುಂತಾದವರು ಕರ್ನಾಟಕದಲ್ಲಿ ಉಚಿತ ಪ್ರಸಾದ ನಿಲಯಗಳ ಸ್ಥಾಪನೆ-ಅಭಿವೃದ್ಧಿಯಲ್ಲಿ ಪ್ರಮುಖ ಸೇವೆ ಸಲ್ಲಿಸಿರುವರು.

೭. ವೀರಶೈವ ಮಠಾಧೀಶರು ಸ್ಥಾಪಿಸಿದ ಪ್ರಸಾದ ನಿಲಯಗಳಲ್ಲಿ ಸಿಂಹಪಾಲು ವಿದ್ಯಾರ್ಥಿಗಳಿಗಾಗಿ ಮೀಸಲಾಗಿವೆ. ಕೈಬೆರಳಿನಲ್ಲಿ ಎಣಿಸುವಷ್ಟು ಪ್ರಸಾದ ನಿಲಯಗಳು ಮಾತ್ರ ವಿದ್ಯಾರ್ಥಿನಿಯರಿಗಾಗಿ ಮೀಸಲಾಗಿವೆ.

೮. ವೀರಶೈವ ಮಠಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು : (ಅ) ವಿರಕ್ತ ಮಠಗಳು, (ಆ) ಗುರುಮಠಗಳು. ಬಹುಸಂಖ್ಯಾತ ವಿದ್ಯಾರ್ಥಿ ಉಚಿತ ಪ್ರಸಾದ ನಿಲಯಗಳಿಗೆ ಜನ್ಮವಿತ್ತು ಪೋಷಿಸಿಕೊಂಡು ಬಂದಂಥವು ವಿರಕ್ತಮಠಗಳಾಗಿವೆ. ಗುರು ಪೀಠಗಳ ಅಧೀನದಲ್ಲಿ ಪ್ರಾರಂಭವಾಗಿರುವ ಪ್ರಸಾದ ನಿಲಯಗಳ ಸಂಖ್ಯೆ ಅತ್ಯಲ್ಪ, ಗೌಣ.

೯. ಕಳೆದ ಶತಮಾನದಲ್ಲಿ ಶೈಕ್ಷಣಿಕವಾಗಿ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದ ವೀರಶೈವ ಸಮಾಜವು ಕರ್ನಾಟಕದಲ್ಲಿ ಹೆಚ್ಚು ಸುಶಿಕ್ಷಿತ ಸಮಾಜವಾಗಿ

ರೂಪುಗೊಳ್ಳುವುದಕ್ಕೆ ಪ್ರಸಾದ ನಿಲಯಗಳು ಅಧಿಕಾಂಶ ಕಾರಣವೆಂದು ಹೇಳಬಹುದು. ಸರಕಾರಿ ಉನ್ನತ ಹುದ್ದೆಗಳನ್ನು ಹೊಂದಿದ, ರಾಜಕೀಯದಲ್ಲಿ ಮುಂಚೂಣಿಯಲ್ಲಿರುವ, ಕೃಷಿ, ಉದ್ದಿಮೆಗಳಲ್ಲಿ ಹೆಚ್ಚು ಪ್ರಗತಿ ಸಾಧಿಸಿರುವ ಇಂದಿನ ವೀರಶೈವರು ವೀರಶೈವ ಮಠಗಳು ಪ್ರಾರಂಭಿಸಿದ ವಿದ್ಯಾರ್ಥಿ ಪ್ರಸಾದ ನಿಲಯಗಳಿಗೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಋಣಿಯಾಗಿರುವರೆಂದು ಬೇರೆ ಹೇಳಬೇಕಿಲ್ಲ.

೧೦. ಮೊದಮೊದಲು ಪ್ರಸಾದ ನಿಲಯಗಳು ಲಿಂಗವಂತ ವಿದ್ಯಾರ್ಥಿಗಳಿಗಾಗಿಯೇ ಪ್ರಾರಂಭಿಸಲ್ಪಟ್ಟರೂ ತದನಂತರದಲ್ಲಿ ಅವು ಜಾತ್ಯತೀತ ಮನೋಭಾವನೆಯನ್ನು ಅಳವಡಿಸಿಕೊಂಡಿವೆ. ಹುಬ್ಬಳ್ಳಿ ಶ್ರೀ ಜಗದ್ಗುರು ಮೂರುಸಾವಿರಮಠ, ತರಳಬಾಳು ಬೃಹನ್‌ಮಠ ಸಿದ್ಧಗಂಗಾಮಠ, ನಾಗನೂರು ರುದ್ರಾಕ್ಷಿಮಠಗಳ ಪ್ರಸಾದ ನಿಲಯಗಳಲ್ಲಿ ' ವಿಪ್ರ ಮೊದಲು ಅಂತ್ಯಜ ಕಡೆಯಾಗಿ ' ಎಲ್ಲ ಜಾತಿ ಧರ್ಮಗಳ ವಿದ್ಯಾರ್ಥಿಗಳಿಗೆ ಪ್ರವೇಶವಿದೆ. ಇಂಥ ಜನಾಂಗ ಜನಾಂಗದಲ್ಲಿ ಸಾಮರಸ್ಯವನ್ನುಂಟು ಮಾಡುವ ಪ್ರಸಾದ ನಿಲಯಗಳು ರಾಷ್ಟ್ರದ ಪ್ರಬಲ ಶಕ್ತಿಯಾಗಿವೆಯೆಂದು ಹೇಳಬಹುದು.

ಸಲಹೆಗಳು :

೧. ವೀರಶೈವ ಧರ್ಮದಲ್ಲಿ ಸ್ತ್ರೀ-ಪುರುಷರಿಗೆ ಸಮಾಜದ ಧಾರ್ಮಿಕ ಹಕ್ಕುಗಳನ್ನು ಕೊಡಲಾಗಿದೆ. ಆದರೆ ಶಿಕ್ಷಣ ಸೌಲಭ್ಯಗಳಿಗೆ ವೀರಶೈವ ಸ್ತ್ರೀ ವಂಚಿತಳಾಗಿರುವಳೆಂದು ಮೇಲಿನ ನಮ್ಮ ಅಧ್ಯಯನದಿಂದ ತಿಳಿದು ಬರುತ್ತದೆ. ಪ್ರತಿಶತ ೯೦ರಷ್ಟು ಪ್ರಸಾದ ನಿಲಯಗಳು ವಿದ್ಯಾರ್ಥಿಗಳಿಗಿದ್ದು ವಿದ್ಯಾರ್ಥಿನಿಯರಿಗೆ ಹೆಸರಿಗೆ ಮಾತ್ರ ಇವೆ. ತೊಟ್ಟಿಲ ತೂಗುವ ಕೈ ಜಗತ್ತನ್ನೇ ತೂಗಬಲ್ಲದು, ಅಂತರಂಗದೊಳಗಿರುವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ, ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನ ಪ್ರತಿರೂಪ. ಇದು ಶರಣರ ಹಿತನುಡಿ. ಬಸವಾದಿ ಪ್ರಮಥರ ತತ್ವಾನುಯಾಯಿಗಳಾದ ವಿರಕ್ತ ಪೀಠಾಧಿಪತಿಗಳು ಮಹಿಳಾ ಉಚಿತ ಪ್ರಸಾದ ನಿಲಯಗಳ ಸ್ಥಾಪನೆಗೂ ಗಮನ ಕೊಡಬೇಕೆಂದು ಸೂಚಿಸಬಯಸುತ್ತೇವೆ.

೨. ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡಿನಲ್ಲಿಯ ವೀರಶೈವ ಮಠಗಳು ಪ್ರಸಾದ ನಿಲಯಗಳನ್ನು ಸ್ಥಾಪಿಸುವಂತಾಗಬೇಕು.

೩. ವಿರಕ್ತ ಮಠಾಧೀಶರಂತೆ ಸಮಗ್ರ ಸಮಾಜದ ಪ್ರಗತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಗುರುಪೀಠಾಧೀಶರಿಗೆ ನಮ್ರತೆಯಿಂದ ಸೂಚಿಸಬಯಸುತ್ತೇವೆ. ಗುರು-ವಿರಕ್ತ ಮಠಾಧೀಶರು ಒಮ್ಮನದಿಂದ ಸಮಾಜ ಸೇವೆಗೆ ಕಂಕಣಬದ್ಧರಾದರೆ ವೀರಶೈವ ಸಮಾಜವು ಭಾರತದಲ್ಲಿ ಸ್ವಯಂಪೂರ್ಣ ಆದರ್ಶ ಸಮೃದ್ಧ ಸಮಾಜವಾಗುವುದರಲ್ಲಿ ಸಂದೇಹವಿಲ್ಲ.

ಎಂ ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ವೀರಶೈವ ಮಠಗಳು : ಸ್ವಾತಂತ್ರ್ಯ ಚಳವಳಿ

● ಡಾ. ಗುರುಪಾದ ಮರಿಗುದ್ದಿ

ಆಧುನಿಕ ಭಾರತದ ಚರಿತ್ರೆಯಲ್ಲಿ ಸ್ವಾತಂತ್ರ್ಯ ಹೋರಾಟದ ಅವಧಿಯು ಅತ್ಯಂತ ಸ್ಮರಣೀಯವಾದುದು; ಮಹತ್ತರವಾದುದು. ವಿವಿಧ ವರ್ಗದ ವಿವಿಧ ರಂಗಗಳ ಜನರು ಈ ಮಹಾಸಂಗ್ರಾಮದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಭಾಗಿಯಾದರು. ಹಾಗೆ ಭಾಗಿಯಾದ ವ್ಯಕ್ತಿಗಳು, ಸಂಸ್ಥೆಗಳು ಹೊಸದೊಂದು ಅನುಭವ ಲೋಕವನ್ನು ಪ್ರವೇಶಿಸಿದವು. ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ಅವಿಭಾಜ್ಯ ಭಾಗವಾದ ವೀರಶೈವ ಮಠಗಳು ದೇಶದ ಸ್ವಾತಂತ್ರ್ಯ ಹೋರಾಟದೊಂದಿಗೆ ಪಡೆದುಕೊಂಡ ಸಂಬಂಧದ ಸ್ಥೂಲ ಚಿತ್ರಣ ದೊರೆಯಬಲ್ಲದು; ಸವಿವರವಾದ ಪೂರ್ಣ ಚಿತ್ರ ಲಭಿಸುವುದಿಲ್ಲ.

ಕ್ರಿ.ಶ. ಪೂರ್ವದ ಕಾಲಕ್ಕೆ ಮುನಿಗಳ, ಸನ್ಯಾಸಿಗಳ ನಿವಾಸಗಳಾಗಿದ್ದ ' ಮಠ 'ಗಳು, ನಂತರ ಬೌದ್ಧ ಮತ್ತು ಜೈನ ಧರ್ಮಗಳ ಉಚ್ಛ್ರಾಯದ ಕಾಲಾವಧಿಯಲ್ಲಿ ಸಾಂಸ್ಥಿಕ ರೂಪ ಪಡೆದುಕೊಂಡು ಪ್ರಬಲವಾದವು. ಪ್ರಾಚೀನ ಕರ್ನಾಟಕದಲ್ಲಿ ಕೆಲವು ಶೈವಮಠಗಳು ಅಸ್ತಿತ್ವದಲ್ಲಿದ್ದವು. ಇದರಲ್ಲಿ ಹೆಚ್ಚಿನವು ಕಾಳಾಮುಖ, ಲಾಕುಳಶೈವದವರಿಗೆ ಸೇರಿದವುಗಳು. ಕ್ರಿ. ಶ. ೧೫, ೧೬ ನೆಯ ಶತಮಾನದವರೆಗೂ ಪ್ರಸಿದ್ಧ ಕಾಳಾಮುಖರ ಮಠಗಳು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದವು. " ಕಾಳಾಮುಖರು ವೀರಶೈವರಾಗಿ ಪರಿವರ್ತನೆ ಹೊಂದುವ ಕಾರ್ಯ ಸರಿಸುಮಾರು ಕ್ರಿ. ಶ. ೧೪೧೦-೩೦ ರಲ್ಲಿ ಅಥವಾ ಅದಕ್ಕೂ ಹಿಂದೆ ಆರಂಭವಾಗಿ ನಿಧಾನವಾಗಿ ಮುಂದುವರೆದಂತೆ ಕಾಣುತ್ತದೆ ".[೧] ಮಧ್ಯಯುಗದಲ್ಲಿ ಈ ಮಠಗಳು ವಚನಗಳ ರಕ್ಷಣೆ, ತತ್ವಪ್ರಸಾರ, ಧರ್ಮಬೋಧೆಗಳಲ್ಲಿ ತೊಡಗಿದ್ದವು.

ಬ್ರಿಟಿಷ ಆಡಳಿತ ಮತ್ತು ಶಿಕ್ಷಣದ ಪ್ರಭಾವದಿಂದಾಗಿ ಭಾರತೀಯರ ಸಾಂಪ್ರದಾಯಿಕ ಬದುಕು ಮಾರ್ಪಟ್ಟಿತು. ಹೊಸ ಆಲೋಚನೆಗಳು, ಜೀವನ ಶೈಲಿಗಳು ಕಾಣಿಸಿಕೊಂಡವು. ಮೂಲತಃ ಸಮಾಜೋ-ಧಾರ್ಮಿಕ ಸಂಸ್ಥೆಗಳಾಗಿದ್ದ ವೀರಶೈವಮಠ ಮಾನ್ಯಗಳು ಈ ಪ್ರಭಾವದಿಂದ ಬಹುಕಾಲ ದೂರಕ್ಕೆ ಉಳಿಯಲಾಗಲಿಲ್ಲ. ೧೮೮೫ ರಲ್ಲಿ

೧. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೦೬

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಸ್ಥಾಪನೆಗೊಂಡರೂ, ಕರ್ನಾಟಕದ ಬಹುಪಾಲು ಜನತೆ ಅದರಿಂದ ದೂರದಲ್ಲಿದ್ದರು. ಇದಕ್ಕೂ ಪೂರ್ವದಲ್ಲಿ, ೧೮೬೭ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪ ಅವರ ಪ್ರಯತ್ನದಿಂದ ಬೆಳಗಾವಿಯಲ್ಲಿ ' ಲಿಂಗಾಯತ ಫ್ರೀ ಬೋರ್ಡಿಂಗ ' ಸ್ಥಾಪನೆಗೊಂಡಿತ್ತು. ಅವರು ಆಧುನಿಕ ಶಿಕ್ಷಣದತ್ತ ಜನರನ್ನು ಸೆಳೆಯುತ್ತಿದ್ದರು. ಅದರ ಅಗತ್ಯ ಬಿಂಬಿಸುತ್ತಿದ್ದರು. ಗಿಲಗಿಂಚಿ ಮತ್ತು ಅರಟಾಳರು ೧೮೮೩ ರಲ್ಲಿ ಲಿಂಗಾಯತ ಅಭಿವೃದ್ಧಿ ನಿಧಿ ಸ್ಥಾಪಿಸಿದ್ದು; ೧೯೧೬ರಲ್ಲಿ ಕೆ.ಎಲ್.ಇ. ಸಂಸ್ಥೆ ಸ್ಥಾಪನೆಗೊಂಡದ್ದು ಈ ಕಾಲದ ಮಹತ್ವದ ಘಟನೆಗಳಾಗಿವೆ.

ವೀರಶೈವ ಮಠಗಳು ಆಧುನಿಕ ಶಿಕ್ಷಣಕ್ಕೆ ಆರಂಭದಲ್ಲಿ ಹೊಂದಿಕೊಳ್ಳಲಿಲ್ಲ. ಹಾಗಾಗಿ ಬದಲಾವಣೆಗಳಿಂದ ಅವು ದೂರದಲ್ಲಿ ಉಳಿದುಬಿಟ್ಟವು. ರಾಷ್ಟ್ರೀಯ ಹೋರಾಟದ ಬಗೆಗೆ ಅವು ನಿರ್ಲಿಪ್ತವಾಗಿದ್ದವು. ಆದರೆ ವೀರಶೈವರಿಗೆ ಸಂಬಂಧಿಸಿದ ಹಾಗೆ ಈ ಅವಧಿಯಲ್ಲಿ ಎರಡು ವಿಚಾರಗಳು ಮುಖ್ಯವೆನಿಸುತ್ತವೆ. ಕರ್ನಾಟಕ ಪ್ರಾಂತೀಯ ಪರಿಷತ್ತಿನ ಸಭೆಗಳು ಜರುಗಿದಾಗಲೆಲ್ಲ, ಅದರಲ್ಲಿ ಭಾಗಿಯಾಗುತ್ತಿದ್ದ ಲಿಂಗಾಯತ ಸಮಾಜದ ವೇದಿಕೆಯ ಅಗತ್ಯ ಕಾಣತೊಡಗಿತು. ಹಾನಗಲ್ಲ ಕುಮಾರ ಶಿವಯೋಗಿಗಳು, ಸಿರಸಂಗಿ ಲಿಂಗರಾಜರು ಇದೇ ದಿಕ್ಕಿನಲ್ಲಿ ಯೋಚಿಸುತ್ತಿದ್ದರು. ಇದರ ಫಲವಾಗಿ ೧೯೦೪ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ೧೯೦೯ರಲ್ಲಿ ಶಿವಯೋಗ ಮಂದಿರ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಇದು ಮೊದಲನೆಯ ಬೆಳವಣಿಗೆ. ಎರಡನೆಯದೆಂದರೆ, ೧೯೨೦ ರಲ್ಲಿ ಬೆಳಗಾವಿಯಲ್ಲಿ ನಡೆದ ಬ್ರಾಹ್ಮಣೇತರ ಸಮ್ಮೇಲನ. ಹೊಸಮನಿ ಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಲನವು, ರಾಷ್ಟ್ರೀಯ ಹೋರಾಟದಲ್ಲಿ ಬ್ರಾಹ್ಮಣೇತರರು ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡು ಬ್ರಿಟಿಷರನ್ನು ಎದುರಿಸುವ ತೀರ್ಮಾನ ಕೈಕೊಳ್ಳಲಾಯಿತು. ಮೊದಲನೆಯ ಬೆಳವಣಿಗೆ ಸ್ವಸಂಸ್ಕೃತಿಯ ರಕ್ಷಣೆಯ ಪ್ರಶ್ನೆಯಾದರೆ, ಎರಡನೆಯದು ಸ್ವರಾಜ್ಯಕ್ಕಾಗಿ ನಡೆಸುವ ಪ್ರಯತ್ನವಾಗಿತ್ತು. ಇವುಗಳಿಂದ ವೀರಶೈವ ಮಠಗಳು ಒಂದಿಲ್ಲೊಂದು ತೆರನಲ್ಲಿ ಸಂಬಂಧ ಪಡೆದುಕೊಂಡು, ಹೊಸ ವಾತಾವರಣ ಮೂಡಿತು.

ಕರ್ನಾಟಕದ ವೀರಶೈವಮಠಗಳಿಗೂ, ಸ್ವರಾಜ್ಯ ಸಾಧನೆಯ ಪ್ರಯತ್ನಗಳಿಗೂ ಒದಗಿಬಂದ ಮೊದಲ ಸಂಬಂಧವು, ಬೆಳಗಾವಿ ಜಿಲ್ಲಾ ಅಥಣಿ ಮಠದ್ದು. ಪುಣೆಯು ಆಗ ಪರಾಂಜಪೆ, ಅಗರಕರ ಮತ್ತು ಬಾಲಗಂಗಾಧರ ತಿಲಕರ ವಿಚಾರಧಾರೆಗಳಿಂದ ದೇಶವನ್ನೇ ಸೆಳೆಯುತ್ತಿತ್ತು. ತಿಲಕರು ಕೇಸರಿ ಪತ್ರಿಕೆಯ ಲೇಖನಗಳಿಂದ, ಸ್ವರಾಜ್ಯದ ವಿಚಾರಗಳಿಂದ ತುಂಬ ಪ್ರಸಿದ್ಧರಾಗಿದ್ದರು. ಅವರು ಅಥಣಿಯ ಮುರುಘೇಂದ್ರ ಶಿವಯೋಗಿಗಳ ಬಗೆಗೂ ಗೌರವಾದರ ತಾಳಿದ್ದರು. ೧೫-೧-೧೯೧೭ ರಂದು ತಿಲಕರು ಅಥಣಿಗೆ ಬಂದು, ಮಠಕ್ಕೆ ಹೋಗಿ ಶಿವಯೋಗಿಗಳ ದರ್ಶನ ಪಡೆಯುತ್ತಾರೆ. ಬ್ರಿಟಿಷ ಆಡಳಿತ, ಭಾರತದ ದಾಸ್ಯ, ಸ್ವರಾಜ್ಯ ಪಡೆವ ಬಗೆಗಳನ್ನೂ ಅವರು ಶಿವಯೋಗಿಗಳೊಂದಿಗೆ ದೀರ್ಘವಾಗಿ ಚರ್ಚಿಸುತ್ತಾರೆ. ಸ್ವರಾಜ್ಯ ಸಾಧನೆಗಾಗಿ ಆಶೀರ್ವಾದವನ್ನು ಬೇಡುತ್ತಾರೆ. ಆಗ ಶಿವಯೋಗಿಗಳು ಅರ್ಥಪೂರ್ಣವಾಗಿ

ಹೇಳುವುದಿಂತು: " ಲೋಕಮಾನ್ಯರೆ, ಮಾವುಮರವನ್ನು ಹಚ್ಚಿದವರಿಗೆ ಅದರ ಫಲವು ದೊರೆಯಲಾರದು. ಅದು ಬೆಳೆದು ದೊಡ್ಡದಾಗಿ, ಮೊಗ್ಗೆಬಿಟ್ಟು, ಪುಷ್ಪ ಅರಳಿ, ಹಣ್ಣುಕಾಯಿ ಆಗಲಿಕ್ಕೆ ಕೆಲವು ದಿವಸಗಳು ಬೇಕು. ನೀರ ಮೇಲಿನ ಗುರುಳೆಯಂತೆ ಆಯುಷ್ಯವುಂಟು. ಆದುದರಿಂದ ಆ ಮರದ ಫಲವು ಮುಂದಿನವರಿಗೆ ದೊರೆಯುವುದು ".[೩] ಶಿವಯೋಗಿಗಳ ಮಾತು-ಭಾಷ್ಯದಂತಿತ್ತು. ತಿಲಕರಿಗೆ ಅದರ ಭಾವ ಸ್ಪಷ್ಟವಾಗಿತ್ತು.

೧೯೨೪ ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ಸು ಅಧಿವೇಶನ ಒಂದು ರೀತಿಯಲ್ಲಿ, ವೀರಶೈವಮಠಗಳನ್ನು ಸ್ವಾತಂತ್ರ್ಯ ಹೋರಾಟದತ್ತ ಸೆಳೆದುಕೊಂಡಿತೆನ್ನಬೇಕು. ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಒಂದೇ ಒಂದು ಅಧಿವೇಶನವದು. ಹರ್ಡೇಕರ ಮಂಜಪ್ಪನವರು, ಬಸವಣ್ಣನವರ ಆಂದೋಲನದ ಬಗೆಗೆ ಗಾಂಧೀಜಿಯವರಿಗೆ ಪರಿಚಯ ನೀಡಿದ್ದು ಕೂಡ ಇಲ್ಲಿಯೇ. ಶಿವಶವರಣರ ಚಳುವಳಿಯಿಂದ, ಬೋಧನೆಗಳಿಂದ ಗಾಂಧೀಜಿ ತುಂಬ ಪ್ರಭಾವಿತರಾದರು. ತಮ್ಮ ಸತ್ಯಾಗ್ರಹ, ದಲಿತೋದ್ಧಾರ, ಸಮಾನತೆ ಅಹಿಂಸೆಗಳು ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ಪ್ರಯೋಗಿಸಿದ ತತ್ವಗಳೆಂದೇ ಅವರು ಮನಗಂಡು ಚಕಿತರಾದರು. ಅಧಿವೇಶನದಲ್ಲಿ ಅವರು ' ನೀವೆಲ್ಲ ಬಸವಣ್ಣನ ನಾಡಿನವರು. ನಾನು ಅವರ ತತ್ವಗಳಲ್ಲಿ ಒಂದಂಶವನ್ನು ಪ್ರಯೋಗಿಸುತ್ತಿರುವೆ. ನೀವೆಲ್ಲ ಅವರ ದಾರಿಯಲ್ಲಿ ಸಾಗಬೇಕು ' ಎಂದು ಕರೆ ನೀಡಿದರು. ಇದು ಅನೇಕ ವೀರಶೈವಮಠಗಳಿಗೆ ಹೊಸ ಚೈತನ್ಯ ತುಂಬಿತು.

ಬೆಳಗಾವಿ ಕಾಂಗ್ರೆಸ್ಸು ಅಧಿವೇಶನಕ್ಕೆ ಪೂರ್ವದಲ್ಲಿ, ಕಲಬುರ್ಗಿ ಶರಣಬಸವೇಶ್ವರ ದೇವಾಲಯದ ಮೇಲೆ ಹಲ್ಲೆ ನಡೆದಿತ್ತು. ಅಲ್ಲಿಯ ಪೀಠಾಧಿಪತಿಗಳಾದ ದೊಡ್ಡಪ್ಪ ಅಪ್ಪ ಅವರು (ಮಠದ ಏಳನೆಯ ಪೀಠಾಧಿಪತಿಗಳು) ಸ್ತ್ರೀಶಿಕ್ಷಣ, ಸಾಮಾಜಿಕ ಅಭಿವೃದ್ಧಿ, ಶಿಕ್ಷಣ ಪ್ರಸಾರದೊಂದಿಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಬೆಂಬಲವಾಗಿ ನಿಂತಿದ್ದರು. ಅವರ ಜನಪ್ರಿಯತೆ, ಸುಧಾರಣಾ ದೃಷ್ಟಿಕೋನಗಳಿಂದ ಕೆರಳಿದ ಕೆಲವು ಕೋಮು ಶಕ್ತಿಗಳು ದೇವಾಲಯದ ಮೇಲೆ ಹಲ್ಲೆ ಮಾಡಿದರು. ಆ ಬಗೆಗಿನ ಉಲ್ಲೇಖವನ್ನು ಗಮನಿಸಬೇಕು. " ದೊಡ್ಡಪ್ಪ ಅಪ್ಪ ಅವರ ದೇಶ, ನಾಡು, ನುಡಿಪ್ರೇಮವು, ದೇಶದ್ರೋಹಿಗಳಿಗೆ ಕಿರಿಕಿರಿಯೇ ಆಯಿತು. ಆದುದರಿಂದ ಶರಣಬಸವೇಶ್ವರ ಸಂಸ್ಥಾನದ ಮೇಲೆ ದ್ರೋಹಿಗಳು ಹಲ್ಲೆ ಮಾಡಿದರು. ಅಪ್ಪ ಅವರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕವಾದ ಕಾರ್ಯಗಳನ್ನು ಕೈಕೊಂಡಿದ್ದರಿಂದಲೇ ಸಂಸ್ಥಾನದ ಮೇಲೆ ಹಲ್ಲೆ ನಡೆಯಿತೆಂಬ ಸುದ್ದಿಯು ಬೆಳಗಾವಿಯಲ್ಲಿ ಮಹಾತ್ಮಾಗಾಂಧಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿಧ್ವನಿತವಾಯಿತು. ಹಲ್ಲೆಯನ್ನು ಸರ್ವಾನುಮತದಿಂದ ಖಂಡಿಸಿ ಒಂದು ಗೊತ್ತುವಳಿಯನ್ನು ಕಲಬುರ್ಗಿಗೆ ಕಳಿಸಿಕೊಡಲಾಯಿತು ".[೪] ಈ ಹಲ್ಲೆಯಿಂದ

---

೩. ಚಂದ್ರಶೇಖರ ಶಾಸ್ತ್ರಿಗಳು ಮತ್ತು ಬಸವಲಿಂಗ ಶಾಸ್ತ್ರಿಗಳು : ಶ್ರೀಮದ್ ಅಥಣಿ ಶಿವಯೋಗೀಶ್ವರ ಚರಿತ್ರೆ, ಪುಟ ೨೦೫

೪. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ (ಸಂ.) : ಕಲ್ಯಾಣದ ಹಾದಿ, (ಲೇ.) ಎಸ್. ಎಂ. ಹಿರೇಮಠ, ಪುಟ ೨೬೪

ದೊಡ್ಡಪ್ಪ ಅಪ್ಪ ಸ್ವಾತಂತ್ರ್ಯ ಹೋರಾಟಪರ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ. ಇದರಿಂದ ಪ್ರಭಾವಿತರಾದ ಗಾಂಧೀಜಿಯವರು ೨೪-೪-೧೯೨೫ ರಂದು ಕಲಬುರ್ಗಿಗೆ ಬಂದು, ದೊಡ್ಡಪ್ಪ ಅಪ್ಪ ಅವರನ್ನು ಕಂಡು ಅವರ ಕಾರ್ಯ ಸಾಧನೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ದೊಡ್ಡಪ್ಪ ಅಪ್ಪ ಅವರು ಗಾಂಧೀಜಿಯವರು ಸಂಗ್ರಹಿಸುತ್ತಿದ್ದ ಲೋಕಮಾನ್ಯ ತಿಲಕರ ನಿಧಿಗೆ ಅಪಾರ ದೇಣಿಗೆ ನೀಡಿ ದೇಶಪ್ರೇಮ ಮೆರೆದರು. ಕೊನೆಯವರೆಗೂ ಖಾದಿಧಾರಿಯಾಗಿ, ಗಾಂಧೀಮಾರ್ಗದಲ್ಲಿ ಬದುಕಿದರು. ಅವರು ಸ್ವತಃ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರಲ್ಲದೆ, ಹೈದ್ರಾಬಾದ ಭಾಗದ ಅನೇಕ ಹೋರಾಟಗಾರರಿಗೆ ಆಶ್ರಯ, ಮಾರ್ಗದರ್ಶನ ನೀಡಿದರು.

೧೯೨೦ ರ ಅಸಹಕಾರ ಚಳುವಳಿಯಿಂದ ಮೊದಲ್ಗೊಂಡು, ೧೯೩೦ ರ ಉಪ್ಪಿನ ಸತ್ಯಾಗ್ರಹದವರೆಗೆ ಕರ್ನಾಟಕದ ತುಂಬೆಲ್ಲ ದೇಶದ ಸ್ವಾತಂತ್ರ್ಯ ಹೋರಾಟವು ವ್ಯಾಪಕವಾಗಿ, ಸಶಕ್ತವಾಗಿ ಬೆಳೆದುನಿಂತಿತು. ಸರಕಾರದ ಪ್ರಯತ್ನಗಳು ನಿಷ್ಫಲಗೊಂಡು ಸತ್ಯಾಗ್ರಹಿಗಳ ಸಂಖ್ಯೆ ದಿನೇ ದಿನೇ ಹೆಚ್ಚತೊಡಗಿತು. ಸೆರೆಮನೆಗಳು ಹೋರಾಟಗಾರರಿಂದ ತುಂಬಿ ತುಳುಕಿದವು. ಹಳ್ಳಿಕೇರಿ ಗುದ್ಲೆಪ್ಪ, ಮೈಲಾರ ಮಹಾದೇವರಂತಹ ಉತ್ಸಾಹಿಗಳು, ದಂಡೀ ಸತ್ಯಾಗ್ರಹದಲ್ಲಿ ನೇರವಾಗಿ ಭಾಗಿಯಾಗಿ, ಮರಳಿ ಬಂದು ಸ್ವಾತಂತ್ರ್ಯದ ಕಿಡಿಗಳನ್ನು ಎಲ್ಲೆಡೆ ಬೀರತೊಡಗಿದರು. ಉಪ್ಪಿನ ಸತ್ಯಾಗ್ರಹದ ನಂತರದಲ್ಲಿ ಒಮ್ಮೆ ಗಂಗಾಧರರಾವ ದೇಶಪಾಂಡೆಯವರು ಗಾಂಧೀಜಿಯವರನ್ನು ಹುದಲಿಗೆ ಆಮಂತ್ರಿಸಿದ್ದರು. 'ಕರ್ನಾಟಕದವರಲ್ಲವೆ ? ಬಸವೇಶ್ವರರ ವಚನಗಳನ್ನು ಓದಿದ್ದೀರಾ ?' ಎಂದು ಗಾಂಧೀಜಿ ಅವರನ್ನು ಕೇಳಿದರಂತೆ. ಕರ್ನಾಟಕ ಸಿಂಹವೆಂದೇ ಹೆಸರಾಗಿದ್ದ ಗಂಗಾಧರರಾಯರಿಗೆ ವಚನಗಳು ಗೊತ್ತಿರಲಿಲ್ಲ; ಅವರ ಕನ್ನಡ ಜ್ಞಾನ ತೀರ ಸೀಮಿತವಾಗಿತ್ತು. ಗಾಂಧೀಜಿಯವರ ಮಾತಿನಿಂದ ಅವರು ಚಕಿತರಾಗಿಬಿಟ್ಟರು. ನಂತರ ಈ ವಿಚಾರ ತಮಗೆ ಆತ್ಮೀಯರಾಗಿದ್ದ ನಾಗನೂರು ರುದ್ರಾಕ್ಷಿಮಠದ ಶಿವಬಸವ ಸ್ವಾಮಿಗಳಲ್ಲಿ ಹೇಳಿಕೊಂಡು, ಅವರಿಂದ ಶರಣರ ಕ್ರಾಂತಿಯ ಬಗೆಗೆ ಮಾಹಿತಿ ಪಡೆದುಕೊಂಡರು. ೧೯೩೨ ರಲ್ಲಿ ಗಾಂಧೀಜಿ ಹುದಲಿಗೆ ಭೇಟಿ ನೀಡುವರು. "ಗಂಗಾಧರರಾವ ದೇಶಪಾಂಡೆಯವರು ಶ್ರೀಗಳಿಗೆ ಆಪ್ತ ಪರಿಚಿತ ಭಕ್ತರಾದುದರಿಂದ, ಶ್ರೀಗಳನ್ನೂ ಈ ಕಾರ್ಯಕ್ರಮಕ್ಕೆ ಬರಮಾಡಿಕೊಂಡು, ಗಾಂಧೀಜಿಯವರ ಭೇಟಿ ಮಾಡಿಸಿ, ಶ್ರೀಗಳು ಜಾತಿ-ಧರ್ಮಭೇದವಿಲ್ಲದೆ ಮಾಡುತ್ತಿರುವ ಸಾಮಾಜಿಕ ಶೈಕ್ಷಣಿಕ ಸೇವೆ ತಿಳಿಸುವರು. ಗಾಂಧೀಜಿ ಶ್ರೀಗಳಿಗೆ ಖಾದಿಬಟ್ಟೆ ಧರಿಸಲು ತಿಳಿಸುತ್ತಾರೆ. ಅಂದಿನಿಂದ ಕೊನೆಯವರೆಗೂ ಶ್ರೀಗಳು ಖಾದಿ ಬಟ್ಟೆಯನ್ನೇ ಧರಿಸಿದರು".[೪] ಗಾಂಧೀಜಿಯವರ ಪ್ರಭಾವ-ಪ್ರೇರಣೆಗಳು ಶಿವಬಸವ ಸ್ವಾಮಿಗಳ ಧ್ಯೇಯ-ಆದರ್ಶಗಳನ್ನು ಗಟ್ಟಿಗೊಳಿಸಿದವು. ಈಗಾಗಲೇ ಬಸವಾದಿ ಪ್ರಮಥರ ದಾರಿಯಲ್ಲಿ ಸಾಗುತ್ತಿದ್ದ ಅವರಿಗೆ ಗಾಂಧೀಜಿ ತತ್ವಗಳು ಬೇರೆ ಎಂದು ಭಾಸವಾಗಲಿಲ್ಲ. ಬೆಳಗಾವಿ ಕಾಂಗ್ರೆಸ್ಸು

---

೪. ಎಫ. ಜಿ. ಜಲರಡ್ಡಿ : ನಾಗನೂರು ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ, ಪುಟ ೫೦

ಮುಖಂಡರಲ್ಲಿ ಅನೇಕರು ಸ್ವಾಮಿಗಳ ಸಲಹೆ ಪಡೆದು ಹೋರಾಟ ರೂಪಿಸಿಕೊಂಡಿದ್ದರು. ಪ್ರಸಾದ ನಿಲಯದ ವಿದ್ಯಾರ್ಥಿಗಳು ಸ್ವದೇಶಿ ಪ್ರಚಾರ, ಧರಣಿ, ಮೆರವಣಿಗೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಭಾಗಿಯಾಗುತ್ತಿದ್ದರು. ೧೯೪೨ರ ಚಳುವಳಿಯಲ್ಲಿ ಭೂಗತರಾಗಿ ಹೋರಾಡುತ್ತಿದ್ದ ಕೆಲವರು ಸ್ವಾಮಿಗಳ ಆಶ್ರಯದಲ್ಲಿ ಸುರಕ್ಷಿತವಾಗಿದ್ದರು. ಚೆನ್ನಪ್ಪ ವಾಲಿ, ತಲ್ಲೂರ ರಾಯನಗೌಡ, ಅಪ್ಪಣ್ಣಗೌಡ ಪಾಟೀಲ ಮುಂತಾದವರು ಆಗಾಗ್ಗೆ ನಾಗನೂರು ಮಠದಲ್ಲಿ ಆಶ್ರಯ ಪಡೆದು, ಹೋರಾಟ ಮುಂದುವರೆಸುತ್ತಿದ್ದರು. ಇದರಿಂದ ಬ್ರಿಟಿಷರು ಸ್ವಾಮಿಗಳನ್ನು ಬಂಧಿಸುವ ಆಜ್ಞೆ ಹೊರಡಿಸುತ್ತಾರೆ. ಆದರೆ ಇದು ಅಧಿಕಾರಿಗಳಿಂದ ಸ್ವಾಮಿಗಳಿಗೆ ಗೊತ್ತಾಗಿ, ಭಕ್ತರ ಒತ್ತಾಯದ ಮೇರೆಗೆ ಮಾರುವೇಷದಲ್ಲಿ ಬ್ಯಾಡಗಿಗೆ ಹೋಗಿ, ಅಲ್ಲಿಂದ ಕೆಳದಿಮಠಕ್ಕೆ ಹೋಗಿಬಿಡುವರು. ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀಗಳು ನೇರವಾಗಿ ಭಾಗಿಯಾಗಿ, ಹೋರಾಟಗಾರರಿಗೆ ಸಹಾಯ ನೀಡಿ ಮಹತ್ವದ ಕಾರ್ಯ ಮಾಡಿದ್ದಾರೆ.

ಕರ್ನಾಟಕದ ಹಲವು ರಾಜಮನೆತನಗಳೊಂದಿಗೆ ಸಂಬಂಧ ಪಡೆದ ಮತ್ತು ಶಿಕ್ಷಣ ಪ್ರಸಾದಲ್ಲಿ ಅಪಾರ ಸಾಧನೆ ಸಲ್ಲಿಸಿರುವ ಚಿತ್ರದುರ್ಗ ಬೃಹನ್ಮಠವು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದೊಂದಿಗೆ ಕೂಡ ಸಂಬಂಧವನ್ನು ಪಡೆದುಕೊಂಡಿತ್ತು. ಈ ಮಠದ ಪೀಠಾಧಿಕಾರಿಗಳಾದ ಜಯದೇವ ಸ್ವಾಮಿಗಳು (೧೯೦೨-೧೯೫೬) ಎಲ್ಲ ಜಾತಿ ಮತಗಳ ವಿದ್ಯಾರ್ಥಿಗಳಿಗಾಗಿ ಪ್ರಸಾದ ನಿಲಯ ಸ್ಥಾಪಿಸಿ, ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೂ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿದರು. ಇವರ ಸಾಮಾಜಿಕ ಕಳಕಳಿ, ಮಾನವೀಯ ಸೇವೆಗಳನ್ನು ಗಾಂಧೀಜಿ ಗುರುತಿಸುತ್ತಾರೆ. “೧೯೩೪ ರಲ್ಲಿ ಹಾವೇರಿಯಲ್ಲಿ ಗಾಂಧೀಜಿಯವರು ಸ್ವಾಮಿಗಳನ್ನು ಭೇಟಿಮಾಡಿ ಸ್ವಾತಂತ್ರ್ಯ ಹೋರಾಟ, ದಲಿತರ ಉದ್ಧಾರ, ಅಸ್ಪೃಶ್ಯತಾ ನಿವಾರಣೆ ಇತ್ಯಾದಿಗಳ ಬಗ್ಗೆ ಚರ್ಚಿಸಿದರೆನ್ನುವುದು ಒಂದು ಗಮನಾರ್ಹವಾದ ಘಟನೆ. ಆಗ ಸ್ವಾಮಿಗಳು ಸ್ವಯಂ ಖಾದಿಧಾರಿಯಾಗಲು ಒಪ್ಪಿದರಲ್ಲದೆ, ಗಾಂಧೀ ಚಳುವಳಿಯನ್ನು ಬೆಂಬಲಿಸಿದರು”.[೫] ಮುಂದೆ ಚಿತ್ರದುರ್ಗ ಮಠವು ಹೋರಾಟಗಾರರ ತಾಣವಾಯಿತು. ಸ್ವಾಮಿಗಳು, ಗಾಂಧೀ ತತ್ವಗಳನ್ನೂ ಪ್ರಚುರಪಡಿಸಿದರು. ಗ್ರಾಮಗಳ ಸ್ವಾವಲಂಬನೆ, ನಿಸರ್ಗ ಚಿಕಿತ್ಸೆಗಳನ್ನು ಪ್ರೋತ್ಸಾಹಿಸಿದರು.

ಶ್ರೀಶೈಲ ಪಂಡಿತಾರಾಧ್ಯ ಪೀಠದ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸಾಧಕರಾಗಿದ್ದಾಗ ಗಾಂಧೀ ಚಳುವಳಿಯೊಂದಿಗೆ ಗುರುತಿಸಿಕೊಂಡಿದ್ದರು. ಅವರು ಕಾಂಗ್ರೆಸ್ಸು ಸೇವಾದಲದ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿ, ಎಲ್ಲೆಡೆ ಸಂಚರಿಸಿ ಚುರುಕಾಗಿ ಸಂಘಟನೆ ಮಾಡಿದರು. ಸೇವಾದಲದ ಶಿಬಿರಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯತೆಯ ದೀಕ್ಷೆ ನೀಡಿದರು. ೧೯೩೯-೪೦ ರಲ್ಲಿ ಈ ಕೆಲಸದಲ್ಲಿ

---

೫. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ (ಸಂ.) : ಕಲ್ಯಾಣದ ಹಾದಿ. (ಲೇ.) ಬಿ. ರಾಜಶೇಖರಪ್ಪ. ಪುಟ ೩೭೦

ಅವರು ತೀವ್ರವಾಗಿ ತೊಡಗಿಕೊಂಡಿದ್ದರು. ಅದರಂತೆ ಕರ್ನಾಟಕದ ಗಡಿಭಾಗದಲ್ಲಿದ್ದುಕೊಂಡು ಸ್ವಾತಂತ್ರ್ಯ ಹೋರಾಟ, ನೈಜಾಂಶಾಹೀ ವಿರೋಧಿ ಹೋರಾಟ, ಕರ್ನಾಟಕ ಏಕೀಕರಣಗಳಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದ ಮಠವೆಂದರೆ ಭಾಲ್ಕಿಯ ಮಠ. ಭಾಲ್ಕಿಯ ಶ್ರೀ ಚನ್ನಬಸವಪಟ್ಟದ್ದೇವರು ಜನಪರವಾದ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಡಿದ್ದಾರೆ. ಅವರು ಹರ್ಡೇಕರ ಮಂಜಪ್ಪ, ನಾನಾಸಾಹೇಬ ಬಾಮಣಗಾಂವಕರ ಅವರೊಂದಿಗೆ ಸೇರಿಕೊಂಡು ಗ್ರಾಮೀಣ ಭಾಗದಲ್ಲೆಲ್ಲ ಅಹಿಂಸಾತ್ಮಕ ಹೋರಾಟವನ್ನು ರೂಪಿಸಿದರು. ಮುಂದೆ ಅವರು ರಜಾಕಾರರ ಉಪಟಳ ನಿಗ್ರಹಿಸುವಲ್ಲಿ, ಕನ್ನಡ ಭಾಷೆ, ಶಿಕ್ಷಣಗಳ ರಕ್ಷಣೆಯಲ್ಲಿ ಹಿರಿದಾದ ಪಾತ್ರ ವಹಿಸಿದರು. ಜಾತಿ, ಲಿಂಗ, ಭಾಷೆಗಳ ಭೇದ-ಭಾವ ತೊಡೆಯುವಲ್ಲಿ ಅವರು ಉಲ್ಲೇಖನೀಯ ಕೆಲಸ ಮಾಡಿದರು.

ಹುಕ್ಕೇರಿ ತಾಲ್ಲೂಕಿನ ನಿಡಸೋಸಿ ಮಠವು ಹಲವು ದೇಶಿಯ ಸಂಸ್ಥಾನಿಕರಿಂದ ದಾನ-ದತ್ತಿ ಪಡೆದುಕೊಂಡು ಸರ್ವಜನವರ್ಗಗಳ ಶ್ರದ್ಧಾಕೇಂದ್ರವಾಗಿ ಬೆಳೆದುಬಂದಿದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭೂಗತ ಹೋರಾಟಗಾರರು ಇಲ್ಲಿ ಬಂದು ರಕ್ಷಣೆ ಪಡೆಯುತ್ತಿದ್ದರು. ೧೯೧೬ರಲ್ಲಿ ಪೀಠದ ಅಧಿಕಾರ ಪಡೆದುಕೊಂಡ ನಾಲ್ಕನೆಯ ನಿಜಲಿಂಗೇಶ್ವರರು (ಪೀಠಪರಂಪರೆಯಲ್ಲಿ ಎಂಟನೆಯವರು) ಗಡಹಿಂಗ್ಲಜ, ನಿಪ್ಪಾಣಿ, ಚಿಕ್ಕೋಡಿ, ಸಂಕೇಶ್ವರ ಭಾಗದ ಭೂಗತ ಹೋರಾಟಗಾರರನ್ನು ಮಠದ ಪತ್ರೀಬನದಲ್ಲಿ ಇರಿಸಿಕೊಂಡು ಊಟ, ವಸತಿ, ಬಟ್ಟೆ ಬರೆಗಳನ್ನು ನೀಡುತ್ತಿದ್ದರು. ಬ್ರಿಟಿಷ ಅಧಿಕಾರಿಗಳು ವಾರಂಟ ಹಿಡಿದುಕೊಂಡು ಬಂದರೆ ಹೋರಾಟಗಾರರು ಮಠದ ಜಮೀನಿನಲ್ಲಿ ದುಡಿವ ಕೂಲಿಯವರಾಗಿ ಬಿಡುತ್ತಿದ್ದರು. ಅಪ್ಪಣ್ಣಗೌಡ ಪಾಟೀಲ, ಶಿವಪ್ಪಾ ಗುಂಡಾಳೆ, ಚೆನ್ನಯ್ಯ ಮಠಪತಿ ಮುಂತಾದವರ ತಂಡ ನಡೆಸಿದ ಚಲೇಜಾವ ಚಳುವಳಿಯ ಕಾರ್ಯತಂತ್ರಗಳಿಗೆ ಸ್ವಾಮಿಗಳ ಆಶೀರ್ವಾದವಿತ್ತು. ೬-೧೧-೧೯೪೨ ರಂದು ಈ ತಂಡ ರಾಯಬಾಗ ಸ್ಟೇಷನ್ ಸುಟ್ಟು, ಕಬ್ಬೂರ ಅಂಚೆಕಚೇರಿ ಲೂಟಿಮಾಡಿ ಬ್ರಿಟೀಷರಿಗೆ ದೊಡ್ಡ ಅಘಾತ ನೀಡಿತು. ಈ ಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ಹೆಬ್ಬಾಳ ತಂಡದವರು ನಿಡಸೋಸಿಗೆ ತೆರಳಿ, ಭೂಗತ ಹೋರಾಟದ ಬಗ್ಗೆ ಸ್ವಾಮಿಗಳೊಂದಿಗೆ ಚರ್ಚಿಸಿದರು. ಸ್ಟೇಷನ್ ಸುಡುವ ಹಿಂದಿನ ದಿನ ನಿಡಸೋಸಿಗೆ ಹೋಗಿ ಮಧ್ಯಾಹ್ನ ಪ್ರಸಾದ ಸ್ವೀಕರಿಸಿ, ಸ್ವಾಮಿಗಳು ಕಟ್ಟಿಕೊಟ್ಟ ಬುತ್ತಿಗಂಟು ತೆಗೆದುಕೊಂಡು ರಾಯಬಾಗದತ್ತ ಅವರೆಲ್ಲ ಮುನ್ನಡೆದಿದ್ದರು. ಅವರಂತೆ ಚಿಕ್ಕೋಡಿ ತಾಲ್ಲೂಕಿನ ಚಿಂಚಣಿ ಅಲ್ಲಮಪ್ರಭು ಸಿದ್ಧಸಂಸ್ಥಾನಮಠದ ಸ್ವಾಮಿಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ಸದಾಕಾಲ ಬೆಂಬಲವಾಗಿ ನಿಂತಿದ್ದರು. ಆ ಮಠದಲ್ಲಿಯೂ ಹೋರಾಟಗಾರರು ಆಶ್ರಯವನ್ನು ಹೊಂದುತ್ತಿದ್ದರು.

ಸ್ವಾತಂತ್ರ್ಯ ಚಳುವಳಿಯ ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿಭಿನ್ನ ಹೋರಾಟಗಳು ನಡೆದಿವೆ. ಸಿಪಾಯಿ ದಂಗೆಯ ಸೀಮಿತ ಹೋರಾಟ, ತಿಲಕರ ಕಾಲದ ಸ್ವರಾಜ್ಯ ಬೇಡಿಕೆ, ಗಾಂಧೀಜಿಯವರ ಅಸಹಕಾರ, ಉಪ್ಪಿನ, ಚಲೇಜಾವ ಹೋರಾಟಗಳ ಜೊತೆಗೆ ವೀರಶೈವಮಠಗಳು ಭಿನ್ನ ಭಿನ್ನ ಸಂಬಂಧ ಪಡೆದಿದ್ದವು. ಕೊಣ್ಣೂರು, ಅರಬಾವಿ,

ತೊರಗಲ್ಲು. ಯಲಬುರ್ಗಾ ಮಠಗಳ ಸ್ವಾಮಿಗಳು. ಪ್ರಾಂತೀಯ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಅಭ್ಯರ್ಥಿಗಳಿಗೆ ಮತ ನೀಡುವಂತೆ ಸಾರ್ವಜನಿಕವಾಗಿ ಪ್ರಚಾರ ಕೈಕೊಂಡರು. ಈ ಮೂಲಕ ಬ್ರಿಟಿಷ ಸರಕಾರದ ಧೋರಣೆಗಳನ್ನು ಅವರು ಟೀಕಿಸಿದರು; ಖಂಡಿಸಿದರು. ಗೋಕಾಕ ತಾಲ್ಲೂಕಿನ ತವಗ ಮಠದ ಚಂದ್ರಯ್ಯಸ್ವಾಮಿ. ನಿರುಪಾದಯ್ಯನವರು ವೈಯಕ್ತಿಕ ಸತ್ಯಾಗ್ರಹ ಮತ್ತು ಚಲೇಜಾವ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸಿದ್ದರು. ಸರಕಾರ ಅವರನ್ನು ಬಂಧಿಸಿ ಸೆರೆಮನೆಗೆ ತಳ್ಳಿತು. ಅವರಾದಿ ಫಲಹಾರೇಶ್ವರ ಮಠದ ಸ್ವಾಮಿಗಳು, ಉರುವಕೊಂಡದ ಸ್ವಾಮಿಗಳು ಹೋರಾಟಗಾರರ ಹಿತರಕ್ಷಣೆಯಲ್ಲಿ ತೊಡಗಿದ್ದರು. ಉರುವಕೊಂಡ ಸ್ವಾಮಿಗಳ ಬಗೆಗೆ ಈ ಹೇಳಿಕೆ ಇದಕ್ಕೆ ಪುಷ್ಟಿ ನೀಡುವಂತಿದೆ. " ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಗಳ ಬಗೆಗೂ ಅವರಿಗೆ ಅಷ್ಟೇ ಆಸಕ್ತಿಯಿದ್ದ ವಿಚಾರವೂ, ಎಷ್ಟೋ ಸಲ ಸ್ವಾತಂತ್ರ್ಯ ಸೈನಿಕರಿಗೆ ಅವರು ಸಹಾಯ ಮಾಡಿದ ವಿಚಾರವೂ ಅನೇಕರಿಗೆ ತಿಳಿದಿರಲಾರದು. ಆಗಷ್ಟ ಚಳುವಳಿಯ ಕಾಲಕ್ಕೆ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಹೊರಟು ಅಜ್ಞಾತವಾಸಿಗಳಾಗಿದ್ದ ಸೈನಿಕರನೇಕರಿಗೆ ಸ್ವಾಮೀಜಿ ನೆರವಾಗಿದ್ದಾರೆ. ದಿವಂಗತ ಮಹಾದೇವ ಮೈಲಾರರು ಒಂದು ಸಂದರ್ಭದಲ್ಲಿ ಕೊಡಗಿಗೆ ಹೋಗಿದ್ದಾಗ ಸ್ವಾಮೀಜಿ ಅವರನ್ನು ಪ್ರೀತಿಯಿಂದ ಬರಮಾಡಿಕೊಂಡು, ಕೆಲವು ದಿನ ತಮ್ಮಲ್ಲಿಯೇ ಇಟ್ಟುಕೊಂಡು ಹರಸಿ ಕಳಿಸಿದ್ದುಂಟು. ಹುತಾತ್ಮರ ಮಾತು ಬಂದಾಗಲೆಲ್ಲ ಸ್ವಾಮೀಜಿ ತುಂಬ ಅಭಿಮಾನದಿಂದ ಅವರನ್ನು ಸ್ಮರಿಸುತ್ತಾರೆ ".[೬] ಸುಪ್ರಸಿದ್ಧ ಹೋರಾಟಗಾರರಾದ ದೊಡ್ಡಮೇಟಿ ಅಂದಾನೆಪ್ಪನವರು, ಸ್ವಾತಂತ್ರ್ಯ ಹೋರಾಟದ ಆರಂಭಿಕ ಜೀವನದಲ್ಲಿ ಹಾಲಕೆರೆ ಅನ್ನದಾನಿ ಸ್ವಾಮಿಗಳಿಂದ ಮಾರ್ಗದರ್ಶನ ಪಡೆದಿದ್ದಾರೆ. ಹಳ್ಳಿಕೇರಿ ಗುದ್ಲೆಪ್ಪನವರು ಧಾರವಾಡ ಮೃತ್ಯುಂಜಯ ಸ್ವಾಮಿಗಳಿಂದ ಪ್ರೇರಿತರಾಗಿದ್ದಾರೆ.

ಕರ್ನಾಟಕದ ಅನೇಕ ವೀರಶೈವಮಠಗಳು ಶರಣರ ತತ್ವಚಿಂತನೆಯ ದಾರಿಯಲ್ಲಿ ಸಾಗುತ್ತಿರುವಂತೆಯೇ ಆಧುನಿಕ ಕಾಲಕ್ಕೆ ಗಾಂಧೀ ತತ್ವಚಿಂತನೆಯ ಪ್ರಭಾವ ಪಡೆದುಕೊಂಡು ರಾಷ್ಟ್ರೀಯ ಮಹಾಪರ್ವದಲ್ಲಿಯೇ ತಮ್ಮ ಸೇವೆ ಸಲ್ಲಿಸಿವೆ. ಹರ್ಡೇಕರ ಮಂಜಪ್ಪ ಅವರ ಆಲಮಟ್ಟಿ ಆಶ್ರಮ, ಮೈಲಾರ ಮಹಾದೇವರ ಸಾಬರಮತಿ ಮಾದರಿಯ ಕೊರಡೂರು ಆಶ್ರಮ, ಹಳ್ಳಿಕೇರಿ ಗುದ್ಲೆಪ್ಪನವರ ಹೊಸರಿತ್ತಿ ಆಶ್ರಮಗಳು ಗಾಂಧಿಯುಗದ ಪ್ರಯೋಗಗಳಾದರೂ, ಅವು ಮಠಗಳಿಂದಲೂ ಪ್ರಭಾವ ಹೊಂದಿದ್ದವು. ಅದರಂತೆ ಗಾಂಧೀಯುಗದ ಹೋರಾಟ ಮತ್ತು ತಾತ್ವಿಕತೆಗಳು ವೀರಶೈವಮಠಗಳನ್ನು. ಸ್ವಾಮಿಗಳನ್ನು ಗಾಢವಾಗಿ ತಟ್ಟಿದವು. ಹೊಸ ಚಿಂತನೆ ನೀಡಿದವು. ೧೯೪೭ರಲ್ಲಿ ಭಾಲ್ಕಿಯ ಚನ್ನಬಸವಪಟ್ಟದ್ದೇವರು ಎಲ್ಲಾ ಜಾತಿ ಮತಗಳ ವಿದ್ಯಾರ್ಥಿಗಳಿಗೆ ಪಾಠಶಾಲೆ ತೆರೆದು, ಮಠದ ಪ್ರಸಾದನಿಲಯದಲ್ಲಿ ಸರ್ವರಿಗೂ ಪ್ರವೇಶ ನೀಡುವರು. ಸ್ವಾಮಿಗಳು ಸ್ವತಃ ನೇತೃತ್ವ ವಹಿಸಿ ಹಿಂದುಳಿದ ಜನರನ್ನು, ಅಸ್ಪೃಶ್ಯರನ್ನು ಕರೆದುಕೊಂಡು ಬಂದು

---

೬. ಬಸವರಾಜ ಕಟ್ಟೀಮನಿ (ಸಂ.) : ಅಖಂಡ ಕರ್ನಾಟಕ, ಪುಟ ೧೧೦

ಸಾರ್ವಜನಿಕ ಬಾವಿಯಿಂದ ನೀರು ಪಡೆಯುವ ಹಾಗೆ ಮಾಡುತ್ತಾರೆ; ದೇವಾಲಯಕ್ಕೆ ಪ್ರವೇಶ ನೀಡುವರು. ಸುತ್ತೂರು ಶಿವರಾತ್ರೀಶ್ವರ ಜಂಗಮರು ಲಿಂಗಾಯತ ವಿದ್ಯಾರ್ಥಿಗಳಿಗಾಗಿ ಮೊದಲೇ ಆರಂಭಿಸಿದ್ದ ಪ್ರಸಾದ ನಿಲಯದಲ್ಲಿ ೧೯೩೦ ರಿಂದ ವಿವಿಧ ಕೋಮುಗಳ ವಿದ್ಯಾರ್ಥಿಗಳಿಗೂ ಪ್ರವೇಶ ಮುಕ್ತವಾಗಿಸುತ್ತಾರೆ. ಅವರು ಹಾಗೆ ಮಾಡಲು ಗಾಂಧೀವಾದಿಗಳಾಗಿದ್ದ ಹಳ್ಳಿಕೇರಿ ಗುದ್ಲೆಪ್ಪನವರು ಮತ್ತು ನಿಜಲಿಂಗಪ್ಪನವರು ಕಾರಣರಾಗಿದ್ದಾರೆ. ಅವರೀರ್ವರೂ ಮಠದ ಪ್ರಗತಿ ಕಂಡು ಸಂತೋಷಿಸುತ್ತ, ಜಾತಿಭೇದವಿಲ್ಲದೆ ಶಿಕ್ಷಣ-ಪ್ರಸಾದ ನೀಡಬೇಕೆಂದು ಸ್ವಾಮಿಗಳಲ್ಲಿ ಕೇಳಿಕೊಳ್ಳುವರು. ಅದನ್ನು ಒಪ್ಪಿಕೊಂಡು, ಸ್ವಾಮಿಗಳು ತಕ್ಷಣ ಹಾಗೆ ಏರ್ಪಾಟು ಮಾಡುತ್ತಾರೆ. ಈ ದಿಸೆಯಲ್ಲಿ ತುಮಕೂರು ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳು ಪ್ರಮುಖರು ೧೯೧೭ರಲ್ಲಿ ಪ್ರಸಾದನಿಲಯವನ್ನು, ೧೯೩೭ರಲ್ಲಿ ಸಂಸ್ಕೃತ ಮಹಾವಿದ್ಯಾಲಯವನ್ನು ಆರಂಭಿಸಿದ ಇವರು ಜಾತಿ-ಮತ-ಪ್ರದೇಶಗಳ ಸಂಕುಚಿತಗಳನ್ನು ಮೀರಿ ಎಲ್ಲರಿಗೂ ಅನ್ನದಾನ ವಿದ್ಯಾದಾನಗಳನ್ನು ನಿರಂತರವಾಗಿ ಇಂದಿನವರೆಗೂ ನಡೆಸಿಕೊಂಡು ಬಂದಿದ್ದಾರೆ. ಬೆಂಗಳೂರು, ತುಮಕೂರು, ಸುತ್ತೂರು, ಕೊಪ್ಪಳ, ಭಾಲ್ಕಿ, ನಾಗನೂರ, ನಿಡಸೋಸಿ, ಕಲಬುರ್ಗಿ, ನಿಡುಮಾಮಿಡಿ, ಚಿತ್ರದುರ್ಗ, ಬಿದರಿ, ಹಾವೇರಿ, ಬಬಲೇಶ್ವರ, ಸಿಂದಗಿ, ಇತ್ಯಾದಿ ಮಠಗಳು ಗಾಂಧೀಜಿಯವರ ತಿಲಕನಿಧಿಗೆ, ನಂತರದಲ್ಲಿ ಕಾಂಗ್ರೆಸ್ಸು ನಿಧಿಗೆ, ಬರಗಾಲ ನಿಧಿಗೆ ಅಪಾರ ಧನಸಹಾಯ, ವಸ್ತ್ರ, ಧವಸ-ಧಾನ್ಯ ಸಹಾಯ ನೀಡಿದ್ದಾರೆ. ಇದರಿಂದ ಹೋರಾಟಕ್ಕೆ ಬಲಬಂದಿದೆ.

ಗಾಂಧೀಜಿ ಅವರು ಚಿತ್ರದುರ್ಗ, ನಾಗನೂರ, ಕಲಬುರ್ಗಿ ಸ್ವಾಮಿಗಳಿಗೆ ಖಾದಿ ಧರಿಸಲು ಕೇಳಿಕೊಂಡದ್ದು ಗಮನಿಸಬೇಕಾದ ಸಂಗತಿ, ಧಾರ್ಮಿಕ ಸ್ಥಾನದಲ್ಲಿರುವ ವೀರಶೈವ ಸ್ವಾಮಿಗಳು ಖಾದಿ ಧರಿಸಿದರೆ ಅವರ ಭಕ್ತವರ್ಗವೆಲ್ಲ ಅವರನ್ನು ಅನುಸರಿಸುತ್ತದೆ. ಇದರಿಂದ ಸ್ವದೇಶಿ ಆಂದೋಲನ ತಾನಾಗಿಯೇ ಬೆಳೆಯುತ್ತದೆ ಎಂಬ ದೂರಗಾಮಿ ದೃಷ್ಟಿ ಗಾಂಧೀಜಿ ಅವರಿಗಿತ್ತು. ಅದು ಆದುದು ಕೂಡಾ ಹಾಗೆಯೇ. ತವಗ ಮಠದಂತಹ ಗ್ರಾಮೀಣ ಪ್ರದೇಶದ ಮಠಗಳೂ ಗಾಂಧೀಜಿಯವರ ಪ್ರಭಾವದಿಂದಾಗಿ ಶುಭ್ರ ಖಾದಿ ಬಟ್ಟೆಯನ್ನೇ ಆಯ್ದುಕೊಂಡುದು ಇಂತಹ ನೂರಾರು ನಿದರ್ಶನಗಳಲ್ಲಿ ಒಂದು ಎನ್ನಬೇಕು.

ವೀರಶೈವಮಠಗಳು ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರ ಅತ್ಯಂತ ವ್ಯಾಪಕವಾದುದು. ಅದು ಕೇವಲ ಲಭ್ಯವಾಗಿರುವ ಆಧಾರಗಳಿಂದ ಮಾತ್ರ ಪೂರ್ಣವಾಗಲಾರದು. ಅದರ ಆಳ ಅದರಾಚೆಗೆ ಇದೆ. ಹಾಗಾಗಿ ನಮ್ಮ ಕವಿ, ಲೇಖಕರು ಸಾಹಿತ್ಯ ಕೃತಿಗಳಲ್ಲಿಯೂ ಅದನ್ನು ಚಿತ್ರಿಸಿದ್ದಾರೆ. ಮಾಸ್ತಿಯವರು ಕೊಡಗಿನ ಇತಿಹಾಸ ಕುರಿತಾದ ಎರಡು ಕಾದಂಬರಿಗಳಲ್ಲಿ, ಐತಿಹಾಸಿಕ ಆವರಣದಲ್ಲಿ ಇಂತಹ ಚಿತ್ರಣ ನೀಡುತ್ತಾರೆ. ಅಲ್ಲಿ ವೀರಶೈವ ಸ್ವಾಮಿಗಳು ಪ್ರಧಾನ ಭೂಮಿಕೆ ವಹಿಸುವರು. ಅದರಂತೆ ಆನಂದಕಂದ, ಬಸವರಾಜ ಕಟ್ಟೀಮನಿ, ಪುಟ್ಟಸ್ವಾಮಯ್ಯ, ತ.ರಾ.ಸು. ಮೊದಲಾದವರ ಐತಿಹಾಸಿಕ, ಸಾಮಾಜಿಕ ಕತೆ-ಕಾದಂಬರಿಗಳಲ್ಲಿ ಈ ಬಗ್ಗೆ ಕೆಲವು ಉಲ್ಲೇಖಗಳು ಬರುವುದನ್ನು ಗಮನಿಸಬಹುದು. ಈ ಸಾಹಿತ್ಯ ಕೃತಿಗಳಲ್ಲಿಯ ಚಿತ್ರಣಕ್ಕೆ

ಮೂಲಮಾತೃಕೆಯಾಗಿರುವ ಸನ್ನಿವೇಶ, ಘಟನೆಗಳು ನಮ್ಮ ಚರಿತ್ರೆಯಲ್ಲಿಯೂ ಕಾಣಸಿಗುತ್ತವೆ.

ಕರ್ನಾಟಕದಲ್ಲಿಯ ವೀರಶೈವಮಠಗಳು ಮೊದಲಿನಿಂದ ಕೇವಲ ಧಾರ್ಮಿಕ ಸಂಸ್ಥೆಗಳಾಗಿ ಮಾತ್ರ ಕೆಲಸ ಮಾಡುತ್ತ ಬಂದಿಲ್ಲ. ಅವು ಹೆಚ್ಚಾಗಿ ಸಮಾಜಮುಖಿಯಾಗಿ ಬೆಳೆದುನಿಂತು, ಜನಪರ ಕಾರ್ಯದಲ್ಲಿ ತೊಡಗಿಕೊಂಡು ಸಮಾಜದ ಸರ್ವತೋಮುಖ ವಿಕಾಸಕ್ಕೆ ನೆರವಾಗಿವೆ. ಅನ್ನದಾನ, ವಿದ್ಯಾದಾನಗಳನ್ನು ಎಂತಹ ಸಂದರ್ಭದಲ್ಲಿಯೂ ನಡೆಸಿಕೊಂಡು ಬಂದಿರುವ ಹಿರಿಮೆ ಹೊಂದಿರುವ ಈ ಮಠಗಳು ರಾಷ್ಟ್ರದ ಸ್ವಾವಲಂಬನೆ, ಸ್ವಾತಂತ್ರ್ಯ ಹೋರಾಟದಲ್ಲಿ, ನಾಡು-ನುಡಿಗಳ ರಕ್ಷಣೆಯಲ್ಲಿ ಕೂಡ ಅಪಾರ ಕೊಡುಗೆ ನೀಡಿವೆ. ಕರ್ನಾಟಕದ ವಿರಕ್ತಮಠಗಳು, ಗುರುಪೀಠಗಳು, ಆಶ್ರಮಗಳು ಈ ಕಾರ್ಯದಲ್ಲಿ ತೊಡಗಿದ್ದವು. ಕರ್ನಾಟಕದ ಒಳ-ಹೊರಗೆ ಸ್ವಾತಂತ್ರ್ಯ ಹೋರಾಟ ಕಾಲಕ್ಕೆ ಸರಿಸುಮಾರಾಗಿ ಅಸ್ತಿತ್ವದಲ್ಲಿದ್ದ ಎರಡು ಸಾವಿರ ಮಠಗಳಲ್ಲಿ ಹೆಚ್ಚಿನವು ಇದಕ್ಕೆ ಚೆನ್ನಾಗಿ ಸ್ಪಂದಿಸಿದವು.

ಆದರೆ ಈ ಬಗೆಗೆ ಸರಿಯಾದ ದಾಖಲೆಗಳಿಲ್ಲದೆ, ಸೂಕ್ತ ಅಧ್ಯಯನವಿಲ್ಲದೆ ಹೋಗಿರುವುದರಿಂದ ಚರಿತ್ರೆಯಲ್ಲಿ ಈ ವಿಚಾರ ಸಮರ್ಪಕವಾಗಿ ದಾಖಲುಗೊಂಡಿಲ್ಲ. ಯಾವ ಸ್ವಾಮಿಗಳು ನೇರವಾಗಿ ಹೋರಾಟಕ್ಕಿಳಿದರು, ಯಾರು ಪರೋಕ್ಷ ಸಹಾಯ ನೀಡಿದರು, ಯಾರು ಸಹಾನುಭೂತಿ ಹೊಂದಿದ್ದರು, ಎಲ್ಲಿ ಮಠಗಳು ಭೂಗತರಿಗೆ ಆಶ್ರಯ ನೀಡಿದವು, ತಂಗುದಾಣಗಳಾಗಿದ್ದವು ಎಂಬುದೆಲ್ಲ ವಿವರವಾಗಿ ಬೆಳಕಿಗೆ ಬರಬೇಕಾದುದು ಅಗತ್ಯ. ಇದರೊಂದಿಗೆ ಪುರಾಣ, ಪ್ರವಚನ, ಕೀರ್ತನೆ, ಭಜನೆಗಳನ್ನು ಏರ್ಪಡಿಸುತ್ತಿದ್ದುದನ್ನು ಲಕ್ಷಿಸಬೇಕು. ಅನೇಕ ಪುರಾಣಿಕರು, ಕೀರ್ತನಕಾರರು ನೆಪಮಾತ್ರಕ್ಕೆ ಧಾರ್ಮಿಕ ಕಥಾನಕ ಎತ್ತಿಕೊಂಡು, ಅದರ ಮರೆಯಲ್ಲಿ ಕಾಲದ ತುರ್ತು ಕರೆಯಾದ ರಾಷ್ಟ್ರೀಯ ಹೋರಾಟದ ಬಗೆಗೆ ಸ್ಫೂರ್ತಿಯುತವಾಗಿ ಹೇಳುವುದು, ಜನರಲ್ಲಿ ಬ್ರಿಟಿಷ ಸರಕಾರದ ಅನ್ಯಾಯ, ಅತ್ಯಾಚಾರಗಳನ್ನು ಬಿಂಬಿಸುವುದು, ಹೋರಾಟಕ್ಕೆ ಹುರಿದುಂಬಿಸುವುದು ಅಲ್ಲಲ್ಲಿ ನಡೆಯುತ್ತಿತ್ತು. ತುಕಾರಾಂ ಕೋಪರ್ಡೆ ಎಂಬವರು ಬರೆದ ನಿಡಸೋಸಿಯ 'ಸಪ್ತಸ್ವಾಮೀಶ್ವರ ಪುರಾಣ'ದಲ್ಲಿ ರಾಷ್ಟ್ರೀಯತೆಯನ್ನು ಅದ್ಭುತವಾಗಿ ಪ್ರತಿಪಾದಿಸಲಾಗಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ, ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳಲ್ಲಿ ರಚನೆಗೊಂಡ ಅನೇಕ ವೀರಶೈವ ಪುರಾಣಗಳಲ್ಲಿ ಇಂತಹ ವಿಚಾರಗಳು ಪ್ರಸ್ತಾಪಗೊಂಡಿವೆ. ಇವುಗಳು ತುಂಬ ದುರ್ಬಲ ಅಂಶಗಳೆನ್ನಿಸಬಹುದು, ಸೀಮಿತ ವಿಚಾರವಾಗಿರಬಹುದು; ಆದರೆ ಬಹುಮುಖ್ಯ ಅಂಶಗಳೆಂಬುದನ್ನು ಮರೆಯುವಂತಿಲ್ಲ.

ಎರಡು ಕಾರಣಗಳಿಂದ ಈ ವಿಷಯದ ಬಗ್ಗೆ ನಮಗೆ ಹೆಚ್ಚಿನ ವಿವರಣೆ ಕಾಣಸಿಗುವುದಿಲ್ಲ. ೧) ವೀರಶೈವಮಠಗಳು ಇದರ ದಾಖಲೆಗಳನ್ನು ಹೊಂದಿಲ್ಲ. ಮತ್ತು ಆ ಬಗೆಗಿನ ಪ್ರಚಾರ ಅಂದು ಅವರಿಗೆ ಬೇಡವೆನಿಸಿರಬಹುದು. ೨) ಸ್ವಾತಂತ್ರ್ಯ

ಹೋರಾಟದ ಬಗೆಗೆ ನಂತರ ದಾಖಲಿಸಿದವರೆಲ್ಲ ಹೆಚ್ಚಾಗಿ ವ್ಯಕ್ತಿಗತ ಹೋರಾಟಗಳನ್ನು ಎತ್ತಿ ತೋರಿದರೇ ಹೊರತು ಸಾಂಸ್ಥಿಕವಾದ ಪ್ರಯತ್ನಗಳನ್ನು ಗಮನಿಸಲಿಲ್ಲ. ಇನ್ನು ಕೆಲವರು ಧಾರ್ಮಿಕ ಸಂಸ್ಥೆಗಳನ್ನು ಅಲಕ್ಷಿಸಿದರು. ಇದಕ್ಕೆ ನಿದರ್ಶನವಾಗಿ 'ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಸಮರ' ಎಂಬ ಎರಡು ಸಂಪುಟಗಳನ್ನು ಕಾಣಬೇಕು. ಸಂಪಾದಕರು ತಮ್ಮನ್ನು ಕೇಂದ್ರವಾಗಿಸಿ ಹೋರಾಟ ಕಥೆ ಲಂಬಿಸಿ, ನಡುವೆ ಒಂದೆಡೆಗೆ 'ಧರ್ಮಗುರುಗಳ ಸಹಾನುಭೂತಿ' ಎಂದು ವೀರಶೈವಮಠಗಳ ಕೆಲಸನ್ನು ಅತ್ಯಂತ ಕಿರಿದಾಗಿ, ಅರೆಬರೆಯಾಗಿ ನೀಡುತ್ತಾರೆ. ಇಂತಹ ಅನೇಕ ನಿದರ್ಶನಗಳನ್ನು ಅಲ್ಲಲ್ಲಿ ಕಾಣಬಹುದಾಗಿದೆ. ವೀರಶೈವಮಠ ಮತ್ತು ಮಠಾಧಿಪತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡುದರ ವಿವರಗಳು ತೀರ ಮುಖ್ಯವಾಗಿವೆ; ಏಕೆಂದರೆ ಅದರಲ್ಲಿ ನಮ್ಮ ನಾಡಿನ ಅಬ್ರಾಹ್ಮಣ ಚಳುವಳಿ, ಸಾಕ್ಷರತಾ ಚಳುವಳಿ, ದಲಿತ ಚಳುವಳಿ, ಸಮಾನತೆ, ಅಸ್ಪೃಶ್ಯತಾವಿರೋಧಿ, ಧಾರ್ಮಿಕ ಉದಾರೀಕರಣಗಳಂತಹ ಸಂಗತಿಗಳೆಲ್ಲ ಅಡಗಿಕೊಂಡಿವೆ. ಹಾಗಾಗಿ ಈ ದಿಸೆಯಲ್ಲಿ ಪ್ರಮಾಣೀಭೂತ, ಸವಿವರ ಅಧ್ಯಯನದ ಅಗತ್ಯವಿದೆ.

ಸಹಾಯಕ ಗ್ರಂಥಗಳು :

೧. ಅಖಂಡ ಕರ್ನಾಟಕ : (ಸಂ.) ಬಸವರಾಜ ಕಟ್ಟೀಮನಿ

೨. ಕಲ್ಯಾಣದ ಹಾದಿ : (ಸಂ.) ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

೩. ಕರ್ನಾಟಕದ ವೀರಶೈವಮಠಗಳು : ಚಂದ್ರಶೇಖರ ನಾರಾಣಪುರ

೪. ಕಾಯಕ ಪರಿಣಾಮಿ : (ಸಂ.) ಶಾಂತರಸ

೫. ನಾಗನೂರ ಶ್ರೀ ರುದ್ರಾಕ್ಷಿಮಠ ಒಂದು ಅಧ್ಯಯನ : ಎಫ್. ಜಿ. ಜಲರಡ್ಡಿ

೬. ಬೆಂಗಳೂರು ನಗರದ ವೀರಶೈವಮಠಗಳು-ಒಂದು ಸಾಂಸ್ಕೃತಿಕ ಅಧ್ಯಯನ : ಡಾ. ಬಿ. ಸಿ. ವೀರಪ್ಪ

೭. ಬೆಳಗಾವಿ ಜಿಲ್ಲೆಯಲ್ಲಿಯ ಸ್ವಾತಂತ್ರ್ಯ ಸಮರ : ಬಾ. ಮ. ದೇಶಪಾಂಡೆ

೮. ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ; ಲಿಂಗಾಯತರ ಪಾತ್ರ : (ಸಂ.) ಡಾ. ಎಂ. ಎಂ. ಕಲಬುರ್ಗಿ, ಡಾ. ಎಸ್. ಎಚ್. ಪಾಟೀಲ

೯. ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು - ಮಠಗಳ ಒಂದು ತೌಲನಿಕ ಅಧ್ಯಯನ : ಡಾ. ಹಿರೇಮಲ್ಲೂರ ಈಶ್ವರನ್

೧೦. ಶ್ರೀಮದ್ ಅಥಣಿ ಶಿವಯೋಗೀಶ್ವರರ ಚರಿತ್ರೆ : ಚಂದ್ರಶೇಖರ ಶಾಸ್ತ್ರಿಗಳು, ಬಸವಲಿಂಗ ಶಾಸ್ತ್ರಿಗಳು

೧೧. ಸಪ್ತಸ್ವಾಮೀಶ್ವರ ಪುರಾಣ : ತುಕಾರಾಂ ಕೋಪರ್ಡೆ

೧೨. ಸಾರಂಗಶ್ರೀ : (ಸಂ.) ಡಾ. ಎಂ. ಎಂ. ಕಲಬುರ್ಗಿ

೧೩. ಸಿದ್ಧಗಂಗಾಶ್ರೀ : (ಸಂ.) ಚನ್ನಪ್ಪ ಎರೇಸೀಮಿ, ಟಿ. ಆರ್. ಮಹಾದೇವಯ್ಯ

ಮಂತಣ

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ವಚನಗಳಲ್ಲಿ ಭಕ್ತಿಯ ಸಮಸ್ಯೆ

● ಡಾ. ಗಿರಡ್ಡಿ ಗೋವಿಂದರಾಜ

ವಚನಗಳು ಮುಖ್ಯವಾಗಿ ಭಕ್ತಿಯ ಅಭಿವ್ಯಕ್ತಿ ಎಂಬುದು ಸ್ಪಷ್ಟವೇ ಇದೆ. ಇಂಥ ಕಾವ್ಯದ ಸ್ಥಾಯೀಭಾವ ಯಾವುದು, ಭಕ್ತಿ ಸ್ವತಂತ್ರ ರಸವೆ, ಅಲ್ಲವೇ ? ಎಂಬ ಬಗ್ಗೆ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಭರತನ ಎಂಟು ರಸಗಳೊಂದಿಗೆ ಶಾಂತಿರಸವೊಂದು ಸೇರಿ ನವರಸಗಳಿಗೆ ಸಂಖ್ಯೆ ನಿಂತಿದೆ. ಶಾಸ್ತ್ರೀಯವಾಗಿ ಭಕ್ತಿಯೂ ಒಂದು ರಸವೆಂದು ಸ್ವೀಕೃತವಾಗಿಲ್ಲ. ಸಾಮಾನ್ಯವಾಗಿ ಅದನ್ನು ರತಿ ಸ್ಥಾಯಿಭಾವವಾಗಿರುವ ಶೃಂಗಾರಸದಲ್ಲಿಯೇ ಸೇರಿಸುವುದುಂಟು. ಆದರೂ ಅನಧಿಕೃತವಾಗಿ 'ಭಕ್ತಿರಸ' ಎಂಬ ಶಬ್ದ ಬಳಕೆಯಲ್ಲಿದೆ. ಭಕ್ತಿಯೂ ಒಂದು ರಸವಾಗಿದ್ದರೆ, ಅದು ಓದುಗನಲ್ಲಿ ಆ ರಸವನ್ನು ಉದ್ದೀಪಿಸುತ್ತದೆಯೆ ? ಎಂಬ ಪ್ರಶ್ನೆಗೆ ಉತ್ತರ ಸರಳವಾಗಿಲ್ಲ.

ಉಳಿದ ಯಾವುದೇ ರಸ ಎದುರಿಸದ ಸವಾಲೊಂದನ್ನು ಭಕ್ತಿಕಾವ್ಯ ಆಧುನಿಕ ಕಾಲದಲ್ಲಿ ವಿಶೇಷವಾಗಿ ಎದುರಿಸಬೇಕಾಗಿದೆ. ಉಳಿದ ರಸಗಳೆಲ್ಲ ಲೌಕಿಕವಾದುವು. ಅವುಗಳ ಸ್ಥಾಯೀಭಾವ ಎಲ್ಲರಲ್ಲೂ ಇದ್ದೇ ಇರುತ್ತದೆ. ಆದರೆ ಭಕ್ತಿ ಹಾಗಲ್ಲ. ಆಧುನಿಕ ಯುಗದಲ್ಲಿ ನಿರೀಶ್ವರವಾದ ಮತ್ತು ಅಜ್ಞೇಯತಾವಾದಗಳು ದೊಡ್ಡ ಪ್ರಮಾಣದಲ್ಲಿ ಬೆಳೆದಿವೆ. ವಿಚಾರವಾದಿಗಳು ಸಹಜವಾಗಿಯೇ ದೇವರ ಅಸ್ತಿತ್ವವನ್ನು ಒಪ್ಪುವದಿಲ್ಲ. ಅಂದಮೇಲೆ ಭಕ್ತಿಯ ಕಲ್ಪನೆಯನ್ನೂ ಅವರು ಒಪ್ಪಲಾರರು. ಅಷ್ಟೇ ಅಲ್ಲ, ಅದನ್ನು ವಿರೋಧಿಸುತ್ತಾರೆ ಕೂಡ. ಇಂಥವರು ಭಕ್ತಿಯೇ ಸ್ಥಾಯಿಯಾಗಿರುವ ವಚನಕಾವ್ಯವನ್ನು ಆಸ್ವಾದಿಸುವದು ಹೇಗೆ ? ಎಂಬ ಪ್ರಶ್ನೆ ಏಳುವುದು ಸಹಜ.

ಆದರೆ ನಾವೆಲ್ಲ ನೋಡುತ್ತಿರುವಂತೆ, ಕನ್ನಡದ ಓದುಗರು ಸಾಮಾನ್ಯವಾಗಿ ವಚನಗಳು ಶ್ರೇಷ್ಠ ಕಾವ್ಯ ಎಂದು ಒಪ್ಪಿಕೊಂಡಿದ್ದಾರೆ. ಭಕ್ತಿಯಲ್ಲಿ ನಂಬಿಕೆ ಇಲ್ಲದೆಯೂ ನಾವು ವಚನಗಳನ್ನು ಶ್ರೇಷ್ಠ ಕಾವ್ಯ ಎಂದು ಒಪ್ಪಿಕೊಂಡಿದ್ದೇವೆಯೆ ? ಅಥವಾ ವಚನಗಳನ್ನು ಕೇವಲ ಲಯ, ಭಾಷೆಯ ಚೆಲುವು, ಪ್ರತಿಮೆ-ಅಲಂಕಾರಗಳಂಥ ಕಾವ್ಯಮೌಲ್ಯಗಳಿಗಾಗಿ ಮೆಚ್ಚಿಕೊಂಡಿದ್ದೇವೆಯೆ ? ಕೇವಲ ಕಾವ್ಯಮೌಲ್ಯಗಳಿಂದಷ್ಟೇ

ಒಂದು ಕಾವ್ಯ ಶ್ರೇಷ್ಠ ಕಾವ್ಯವಾಗಿರಲು ಸಾಧ್ಯವೆ? ಅಥವಾ ವಿಚಾರವಾದಿಗಳು ವಚನಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಮೌಲ್ಯಗಳನ್ನು ಮಾತ್ರ ಒಪ್ಪಿ, ಭಕ್ತಿ ಮತ್ತು ಕಾವ್ಯಮೌಲ್ಯಗಳನ್ನು ಅಲಕ್ಷಿಸುತ್ತಾರೆಯೆ ?

ಶ್ರೇಷ್ಠ ಕಾವ್ಯದಲ್ಲಿ ಹೀಗೆ ಅನುಭವ ಮತ್ತು ಅಭಿವ್ಯಕ್ತಿಗಳನ್ನು ಬಿಡಿಸಿ ನೋಡಿ, ಒಂದನ್ನು ಒಪ್ಪಿ ಇನ್ನೊಂದನ್ನು ನಿರಾಕರಿಸಲು ಆಗುವುದಿಲ್ಲ. ಹಾಗಿದ್ದರೆ ನಾವು ವಚನಗಳನ್ನು ಮೆಚ್ಚಿಕೊಳ್ಳುವಾಗ ಅವುಗಳ ಕಲಾತ್ಮಕತೆಯ ಜೊತೆಗೆ ಭಕ್ತಿಯ ಅನುಭವವನ್ನೂ ಒಪ್ಪಿಕೊಳ್ಳುತ್ತೇವೆಯೆ ? ಹಾಗೆ ಒಪ್ಪಿಕೊಳ್ಳುವದು ಅನಿವಾರ್ಯವೆ ?

ಎಚ್. ತಿಪ್ಪೇರುದ್ರಸ್ವಾಮಿಯವರು ವಚನಗಳನ್ನು ಮೆಚ್ಚಿಕೊಳ್ಳುವ 'ಮಹಾವಿಚಾರವಾದಿ'ಗಳನ್ನೂ, 'ರೂಪಲಾಲಸ'ರನ್ನೂ ಲೇವಡಿ ಮಾಡುತ್ತ, "ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು" ಎಂಬ ಬಸವಣ್ಣನ ವಚನಕ್ಕೆ ಸಂಬಂಧಿಸಿ ಹೀಗೆ ಹೇಳುತ್ತಾರೆ : "ಈ ವಚನವನ್ನು ಮೆಚ್ಚುವುದಾದರೆ ಯಾವುದಕ್ಕಾಗಿ ? ಇಲ್ಲಿರುವ ಅಲಂಕಾರಗಳಿಗಾಗಿಯೆ ? ಸಾರ್ಥಕ ಪದಪ್ರಯೋಗಗಳಿಗಾಗಿಯೆ ? ವಾಸ್ತವವಾಗಿ ತಮ್ಮಲ್ಲೇ ಅಡಗಿರುವ ಕೂಡಲಸಂಗನ ನಿಲುವನ್ನು ತಾತ್ವಿಕ ಮೌಲ್ಯವೆಂದು ಒಪ್ಪಿಕೊಳ್ಳದೇ ಹೋದರೆ ಈ ವಚನದ ರೂಪ ತನ್ನ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತದೆ".

ಕೆ. ಕೃಷ್ಣಮೂರ್ತಿಯವರು "ಕೆರೆ ಹಳ್ಳ ಬಾವಿಗಳು ಮೈದೆಗೆದರೆ" ಎಂಬ ಬಸವಣ್ಣನ ಇನ್ನೊಂದು ವಚನವನ್ನು ಕುರಿತು ಬರೆಯುತ್ತ ಹೀಗೆ ಹೇಳುತ್ತಾರೆ : "ಇದು ಅಲೌಕಿಕವಾದ ತುರ್ಯಾನುಭ. ಈ ಅನುಭವವನ್ನು ಸಂವಹನಮಾಡುವ ಯಾವ ಭಾಷೆಯಿರಲಿ ಅದು ಋಷಿವಾಣಿ; ವೇದ ಅಥವಾ ದೇವಭಾಷೆಯೇ.... ಅದನ್ನು ಆಲಿಸಲು, ಆಲಿಸಿ ಆನಂದಿಸಲು ಛಂದೋನಿಯಮಗಳ, ಕಾವ್ಯಾಲಂಕಾರಗಳ, ನವರಸಗಳ ಪರಿಚಯವಿದ್ದರಷ್ಟೇ ಸಾಲದು; ಅದಕ್ಕೂ ಹೆಚ್ಚಿನ ತನ್ಮಯತೆ, ಆತ್ಮಸಂಸ್ಕೃತಿ ಎಂದರೆ ಭಕ್ತಿನಿಷ್ಠೆಯೂ ಬೇಕಾಗುತ್ತದೆ. ಶರಣಾರ್ಥಿಯಲ್ಲದ, ಭಕ್ತನಲ್ಲದ ಭವಿಗೆ ಬಸವಣ್ಣನವರ ವಚನಗಳು ತಮ್ಮ ಮಹಾರ್ಥವನ್ನು ತೆರೆದು ತೋರಲಾರವು".

ಇಬ್ಬರೂ ಭಾರತೀಯ ಕಾವ್ಯಮೀಮಾಂಸೆಯನ್ನು ಚೆನ್ನಾಗಿ ಓದಿರುವ ವಿದ್ವಾಂಸರು. ಭಾರತೀಯ ರಸಸಿದ್ಧಾಂತದಲ್ಲಿ, ಸ್ಥಾಯಿಭಾವ ರಸವಾಗುವಾಗ, ಓದುಗನಲ್ಲಿ ಸುಪ್ತವಾಗಿರುವ ಸ್ಥಾಯಿಭಾವವನ್ನು ಉದ್ದೀಪಿಸಿ ರಸವಾಗಿ ಪರಿಣಮಿಸುತ್ತದೆಂಬ ಒಂದು ವಿವರಣೆಯೂ ಇದೆ. ಎಂದರೆ ಆ ಸ್ಥಾಯೀಭಾವ ಓದುಗನಲ್ಲಿ ಇದ್ದರೆ ಮಾತ್ರ ಅದು ರಸವಾಗುವದು ಸಾಧ್ಯ; ಇಲ್ಲವಾದರೆ ಇಲ್ಲ. ಭಕ್ತಿಯ ವಿಷಯದಲ್ಲಿ ಈ ವಿದ್ವಾಂಸರು ಇದೇ ವಾದವನ್ನು ಬಳಸಿದ್ದಾರೆ. ಓದುಗನಲ್ಲಿ ಭಕ್ತಿ ಸುಪ್ತವಾಗಿಯಾದರೂ ಇಲ್ಲದಿದ್ದರೆ ವಚನಕಾವ್ಯದ ಆಸ್ವಾದನೆ ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಅವರು ಬಂದಿದ್ದಾರೆ.

ಈ ವಾದವನ್ನು ಸ್ವಲ್ಪ ಮುಂದುವರಿಸುವುದಾದರೆ, ಒಬ್ಬ ವಿಚಾರವಾದಿ ಓದುಗ ಭಕ್ತಿಯಲ್ಲಿ ನಿಷ್ಠೆ ಇಲ್ಲದ ಕಾರಣಕ್ಕಾಗಿ ವಚನಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರ. ಪುರಾಣಾದಿ ಅಲೌಕಿಕ ಕಥೆಗಳಲ್ಲಿ ನಂಬಿಕೆ ಇಲ್ಲದುದರಿಂದ ಮಹಾಭಾರತದಂಥ ಕಾವ್ಯವನ್ನು ಅರ್ಥಮಾಡಿಕೊಳ್ಳಲಾರ, ಮೆಚ್ಚಲಾರ. ಹದಿನೆಂಟನೆಯ ಶತಮಾನದ ಸ್ವಿಫ್ಟ್‌ನ ಗಲಿವರನ ಪ್ರವಾಸಗಳು ಅವಾಸ್ತವ ನೆಲೆಯಲ್ಲಿ ಕೆಲಸಮಾಡುವುದರಿಂದ ಅವನಿಗೆ ಅರ್ಥವಾಗಲಾರವು. ಮಾರ್ಕ್ಸ್‌ವಾದಿ ಓದುಗ ತಾನು ನಂಬಲಾಗದ ಅಸ್ತಿತ್ವವಾದಿ ಬರವಣಿಗೆಯನ್ನು ಮೆಚ್ಚಲಾರ. ಮಾರ್ಕ್ಸ್‌ವಾದಿ ಅಲ್ಲದವನಿಗೆ ಮಾರ್ಕ್ಸ್‌ವಾದಿ ಕೃತಿಗಳು ಅರ್ಥವಾಗಲಾರವು. ಆದರೂ ವಿಮರ್ಶಕರು ತಮ್ಮ ನಂಬಿಕೆಗಳ ಹೊರಗಿನ ಕೃತಿಗಳನ್ನು ಅರ್ಥಮಾಡಿಕೊಂಡಿದ್ದಾರೆ, ಮೆಚ್ಚಿದ್ದಾರೆ.

ವಚನಗಳ ವಿಷಯದಲ್ಲಿಯೂ ಹೀಗಾಗಿದೆ. ಅವುಗಳನ್ನು ಮೆಚ್ಚಿರುವವರೆಲ್ಲ ವೀರಶೈವರಲ್ಲ, ಭಕ್ತರೂ ಅಲ್ಲ. ಅಂಥವರಿಗೆ ವಚನಗಳ ಮಹಾರ್ಥ ಕಂಡಿಲ್ಲ ಎಂದು ನಾನು ಒಪ್ಪಲಾರೆ. ಅವರೆಲ್ಲ ವಚನಗಳನ್ನು ಕೇವಲ ಕಾವ್ಯಮೌಲ್ಯಗಳಿಗಾಗಿ ಮೆಚ್ಚಿದ್ದಾರೆಂದೂ ನನಗೆ ಅನಿಸುವುದಿಲ್ಲ. ವಿಚಾರವಾದಿಗಳ ಮೆಚ್ಚಿಗೆ ಕೇವಲ ವಚನಗಳ ಸಾಮಾಜಿಕ ಮೌಲ್ಯಗಳಿಗೆ ಸೀಮಿತವಾಗಿದೆಯೆಂದೂ ಹೇಳಲಾರೆ.

ಈ ಸಂದರ್ಭದಲ್ಲಿ ರಾಮಚಂದ್ರ ಕೊಟ್ಟಲಗಿಯವರ " ಹೆಬ್ಬೆರಳು, ಕಿರಿಬೆರಳು " ಎಂಬ ಕಥೆಯಲ್ಲಿ ಬರುವ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ಹಳ್ಳಿಯೊಂದರಲ್ಲಿ ಸಂಪ್ರದಾಯವಾದಿಯಾದ ಒಂದು ದೊಡ್ಡ ಮನೆತನ. ಮಧ್ಯಾಹ್ನದ ಊಟಕ್ಕೆ ಚಪಾತಿಗಳ ಒಂದು ಡಿಗ್ಗಿ ತಯಾರಾಗಿದೆ. ಇನ್ನೇನು ಊಟಕ್ಕೆ ಬಡಿಸಲು ಆರಂಭಿಸಬೇಕು. ಅಷ್ಟರಲ್ಲಿ ಚಿಕ್ಕ ಮಗುವೊಂದು ದೊಡ್ಡವರ ಕಣ್ಣು ತಪ್ಪಿಸಿ ಅಡಿಗೆ ಮನೆಗೆ ಬಂತು. ಅವಸರದಲ್ಲಿ ಅಲ್ಲೇ ಹೇಸಿಗೆ ಮಾಡಿತು. ಅದನ್ನು ನೋಡಿದ ಯಜಮಾನಿ ಬೇಗನೆ ಅದನ್ನು ತೆಗೆದು ಹಾಕಲು ಸೊಸೆಗೆ ಹೇಳಿದಳು. ಸೊಸೆ ಸ್ವಲ್ಪ ಆಧುನಿಕ ಕಾಲದವಳು. ಹೊರಗೆ ಹೋಗಿ ಸೆಗಣಿ ತರಲು ಬೇಸರ ಮಾಡಿಕೊಂಡಳು. ಅವಸರದಲ್ಲಿ ಅಲ್ಲೇ ಇದ್ದ ಚಪಾತಿಗಳ ಡಿಗ್ಗಿಯಿಂದ ಒಂದನ್ನು ಎಳೆದುಕೊಂಡು ಅದರಿಂದಲೇ ಹೇಸಿಗೆ ಬಳಿದು ಚೆಲ್ಲಿದಳು. ಇದನ್ನು ನೋಡಿದ ಯಜಮಾನಿಗೆ ವಿಪರೀತ ಆಘಾತವಾಯಿತು. ಅಲ್ಲಿಂದ ಆಕೆ ಏಳಿಗೆಯಾಗಲಿಲ್ಲ. ಮನೆತನವೂ ಹಾಳಾಯಿತು. ಇದನ್ನು ಓದುವ ವಿಚಾರವಾದಿಗಳಿಗೆ ಆ ಯಜಮಾನಿಗಾದ ಆಘಾತ ಖಂಡಿತ ಆಗಲಾರದು. ಈ ಘಟನೆಗೂ, ಮನೆತನ ಹಾಳಾದ್ದಕ್ಕೂ ಸಂಬಂಧವಿದೆಯೆಂದೂ ಅವರು ಒಪ್ಪಲಾರರು. ಆದರೆ ಸಾಂಪ್ರದಾಯಿಕ ಹಿಂದೂ ಮೌಲ್ಯವ್ಯವಸ್ಥೆಯಲ್ಲಿ ಅನ್ನವನ್ನು ದೇವರೆಂದು ನಂಬಿಕೊಂಡು ಬಂದಿರುವ ಆ ಯಜಮಾನಿಗೆ ಅಂಥ ಆಘಾತವಾಗುವುದು ಸಾಧ್ಯವೆಂದು ಯಾವ ವಿಚಾರವಾದಿಯಾದರೂ ಒಪ್ಪಿಕೊಳ್ಳುತ್ತಾನೆ. ಸಾಹಿತ್ಯ ಈಗಾಗಲೇ ನಮ್ಮ ಅನುಭವಕ್ಕೆ ಬಂದಿರುವ ಸಂಗತಿಗಳನ್ನು ಚಿತ್ರಿಸುವಷ್ಟಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಮತ್ತು ನಮಗೆ ಆಗಿರುವ ಅನುಭವಗಳಿದ್ದರೆ ಮಾತ್ರ ಸಾಹಿತ್ಯದಲ್ಲಿ ಅರ್ಥವಾಗುತ್ತವೆಂದೂ ಅಲ್ಲ. ಈ ವರೆಗೆ ನಮ್ಮ ಅನುಭವಕ್ಕೆ ಬಾರದೆ ಎಷ್ಟೋ ಹೊಸ ಸಂಗತಿಗಳನ್ನು ನಮ್ಮ

ಅನುಭವಕ್ಕೂ ಬರುವಂತೆ ಚಿತ್ರಿಸಿ ಸಾಹಿತ್ಯ ಅವುಗಳನ್ನು ನಮ್ಮ ಅನುಭವಸಂಚಯಕ್ಕೆ ಹೊಸದಾಗಿ ಸೇರಿಸುತ್ತದೆ. ನಾವು ನಿಜ ಜೀವನದಲ್ಲಿ ಒಪ್ಪಿಕೊಳ್ಳದ ಅನೇಕ ಸಂಗತಿಗಳನ್ನು ಸಾಹಿತ್ಯ ತನ್ನ ಕೃತಿಯ ಸಂದರ್ಭದಲ್ಲಿ ಓದುಗ ಒಪ್ಪಿಕೊಳ್ಳುವಂತೆ ಮಾಡುತ್ತದೆ. ಇದೇ ಸಾಹಿತ್ಯದ ಮಾಂತ್ರಿಕ ಶಕ್ತಿ. ತನ್ನ ಗಂಡ ಮತ್ತು ಚಿಕ್ಕ ಮಗುವನ್ನು ಬಿಟ್ಟು, ರೋಮಾಂಚಕ ಬದುಕನ್ನು ಬಯಸಿ ಪ್ರಿಯಕರನೊಂದಿಗೆ ಓಡಿಹೋಗಿ, ಅವನೊಂದಿಗೂ ಹೊಂದಿಕೊಳ್ಳಲಾರದೆ ದುರಂತಕ್ಕೀಡಾಗುವ ಟಾಲ್‌ಸ್ಟಾಯನ 'ಅನ್ನಾಕರೆನಿನಾ'ದ ನಾಯಕಿಯಂಥ ಹೆಣ್ಣನ್ನು ನಾವು ನಿಜಜೀವನದಲ್ಲಿ ಒಪ್ಪಿಕೊಳ್ಳುವುದು ಕಷ್ಟ. ಆದರೆ ಟಾಲ್‌ಸ್ಟಾಯನ ಕಾದಂಬರಿಯಲ್ಲಿ ಅವಳು ನಮ್ಮ ಸಹಾನುಭೂತಿ ಗಳಿಸಿಕೊಳ್ಳುತ್ತಾಳೆ. ಉದಾಹರಣೆಗಳನ್ನು ಬೆಳೆಸಬೇಕಾಗಿಲ್ಲ.

ವಚನಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ವೀರಶೈವ ಧರ್ಮದ ತಾತ್ವಿಕ ನೆಲೆಗಟ್ಟಿನ ಪರಿಚಯವಿರಬೇಕೆಂಬುದು ಸರಿ. ಅದು ವ್ಯುತ್ಪತ್ತಿಯ ಪ್ರಶ್ನೆ. ಅದು ಎಷ್ಟಿದ್ದರೂ ಸಾಲದು. ಆದರೆ ವಚನಕಾರರಂತೆ ನಾವೂ ದೇವರಲ್ಲಿ ನಂಬಿಕೆ ಇಡಬೇಕೆಂದರೆ ಒಪ್ಪುವದು ಕಷ್ಟ. ನಮಗೆ ಭಕ್ತಿಯ ಅನುಭವ ಇಲ್ಲದಿದ್ದರೂ ವಚನಗಳು ತಮ್ಮ ಸಾಹಿತ್ಯಕ ಸಂದರ್ಭದಲ್ಲಿ ಆ ಅನುಭವವನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ. ಓದುಗರಾಗಿ ನಮಗೆ ದೈವಭಕ್ತಿ ಇದೆಯೋ ಇಲ್ಲವೋ ಎಂಬುದು ಮುಖ್ಯವಾಗುವುದಿಲ್ಲ. ಬದಲಾಗಿ ವಚನಗಳಲ್ಲಿ ಅಭಿವ್ಯಕ್ತವಾಗಿರುವ ಭಕ್ತಿಯ ಅನುಭವ ನೈಜತೆ, ಪ್ರಾಮಾಣಿಕತೆ, ತೀವ್ರತೆಗಳು ಮುಖ್ಯವಾಗಿರುತ್ತವೆ. ನಮಗೆ ಅಂಥ ಅನುಭವ ಇಲ್ಲದಿದ್ದರೂ, ವಚನಕಾರರಿಗೆ ಇತ್ತು ಎಂಬ ನಂಬಿಕೆಯನ್ನು ವಚನಗಳು ಮೂಡಿಸುತ್ತವೆ.

ಅಪನಂಬಿಕೆಯ ತಾತ್ಕಾಲಿಕ ನಿಲುಗಡೆ (Willing suspension of disbelief) ಸಾಹಿತ್ಯದ ಓದಿನಲ್ಲಿ ನಡೆಯುವ, ನಡೆಯಬೇಕಾದ ಒಂದು ಮುಖ್ಯ ಕ್ರಿಯೆ. ಅದನ್ನು ಸಾಹಿತ್ಯಕೃತಿ ತನ್ನ ನಿಟ್ಟಿನಿಂದ ಒತ್ತಾಯಿಸಿದರೆ, ಓದುಗನೂ ತನ್ನ ನಿಟ್ಟಿನಿಂದ ಸಾಧಿಸಬೇಕಾಗುತ್ತದೆ. ಶ್ರೇಷ್ಠ ಸಾಹಿತ್ಯಕೃತಿ ನಮ್ಮ ನಂಬಿಕೆಗಳನ್ನು ಮೀರಿಯೂ ನಮ್ಮ ಮೆಚ್ಚಿಗೆ ಪಡೆದುಕೊಳ್ಳುತ್ತದೆ. ಹಾಗೆಂದು ನಮ್ಮ ನಂಬಿಕೆಗಳನ್ನು ಬಿಟ್ಟುಕೊಟ್ಟು ಕೃತಿಕಾರನ ನಂಬಿಕೆಗಳನ್ನು ಸ್ವೀಕರಿಸಿಬಿಡುತ್ತೇವೆಂದಲ್ಲ. ಕೃತಿಯ ಸಂದರ್ಭದಲ್ಲಿ ಅವುಗಳನ್ನು ಸಾಚಾ ಎಂದು ಒಪ್ಪಿಕೊಳ್ಳುತ್ತೇವೆ.

ವಚನಗಳು ತಮ್ಮ ಶ್ರೇಷ್ಠತೆಯ ನೆಲೆಯಲ್ಲಿ ಭಕ್ತಿಯ ಸಾಚಾತನವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ಅಭಿವ್ಯಕ್ತಿಸಿವೆ. ಭಕ್ತಿ ಇಲ್ಲಿ ಕೇವಲ ಏಕಮುಖಿ ಭಾವವಲ್ಲ. ಹಾಸ್ಯ, ಕರುಣ, ವ್ಯಂಗ್ಯ, ಶೃಂಗಾರ, ವೀರ, ಬೀಭತ್ಸ, ರೌದ್ರ, ಶಾಂತ ಮೊದಲಾದ ಹಲವು ಸಂಕೀರ್ಣ ರೂಪಗಳಲ್ಲಿ ಬಂದಿದೆ. ಅದೊಂದು ಸುಲಭವಾಗಿ ಸಾಧಿಸಿಕೊಂಡ ಭಾವವೂ ಅಲ್ಲ. ಅದರಲ್ಲಿ ಸಂದೇಹ, ತೊಳಲಾಟ, ಯಾತನೆ, ಸುಖ, ದುಃಖ, ಮೈಮರೆವು, ಕನಸುಗಾರಿಕೆ ಎಲ್ಲವೂ ಇದೆ. ನಿಜಜೀವನದಲ್ಲಿ ನಮಗೆ ಭಕ್ತಿಯಲ್ಲಿ ನಂಬಿಕೆ ಇರಲಿಕ್ಕಿಲ್ಲ. ಆದರೆ ವಚನಗಳು ನೈಜಭಕ್ತಿಯನ್ನು ನಮ್ಮ ಅನುಭವಕ್ಕೆ ತಂದುಕೊಡುವಲ್ಲಿ

ಯಶಸ್ವಿಯಾಗಿವೆ. ಅದರಿಂದಾಗಿ ಅವುಗಳ ಸಂದರ್ಭದಲ್ಲಿ ವಚನಕಾರರ ಭಕ್ತಿನಿಷ್ಠೆಯ ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳುತ್ತೇವೆ. ಸಾಹಿತ್ಯದ ಆಸ್ವಾದನೆಯಲ್ಲಿ ಓದುಗನ ಈ ಸ್ಥಿತಿಯೇ ಮುಖ್ಯವಾದದ್ದು.

ಭಕ್ತಿಯಲ್ಲಿ ನಿಷ್ಠೆಯಿರುವ ಓದುಗರನ್ನು ಒಪ್ಪಿಸಲು, ಮೆಚ್ಚಿಸಲು ವಚನಗಳು ಹೆಚ್ಚು ಕಷ್ಟಪಡಬೇಕಾಗಿಯೇ ಇಲ್ಲ. ಆದರೆ ಅಂಥ ಶ್ರದ್ಧೆ ಇಲ್ಲದ ಓದುಗರನ್ನೂ ಮೆಚ್ಚಿಸಲು ಯಸಸ್ವಿಯಾಗಿರುವುದೇ ವಚನಗಳ ಆಂತರಿಕ ಶಕ್ತಿಗೆ ನಿದರ್ಶನವಾಗಿದೆ.

ವಚನಕಾರರು ಭಕ್ತಿಗೆ ಕೊಟ್ಟ ಮಹತ್ವದ ಬಗೆಗೆ ಇನ್ನೊಂದು ಮಾತನ್ನು ಇಲ್ಲಿಯೇ ಹೇಳಬೇಕು. ಭಕ್ತಿ ಅವರಿಗೆ ಕೇವಲ ದೇವರಪೂಜೆಯ ವಿಧಾನವಾಗಿರಲಿಲ್ಲ. ಅದು ಸಂವಹನದ ಮುಖ್ಯ ಮಾಧ್ಯಮವಾಗಿತ್ತು. ಅದೊಂದು ಭಾಷೆಯಾಗಿತ್ತು. ಹನ್ನೆರಡನೆಯ ಶತಮಾನದ ಕಾಲದಲ್ಲಿ ಆ ಭಾಷೆ ಎಲ್ಲರಿಗೂ ಅರ್ಥವಾಗುತ್ತಿತ್ತು. ಅಂತೆಯೇ ವಚನಕಾರರು ಆ ಭಾಷೆಯ ಮೂಲಕವೇ ತಮ್ಮ ಧಾರ್ಮಿಕ, ಸಾಮಾಜಿಕ ಚಿಂತನೆಗಳನ್ನು ಅಭಿವ್ಯಕ್ತಿಸಿದರು. ಅನೇಕ ಸಂತಕವಿಗಳು ಮುಂದೆಯೂ ಈ ಪರಂಪರೆಯನ್ನು ಅನುಸರಿಸಿದ್ದಾರೆ.

■■

ಅಲ್ಲಮ ಪ್ರಭುದೇವರು - ರಾಮಕೃಷ್ಣ ಪರಮಹಂಸರು

● ಡಾ. ಬಿ. ವ್ಹಿ. ಯಕ್ಕುಂಡಿಮಠ

ಮಹಾಪುರುಷರ ಜೀವನದ ರಹಸ್ಯವನ್ನು ಕಾಣುವ ದೃಷ್ಟಿ ಎರಡು ಬಗೆಯಾಗಿದೆ. ಮಾನವನು ಮಾನವನಾಗಿಯೆ ಜನಿಸುವನು. ತನ್ನ ಅಸಾಧಾರಣವಾದ ಸಾಧನೆಗಳಿಂದ ಸಿದ್ಧಾವಸ್ಥೆಯನ್ನು ಪಡೆದು ಅತಿಮಾನವವರ್ಗಕ್ಕೆ ಸೇರುವನೆಂದು ಬಗೆಯುವುದು ಒಂದು ದೃಷ್ಟಿ. ದೇವನೇ ಮಾನವರೂಪದಲ್ಲಿ ಅವತರಿಸಿ ಅಮಾನುಷ ಕೃತ್ಯಗಳನ್ನೆಸಗಿ ಜೀವಜಾಲದ ಯೋಗಕ್ಷೇಮವನ್ನು ನೋಡಿಕೊಳ್ಳುವನೆಂದು ಭಾವಿಸುವುದು ಇನ್ನೊಂದು ದೃಷ್ಟಿ. ಸಕೃದ್ದರ್ಶನಕ್ಕೆ ಈ ಎರಡರಲ್ಲಿ ಭಿನ್ನತೆಯುಂಟು ಎಂದು ತಿಳಿಯಬಹುದು. ಆದರೆ ಒಂದು ಇನ್ನೊಂದರಿಂದ ಭಿನ್ನವಾದುದಲ್ಲ. ಒಂದು ಇನ್ನೊಂದಕ್ಕೆ ಪೂರಕವಾಗಿದೆ ಎಂದು ಹೇಳಬಹುದು. ಮಾನವನು ಪುರುಷಪ್ರಯತ್ನದಿಂದ ತನ್ನ ಸಂಕಲ್ಪಶಕ್ತಿಯ ಸಹಾಯದಿಂದ ದೇವನಾಗಬಲ್ಲನು ಎಂಬ ವಿಚಾರಕ್ಕೆ ನಾವು ಇಂದು ಒಲಿಯುತ್ತಿದ್ದೇವೆ. ಆದುದರಿಂದ ಈ ದೃಷ್ಟಿಗಳಲ್ಲಿ ಒಂದು ಪುರುಷಪ್ರಯತ್ನವನ್ನು ಪುರಸ್ಕರಿಸಿದರೆ, ಇನ್ನೊಂದು ಪ್ರಭುಕಾರುಣ್ಯವನ್ನು ಗೌರವಿಸುವುದೆಂದು ತಿಳಿಯಬಹುದು. ಇಹದಲ್ಲಿ ಸುಖಮಯವಾದ ಆನಂದಭರಿತವಾದ ಜೀವನ ನಡೆಸುವುದಕ್ಕೆ ಈ ಎರಡು ದೃಷ್ಟಿಗಳು ಮಾನವನಿಗೆ ಅವಶ್ಯ. ಒಂದಿಲ್ಲೊಂದು ರೀತಿಯಿಂದ ದೇವನನ್ನು ಕಾಣಲು, ಕಂಡು ತನ್ನ ಇಹದ ಬಾಳುವೆಯಲ್ಲಿ ಪರದ ಜೀವನದಲ್ಲಿ ಶಾಶ್ವತವಾದ ಶಾಂತಿಯನ್ನು ನಿತ್ಯವಾದ ಆನಂದವನ್ನು ಹೊಂದಲು ಮಾನವನು ಹಂಬಲಿಸುತ್ತಾನೆ, ಹರಿದಾಡುತ್ತಾನೆ. ಗೆಲುವನ್ನು ಪಡೆಯುತ್ತಾನೆ. ಕೊನೆಗೆ ಜನತೆಯ ದೃಷ್ಟಿಯಲ್ಲಿ ದೇವತ್ವದಲ್ಲಿ ಕಾಣಿಸಿಕೊಳ್ಳುತ್ತಾನೆ. ಅತಿಮಾನವನಾಗಿ ತೋರುತ್ತಾನೆ. ಈ ಎರಡು ದೃಷ್ಟಿಗಳನ್ನು ಸಮನ್ವಯಗೊಂಡ ಮೂರನೆಯ ದೃಷ್ಟಿಯೊಂದಿದೆ. ಇದು ಮಹಾಪುರುಷರ ಜೀವನದ ಗೂಢವಾಗಿದೆ. ಅಲ್ಲಮಪ್ರಭುದೇವರ ರಾಮಕೃಷ್ಣ ಪರಮಹಂಸರ ವಿಷಯದಲ್ಲಿಯೂ ಈ ಮಾತು ನಿತ್ಯ ಸತ್ಯವಾಗಿದೆ. ಅಲ್ಲಮಪ್ರಭುದೇವರು ಹನ್ನೆರಡನೆಯ ಶತಮಾನದ ಅವಿರಳ ಜ್ಞಾನಿಯಾಗಿದ್ದಾರೆ. ರಾಮಕೃಷ್ಣ ಪರಮಹಂಸರು ಹತ್ತೊಂಬತ್ತನೆಯ ಶತಮಾನದ ತತ್ವಜ್ಞಾನಿಯಾಗಿದ್ದಾರೆ.

ಪ್ರಭುವೇ ಮಹಾಗುರುಪ್ರಭುವೇ, ಲಿಂಗಕಳಾಪ್ರಭುವೇ, ಚರಾಬಿಧ
ಪ್ರಭುವೇ, ಶಿವಾತ್ಮಚಿತ್ಪ್ರಭುವೇ, ಯೋಗಿವರ ಪ್ರಭುವೇ, ಚಿದಂಗವಾ
ಪ್ರಭುವೇ, ಸದಮಲ ಪ್ರಭುವೇ, ರಕ್ಷಿಸುದೇವ ಗುಹೇಶ್ವರಲ್ಲಮ
ಪ್ರಭುವೇ, ನಿರಂಜನ ಪ್ರಭುವೇ, ಮತ್ಪ್ರಭುವೆ ಪ್ರಭುವೇ ಶಿವಧವಾ

ಎಂದು ಮೊಗ್ಗೆಯ ಮಾಯಿದೇವ ಶಿವಾಧವ ಶತಕದಲ್ಲಿ ಭಯ-ಭಕ್ತಿಯಿಂದ ಸ್ಮರಿಸಿದ ವ್ಯೋಮಮೂರುತಿ ಅಲ್ಲಮಪ್ರಭುದೇವ ಆಧ್ಯಾತ್ಮಿಕ ಸಂಸ್ಕೃತಿಯ ರೂವಾರಿ, ಈ ಭೂಮಿಯನ್ನು ಬೆಳಗಿದ ಮಹಾಜ್ಯೋತಿ. ಇಂತಹ ಮೇರುಸದೃಶ ವ್ಯಕ್ತಿತ್ವವನ್ನು ಹರಿಹರ, ರಾಘವಾಂಕ, ಭೀಮಕವಿ, ಲಕ್ಕಣ ದಂಡೇಶ, ಸಿಂಗಿರಾಜ, ಚಾಮರಸ, ಸಿದ್ಧನಂಜೇಶ ಮುಂತಾದ ಕವಿಗಳು, ಪುರಾಣಿಕರು, ವಚನಕಾರರು ಮತ್ತು ಶೂನ್ಯ ಸಂಪಾದನಕಾರರು ತಮ್ಮ ಕೃತಿಗಳಲ್ಲಿ ರೂಪಿಸಿದ್ದಾರೆ. ಒಂದು ಮಹಾಕಾವ್ಯಕ್ಕೆ ವಸ್ತುವಾಗಬಲ್ಲ ಪ್ರಭುವಿನ ದಿವ್ಯದರ್ಶನವನ್ನು ಪ್ರೊಫೆಸರ್ ಸಂ. ಶಿ. ಭೂಸನೂರಮಠ, ಡಾ. ಜ. ಚ. ನಿ., ಡಾ. ಎಲ್. ಬಸವರಾಜು, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಾ. ಎಂ. ಚಿದಾನಂದಮೂರ್ತಿ ಅವರಂಥ ಸಂಶೋಧಕರು, ವಿದ್ವಾಂಸರೂ ತಮ್ಮ ಕೃತಿಯಲ್ಲಿ ಮೂಡಿಸಿದ್ದಾರೆ. ತಮ್ಮ ಸಂದೇಶದಿಂದ ಜಗತ್ತನ್ನೇ ಜಾಗೃತಗೊಳಿಸಿದ ಶ್ರೀ ರಾಮಕೃಷ್ಣ ಪರಮಹಂಸರು ಜಗತ್ತಿನಲ್ಲಿ ಪ್ರಸಿದ್ಧಿಪಡೆದು ಸರ್ವತ್ರ ಸರ್ವಜನರಿಂದಲೂ ಪೂಜಿತರಾದರು. ಅಷ್ಟೇ ಅಲ್ಲ, ಸ್ವಾಮಿ ವಿವೇಕಾನಂದ, ಸ್ವಾಮಿ ಶಾರದಾನಂದ, ಸ್ವಾಮಿ ಪುರುಷೋತ್ತಮಾನಂದರಲ್ಲದೇ, ರಾಷ್ಟ್ರಕವಿ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ರವೀಂದ್ರನಾಥ ಠಾಕೂರ, ಯೋಗೇಂದ್ರನಾಥ ಚೌಧರಿ, ಮಥುರಾನಾಥ ಮದಾರ, ಪಾಶ್ಚಾತ್ಯ ವಿದ್ವಾಂಸರಾದ ರೊಮ್ಯೆನ್ ರೋನಾಲ್ಡ್, ಸಿಸ್ಟರ್ ನಿವೇದಿತಾ ಮೊದಲಾದವರು ರಾಮಕೃಷ್ಣರನ್ನು ಕುರಿತು ಕೃತಿ ರಚಿಸಿದ್ದಾರೆ.

ಬಳ್ಳಿಗಾವಿಯ ಶಿವ-ಭಕ್ತಿ-ಜ್ಞಾನ ಸಂಪನ್ನರಾದ ತಂದೆ ನಿರಹಂಕಾರ ತಾಯಿ ಸುಜ್ಞಾನಿಯ ಪುಣ್ಯಗರ್ಭದಲ್ಲಿ ಅಲ್ಲಮಪ್ರಭುದೇವರು ಜನಿಸಿದರೆ, ಕಾಮರಪುಕುರದ ಸಾಂಪ್ರದಾಯಿಕ ಬಡಬ್ರಾಹ್ಮಣ ಕುಟುಂಬದಲ್ಲಿ ತಂದೆ ಖುದಿರಾಮ, ತಾಯಿ ಚಂದ್ರಮಣಿ ದೇವಿಯ ಉದರದಲ್ಲಿ ರಾಮಕೃಷ್ಣರು ಜನಿಸಿದರು. ಚಿಕ್ಕ ವಯಸ್ಸಿನಲ್ಲಿ ಅನಿಮಿಷ ಗುರುಗಳವರಿಂದ ಶಿವದೀಕ್ಷೆಯನ್ನು ಪಡೆದು ಏಕೈಕ ನಿಷ್ಠೆಯನ್ನು ಸತತ ಸಾಧನೆಯನ್ನು ಬೆಳೆಸಿಕೊಳ್ಳುತ್ತಾರೆ. ತನ್ನ ಪುಸ್ತಕದ ಅನುಭವದ ಬೆಳಕಿನಲ್ಲಿ ಹೊರ ಜಗತ್ತಿನ ಜೀವನದ ರೀತಿ-ನೀತಿಗಳನ್ನು ಒರೆಹಚ್ಚಿನೋಡುವ, ಪ್ರಯತ್ನಶೀಲನಾಗುತ್ತಾನೆ ಅಲ್ಲಮಪ್ರಭು. ಸನ್ಯಾಸಿನಿಯಾದ ಭೈರವಿ ಬ್ರಾಹ್ಮಣಿಯಿಂದ ತಮ್ಮ ಜೀವನದಲ್ಲಿ ಪ್ರಮುಖ ತಿರುವು ಪಡೆದು ಮುಂದೆ ನಗ್ನ ಸನ್ಯಾಸಿ ತೋತಾಪುರಿಯಿಂದ ಉಪದೇಶ (ದೀಕ್ಷೆ) ಪಡೆದು ಆಧ್ಯಾತ್ಮಿಕ ಚಿಂತನೆಗೈದರು ರಾಮಕೃಷ್ಣ ಪರಮಹಂಸರು.

ವಯೋಮಾನಕ್ಕನುಸರಿಸಿ ಸಹಜವಾದ ಆಶೆ, ಆಕಾಂಕ್ಷೆಗಳ ಕಡೆ ಮನಸ್ಸು ಹರಿಯಗೊಡಲಿಲ್ಲ. ವಿಷಯ ವ್ಯಾಮೋಹಗಳು ಇರ್ವರನ್ನು ಕಾಡಲಿಲ್ಲ.

ಬಾಲ್ಯಾವಸ್ಥೆಯ ಸುಭದ್ರವಾದ ಸುಸಂಸ್ಕೃತಿಯ ನೆಲೆಗಟ್ಟು ಇರ್ವರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅನೇಕ ವರ್ಷಗಳವರೆಗೆ ಧ್ಯಾನ, ಕಠಿಣ ತಪಸ್ಸು, ಮೌನ, ಅನುಷ್ಠಾನವನ್ನಾಚರಿಸಿ ಯೋಗ ಸಾಧನೆಯನ್ನು ಮಾಡಿದರು. ಬಾಹ್ಯಾಡಂಬರಕ್ಕಾಗಲಿ, ಲೌಕಿಕ ವಿಖ್ಯಾತಿಗಾಗಲಿ, ಮೇಧಾಶಕ್ತಿ ವಿದ್ವತ್ತುಗಳಿಗಾಗಲಿ ಅಥವಾ ಲೋಕವನ್ನೇ ಮಂತ್ರಮುಗ್ಧವನ್ನಾಗಿ ಮಾಡಿಬಿಡುವ ವಾಚಾಲತೆಗಾಗಲಿ, ಅವರೆಂದಿಗೂ ಮರುಳಾದವರಲ್ಲ. ಜಗತ್ತಿನಲ್ಲಿ ಆವರಿಸಿಕೊಂಡಿದ್ದ ತಮವನ್ನು ಹೋಗಲಾಡಿಸುವ ಉದ್ದೇಶದಿಂದ ಪರಿವ್ರಾಜಕ ದಾರ್ಶನಿಕರಾಗಿ, ಲೋಕಹಿತಾರ್ಥ ಕರ್ಮಗಳಲ್ಲಿ ತಮ್ಮನ್ನೇ ತಾವು ತೊಡಗಿಸಿಕೊಳ್ಳುತ್ತಿದ್ದರು. ವ್ಯಕ್ತಿಯ ಹೃದಯದಲ್ಲಿ ಈಶ್ವರ ಜ್ಯೋತಿಯನ್ನು ಕಂಡಲ್ಲದೇ ಅವರು ಪ್ರಶಂಸೆ ಮಾಡುತ್ತಿರಲಿಲ್ಲ. ಖೋಟಾನಾಣ್ಯಗಳನ್ನು ಕಂಡು ಹಿಡಿಯುವುದರಲ್ಲಿ ಅವರು ಅದ್ವಿತೀಯ ಪಂಡಿತರಾಗಿದ್ದರು. ಅವರ ಅನ್ವೇಷಕ ದೃಷ್ಟಿ ವ್ಯಕ್ತಿಗಳ ದೇಹವನ್ನು ಭೇದಿಸಿ ಹೃದಯದ ರಹಸ್ಯವನ್ನು ಕ್ಷಣಮಾತ್ರದಲ್ಲಿ ಅರಿಯಬಲ್ಲುದಾಗಿತ್ತು. ಧರ್ಮ ನಟತ್ವವನ್ನಾಗಲಿ, ಬೂಟಾಟಿಕೆಯನ್ನಾಗಲೀ ಕಂಡಕೂಡಲೆ ದೊಡ್ಡ ಮನುಷ್ಯರೆನ್ನದೆ, ವಿದ್ವಾಂಸರೆನ್ನದೆ, ಕೀರ್ತಿವಂತರೆನ್ನದೆ ಸಮಾಜಸನ್ನಿವೇಶವನ್ನು ಪರಿಗಣಿಸದೇ ಮಕ್ಕಳಂತೆ ಮೊನೆಯಿಲ್ಲದೇ ಗಹಗಹಿಸಿ ನಗೆದೂರಿ ಅಲ್ಲಿಂದ ಹೊರಟುಹೋಗುತ್ತಿದ್ದರು. ಅಕುಟಿಲವಾದ ದೈವಿಕ ಭಾವವನ್ನು ಸಂದರ್ಶಿಸಿದ್ದಾಗ ಕೈ ಮುಗಿದು ಮುಕ್ತಕಂಠದಿಂದ ಸ್ತುತಿಸಿ ಹಾಡಿ ಹೊಗಳುತ್ತಿದ್ದರು ಪ್ರಭುದೇವರು - ರಾಮಕೃಷ್ಣರು.

" ಆಸೆಗಾಗಿ ಸತ್ತವರು ಕೋಟಿ, ಆಮಿಷಕ್ಕಾಗಿ ಸತ್ತವರು ಕೋಟಿ, ಹೊನ್ನು ಹೆಣ್ಣು ಮಣ್ಣಿಗಾಗಿ ಸತ್ತವರು ಕೋಟಿ, ನಿನಗಾಗಿ ಸತ್ತವರು ಒಬ್ಬರನು ಕಾಣೆ " ಎನ್ನುತ್ತಾರೆ ಪ್ರಭುದೇವರು. ಇದಕ್ಕೆ ಅನುಗುಣವಾಗಿ " ಹೆಂಡತಿ ಮಕ್ಕಳಿಗಾಗಿ ಜನ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ " ಕಣ್ಣೀರಿನ ಸಾಗರದಲ್ಲೆ ತೇಲಾಡಿಬಿಡುತ್ತಾರೆ ಹಣಕ್ಕಾಗಿ. " ಆದರೆ ಭಗವಂತ ಬೇಕೆಂದು ಯಾರುತಾನೇ ಕಣ್ಣೀರಿಡುತ್ತಾರೆ ?" ಎನ್ನುತ್ತಾರೆ ರಾಮಕೃಷ್ಣರು. " ಹೊನ್ನುಮಾಯೆಯೆಂಬರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರಾ " ಎಂದು ಪ್ರಭುದೇವರು ಹೇಳಿದರೆ, ಶ್ರೀ ರಾಮಕೃಷ್ಣರು ಈ ಲೋಕವನ್ನು ಕುರಿತು ಹೇಳುವಾಗ ಮತ್ತೆ ಮತ್ತೆ ಬಳಸುವ ಮಾತೆಂದರೆ ' ಕಾಮಿನಿ-ಕಾಂಚನ ' ಮನುಷ್ಯ ಇವುಗಳ ಸೆಳೆತಕ್ಕೆ ವಶನಾಗಿ ದೈವತ್ವವನ್ನು ಮರೆಯುವದಕ್ಕೆ ' ಮಾಯೆ ' ಎಂದು ಹೇಳಲಾಗಿದೆ. ಈ ಕಾಮಿನಿ-ಕಾಂಚನಗಳು ಒಂದು ನೆಲೆಯಲ್ಲಿ ಮಾಯೆಯಂತೆ ತೋರಿದರೂ, ವಾಸ್ತವವಾಗಿ ಅವು ತಮಗೆ ತಾವೇ ಮಾಯೆಯಲ್ಲ. ಇದು ನನಗೆ ಸೇರಿದ್ದು, ಇದು ನನಗೆ ಸೇರಿದ್ದು ಎಂಬುದಾಗಿ ಈ ವಸ್ತುಗಳನ್ನು ಪ್ರೀತಿಸುವದಕ್ಕೆ ' ಮಾಯೆ ಎಂದು ಹೆಸರು ' ಎಂದು ರಾಮಕೃಷ್ಣರು ಹೇಳುವುದರ ಮೂಲಕ ಆ ವಸ್ತುಗಳ ಬಗ್ಗೆ ನಾವು ಇರಿಸಿಕೊಳ್ಳುವ ಆಸಕ್ತಿಯನ್ನೆ ಮಾಯೆ ಎಂದು ವ್ಯಾಖ್ಯಾನಿಸುತ್ತಾರೆ.

' ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ' ಎನ್ನುವಲ್ಲಿ 'ಕೊಟ್ಟ ಕುದುರೆ' ಎಂಬುದು ಪ್ರಭುದೇವರು ಹೇಳುವ ಸಂಸಾರವಾದರೆ, ' ಮೊದಲು ಕೈಗೆ ಎಣ್ಣೆ ಸವರಿಕೊಂಡು ಬಳಿಕ ಹಲಸಿನ ಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಳ್ಳುತ್ತದೆ. ಭಗವದ್ ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡ ಬಳಿಕ ಸಂಸಾರಿಕ ಕಾರ್ಯಗಳಲ್ಲಿ ಕೈ ಇಡಬೇಕು. ಸಂಸಾರದೊಳಗೇ ಇದ್ದುಕೊಂಡು ಸಾಧನೆ ಮಾಡುವವರು ಕೋಟೆಯೊಳಗೆ ನಿಂತು ಯುದ್ಧ ಮಾಡಿದ ಹಾಗೆ' ಎನ್ನುವ ಧೋರಣೆ ರಾಮಕೃಷ್ಣರದು.

ಸಾಧನೆ ಅನ್ನುವುದು ತನ್ನೊಳಗಿರುವ ದೈವತ್ವದ ವಿಧಾನ, ತನ್ನಲ್ಲಿ ದೈವತ್ವ ಇದೆ ಎಂದು ತಿಳಿದಿರುವುದು ಬೇರೆ, ಅದನ್ನು ಕುರಿತು ವಿಚಾರ ಮಾಡುವುದು ಬೇರೆ, ಅದನ್ನು ಸ್ವಯಂ ಅನುಭವಕ್ಕೆ ತಂದುಕೊಳ್ಳುವುದೇ ಬೇರೆ. ಆ ಪರತತ್ವ ' ನೆಲದ ಮರೆಯ ನಿಧಾನದಂತೆ ಅಂದರೆ ನೆಲದಲ್ಲಿ ಹೂತಿಟ್ಟಿರುವ ನಿಧಿಯಂತೆ' ಎಂದು ಪ್ರಭುದೇವರು ಹೇಳಿದರೆ, ' ನಿನ್ನ ಅಂತರ್ಯದಲ್ಲಿ ಚಿನ್ನದ ಗಟ್ಟಿ ಇದೆ, ನಿನಗೆ ಗೊತ್ತಾಗಿಲ್ಲ. ಇದರ ಮೇಲೆ ಮಣ್ಣು ಮುಚ್ಚಿಕೊಂಡಿದೆ' ಎಂದು ರಾಮಕೃಷ್ಣರು ಹೇಳುತ್ತಾರೆ. ಅನುಭವ ಯಾವ ಹೋಲಿಕೆಯ ಮೂಲಮಾನದಿಂದಲೂ ವರ್ಣಿಸಲು ಸಾಧ್ಯವಿಲ್ಲ ' ವಾರಿಕಲ್ಲು ಪುತ್ಥಳಿ ವಾರಿಧಿಯನ್ನಪ್ಪಿಕೊಂಡಂತಾಯಿತು' ಹಿಮದ ಬೊಂಬೆ, ಸಮುದ್ರವನ್ನು ಅಪ್ಪಿಕೊಂಡ ಹಾಗಾಯಿತು. ' ಉಪಮೆ ಉಪಮಿಸಲರಿಯದೆ ಉಪಮಾತೀತವೆನುತಿದ್ದಿತು' ಎಂದು ಅಲ್ಲಮಪ್ರಭುದೇವರು ಬಳಿಸಿದರೆ ' ಉಪ್ಪಿನ ಬೊಂಬೆಯೊಂದು ಸಮುದ್ರದ ಆಳ ಕಂಡುಹಿಡಿಯಲು ಹೋಯಿತು.... ಇಳಿಯೋದೇ ತಡ ಕರಗಿ ಹೋಯಿತು. ಸಮುದ್ರದ ಆಳ ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಉಳಿದುಕೊಂಡಿರೋರು ಯಾರು ?' ಎಂದು ಪ್ರಶ್ನಿಸಿದ್ದಾರೆ ರಾಮಕೃಷ್ಣರು.

ತನುವೆಂಬ ತೋಟದಲ್ಲಿ ಮನವೆಂಬ ಗುದ್ದಲಿಯಿಂದ ಜೀವಭಾವದ ಭ್ರಾಂತಿ ಬೇರನ್ನೆ ಅಗೆದು ಸಂಸಾರ ಹೆಂಟೆಯನ್ನೆಲ್ಲ ಒಡೆದು ಹಾಕಿ ಹದವಾದ ತನು ಭೂಮಿಯಲ್ಲಿ, ಬ್ರಹ್ಮ ಬೀಜ ಬಿತ್ತಿಕೊಂಡಿದ್ದನ್ನು ಪ್ರಭುದೇವರು ನಿರೂಪಿಸುತ್ತಾರೆ. ಕ್ಷಮಾ-ದಮಾ-ಶಾಂತಿಯನ್ನು, ಭಕ್ತಿ-ಜ್ಞಾನ-ವೈರಾಗ್ಯದ ಸತ್ಕ್ರಿಯಾ ಸದಾಚಾರ ಮಂಗಲ-ಮನದಲ್ಲಿ, ನೆಲೆಗೊಂಡ ಇಷ್ಟಲಿಂಗ ಅನುಸಂಧಾನದಿಂದ ಪ್ರಾಣಲಿಂಗ ಸಾಕ್ಷಾತ್ಕಾರ ಸಾಧನೆಯಲ್ಲಿ ನೆಲೆನಿಂತ ನಿಲುವನ್ನು ಎತ್ತಿ ತೋರಿಸುತ್ತಾರೆ. ಬ್ರಹ್ಮಕ್ಕೆ ನಿಮಿಷ ನಿಮಿಷಾರ್ಧದ ಬಿಡುವಿಲ್ಲದೇ ಹಾಸುವ ಬಾವಿಯ ರಾಟಾಳ. ಹೊರಗಿನ ಪಶುಗಳು ಒಳಸೇರಿ ಸಸಿಯನ್ನು ಕೆಡಿಸದಿರಲೆಂದು ಹಗಲಿರುಳು ಎಚ್ಚರಗೊಂಡ ಜೀವನ ಅಲ್ಲಮಪ್ರಭುವಿನದಾದರೆ, ' ಎಲ್ಲೆಲ್ಲಿಯೂ ಜಗನ್ಮಾತೆ ! ನೆಲವೂ ಆಕೆ. ಜಲವೂ ಆಕೆ. ದೇಹವೂ ಆಕೆ, ಮನಸ್ಸು ಆಕೆ, ಸುಖವೂ, ದುಃಖವೂ, ಅಜ್ಞಾನವೂ, ಜ್ಞಾನವೂ, ಮೃತವೂ, ಅಮೃತವೂ, ಎಲ್ಲವೂ ಆಕೆ, ನೋಡಿದರೆ ಆಕೆ, ಕೇಳಿದರೆ ಆಕೆ, ಆಲೋಚಿಸಿದರೆ ಆಕೆ, ಅನುಭವವೆಲ್ಲವೂ ಆಕೆ' ಎನ್ನುವ ಜೀವನ ರಾಮಕೃಷ್ಣ ಪರಮಹಂಸರದು.

" ಪೃಥ್ವಿಗೆ ಹುಟ್ಟಿದ ಶಿಲೆ. ಕಲ್ಲುಕುಟಕಂಗೆ ಹುಟ್ಟಿದ ಮೂರುತಿ ಮಂತ್ರಕ್ಕೆ ಲಿಂಗವಾಯಿತ್ತಲ್ಲಾ ? ಈ ಮೂವರಿಗೆ ಹುಟ್ಟಿದ ಮಗುವ ಲಿಂಗವೆಂದು ಕೈ ಮುಗಿವ ಅಚ್ಚವೃತಗೇಡಿಗಳನಾನೆಂಬೆ ಗುಹೇಶ್ವರಾ !" ದೇವರು ಶಿಲೆಯ ಲಿಂಗದಲ್ಲಿಲ್ಲ. ಆತ ಈ ದೇಹವೆಂಬ ದೇವಾಲಯದಲ್ಲಿದ್ದಾನೆ ಎಂಬುದು ಪ್ರಭುದೇವರ ನಿಲುವಾದರೆ, " ತಂದೆ ಮಗನಿಗೆ ತನ್ನ ಐಶ್ವರ್ಯವನ್ನು ಕೊಡುವುದು ಸ್ವಾಭಾವಿಕ. ನೀನು ಯಾವಾಗಲೂ ಈಶ್ವರನ ದಾನಗಳನ್ನೇ ಅತಿಶಯವೆಂದು ಹೊಗಳುತ್ತಿದ್ದರೆ ಎಂದಿಗೂ ಆತನೊಡನೆ ಸಲಿಗೆಯಿಂದಿರಲಾರೆ, ಎಂದಿಗೂ ಸಾಮೀಪ್ಯ ಪಡೆಯಲಾರೆ, ಅವನು ನಿನ್ನಿಂದ ದೂರವಾಗಿದ್ದಾನೆ ಎಂದು ಆಲೋಚಿಸಬೇಡ. ಅತಿ ನಿಕಟನಾಗಿದ್ದಾನೆ ಎಂದು ಚಿಂತಿಸು, ಆತನ ಕೃಪೆ ನಿನಗೆ ಆಗುತ್ತದೆ " ಎಂದು ರಾಮಕೃಷ್ಣರು ಹೇಳುತ್ತಾರೆ.

ಬ್ರಹ್ಮಾನುಭವದ ತುರೀಯಾವಸ್ಥೆ ವಾಸ್ತವವಾಗಿ ' ಅರೂಪ ' ಅಥವಾ ' ನಿರಾಕಾರ 'ವಾದದ್ದು. ಆದರೆ ಇದರಂತೆ ಆ ಬ್ರಹ್ಮ ' ಸಾಕಾರ 'ವೆಂಬುದೂ ಅಷ್ಟೇ ಸತ್ಯ. ವಾಸ್ತವವಾಗಿ ಸಾಕಾರ ನಿರಾಕಾರ ವಿರುದ್ಧ ಸ್ಥಿತಿಗಳು; ಈ ಎರಡು ಏಕಕಾಲಕ್ಕೆ ಸತ್ಯವಾಗಿರಲು ಸಾಧ್ಯವೇ ಎಂಬ ಶಂಕೆ ಅನೇಕ ಜಿಜ್ಞಾಸುಗಳಿಗೆ. " ಆಕಾರ ನಿರಾಕಾರವೆಂಬೆರಡೂ ಸ್ವರೂಪಂಗಳು; ಒಂದು ಆಹ್ವಾನ, ಒಂದು ವಿಸರ್ಜನ. ಒಂದು ವ್ಯಾಕುಳ, ಒಂದು ನಿರಾಕುಳ. ಉಭಯಕುಳರಹಿತ, ಗುಹೇಶ್ವರಾ ನಿಮ್ಮ ಶರಣ ನಿಶ್ಚಿಂತನು " ಎಂದು ಸಾಕಾರ-ನಿರಾಕಾರದ ಬಗ್ಗೆ ಪ್ರಭುದೇವರ ನಿಲುವಾದರೆ, " ಭಾವಿಸಿಕೋ ಪರಬ್ರಹ್ಮ ದಡವೇ ಇಲ್ಲದ ಸಚ್ಚಿದಾನಂದ ಸಾಗರ ಅಂತ. ಭಕ್ತಿಯ ಶೈತ್ಯದ ದೆಸೆಯಿಂದ ಅಲ್ಲಲ್ಲಿ ನೀರು ಗಡ್ಡೆ ಕಟ್ಟುತ್ತದೆ. ಹಿಮಗಡ್ಡೆಯಾಗುತ್ತದೆ. ಎಂದರೆ ಭಗವಂತ ತನ್ನ ಭಕ್ತರ ಸಲುವಾಗಿ ವ್ಯಕ್ತನಾಗಿ ಆಗಾಗ ಸಾಕಾರರೂಪ ಧರಿಸುತ್ತಾನೆ. ಜ್ಞಾನ ಸೂರ್ಯ ಉದಯಿಸಿದನೆಂದರೆ ಆ ಹಿಮಗಡ್ಡೆ ಕರಗಿ ಹೋಗುತ್ತದೆ. ಆಗ ಭಗವಂತ ಸಾಕಾರ ಅಂತ ಮನಸ್ಸಿಗೆ ಅನ್ನಿಸುವುದೇ ಇಲ್ಲ" ಎಂದು ಹೇಳಿ ಶ್ರೀ ರಾಮಕೃಷ್ಣರು, ಮುಂದುವರೆದು " ತಿಳಿದುಕೊ, ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೋ ಅದರಲ್ಲಿ ದೃಢ ಬುದ್ಧಿ ಇಡು " ಎಂದು ಹೇಳಿದ್ದಾರೆ. " ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು ಎಲ್ಲಿ ಚುಂಬಿಸಿದರೂ ಇನಿದಹುದು " ಎಂದು ಪ್ರಭುದೇವರು ಹೇಳಿದರೆ, " ಕಜ್ಜಾಯವನ್ನು ಉದ್ದುದ್ದವಾಗಿ ಕಡಿದು ತಿಂದರೂ ಸಿಹಿ, ಅಡ್ಡಡ್ಡವಾಗಿ ತಿಂದರೂ ಸಿಹಿ " ಎಂದು ರಾಮಕೃಷ್ಣರು ಹೇಳುತ್ತಾರೆ. ಅಂದರೆ ಸಾಕಾರ ನಿರಾಕಾರ ಕಲ್ಪನೆಗಳನ್ನು ಗಮನಿಸಿದರೆ ಪ್ರಭುದೇವರಿಗೂ ರಾಮಕೃಷ್ಣರಿಗೂ ಇರುವ ಸಾಮ್ಯ ತುಂಬ ಕುತೂಹಲಕಾರಿಯಾದುದು.

" ಅನ್ನವನಿಕ್ಕಿ ನನ್ನಿಯ ನುಡಿದು ಅರವಟ್ಟಿಗೆಯನ್ನಿಕ್ಕಿ ಕೆರೆಯ ಕಟ್ಟಿಸಿದರೆ, ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ ಶಿವನ ನಿಲುವು ಸಾಧ್ಯವಾಗದು. ಗುಹೇಶ್ವರನರಿಯದ ಶರಣಂಗೆ ಆವ ಫಲವೂ ಇಲ್ಲ" ಎಂದು ಪ್ರಭುದೇವರು ಹೇಳಿದರೆ, ಇದಕ್ಕೆ ಸಂವಾದಿಯಾಗಿ " ವೇದಶಾಸ್ತ್ರಾದಿ ಪಾಂಡಿತ್ಯದಿಂದ ಬ್ರಹ್ಮಜ್ಞಾನ ಹೇಗೆ ದೊರೆಯದೋ ಹಾಗೆಯೇ, ಲೋಕಕಲ್ಯಾಣದ ಹೆಸರಿನಲ್ಲಿ ಮಾಡುವ ನಿಷ್ಕಾಮವಲ್ಲದ

ದಾನ ಧರ್ಮಾದಿ ಪರೋಪಕಾರಗಳಿಂದ, ಪುಣ್ಯಸಂಪಾದನೆಗಾಗಿ ಅರ್ಥ ಕೀರ್ತಿ ಪ್ರತಿಷ್ಠೆಗಳಿಗಾಗಿ ಮಾಡುವ ಕರ್ಮಯೋಗದಿಂದ ಕೂಡಾ ಆ ಬ್ರಹ್ಮತ್ವ ಸಾಧ್ಯವಾಗುವುದಿಲ್ಲ" ಎಂದು ರಾಮಕೃಷ್ಣರು ಹೇಳುತ್ತಾರೆ.

ತನುವೆಂಬ ಏರಿಗೆ, ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲ ತುಂಬಿದ ಅಧ್ಯಾತ್ಮ ಸರೋವರದಲ್ಲಿ ತನ್ನಂತೆ ಎಲ್ಲರೂ ಈಜಾಡಬೇಕೆಂಬುದು ಪ್ರಭುದೇವರ ಹೆಬ್ಬಯಕೆಯಾಗಿತ್ತು. ಈ ಕಾರಣದಿಂದಾಗಿ ಪ್ರಭುದೇವ ಜನರ ಮನದ ಕೊಳೆಯನ್ನು ಹೋಗಲಾಡಿಸಲು ಮನಸ್ಸನ್ನು ಆವರಿಸಿದ ಮಾಯೆಯೆಂಬ ಭ್ರಾಂತಿಯನ್ನು ಹೊಡೆದೋಡಿಸಲು ಅಜ್ಞಾನದ ಪರಿಧಿಯನ್ನು ದಾಟಿಬರುವಂತೆ ಪ್ರಯತ್ನಿಸಲು ಪ್ರಭುದೇವ ನಾಡಿನುದ್ದಗಲಕ್ಕೂ ಸಂಚರಿಸಿ ಸಾಧು-ಸಜ್ಜನರ, ತತ್ವಸಾಧಕರ, ಅಧ್ಯಾತ್ಮಜೀವಿಗಳ ಶೋಧನೆಯಲ್ಲಿ ತೊಡಗಿ ತನ್ನ ಪರಿಸರದಲ್ಲಿ ಬಂದ ಅಬಾಲವೃದ್ಧರನ್ನು ಸ್ತ್ರೀ-ಪುರುಷರೆಂಬ ತಾರತಮ್ಯವಿಲ್ಲದೆ ತನ್ನ ಕೃಪಾದೃಷ್ಟಿಯಿಂದ ಕಾಣುವನು, ಅನುಗ್ರಹ ನೀಡುವನು, ಪಾವನಗೊಳಿಸುವನು. ಮುಕ್ತಾಯಕ್ಕನಿರಲಿ, ಮಹಾದೇವಿಯಿರಲಿ, ಅಕ್ಕನಾಗಮ್ಮನಿರಲಿ, ನೀಲಲೋಚನೆಯಿರಲಿ, ಅಣ್ಣ ಬಸವಣ್ಣನಿರಲಿ, ಚೆನ್ನಬಸವಣ್ಣನಿರಲಿ, ಸಿದ್ಧರಾಮನಿರಲಿ, ಗೋರಕ್ಷನಿರಲಿ, ಪಂಡಿತರಿರಲಿ, ಪಾಮರರಿರಲಿ, ಯಾರಿದ್ದರೂ ತನ್ನ ಯೋಗ ಚಕ್ಷುವಿನ ವಲಯದಲ್ಲಿ ಬಂದಿದ್ದವರ ಒಲವು ನಿಲುವುಗಳನ್ನು ಸರಿಯಾಗಿ ಕಂಡು ಅವರಿಗೆ ತಕ್ಕ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಪ್ರಭುವಿಗೆ ಅಳವಟ್ಟಿತ್ತು. ಹೀಗಾಗಿ ಅಲ್ಲಮಪ್ರಭು ಸರ್ವರಿಗೂ ಪೂಜ್ಯನಾಗಿ ಮೆರೆದರೆ, ಸರ್ವಧರ್ಮಗಳನ್ನು ಸಮಭಾವದಿಂದ ಕಾಣುವ, ಸರ್ವರನ್ನು ಸಮಚಿತ್ತದಿಂದ ಕಾಣುವ ರಾಮಕೃಷ್ಣರ ಹತ್ತಿರ ಶ್ರೀಮಂತ-ಬಡವ, ದೊಡ್ಡವ-ಸಣ್ಣವ, ಮೇಲು-ಕೀಳೆನ್ನದೇ ಅಧ್ಯಾತ್ಮದ ಅನುಸಂಧಾನಕ್ಕಾಗಿ ಅನೇಕ ಶಿಷ್ಯರು ಬಂದರು. ಅವರಲ್ಲಿ ಸ್ತ್ರೀಯರಿದ್ದರು, ಚೋಗಿನ್ ಮಾ, ಅಘೋರ ಮಣಿದೇವಿ, ಶ್ರೀಮಂತ ವ್ಯಕ್ತಿ ದೇವೇಂದ್ರನಾಥ ಠಾಕೂರ್, ಪ್ರತಾಪ್‌ಚಂದ್ರ, ಮಥುರಾನಾಥ ಮಾದಾರ, ವಿಜಯಕೃಷ್ಣ ಗೋಸ್ವಾಮಿ, ಪಂ. ಶಿವನಾಥ ಶಾಸ್ತ್ರಿ, ತ್ರೈಲೋಕ್ಯನಾಥ ಸಂನ್ಯಾಲ, ಮನಮೋಹನ, ಸ್ವಾಮಿ ಬ್ರಹ್ಮಾನಂದ, ಬಿಹಾರದ ಲಾಟು, ತಾರಕನಾಥ ಘೋಷಾಲ, ಯೋಗೇಂದ್ರನಾಥ ಚೌಧರಿ, ಶಶಿಭೂಷಣ, ಶರಚ್ಚಂದ್ರ ಚಕ್ರವರ್ತಿ ಇನ್ನೂ ಹಲವಾರು ವ್ಯಕ್ತಿಗಳು ಇವರಿಂದ ಪ್ರಭಾವಿತರಾದರು. ಇವರೆಲ್ಲರಲ್ಲಿಯೇ ಅತ್ಯಂತ ನೆಚ್ಚಿನ ಶಿಷ್ಯ ಸ್ವಾಮಿ ವಿವೇಕಾನಂದ. ಇವನೇ ಅವರ ಸಂದೇಶಗಳನ್ನು ಜಗತ್ತಿನಲ್ಲಿ ಸಾರಿ ಹೇಳಿದ ಧೀಮಂತ ವ್ಯಕ್ತಿ.

ಕಾಣಬಾರದ ಕಾಯ, ನೋಡಬಾರದ ತೇಜ, ಉಪಮಿಸಬಾರದ ನಿಲುವನು ಸಾಧಿಸಿದ ಅಲ್ಲಮಪ್ರಭುದೇವರು ಶ್ರೀಶೈಲ ಕದಳಿವನದಲ್ಲಿ ಲಿಂಗೈಕ್ಯರಾದರೆ, ಹತ್ತೊಂಭತ್ತನೆಯ ಶತಮಾನದ ಮಹಾಪುಣ್ಯಪುರುಷ ಕ್ರಿ. ಶ. ೧೮೮೬ ಆಗಸ್ಟ್ ೧೬ ನೇ ದಿನ ಸೋಮವಾರದಂದು ಮಹಾಸಮಾಧಿಯಲ್ಲಿ ಬ್ರಹ್ಮಲೀನವಾದರು.

ಜಗತ್ತಿನಲ್ಲಿ ತ್ಯಾಗಿಗಳನೇಕರು ಬಂದು ಸಾರಿದ್ದಾರೆ. ರಾಜ್ಯ ಪರಿತ್ಯಾಗ ಮಾಡಿದವರಿದ್ದಾರೆ. ಕಾಮಿನೀಕಾಂಚನ ತ್ಯಾಗ ಮಾಡಿದವರಿದ್ದಾರೆ. ಪತ್ನಿ, ಪುತ್ರ, ಬಂಧು ಮಿತ್ರರರನ್ನು ತ್ಯಾಗ ಮಾಡಿದವರಿದ್ದಾರೆ. ಐಹಿಕ ಭೋಗಗಳೆಲ್ಲವನ್ನು ತ್ಯಾಗ ಮಾಡಿದವರಿದ್ದಾರೆ. ಶರೀರ ಜೀವನಗಳನ್ನೇ ತ್ಯಾಗ ಮಾಡಿದವರಿದ್ದಾರೆ. ಆದರೆ ತ್ಯಾಗವನ್ನೇ ತ್ಯಾಗ ಮಾಡಲು ಸಿದ್ಧರಾಗಿದ್ದವರು ಯಾರಿದ್ದಾರೆ ? ನಿರಂತರ ಸಾಹಸದಿಂದ ಭಾವಸಾಧನೆಗಳಲ್ಲಿ ಸಿದ್ಧಿಹೊಂದಿ, ಮಂತ್ರಯೋಗಿಯಾಗಿ, ಹಠಯೋಗಿಯಾಗಿ, ಲಯಯೋಗಿಯಾಗಿ, ಕೊನೆಗೆ ಶಿವಯೋಗಿಯಾಗಿ, ಸನ್ಯಾಸಗ್ರಹಣಮಾಡಿ, ಸಿದ್ಧಿಪುರುಷರಾಗಿ, ನಿರ್ವಿಕಲ್ಪ ಸಮಾಧಿಸ್ಥರಾಗಿ, ಜಗತ್ತಿನ ಎಲ್ಲ ವಿದ್ಯೆಯನ್ನು ಸ್ವಾನುಭಾವದಿಂದ ಅರಿತವರಾಗಿ, ಕಾಮಿನಿ, ಕಾಂಚನ ಮೋಹವನ್ನು ಸಂಪೂರ್ಣವಾಗಿ ಜಯಸಿದವರಾಗಿ, ಉತ್ತಮೋತ್ತಮ ಆದರ್ಶ ಜೀವಿಗಳಾಗಿ, ಬಹು ಕಠೋರ ತಪಸ್ಸಿನಿಂದ ಉಪಾರ್ಜಿಸಿದ ಮಹಾತ್ಯಾಗವನ್ನೇ ತ್ಯಾಗ ಮಾಡಲು ಸಿದ್ಧರಾಗಿದ್ದ ಅಲ್ಲಮಪ್ರಭುದೇವರು ಶ್ರೀ ರಾಮಕೃಷ್ಣ ಪರಮಹಂಸರಂತಹ ದಿವ್ಯ ಜೀವನ ಜ್ಯೋತಿಗಳು ಯಾರಿದ್ದಾರೆ ? ಯಾರಿದ್ದಾರೆ ! ಯಾರೂ ಇಲ್ಲ.

■■

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಬಸವ ಪ್ರಜ್ಞೆ : ಸತ್ಯದ ನಿರಂತರ ಹುಡುಕಾಟ

• ಡಾ. ಎಸ್. ವಿದ್ಯಾಶಂಕರ

ಪ್ರಥಮಂತು ಬಸವಣ್ಣ ದ್ವಿತೀಯಂತು ಲಿಂಗವು
ತೃತೀಯಂತು ತತ್ತ್ವ ಬ್ರಹ್ಮಾಂಡವೆಲ್ಲ
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ
ಬಕುತನಾದೆನು ಗುರುವೆ ಯೋಗಿನಾಥ ॥

–ಸಿದ್ಧರಾಮ

ಸಿದ್ಧರಾಮನಿಗೆ ಬಸವಣ್ಣನು ಲಿಂಗಕ್ಕಿಂತಲೂ, ವೀರಶೈವತತ್ತ್ವಕ್ಕಿಂತಲೂ ಇಡೀ ಬ್ರಹ್ಮಾಂಡಕ್ಕಿಂತಲೂ ಮುಖ್ಯನಾಗುತ್ತಾನೆ, ಮೊದಲಿಗನಾಗುತ್ತಾನೆ. ಅವನು ಅನಾದಿ, ಶಿವನ ಕೃಪೆಗೆ ಮುಖ್ಯನಾದವನು, ಶಿವನ ಅಪರಾವತಾರ.

ಬಸವಣ್ಣನವರ ವ್ಯಕ್ತಿತ್ವ ಎಷ್ಟು ಗಾಢವಾಗಿತ್ತೆಂದರೆ, ಅವರನ್ನು ಸಿದ್ಧರಾಮನಂತಹ ಮಹಾನ್ ಶಿವಯೋಗಿ ' ಅಸಮಾಕ್ಷನ ಅವತಾರಮೂರುತಿ ' ಎಂದು ಕರೆದಿರುವನು. ಮಾನವ ಮಹಾದೇವನಾಗುವ ಒಂದು ಅದ್ಭುತವನ್ನು ನಾವಿಲ್ಲಿ ಕಾಣುತ್ತೇವೆ. ಬಸವಣ್ಣನವರು ಆ ಕಾಲದ ಉತ್ಸಾಹಮೂರ್ತಿ. ಶಿವಗಣಪ್ರಸಾದಿ ಮಹಾದೇವಯ್ಯ ಶತಮಾನದ ಚೈತನ್ಯದ ಚಿಲುಮೆಯಾದ ಬಸವಣ್ಣನವರ ವ್ಯಕ್ತಿತ್ವವನ್ನು ಸಾರ್ಥಕವಾದ ಮಾತುಗಳಲ್ಲಿ ಬಣ್ಣಿಸುವನು.

ಬಸವಣ್ಣನವರು ಬಿಜ್ಜಳನ ಮಹಾಮಂತ್ರಿ ದಂಡಾಧಿಪತಿಯಾಗಿ ೧೨ನೇ ಶತಮಾನದ ರಾಜಕೀಯ ವಾತಾವರಣದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರು. ಅರಸು ಬಿಜ್ಜಳನ ರಾಜ್ಯಾಡಳಿತದಲ್ಲಿ ತಮ್ಮ ಪ್ರಗತಿಪರ ನಿಲುವುಗಳ ಮೂಲಕ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದರು. ಅವರು ಆ ಕಾಲದ ಬಹುದೊಡ್ಡ ಸಮಾಜ ಸುಧಾರಕ. ಆಗ ತಾನೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಿದ್ದ ವೀರಶೈವ ಧರ್ಮಕ್ಕೆ ಒಂದು ಸೈದ್ಧಾಂತಿಕ ತಳಹದಿಯನ್ನು ರೂಪಿಸುವ ಮೂಲಕ ರಚನಾತ್ಮಕವಾಗಿ ಅದು ವ್ಯವಹರಣೆಗೊಳ್ಳುವಂತೆ ಮಾಡಿದ ಧಾರ್ಮಿಕ ನಾಯಕ. ಅನುಭವಗಳಿಂದ ಸಂಪನ್ನವಾದ ಒಂದು ಪ್ರಗತಿಪರ ಆರೋಗ್ಯವಂತ

ಮನಸ್ಸು ಒಂದು ವ್ಯವಸ್ಥಿತ ನೆಲೆಯಲ್ಲಿ ಪ್ರತಿಕ್ರಿಯಾತ್ಮಕವಾಗಿ ಕೆಲಸ ಮಾಡಿರುವುದರಿಂದ ಅವರೊಬ್ಬ ಸ್ವತಂತ್ರ ವಿಚಾರವಾದಿ. ಆರ್ಥೈರ್‌ಮೈಲ್ಸ್. ಬಸವಣ್ಣನವರನ್ನು ಭಾರತದ ಮೊಟ್ಟಮೊದಲನೆಯ ಸ್ವತಂತ್ರ ವಿಚಾರವಾದಿ ಎಂದು ಕರೆದಿರುವರು.

ಜನಪರವಾದ ತಮ್ಮ ವಿಚಾರಧಾರೆಗಳನ್ನು ಶ್ರೀಸಾಮಾನ್ಯರಿಗೆ ಮುಟ್ಟಿಸುವ ನೆಲೆಯಲ್ಲಿ ಬಸವಣ್ಣನವರು ಆರಿಸಿಕೊಂಡದ್ದು ಆಡುಭಾಷೆಯನ್ನು. ವೈದಿಕ ಪರಿಸರದಲ್ಲಿ ಬೆಳೆದ ಬಸವಣ್ಣನವರು ಸಂಸ್ಕೃತವನ್ನು ತಮ್ಮ ಆಲೋಚನೆಯ ಅಭಿವ್ಯಕ್ತಿಗೆ ಮಾಧ್ಯಮವಾಗಿ ಬಳಸದೆ ಆಡುಭಾಷೆಯನ್ನು ಬಳಸಿದ್ದು ಆ ಕಾಲದ ಮಹತ್ ಸಾಧನೆ.

ಹನ್ನೆರಡನೆಯ ಶತಮಾನದ ಸಮಾಜಧಾರ್ಮಿಕ ಚಳುವಳಿಯ ಪ್ರಧಾನ ಆಶಯ ಸ್ಥಗಿತ ಸ್ಥಿತಿಯಲ್ಲಿದ್ದ ಪರಿಸರವನ್ನು ಜಂಗಮಸ್ಥಿತಿಗೆ ಹೊರಳಿಸುವದಾಗಿದ್ದಿತು. ಆರ್ಥಿಕವಾಗಿ ಒಂದು ಸುಸಂಘಟಿತ ಸಮಾಜ ನಿರ್ಮಾಣದ ಕನಸು ಬಸವಣ್ಣನವರ ಮುಂದಿದ್ದಿತು. ಪರಂಪರೆ ಹುಟ್ಟುಹಾಕಿದ್ದ ಜಡತ್ವದ ಸಂಕೇತದಂತಿದ್ದ ಜನಮಾನಸವನ್ನು ಪರಿವರ್ತಿಸುವ ಒಂದು ದೊಡ್ಡ ಸವಾಲು ಅವರ ಮುಂದಿದ್ದಿತು. ಈ ಹಿನ್ನೆಲೆಯಲ್ಲಿ 'ಬಸವಪ್ರಜ್ಞೆ' ಎನ್ನುವುದು ಆ ಕಾಲದ ಸಮಾಜಧಾರ್ಮಿಕ ಚಳುವಳಿಯ ನಾಯಕನಾದ ಬಸವಣ್ಣನವರ ಸಮಷ್ಠಿರೂಪದ ಆಲೋಚನಾ ಕ್ರಮವಾಗಿದೆ. ಅದೊಂದು ಆರೋಗ್ಯವಂತ ಮನಸ್ಸಿನ ಜಾಗೃತಸ್ಥಿತಿ. ಆ ಆರೋಗ್ಯವಂತ ಮನಸ್ಸು ನಿರಂತರವಾಗಿ ನಡೆಸಿದ ಸತ್ಯದ ಹುಡುಕಾಟ. ಮಹಾತ್ಮ ಗಾಂಧೀಜಿ ಅವರು ತಮ್ಮ ಆತ್ಮ ಕಥೆಯಲ್ಲಿ 'ಈ ಸತ್ಯ ಬರೆಯ ವಾಕ್ ಸತ್ಯಮಾತ್ರವಲ್ಲ; ಇದುಸನಾತನಸತ್ಯ' ಅಂದರೆ 'ಪರಮಾತ್ಮ' ಎಂದಿರುವರು. ಗಾಂಧೀಜಿಗೆ ಸತ್ಯವೇ ದೇವರು. ಅವರು ಹೇಳುವರು : ನಾನು ದೇವರನ್ನು ಸತ್ಯವೆಂದೆ ಉಪಾಸನೆಮಾಡುತ್ತೇನೆ. ಆತ ನನಗೆ ಇನ್ನೂ ಸಿಕ್ಕಿಲ್ಲ. ಆದರೆ ಆತನನ್ನು ನಾನು ಹುಡುಕುತ್ತಿದ್ದೇನೆ. ಈ ಶೋಧನೆಯನ್ನು ಮುಂದುವರಿಸುವುದರಲ್ಲಿ ನನಗೆ ಅತ್ಯಂತ ಪ್ರೀಯವಾದ ಸಮಸ್ತ ವಸ್ತುಗಳನ್ನು ನಾನು ಬಲಿಕೊಡಲೂ ಸಿದ್ಧನಾಗಿದ್ದೇನೆ. ಆ ಬಲಿದಾನ ನನ್ನ ಪ್ರಾಣವೇ ಆದರೂ ಅದನ್ನು ಕೊಡುವ ಶಕ್ತಿ ಉಂಟಾದೀತೆಂದು ಆಶಿಸುತ್ತೇನೆ. ಆದರೆ ಆ ಪರಮಸತ್ಯದ ಸಾಕ್ಷಾತ್ಕಾರ ನನಗೆ ಆಗುವವರೆಗೆ ನಾನು ಅರಿತಿರುವ ಸಾಪೇಕ್ಷ ಸತ್ಯವನ್ನೇ ನಂಬಬೇಕು. ಅಲ್ಲಿಯವರೆಗೂ ಈ ಸಾಪೇಕ್ಷ ಸತ್ಯವೇ ನನಗೆ ದಾರಿದೀಪ, ಗುರಾನಿ ಮತ್ತು ವಜ್ರಕವಚ. ಈ ದಾರಿ ಕತ್ತಿಯ ಅಲಗಿನಂತೆ ಹರಿತವು ಇಕ್ಕಟ್ಟಾದುದು ನೇರವಾದುದು ಆಗಿದ್ದರೂ ನನಗೆ ಅದೇ ಅತ್ಯಂತ ಶೀಘ್ರವೂ ಸುಲಭವೂ ಆಗಿದೆ. ನಾನು ಈ ಮಾರ್ಗವನ್ನು ಚಾಚು ತಪ್ಪದೇ ಅನುಸರಿಸುತ್ತಿರುವುದರಿಂದ ನನ್ನ ಹಿಮಾಲಯದಂತ ತಪ್ಪುಗಳೂ ಸಹ ನನಗೆ ಅಲ್ಪವಾಗಿ ತೋರಿಬಂದಿದೆ. ಏಕೆಂದರೆ ಈ ದಾರಿ ನನ್ನನ್ನು ದುಃಖದಿಂದ ಪಾರು ಮಾಡಿದೆ. ನನಗೆ ತೋರಿದ ಬೆಳಕಿಗನುಗುಣವಾಗಿ ನಾನು ಮುಂದುವರೆದಿದ್ದೇನೆ. ಈ ಮಾರ್ಗಕ್ರಮದಲ್ಲಿ ಅನೇಕ ವೇಳೆ ಪರಮಾತ್ಮನೆಂಬ ಆ ಪರಮ ಸತ್ಯದ ಕಿರುನೋಟ ನನಗೆ ಲಭಿಸಿದೆ. ಅವನೊಬ್ಬನೇ ಶಾಶ್ವತ ಉಳಿದೆಲ್ಲ ಅಶಾಶ್ವತವೆಂಬ ನಂಬಿಕೆ ನನ್ನಲ್ಲಿ ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದೆ.

ಗಾಂಧೀಜಿಯವರ ಮೇಲಿನ ಹೇಳಿಕೆ ಬಸವಣ್ಣನವರ ಸಮಾಜಧಾರ್ಮಿಕ ಚಳವಳಿಯ ಹಿನ್ನೆಲೆಯಲ್ಲಿ ನನಗೆ ಬಹಳ ಮುಖ್ಯವೆನಿಸುತ್ತದೆ. ನನಗೆ ಬಸವಣ್ಣನವರು ಕಾಲದ ದೃಷ್ಟಿಯಿಂದ ಬಹಳ ದೂರದವರಾದ ಕಾರಣ ಅವರ ವ್ಯಕ್ತಿತ್ವವನ್ನು ಗ್ರಹಿಸಲು ಅವರೇ ಸ್ವತಃ ಬರೆದಿರುವ ವಚನಗಳಷ್ಟೆ ಗಾಂಧೀಜಿಯವರ ಆತ್ಮಕಥೆಯೂ ನನಗೆ ಮುಖ್ಯವಾಗುತ್ತದೆ. ಗಾಂಧೀಜಿಯವರನ್ನು ನಾನು ನೋಡಿಲ್ಲ. ಆದರೂ ಅವರ ಆತ್ಮಕಥೆ ಅವರನ್ನು ಗ್ರಹಿಸಲು ನನಗೆ ನೆರವಾಗುತ್ತದೆ. ಅವರ ಆತ್ಮಕಥೆಯನ್ನು ಓದುತ್ತಿರುವಾಗ ಬಸವಣ್ಣನವರು ನನಗೆ ಥಟ್ಟನೆ ನೆನಪಿಗೆ ಬರುವರು. ಇರ್ವರು ಸತ್ಯದ ಸಾಕ್ಷಾತ್ಕಾರಕ್ಕಾಗಿ ಸತತವಾಗಿ ಸಾಧನೆ ನಡೆಸಿದವರು; ಸತ್ಯ ಹಾಗೂ ದೇವರ ನಡುವೆ ವ್ಯತ್ಯಾಸಕಾಣದವರು. ಬಸವಣ್ಣನವರ ವಚನಗಳಲ್ಲಿನ ಭಕ್ತಸ್ಥಲದ ಅಂತರಂಗ ವಿಶ್ಲೇಷಣೆಯಲ್ಲಿ ಸತ್ಯದ ಶೋಧನೆಯ ವಿವರಗಳು ಎಳೆ ಎಳೆಯಾಗಿ ನಮ್ಮ ಕಣ್ಣು ಮುಂದೆ ಹಾದು ಹೋಗುತ್ತವೆ. ಬಸವಣ್ಣನವರು ತಮ್ಮ ಸತ್ಯದ ಶೋಧನೆಯಲ್ಲಿ ಕೂಡಲಸಂಗಮ ದೇವನನ್ನು ಸಾಕ್ಷಿಪ್ರಜ್ಞೆಯಾಗಿ ಸ್ವೀಕರಿಸಿರುವರು. ಇದು ಎಂತಹದ್ದೆಂದರೆ, ಶಿವನೇ ಗತಿಮತಿ ಎಂದು ಗಟ್ಟಿಯಾಗಿ ನಂಬುವುದು; ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು; ನೀನಿಲ್ಲದೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವ, ಹಾಲಲ್ಲದ್ದು ನೀರಲ್ಲದ್ದು; ಎನ್ನ ಆಪತ್ತು ಸುಖದುಃಖ ನೀವೆಕಂಡಯ್ಯ; ಮತ್ತಾರು ಇಲ್ಲ, ಹರಹರ ನೀವೇ ಕಂಡಯ್ಯ, ಎನ್ನ ಮಾತಾಪಿತನು ನೀವೆ ಕಂಡಯ್ಯ ಕೂಡಲಸಂಗಮದೇವ; ಎಂದು ಸಂಪೂರ್ಣವಾಗಿ ತಮ್ಮನ್ನು ಒಪ್ಪಿಸಿಕೊಳ್ಳುವುದು ಈ ಸಂಪೂರ್ಣ ಶರಣ್ಯ ಭಾವದಲ್ಲಿ ಜೀವಕ್ಕೆ ಒಂದು ಗಟ್ಟಿಯಾದ ನಂಬುಗೆ. "ತೊತ್ತಿಂಗೆ ಬಲ್ಲಹನೊಲಿದೊಡೆ ಪದವಿಯ ಮಾಡದೆ ಮಾಣ್ಬನೆ? ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದಡೆ ತನ್ನತ್ತಮಾಡುವ ಕೂಡಲಸಂಗಮದೇವ" ಎನ್ನುವ ಅಚಲವಾದ ವಿಶ್ವಾಸ ಬಸವಣ್ಣನವರದು. ಸತ್ಯದ ಶೋಧನೆಗೆ ಸದಾಚಾರ ಸದ್‌ಭಕ್ತಿಗಳನ್ನು ಆಧಾರವಾಗಿ ಬಳಸುವರು. 'ಶಿವಚಿಂತೆ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ ಆಚಾರ-ಶಿವಾಚಾರ ತಮತಮಗೆ ಸೂರೆಯೆ?' ಎಂದು ಅವರು ಪ್ರಶ್ನಿಸುವರು. ಶಿವಾಚಾರವು ಭಕ್ತನ ದೈನಂದಿನ ಬದುಕಿನಲ್ಲಿ ಒರೆಗೆ ಹಚ್ಚುವ ಅಸ್ತ್ರ. ಆದ್ದರಿಂದಲೇ ಬಸವಣ್ಣನವರು 'ಶಿವಾಚಾರವೆಂಬುದು ಬಾಳ ಬಾಯಧಾರೆ' ಎಂದು ಕರೆದುದು. ಭಕ್ತನಲ್ಲಿ ಅಂತರಂಗದ ಮೃದುತ್ವವನ್ನು ಅಪೇಕ್ಷಿಸುವ ಬಸವಣ್ಣನವರು ಭಕ್ತನ ಕಾಯವನ್ನು ಬಾಳೆಯ ಕಂಬಕ್ಕೆ ಹೋಲಿಸುವರು. ಮೆಲ್ಲ ಮೆಲ್ಲನೆ ಬಾಳೆಯಕಂಬದ ಮೇಲ್ಮೈಯನ್ನು ಒಂದೊಂದಿಗೆ ತೆಗೆಯುತ್ತ ಹೋದರೆ ಕೊನೆಯಲ್ಲಿ ಸಿಗುವ ತಿರುಳಿನ ಮೃದುತ್ವದ ಅನುಭವವಾಗುತ್ತದೆ. ಇದು ಪ್ರತಿಮೆಯಾಗಿ ಒಂದು ಹೊಸ ಅರ್ಥಲೋಕವನ್ನೇ ನಮ್ಮ ಕಣ್ಣಮುಂದೆ ತೆರೆಯುತ್ತದೆ.

ಬಸವಣ್ಣನವರ ವಚನಗಳನ್ನು ಓದುತ್ತಿದ್ದಂತೆ ಬಸವಪ್ರಜ್ಞೆಯು ವ್ಯಕ್ತಿಕೇಂದ್ರಿತ ನೆಲೆಯಿಂದ ಸಮಾಜಕೇಂದ್ರಿತ ನೆಲೆಗೆ, ಸಮಾಜಕೇಂದ್ರಿತ ನೆಲೆಯಿಂದ ವಿಶ್ವಮಾನವತೆಯ ನೆಲೆಗೆ, 'ವಿಶ್ವಮಾನವ ನೆಲೆಯಿಂದ ದಿವ್ಯತ್ವದ ಅನುಭೂತಿಯ ನೆಲೆಗೆ ವಿಸ್ತರಿಸುತ್ತ ಹೋಗುವುದನ್ನು ನಾವು ಕಾಣಬಹುದು.

ಅಂತರಂಗದ ಪರಿವೀಕ್ಷಣೆಯಲ್ಲಿ ವ್ಯಕ್ತಿಕೇಂದ್ರಿತ ನೆಲೆಯಾಗುವನು. ಆತ್ಮರತಿ ಬಸವಣ್ಣನವರಲ್ಲಿ ಎಳ್ಳಷ್ಟು ಕಾಣದು. 'ಅಡ್ಡದೊಡ್ಡ ನಾನಲ್ಲಯ್ಯ ! ದೊಡ್ಡ ಬಸುರ ಎನಗಿಲ್ಲಯ್ಯ ಹಡೆದುಂಬಸೂಳೆಯಂತೆ ಧನವುಳ್ಳವರನ್ನರಸಿ ಅರಸಿ ಬೋಧಿಸಲು, ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯ. ದೊಡ್ಡತನವೆನಗಿಲ್ಲವೆಂದು ಆತ್ಮವಿಮರ್ಶೆ ಮಾಡಿಕೊಳ್ಳುವುದು 'ಎನ್ನ ಬಚ್ಚಬರಿಯ ಬಸವನೆಂದನಯ್ಯ?' 'ಬಾಗಿದ ತಲೆ ಮುಗಿದ ಕಯ್ಯಾಗಿರಿಸು' ಎಂದು ತಮ್ಮ ಇಷ್ಟದೈವದಲ್ಲಿ ಪ್ರಾರ್ಥಿಸುವುದು ಸಾಮಾಜಿಕ ನೆಲೆಯಲ್ಲಿ ದೃಷ್ಟಿ ಪ್ರಧಾನವಾಗದೆ ಸಮಷ್ಟಿ ಪ್ರಧಾನವಾಗಬೇಕು. ಈ ಘಟ್ಟದಲ್ಲಿ ವ್ಯಕ್ತಿ ಪ್ರತಿಷ್ಠೆ ಮುಖ್ಯವಾಗಬಾರದು. ಸಂಘಟನೆ ಕ್ರಿಯಾತ್ಮಕವಾಗಿ ಸಾಗಬೇಕಾದಾಗ ಅಲ್ಲಿ ದುಷ್ಟರು ಸಂಭಾವಿತರು ಕೂಡಿಯೇ ಎದುರಾಗುವರು. ಅಂತ ಸಂದರ್ಭದಲ್ಲಿ ನಾಯಕನಾದವನಿಗೆ ಸ್ವಂತ ನಿಲುವೆಂಬುದಿರಬಾರದು. ಬಸವಣ್ಣನವರು 'ಅವರಂತರಂಗವ ನೀವೇ ಬಲ್ಲಿರಿ', ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ಎನಗೇಕಯ್ಯ ? 'ಆರಾರಮನದಲ್ಲಿ ಎನೇನಿಹುದೊಂದರಿಯೆ. ಒಳ್ಳಿಹರೆಂದೆನಲಮ್ಮೆ, ಹೊಲ್ಲಹರೆಂದೆನಲಮ್ಮೆ' ಎಂದು ತಾಟಸ್ಥಧೋರಣೆ ತಾಳುವರು. ಸಂಘಟನೆಯಲ್ಲಿ ನಾಯಕನಿಗೆ ಇರಬೇಕಾದ ತಾಳ್ಮೆಯಗುಣ ಈ ಬಗೆಯದು. 'ಆತ್ಮ ಸ್ತುತಿ ಪರನಿಂದೆಯ ಕೇಳಿಸದಿರಯ್ಯಾ ನಿಮ್ಮಧರ್ಮ' ಎಂದು ತಮ್ಮ ಇಷ್ಟದೈವನಲ್ಲಿ ಬಸವಣ್ಣನವರು ವಿನಂತಿಸುವರು.

ಸ್ವತಃ ಬ್ರಾಹ್ಮಣರಾಗಿದ್ದ ಬಸವಣ್ಣನವರು ಯಜ್ಞೋಪವೀತವನ್ನು ಧರಿಸಲು ನಿರಾಕರಿಸಿದುದು ಆ ಕಾಲಕ್ಕೆ ಕ್ರಾಂತಿಕಾರಿ ಧೋರಣೆ, ಗಾಂಧೀಜಿಯವರ ಬದುಕಿನಲ್ಲಿಯೂ ಇಂಥ ಘಟನೆಯೊಂದು ಬರುತ್ತದೆ. ಗಾಂಧೀಜಿ ಹೇಳುವರು : "ಜನಿವಾರವನ್ನು ಧರಿಸಲು ಶೂದ್ರರಿಗೆ ಅಧಿಕಾರವಿಲ್ಲದ ಮೇಲೆ ಅದನ್ನು ಧರಿಸಲು ಇತರ ವರ್ಣಗಳವರಿಗೆ ಯಾವ ಅಧಿಕಾರವಿದೆ ? ಇದು ಅನವಶ್ಯಕವಾದ ಪದ್ಧತಿಯಾಗಿ ತೋರಿದುದರಿಂದ ಅದನ್ನು ಅಂಗೀಕರಿಸಲು ನನಗೆ ಸರಿಯಾದ ಕಾರಣಗಳು ತೋರಲಿಲ್ಲ". ಅವರು ಇದನ್ನು ಇನ್ನಷ್ಟು ಸ್ಪಷ್ಟವಾದ ಮಾತುಗಳಲ್ಲಿ ಹೀಗೆ ವಿವರಿಸುವರು : "ನಾನು ಜನಿವಾರವನ್ನು ಧರಿಸುವುದಿಲ್ಲ. ನನಗೆ ಅದರ ಅವಶ್ಯಕತೆ ತೋರುವುದಿಲ್ಲ. ಅಸಂಖ್ಯಾತ ಹಿಂದೂಗಳು ಜನಿವಾರವಿಲ್ಲದೆ ಇದ್ದಾರೆ. ಆದರೂ ಹಿಂದೂಗಳಾಗಿಯೇ ಇದ್ದಾರೆ. ಜನಿವಾರ ಆತ್ಮ ಪುನರುದ್ಧಾರದ ಒಂದು ಸಂಕೇತವಾಗಿರಬೇಕು. ಅದನ್ನು ಧರಿಸುವವನು ಹೆಚ್ಚು ಉನ್ನತವಾದ. ಹೆಚ್ಚು ಪರಿಶುದ್ಧವಾದ ಜೀವನದ ಕಡೆಗೆ ಉದ್ದೇಶಪೂರ್ವಕವಾಗಿ ಪ್ರಯತ್ನ ಪಡಬೇಕು. ಹಿಂದೂಧರ್ಮದ, ಭಾರತದ ಇಂದಿನ ಸ್ಥಿತಿಯಲ್ಲಿ ಇಂತಹ ಅರ್ಥದ ಒಂದು ಸಂಕೇತವನ್ನು ಧರಿಸುವ ಅಧಿಕಾರವನ್ನು ಹಿಂದೂಗಳು ಸಮರ್ಥಿಸಿಕೊಳ್ಳಬಲ್ಲರೆ ? ಎಂಬುದು ನನಗೆ ಸಂಶಯವಾಗಿದೆ. ಹಿಂದೂಧರ್ಮ ಅಸ್ಪೃಶ್ಯತೆಯನ್ನು ತನ್ನಿಂದ ತೊಡೆದು ಹಾಕಬೇಕು. ಮೇಲುಕೀಳು ಎಂಬ ಭೇದಭಾವಗಳನ್ನೆಲ್ಲ ತೊಲಗಿಸಬೇಕು. ತನ್ನಲ್ಲಿ ವಿಪುಲವಾಗಿ ಬೆಳೆದಿರುವ ಇತರ ಅನೇಕ ದೋಷಗಳಿಂದಲೂ. ಬೂಟಾಟಿಕೆಗಳಿಂದಲೂ ಬಿಡುಗಡೆಯಾಗಬೇಕು. ಆಗ ಮಾತ್ರ

ಹಿಂದೂಗಳಿಗೆ ಜನಿವಾರವನ್ನು ಧರಿಸುವ ಹಕ್ಕು ಬರುತ್ತದೆ. ಆದುದರಿಂದ ಜನಿವಾರವನ್ನು ಧರಿಸಲು ನನ್ನ ಮನಸ್ಸು ನಿರಾಕರಿಸುತ್ತದೆ ". ಗಾಂಧೀಜಿ ವೈಷ್ಣವರು, ಬಸವಣ್ಣನವರು ಹುಟ್ಟಿನಲ್ಲಿ ಬ್ರಾಹ್ಮಣ. ಪುರೋಹಿತಶಾಹಿ ಪ್ರವೃತ್ತಿಯನ್ನು ಬಸವಣ್ಣನವರು ಎಂಟುನೂರು ವರ್ಷಗಳ ಹಿಂದೆಯೇ ಕಟುವಾಗಿ ಟೀಕಿಸಿ ಜನಿವಾರ ಧರಿಸುವ ಬ್ರಾಹ್ಮಣನ ಹಕ್ಕನ್ನು ತಿರಸ್ಕರಿಸಿದರು. ವರ್ಣ, ವರ್ಗ, ಜಾತಿಗಳಿಂದ ಮುಕ್ತವಾದ ಹೊಸ ಸಮಾಜವನ್ನು ಕಟ್ಟಹೊರಟ ಬಸವಣ್ಣನವರಿಗೆ ಯಜ್ಞೋಪವೀತ ಪುರೋಹಿತಶಾಹಿಯ ಸಂಕೇತವಾಗಿ ಕಂಡುಬಂದಿತು. ಬಸವಣ್ಣನವರ ಯಜ್ಞೋಪವೀತ ನಿರಾಕರಣೆಯ ಹಿನ್ನೆಲೆ ನನಗೆ ಇನ್ನಷ್ಟು ಸ್ಪಷ್ಟವಾದುದು ಗಾಂಧೀಜಿಯವರು ಯಜ್ಞೋಪವೀತ ನಿರಾಕರಣೆಯ ಸಂದರ್ಭದಲ್ಲಿ ತೆಗೆದುಕೊಂಡ ನಿರ್ಧಾರದಲ್ಲಿ. ಅರ್ಥವಿಹೀನ ಆಚಾರ-ವಿಚಾರಗಳ ವಿರುದ್ಧ ಬಂಡೆದ್ದ ಬಸವಣ್ಣನವರು ಬ್ರಾಹ್ಮಣ್ಯವನ್ನು ನಿರಾಕರಿಸಿ ಇಷ್ಟಲಿಂಗಧಾರಣೆಯ ಮೂಲಕ ವರ್ಣದ ಕಟ್ಟಳೆಯನ್ನು ಮೀರಿ ನಿಂತರು.

ಸಾಮಾಜಿಕ ಉತ್ಕರ್ಷಕ್ಕೆ ವರ್ಣ-ವರ್ಗ ವ್ಯವಸ್ಥೆಗಳು, ಜಾತಿ ಪದ್ಧತಿಗಳು ಅಡ್ಡಿಯಾದಾಗ ಅವನ್ನು ಬಸವಣ್ಣನವರು ಬಹಿಷ್ಕರಿಸಿದರು. ಕೆಳಸ್ತರದವರ ಉದ್ಧಾರವಾಗದೆ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲವೆಂಬುದನ್ನು ಕಂಡುಕೊಂಡ ಬಸವಣ್ಣನವರು ಅಂತ್ಯೋದಯವನ್ನು ತಮ್ಮ ಸಾಮಾಜಿಕ ಬದಲಾವಣೆಯ ಪ್ರಧಾನ ನೆಲೆಗೆ (Main stream) ತಂದರು. ಉತ್ತಮ ಕುಲದಲ್ಲಿ ತಾವು ಹುಟ್ಟಿದವರೆಂಬ ಕಷ್ಟದ ಹೊರೆಯನ್ನು ಪರಿಹರಿಸಿಕೊಳ್ಳಲು ' ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು. ಬಾಣನವ ನಾನು, ಮಯೂರನವ ನಾನು, ಕಾಳಿದಾಸನವ ನಾನು, ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚನ್ನಯ್ಯ ಎತ್ತಿ ಮುದ್ದಾಡಿಸಿದರೆನ್ನ' ಎಂದು ಸಾಮಾಜಿಕವಾಗಿ ಬಹಿಷ್ಕೃತರಾದವರ ಜೊತೆ ತಮ್ಮನ್ನು ಗುರುತಿಸಿಕೊಳ್ಳಹೊರಡುವರು. ಈ ಗುರುತಿಸಿಕೊಳ್ಳುವ ಕ್ರಿಯೆ ಯಾವ ಮಟ್ಟಕ್ಕೆ ಹೋಯಿತೆಂದರೆ–

> ಚನ್ನಯ್ಯನ ಮನೆಯ ದಾಸನ ಮಗನು,
> ಕಕ್ಕಯ್ಯನ ಮನೆಯ ದಾಸಿಯ ಮಗಳು,
> ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು
> ಇವರಿಬ್ಬರಿಗೆ ಹುಟ್ಟಿದ ಮಗ ನಾನು,
> ಕೂಡಲಸಂಗಮದೇವ ಸಾಕ್ಷಿಯಾಗಿ

ಹೀಗೆ ಇಷ್ಟು ಹೀನಾಯವಾಗಿ ತಮ್ಮ ಜನನದ ಅಪವಿತ್ರೀಕರಣವನ್ನು ಕೂಡಲಸಂಗಮದೇವನನ್ನು ಸಾಕ್ಷಿಯಾಗಿಟ್ಟುಕೊಂಡು ಹೇಳಿಕೊಳ್ಳುವರು. ಈ ರೀತಿಯ ಸ್ವಯಂ ವ್ಯಕ್ತಿತ್ವದ ಹನನ ತಮ್ಮನ್ನು ಚನ್ನಯ್ಯ, ಕಕ್ಕಯ್ಯ ಮೊದಲಾದವರು ವಿಶ್ವಾಸಕ್ಕೆ ತೆಗೆದುಕೊಳ್ಳಲಿ ಎಂಬುದೇ ಆಗಿದೆ. ಸಾಮಾಜಿಕ ಬದಲಾವಣೆಯ ಮುಖ್ಯಭಾಗವಾಗಿ ಅಂತ್ಯೋದಯ ಕಾರ್ಯಕ್ರಮವನ್ನು ಹಮ್ಮಿಕೊಂಡಾಗ ಮಂತ್ರಿ ದಂಡಾಧಿಕಾರಿಯಾಗಿರುವ, ಉಚ್ಚವರ್ಣಿಯರಾದ ತಮ್ಮನ್ನು ಈ ಜನ ನಂಬುವಂತಾಗಿ ಸಂಘಟನೆಯಲ್ಲಿ ಅವರೂ ಸಕ್ರಿಯವಾಗಿ ಪಾಲುಗೊಳ್ಳಲಿ ಎಂಬುದೇ ಆಗಿದೆ.

ಬಹುದೊಡ್ಡ ಮಾನವತಾವಾದಿಯಾದ ಬಸವಣ್ಣನವರು ಪುರಾಣಪುರುಷರು ಹುಟ್ಟಿನಲ್ಲಿ ಕೀಳಾಗಿದ್ದರೂ ಗುಣದಲ್ಲಿ, ಜ್ಞಾನದಲ್ಲಿ ಮೇಲಾಗಿರುವುದನ್ನು ನಿದರ್ಶನಗಳೊಂದಿಗೆ ವಿವರಿಸಿ, ಸಮರ್ಥಿಸಿ 'ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂ ಭೋ!' ಎಂದು ಸಾರುವರು. ಬಸವಣ್ಣನವರು ತಮ್ಮ ವಚನವೊಂದರಲ್ಲಿ ಯಾರು ಬೇಕಾದರೂ ಉತ್ತಮಕುಲದವನಾಗಬಹುದು, ಜ್ಞಾನಿಯಾಗಬಹುದೆನ್ನುವ ಮಹೋನ್ನತ ತತ್ವವನ್ನು ಸಾರಿರುವರು :

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
ಜಲ-ಬಿಂದುವಿನ ವ್ಯವಹಾರ ಒಂದೇ
ಆಸೆಯಾಮಿಷ ರೋಷಹರುಷ ವಿಷಯಾದಿಗಳೆಲ್ಲಾ ಒಂದೆ
ಏನನೋದಿ ಏನಕೇಳಿ ಏನು ಫಲ ?
ಕುಲಜನೆಂಬುದಕ್ಕೆ ಆವುದು ದೃಷ್ಟ ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ

ಎಂಬುದಾಗಿ,

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ ಕೂಡಲಸಂಗಮದೇವಾ
ಲಿಂಗಸ್ಥಲವನಱಿದವನೆ ಕುಲಜನು

ಬಸವಣ್ಣನವರ ಮನಸ್ಸು ಎಷ್ಟು ವಿಶಾಲವಾದುದು, ವೈಚಾರಿಕವಾದುದು ಎಂಬುದಕ್ಕೆ ಈ ವಚನ ನಿದರ್ಶನ. ವಚನದ ಕೊನೆಯ ಭಾಗದಲ್ಲಿ ವೃತ್ತಿಯಿಂದ ಜಾತಿಯಾಯಿತೇ ಹೊರತು, ಜಾತಿಯಿಂದ ವೃತ್ತಿಯಾಗಲಿಲ್ಲ. ಮನುಷ್ಯ ಮನುಷ್ಯರನ್ನು ವಿಂಗಡಿಸುವ ಜಾತಿಯು ಮನುಷ್ಯನ ಸೃಷ್ಟಿ, ದೈವಸೃಷ್ಟಿಯಲ್ಲ ಎಂಬ ದೊಡ್ಡ ಆದರ್ಶವನ್ನು ಅವರು ಮುಂದಿಟ್ಟಿರುವರು. ಉತ್ತಮರು ಕಿವಿಯಿಂದ ಜನಿಸಿದರು ಎಂಬ ಪೌರಾಣಿಕ ನಿಲುವನ್ನು ಬಸವಣ್ಣನವರು ವ್ಯಂಗ್ಯದ ನೆಲೆಯಲ್ಲಿ 'ಕರ್ಣದಲ್ಲಿ ಜನಿಸಿದವರುಂಟೆ; ಜಗದೊಳಗೆ ?' ಎಂದು ಲೇವಡಿ ಮಾಡಿರುವರು. ಮನೆಗೆ ಬಂದವರ ಜಾತಿಯನ್ನು ನೇರವಾಗಿ ಕೇಳದೆ ಅಪರೋಕ್ಷವಾಗಿ ಕಾಯಕ ಯಾವುದು ? ಎಂದು ಕೇಳುವ ಪದ್ದತಿ ಅಂದೂ ಇದ್ದಿತು. ಬಸವಣ್ಣನವರು 'ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ, ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ ನಿಮ್ಮ ರಾಣಿವಾಸದಾಣೆ!'' ಎಂದು ಪ್ರಮಾಣ ಮಾಡುವರು. 'ಕೊಲುವವನೇ ಮಾದಿಗ

ಹೊಲಸು ತಿಂಬವನೇ ಹೊಲೆಯ, ಕುಲವೇನೂ ಆವಂದಿರ ಕುಲವೇನೂ ? ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು !' ಎನ್ನುವಲ್ಲಿ ಬಸವಣ್ಣನವರ ಮಾನವತಾವಾದಿತ್ವ ಮೇರುಸದೃಶವಾಗಿ ಬಿಡುತ್ತದೆ. ಬಸವಣ್ಣನವರ ಮಾನವೀಯತೆಯು ತನ್ನ ಇನ್ನೊಂದು ಮಜಲನ್ನು ಮುಟ್ಟುವುದು ಲಿಂಗಭೇದದ ನಿರಾಕರಣೆಯಲ್ಲಿ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಗೃಹದ ನಾಲ್ಕು ಗೋಡೆಗಳಿಂದ ಹೊರಗೆ ಕರೆತಂದುದು; ವಂಚಿತವಾಗಿದ್ದ ಜ್ಞಾನ ಹಾಗೂ ದೀಕ್ಷೆಯ ಹಕ್ಕನ್ನು ಆಕೆಗೆ ಮರಳಿ ದೊರಕಿಸಿಕೊಟ್ಟದ್ದು; ವೈಚಾರಿಕವಾಗಿ ಚಿಂತಿಸುವಂತೆ, ತನ್ನ ಆಲೋಚನೆಗಳನ್ನು ವಚನರೂಪದಲ್ಲಿ ಅಭಿವ್ಯಕ್ತಿಸುವಂತೆ ಮಾಡಿದ್ದು ಒಂದು ದೊಡ್ಡ ಬದಲಾವಣೆ. ಬಸವಣ್ಣನವರು ವರ್ಗಪ್ರತಿಷ್ಠೆಗೆ ಪರ್ಯಾಯ ಪರಿಹಾರವಾಗಿ ಕಾಯಕತತ್ವವನ್ನು ಬಳಕೆಗೆ ತಂದುದು; ಆರ್ಥಿಕ ಸಮತೋಲನವನ್ನು ದಾಸೋಹತತ್ವದಲ್ಲಿ ಕ್ರೋಢೀಕರಿಸಿದುದು; ಅಭಿಪ್ರಾಯ ಸ್ವಾತಂತ್ರ್ಯ ಹಾಗೂ ಸಾಹಿತ್ಯಾಭಿವ್ಯಕ್ತಿಗೆ ಲಿಂಗಭೇದ ವರ್ಣಭೇದಗಳನ್ನು ಪರಿಗಣಿಸದೆ ಮುಕ್ತವಾತಾವರಣವನ್ನು ಕಲ್ಪಿಸಿದುದು; ಅಧ್ಯಾತ್ಮ ಮೇಲ್ವರ್ಗದವರಿಗೆ ಮೀಸಲಾಗಿದ್ದುದನ್ನು ತಪ್ಪಿಸಿ ಸಾರ್ವತ್ರೀಕರಣಗೊಳಿಸಿದುದು ಬಸವಣ್ಣನವರ ಸಮಾಜೋಧಾರ್ಮಿಕ ಚಳುವಳಿಯ ಸಾಫಲ್ಯದ ನೆಲೆಗಳಾಗಿವೆ.

ಜೀವ ದೇವನಾಗುವ ಸಾಧ್ಯತೆಯನ್ನು ಬಸವಾದಿ ಶರಣರು ಷಟ್‌ಸ್ಥಲ ಪರಿಕಲ್ಪನೆಯಲ್ಲಿ ತೋರಿಸಿಕೊಟ್ಟರು. ಬಸವಣ್ಣನವರು ಬಹಿರಂಗ ಶುದ್ಧಿಯ ಜೊತೆಗೆ ಅಂತರಂಗ ಶುದ್ಧಿಯನ್ನು ರೂಢಿಸಿಕೊಳ್ಳುವ ಮೂಲಕ ದೇಹವೇ ದೇವಾಲಯವಾಗಬಹುದೆನ್ನುವ ಪರಿಕಲ್ಪನೆಯನ್ನು ಜನತೆಯ ಮುಂದಿಟ್ಟರು. ದೇವಜೀವನೆನ್ನುವ ದ್ವೈತ ಭಾವದಿಂದ ದೇವಜೀವರು ಒಂದಾಗುವ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಬಸವಣ್ಣನವರು, ಪ್ರಾಯೋಗಿಕವಾಗಿ ಸಾಧಕನು ಹಂತಹಂತವಾಗಿ ಮೇಲೇರಿ ದೇವನೇ ಆಗಬಹುದೆಂಬುದನ್ನು ತೋರಿಸಿಕೊಟ್ಟರು.

'ಬಸವ ಪ್ರಜ್ಞೆ' ಎಂಬುದು ಬಸವಣ್ಣನವರ ಬದುಕು-ಚಿಂತನೆಗಳಿಂದ ನಿಷ್ಪತ್ತಿಯಾಗುವ ಒಂದು ಸರ್ವಕಾಲಿಕ, ವಿಶ್ವಸ್ಥ ಸತ್ಯ. ಇದು ವ್ಯಕ್ತಿನೆಲೆಯಿಂದ ರಾಜ್ಯ, ರಾಷ್ಟ್ರ, ವಿಶ್ವದ ನೆಲೆಗಳಿಗೆ ಹರಡಬಹುದಾದ ಒಂದು ಆದರ್ಶ. ಮಾನವೀಯತೆ ಇದರ ಜೀವದ್ರವ್ಯ; ಲೋಕಹಿತದ ಜೊತೆಗೆ ಆತ್ಮವಿಕಸನದ ಮಾರ್ಗೋಪಾಯಗಳನ್ನು ಕಂಡುಕೊಂಡ ಒಂದು ಶುದ್ಧ ದಾರ್ಶನಿಕ ದೃಷ್ಟಿ. ಎಂ. ಆರ್. ಶ್ರೀ. ಅವರ ಮಾತುಗಳಲ್ಲೇ ಹೇಳುವುದಾದರೆ "ಬಸವಣ್ಣನವರು ವೀರಶೈವರಿಗೆ ಮಾತ್ರ ಸಂಬಂಧಪಟ್ಟವರಲ್ಲ; ಕರ್ನಾಟಕಕ್ಕೆ ಮಾತ್ರ ಸಂಬಂಧಪಟ್ಟವರೂ ಅಲ್ಲ; ಅವರು ಇಡೀ ಭರತಖಂಡಕ್ಕೆ, ಇಡೀ ಪ್ರಪಂಚಕ್ಕೆ ಸಂಬಂಧಪಟ್ಟ ಮಹಾಪುರುಷರು".

■■

ಬಸವಯುಗದ ಸ್ತ್ರೀ ಸಂವೇದನೆಗಳು

• ಮಲ್ಲಿಕಾರ್ಜುನ ಹುಲಗಬಾಳಿ

'ಹೆಣ್ಣು ಜಗದ ಕಣ್ಣು' ಎಂದವರಿಗೆ, 'ನಾರಿ ನರಕಕ್ಕೆ ದಾರಿ' ಎಂದೇಕೆ ಹೇಳಬೇಕಾಯಿತೊ ? 'ಗೃಹಿಣಿ ಗೃಹಮುಚ್ಯತೆ' ಎಂದು ಸ್ತುತಿಸಿ, ಅಡಿಗೆಮನೆಯಿಂದಾಚೆ ಆಕೆ ಬರದಂತೆ ಲಕ್ಷ್ಮಣ ರೇಖೆ ಎಳೆದ ಸಂಪ್ರದಾಯಿಗಳು, ಅವಳನ್ನು ಕತ್ತಲು ಕೋಣೆಯ ತೊತ್ತಾಗಿಯೂ, ಸಂತಾನ ಸೃಷ್ಟಿಯ ಭೋಗವಸ್ತುವನ್ನಾಗಿಯೂ ಬಳಸಿದರೆ ಹೊರತು, ಅವಳಲ್ಲಿರುವ ಅಂತಃಕರಣ, ತಾಯ್ತನಗಳ ಹಿರಿಮೆ ಗುರುತಿಸಲಿಲ್ಲ. ಪಾಣಿನಿ ಮಹರ್ಷಿಗಳಂತೂ, ಸ್ತ್ರೀಗೆ ಆಶೀರ್ವಾದ ಮಾಡುವ ಕಾಲಕ್ಕೆ ಪ್ಲುತ ಸಹಿತ ಉಚ್ಚಾರ ಮಾಡಬಾರದೆಂದು ತಮ್ಮ ವ್ಯಾಕರಣ ಸೂತ್ರದಲ್ಲಿ ನಿರ್ಬಂಧನೆ ಹಾಕಿದ್ದರು.

ಈ ಎಲ್ಲ ಮಿತಿ ಹಾಗೂ ಹಿನ್ನೆಲೆಯಲ್ಲಿ ೧೨ನೇ ಶತಮಾನದ ಕನ್ನಡ ಶೈವ ವಚನಕಾರರ ಸ್ತ್ರೀಪರ ನಿಲುವು ಹಾಗೂ ಹೆಣ್ಣುಕುಲಕ್ಕೆ ಅವರುಗಳು ನೀಡಿದ ಗೌರವ. ಅಂದಿನ ಸಾಮಾಜಿಕ ಸಂದರ್ಭದಲ್ಲಿ ಮಹತ್ವದ್ದಾಗಿತ್ತು. ಸ್ತ್ರೀವಾದ ಹಾಗೂ ಸ್ತ್ರೀ ವಿಮೋಚನೆ (Women's lib) ಈಚೆಗೆ ಹುಟ್ಟಿಕೊಂಡ ಸಾಮಾಜಿಕ ಕಾಳಜಿಗಳು. ಪಾಶ್ಚಿಮಾತ್ಯ ಓದಿನ ಪ್ರಭಾವ ಕಾರಣವಾಗಿ ೧೯ನೇ ಶತಮಾನದಲ್ಲಿನ ಭಾರತೀಯ ಸಮಾಜಸುಧಾರಕರು ಆ ಬಗ್ಗೆ ಚಿಂತನೆಗೆ ತೊಡಗಿದ್ದುಂಟು. ಆದರೆ ಏಳುನೂರು ವರ್ಷಗಳ ಹಿಂದೆಯೇ, ನಮ್ಮ ಬಸವಯುಗದ ವಚನಕಾರರು ಈ ಎಲ್ಲ ವಾದ-ವಿಚಾರಗಳನ್ನು ಅರಿತವರಾಗಿದ್ದರು. ಅಷ್ಟೇ ಅಲ್ಲ, ಅವುಗಳನ್ನು ಅನುಷ್ಠಾನಕ್ಕೆ ತಂದವರು ಕೂಡ.

'ಧರ್ಮದ ಹೆಸರಿನಿಂದ ಹಾಗೂ ಸಾಮಾಜಿಕ ಸಂಪ್ರದಾಯ ಪದ್ಧತಿಗಳ ಹೆಸರಿನಿಂದ ಬಂಧನಕ್ಕೊಳಗಾದವರನ್ನು ಇವರು ಮುಕ್ತಗೊಳಿಸಿದರು. ಅವರು ಶಿವಾನುಭವ ಮಂಟಪದ ಚರ್ಚೆಗಳಲ್ಲಿ ಭಾಗಿಗಳಾಗುತ್ತಿದ್ದರಲ್ಲದೆ. ಮನೆಗಳಲ್ಲಿ ತಮ್ಮ ತಮ್ಮ ಪತಿಗಳಿಗೆ ಹಲವು ಸಂದರ್ಭಗಳಲ್ಲಿ ತತ್ತ್ವೋಪದೇಶ ಮಾಡುತ್ತಿದ್ದರು'.[೧]

ಒಂದು ದೇಶದ ಸಂಸ್ಕೃತಿ-ನಾಗರಿಕತೆಗಳ ಮಟ್ಟ. ಆ ದೇಶದಲ್ಲಿ ಸ್ತ್ರೀಯರಿಗಿರುವ ಸ್ಥಾನ-ಮಾನ, ಸ್ವಾತಂತ್ರ್ಯ ಹಾಗೂ ಶಿಕ್ಷಣಗಳ ಮೇಲೆ ಅವಲಂಬಿಸಿದೆ ಎಂದು ವಚನಕಾರರು ನಂಬಿದ್ದರು. ಹೀಗಾಗಿ ಜಗದ ಮೂಲಮಂತ್ರವಾಗಿರುವ ಹೆಣ್ಣು. ನಮ್ಮ

---

೧. ವಚನ ಧರ್ಮಪಥ : ಡಾ. ಎಂ.ಆರ್.ಶ್ರೀನಿವಾಸಮೂರ್ತಿ : ಪುಟ ೯೩

ಮನೆ-ಮನೆಗಳ ಒಪ್ಪು ಓರಣಗಳಿಗೆಲ್ಲ ಅವಳು ಅಂತಃಸತ್ತ್ವವುಳ್ಳವಳು ಎಂದು ಪ್ರತಿಪಾದಿಸಿದರು. ' ರತ್ನದೊಳು ಸ್ತ್ರೀ ರತ್ನವೇ ವೆಗ್ಗಳಂ ' ಎಂದು ಸೋಮೇಶ್ವರ ಕವಿ ಹಾಡಲು, ಈ ವಚನಕಾರರ ಪ್ರಭಾವ ಅವನ ಮೇಲಾಗಿರಲು ಸಾಕು.

ಬಸವಾದಿ ಪ್ರಮಥರು ಸ್ತ್ರೀಗೆ ನೀಡಿರುವಷ್ಟು ಗೌರವ, ಬಹುಶಃ ಜಗತ್ತಿನ ಯಾವ ಕಾಲದ ವಿಚಾರವಂತರೂ ನೀಡಿರಲಿಕ್ಕಿಲ್ಲ. ಪ್ರವಾಹದ ವಿರುದ್ಧ ಈಜಿ, ಸ್ತ್ರೀಪರ ಹೋರಾಟಕ್ಕೆ ಟೊಂಕ ಕಟ್ಟಿದರು. ಅದೊಂದು ಸಮುದಾಯದ ಸಾಮಾಜಿಕ ಸ್ವಾತಂತ್ರ್ಯದ ಕಹಳೆ ! ಕೇವಲ ತಾಯಿಯಲ್ಲಿ ಮಾತ್ರ ದೇವರನ್ನು ಕಂಡಿದ್ದವರಿದ್ದರು. ಆದರೆ ಈ ಶರಣರು ಅದಕ್ಕೂ ಮುಂದೆ ಹೋಗಿ, ಸಮಸ್ತ ಹೆಣ್ಣುಕುಲದಲ್ಲಿ ' ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ 'ನನ್ನು ಕಂಡದ್ದು ಸಾಮಾನ್ಯವೆ ?

' ಪರಸ್ತ್ರೀಯ ನೋಡುವಲ್ಲಿ ಆಶೆ ಇರಬಾರದು ' ಎಂದು ಹೇಳಿದ ಅವರು, ' ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ ಅಲ್ಲಿ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಪರವಧುವನ್ನು ಮಹಾದೇವಿ ' ಎಂಬುದು ಬಸವಣ್ಣನವರ ಆದರ್ಶವಾಗಿತ್ತು. ಹೀಗೆ ಪರಿಶುದ್ಧ ಭಾವದಿಂದ ಪರಸ್ತ್ರೀಯರನ್ನು ಕಾಣುವ ಮೂಲಕ ಸ್ತ್ರೀ ಗೌರವದ ಮಹತ್ವಸಾರಿದರು.

ಗಂಡುಳ್ಳ ಗರತಿಯು ತಾಯಿಯಂತಹ ಪರಸತಿ, ಅವಳನ್ನು ದೇವಿಯನ್ನಾಗಿ ಗೌರವಿಸುವದು ಪ್ರತಿಯೊಬ್ಬ ಗಂಡಸಿನ ಧರ್ಮ ಎಂದು ಜೇಡರ ದಾಸಿಮಯ್ಯ ಹೇಳಿದರೆ, ' ಪರಸ್ತ್ರೀ ಎಂಬ ಜೂಜಿಗೆ ಅಂಜು 'ವುದಾಗಿ ಬಸವಣ್ಣ ಹೇಳಿದ್ದಾರೆ.

> ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ,
> ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ....
> ಇದಾವ ಪರಿಯಲ್ಲಿ ಕಾಡಿತ್ತು ಮಾಯೆ....?

ಎಂದು ಕೇಳುವ ಬಸವಣ್ಣನವರಿಗೆ, ಹೆಣ್ಣು ಅಂದರೆ ಹಡೆದ ತಾಯಿ ಒಡಲಲ್ಲಿ ಹುಟ್ಟಿದ ಮಗಳು, ಕೈ ಹಿಡಿದ ಹೆಂಡತಿ. ಅವಳು ಅದು ಹೇಗೆ ಮಾಯವಾಗುತ್ತಾಳೆ ? ಎಂದು ಕೇಳುತ್ತಾರೆ. ಇದಕ್ಕೆ ಅಲ್ಲಮಪ್ರಭುಗಳು ಉತ್ತರವೆಂಬಂತೆ " ಹೆಣ್ಣು-ಹೊನ್ನು-ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ ಮಾಯೆ " ಎಂದು ಹೇಳುತ್ತಾರೆ.

ಶರಣರಲ್ಲಿ ಸತಿ-ಪತಿಯರಿಬ್ಬರೂ ಪರಸ್ಪರ ಅರ್ಥಮಾಡಿಕೊಂಡು ಬಾಳಿದ ಹಲವಾರು ದಾಂಪತ್ಯಗಳಿದ್ದವು. ಆಯ್ದಕ್ಕಿ ಲಕ್ಕವ್ವೆ, ಕದಿರೆ ಕಾಯಕದ ರೇಮವ್ವ, ಕೊಟ್ಟಣದ ಕಾಯಕದ ಸೋಮವ್ವ, ಕನ್ನಡಿ ಕಾಯಕದ ರೇಮಮ್ಮ, ಕಾಳವ್ವೆ, ಮೋಳಿಗೆಯ ಮಹಾದೇವಿಯಮ್ಮ, ಸಮಗಾರ ಕಲ್ಯಾಣಮ್ಮ ಮುಂತಾದವರೆಲ್ಲ ' ಪತಿಗೆ ತಕ್ಕ ಸತಿ 'ಯರಾಗುವದರ ಜೊತೆಗೆ, ತಮ್ಮ ಗಂಡಂದಿರಂತೆ ವಚನ ರಚನೆಗೂ ಮುಂದಾದರು, ಅವರ ಕಾಯಕದಲ್ಲೂ ನೆರವಾದರು.

' ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು. ಈ ಉಭಯಜ್ಞಾನ ಹೆಣ್ಣೋ-ಗಂಡೋ ನಾಸ್ತಿನಾಥಾ ?' ಎಂದು ಶರಣೆ ಗೊಗ್ಗವ್ವೆ, ಈ ಗಂಡು-ಹೆಣ್ಣಿನ ಮಧ್ಯದ ಅಂತರವನ್ನೇ ಪ್ರಶ್ನಿಸುತ್ತಾಳೆ. ಒಳಗಿರುವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಅಲ್ಲಿ ಲಿಂಗಭೇದವೇ ಸಲ್ಲ ಎನ್ನುತ್ತಾರೆ ಶರಣರು.

ಆತ್ಮಜ್ಞಾನ ಪಡೆಯುವದಕ್ಕೆ ಈ ಲಿಂಗಭೇದವಿಲ್ಲ. ಕಣ್ಣುಗಳೆರಡರ ಮೂಲಕ ನೋಡುವಂತೆ ' ಉಭಯ ದೃಷ್ಟಿಯಿಂದ ದೃಷ್ಟದ ಕಾಯಂತೆ ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತ ' ಎಂಬುದು ಪ್ರಭುದೇವರ ವಿಚಾರ. ' ಕೂಟಕ್ಕೆ ಸತಿ-ಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ ? ಎಂದು ಕೇಳುತ್ತಾಳೆ ಲಕ್ಕಮ್ಮ. ಇಲ್ಲಿ ಬೌದ್ಧಿಕವಾಗಿ ಸ್ತ್ರೀಯು ಪುರುಷನಿಗೆ ಸಮಾನಳು ಎಂದು ಶರಣರು ಭಾವಿಸಿದುದನ್ನು ಗಮನಿಸಬಹುದಾಗಿದೆ.

' ಶಿವಶರಣರು ಸಂಸಾರ ತ್ಯಾಗಮಾಡಿ, ಸನ್ಯಾಸ ಸ್ವೀಕರಿಸಿ ಮುಕ್ತಿಯನ್ನು ಪಡೆಯಬೇಕೆಂದು ಸಾರಿದವರಲ್ಲ. ಸಂಸಾರದಲ್ಲಿದ್ದುಕೊಂಡೇ ಕೈವಲ್ಯ ಪಡೆಯುವ ಉದ್ದೇಶ ಹೊಂದಿದ್ದರು. ಈಸಬೇಕು, ಈಸಿ ಜಯಿಸಬೇಕು ಎಂಬ ಹೋರಾಟ ಮನೋಧರ್ಮ ಅವರದು '.[೨]

೧೨ನೇ ಶತಮಾನದ ಈ ವಚನಕಾರರು, ಸ್ತ್ರೀಯನ್ನು ಈ ರೀತಿಯಾಗಿ ಗೌರವದಿಂದ ಕಾಣಲಿಕ್ಕೆ, ಅವರು ನಂಬಿದ್ದ ಹಾಗೂ ನಡೆದುಕೊಂಡು ಬಂದಿದ್ದ ' ಶರಣಸತಿ-ಲಿಂಗಪತಿ ' ಎಂಬ ತತ್ತ್ವವೂ ಕಾರಣವಾಗಿರಲು ಸಾಕು. ಅವರು ನುಡಿದು ಸೂತಕಿಗಳಾಗದೆ, ನಡೆ-ನುಡಿ ಒಂದಾಗಿಸಿದ್ದ ಧೀರರು. ಅವರಿಗೆ ಆದರ್ಶವೇ ಜೀವದ್ರವ್ಯ ಡಂಬಾಚಾರ ಸನಿಹ ಸುಳಿಯಲೂ ಬಿಟ್ಟವರಲ್ಲ ಅವರು.

ಸ್ತ್ರೀ ಶಕ್ತಿಯ ಪುರಸ್ಕಾರದಿಂದಲೇ ಸಮಾಜಕ್ಕೆ ಪುರಸ್ಕಾರ ಎಂದರಿತಿದ್ದ ಶರಣರು, ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ ಹಿಡಿಯಲಿಲ್ಲ. ಪರಂಪರಾಗತವಾಗಿ ನಯವಂಚನೆಯ ಜಾಲದಲ್ಲಿ ಸಿಕ್ಕು ಬಳಲುತ್ತಿದ್ದ ಸ್ತ್ರೀಕುಲವನ್ನು ಮೇಲೆತ್ತಿ, ಸಮಾಜದಲ್ಲಿ ಅವಳಿಗೂ ಸರಿಮಿಗಿಲಾದ ಸ್ಥಾನವಿತ್ತರು. ಸ್ತ್ರೀಯರಿಗೆ ಹೇರಲಾಗಿದ್ದ ಸೂತಕಗಳ ಸಂಕೋಲೆ ಹರಿದೊಗೆದರು. ಹೆಣ್ಣಾದ ಮಾತ್ರಕ್ಕೆ ಅವಳು ಹೇಗೆ ಪುರುಷನಿಗಿಂತ ಕೀಳಾಗುತ್ತಾಳೆ ಎಂಬುದು ಶರಣರು ಹಾಕಿದ ಸವಾಲು. ಭಕ್ತಿ-ಜ್ಞಾನಗಳ ಮೂಲಕ ಅವಳೂ ಆತ್ಮೋನ್ನತಿ ಪಡೆಯಲು ಸಾಧ್ಯ ಎಂದು ತೋರಿಸಿಕೊಟ್ಟರು.

ಹೀನವೃತ್ತಿಯಲ್ಲಿದ್ದ ಸೂಳೆಸಂಕವ್ವೆಯಂಥವರು ಕೂಡ ಈ ಪ್ರಭಾವ ವಲಯದಲ್ಲಿ ಬಂದು, ವಚನ ರಚನೆಗೆ ತೊಡಗಿದರೆಂದರೆ, ಈ ಒಂದು ಸಾಮಾಜಿಕ ಚಳುವಳಿ ಅಂದು ಮಾಡಿರಬಹುದಾದ ಪ್ರಭಾವ ಪರಿಣಾಮ ಇದರಿಂದ ತಿಳಿಯುತ್ತದೆ.

ಅತಿರೇಕ ಬದುಕು ಕಂಡ ಅಕ್ಕಮಹಾದೇವಿ, ಆಧ್ಯಾತ್ಮದ ಉತ್ತುಂಗ ಶಿಖರವನ್ನೇರಿದ ಮುಕ್ತಾಯಕ್ಕ ಹಾಗೂ ಸುಮಾರು ೩೩ ಜನ ವಚನಕಾರ್ತಿಯರು ಆ ಕಾಲದಲ್ಲಿದ್ದರೆಂಬುದು ಬಸವಯುಗದಲ್ಲಿ ಸ್ತ್ರೀ ಜಾಗೃತಿಗೆ ಸಾಕ್ಷಿ. ಇವರಾರೂ ಅಂಧಾನುಕರಣೆಯ ಪತಿವ್ರತ ಧರ್ಮ ಸ್ವೀಕರಿಸಿದವರಲ್ಲ, ಇಹದ ಬದುಕನ್ನು ನಿಕೃಷ್ಟವಾಗಿ ಕಂಡವರೂ ಅಲ್ಲ. ಇಂದ್ರಿಯ ನಿಗ್ರಹ ಮಾಡಿಕೊಂಡು ದೇಹ ದಂಡಿಸಲಿಲ್ಲ. ಸಾಮಾನ್ಯ ಸತಿ-ಪತಿಯರಾಗಿ ರತಿ ಸುಖವ ಅನುಭವಿಸಿದವರು. ಈ ನೆಲದ ಮೇಲೆ

---

೨. ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ : ಡಾ. ಎಂ.ಬಿ.ಹೂಗಾರ. ಪುಟ ೨೬೭

ಬದುಕುವದು, ಆ ಬದುಕಿನಲ್ಲಿ ಆನಂದ ಪಡೆದುಕೊಂಡು ಒಳ್ಳೆಯ ದಾಂಪತ್ಯವನ್ನು ಈ ಶರಣ ದಂಪತಿಗಳು ಅನುಭವಿಸಿದವರು. ತನ್ನ ಗಂಡನ ಕೂಡುವಲ್ಲಿ, ಅವನೊಂದಿಗೆ ಕೂಡಿ ಬಾಳುವದರಲ್ಲಿಯೇ ದಾಂಪತ್ಯಸುಖವಿದೆ ಎಂದುಕೊಂಡವರು.

'ಹಾಡುವೆ ನಲ್ಲನ, ಬೇಡುವೆ ನಲ್ಲನ, ಕೂಡುವೆ ನಲ್ಲನ. ನಿಚ್ಚ ನಿಚ್ಚ ಕೇಳಾ ಕೆಳದಿ ಅವನೇ ಸುಖನೆನಗೆ, ಅವನೇ ಸಖನೆನಗೆ....' ಎಂದೂ, ಹಾಗೂ 'ಎನ್ನ ನಲ್ಲನ ಕೂಡಿದ ಸುಖದ ಸುಗ್ಗಿಯನೇನೆಂಬೆ...., ಸುಖದ ರಸ ಮಡುಗಟ್ಟಿನಲ್ಲಿ, ಉರಿಲಿಂಗದೇವನ ಕೂಡಿ ಸುಖಸಾಗರದಲ್ಲಿ ಕ್ರೀಡಿಸುತ್ತಿದ್ದೆ' ಎನ್ನುತ್ತಾಳೆ ಕಾಳವ್ವೆ ಎಂಬ ವಚನಕಾರ್ತಿ. 'ಮಡದಿಯ ನೆರೆಹಿದರೆ.... ಶಿವನನ್ನು ಅರಿಯುವಂತಾಗಬೇಕು' ಎನ್ನುವ ಶರಣರ ಈ ಮಾತುಗಳಲ್ಲಿ ಸಂಸಾರ ಸುಖ ಹಾಗೂ ಶಿವಾನುಭವಯೋಗದ ತಾದ್ಯಾತ್ಮ ಕಾಣಬಹುದು.

ನೀಲಾಂಬಿಕೆ, ಮೋಳಿಗೆ ಮಹಾದೇವಿಯಮ್ಮ, ಆಯ್ದಕ್ಕಿ ಲಕ್ಕಮ್ಮ, ಗಂಡಂದಿರರಿಗೆ ಮಾರ್ಗದರ್ಶನ ಮಾಡುವ, ತಪ್ಪಿದಲ್ಲಿ ಎಚ್ಚರಿಸುವ ಜಾಗೃತ ಬುದ್ಧಿಯುಳ್ಳವರಾಗಿದ್ದರು. ಇವರಲ್ಲಿ ಕೆಲವರಿಗೆ ಸಂಸ್ಕೃತ ಭಾಷೆಯ ತಿಳುವಳಿಕೆ ಇತ್ತು. ಸಂಸ್ಕೃತದಲ್ಲಿದ್ದ ಶೈವಾಗಮ ಹಾಗೂ ಶಿವಪುರಾಣಗಳನ್ನು ಓದಿದ್ದರು. ಅಮ್ಮುಗೆ ರಾಯಮ್ಮ ತನ್ನೊಂದು ವಚನದಲ್ಲಿ 'ಶರಣರು ಲಿಂಗಭಿನ್ನವಾಗಲು ಲಿಂಗದೊಡನೆ ಅಂಗವ ಬಯಲು ಮಾಡುವರೆಂಬುದನ್ನು ಸಮರ್ಥಿಸುವಾಗ, ಚಿಪ್ಪಿಂಡಾಗಮ, ವಾತೂಲಾಗಮುಗಳನ್ನು ಉಲ್ಲೇಖಿಸುತ್ತಾಳೆ. ಅಕ್ಕಮಹಾದೇವಿ, ಉರಿಲಿಂಗ ಪೆದ್ದಿಗಳ ಹೆಂಡತಿ ಕಾಳವ್ವೆಯರ ಕೆಲ ವಚನಗಳಲ್ಲಿ ಸಂಸ್ಕೃತ ಶ್ಲೋಕಗಳು ಬಳಕೆಯಾಗಿವೆ. 'ಮುಕ್ತಾಯಕ್ಕ ತುಂಬ ಸೂಕ್ಷ್ಮವಾದ ಆಧ್ಯಾತ್ಮಿಕ ಅನುಭವಗಳ ಬಗ್ಗೆ ಪ್ರೌಢವಾದ ರೀತಿಯಲ್ಲಿ ಅಲ್ಲಮಪ್ರಭುವಿನೊಡನೆ ಚರ್ಚೆ ನಡೆಸುತ್ತಾಳೆ'.[೬]

ವೈಚಾರಿಕತೆಯ ಜತೆಗೆ ಬಂಡಾಯ ಮನೋಧರ್ಮ ಈ ವಚನಕಾರ್ತಿಯರಲ್ಲಿತ್ತು. ಈ ೨೧ನೇ ಶತಮಾನದಲ್ಲಿ ಕೂಡ ಸ್ತ್ರೀಯರು ಮೂಢನಂಬಿಕೆಯ ಕೂಪದಲ್ಲಿರುವಾಗ ಆವಾಗಿನ ಸ್ತ್ರೀಯರ ಪ್ರಗತಿಪರ ಧೋರಣೆಗಳು ಆಶ್ಚರ್ಯಮೂಡಿಸುವಂತಿವೆ.

'ಸದ್ಭಾವ-ಸದಾಚಾರ ಶರಣರ ಬದುಕಿನ ಮೂಲಸೂತ್ರ. ಕೆಟ್ಟವರಿರಲಿ, ತುಳಿತಕ್ಕೊಳಗಾದವರಿರಲಿ, ಯಾವುದೇ ರೀತಿಯಲ್ಲಿ ಕುಸಿದವರಿರಲಿ, ಯಾರಿದ್ದರೂ ಅವರನ್ನು ಕಂಡು, ಮೇಲೆತ್ತಿ ಹಿಡಿದು, ಮತ್ತೆ ಅವರು ನಿಜ ಮಾನವರಾಗಿ ನಿಲ್ಲುವಂತೆ ಮಾಡಿದ್ದು ಬಸವಕ್ರಾಂತಿಯ ವಿಶಿಷ್ಟ ವೈಖರಿ'.[೭]

ಹೆಣ್ಣೆಂದರೆ 'ಮಾಯೆ - ಹೇಯ' ಎಂದೆಲ್ಲ ತುಚ್ಛವಾಗಿ ಕಾಣುತ್ತಿದ್ದ ಅಂದಿನ ದಿನಗಳಲ್ಲಿ (ಈಗಲೂ ಕೂಡ), ಅವಳಲ್ಲಿ ಮಾತೃತ್ವ, ದೈವತ್ವ ಕಂಡ ಶಿವಶರಣರ ಹೃದಯವೈಶಾಲ್ಯ ಎಷ್ಟು ಕೊಂಡಾಡಿದರೂ ಕಡಿಮೆಯೆ! ಬದುಕಿನ ಕ್ಷಿತಿಜವನ್ನು ಹಿಗ್ಗಲಿಸಿ ನೋಡಿ, ಹಿಗ್ಗಿದ ಇವರ ಸಂವೇದನೆಗಳೆಲ್ಲವೂ ನಿತ್ಯ ನೂತನವಾಗಿವೆ.

---

೬. ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ - ಡಾ.ಪಿ.ವಿ.ನಾರಾಯಣ. ಪುಟ ೨೭೭

೭. ಮಹಾಮಾನವ - ಪ್ರೊ. ಬ.ಗಿ.ಯಲ್ಲಟ್ಟಿ, ಪುಟ ೯೩

ಆಧುನಿಕ ವಚನಕಾರರು

• ಡಾ. ಸಂಗಮೇಶ ಹಂಡಿಗಿ

ವಚನ ಸಾಹಿತ್ಯವಾಹಿನಿಯು೮೦೦ ವರ್ಷಗಳ ಹಿಂದೆಯೇ ಹುಟ್ಟಿ ಅಲ್ಲಲ್ಲಿ ನಿಂತು, ಬತ್ತದೆ ಇಲ್ಲಿಯವರೆಗೆ ಸಾಗಿಬಂದು ಸಜೀವ ಸಾಹಿತ್ಯವೆನಿಸಿದೆ. ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇಪ್ಪತ್ತನೆಯ ಶತಮಾನವು ಹನ್ನೆರಡನೆಯ ಶತಮಾನದ ನಂತರ ಮತ್ತೊಮ್ಮೆ ಸುವರ್ಣಯುಗವನ್ನು ಪಡೆಯಿತೆನ್ನಬಹುದು. ವ್ಯತ್ಯಾಸವಿಷ್ಟೆ ಅಂದಿನ ಉದ್ದೇಶ ಸಮಷ್ಟಿಗತವಾದ ಸಮಾಜ ಸುಧಾರಣೆಯಾಗಿತ್ತು. ಇಂದಿನದು ವ್ಯಷ್ಟಿಗತವಾದ ಅಭಿವ್ಯಕ್ತಿಯ ಮಾಧ್ಯಮವಾಗಿದೆ.

ಈ ಶತಮಾನದಲ್ಲಿಯೇ ಮುನ್ನೂರಕ್ಕೂ ಹೆಚ್ಚು ಜನ ಲೇಖಕರು ಸುಮಾರು ಐವತ್ತು ಸಾವಿರ ವಚನಗಳನ್ನು ಬರೆದಿದ್ದಾರೆಂಬುದು ಸಣ್ಣ ಮಾತೇನಲ್ಲ. ಈ ಬರಹಗಾರರ ಬಳಗದಲ್ಲಿ ಒಂದು ವಚನ ಬರೆದ, ಓದುಗರಿಗೆ ಪರಿಚಯವಿಲ್ಲದ ಶ್ರೀಮತಿ ಮಂಜುಳಾತಾಯಿ ಜಾನುಕೋಟಿಮಠ ಅವರಿದ್ದಾರೆ. ಆರು ಸಾವಿರಕ್ಕೂ ಹೆಚ್ಚು ವಚನಗಳನ್ನು ಬರೆದ ವಾಚಕರಿಗೆ ಸುಪರಿಚಿತರಾದ ಡಾ. ಜ.ಚ.ನಿ. ಅವರಿದ್ದಾರೆ.

ಪ್ರಾಚೀನ ವಚನಗಳ ಪ್ರಭಾವದಿಂದ ಅಂಕಿತ ಸಹಿತ ವಚನ ಮಾಧ್ಯಮವನ್ನೇ ಪೂರ್ಣವಾಗಿ ಬಳಸಿಕೊಂಡ ಆಧುನಿಕರು ಹಲವರು. ಅವರಲ್ಲಿ ಸಮಾಜ ಸುಧಾರಕರಾದ ಹರ್ಡೇಕರ ಮಂಜಪ್ಪನವರು ಆದ್ಯರು. ಆಧುನಿಕರಲ್ಲಿ ಗೂಳೂರಿನ ಶ್ರೀ ಜ.ಚ.ನಿ., ಹುಬ್ಬಳ್ಳಿಯ ಶ್ರೀ ಮೂಜಗಂ, ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಸಿರಿಗೆರೆಯ ಶ್ರೀ ಜಗದ್ಗುರು ಶಿವಕುಮಾರ ಮಹಾಸ್ವಾಮಿಗಳು, ಹುಲಸೂರಿನ ಶ್ರೀ ಶಿವಾನಂದ ಮಹಾಸ್ವಾಮಿಗಳು, ಗಿರಿಯಾಪುರದ ಶ್ರೀ ಸದಾಶಿವ ಶಿವಾಚಾರ್ಯರು, ಮೊರಬದ ಶ್ರೀ ಗಂಗಾಧರ ಶಿವಾಚಾರ್ಯರು, ರಾಯಚೂರಿನ ಶ್ರೀ ನಾ. ಚಿ., ಚಿಕ್ಕಮಣ್ಣೂರಿನ ಶ್ರೀ ರೇವಣಸಿದ್ಧ ಶಿವಾಚಾರ್ಯರು, ಅಥಣಿಯ ಶ್ರೀ ಚನ್ನಬಸವದೇವರು ಮುಂತಾದ ಗುರು ವಿರಕ್ತ ಸ್ವಾಮಿಗಳಿದ್ದಾರೆ.

ಎಸ್. ವಿ. ರಂಗಣ್ಣ, ಎಸ್. ವಿ. ಪರಮೇಶ್ವರಭಟ್ಟ, ಸಿದ್ಧಯ್ಯ ಪುರಾಣಿಕ, ಮಹದೇವ ಬಣಕಾರ, ಬೆಟಗೇರಿ ಕೃಷ್ಣಶರ್ಮ, ಡಿ.ಎಸ್. ಕರ್ಕಿ, ಈಶ್ವರ ಸಣಕಲ್ಲ,

ಭುಜೇಂದ್ರ ಮಹಿಷವಾಡಿ, ಸಿ. ಪಿ. ಕೆ., ಹಿರೇಮಲ್ಲೂರ ಈಶ್ವರನ್, ಪಂಚಾಕ್ಷರಿ ಹಿರೇಮಠ, ಎಚ್. ತಿಪ್ಪೇರುದ್ರಸ್ವಾಮಿ ಅವರಂತಹ ಕವಿ ಸಾಹಿತಿ, ವಿಮರ್ಶಕರಿದ್ದಾರೆ. ರಂಗನಾಥ ದಿವಾಕರರಂತಹ ತತ್ವಜ್ಞಾನಿ ರಾಜಕಾರಣಿಗಳಿದ್ದಾರೆ. ಸಂಗಮೇಶ ಹೊಸಮನಿ, ಸಿಂಪಿ ಲಿಂಗಣ್ಣ, ಶಂ. ಗು. ಬಿರಾದಾರ, ಗಿರಿರಾಜ ಹೊಸಮನಿ, ಮ. ಮಲ್ಲಪ್ಪ, ಬಿ. ಶೇಖರಪ್ಪ, ಬಾಳೇಶ ಲಕ್ಷೆಟ್ಟಿ, ಶರಣಪ್ಪ ಗುಡದಿನ್ನಿ, ಡಿ. ಜಿ. ಬಳೂರಗಿ, ಸಿದ್ಧೇಶ್ವರ ಹಿರೇಮಠ, ಮಹಾಲಿಂಗ ಯಾಳಗಿ, ಗುರುಲಿಂಗಪ್ಪ ಅಣ್ಣಾನವರ, ಈರಯ್ಯಾ ಕಣಬೂರ, ಶಿ. ಚೆ. ವಿರಕ್ತಮಠ ಅವರಂತಹ ಶಿಕ್ಷಕರಿದ್ದಾರೆ.

ಗುಂಡ್ಮಿ ಚಂದ್ರಶೇಖರ ಐತಾಳ, ಕೆ. ಭೈರವಮೂರ್ತಿ, ಅರವಿಂದ ಕಂಚ್ಯಾಣಿ, ಕೆ. ಪಿ. ಶಿವಲಿಂಗಯ್ಯಾ, ಸಂಗಮೇಶ ನರೇಗಲ್ಲ, ಬ. ಗಿ. ಯಲ್ಲಟ್ಟಿ, ಎಂ. ಪಿ. ಗಣಾಚಾರಿ, ಡಿ. ಲಿಂಗಯ್ಯಾ, ಎಂ. ಜಿ. ನಾಗರಾಜ, ಚನ್ನಣ್ಣ ವಾಲಿಕಾರ, ಸಿದ್ಧಣ್ಣ ಲಂಗೋಟಿ, ಸಂಗಮೇಶ ಹಂಡಿಗಿ, ಕೆ. ಅನಂತರಾಮು ಅವರಂತಹ ಪ್ರಾಧ್ಯಾಪಕರಿದ್ದಾರೆ.

ಜೋಳದರಾಶಿ ದೊಡ್ಡನಗೌಡರು, ಪಂ. ಪುಟ್ಟರಾಜ ಗವಾಯಿಗಳು, ಬಸವರಾಜ ತಾಳಕೇರಿ, ಗುರುಸ್ವಾಮಿ ಕಲಕೇರಿ, ಸಿದ್ಧರಾಮಯ್ಯ ಮಠಪತಿ ಅವರಂತಹ ಗಮಕಿ ಗಾಯಕರಿದ್ದಾರೆ. ದಾನಪ್ಪ ಜತ್ತಿ ಅವರಂತಹ ಕೀರ್ತನಕಾರರಿದ್ದಾರೆ. ಟಿ. ಎಚ್. ಷಣ್ಮುಖಪ್ಪ, ಸೋಮಶೇಖರ ಸಾಲಿ ಅವರಂತಹ ಕಲಾವಿದರಿದ್ದಾರೆ.

ಡಾ. ಶಿವದೇವ ಶಾಸ್ತ್ರಿ, ಡಾ. ಈಶ್ವರಯ್ಯ ಕರಡಿ ಅವರಂತಹ ವೈದ್ಯರಿದ್ದಾರೆ. ಶಾಂತೇಶ ಹಿರೇಮಠ, ದಾನಪ್ಪ ಬಗಲಿ ಅವರಂತಹ ವೈದ್ಯಕಾರ್ಯಕರ್ತರಿದ್ದಾರೆ.

ವೀರಪ್ಪ ಇಜೇರಿ, ಶಿವಪುತ್ರಯ್ಯ ರೇವಣಸಿದ್ಧೇಶ್ವರಮಠ ಅವರಂತಹ ವರ್ತಕರಿದ್ದಾರೆ.

ಎಚ್. ಗಂಗಾಧರನ್, ಪಿ. ಎಸ್. ಪಾಟೀಲ, ಈರಣ್ಣ ನಾಗಠಾಣ, ಅನ್ನದಾನಯ್ಯ ಪುರಾಣಿಕ ಅವರಂತಹ ವಕೀಲರಿದ್ದಾರೆ.

ಶ್ರೀಶೈಲ ಜತ್ತಿ, ಎಂ. ಪಿ. ರಮೇಶ ಅವರಂತಹ ಬ್ಯಾಂಕ ಉದ್ಯೋಗಿಗಳಿದ್ದಾರೆ. ಎಚ್. ಕೆ. ಸದಾನಂದ ಅವರಂತಹ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಿಗಳಿದ್ದಾರೆ. ಭೀಮರಾವ್ ಅವರಂತಹ ಸರಕಾರದ ನಿವೃತ್ತಕಾರ್ಯದರ್ಶಿಗಳಿದ್ದಾರೆ.

ಸಿದ್ಧಲಿಂಗನಗೌಡ ಪಾಟೀಲ, ಶಂಕ್ರಣ್ಣ ನಾಗರಾಳ ಅವರಂತಹ ಕೃಷಿಕರಿದ್ದಾರೆ. ಜೀರಗೆಕಟ್ಟೆ ಬಸವಪ್ಪ, ಶರಣಯ್ಯ ಕಲ್ಯಾಣಿ ಅವರಂತಹ ಹಿರಿಯರಿದ್ದಾರೆ. ಯಲ್ಲಪ್ಪ ಹಲಕುರ್ಕಿ, ಸಿದ್ಧಲಿಂಗೇಶ ಹಂಡಿಗಿ ಅವರಂತಹ ಕಿರಿಯರಿದ್ದಾರೆ.

ಮಾತೆ ಮಹಾದೇವಿ, ಶಿವಶರಣೆ ಮುಕ್ತಾಯಿ ಅವರಂತಹ ಯೋಗಿಣಿಯರಿದ್ದಾರೆ. ಗುರುದೇವಿ ಹಿರೇಮಠ, ಶಾಂತಾದೇವಿ ಸಾಬಾದಿ, ಗು. ಶಂಕರಮ್ಮ, ಓಂಕಾರಮ್ಮ, ಗಂಗಮ್ಮ ಹೊಸಮನಿ, ಶಿವಲಿಂಗಮ್ಮ ಕಟ್ಟಿ, ಸಿ. ಕನಕಮ್ಮ, ಎಸ್. ಶಾರದಮ್ಮ, ವಿ.

ಜಯಮ್ಮ, ಎಂ. ಮಂಗಳಮ್ಮ, ರು. ದೇವೀರಮ್ಮ, ಶಿವಲೀಲಾ ಹಂಡಗಿ, ತೋಗರಿ ಸರ್ವಮಂಗಳಮ್ಮ, ಲೀಲಾ ಕಲಕೋಟಿ, ಜೆ. ಶಾರದಾ ರಾಜಶೇಖರ. ಜಯಶ್ರೀ ದಂಡೆ. ಸರಸ್ವತಿ ಚಿಮ್ಮಲಗಿ, ವಿಜಯಶ್ರೀ ಸಬರದ. ಪ್ರಮಿಳಾ ಯಳಮಲಿ ಅವರಂತಹ ಹಿರಿಯ ಮಹಿಳಾ ಮಣಿಗಳಿದ್ದಾರೆ. ಜಿ. ರತ್ನಾ, ಜಿ. ಎಸ್. ಚಂದ್ರಉಮೇಶ, ಅಪರ್ಣಾ ಹಂಡಿಗಿ. ಎನ್. ಮಾಲಿನಿ ಅವರಂತಹ ಕಿರಿಯರಿದ್ದಾರೆ.

ವೈ. ವಿ. ಪಾರ್ಶ್ವನಾಥ, ವಿ. ಕೃಷ್ಣಶೆಟ್ಟಿ, ಸುಜನಾ, ಗುರುರಾಜ ಸಿದ್ದಾಪೂರ, ಎಸ್. ಪ್ರಹ್ಲಾದರಾವ್ ಅವರಂತಹ ವೀರಶೈವೇತರರೂ ಇದ್ದಾರೆ. ಅಂದು ವೀರಶೈವ ಧರ್ಮಕ್ಕೆ ಮಾತ್ರ ಸೀಮಿತವಾದುದು ಇಂದು ಸರ್ವಧರ್ಮದವರಿಗೂ ಸಮ್ಮತವಾದುದು ಈ ಸಾಹಿತ್ಯ ಪ್ರಕಾರದ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಎಲ್ಲ ಲೇಖಕರ ವಚನಗಳನ್ನು ಈ ಸೀಮಿತ ಪುಟಗಳಲ್ಲಿ ಸಮೀಕ್ಷಿಸಲು ಸಾಧ್ಯವಾಗದು. ಆದರೆ ಕೆಲವರ ವಚನಗಳನ್ನು ನಿದರ್ಶನಕ್ಕಾಗಿ ಮಾತ್ರ ಗಮನಿಸಬಹುದು.

ಹರ್ಡೇಕರ ಮಂಜಪ್ಪ :

'ಕರ್ನಾಟಕದ ಗಾಂಧಿ' ಎನಿಸಿದ ಸಮಾಜ ಸುಧಾರಕ. ರಾಷ್ಟ್ರಧರ್ಮ ದೃಷ್ಟಾರ ಹರ್ಡೇಕರ ಮಂಜಪ್ಪನವರೇ ಆಧುನಿಕ ಯುಗದ ಆದ್ಯ ವಚನಕಾರ[೧] ನೈಷ್ಠಿಕ ಬ್ರಹ್ಮಚಾರಿಗಳಾದ ಮಂಜಪ್ಪನವರು ವೈರಾಗ್ಯನಿಧಿ ಅಲ್ಲಮಪ್ರಭುದೇವರ ಜೀವನ ಸಾಧನೆಗಳಿಂದ ಪ್ರಭಾವಿತರಾಗಿ ತಮ್ಮ ವಚನಗಳಿಗೆ 'ಪ್ರಭುದೇವ' ಅಂಕಿತವಿರಿಸಿಕೊಂಡಂತಿದೆ. ಜನಸೇವೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿರಿಸಿದ್ದುದರಿಂದ ತಮ್ಮನ್ನು 'ಜನಸೇವಕ' ಎಂದು ಕರೆದುಕೊಂಡಿದ್ದಾರೆ. ಅವರ 'ಜನಸೇವಕನ ವಚನ' ೧೯೩೨ ರಲ್ಲಿ ಆಲಮಟ್ಟಿಯ ವೀರಶೈವ ಗ್ರಂಥಮಾಲೆಯ ೧೮ ನೆಯ ಕೃತಿಯಾಗಿ ಪ್ರಕಟವಾಗಿದೆ. ಇದರಲ್ಲಿ ೩೩ ವಚನಗಳಿವೆ.

ಮಂಜಪ್ಪನವರ ವಚನಗಳಲ್ಲಿ ಸರಳ ಶೈಲಿಯಿದೆ. ತಿಳಿಯಾದ ಭಾಷೆಯಿದೆ. ಚಿಕ್ಕವಚನಗಳಲ್ಲಿ ಚೊಕ್ಕವಿಚಾರವಿದೆ. ವಿಚಾರಗಳಿಗೆ ಸುಪರಿಚಿತ ವಸ್ತುಗಳನ್ನೇ ಉಪಮೆ. ದೃಷ್ಟಾಂತಗಳಾಗಿ ಬಳಸಿ ಹೇಳಿರುವುದರಿಂದ ವಚನಗಳು ಸರ್ವರಿಗೂ ತಿಳಿಯುವಂತಿವೆ.

ಗುಣಗಾತ್ರಗಳೆರಡರಿಂದಲೂ ಗಣನೀಯವಾದ ವಚನಗಳನ್ನು ರಚಿಸಿದವರಲ್ಲಿ ಜ.ಚ.ನಿ., ಸಿದ್ಧಯ್ಯಾ ಪುರಾಣಿಕ, ಎಸ್. ವಿ. ರಂಗಣ್ಣ, ಎಸ್. ವಿ. ಪರಮೇಶ್ವರ ಭಟ್ಟ, ಮಹಾದೇವ ಬಣಕಾರ, ಸಂಗಮೇಶ ಹೊಸಮನಿ ಪ್ರಮುಖರು. ಅವರನ್ನು ಆಧುನಿಕ ವಚನಸಾಹಿತ್ಯದ ದಿಗ್ಗಜರೆಂದು ಕರೆಯಬಹುದು.

ಎಸ್. ವಿ. ರಂಗಣ್ಣ :

ರಂಗಣ್ಣನವರು ಪ್ರಕಾಂಡ ಪಂಡಿತರು. ವಿಮರ್ಶಾ ವಿಚಕ್ಷಣರು. ಅವರ ೧೨೧೨ ವಚನಗಳ ಸಂಕಲನ 'ರಂಗಬಿನ್ನಪ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತುದು

---

೧. ಡಾ. ಸಂಗಮೇಶ ಹಂಡಿಗಿ : ಶ್ರೀ ಜ. ಚ. ನಿ. ವಚನ ಸಾಹಿತ್ಯ : ಒಂದು ಅಧ್ಯಯನ (೧೯೯೫) ಪುಟ ೬೬-೬೯

ಆಧುನಿಕ ವಚನ ಸಾಹಿತ್ಯಕ್ಕೆ ಸಂದ ಗೌರವವಾಗಿದೆ. ಈ ಕೃತಿಯಲ್ಲಿ ಒಂದು ಸಾಲಿನ ವಚನಗಳು ಇವೆ; ಏಳೆಂಟು ಪುಟಗಳಷ್ಟು ದೀರ್ಘವಾದ ವಚನಗಳೂ ಉಂಟು. ತಮ್ಮ ಇಷ್ಟದೈವ ' ಮಾವಿನಕೆರೆ ರಂಗಯ್ಯ'ನನ್ನೇ ಅಂಕಿತವಾಗಿರಿಸಿಕೊಂಡಿದ್ದಾರೆ. ಅವರ ಒಂದು ಸಾಲಿನ ವಚನವಿದು :

" ಓ ರಂಗ, ಜಗಕ್ಕೆಲ್ಲ ಅರ್ಥವಾಗುವ ಭಾಷೆ ಒಂದಿದೆ : ದುಡ್ಡು !"

ರಂಗಣ್ಣನವರ ವಚನಗಳಲ್ಲಿ ಗದ್ಯದ ಕೈ ಮೇಲಾಗಿದೆ. ಪಾಂಡಿತ್ಯ ವಿಮರ್ಶೆ ಎದ್ದು ಕಾಣುತ್ತದೆ. ' ರಂಗಬಿನ್ನಪ ' ವಚನವನ್ನು ಬಗೆಬಗೆಯ ರೀತಿಯಲ್ಲಿ ದುಡಿಸಿಕೊಂಡ ವೈವಿಧ್ಯಮಯವಾದ ಪ್ರಯೋಗಶಾಲೆ.

ಎಸ್. ವಿ. ಪರಮೇಶ್ವರ ಭಟ್ಟ :

ಪರಮೇಶ್ವರ ಭಟ್ಟರ ವಚನ ಕೃತಿಗಳಿವು : ' ಉಪ್ಪುಕಡಲು ', ' ಪಾಮರ ' ಒಟ್ಟು ೧೪೦೭ ವಚನಗಳಿವೆ. ವಚನಗಳ ಅಂಕಿತ ' ಸದಾಶಿವ ಗುರು '. ಇದು ಅವರ ಆರಾಧ್ಯ ದೈವದ ಹೆಸರು. ತಂದೆಯ ಹೆಸರೂ ಆಗಿದೆ. ರಂಗಣ್ಣನವರ ವಚನಗಳಲ್ಲಿ ವ್ಯವಹಾರಿಕತೆ, ವೈಚಾರಿಕತೆ ಹೆಚ್ಚಿದ್ದರೆ ಪರಮೇಶ್ವರ ಭಟ್ಟರ ವಚನಗಳಲ್ಲಿ ಭಾವನಾಂಶ ಹೆಚ್ಚಿದೆ. ರಂಗಣ್ಣನವರ ವಚನಗಳು ಗದ್ಯಾತ್ಮಕವಾಗಿದ್ದರೆ, ಭಟ್ಟರ ವಚನಗಳು ಪದ್ಯಾತ್ಮಕವಾಗಿವೆ.

" ನೀನೊಬ್ಬನೆ; ನಿನ್ನ ಅನುಭವವ ಪಡೆದವರು ಲಕ್ಷ ಲಕ್ಷ ಸದಾಶಿವ ಗುರು "

ಈ ಒಂದೇ ಒಂದು ಸಾಲಿನ ವಚನ ಮಂಜಿನ ಹನಿ ಬ್ರಹ್ಮಾಂಡವನ್ನೇ ಪ್ರತಿಬಿಂಬಿಸಿದಂತಿದೆ.

ಸ್ಕೂಟರು ನಡೆಸುವ ಗಂಡನ ಮುಖ ಪಯಣದ ದಿಕ್ಕಿಗೆ ಮನೆಯ ಕಡೆಗೆ;
ಹಿಂದೆ ಕುಳಿತ ಹೆಂಡತಿಯ ಮುಖ ಬೀದಿಯ ದಿಕ್ಕಿಗೆ ಅಂಗಡಿಯ ಕಡೆಗೆ;
ಹೀಗೆ ಪತಿಯ ಮುಖ ಅತ್ತ, ಸತಿಯ ಮುಖ ಇತ್ತ !
ಆದರೇನು ? ಒಮ್ಮುಖವಾದರೆ ಚಿತ್ತಸುಖವದುವೆ ಸದಾಶಿವಗುರು.

ದಂಪತಿಗಳ ಬದುಕು ದ್ವಿಮುಖವಾಗದೆ ಒಮ್ಮುಖವಾದರೇನೇ ಸಂಸಾರ ಸ್ವರ್ಗವೆಂಬುದರ ಸಂಕೇತ ಇಲ್ಲಿದೆ.

ಇವರ ವಚನಗಳಲ್ಲಿ ಜೀವನ ವಿಮರ್ಶೆ, ಆತ್ಮ ವಿಮರ್ಶೆ ಎರಡೂ ಇವೆ. ನಿತ್ಯ ಜೀವನದಲ್ಲಿ ಕಂಡುಂಡ ಅನುಭವಗಳನ್ನು ಕಲಾತ್ಮಕವಾಗಿ ಕಂಡರಿಸುವ ಕೌಶಲ ಇವರದು.

ಸಿದ್ಧಯ್ಯ ಪುರಾಣಿಕ :

ಸಂಪ್ರದಾಯವನ್ನು ಬಿಡದೆ ಪ್ರಗತಿಪಥದಲ್ಲಿ ಮುನ್ನಡೆದು ಸಮಕಾಲೀನ ಪ್ರಜ್ಞೆಯನ್ನಳವಡಿಸಿಕೊಂಡು, ಪ್ರಾಚೀನ ಪರಂಪರೆಯ ವಚನದ ಮೈಕಟ್ಟನ್ನುಳಿಸಿಕೊಂಡು ವಚನ ರಚಿಸಿದವರಲ್ಲಿ ಜ.ಚ.ನಿ ಹಾಗೂ ಸಿದ್ಧಯ್ಯ ಪುರಾಣಿಕ ಮುಖ್ಯರು.

' ವಚನೋದ್ಯಾನ ', ' ವಚನ ನಂದನ ' ಹಾಗೂ ' ವಚನಾರಾಮ ' ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಸಾವಿರಕ್ಕೂ ಹೆಚ್ಚು ವಚನಗಳಿವೆ. ಅಂಕಿತ

' ಸ್ವತಂತ್ರಧೀರ ಸಿದ್ಧೇಶ್ವರ '. ಸ್ವಯಂ ಕವಿಯಾದ ಸಿದ್ಧಯ್ಯ ಪುರಾಣಿಕರು ತಮ್ಮ ಬದುಕಿನ ಬಗೆಬಗೆಯ ಅನುಭವಗಳನ್ನು ಕಾವ್ಯಮಯವಾಗಿ ವಚನಗಳಲ್ಲಿ ಚಿತ್ರಿಸಿದ್ದಾರೆ. ಬುದ್ಧಿಭಾವಗಳ ಸಂಗಮ ಪುರಾಣಿಕರ ವಚನಗಳು

ಒಬ್ಬ ನೀರೊನಿಂದ ರೋಮನಗರದ
ರೋಮ ರೋಮ ತಲ್ಲಣಿಸಿತು
ಭಾರತದಲ್ಲಿಂದು ಊರೂರಿಗೂ ನೀರೋಗಳಯ್ಯ;
ಒಬ್ಬ ಶಿಖಂಡಿಯಿಂದ ಅತ್ಯುನ್ನತಿಯ ಅಮರಸಿಂಧೂದ್ಭವನ ಕೊನೆಯಾಯಿತು
ಇಂದಿಲ್ಲಿ ಪಂಚಾಯತಿಗಳಿಂದ ಪಾರ್ಲಿಮೆಂಟಿನವರೆಗೂ ಶಿಖಂಡಿಗಳು
ಸಿಕ್ಕುವರಯ್ಯಾ !
ಒಬ್ಬ ತೊಘಲಕನಿಂದ ಈ ದೇಶವೆಲ್ಲ ಅಸ್ತವ್ಯಸ್ತವಾಗಿದ್ದಿತು
ಈಗ ತೊಘಲಕರಿಲ್ಲದ ಸ್ಥಳವಾವುದಯ್ಯಾ ?
ಹಿಂದೆ ಘೋರಾರಣ್ಯಗಳಲ್ಲಿ ಮಾತ್ರ ದರೋಡೆಗಾರರಿದ್ದರು
ಈಗ ಓಣಿ ಓಣಿಗೆ ದರೋಡೆಗಾರರಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ
ನೀನು ವಿಶ್ವತೋಪಾದನೆಂಬುದು ನಿಜವಾದರೆ
ತುಳಿಯಯ್ಯಾ ಒಮ್ಮೆಗೆ ಇವರನ್ನೆಲ್ಲಾ !

ಸಮಕಾಲೀನ ಸಮಾಜದ ಲೋಪದೋಷಗಳನ್ನು ಕಂಡ ವಚನಕಾರನ ಸಾತ್ವಿಕ ಕೋಪ ಇಲ್ಲಿ ಸಿಡಿದೆದ್ದಿದೆ. ಪುರಾಣಿಕರ ವಚನವಾಹಿನಿ ಬೆಟ್ಟದ ಮೇಲಿಂದ ಅಬ್ಬರಿಸಿ ಬೀಳುವ ತಡಸಲವಾಗಿರದೆ ಸಮಪಾತಳಿಯ ಮೇಲೆ ಹರವಾಗಿ, ಶಾಂತವಾಗಿ ಹರಿಯುವ ಗಂಗೆಯಾಗಿದೆ.

ಮಹಾದೇವ ಬಣಕಾರ :

ಬಣಕಾರ ಅವರು " ಎನ್ನವರಗುರು ಶಿವಕುಮಾರ ಪ್ರಭು " ಎಂಬ ಅಂಕಿತದಲ್ಲಿ ೧೧೦೮ ವಚನಗಳನ್ನು " ಮಹಾದೇವ ಬಣಕಾರ ವಚನಗಳು " ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಸಿರಿಗೆರೆ ಶ್ರೀಗಳವರು ಅವರಿಗೆ ಸನ್ಮಾರ್ಗತೋರಿದ ಗುರುಗಳೂ ಹೌದು; ಆರಾಧ್ಯದೇವರೂ ಹೌದು. ಅಂತೆಯೇ ಅವರ ಶುಭನಾಮವೇ ಅಂಕಿತವಾಗಿದೆ.

ಕಾವ್ಯದ ಕಾಂತಿಯಿಂದ ವಚನಗಳು ಮಿಂಚಿ ಮನಸೆಳೆಯುತ್ತವೆ. ಉಪಮೆಗಳು ಹೇರಳವಾಗಿ ಬಳಕೆಯಾಗಿವೆ.

ಹಿಂದಿನ ವಚನಕಾರರ ವಚನಗಳ ಮೈಕಟ್ಟು, ಭಾಷೆ, ಲಯ ಇವುಗಳನ್ನೊಳಗೊಂಡ ಬಣಕಾರರ ವಚನಗಳು ಪ್ರಾಚೀನ ವಚನಕಾರರ ಪಡಿಯಚ್ಚಾಗಿ ಕಂಡು ಬರುತ್ತವೆ. ಸಮಕಾಲೀನ ಸಮಾಜದ ಸಂಗತಿ, ಸನ್ನಿವೇಶಗಳ ಚಿತ್ರಣದ ಅಭಾವವೆನಿಸುತ್ತದೆ. ಇಲ್ಲಿಯ ವಚನಗಳು ವೈವಿಧ್ಯತೆಯಿಲ್ಲದೆ ಏಕತಾನತೆಯೆನಿಸಬಹುದು. ಆದರೂ ಸ್ವಾನುಭವದ ಪ್ರತಿಪಾದನೆಯಿಂದ, ಆತ್ಮನಿವೇದನೆಯಿಂದ ಆಕರ್ಷಕವಾಗಿವೆ.

ಸಂಗಮೇಶ ಹೊಸಮನಿ :

ಹೊಸಮನಿಯವರು ' ಸಂಗಮನಾಥನ ವಚನಗಳು ', ' ವಚನತೀರ್ಥ ' ಹಾಗೂ ' ವಚನ ಪ್ರಸಾದ ' ಕೃತಿಗಳನ್ನು ಪ್ರಕಟಿಸಿದ್ದಾರೆ. ಅಂಕಿತ "ಶ್ರೀ ಸಂಗಮನಾಥ ". ಮೂರುಸಾವಿರ ವಚನಗಳನ್ನು ರಚಿಸಿದ್ದಾರೆ. ವೃತ್ತಿಯಿಂದ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಮೂಲತಃ ಕವಿಗಳಾದುದರಿಂದ ಇವರ ವಚನಗಳಲ್ಲಿ ಕಾವ್ಯದ ಕೈ ಮೇಲಾಗಿದೆ.

ಇವರ ವಚನಗಳ ಅಂಕಿತವನ್ನು ತೆಗೆದು ಬಿಟ್ಟರೆ ಸುಂದರವಾದ ಭಾವಗೀತೆಗಳಾಗಿ ಗೋಚರಿಸುತ್ತವೆ. ಕಿರಿದಾದ ಸಾಲುಗಳು, ಸಹಜ ಪ್ರಾಸಗಳು, ಸಮತೂಕದ ಭಾಷೆ, ಕಾವ್ಯದ ಬಂಧ, ಅದಕ್ಕೆ ತಕ್ಕ ಛಂದ, ಇವುಗಳಿಂದಾಗಿ ಇವರ ವಚನಗಳು ಭಾವಗೀತಾತ್ಮಕ ವಚನಗಳಾಗಿವೆ.

ಜ. ಚ. ನಿ. :

ಆರುಸಾವಿರಕ್ಕೂ ಹೆಚ್ಚಿನ ವಚನಗಳನ್ನು ರಚಿಸಿ ಆಧುನಿಕ ಯುಗದ ಅಗ್ರಗಣ್ಯ ವಚನಕಾರರೆನಿಸಿಕೊಂಡವರು ಜ.ಚ.ನಿ. ಅವರು ೧೩ ವಚನಕೃತಿಗಳನ್ನು ಪ್ರಕಟಿಸಿದ್ದಾರೆ. ೧) ವಚನಾಂಜಲಿ, ೨) ವಚನ ಮಂಜರಿ, ೩) ವಚನ ವಲ್ಲರಿ ಭಾಗ-೧, ೪) ವಚನ ವಲ್ಲರಿ ಭಾಗ-೨, ೫) ಮಣಿ ವಚನಗಳು, ೬) ಯುಗ ವಚನ, ೭) ಸೊಗ ವಚನ, ೮) ಮಿಡಿ ವಚನ, ೯) ದುಡಿ ವಚನ, ೧೦) ಸದಾಶಿವ ಸೂಳ್ನುಡಿ, ೧೧) ವಚನ ವಿಭಾವ, ೧೨) ಗೌರಘನತೆ, ೧೩) ಶ್ರೀರುದ್ರ ಸೂಳ್ನುಡಿ. ಅವರ ಒಡೆತನದಲ್ಲಿ ಪ್ರಕಟವಾಗುತ್ತಿದ್ದ ' ಮಾಮಿಡಿ ' ಪತ್ರಿಕೆಯಲ್ಲಿಯೂ ಅವರ ವಚನಗಳು ಪ್ರಕಟವಾಗಿವೆ. ಅಂಕಿತ " ಶ್ರೀ ನಿಡುಮಾಮಿಡಿ ಶ್ರೀ ಗಿರಿ ಸೂರ್ಯಸಿಂಹಾಸನಾಧೀಶ್ವರ ".

ಜ.ಚ.ನಿ.ಯವರ ವಚನ ರಚನೆಗೆ ಮೂಲ ಸ್ಫೂರ್ತಿ ಉರಿಲಿಂಗದೇವ ಮತ್ತು ಮಹಾದೇವಿಯಕ್ಕನ ವಚನಗಳು. ಸಮಕಾಲೀನ ವಚನಗಳನ್ನು ಅವರು ಗಮನಿಸಿದ್ದರೂ ಅವುಗಳ ಪ್ರಭಾವ ಅವರ ಮೇಲೆ ಅಷ್ಟಾಗಿ ಆಗಿಲ್ಲ. ಪ್ರಾಚೀನ ವಚನಕಾರರ ಶೈಲಿಯ ಪ್ರಭಾವ ಅವರ ಮೇಲೆ ಗಾಢವಾಗಿ ಆಗಿದ್ದುದರಿಂದ ಅವರು ಸಹಸ್ರಾರು ವಚನಗಳನ್ನು ಬರೆದರೂ ಹಳೆಯ ವಚನಗಳ ಮೈಕಟ್ಟಿನಲ್ಲಿಯೇ ಬರೆದಿದ್ದಾರೆ. ಆ ಚೌಕಟ್ಟನ್ನು ಅವರು ಮೀರಿದುದಿಲ್ಲ. ಅದರ ಪರಿಧಿಯಲ್ಲಿಯೇ ವೈವಿಧ್ಯಮಯವಾದ ವಚನಗಳನ್ನು ರಚಿಸಿದುದು ಅವರದೇ ಆದ ಒಂದು ವೈಶಿಷ್ಟ್ಯ.

ಹಿಂದಿನವರ ವಚನಗಳಿಗೆಲ್ಲ ತತ್ವವೇ ವಸ್ತುವಾಗಿದ್ದರೆ ಶ್ರೀಗಳವರ ವಚನಗಳಿಗೆ ತತ್ವಗಳಷ್ಟೇ ಅಲ್ಲದೆ ವಿಜ್ಞಾನವೂ ವಸ್ತುವಾಗಿರುವುದು ಹೊಸತನದ ನಿದರ್ಶನವಾಗಿದೆ. ಸಮಕಾಲೀನ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳನ್ನು ಒಳಗೊಂಡಿವೆ. ಸ್ವಾಮಿಗಳಾಗಿ ಕೇವಲ ಧರ್ಮವನ್ನು ಮಾತ್ರ ಬೋಧಿಸದೆ ಸಾಹಿತಿಯಾಗಿ ಯುಗಧರ್ಮದ ಯತಾರ್ಥ ಚಿತ್ರಣವನ್ನು ನೀಡಿದ್ದಾರೆ. ಅಂತೆಯೇ ಅವರ ವಚನಗಳು ವಿಶಾಲಾರ್ಥದಲ್ಲಿಯೂ ಯುಗ ವಚನಗಳೆಂದು ಸಾರ್ಥಕಗೊಂಡಿವೆ.

ಶ್ರೀಗಳವರು ಆರುಸಾವಿರಕ್ಕೂ ಹೆಚ್ಚು ವಚನಗಳನ್ನು ರಚಿಸಿ ದಾಖಲೆ ನಿರ್ಮಿಸಿದುದಲ್ಲದೆ ತಮ್ಮನ್ನು ಅನುಸರಿಸಿದ ನೂರಾರು ಜನರಿಂದ ವಚನರಚನೆಯಾಗುವಂತೆ ಪ್ರಭಾವ ಬೀರಿದ್ದಾರೆ. ಉದಯೋನ್ಮುಖ ವಚನಕಾರರ ಕೃತಿಗಳನ್ನು ಸ್ವಂತ ವೆಚ್ಚದಲ್ಲಿ ಪ್ರಕಟಿಸಿದ್ದಾರೆ. ವಚನ ಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಿದ ಅವರು ಆಧುನಿಕ ವಚನ ಸಾಹಿತ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಕಾರ್ಯನಿರ್ಮಿತಿಗೆ ಕಾರಣರಾಗಿದ್ದಾರೆ.

ಚನ್ನಬಸವದೇವರು :

ಮಠಾಧೀಶ ವಚನಕಾರರ ಮಾಲಿಕೆಯಲ್ಲಿ ಅಥಣಿ ಮೋಟಗಿ ಮಠದ ಶ್ರೀ ಚನ್ನಬಸವದೇವರೂ ಒಬ್ಬರು. ವಚನ ಮಾರ್ಗದಲ್ಲಿ ತಮ್ಮದೇ ಆದ ದಿಟ್ಟ ಹೆಜ್ಜೆಯನ್ನಿಟ್ಟಿದ್ದಾರೆ. ಅವರ 'ವಚನ ಚೈತ್ರ', 'ವಚನ ತರಂಗ', ಕೃತಿಗಳು ಉಲ್ಲೇಖನೀಯ. ಔಚಿತ್ಯಪೂರ್ಣವಾದ 'ಅಥಣೀಶ' ಅಂಕಿತದ ಇವರ ವಚನಗಳಲ್ಲಿ ಪ್ರಾಸಾನುಪ್ರಾಸಗಳ ಸೊಗಸು, ಉಪಮೆಗಳ ಸರಮಾಲೆ ಹೃದ್ಯವಾಗಿವೆ.

ಸಮಾಜದಲ್ಲಿ ಸಭ್ಯತೆಯ ಸೋಗಿನಲ್ಲಿ ನಡೆಯುವ ವಿವಿಧ ಬಗೆಯ ಶೋಷಣೆಗಳನ್ನು ನಿರ್ಭಿಡೆಯಿಂದ ಬಯಲಿಗೆಳೆದು ಖಂಡಿಸುವಲ್ಲಿ ಹಿಂಜರಿದಿಲ್ಲ. ಗೊಡ್ಡು ಸಂಪ್ರದಾಯ, ಮೂಢನಂಬಿಕೆಗಳ ವಿರುದ್ಧ ಸಿಡಿದೆದ್ದ ಪ್ರಗತಿಪರ ವಿಚಾರಧಾರೆಯ ತೇಜಸ್ವೀ ತರುಣ ಯತಿಯ ಅಭಿವ್ಯಕ್ತಿಗೆ ವಚನ ಮಾಧ್ಯಮವಾದುದು ಅತ್ಯಂತ ಸೂಕ್ತ.

ಒಂದು ವಚನ ಗಮನಿಸಬಹುದು :

ಭೂಷಣವಿಲ್ಲದ ಭಾಷಣಗಳು
ಉಪಯುಕ್ತವಲ್ಲದ ಉಪದೇಶಗಳು
ಸಂಯಮವಿಲ್ಲದ ಸನ್ಮಾನಗಳು
ಅನುಸರಣೆಯಿಲ್ಲದ ಆಶ್ವಾಸನೆಗಳು
ಹದ್ದು ಮೀರಿದ ಹೊಗಳಿಕೆಗಳು
ಮಿತಿ ಮೀರಿದ ಸಮಾರಂಭಗಳು
ಇಷ್ಟೆಲ್ಲ ನಮ್ಮ ಸಮಾಜದ ಅರ್ಥಹೀನ
ಆಚರಣೆಗಳೆಂದ ಅಥಣೀಶ.

ವೈಶಿಷ್ಟ್ಯಗಳು :

೧. ವೀರಭದ್ರನ ಗುಗ್ಗುಳದಲ್ಲಿ ಪುರವಂತರು ಷಣ್ಮುಖ ಶಿವಯೋಗಿಗಳ ಅಖಂಡೇಶ್ವರ ವಚನಗಳನ್ನು, ಅಂಬಿಗರ ಚೌಡಯ್ಯನ ವಚನಗಳನ್ನು ಉಗ್ಗಡಿಸುವಂತೆ ಆಧುನಿಕ ವಚನಕಾರ ಆದಿ ಅಮಾತೆಪ್ಪನವರ ವಚನಗಳನ್ನು ಬಳಸುತ್ತಿರುವರು.

೨. ವಚನ ಮಾಧ್ಯಮದಲ್ಲಿ ಅನುವಾದಗಳು ಬಂದಿವೆ. ಸಂಸ್ಕೃತದ ' ಸಿದ್ಧಾಂತ ಶಿಖಾಮಣಿ 'ಯು ಜ.ಚ.ನಿ.ಯವರಿಂದ ' ಮಣಿ ವಚನಗಳು ' ಆಗಿ ಮಾರ್ಪಟ್ಟಿದೆ. ಎಚ್. ಗಂಗಾಧರನ್ ಅವರು ' ಮಾಂಡೂಕ್ಯೋಪನಿಷತ್'ನ್ನು ವಚನ ಮಾಧ್ಯಮದಲ್ಲಿ ಕನ್ನಡಕ್ಕೆ ತಂದಿದ್ದಾರೆ.

೩. ವಚನಗಳಲ್ಲಿ ಜೀವನ ಚರಿತ್ರೆ ರಚಿತವಾದುದು ಈ ಯುಗದ ವೈಶಿಷ್ಟ್ಯ. ಕನ್ನಡ ಸಾಹಿತ್ಯದಲ್ಲಿ ವ್ಯಕ್ತಿಚರಿತ್ರೆಗಳು ಪದ್ಯದಲ್ಲಿ ಬಂದಿವೆ. ಗದ್ಯದಲ್ಲಿ ಬಂದಿವೆ. ಆದರೆ ವಚನ ಮಾಧ್ಯಮದಲ್ಲಿ ಬಂದುದಿಲ್ಲ. ಶ್ರೀಮತಿ ಗು. ಶಂಕರಮ್ಮನವರು ಶ್ರೀ ಜ.ಚ.ನಿ.ಯವರ ಕುರಿತು ' ಜ.ಚ.ನಿ. ಜೀವನ ವಚನ ' ರಚಿಸಿದ್ದಾರೆ. ಜ.ಚ.ನಿ.ಯವರು ತಮ್ಮ ಗುರುಗಳಾದ ಗಿರಿಯಾಪುರದ ಶ್ರೀ ಸದಾಶಿವ ಶಿವಾಚಾರ್ಯರ ಕುರಿತು ' ಸದಾಶಿವ ಸೂಳ್ನುಡಿ ' ಪ್ರಕಟಿಸಿದ್ದಾರೆ. ಹೀಗೆ ಆಧುನಿಕ ವಚನಕಾರರಾದ ಗುರು-ಶಿಷ್ಯರಿಬ್ಬರ ಬದುಕು ವಚನಗಳಿಗೆ ವಸ್ತುವಾದುದು ಅವರ ಪವಿತ್ರ ಜೀವನದ ಪ್ರತೀಕವಾಗಿದೆ.

ಯಲ್ಲಪ್ಪ ಹಲಕುರ್ಕಿಯವರು ಡಾ. ಪಂಚಾಕ್ಷರಿ ಹಿರೇಮಠ ಅವರ ಕುರಿತು ' ವಚನ ಪಂಚಾಕ್ಷರಿ ', ಶ್ರೀ ರುದ್ರಮುನಿಸ್ವಾಮಿಗಳ ಕುರಿತು ' ರುದ್ರ ಪ್ರಭೆ ' ಹಾಗೂ ಡಾ. ಸಂಗಮೇಶ ಹಂಡಿಗಿಯವರ ಕುರಿತು ' ವಚನ ಸಂಗಮೇಶ ' ಅಪ್ರಕಟಿತ ಕೃತಿಗಳನ್ನು ರಚಿಸಿದ್ದಾರೆ.

ಡಾ. ಸಂಗಮೇಶ ಹಂಡಿಗಿಯವರು ಚಿಕ್ಕೇನಕೊಪ್ಪದ ಶ್ರೀ ಚನ್ನವೀರ ಶರಣರ ಕುರಿತು ' ಶರಣಾನುಭಾವ ' ಕೃತಿ ರಚಿಸಿದ್ದಾರೆ.

೪. ಕೆಲವರ ವಚನಗಳು ಇಂಗ್ಲೀಷಿಗೆ ಅನುವಾದವಾಗಿವೆ :

ಜ.ಚ.ನಿ.ಯವರ Banquet of sayings (೧೯೬೭)
ಅನು : ಗುಂಡ್ಲು ಚನ್ನಶಂಕರಪ್ಪ.

Stream of thoughts (೧೯೮೪)
ಅನು : ಎಸ್. ಶ್ರೀಕಂಠಸ್ವಾಮಿ.

ಮೂಜಗಂ ಅವರ Heart's Blossoms (೧೯೭೪)
ಅನು : ಪ್ರೊ. ಅರ್ಮ್ಯಾಂಡೋ ಮೆನೆಜಿಸ್ ಹಾಗೂ ಎಸ್. ಎಂ. ಅಂಗಡಿ

ವಿ. ಕೃಷ್ಣಶೆಟ್ಟಿ ಅವರ Snakes and Ladders (೧೯೮೨)
ಸ್ವತಃ ಲೇಖಕರಾದ ಕೃಷ್ಣಶೆಟ್ಟಿ ಅವರೇ ತಮ್ಮ ವಚನಗಳನ್ನು ಅನುವಾದಿಸಿದ್ದಾರೆ.

ಯಲ್ಲಪ್ಪ ಹಲಕುರ್ಕಿ ಅವರ Divine Aura (೧೯೮೭)
ಅನು : ಎಸ್. ಎಂ. ಅಂಗಡಿ.

ಮುಂತಾದ ಕೃತಿಗಳನ್ನು ಹೆಸರಿಸಬಹುದು.

೫. ಮಕ್ಕಳ ಕವನ, ಮಕ್ಕಳ ಕತೆಗಳಂತೆ ಮಕ್ಕಳ ವಚನಗಳು ರಚನೆಯಾದುದು ಈ ಯುಗದ ವೈಶಿಷ್ಟ್ಯ.

ರಾಜೇಂದ್ರ ಗಡಾದ ಅವರು 'ದಾರಿದೀಪ' ಎಂಬ ಮಕ್ಕಳ ವಚನ ಸಂಕಲನವನ್ನು 'ರಾಜೇಂದ್ರಪ್ರಿಯ ಪ್ರಭು' ಅಂಕಿತದಲ್ಲಿ ರಚಿಸಿದ್ದಾರೆ.

ಆಧುನಿಕ ವಚನಕಾರರಲ್ಲಿ ಮಹಾಸ್ವಾಮಿಗಳು, ಕವಿ-ಸಾಹಿತಿಗಳು, ಗಮಕಿ-ಗಾಯಕರು, ಶಿಕ್ಷಕರು-ಪ್ರಾಧ್ಯಾಪಕರು, ವೈದ್ಯರು, ವಕೀಲರು, ಕೃಷಿಕರು, ಮಹಿಳೆಯರು, ಹಿರಿಯರು, ಕಿರಿಯರು ಹೀಗೆ ವಿವಿಧ ವೃತ್ತಿಗಳವರು, ವಿವಿಧ ವಯೋಮಾನದವರು ವಚನ ರಚಿಸುತ್ತಿರುವುದು ಆಧುನಿಕ ವಚನ ಸಾಹಿತ್ಯದ ವೈಪುಲ್ಯಕ್ಕೆ, ವೈವಿಧ್ಯಕ್ಕೆ ಕಾರಣವಾಗಿದೆ.

ಡಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಆಧುನಿಕ ವಚನಕಾರ್ತಿಯರು

• ಡಾ. ಗುರುದೇವಿ ಹುಲೆಪ್ಪನವರಮಠ

" The most discussed animal in this universe is woman " ಎಂದು ಆಂಗ್ಲ ಲೇಖಕಿ ವರ್ಜೀನಿಯಾ ವೂಲ್ಫ ಅಭಿಪ್ರಾಯಪಟ್ಟಿರುವಂತೆ ಈ ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಚರ್ಚೆ, ಟೀಕೆ, ವರ್ಣನೆ, ವಿವರಣೆಗೆ ಒಳಗಾದ ಪ್ರಾಣಿಯೆಂದರೆ ಹೆಣ್ಣು. ಅವಳನ್ನು ಕುರಿತು ಎಲ್ಲ ಕಾಲ, ದೇಶ, ಜನಾಂಗದವರು ಸಾಕಷ್ಟು ಆಡಿದ್ದುಂಟು, ಬೇಕಾದಷ್ಟು ಬರೆದಿದ್ದಿದೆ, ಕಲಾಕಾರರು ಅವಳ ರೂಪವನ್ನು ವೈವಿಧ್ಯಮಯ ಭಂಗಿ, ವರ್ಣಗಳಲ್ಲಿ ಚಿತ್ರಿಸಿದ್ದುಂಟು. ಕಲೆ, ಸಾಹಿತ್ಯ ಕೃಷಿಗೆ ಸ್ಫೂರ್ತಿಯ ನೆಲೆಯಾದ ಆಕೆ ತನ್ನನ್ನು ಕುರಿತು ತನಗನ್ನಿಸಿದ್ದನ್ನು ಎಲ್ಲಿಯೂ ಹೇಳಲಿಲ್ಲ. ನಾಲ್ಕುಗೋಡೆಗಳಮಧ್ಯ ಪತಿಸೇವೆ, ಮಕ್ಕಳು-ಮರಿ ಪಾಲನೆ, ಪೋಷಣೆ ಗೃಹಕೃತ್ಯಗಳಲ್ಲಿ ತೊಡಗಿ ಕೋಣೆಯ ಕೂಸಾಗಿ ಉಳಿದ ಅವಳು ಯಾರೆದುರು ಏನು ಹೇಳಿಯಾಳು ? ಅದನ್ನೇ ಶೆಕ್ಸಪೀಯರನ ನಾಟಕದ ದೊರೆ " What is the history of woman ?" ಎಂದು ಕೇಳುತ್ತಾನೆ. ವಾಯೋಲಾ ಅನ್ನುವ ವ್ಯಕ್ತಿ ಆ ಪ್ರಶ್ನೆಗುತ್ತರವಾಗಿ " Blank, my lord blank !" ಎಂದುತ್ತರಿಸುತ್ತಾನೆ. ಮಹಿಳೆಯರದು ಖಾಲೀಪುಟಗಳ ಇತಿಹಾಸ. ಕನಸು ಕಲ್ಪನೆ, ಮಧುರಭಾವಗಳ ಮೂಟೆಯಾದ ಆಕೆಗೆ ಪುರುಷ ಪ್ರಧಾನ ಸಮಾಜದಲ್ಲಿ ಕೊರಳದನಿಯನ್ನೇ ನೀಡಲಿಲ್ಲ. ಅವಳ ಅನಿಸಿಕೆಗಳಿಗೆ ಶಬ್ದರೂಪ ಕೊಡುವ ಸ್ವಾತಂತ್ರ್ಯವನ್ನೇ ಅವಳಿಗೆ ಕೊಡಲಿಲ್ಲ.

ಶತ ಶತಮಾನಗಳಿಂದ ಬಾಯಿಕಟ್ಟಿದ ಮಹಿಳೆ ಮೊಟ್ಟಮೊದಲ ಸಲ ಬಾಯ್ಬಿಟ್ಟು ತನ್ನೊಳಗಿರುವದನ್ನು ನಿರ್ಭಿಡೆ, ನಿರ್ಭಯ ನಿರಾತಂಕದಿಂದ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಜಗತ್ತಿನ ಇತಿಹಾಸದಲ್ಲಿಯೇ ಮೊದಲು ಕಲ್ಪಿಸಿಕೊಟ್ಟವರು ಹನ್ನೆರಡನೆಯ ಶತಮಾನದ ಶರಣರು. ದಿವ್ಯನಿರ್ಲಕ್ಷ್ಯ, ಉಪೇಕ್ಷೆ, ಅವಹೇಳನಕ್ಕೆ ಒಳಗಾಗಿದ್ದ ಮಹಿಳೆಯನ್ನು ಸಹಾನುಭೂತಿಯಿಂದ ಕಂಡ ಶರಣರು ಆಕೆಯನ್ನು ಕಲ್ಯಾಣಪಟ್ಟಣದ ಅನುಭವ ಮಂಟಪಕ್ಕೆ ಆಹ್ವಾನಿಸಿದರು. ತಮ್ಮ ಸರಿಸಮಾನ ಸ್ಥಾನದಲ್ಲಿ ಕೂಡ್ರಿಸಿಕೊಂಡರು. ಆಕೆ ತನ್ನೊಳಗಿನ ಭಾವ, ಅನಿಸಿಕೆಗಳಿಗೆ ಶಬ್ದರೂಪ, ದನಿರೂಪ ನೀಡುವ ಅವಕಾಶ ಕಲ್ಪಿಸಿದರು. ಆಕೆ ಆಡಿದ್ದನ್ನು ಅನುನಯದಿಂದ

ಆಲಿಸಿದರು. ಬರೆದದ್ದನ್ನು ತಾಳ್ಮೆವಹಿಸಿ ಆಲಿಸಿ ತಿದ್ದಿ ಪ್ರೋತ್ಸಾಹಿಸಿದರು. ಅನೇಕ ಮಹಿಳೆಯರು ತಮ್ಮ ಸುಪ್ತಶಕ್ತಿ, ಪ್ರತಿಭೆ, ವೈಚಾರಿಕ, ಎತ್ತರ ಚಿತ್ರಗಳನ್ನು ವಚನ ರಚನೆಯ ಮೂಲಕ ಪ್ರಚುರಪಡಿಸಿದ್ದು ಮಹಿಳೆಯರ ಇತಿಹಾಸದ ಮಹತ್ವದ ಮೈಲುಗಲ್ಲು. ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು ಶರಣೆಯರು ಗೀತಮಾತೆಂಬ ಜ್ಯೋತಿಗಳನ್ನು ಹಚ್ಚಿ ಇಟ್ಟರು. ಶರಣೆಯರ ವಚನಗಳು ಸ್ತ್ರೀ ಅಭಿವ್ಯಕ್ತಿಯ ಮೊದಲ ಲಿಖಿತ ಮಾದರಿಗಳಾದವು. ಅಂದಿನ ಸ್ತ್ರೀ ವಿರೋಧಿ ವ್ಯವಸ್ಥೆಯ ಸಂದರ್ಭದಲ್ಲಿ ಮಹಿಳೆಯರ ಸೃಜನಶೀಲ ಪ್ರತಿಭೆ ಮತ್ತು ವೈಚಾರಿಕ ಬೆಳವಣಿಗೆಯನ್ನು ಪ್ರತಿಷ್ಠಾಪಿಸುವ ಅಸಾಮಾನ್ಯ ಸಾಧನೆಗಳಾದವು. ಶರಣರ ಕಾಲದಲ್ಲಿ ದುಂದುಭಿ ಮೊಳಗಿಸಿದ ಮಹಿಳಾ ಸೊಲ್ಲು ಮುಂದಿನ ಶತಮಾನಗಳಲ್ಲಿ ಕೇಳಿಸುವದಿಲ್ಲ. ಸಾಹಿತ್ಯ ಮತ್ತು ಸಮಾಜದ ಪ್ರಮುಖವಾಹಿನಿಯಿಂದ ದೂರವಾಗಿದ್ದ ಮಹಿಳೆಯರಿಗೆ ಇಪ್ಪತ್ತನೆಯ ಶತಮಾನದಲ್ಲಿ ದೊರೆತ ಶೈಕ್ಷಣಿಕ, ಔದ್ಯೋಗಿಕ ಸೌಲಭ್ಯ, ಸ್ತ್ರೀ ಪರಚಿಂತನ, ಹೋರಾಟಗಳು ವೈಜ್ಞಾನಿಕ ಹಾಗೂ ವೈಚಾರಿಕ ನೆಲೆಗಳನ್ನು ಒದಗಿಸಿದವು. ಹಾಗಾಗಿ ಅವರ ಬೌದ್ಧಿಕ ಚಟುವಟಿಕೆಗಳು ಮತ್ತೆ ಚುರುಕುಗೊಂಡವು.

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಕತೆ, ಕಾದಂಬರಿ, ಕಾವ್ಯಸೃಷ್ಟಿಯ ಮೂಲಕ ಸಾರಸ್ವತಲೋಕಕ್ಕೆ ಮಂಗಳ ಪ್ರವೇಶ ಮಾಡಿರುವ ಮಹಿಳೆಯರು ಸಾಮಾಜಿಕ ಮತ್ತು ಸಾಹಿತ್ಯಿಕ ಚಳುವಳಿಗಳ ಪ್ರಯೋಗಶೀಲ ನೆಲೆಗಳಿಂದ ಉತ್ತೇಜನ ಪಡೆದುಕೊಂಡು ಗಂಭೀರ ಸಾಹಿತ್ಯ ರಚನೆಗೆ ತೊಡಗಿರುವರು ಎನ್ನುವ ಡಾ. ಶಾಂತಾ ಇಮ್ರಾಪೂರ ಅವರ ಅಭಿಪ್ರಾಯವು ಅರ್ಥಗರ್ಭಿತವಾಗಿದೆ. ಹನ್ನೆರಡನೆಯ ಶತಮಾನದ ಶರಣೆಯರ ವಚನಗಳ ಬಂಧ, ವಸ್ತುವಿಷಯ, ರಾಚನಿಕ ವಿಧಾನ ಹಾಗೂ ಶೈಲಿಯಿಂದ ಪ್ರಭಾವಿತರಾದ ಇಂದಿನ ಅನೇಕ ಲೇಖಕಿಯರು ಶರಣೆಯರ ವಚನಗಳ ಮಾದರಿಯಲ್ಲೇ ವಚನ ರಚನೆ ಮಾಡಿದ್ದುಂಟು. ಧರ್ಮ, ತತ್ವ, ನೀತಿ, ಆಚಾರ ಪ್ರತಿಪಾದನೆಗಳೇ ಪ್ರಧಾನವಾಗಿರುವ ಇಂದಿನ ವಚನಕಾರ್ತಿಯರ ವಚನಗಳಲ್ಲಿ ಸಾಂಪ್ರದಾಯಿಕ ನಿರೂಪಣೆ ಕಂಡುಬರುತ್ತದೆ. ವಚನ ಚಳುವಳಿಯ ಮೌಲ್ಯಾದರ್ಶಗಳ ಮುಖವಾಣಿಯಾಗಿ ಚಿಮ್ಮಿದ ವಚನಪ್ರಕಾರವು ಅಂದು ಶರಣಧರ್ಮದ ಅನುಯಾಯಿಗಳನ್ನು ಮಾತ್ರ ಆಕರ್ಷಿಸಿದರೆ ಆಧುನಿಕ ಕಾಲದಲ್ಲಿ ವಿಭಿನ್ನ ಲೇಖಕಿಯರನ್ನು ಆಕರ್ಷಿಸಿರುವುದು ವಿಶೇಷವಾಗಿದೆ.

ಶರಣರ ವಚನ ರಚನೆಗಳ ಸಿದ್ಧಮಾದರಿಗಳನ್ನೇ ಬಹುಮಟ್ಟಿಗೆ ಹೋಲುವ ಆಧುನಿಕ ವಚನಕಾರ್ತಿಯರ ವಚನಗಳು ಮುಕ್ತಛಂದಸ್ಸಿನಲ್ಲಿದ್ದು ಸರಳತೆಯಿಂದ ಸುಶೋಭಿತವಾಗಿವೆ.

ಕಳೆದ ನಾಲ್ಕು ದಶಕಗಳಲ್ಲಿ ವಚನ ರಚನೆ ಮಾಡಿದ ಲೇಖಕಿಯರ ಸಂಖ್ಯೆ ಸರಿಸುಮಾರು ನೂರರಷ್ಟಿದ್ದರೂ ಸ್ವತಂತ್ರ ವಚನ ಸಂಕಲನ ಪ್ರಕಟಿಸಿದವರಲ್ಲಿ ಈ ಮುಂದಿನವರು ಪ್ರಮುಖರು : ಶ್ರೀಮತಿ ಗು. ಶಂಕರಮ್ಮ 'ನುಡಿಗಟ್ಟು' (೧೯೮೮) 'ಜ.ಚ.ನಿ. ಜೀವನ ವಚನ' (೧೯೬೦), ಶ್ರೀಮತಿ ಓಂಕಾರಮ್ಮ 'ಓಂಕಾರದ ವಚನಗಳು'

(೧೯೬೪), ಮಾತೆ ಮಹಾದೇವಿ ' ಮಾತೃವಾಣಿ ' (೧೯೫೬), ಶಿವಲಿಂಗಮ್ಮ ಕಟ್ಟಿ ' ಕರುಣಕಿರಣ ' (೧೯೭೫), ' ಸೂಳ್ನುಡಿ ಕೈವಾರಿ ' (೧೯೯೧) ' ಬೆಳಗಿನೆಡೆಗೆ ' (೧೯೮೮), ' ಶಿಶುನಾಳ ಶಿಶು ' (ಅಚ್ಚಿನಲ್ಲಿ) ' ಶಾಂತಲಿಂಗೇಶ್ವರ ನೂರೆಂಟು ವಚನಗಳು ' (ಅಚ್ಚಿನಲ್ಲಿ) ' ವಾಣಿ ನವನೀತ ' (೧೯೮೦) ಡಾ. ಕಮಲಾ ಹಂಪನಾ ' ಬಿಂದಲಿ ' (೧೯೮೪), ಗುರುದೇವಿ ಹಿರೇಮಠ ' ವಚನಾಂಜಲಿ ' (೧೯೮೪), ಶಿವಲೀಲಾ ಹಂಡಿಗಿ ' ಸೂಳ್ನುಡಿ ಸುಯ್ದಾನ ' ಜಯಶ್ರೀ ದಂಡೆ ' ಸ್ವಭಾವದ ವಚನಗಳು ' (೧೯೯೪), ಲೀಲಾ ಕಲಕೋಟಿ ' ವಚನ ವಲ್ಲರಿ ' (೧೯೯೬), ' ಚನ್ನಧರಾ ' (೧೯೯೯). ಡಾ. ಶಶಿಕಲಾ ಉಡಚಣ ' ಕೇಳುಮಗಾ ' (೧೯೯೭).

ಸ. ಉಷಾ, ಸೀತಾಬಾಯಿ ಗಾಂವಕರ, ಎಚ್. ಆರ್. ಲೀಲಾವತಿ, ಶಾಂತಕ್ಕ ಮಠದ, ಗಂಗಮ್ಮ ಹೊಸಮನಿ, ಪ್ರೇಮಾ ನಡಕಟ್ಟಿ, ರಾಧಾ ಶ್ಯಾಮರಾವ್, ಅನುರಾಧಾ ಕುಲಕರ್ಣಿ, ನಿರ್ಮಲಾ ಮೃತ್ಯುಂಜಯಸ್ವಾಮಿ, ಪ್ರೊ. ಲಲಿತಾಂಬ ವೃಷಭೇಂದ್ರಸ್ವಾಮಿ, ಶೈಲಾ ಛಬ್ಬಿ ಮುಂತಾದವರು ಅನೇಕ ಬಿಡಿವಚನಗಳನ್ನು ಬರೆದಿದ್ದಾರೆ.

ಲಭ್ಯ ಆಕರಗಳ ಆಧಾರದ ಮೇಲೆ ಹೇಳುವುದಾದರೆ ಕ್ರಿ. ಶ. ೧೯೫೮ ರಲ್ಲಿ ಪ್ರಕಟವಾದ ಗು. ಶಂಕರಮ್ಮನವರ ವಚನ ಸಂಕಲನ 'ನುಡಿಗಟ್ಟು' ಆಧುನಿಕ ವಚನಕಾರ್ತಿಯರ ಮೊದಲ ರಚನೆ. ೧೯೫೦-೭೦ ರ ಅವಧಿಯಲ್ಲಿ ರಚಿತವಾದ ವಚನಗಳಲ್ಲಿ ದೇವರು, ಧರ್ಮ, ತತ್ವ, ನೀತಿ, ಆಚಾರ, ಭಕ್ತಿ ಇತ್ಯಾದಿ ಅಂಶಗಳು ಪ್ರಧಾನವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಅನಂತರದ ವಚನಗಳಲ್ಲಿ ಸ್ವಾನುಭವ ಶೋಧನೆ, ದೈನಂದಿನ ಆಗುಹೋಗುಗಳ ವಿಶ್ಲೇಷಣೆ, ನಾಗರಿಕ ಬದುಕಿನ ವಿಕ್ಷಿಪ್ತತೆ, ಸಾಮಾಜಿಕ ಕೌಟುಂಬಿಕ ಸಮಸ್ಯೆಗಳು ಸ್ತ್ರೀ ಪರಚಿಂತನೆಗಳ ವಿವರಣೆ ಇದೆ. ೧೯೬೪ ರಲ್ಲಿ ' ಓಂಕಾರದ ವಚನಗಳು ' ಎನ್ನುವ ವಚನ ಸಂಕಲನ ಪ್ರಕಟಿಸಿರುವ ಶ್ರೀಮತಿ ಓಂಕಾರಮ್ಮನವರು ಸಮಾನತೆ, ಸ್ವಾತಂತ್ರ್ಯ, ಸ್ವಾವಲಂಬನೆಯ ಹೋರಾಟದಲ್ಲಿರುವ ಮಹಿಳೆಯು ಬದಲಾವಣೆ ಕಾಣದ ಸಾಮಾಜಿಕ, ಕೌಟುಂಬಿಕ ವ್ಯವಸ್ಥೆಯಲ್ಲಿ ಅನುಭವಿಸುವ ಸಂದಿಗ್ಧತೆ, ಚಿಂತೆ, ಸ್ತ್ರೀ ವಿರೋಧಿ ನೀತಿಯ ಕರಾಳ ಸ್ವರೂಪ ಮುಂತಾದ ಅಂಶಗಳನ್ನು ಅನೇಕ ವಚನಗಳಲ್ಲಿ ಪ್ರಸ್ತಾಪಿಸಿದ್ದುಂಟು. ಉದಾ :- '' ಶಿಶುಹತ್ಯೆ, ಸ್ತ್ರೀಹತ್ಯೆ, ಗೋಹತ್ಯೆ, ಬ್ರಹ್ಮಹತ್ಯೆ ಮಹಾಪಾಪವೆಂದು ಹಿಂದಿನ ಮಹಾತ್ಮರ ವಾಣಿಯ ಸುಳ್ಳುಮಾಡಿ ವಿಜ್ಞಾನದ ಸೌಲಭ್ಯದ ಬೆನ್ನು ಹತ್ತಿ ಗರ್ಭಹರಣ ಮಾಡಿಸಿಕೊಂಡು ದಿನನಿತ್ಯ ವೈದ್ಯರಾಶ್ರಮಕ್ಕೆ ಮಿತಿಯಿಲ್ಲದಾಗಿದೆ. ಕಂಡಯ್ಯಾ ಓಂಕಾರ ಗುರು ಶ್ರೀ ಜ.ಚ.ನಿ. ಗುರುವರ.

ಧರ್ಮಶಾಸ್ತ್ರಗಳು ' ಶಿಶುಹತ್ಯೆ, ಸ್ತ್ರೀ ಹತ್ಯೆಗಳು ಮಹಾಪಾಪವೆಂದು ಸ್ಪಷ್ಟಪಡಿಸಿದ್ದರೂ ಗಂಡುಮಗುವಿನ ಜನನವನ್ನು ಅಪೇಕ್ಷಿಸುವ, ಆ ಮೂಲಕ ಲಿಂಗ ತಾರತಮ್ಯವನ್ನು ಪುರಸ್ಕರಿಸುವ ವ್ಯವಸ್ಥೆಯ ಒಂದು ಭಾಗವಾಗಿ ಹೆಣ್ಣು ಭ್ರೂಣಹತ್ಯೆಯು ವೈದ್ಯ ವಿಜ್ಞಾನದ ಬೆಳವಣಿಗೆಯ ನೆರವಿನೊಂದಿಗೆ ಕಲಿತ, ಕಲಿಯದ ಜನರಿಬ್ಬರಿಂದಲೂ ನಿರಾತಂಕವಾಗಿ ನಡೆದಿರುವ ಕುರಿತು ಲೇಖಕಿ ತಮ್ಮ ಮನದಾಳದ ಹಳಹಳಿ ವ್ಯಕ್ತಪಡಿಸುತ್ತಾರೆ.

ಪುರುಷಾರ್ಥಗಳಲ್ಲಿ ಒಂದಾದ 'ಕಾಮ'ದ ತೃಪ್ತಿಗೆ ಸಾಮಾಜಿಕ ಸ್ವಾಸ್ಥ್ಯಕ್ಕೆ, ಜನಾಂಗವರ್ಧನೆಗೆ, ಕುಟುಂಬ ಜೀವನದ ಅಂದ ಆನಂದಗಳ ಆಸ್ವಾದನೆಗೆ ಓರಿಯರು. ಧರ್ಮಶಾಸ್ತ್ರಗಳು ಕಲ್ಪಿಸಿರುವ ವ್ಯವಸ್ಥೆ, ಮದುವೆ. ಹೆಗಲಿಗೆ ಹೆಗಲು ನೀಡಿ ಬದುಕ ತೇರನ್ನು ಎಳೆಯಬಂದ ನವವಧುವನ್ನು ಹಣಕ್ಕಾಗಿ ಹೆಣವಾಗಿಸುವ ಜೀವವಿರೋಧಿ ಕ್ರಿಯೆಯನ್ನು ಹೀಗಳೆದ ಲೇಖಕಿಯರು ಹಲವಾರು. ಮಹಿಳೆಯರ ಈ ಜ್ವಲಂತ ಸಮಸ್ಯೆಗೆ ಡಾ. ಕಮಲಾ ಹಂಪನಾ ಸ್ಪಂದಿಸಿದ್ದು ಹೀಗೆ :

ಅಕ್ಷತೆ ಸುರಿವ ಕೈಯ್ಯಲ್ಲೇ
ಸೀಮೆ ಎಣ್ಣೆ ಸುರಿವರಯ್ಯಾ
ಅರಿಷಿಣ ಹಚ್ಚಿದ ಕೈಯಿಂದಲೇ
ಬೆಂಕಿ ಹಚ್ಚಿ ಸುಡುವರಯ್ಯ
ವಧು ಮಾಡಿ ಮನೆ ತುಂಬಿಸಿಕೊಂಡವರೇ

ಹೆಣ ಮಾಡಿ ಆಚೆ ಸಾಗಿಸುವರಯ್ಯ ಕಮಲಾಪ್ರಿಯಾ

ಸಾವಿರ ವರ್ಷದ ಸಂಬಂಧವೆಂದು ಕರೆಯಲ್ಪಡುವ ವೈವಾಹಿಕ ಜೀವನದಲ್ಲಿ ಪತಿಪತ್ನಿಯರ ನಡುವೆ ಕ್ಷುಲ್ಲಕ ಕಾರಣಗಳಿಂದಾಗಿ ಪರಸ್ಪರ ತಿಳುವಳಿಕೆ, ಪ್ರೀತಿಗಳು ಮಾಯವಾಗುತ್ತಿರುವದುಂಟು. ಪತಿಪತ್ನಿಯರೀರ್ವರೂ ಕ್ಷುಲ್ಲಕಕಾರಣಗಳಿಂದಾಗಿ ಬೇರ್ಪಡುತ್ತಿರುವ ಸ್ಥಿತಿಗೆ ಲೀಲಾ ಕಲಕೋಟಿಯವರು ಆಘಾತ, ಅಚ್ಚರಿ ವ್ಯಕ್ತಪಡಿಸಿದ್ದು ಹೀಗೆ :

ಸತಿಯಲ್ಲಿ ಪತಿಗೆ ಧರ್ಮವಿಲ್ಲ
ಪತಿಯಲ್ಲಿ ಸತಿಗೆ ಧರ್ಮವಿಲ್ಲ
ಇಂದು ಇವರಿಬ್ಬರ ನಡುವೆ
ಡೈವೋರ್ಸವೆಂಬ ಹೊಸ ಧರ್ಮ
ಹುಟ್ಟಿಕೊಂಡಿದೆಯಲ್ಲಯ್ಯಾ.... ಹೇ ಚೆನ್ನಲೀಲಾಧರಾ !

ತಮ್ಮತನದ ಎಚ್ಚರವುಳ್ಳ ಲೇಖಕಿಯರ ವಚನಗಳಲ್ಲಿ ವ್ಯಕ್ತವಾಗಿರುವ ಸ್ತ್ರೀ ಸಂವೇದನೆ, ಹೆಚ್ಚು ಸೂಕ್ಷ್ಮವಾಗಿ ಬದುಕನ್ನು ಪರಾಮರ್ಶಿಸಿದೆ. ಸ್ತ್ರೀ-ಪುರುಷರ ಸಂಬಂಧಗಳ ಸಮಾನ ನೆಲೆಗಳನ್ನು, ವೃತ್ತಿಪರಬದುಕಿನ ಒತ್ತಡ, ತೋಳಲಾಟಗಳನ್ನು ಅಭಿವ್ಯಕ್ತಿಸುವ ಆ ಮೂಲಕ ಸಮಾಜದ ಪಕ್ಷಪಾತ ನಿಲುವನ್ನು ಶಿವಲಿಂಗಮ್ಮ ಕಟ್ಟಿ ಅವರು ನೋವು, ಸಾತ್ವಿಕ ಸಿಟ್ಟುಗಳಿಂದ ಅಭಿವ್ಯಕ್ತಿಸುವುದು ಅತಿ ಮನೋಜ್ಞವಾಗಿದೆ.

ದುಡಿವ ಮಹಿಳೆಯ ಹಣಬೇಕು ಪತಿ-ಪುರುಷಗೆ
ಆಕೆಯ ಹಿತಾಹಿತ ಬೇಡವನಿಗೆ
ಪತ್ನಿ ಉದ್ಯೋಗದೊಳು ಮುಂದುವರೆದು ಕೀರ್ತಿಗಳಿಸೆ
ಸಹಿಸಲಸಾಧ್ಯ ಕಸಿವಿಸಿ ಪತಿದೇವಗೆ....

ಇತ್ಯಾದಿ ಸಾಲುಗಳು ವಚನಕಾರ್ತಿಯರು ದುಡಿವ ಮಹಿಳೆಯ ಅಂತರಂಗದ ತುಮುಲಕ್ಕೆ ಶಬ್ದರೂಪ ನೀಡಿದ ಪರಿಯನ್ನು ಬಿಂಬಿಸುತ್ತದೆ.

ಡಾ. ಶಾಂತಾ ಇಮ್ರಾಪೂರ ಅವರು ಅಭಿಪ್ರಾಯಪಟ್ಟಿರುವಂತೆ ಸಾಂಕೇತಿಕ ನಿರೂಪಣೆ ಮತ್ತು ಧ್ವನಿಪೂರ್ಣತೆಗಿಂತಲೂ ವಿವರಣೆ ವರ್ಣನೆಗಳುಳ್ಳ ಗದ್ಯಾತ್ಮಕ ಸರಳ ರಚನೆಗಳೇ ಅಧಿಕವಾಗಿರುವ ಆಧುನಿಕ ವಚನಕಾರ್ತಿಯರ ವಚನಗಳಲ್ಲಿ ಅನುಭವ, ಪ್ರಾಮಾಣಿಕತೆ ಮತ್ತು ಅರ್ಥಸ್ಪಷ್ಟತೆಯ ಗುಣ ದಟ್ಟವಾಗಿದೆ. ಆತ್ಮಶೋಧನೆಯ ಗಂಭೀರ ಯತ್ನ, ಭಾವಗೀತಾತ್ಮಕ ಗುಣ, ಕಲಾತ್ಮಕ ಅಭಿವ್ಯಕ್ತಿಯುಳ್ಳ ರಸಾದ್ರವಚನಗಳು ವಿರಳವಾಗಿದ್ದರೂ ಸಾಮುದಾಯಿಕ ಕಳಕಳಿ, ಸಾಮಾಜಿಕ ಬದ್ಧತೆ, ಮಾನವೀಯತೆಯ ಹಂಬಲವುಳ್ಳ ಸಹಜಗುಣದಿಂದ ಮೌಲಿಕವೆನಿಸುವ ವಚನಗಳು ವಿಪುಲವಾಗಿವೆ. ಭಾವ ಹಾಗೂ ಭಾಷೆಯ ನಿರೂಪಣೆಯಲ್ಲಿ ಶರಣರ ವಚನಗಳ ನೇರ ಅನುಕರಣೆ ಆಧುನಿಕ ವಚನಕಾರ್ತಿಯರ ವಚನಗಳಲ್ಲಿ ಕಾಣಬಹುದಾಗಿದೆ. ಪದ್ಯ ಪ್ರಕಾರಕ್ಕಿಂತ ವಚನಮಾಧ್ಯಮವು ಆಧುನಿಕ ವಚನಕಾರ್ತಿಯರಿಗೆ ಹೆಚ್ಚು ಅಪ್ಯಾಯಮಾನವೆನಿಸಿದ್ದನ್ನು ಅವರ ವಚನಗಳೇ ತೆರೆದು ತೋರಿಸುತ್ತವೆ. ವಾಸ್ತವದ ಎಲ್ಲ ಪ್ರಕ್ರಿಯೆಗಳಿಗೆ ಅವರ ವೈಯಕ್ತಿಕ ಸ್ಪರ್ಧೆ ಸ್ಪಂದಿಸಿದೆ. ಸ್ತ್ರೀಪರ ಕಾಳಜಿಗೆ ಅವರು ದನಿ ನೀಡಿದ ರೀತಿ ಗಮನಾರ್ಹವಾಗಿದೆ. ಇಂದಿನ ವೈಜ್ಞಾನಿಕ, ವೈಚಾರಿಕ ಜಗತ್ತಿಗೆ ತಮ್ಮನ್ನು ತೆರೆದುಕೊಂಡ ಮಹಿಳೆಯರು ಇನ್ನೂ ಹೆಚ್ಚು ಪ್ರತಿಭೆ, ಅನುಭವ ಸಂಪತ್ತಿನಿಂದ ವೈವಿಧ್ಯಮಯವಾದ ವಸ್ತು ವಿಷಯಗಳಿಗೆ ಸ್ಪಂದಿಸಬಲ್ಲ ಎಲ್ಲ ಸೂಚನೆಗಳೂ ಆಧುನಿಕ ವಚನಕಾರ್ತಿಯರ ವಚನಗಳಲ್ಲಿವೆ.

ಬ. ಗಿ. ಯಲ್ಲಟ್ಟಿಯವರ ' ಬಿಂಬ ' : ಅವಲೋಕನ

● ಜಿ. ಎಸ್. ವಡಗಾಂವಿ

ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳ ಪ್ರಭಾವದಿಂದ ಇಪ್ಪತ್ತನೆಯ ಶತಮಾನದಲ್ಲಿ ಮತ್ತೆ ವಚನಗಳ ಸೃಷ್ಟಿಯಾದಾಗ ಮೊದಮೊದಲಿಗೆ ಆಧುನಿಕರು ಬರೆದವುಗಳನ್ನು ' ವಚನ ' ಎಂದು ಸ್ವೀಕರಿಸುವಲ್ಲಿ ಹಿಂದೇಟು ಹಾಕಿರುವುದನ್ನು ನೋಡಿದ್ದೇವೆ. ಶರಣರು ಬರೆದದ್ದು ಮಾತ್ರ ' ವಚನ ', ಇತ್ತೀಚಿನವರು ಬರೆದವುಗಳು ವಚನವಲ್ಲವೆಂಬ ವಾದವನ್ನು ನಾವು ದಾಟಿ ಈಗ ಬಹಳ ಮುಂದೆ ಬಂದಿದ್ದೇವೆ. ಈ ಲೇಖನದಲ್ಲಿ ' ವಚನ 'ವನ್ನು ಒಂದು ಸಾಹಿತ್ಯ ಪ್ರಕಾರವೆಂದು ಪರಿಭಾವಿಸಲಾಗಿದೆ.

ಸಾಹಿತ್ಯ ಕೃಷಿ ಶರಣರ ಉದ್ದೇಶವಾಗಿರದಿದ್ದರೂ ಅವರು ಕೊಟ್ಟ ವಚನಗಳು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ, ಅನನ್ಯ ಕೊಡುಗೆಯಾದವು. ಕನ್ನಡ ಗದ್ಯ ತನ್ನ ಎಲ್ಲ ಸಾಧ್ಯತೆಗಳನ್ನು ಗಳಿಸಿಕೊಂಡು ವಿಜೃಂಭಿಸಿದ್ದೇ ಅಲ್ಲಿ. ವಚನ ಸಾಹಿತ್ಯದ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸುಲಭಸಾಧ್ಯವಲ್ಲ. ಇವುಗಳಿಂದ ಪ್ರಭಾವಿತರಾಗಿ ಆಧುನಿಕರೂ ವಚನಗಳನ್ನು ರಚಿಸಿದ್ದಾರೆ, ರಚಿಸುತ್ತಿದ್ದಾರೆ. ಪ್ರತಿ ವರ್ಷ ಈ ಪಟ್ಟಿಗೆ ಹೊಸ ಹೆಸರುಗಳು ಸೇರ್ಪಡೆಯಾಗುತ್ತಲೇ ಇವೆ.

ಆಧುನಿಕ ವಚನಕಾರರಲ್ಲಿ ಎಸ್. ವ್ಹಿ. ರಂಗಣ್ಣ, ಮಹದೇವ ಬಣಕಾರ. ಸಿದ್ಧಯ್ಯ ಪುರಾಣಿಕ, ಎಸ್. ವ್ಹಿ ಪರಮೇಶ್ವರ ಭಟ್ಟ, ಕುಮಾರ ಕಕ್ಕಯ್ಯ, ಎಂ. ಬಿ. ಹಾದಿಮನಿ. ಸಂಗಮೇಶ ಹೊಸಮನಿ, ಬ. ಗಿ. ಯಲ್ಲಟ್ಟಿ. ಅಂಬಾತನಯ. ಶ್ರೀಶೈಲ ಜತ್ತಿ. ನಾ. ಚೆ. ಅನ್ನದಾನಯ್ಯ ಪುರಾಣಿಕ, ಬಿ. ಶೇಖರಪ್ಪ ಹೂಲಿಗೇರಿ. ಕೆ. ಭೈರವಮೂರ್ತಿ. ಕೆ. ಅನಂತರಾಮು ಹೀಗೆ ಇನ್ನೂ ಅನೇಕ ಹಿರಿ-ಕಿರಿಯ ವಚನಕಾರರಿದ್ದಾರೆ.

ಶರಣರ ವಚನಗಳು ಷಟಸ್ಥಲದ ಚೌಕಟ್ಟಿನಲ್ಲಿ ಅಳವಡುವಂಥವು. ಬಹುತೇಕ ಆಧುನಿಕ ವಚನಕಾರರಿಗೆ ಈ ಚೌಕಟ್ಟಿನ ನಿರ್ಬಂಧವಿಲ್ಲ. ಶರಣರ ವಚನಗಳಲ್ಲಿ ಅಂತರಂಗಕ್ಕೆ ಹೆಚ್ಚಿನ ಪ್ರಾಧಾನ್ಯ. ಅನುಭವ ಇಲ್ಲಿ ಅನುಭಾವವಾದರೆ. ಆಧುನಿಕರ ವಚನಗಳಲ್ಲಿ ಬಹಿರಂಗಕ್ಕೆ ಒತ್ತು. ಅನುಭವ ಇಲ್ಲಿ ಕಾವ್ಯಾನುಭಾವವಾಗುವುದೇ ಹೆಚ್ಚು.

ಶರಣರ ವಚನಗಳು ಅಂತರ್ಮುಖಿಯಾದರೆ, ಆಧುನಿಕರ ವಚನಗಳು ಬಹಿರ್ಮುಖಿ. ಆಧುನಿಕರ ವಚನಗಳಲ್ಲಿ ವಿಡಂಬನೆಗೆ ಪ್ರಾಧಾನ್ಯತೆ ದಕ್ಕಿದೆ ಅನಿಸುತ್ತದೆ. ಹಿಂದಿನ ವಚನಕಾರರ ವಚನ ವಿನ್ಯಾಸ, ರೂಪ-ರೇಷೆ, ದೃಷ್ಟಾಂತ ಜೋಡಣೆ, ಸ್ವವಿಮರ್ಶೆ, ಸಾಮಾಜಿಕ ಬದ್ಧತೆ ಇವುಗಳನ್ನೆಲ್ಲ ಅಳವಡಿಸಿಕೊಂಡು ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ಸ್ಪಂದಿಸುವ ಆಧುನಿಕ ವಚನಕಾರರ ಸಾಹಿತ್ಯ ಅಧ್ಯಯನ ಯೋಗ್ಯವಾಗಿದೆ.

ಆಧುನಿಕ ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಬ. ಗಿ. ಯಲ್ಲಟ್ಟಿ ಅವರ ' ಬಿಂಬ ' ಕುರಿತು ಪ್ರಸ್ತುತ ಲೇಖನ ಸಿದ್ಧಪಡಿಸಲಾಗಿದೆ.

' ಬಿಂಬ ' ವಚನ ಸಂಕಲನದಲ್ಲಿ ಸ್ವಾನುಭವ (೫೯) ಲೋಕಾನುಭವ (೭೬) ಮತ್ತು ಆತ್ಮಾನುಭವ (೮೨) ಹೀಗೆ ಮೂರು ವಿಭಾಗಗಳಲ್ಲಿ ಒಟ್ಟು ೨೧೭ ವಚನಗಳಿವೆ. ' ಬಿಂಬ 'ದಲ್ಲಿ ಅಂತರಂಗದ ತುಡಿತವಿದೆ. ಇಲ್ಲಿ ಆತ್ಮಾನುಭವ, ಕಾವ್ಯಾನುಭವಾಗಿ ಶಿವಾನುಭವದ ಕಡೆಗೆ ಸಾಗುವ ಪರಿ ಸೊಗಸಾಗಿ ಮೂಡಿಬಂದಿದೆ.

ಬ. ಗಿ. ಯಲ್ಲಟ್ಟಿ ಮೂಲತಃ ಕವಿ, ಹಾಡುವ ಹಕ್ಕಿ, ರಸಿಕ ಪಕ್ಷಿ. ಹಾಡು ಅವರಿಗೆ ಬದುಕು ಕೊಟ್ಟಿದೆ. ಈ ಬರವಣಿಗೆಯಿಂದಲೇ ಅವರಿನ್ನೂ ಬದುಕಿದ್ದಾರೆ.

> ಹಾಡಿ ಹಾಡಿ ಬಳಲುವನ್ನಕ್ಕ ಹಾಡುವೆನಯ್ಯ !
> ಹಾಡಿ ದನಿಬೀಳುವುದೆಂದು
> ಹಾಡಿ ಮನ ಬಳಲುವುದೆಂದು
> ಹಾಡನೇಕೆ ನಿಲ್ಲಿಸಲಯ್ಯ ?
> ಹಾಡಿ ದಣಿವುದಕ್ಕಿಂತ
> ಹಾಡದೆ ಇರುವ ದಣಿವು ತಲೆಭಾರವಯ್ಯ

ಹಾಡಿ ಹಾಡಿ ' ದನಿಬೀಳುತ್ತದೆ '. ' ದನಿ ಕುಂತಿದೆ ' ಎನ್ನುತ್ತಾರೆ ಧಾರವಾಡದ ಕಡೆಗೆ. ಹಾಡದಂತೆ ದನಿ ಬಿದ್ದರೂ ಹಾಡನ್ನು ನಿಲ್ಲಿಸುವುದಿಲ್ಲ ಎನ್ನುವ ಅದಮ್ಯ ಕಾವ್ಯಪ್ರೀತಿ. " ಬಾಯಿಗೆ ಹೊಲಿಸಾಕಿದ್ರುನೂವೆ, ಮೂಗ್ನಿಂದ್ ಮಾತಾಡ್ತೀನಿ, ನನ್ ಮನಸನ್ ನೀ ಕಾಣೆ " ಎನ್ನುವ ರಾಜರತ್ನಂ ಕನ್ನಡ ಪ್ರೇಮದ ತರಹ ಯಲ್ಲಟ್ಟಿಯವರ ಕಾವ್ಯಪ್ರೇಮ.

> ಸಾಹಿತ್ಯ ಸೇವೆಯಲ್ಲಿ ಜಗದಯ್ಯನ ಕಾಣಬೇಕೆಂಬವಗೆ
> ಇದು ಏನು ಹೆಜ್ಜೆಯಿಡಲಾರದಷ್ಟು ಕಲ್ಲು-ಮುಳ್ಳು ರಾಶಿಯಯ್ಯಾ?

ಸಾಹಿತ್ಯ ಸೇವೆ ಅವರಿಗೆ ಉದರಂಭರಣೆಗಾಗಿ ಅಲ್ಲ, ಕೀರ್ತಿ-ಕಾಮನೆಗಾಗಿ ಅಲ್ಲ, ಅನುಭಾವ ಅಂತರಂಗ ಅರಿಯುವ ಸಲುವಾಗಿ.

> ಹಾಡಿನೊಳಗೆ ಜಗವ ಕಂಡು
> ಜಗದೊಳಗೆ ನಿನ್ನ ಕಂಡು
> ಹಾಡಿದಲ್ಲದೆ ನಾನು ಬದುಕಲಾರೆನಯ್ಯ

ಹಾಡಿನಲ್ಲಿ ಪರಮಾತ್ಮನನ್ನು ಕಾಣುವ ಕವಿಯ ಧೋರಣೆ ಹರಿಹರನ ಬದ್ಧತೆಯನ್ನು ನೆನಪಿಸುವಂತಿದೆ.

ಜಗ ಮೆಚ್ಚಲಿ ಮೆಚ್ಚದಿರಲಿ
ಸ್ವಾನುಭವಕೆ ವೇದ್ಯವಾದ ಬಳಿಕ
ಹಾಡದೆ ಇರುವುದೆಂತಯ್ಯ
....
....
ಆತ್ಮ ಸಂತೃಪ್ತಿಗಲ್ಲದೆ ಲೋಕಸಂತೃಪ್ತಿಗೆಂದು
ಕವಿ ಹಾಡುವನೇನಯ್ಯ ?
ಆತ್ಮ ಸಂತೃಪ್ತಿ ಲೋಕಸಂತೃಪ್ತಿಯಾಗಿ ಪರಿಣಮಿಸಿದಲ್ಲಿ
ಆ ಹಾಡು ನಿನ್ನ ಹಾಡಯ್ಯ
ಆ ಹಾಡು ಎಲ್ಲರ ಹಾಡು ನೋಡಯ್ಯ !

' ಯಾರು ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ, ಕರ್ಮ ಎನಗೆ '

ಜಿ. ಎಸ್. ಶಿವರುದ್ರಪ್ಪನವರ ಕವನದ ಸಾಲುಗಳನ್ನು ನೆನಪಿಸುವ ಈ ವಚನ ಕವಿಯ ಸ್ವಾನುಭವ ವ್ಯಷ್ಟಿತನವನು ನೀಗಿಕೊಂಡು, ಸಮಷ್ಟಿತನವನು ಪಡೆದುಕೊಳ್ಳುವ ಪರಿಯನ್ನು ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ. ' ಬಿಂಬ 'ದಲ್ಲಿ ಕವಿಯ ಸ್ವಾನುಭವ, ಲೋಕಾನುಭವ, ಆತ್ಮಾನುಭವಗಳು ಅನುಭಾವದೆಡೆಗೆ ಸಾಗುವುದನ್ನು ಯಾರಾದರೂ ಗುರುತಿಸಬಹುದು.

ವೃದ್ಧಾಪ್ಯದಲ್ಲಿ ಆಸರೆ, ಆಧಾರ ಬೇಕಾಗುತ್ತದೆ. ಯಲ್ಲಟ್ಟಿಯವರಿಗೆ ಮಕ್ಕಳಿಲ್ಲದ ಕೊರತೆ, ಕರುಳಿಗೆ ಹತ್ತಿರದವರು ಯಾರೂ ಇಲ್ಲವೆಂಬ ಕೊರತೆ - ನಿಂದೆಯ ನುಡಿಯನ್ನು ಕೇಳಿದಾಗ - ಬಾಧಿಸಿದಂತೆ ತೋರುತ್ತದೆ. ಅನಾಥ ಪ್ರಜ್ಞೆಯಿಂದ ಬಳಲುತ್ತಿರುವಾಗ ಆ ಪರಮಾತ್ಮನನ್ನೇ ಗಟ್ಟಿಯಾಗಿ ಹಿಡಿದುಕೊಂಡುಬಿಡುತ್ತಾರೆ. ಎಲ್ಲ ಭಾರವನ್ನು ಅವನ ಮೇಲೆ ಹಾಕಿ ನಿರಾಳ-ನಿಶ್ಚಿಂತರಾಗುತ್ತಾರೆ.

ನಾನು ದಿಕ್ಕಿಲ್ಲದವನೆಂದು ನುಡಿಯುವರಯ್ಯ
ಜಗದೊಡೆಯನೆ ಎನ್ನ ಹಡೆದಯ್ಯನಾಗಿರುವಾಗ
ದಿಕ್ಕಿಲ್ಲದವನೆಂತು ಹೇಳಾ ?
....
ಹಡೆದಯ್ಯನ ಜಾಗ ಜಗದ ತುಂಬ ತುಂಬಿರುವಾಗ
ನಾನವನ ಖಾಸ ಮಗನಾಗಿರುವಾಗ
ವಾರಸುದಾರನ ಹಕ್ಕು ಹೇಗೆ ಹೋಗುವದಯ್ಯ ?

ದೈನ್ಯತೆ, ಅನಾಥ ಪ್ರಜ್ಞೆಯಿಂದ ಕೊಸರಿಕೊಂಡು ಕಿತ್ತೆದ್ದು ಮೇಲೆ ಬರುವ ಪರಿ ಬೆರಗುಗೊಳಿಸುತ್ತದೆ. ವಚನದಲ್ಲಿ ಬಂದಿರುವ ' ಖಾಸ ' ಶಬ್ದವನ್ನು ಗಮನಿಸಬೇಕು. ತಂದೆ-ಮಗನ ಸಂಬಂಧ ಆತ್ಮೀಯವಾಗಿದೆ. ಜೊತೆಗೆ ಸಲಿಗೆ ಇದೆ, ಹಕ್ಕೂ ಇದೆ. 'ವಾರಸುದಾರನ ಹಕ್ಕು ಹೇಗೆ ಹೋಗುವದಯ್ಯ?' ಎಂಬ ಪ್ರಶ್ನೆಯಲ್ಲಿ ತಲೆದೂಗುವಂತಹ ಲಾಜಿಕ್ಕಿದೆ, ತುಂಟತನದ ನಗುವಿದೆ. ' ಬಿಂಬ 'ದಲ್ಲಿ ಯಲ್ಲಟ್ಟಿಯವರು ಅನೇಕ ವಚನಗಳಲ್ಲಿ ಇಂತಹ ತರ್ಕಬದ್ಧ ಮಾತುಗಳನ್ನು ಚೆನ್ನಾಗಿ ಬಳಸಿದ್ದಾರೆ.

ಹತ್ತಿರದವರು ದೂರಾದಾಗ ಎದೆ ' ಖಾಲಿ ' ಆಗುತ್ತದೆ. ಆ ಖಾಲಿಯಾದ ಸ್ಥಳವನ್ನು ಪರಮಾತ್ಮ ತುಂಬಿಬಿಡುತ್ತಾನೆ. ಹೀಗೆ ' ಖಾಲಿ ' ಯಾಗದೆ ಶಿವದರ್ಶನವಾಗದು. ' ಬತ್ತಲಾಗದೆ ಬಯಲು ಸಿಕ್ಕದಿಲ್ಲ '.

ಬೆನ್ನು ಕಟ್ಟಲು ನೀನೆ ಮನಸು ಮಾಡಿದ ಮೇಲೆ
ಜಗವೆಲ್ಲ ಎದುರಾಗಿ ನಿಂದರೇನು
ಎನ್ನ ಕೂದಲೆಳೆಯೂ ಕೊಂಕದಯ್ಯ !

ಕವಿಗೆ ದೇವನಲ್ಲಿ ಇಂಥ ಅಚಲವಾದ ವಿಶ್ವಾಸವಿರುವುದರಿಂದ ಆತ ನಿರಾಳ.

ನಾನೆಲ್ಲಿದ್ದರೂ ನೀನಲ್ಲಿರುವೆಯಾಗಿ
ನನಗಾವ ಭಯವಿಲ್ಲವಯ್ಯ !

ಹೊತ್ತುಕೊಂಡರೆ ಭಾರ. ಕೊಡವಿದರೆ ಹಗುರ. ಹೀಗೆ ನಿರ್ಭಯನಾದಾಗ ಮಾತ್ರ ಪ್ರೀತಿ ಸಾಧ್ಯ.

ಗಾಳಿಮಾತು ಗೋಳಿಗೆಳೆಯುವ, ಗೋರಿಗೆಳೆಯುವ ದುರಂತವನ್ನು ಆಗೀಗ ಕೇಳುತ್ತಲೇ ಇದ್ದೇವೆ. ಪಾತ್ರೆಯ ಬಾಯನ್ನು ಮುಚ್ಚಬಹುದು. ಜನರ ಬಾಯನ್ನು ಮುಚ್ಚಲು ಆಗುವುದಿಲ್ಲ. ನೆತ್ತಿಯ ಮೇಲಿರುವ ಸೂರ್ಯನಿಗೆ ಉಗುಳಿದರೆ ನಮಗೇ ಸಿಡಿಯುತ್ತದೆ

ಲೋಕದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಕೆಟ್ಟದ್ದನ್ನು ಬಿಡಬೇಕು, ಒಳ್ಳೆಯದನ್ನು ಸ್ವೀಕರಿಸಬೇಕು.

ಗುಲಾಬಿಯಲ್ಲಿ ಹೂವ ಕೊಳಬೇಕಲ್ಲದೆ
ಮುಳ್ಳ ಕಂಡು ಮನ ಮುದುಡಬಾರದು ನೋಡಾ

ಪ್ರಪಂಚದಿಂದ ವಿಮುಖನಾಗುವುದು ಸರಿಯಲ್ಲ. ಈಸಬೇಕು ಇದ್ದು ಜೈಸಬೇಕು. ಎಲ್ಲ ಲೋಪದೋಷಗಳನ್ನೊಳಗೊಂಡು ಇಡಿಯಾಗಿ ಪ್ರೀತಿಸದಿದ್ದರೆ ಸತ್ಯದ ಸಾಕ್ಷಾತ್ಕಾರವಾಗುವುದಿಲ್ಲ, ಶಿವನು ಸಿಗುವುದಿಲ್ಲ.

ಖಾರದ ಸಂಗದಲಿ ಗೋದಿ ಉಪ್ಪಿಟ್ಟಾಗುವಂತೆ
ಬೆಲ್ಲದ ಸಂಗದಲಿ ಹುಗ್ಗಿಯಾಗುವಂತೆ

ಸಂಗ ಸಂಸ್ಕಾರದ ಫಲವಾಗಿ ಕೆಲವರು ಸಜ್ಜನರು. ಕೆಲವರು ದುರ್ಜನರು. ಕವಿ ಯಲ್ಲಟ್ಟಿಯವರು ವಚನ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಉಪಮೆ. ರೂಪಕ ಮತ್ತು ಪ್ರತಿಮೆಗಳನ್ನು ತಮ್ಮ ವಚನಗಳಲ್ಲಿ ಬಳಸಿದ್ದಾರೆ. ಶರಣರ ವಚನಗಳ ವಿನ್ಯಾಸ. ಶೈಲಿಯನ್ನು. ತಮ್ಮ ವಚನಗಳಿಗೆ ತರಲು ಪ್ರಯತ್ನಿಸಿದ್ದಾರೆ. ಅಲ್ಲಲ್ಲಿ ಬಸವಣ್ಣನವರ ವಚನಗಳ ಪ್ರಭಾವ ಎದ್ದು ಕಾಣುತ್ತದೆ. ದೃಷ್ಟಾಂತಗಳನ್ನು ಬಹಳ ಕೊಡುವುದರಿಂದ ವಚನಗಳು ಉಬ್ಬಿವೆ. ಅನೇಕ ವಚನಗಳನ್ನು ಇನ್ನೂ ಸಂಕ್ಷೇಪಿಸಬಹುದಿತ್ತು. ಸಂಕ್ಷಿಪ್ತತೆ ಜನಪ್ರಿಯ ವಚನಗಳ ಗುಟ್ಟಾಗಿದೆ. ಚಿಕ್ಕ-ಚಿಕ್ಕ ವಚನಗಳೇ ಜನರ ನಾಲಿಗೆಯ ಮೇಲೆ ನಲಿದಾಡುವುದನ್ನು ಗಮನಿಸಬೇಕು. ವಚನಕಾರ ಯಲ್ಲಟ್ಟಿಯವರೊಳಗಡೆ ಕವಿ ಯಲ್ಲಟ್ಟಿಯುವರು ನುಸುಳಿಕೊಳ್ಳುವುದರಿಂದ ಕೆಲವೊಂದು ವಚನಗಳು ಭಾವಗೀತೆ ಎನಿಸುತ್ತವೆ. "ಎದೆಯ ಬಾಗಿಲು ಬಡಿದು ಹೊಸ್ತಿಲಲಿ ನಿಂದವನು ಯಾರಯ್ಯ ನೀನು ಯಾರಯ್ಯ?" ಎಂಬ ವಚನವನ್ನು ಉದಾಹರಣೆಗಾಗಿ ನೋಡಬಹುದು.

ಈ ಮೇಲಿನ ಒಂದೆರಡು ಪುಟ್ಟ ಕೊರತೆಗಳನ್ನು ಹೊರತುಪಡಿಸಿದರೆ ಯಲ್ಲಟ್ಟಿಯವರ 'ಬಿಂಬ' ವಚನ ಸಂಕಲನವು ಆಧುನಿಕ ವಚನ ಸಾಹಿತ್ಯ ಸಂದರ್ಭದಲ್ಲಿ ಒಂದು ಗಟ್ಟಿ ಹೆಜ್ಜೆಯಾಗಿದೆ.

■■

ಶರಣರ ವಚನಗಳಲ್ಲಿ ವೈದ್ಯವಿಜ್ಞಾನ

● ಡಾ. ಸ. ಜ. ನಾಗಲೋಟಿಮಠ

ಶರಣರ ವಚನಗಳು ಕನ್ನಡ ಸಾಹಿತ್ಯದಲ್ಲಿ ಬಹು ದೊಡ್ಡ ಸ್ಥಾನವನ್ನು ಅಲಂಕರಿಸಿವೆ. ಹಲವು ರೀತಿಯಲ್ಲಿ ಅವು ಜಾಗತಿಕ ಸಾಹಿತ್ಯದಲ್ಲಿಯೂ ಒಳ್ಳೆಯ ಸ್ಥಾನ ಗಿಟ್ಟಿಸಿವೆ. ಈ ವಚನಗಳು ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ಒಳಗೊಂಡಿರುತ್ತವೆ. ಅವುಗಳಲ್ಲಿ ಅನುಭಾವದ ಬೆಳಕು ಹಿತವಾಗಿ ಕಾಣುತ್ತದೆ. ಇದೆಲ್ಲ ಇರುವಾಗ ವಚನಗಳಲ್ಲಿ ವೈದ್ಯ ವಿಜ್ಞಾನ ಎಂಬ ವಿಷಯವು ಅಪ್ರಸ್ತುತ ಎಂದು ಕೆಲವರಿಗೆ ಅನಿಸಬಹುದು. ವಚನಗಳ ಉದ್ದೇಶ ಅನುಭಾವ ಪ್ರಕಟಗೊಳಿಸುವದೇ ವಿನಾ ಜನಸಾಮಾನ್ಯರಿಗೆ ವೈದ್ಯಕೀಯ ವಿಷಯಗಳ ಬಗ್ಗೆ ವಿವರಿಸುವುದಲ್ಲ. ಮೇಲಾಗಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದ ಶರಣರು ವೈದ್ಯಕೀಯ ವಿಷಯವನ್ನು ಅಭ್ಯಸಿಸಿದವರೂ ಅಲ್ಲ. ಇದೆಲ್ಲವೂ ಎಲ್ಲರಿಗೂ ತಿಳಿದ ವಿಷಯ. ಅಂಥದರಲ್ಲಿ ವೈದ್ಯವಿಜ್ಞಾನ ಇಲ್ಲೇಕೆ ?

ಮೇಲೆ ಹೇಳಿದ ಸಂಗತಿಗಳೆಲ್ಲ ನಿಜ, ಆದರೆ ವೈದ್ಯನಾದ ನಾನು ವಚನಗಳನ್ನು ಓದುವಾಗ ಕೆಲವು ವಿವರಗಳನ್ನು ವಚನಗಳಲ್ಲಿ ಕಂಡು ಚಕಿತನಾಗಿದ್ದೇನೆ, ಆಶ್ಚರ್ಯಪಟ್ಟಿದ್ದೇನೆ. ನನಗಾದ ಅನುಭವ ಇತರ ವೈದ್ಯರಿಗೆ ಆಗಿರಬೇಕೆಂದು ನನ್ನ ಅನಿಸಿಕೆ. ಸಾಹಿತಿಗಳಿಗೆ, ಪಂಡಿತರಿಗೆ, ಧರ್ಮಗುರುಗಳಿಗೆ ವೈದ್ಯಕೀಯ ವಿಷಯಗಳು ಮಸುಕಾಗಿರಬಹುದು. ಈ ಲೇಖನದ ಉದ್ದೇಶ ಇಂಥ ಸಂಗತಿಗಳನ್ನು ಎತ್ತಿಕೊಂಡು ಹಿರಿಯರ ಗಮನಕ್ಕೆ ತರುವುದಾಗಿದೆ. ಇದೇನು ಸಂಶೋಧನೆಯ ವಿಷಯವಲ್ಲ. ಈ ಲೇಖನದ ಬಗ್ಗೆ ಹೆಮ್ಮೆಪಡುವ ಕಾರಣವೂ ಇಲ್ಲ. ನನ್ನ ಲಕ್ಷ್ಯವನ್ನು ಸೆಳೆದ ಕೆಲವು ಸಂಗತಿಗಳನ್ನು ಮಾತ್ರ ಸಂಕ್ಷಿಪ್ತದಲ್ಲಿ ಪರಿಶೀಲಿಸುವೆ.

೧. ಚೆನ್ನಬಸವಣ್ಣನವರ ಒಂದು ವಚನದಲ್ಲಿ ಕಾಯದ ಬಗ್ಗೆ ಅಥವಾ ದೇಹದ ಬಗ್ಗೆ ಒಂದು ಮಾತು ಬರುತ್ತದೆ. ' ಪ್ರಸಾದ ಕಾಯವ ಕೆಡಿಸಲಾಗದು ' ಎಂದು. ಇಲ್ಲಿ ಚೆನ್ನಬಸವಣ್ಣನವರು ದೈಹಿಕ ಆರೋಗ್ಯದ ಬಗ್ಗೆ ವಿವರಿಸುತ್ತಾರೆ. ಅವರ ಅನಿಸಿಕೆಯಂತೆ ಮಾನವ ಶರೀರವು ನಾವು ರಚಿಸಿದುದಲ್ಲ. ಅದನ್ನು ದೇವರು

ನಮಗೆ ಪ್ರಸಾದದ ರೂಪದಲ್ಲಿ ಕೊಟ್ಟಿರುವನು. ಇಂಥ ದೇವದತ್ತ ಶರೀರವನ್ನು ಮಾನವರಾದ ನಾವು ಕೆಡಿಸಬಾರದು. ಹಲವಾರು ವ್ಯಸನಗಳಿಂದ ಆಘಾತಗಳಿಂದ ಶರೀರವನ್ನು ಕೆಡಿಸಿದರೆ ನಮಗೇ ತೊಂದರೆ ಎನ್ನುವರು. ಅವರ ಅನಿಸಿಕೆ ತ್ರಿಕಾಲ ಸತ್ಯ. ಇದೊಂದು ವೈದ್ಯಕೀಯ ಸೂತ್ರ.

೨. ಕಲ್ಯಾಣದ ಶರಣ ಸಮೂಹದಲ್ಲಿ ಸಂಗಣ್ಣನ ಹೆಸರು ಗಮನಾರ್ಹ. ಅವನು ವೈದ್ಯ ಸಂಗಣ್ಣನೆಂದೇ ಖ್ಯಾತನು. ವೈದ್ಯಕೀಯವನ್ನು ಬಲ್ಲ ಸಂಗಣ್ಣ ಸುಪ್ರಸಿದ್ಧ ಶರಣನೂ ಹೌದು. ಅವನು ಮಾನವನ ರೋಗಗಳನ್ನು ಎರಡು ಮಹತ್ವದ ಗುಂಪುಗಳಲ್ಲಿ ವಿಂಗಡಿಸಿರುವನು. ಪಾಶ್ಚಿಮಾತ್ಯ ವೈದ್ಯವಿಜ್ಞಾನ ಇದೇ ತರದ ವರ್ಗೀಕರಣ ಮಾಡುತ್ತಿದೆ. ' ಮರುಳ ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ' ಅಂಕಿತದಲ್ಲಿನ ಅವನ ವಚನ ಹೀಗಿದೆ. " ತನುವಿಂಗೆ ವಾತ, ಪಿತ್ತ, ಶ್ಲೇಷ್ಮ, ಆತ್ಮಂಗೆ ಅಣವ, ಮಾಯಾ ಕಾರ್ಮಿಕ ಇವೇ ತ್ರಿವಿಧ ಮಲತ್ರಯ ರೋಗವಿಹುದಕ್ಕೆ...." ಈ ವಚನದಲ್ಲಿ ರೋಗಗಳನ್ನು ಎರಡು ಮುಖ್ಯ ಗುಂಪುಗಳಲ್ಲಿ ವರ್ಗೀಕರಿಸಲಾಗಿದೆ. ಒಂದನೆಯ ಗುಂಪು. ದೈಹಿಕ ತೊಂದರೆಯದು. ಎರಡನೆಯದು ಮಾನಸಿಕ ರೋಗಗಳ ಗುಂಪು. ನಮಗೆ ತೊಂದರೆ ಕೊಡುವ ಕಾಯಿಲೆಗಳಲ್ಲಿ ಮನಸ್ಸಿನಲ್ಲಿ ಮೂಡಿಬರುವ ಭಾವನೆಗಳು ದೈಹಿಕ ತೊಂದರೆಗಳನ್ನು ಉಂಟುಮಾಡುವವು. ಈ ರೋಗಗಳಿಗೆ ಇಂದು ಸೈಕೋಸೋಮ್ಯಾಟಿಕ್ ಅಂದರೆ ಮನೋದೈಹಿಕ ರೋಗ ಎನ್ನುವರು. ವೈದ್ಯ ಸಂಗಣ್ಣ ತನ್ನ ವಚನದಲ್ಲಿ ಇಂಥ ತೊಂದರೆಗಳ ಬಗ್ಗೆ ಖಚಿತವಾಗಿ ಹೇಳಿದ್ದಾನೆ. ಮನೋದೈಹಿಕ ರೋಗಗಳ ಬಗ್ಗೆ ನಾವು ಇತ್ತೀಚಿಗೆ ತಿಳಿದುಕೊಂಡಿರುವೆವು. ಆದರೆ ಶರಣರ ಕಾಲದಲ್ಲಿಯೇ ಇಂಥ ವರ್ಗೀಕರಣ ಇತ್ತು. ಇದು ಸೋಜಿಗದ ವಿಷಯ. ಅಷ್ಟೇ ಹೆಮ್ಮೆಪಡುವ ಸಂಗತಿಯೂ ಹೌದು. ಸಂಗಣ್ಣನೊಬ್ಬ ಭವರೋಗವೈದ್ಯ. ತನುವಿನ ಅನುಪಾನ ಚಿಕಿತ್ಸೆ ಮತ್ತು ಮಾನಸಿಕ ಶಾಂತಿ ಚಿಕಿತ್ಸೆ ಎರಡಕ್ಕೂ ತಳಕು ಹಾಕಿದ್ದನು. ಶಿವನಲ್ಲಿ ವಿಶ್ವಾಸವಿದ್ದವರಿಗೆ ಶಿವಕಾರುಣ್ಯ ಚಿಕಿತ್ಸೆ ಮಾಡುತ್ತಿದ್ದ. ಇಲ್ಲದವರಿಗೆ ದೇಹಚಿಕಿತ್ಸೆ. ಸಂಗಣ್ಣನದು ವೈದ್ಯವೃತ್ತಿಯನ್ನೇ ಆತ್ಮಸಾಧನ ಸಂಪತ್ತಿಯಾಗಿ ಮಾಡಿಕೊಳ್ಳುವ ರೀತಿ. ಅಂತೆಯೇ ಸಂಗಣ್ಣ ಮೈ-ಮನಗಳೆರಡಕ್ಕೂ ಮದ್ದು ಕೊಡುವವನೆಂದು ಶರಣರು ಕೊಂಡಾಡಿದ್ದಾರೆ.

೩. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಚೆನ್ನಬಸವಣ್ಣನವರಿಗೆ ಕೂಡಲ ಸಂಗಮನಾಥ ಯಾವ ರೂಪದಲ್ಲಿ ಪ್ರತ್ಯಕ್ಷವಾಗಬಹುದು ಎಂದು ವರ್ಣಿಸಿದ್ದಾರೆ. ಅವರು ಕೊಡುವ ವರ್ಣನೆ ಹೀಗೆ ಬರುತ್ತದೆ. ಆ ವ್ಯಕ್ತಿಯ ತಲೆಕೂದಲು ಉದುರಿ ಹೋಗಿ ತಲೆ ಬೋಳಾಗಿರಬಹುದು. ಹಣೆಯೆಲ್ಲ ಗಂಟುಗಂಟಾಗಿರಬಹುದು. ಹುಬ್ಬಿನ ಕೂದಲು ಉದುರಿ ಹೋಗಿ ಹುಬ್ಬು ಕಾಣದೆ ಹೋಗಬಹುದು. ಕಣ್ಣು ಗುಡ್ಡೆಗಳು ಕೆಂಪಗಾಗಿ ಕಣ್ಣೀರು ಹಾಗೂ ಪಿಚ್ಚು

ಸೋರುತ್ತಿರಬಹುದು. ಮೂಗು ಕುಸಿಬಿದ್ದು ಚಪ್ಪಟೆ ಆಗಿರಬಹುದು. ಮೂಗಿನಿಂದ ರಕ್ತಮಿಶ್ರಿತ ಸಿಂಬಳ ಬರುತ್ತಿರಬಹುದು. ತುಟಿಗಳು ಸೀಳಿಕೊಂಡಿರಬಹುದು. ಹಲ್ಲುಗಳು ವಿಕಾರವಾಗಿರಬಹುದು. ಕುತ್ತಿಗೆ ಬಗ್ಗಿರಬಹುದು. ಬೆನ್ನು ಬಿಲ್ಲಿನಂತೆ ಮಣಿದಿರಬಹುದು, ಗೂನಾಗಿರಬಹುದು. ಕೈ ಬೆರಳುಗಳು ಸೊಟ್ಟಾಗಿ ಏನನ್ನಾದರೂ ಹಿಡಿಯಲು ತೊಂದರೆಯಾಗಬಹುದು. ಕಾಲು ಜೋತು ಬಿದ್ದು ನಡೆಯುವಾಗ ಗಾಯಗೊಂಡಿರಬಹುದು. ಕಾಲಲ್ಲಿ ದೊಡ್ಡ ಹುಣ್ಣಾಗಿರಬಹುದು. ಇಂಥ ವಿಕಾರ ರೂಪದಲ್ಲಿ ಸಂಗಮನಾಥನು ಬಂದರೂ ಅವನನ್ನು ನಾವು ಗುರುತಿಸಬೇಕು ಎಂದು ವಿವರಿಸುವರು. ಬಸವಣ್ಣನವರು ವರ್ಣಿಸಿದ ಈ ವ್ಯಕ್ತಿ ಭಯಾನಕ ಕುಷ್ಠರೋಗದಿಂದ ಬಳಲುತ್ತಿರಲು ಸಾಕು. ಅವರ ವಿವರಣೆ ಕುಷ್ಠ ರೋಗಿಯ ವರ್ಣನೆಯೇ ನಿಜ. ನನಗೆ ವಿಚಿತ್ರ ಎನಿಸುವ ಸಂಗತಿ ಎಂದರೆ ಅವರ ಕೂಲಂಕುಷ ನೋಟ ಹಾಗೂ ವರ್ಣನೆ. ಇಂದಿನ ವೈದ್ಯರೂ ಸಹ ಇಷ್ಟು ವಿವರವಾದ ವರ್ಣನೆಯನ್ನು ಕೊಡಲು ತಡವರಿಸಬಹುದು.

೪. ಚೆನ್ನಬಸವಣ್ಣನವರು ಒಂದು ಗ್ರಂಥ ಬರೆದಿರುವರು. ಆ ಗ್ರಂಥದ ಹೆಸರು ' ಕರಣ ಹಸಿಗೆ ' ಎಂದು. ಅದು ಬಹು ಮಹತ್ವದ ಗ್ರಂಥ. ಇದರಲ್ಲಿ ಹತ್ತಾರು ವೈದ್ಯಕೀಯ ವಿಷಯಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಮೊದಲ ಸಂಗತಿ ಎಂದರೆ ಹುಟ್ಟುವ ಮಗು ದೇವರ ಆಶೀರ್ವಾದದಿಂದ ಅಲ್ಲ. ಮಗು ಜನ್ಮ ತಾಳುವುದು ಒಂದು ವೈಜ್ಞಾನಿಕ ಘಟನೆ. ಅಲ್ಲಿ ತಾಯಿಯ ರಜಸ್ಸು ತಂದೆಯ ವೀರ್ಯಗಳು ಕೂಡಿ ಭ್ರೂಣ ಹುಟ್ಟುವದು. ಭ್ರೂಣವು ದಿನದಿಂದ ದಿನಕ್ಕೆ ಬೆಳೆಯುತ್ತ ನಡೆಯುವದು. ಭ್ರೂಣದ ಬೆಳವಣಿಗೆಯನ್ನು ಇಷ್ಟು ಸವಿವರವಾಗಿ ಬರೆದಿರುವದನ್ನು ನೋಡಿದರೆ ಅಚ್ಚರಿ ಎನಿಸುತ್ತದೆ. ಇಂದಿನ ದಿನಮಾನದಲ್ಲಿ ಅಲ್ಟ್ರಾಸೋನೋಗ್ರಾಫಿಯಂಥ ಉಪಕರಣಗಳ ಬಳಕೆ ಹೆಚ್ಚಾಗಿದೆ. ಇಂದು ನಾವು ನೋಡುವ ವಿವರಗಳನ್ನು ಅಂದೇ ಅಂದರೆ ೧೨ ನೇ ಶತಮಾನದಲ್ಲಿ ಶರಣರು ತಿಳಿದಿದ್ದರು. ಇಂಥ ವಿಷಯಗಳು ನಮಗೆ ಶರಣರ ವಚಗಳಲ್ಲಿ ಕಾಣುತ್ತವೆ.

ಶರಣರ ವಚನಗಳಲ್ಲಿ ವೈದ್ಯವಿಜ್ಞಾನದ ಬಗ್ಗೆ ಪ್ರಸ್ತಾಪಗೊಂಡಿರುವುದು ಗಾತ್ರದಲ್ಲಿ ಸ್ವಲ್ಪ. ಆದರೆ ಆ ವಿಷಯದಲ್ಲಿ ಅವರು ಮಾಡಿದ ಚಿಂತನೆ ದೊಡ್ಡದು.

■■

ವಿ. ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

ಶರಣ ಸಂಸ್ಕೃತಿ ಮತ್ತು ಪತ್ರಿಕೆಗಳು

● ಬಿ. ಮಹಾದೇವಪ್ಪ

'ಒಂದು ಹನಿ ಮಸಿ, ಕೋಟಿ ಜನಕ್ಕೆ ಬಿಸಿ' ಎನ್ನುವ ರೀತಿಯಲ್ಲಿ ಪತ್ರಿಕೆಗಳಲ್ಲಿ ಮೂಡಿದ ಅಕ್ಷರಗಳು ಮಾನವನ ಅಂತಃಪ್ರಜ್ಞೆಯನ್ನು ಅರಳಿಸಿ, ಮರಳಿಸಿ ಮತ್ತು ಕೆರಳಿಸಿ ಆಲೋಚನೆ ಮಾಡಲು ಹಚ್ಚುತ್ತವೆ. ಕೃತಿಯೆಂಬ ವೃಕ್ಷಕ್ಕೆ ವಿಚಾರಗಳೇ ಬೀಜಗಳು.

ಇನ್ನು ಶರಣ ಸಂಸ್ಕೃತಿಯ ಬಗ್ಗೆ ಹೇಳಲು ಪುಟಗಳೂ ಸಾಲವು ಮತ್ತು ಕಾಲವೂ ಸಾಲದು. ಶರಣ ಸಂಸ್ಕೃತಿಯ ಸಾರವೆಂಬಂತೆ ಉರಿಲಿಂಗಪೆದ್ದಿ ಶರಣರು ಒಂದು ವಚನವನ್ನು ಬರೆದಿದ್ದಾರೆ. ಆ ವಚನವನ್ನು ಮೆಲುಕಾಡಿಸಿದರೆ ಸಾಕು ಎನಿಸುತ್ತದೆ.

ಶಿವನೇ ದೈವ, ಶಿವಭಕ್ತರೇ ಕುಲಜರು, ಪಂಚಾಕ್ಷರಿಯೇ ಮಂತ್ರ;
ಕೊಲ್ಲದಿಪ್ಪುದೇ ಧರ್ಮ, ಅಧರ್ಮದಿಂದ ಬಂದುದನು ಒಲ್ಲದಿಪ್ಪುದೇ ನೇಮ;
ಆಶೆಯಿಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ,
ತನು-ಮನ-ಧನದಲ್ಲಿ ವಂಚನೆಯಿಲ್ಲದಿಪ್ಪುದೇ ಸದ್ಭಕ್ತಿ ಕಂಡಯ್ಯ
ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ ನೋಡಯ್ಯಾ
ಇದು ಸತ್ಯ, ಶಿವಬಲ್ಲ, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ !

17739

ಇಷ್ಟು ಸರಳ-ಸಜ್ಜನಿಕೆಯ, ಆತ್ಮ ಶುದ್ಧಿ-ಮನೋವಿಕಾಸದ ಸಂಸ್ಕೃತಿ ಮತ್ತೊಂದಿಲ್ಲವೆನಿಸುತ್ತದೆ. ಸಕಲ ಜೀವಾತ್ಮರಿಗೆ ಲೇಸಬಯಸುವ, ವರ್ಗ-ವರ್ಣ, ವಯ, ಲಿಂಗ ಭೇದವಿಲ್ಲದ ಕಾಯಕಗಳಲ್ಲಿ ಮೇಲು-ಕೀಳೆಣಿಸದ, ಗಳಿಕೆಯಲ್ಲಿ ದಾಸೋಹಂ ಭಾವದ ಸಂಸ್ಕೃತಿಯೇ ಶರಣ ಸಂಸ್ಕೃತಿ.

ಹಳಗನ್ನಡದಲ್ಲಿ ಒಂದು ಮಾತು ಬರುತ್ತದೆ. "ಕಟ್ಟಿಯುಂ ಏನೊ ಪೊಸ ಪೂಮಾಲೆಯುಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ ?" ಎನ್ನುವ ರೀತಿಯಲ್ಲಿ ಸಂಸ್ಕೃತಿಯೇನೋ ಬಹಳ ಉತ್ಕೃಷ್ಟವಾಗಿತ್ತು. ಆದರ್ಶ ಪ್ರಾಯವಾದುದಾಗಿತ್ತು; ಆದರೆ ಆಚರಿಸುವವರೂ ಇರಲಿಲ್ಲ. ಪ್ರಚಾರಿಸುವವರೂ ಇರಲಿಲ್ಲವೆಂದರೆ ಏನು ಉಪಯೋಗ ? ಈ ದೃಷ್ಟಿಯಿಂದ ಶರಣ ಸಂಸ್ಕೃತಿ ಸೌಭಾಗ್ಯಯುತವಾದುದೆಂದೇ ಭಾವಿಸಬೇಕಾಗುತ್ತದೆ. ಅದನ್ನು ಆಚರಿಸುವವರು ಸಾವಿರಾರು ವರ್ಷಗಳ ಹಿನ್ನೆಲೆಯಲ್ಲಿ

ಕೆಲವರಾದರೂ ಇದ್ದರು, ಪ್ರಚಾರಿಸುವವರಂತೂ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳು, ಭಾಷೆಗಳಲ್ಲಿ ಅಸಂಖ್ಯಾತರಾಗಿದ್ದರು. ಪುಸ್ತಕಗಳು ತಾಡೋಲೆಗಳು ಸಹ ಸಮೂಹ ಮಾಧ್ಯಮಗಳಲ್ಲಿಯೇ ಬರುವವಾದರೂ ಸದ್ಯ ನಾನು ನನ್ನ ವಿಷಯವನ್ನು ಕನ್ನಡ ಪತ್ರಿಕೆಗಳಿಗೆ ಸೀಮಿತಗೊಳಿಸಿ ಪ್ರಸಾರ ಕಾರ್ಯಕ್ಕಿಳಿಸಲು ಯತ್ನಿಸುತ್ತೇನೆ.

ನಾನು ಕನ್ನಡ ಪತ್ರಿಕೆಗಳನ್ನೇ ಶರಣತತ್ವ ಪ್ರಸಾರ ಕಾರ್ಯಮಾಡಿದವುಗಳನ್ನೇ ಗಣನೆಗೆ ತೆಗೆದುಕೊಂಡರೂ ವಿಷಯ ಒಂದು ಹೊತ್ತಗೆಯಷ್ಟಾಗುತ್ತದೆಯೆಂಬ ಭೀತಿ ಕಾಡುತ್ತಿದೆ. ಗೊತ್ತಿದ್ದನ್ನೆಲ್ಲ ಬರೆದುಕೊಡುವದು ದೊಡ್ಡಮಾತಲ್ಲ. ಆದರೆ ಪ್ರಕಟಿಸುವವರಿಗೆ ದೊಡ್ಡ ಹೊರೆಯಾಗುತ್ತದಲ್ಲಾ ಎಂಬ ಸಂಕೋಚ ನನ್ನದು. ಪತ್ರಿಕೆಗಳಲ್ಲಿ ದೈನಿಕಗಳೂ ಬರುತ್ತವೆ, ಸಾಪ್ತಾಹಿಕಗಳೂ ಬರುತ್ತವೆ, ಪಾಕ್ಷಿಕಗಳು ಮತ್ತು ಮಾಸಿಕಗಳೂ ಬರುತ್ತವೆ. ಮಾಸಿಕಗಳಲ್ಲಿ ಮತ್ತೆ ದ್ವೈಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕಗಳೂ ಬರುತ್ತವೆ. ಅವು ಪ್ರಾರಂಭವಾದ ವರ್ಷ, ಸಂಪಾದಕರ ಹೆಸರು ಮತ್ತು ಪ್ರಕಟಣಾ ಸ್ಥಳ, ಕಾಲಾವಧಿಯನ್ನು ಕೊಟ್ಟರೂ ನನ್ನ ಲೇಖನಕ್ಕೆ ನೀಡಲಾದ ನಾಲ್ಕಾರು ಪುಟಗಳು ಮುಗಿದು ಹೋಗುತ್ತವೆನಿಸುತ್ತದೆ. ಏನು ಮಾಡಬೇಕು ? ಅನೇಕ ಪತ್ರಿಕೆಗಳ ಹೆಸರುಗಳನ್ನು ಉಲ್ಲೇಖಿಸಲೇ ಬೇಕು, ಸ್ಥಳ ಸಾಲದು, ಉಲ್ಲೇಖಿಸದಿದ್ದರೆ ಅಂತಹ ಪತ್ರಿಕೆಗಳ ಅಗಾಧ ಸೇವೆಯನ್ನು ಅಲಕ್ಷಿಸಿದ ಪಾಪಕ್ಕೆ ಪಕ್ಕಾಗುತ್ತೇನೆ. ಇಂತಹ ಇಕ್ಕಟ್ಟಿನಲ್ಲಿ ನಾನು ಸಿಕ್ಕು ಬಿದ್ದಿದ್ದೇನೆ.

ನಾವು ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿ ಮತ್ತು ಓದುಗರ ಪತ್ರಗಳ ಚರ್ಚೆಗಳನ್ನು ಅಲಕ್ಷಿಸುವಂತಿಲ್ಲ. ನಿಯತ ಕಾಲಿಕೆಗಳಿಗಿಂತ ಜನರು ದಿನಪತ್ರಿಕೆಗಳನ್ನು ಓದುವದು ವಿಶೇಷ. ಶರಣ ಸಂಸ್ಕೃತಿಯ ಪ್ರಸಾರ ಕಾರ್ಯದಲ್ಲಿ ಉತ್ತರ ಕರ್ನಾಟಕದಲ್ಲಿ " ಸಂಯುಕ್ತ ಕರ್ನಾಟಕ " ಹಳೆಯ ಮೈಸೂರು ಭಾಗದಲ್ಲಿ " ಪ್ರಜಾವಾಣಿ " ಮಹತ್ತರ ಪಾತ್ರವನ್ನು ವಹಿಸಿವೆ. ಶರಣ ಸಂಸ್ಕೃತಿ ಜನಮನದಲ್ಲಿ ಆಳವಾಗಿ ಬೇರೂರಲು ದಿನಪತ್ರಿಕೆಗಳು ಒದಗಿಸಿದ ಸೇವೆ ಅಷ್ಟಿಷ್ಟಲ್ಲ.

ಶರಣ ಸಂಸ್ಕೃತಿ ಪ್ರಸಾರದ ಪತ್ರಿಕೆಗಳನ್ನೇ ಗಮನಿಸಿದಾಗ ಮೊಟ್ಟ ಮೊದಲು ಬರುವ ಪತ್ರಿಕೆಯೆಂದರೆ " ಮೈಸೂರು ಸ್ಟಾರ್ " ಎಂಬ ವಾರ ಪತ್ರಿಕೆಯೆನಿಸುತ್ತದೆ. ಇದನ್ನು ಸಂಸ್ಥಾಪಿಸಿದ ಯಜಮಾನ ವೀರಸಂಗಪ್ಪನವರು. ಮುಂದೆ ಇದನ್ನು ಕೆಲಕಾಲ ದೈನಿಕವಾಗಿಯೂ ಪರಿವರ್ತಿಸಿದರು. " ಮೈಸೂರು ಸ್ಟಾರ್ " ಪತ್ರಿಕೆಯ ಉಚ್ಛ್ರಾಯ ಕಾಲವೆಂದರೆ ೧೮೮೦ ರ ದಶಕ. ೧೮೮೧ ರಲ್ಲಿ ಜನಗಣತಿ ನಡೆಸಿ ಮೈಸೂರು ಅರಸರು ವೀರಶೈವ ಲಿಂಗಾಯತರನ್ನು ಶೂದ್ರ ವರ್ಗದಲ್ಲಿ ಪರಿಗಣಿಸಿದಾಗ ಯಜಮಾನ ವೀರಸಂಗಪ್ಪನವರು ಸರಕಾರದ ವಿರುದ್ಧ ಧರ್ಮಯುದ್ಧವನ್ನು ಸಾರಿದ್ದರು ಮತ್ತು ವೀರಶೈವರನ್ನು ಪ್ರತ್ಯೇಕವಾಗಿ ಗಣನೆ ಮಾಡಿಸುವಲ್ಲಿ ಯಶಸ್ವಿಯೂ ಆಗಿದ್ದರು. ಈ ಬಗ್ಗೆ ಕನ್ನಡ ಪಂಡಿತ ಎಂ. ಜಿ. ನಂಜುಂಡಾರಾಧ್ಯರು ಹೀಗೆ ಬರೆದಿದ್ದಾರೆ– " ಈ ಸೆನ್ಸಸ್ ಸಂದರ್ಭದಲ್ಲಿ ಪರಸಮಯಿಗಳಿಂದ ಪ್ರೇರಿತರಾದ ಆಗಿನ ಮೈಸೂರು ಸರಕಾರವು ವೇದ

ವೇದಾಂತಾಗಮೋಪನಿಷತ್ ಪ್ರತಿಪಾದಿತವಾದ ವೀರಶೈವವನ್ನು ಶೂದ್ರ ಶ್ರೇಣಿಯಲ್ಲಿ ಸೇರಿಸಿ ಹೀಗಳೆಯಿತು. ಈ ದೌರ್ಜನ್ಯವನ್ನು ಸರ್ವಾಂಗೀಣವಾಗಿ ಪ್ರತಿಭಟಿಸಿದವರಲ್ಲಿ ಲಿಂ. ಯಜಮಾನ ವೀರಸಂಗಪ್ಪನವರು ಪ್ರಮುಖರು. ಅವರಿಗೆ ಎಡ-ಬಲ ಭುಜಗಳಂತೆ ಬೆಂಬಲವಾಗಿದ್ದು ಶಾಸ್ತ್ರ ಮತ್ತು ಅನುಭವಗಳಿಂದ ಪ್ರಮಾಣಬದ್ಧವಾಗಿ ವಾದಿಸಿ. ವೀರಶೈವವು ತ್ರಿಮತಸ್ಥರು ಪ್ರತಿಪಾದಿಸುವ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತಗಳ ಶ್ರೇಣಿಯಲ್ಲಿ ಸೇರಿದ ಶಕ್ತಿ ವಿಶಿಷ್ಟಾದ್ವೈತ ಎಂದು ಪ್ರತಿಪಾದಿಸಿದ ಕೀರ್ತಿ ಮೈಸೂರಿನ ಪಂಡಿತರಾದ ಕರ್ನಾಟಕ ಭಾಷಾರತ್ನಂ ಪಿ. ಆರ್. ಕರಿಬಸವಶಾಸ್ತ್ರಿ ಮತ್ತು ಎನ್. ಆರ್. ಕರಿಬಸವ ಶಾಸ್ತ್ರಿಗಳಿಗೆ ಸಲ್ಲುತ್ತದೆ. ಈ ಶಾಸ್ತ್ರಿದ್ವಯರು ವೀರಸಂಗಪ್ಪನವರು ಸ್ಥಾಪಿಸಿದ್ದ ' ಮೈಸೂರು ಸ್ಟಾರ್ ' ಪತ್ರಿಕೆಯಲ್ಲಿ ಪರಸಮಯಿಗಳು ಹೂಡಿದ ವಾದರೂಪವಾದ ಅನೇಕ ಪ್ರಶ್ನೆಗಳಿಗೆ ಶಾಸ್ತ್ರಪ್ರಮಾಣವಾದ ಉತ್ತರಗಳನ್ನು ಬರೆದು. ಖಂಡಿಸಿ, ವೀರಶೈವವನ್ನು ಎತ್ತಿಹಿಡಿದರು.

ಚಂದ್ರೋದಯ :

ಇದನ್ನು ಪ್ರಾರಂಭಿಸಿದವರು ಸುಪ್ರಸಿದ್ಧ ಕಾಯ್ದೆ ಪಂಡಿತರೂ ಕರ್ನಾಟಕ ಏಕೀಕರಣ ಧುರೀಣರೂ ಧರ್ಮಾಭಿಮಾನಿಗಳೂ ಆಗಿದ್ದ ಲಿಂ. ಗದಿಗೆಯ್ಯ ಹೊನ್ನಾಪುರಮಠ ಅವರ ತಂದೆಯವರಾದ ಲಿಂ. ಹುಚ್ಚಯ್ಯನವರು. ಕ್ರಿ. ಶ. ೧೮೫೦ ರ ಸುಮಾರಿನಲ್ಲಿ ವಾಗ್ದೇವಿ ಮುದ್ರಣಾಲಯವನ್ನು (ಕಲ್ಲಚ್ಚಿನ ಮುದ್ರಣ) ಸ್ಥಾಪಿಸಿ ಸೋಮೇಶ್ವರ ಶತಕ, ಶಬರ ಶಂಕರ ವಿಳಾಸ, ಬಾಣ ಕಾದಂಬರಿ, ಸರ್ವಜ್ಞನ ವಚನಗಳು ಮೊದಲಾದ ಗ್ರಂಥಗಳನ್ನು ಹೊರತಂದರು. ಸರ್ವಜ್ಞನ ವಚನಗಳ ಪರಿಚಯವಾದುದು ಮೊದಲು ಶ್ರೀ ಹುಚ್ಚಯ್ಯನವರ ಮೂಲಕವೇ. ಅಂತೆಯೇ ಶ್ರೀ ಹುಚ್ಚಯ್ಯನವರು " ಚಂದ್ರೋದಯ " ಎಂಬ ವಾರಪತ್ರಿಕೆಯನ್ನು ೧೮೮೫ರಲ್ಲಿ ಪ್ರಾರಂಭಿಸಿ ಶರಣ ಸಂಸ್ಕೃತಿ ಪ್ರಸಾರ ಕಾರ್ಯನಡೆಸಿದರು. ಮುಂದೆ ಇವರ ಮಗ ಶ್ರೀ ಗದಿಗೆಯ್ಯ ಹೊನ್ನಾಪುರಮಠ ಅವರು ತಂದೆಯವರ ಸ್ಥಿರ ಚರಾಸ್ತಿಗೆ ಉತ್ತರಾಧಿಕಾರಿಯಾಗುವುದರ ಜತೆಗೆ ಅವರ ಧರ್ಮ ಪ್ರಸಾರ, ಸಮಾಜ ಕಳಕಳಿ ಕಾರ್ಯಗಳಿಗೂ ವಾರಸುದಾರರಾಗಿ ವರ್ತಿಸಿದರು. ಸವಣೂರಿನಲ್ಲಿ ನಡೆಯಬೇಕಾಗಿದ್ದ ಚಿತ್ರದುರ್ಗದ ಶ್ರೀ ಜಯದೇವ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವಕ್ಕೆ ಪರಸಮಯಿಗಳು ಅಡ್ಡಿಪಡಿಸಿದಾಗ ಕೋರ್ಟಿನಲ್ಲಿಯೂ ತಮ್ಮ " ಚಂದ್ರೋದಯ " ವಾರಪತ್ರಿಕೆಯಲ್ಲಿಯೂ ಸಮರ್ಥ ರೀತಿಯಲ್ಲಿ ವಾದ ಮಾಡಿ ಯಶ ಸಾಧಿಸಿದ್ದರು. ಜನರ ಉತ್ತಮ ಬೆಂಬಲವಿಲ್ಲದೆ " ಚಂದ್ರೋದಯ " ವಾರ ಪತ್ರಿಕೆ ನಿಲ್ಲಬೇಕಾದ ಒತ್ತಡ ಬಂದಾಗ " ವಾಗ್ದೇವಿ "ಯೆಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಧರ್ಮದುಂದುಭಿ ಬಾರಿಸಿದರು. ಶ್ರೀ ಗದಿಗೆಯ್ಯನವರ ಲೆಕ್ಕಣಿಕೆಯಿಂದ ಮೂಡಿ ಬಂದ " ನೀತಿ ಮಂಜರಿ ", " ಶಿವಲೀಲಾಮೃತ ಕಥೆಗಳು ", " ಶ್ರೀ ಬಸವೇಶ್ವರ ಚರಿತ್ರೆ". " ಚಿಲ್ಲಾಳ ಚರಿತ್ರೆ" ಮೊದಲಾದವು ಶರಣ ಸಂಸ್ಕೃತಿ ಪ್ರಸಾರ ನಿಟ್ಟಿನಲ್ಲಿ ನೆನಪಿಡತಕ್ಕಂಥ ಮೈಲಿಗಲ್ಲುಗಳು.

ಕರ್ನಾಟಕ ಬಂಧು :

ಪ್ರಕಾಂಡ ಪಂಡಿತ ವೈ. ನಾಗೇಶ ಶಾಸ್ತ್ರಿಗಳು ತಾವು ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲಿನಲ್ಲಿ ಶಿಕ್ಷಕರಾಗಿರುವಾಗ ಕ್ರಿ. ಶ. ೧೯೧೫ ರಲ್ಲಿ ' ಕರ್ನಾಟಕ ಬಂಧು ' ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಬಹಳ ದಿನಗಳವರೆಗೆ ಅವರು ತಮ್ಮ ಪತ್ರಿಕೆ ಮೂಲಕ ವೀರಶೈವ ಧರ್ಮದ ಮತ್ತು ಶರಣ ಸಂಸ್ಕೃತಿಯ ತಿರುಳನ್ನೇ ತಿಳಿಸುತ್ತಿದ್ದರೂ " ಕರ್ನಾಟಕ ಬಂಧು " ಎಂದು ಪತ್ರಿಕೆಗೆ ಹೆಸರಿಡಲು ಬಳ್ಳಾರಿ ಜಿಲ್ಲೆಯಲ್ಲಿನ ಅಂದಿನ ತೆಲುಗು ಭಾಷೆಯ ದಬ್ಬಾಳಿಕೆಯೇ ಕಾರಣವಾಗಿತ್ತು. ಆರಂಭದಲ್ಲಿ ವಾರಪತ್ರಿಕೆಯಾಗಿದ್ದರೂ ಹಣದ ಮುಗ್ಗಟ್ಟು ಪತ್ರಿಕೆಯನ್ನು ಪ್ರತಿವಾರ ಹೊರತರಲು ಆಸ್ಪದ ನೀಡುತ್ತಿರಲಿಲ್ಲ. ಮುಂದೆ ಡಾ. ವೈ. ನಾಗೇಶಶಾಸ್ತ್ರಿಗಳು " ಅಷ್ಟಾವರಣ ವಿವೇಕ ", " ಪಂಚಾಚಾರ ಪ್ರಕಾಶಿಕೆ ", " ಷಟಸ್ಥಲ ತತ್ವದರ್ಪಣ ", " ಶಿವಯೋಗ ", " ಇಷ್ಟಲಿಂಗೋಪಾಸನಾಕ್ರಮ " ಎಂಬ ಚಿಕ್ಕ ಹೊತ್ತಿಗೆಗಳನ್ನು ಶ್ರೀ ಸಾಮಾನ್ಯರ ಉಪಯೋಗಕ್ಕೆ ಬರುವಂತೆ ಸುಲಭ ಭಾಷೆಯಲ್ಲಿ ಬರೆದುದು ಈ ಪತ್ರಿಕೆಯಲ್ಲಿನ ಟಿಪ್ಪಣಿಗಳ ಸಹಾಯದಿಂದಲೇ.

ಜಯಕರ್ನಾಟಕ :

ಕ್ರಿ. ಶ. ೧೯೨೨ ರಲ್ಲಿ ಧಾರವಾಡದಿಂದ ಲಿಂ. ಎಸ್. ಎಸ್. ಬಸವನಾಳ ಅವರಿಂದ ಸಂಪಾದಿತವಾದ ಜಯಕರ್ನಾಟಕವು ಶರಣಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ಮಹತ್ತರ ಪಾತ್ರವನ್ನುವಹಿಸಿದೆ. ಕರ್ನಾಟಕ ಏಕೀಕರಣ ಮತ್ತು ಕನ್ನಡ ಪ್ರಚಾರ ಉದ್ದೇಶದಿಂದ ಕನ್ನಡ ಕುಲಪುರೋಹಿತ ದಿ. ಆಲೂರು ವೆಂಕಟರಾಯರ ಸಾರಥ್ಯದಲ್ಲಿ ಬಹಳ ದಿವಸ ನಡೆದ " ಜಯಕರ್ನಾಟಕ " ಮಾಸಿಕವನ್ನು ಅದೇ ಉದ್ದೇಶಗಳಿಗನುಗುಣವಾಗಿ ನಡೆಸುವುದಾಗಿ ಹೇಳಿ ಲಿಂ. ಬಸವನಾಳರು ವಹಿಸಿಕೊಂಡು ತಮ್ಮ ಸ್ವಂತ ರವೀಂದ್ರ ಮುದ್ರಣಾಲಯದಲ್ಲಿ ಮುದ್ರಿಸತೊಡಗಿದರು. ಲಿಂ. ಶಿ. ಶಿ. ಬಸವನಾಳರ ಹೆಸರು ಶರಣ ಸಂಸ್ಕೃತಿ ಪ್ರಸಾರ ಕಾರ್ಯಕ್ಕೆ ಹೆಸರು ವಾಸಿಯಾಗಿತ್ತು. ಕರ್ನಾಟಕ ಏಕೀಕರಣ ಶರಣ ಧರ್ಮದ ಗುರಿ ಮತ್ತು ಕನ್ನಡ ಭಾಷಾಪ್ರಚಾರ ಕಾರ್ಯವೂ ಶರಣ ಸಂಸ್ಕೃತಿಯ ಅಂಗವಾಗಿದ್ದರಿಂದ ಶ್ರೀ ಬಸವನಾಳರ ಸಂಪಾದಕತ್ವದ " ಜಯಕರ್ನಾಟಕ " ಪತ್ರಿಕೆಯನ್ನು ನಾವು ಮರೆಯುವಂತೆಯೇ ಇಲ್ಲ. ಈ ಮುಂಚೆ ಶ್ರೀ ಬಸವನಾಳರು ಬೆಳಗಾವಿ ವೀರಶೈವ ತರುಣ ಸಂಘದಿಂದ ೧೯೧೮ರಿಂದಲೇ ಪ್ರಾರಂಭವಾಗಿದ್ದ " ಪ್ರಬೋಧ " ಮಾಸಪತ್ರಿಕೆಯನ್ನು ಶ್ರೀ ಹೆಚ್. ಎಫ್. ಕಟ್ಟೀಮನಿಯವರೊಂದಿಗೆ ಸಂಪಾದಿಸಿ ಸಾಕಷ್ಟು ಶರಣಸಂಸ್ಕೃತಿ ಪ್ರಸಾರ ಮಾಡಿದ್ದರು. ಆ ಹಿನ್ನೆಲೆ ಇದ್ದುದರಿಂದ ಬೆಟಗೇರಿ ಕೃಷ್ಣಶರ್ಮ, ರಂ. ಶ್ರೀ. ಮುಗಳಿ, ಕುವೆಂಪು, ಅ.ನ.ಕೃ., ತೀ. ನಂ. ಶ್ರೀ., ಎಂ.ಆರ್. ಶ್ರೀ. ಮೊದಲಾದವರೆಲ್ಲ ಶರಣಸಂಸ್ಕೃತಿ ಕುರಿತು ಬರೆಯಬೇಕೆನಿಸಿದಾಗಲೆಲ್ಲ " ಜಯಕರ್ನಾಟಕ " ಪತ್ರಿಕೆಗೆ ಬರೆಯುತ್ತಿದ್ದರು. ಲಿಂ. ಶಿ. ಶಿ. ಬಸವನಾಳರು ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪ್ರಕಟವಾಗುತ್ತಿದ್ದ " ವಾಗ್ಭೂಷಣ " ಮಾಸಪತ್ರಿಕೆಗೂ ಸಂಪಾದಕರಾಗಿದ್ದರು.

ಧರ್ಮಸಂಜೀವಿನಿ (೧೯೨೫) :

ಶರಣ ಸಂಸ್ಕೃತಿಯ ಪ್ರಸಾರ ಕಾರ್ಯದಲ್ಲಿ ಶರಣರ ಆಡುಂಬೊಲವಾದ ಹೈದರಾಬಾದ ಕರ್ನಾಟಕವೂ ಹಿಂದೆ ಬಿದ್ದಿರಲಿಲ್ಲ. ೨೦ ನೆಯ ಶತಮಾನದ ಎರಡನೆಯ ದಶಕದಲ್ಲಿಯೇ ಸೊಲ್ಲಾಪುರ ಸಂಸ್ಕೃತವೇದ ಪಾಠಶಾಲೆಯನ್ನು ಪ್ರಾರಂಭಿಸಿದ್ದ ಶ್ರೀ ವಾರದ ಮಲ್ಲಪ್ಪನವರ ನೆಚ್ಚಿನ ವಿದ್ಯಾರ್ಥಿಗಳಾಗಿದ್ದ ಯಾದಗಿರಿಯ ನಾಯ್ಕಲ್ ಬಸವರಾಜಶಾಸ್ತ್ರಿ ಮತ್ತು ಮಸ್ಕಿ ಬಸವರಾಜಶಾಸ್ತ್ರಿ ಎಂಬ ಮಿತ್ರರು ಪತ್ರಿಕೆಗೋಸ್ಕರವೆಂದೇ ಯಾದಗಿರಿಯಲ್ಲಿ ಶ್ರೀ ಶಂಕರಾನಂದ ಮುದ್ರಣಾಲಯವನ್ನು ಸ್ಥಾಪಿಸಿ " ಧರ್ಮ ಸಂಜೀವಿನಿ " ಮಾಸಿಕ ನಡೆಸಿದರು. ಈ ಪತ್ರಿಕೆ ಹತ್ತುವರ್ಷಗಳಷ್ಟೇ ನಡೆಯಿತು.

ಶಿವಾನುಭವ (೧೯೨೬)

ವಚನ ಪಿತಾಮಹ ಫ. ಗು. ಹಳಕಟ್ಟಿ ಅವರು ಶರಣ ಸಂಸ್ಕೃತಿ ಪ್ರಸಾರಕ್ಕೆಂದೇ ಬಿಜಾಪುರದಲ್ಲಿ ಸ್ಥಾಪಿಸಿದ್ದು. ಅನೇಕ ಶರಣರ ವಚನಗಳು ಮತ್ತು ಅವರ ಚರಿತ್ರೆಗಳು ಮೊದಲು ಬೆಳಕು ಕಂಡದ್ದು ಈ ಪತ್ರಿಕೆಯ ಮುಖಾಂತರವೇ. ಈ ಪತ್ರಿಕೆ ಪ್ರಕಟಣೆಗಾಗಿಯೇ ಶ್ರೀ ಹಳಕಟ್ಟಿಯವರು " ಹಿತಚಿಂತಕ ಪ್ರೆಸ್ " ಹಾಕಿ ಸಾಕಷ್ಟು ಆರ್ಥಿಕ ನಷ್ಟ ಅನುಭವಿಸಿದರು. " ಛಲವಿರಬೇಕು ಶಿವಭಕ್ತಿಯ ಮಾಡುವಲ್ಲಿ ಹಿಡಿದುದ ಬಿಡೆನೆಂಬ " ಎಂಬ ಅಖಂಡೇಶ್ವರರ ವಾಣಿಯಂತೆ ಛಲದಿಂದ ಪತ್ರಿಕೆಯನ್ನು ನಡೆಸಿದರು. ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಹೀಗೆ ವಿವರಿಸಿದ್ದಾರೆ.

೧. ವೀರಶೈವ ಧರ್ಮತತ್ವಗಳು, ಸಂಸ್ಕೃತಿ. ಇತಿಹಾಸ, ಲಲಿತ ಕಲೆಗಳ ಸಂಶೋಧನ ಲೇಖನಗಳನ್ನು ಪ್ರಕಟಿಸುವದು.

೨. ವೀರಶೈವ ಸಮಾಜದಲ್ಲಿರುವ ಯಾವ ಒಂದು ಪಕ್ಷವನ್ನು ಪುರಸ್ಕರಿಸದೆ ಸ್ವತಂತ್ರ ರೀತಿಯಲ್ಲಿ ವಿಚಾರಗಳನ್ನು ಮಂಡಿಸುವದು.

೩. ವೀರಶೈವ ಸಮಾಜದಲ್ಲಿನ ಭಿನ್ನಾಭಿಪ್ರಾಯಗಳನ್ನು ನಿಷ್ಪಕ್ಷಪಾತವಾಗಿ ಹೋಗಲಾಡಿಸುವದು.

೪. ವೀರಶೈವ ರಾಜರ, ಕವಿಗಳ, ಶರಣ ಶರಣೆಯರ ಇತರ ಮಹಾಪುರುಷರ ಚರಿತ್ರೆಗಳನ್ನು ಪ್ರಕಟಿಸುವದು.

೫. ವೀರಶೈವ ಮಠಗಳ ವೃತ್ತಾಂತಗಳನ್ನು ಬೆಳಕಿಗೆ ತರುವದು.

೬. ವೀರಶೈವ ಕೈಪಿಡಿ ಅಥವಾ ವಸ್ತುಕೋಶಕ್ಕೆ ವಿಷಯಗಳನ್ನು ಸಂಗ್ರಹಿಸುವದು.

೭. ಇದುವರೆಗೆ ಅಚ್ಚಾಗದ ವೀರಶೈವ ತಾಳೋಲೆ ಗ್ರಂಥಗಳನ್ನು ಪ್ರಕಾಶಿಸುವದು.

೮. ಲಿಂಗವಂತ ಪಂಡಿತರು, ಕವಿಗಳು, ಲೇಖಕರು, ಚಿತ್ರಗಾರರು, ಕಲಾವಿದರನ್ನು ಪ್ರೋತ್ಸಾಹಿಸುವದು.

ಆ ಕಾಲದಲ್ಲಿ ಈ ಪತ್ರಿಕೆಗೆ ಸರ್ವಶ್ರೀ ಎಸ್. ಸಿ. ನಂದೀಮಠ, ಸ. ಸ. ಮಾಳವಾಡ, ಕೆ. ಜಿ. ಕುಂದಣಗಾರ, ಸಿಂಪಿಲಿಂಗಣ್ಣ, ಹರ್ಡೇಕರ ಮಂಜಪ್ಪ, ಬೆಂಗಳೂರಿನ ಬಿ. ಶಿವಮೂರ್ತಿಶಾಸ್ತ್ರಿ, ಬಸವಪ್ಪ ಜೀರಗೆ ಮೊದಲಾದ ಮಹಾನ್ ವಿದ್ವಾಂಸರು ಲೇಖನಗಳನ್ನು ಬರೆಯುತ್ತಿದ್ದರೂ ಪತ್ರಿಕೆಯ ಪ್ರಸಾರ ಒಮ್ಮೆಯೂ ಮುನ್ನೂರು ಸಂಖ್ಯೆ ದಾಟದಿರುವದು ವಿಷಾದದ ಸಂಗತಿ.

ಶರಣ ಸಂದೇಶ (೧೯೩೧) :

' ಕರ್ನಾಟಕದ ಗಾಂಧಿ ' ಎಂದೇ ಪ್ರಕೀರ್ತಿತರಾದ ಶ್ರೀ ಹರ್ಡೇಕರ ಮಂಜಪ್ಪ ಅವರು ಆಲಮಟ್ಟಿಯ ಸಂತ ಎಂದೂ ಸುಪ್ರಸಿದ್ಧರಾಗಿದ್ದಾರೆ. ಸಮಾಜ ಸೇವೆಗೆ ಗೃಹಸ್ಥ ಜೀವನ ಅಡ್ಡ ಬರಬಹುದೆಂದು ಆಜನ್ಮ ಬ್ರಹ್ಮಚಾರಿಯಾಗಿಯೇ ಉಳಿದವರು. ವೀರಶೈವ ತತ್ವಪ್ರಸಾರ ಮತ್ತು ಅದರ ಸುಧಾರಣೆ ಶ್ರೀ ಮಂಜಪ್ಪನವರ ಪರಮಗಂತವ್ಯವಾಗಿತ್ತು. ನಾಡು ಮಾತ್ರವಲ್ಲ ದೇಶದಾದ್ಯಂತ ಸಂಚರಿಸಿ ಬಸವತತ್ವ ಪ್ರಚಾರ ಮಾಡಲು ಶಕ್ತಿಮೀರಿ ಪ್ರಯತ್ನಿಸಿದರು. ತಮ್ಮ ೨೦ನೆಯ ವಯಸ್ಸಿನಲ್ಲಿಯೇ " ಧನುರ್ಧಾರಿ " ಮಾಸಪತ್ರಿಕೆ " ಖಾದಿ ವಿಜಯ " ಮತ್ತು " ಉದ್ಯೋಗ " ಎಂಬ ವಾರಪತ್ರಿಕೆಗಳನ್ನು ನಡೆಸಿ ಕೈ ಸುಟ್ಟುಕೊಂಡಿದ್ದರೂ ೧೯೩೧ ರಲ್ಲಿ " ಶರಣ ಸಂದೇಶ " ಎಂಬ ವಾರಪತ್ರಿಕೆಯನ್ನು ಆಲಮಟ್ಟಿ ಆಶ್ರಮದಿಂದ ಆರಂಭಿಸಿದರು. ಶರಣರನ್ನು ಕುರಿತು ಬರೆಯುವದೆಂದರೆ ಅವರಿಗೆ ಹೃದಯ ಸಂತೋಷದ ಕಾರ್ಯವಾಗಿತ್ತು. ಅಕ್ಷಯ ತೃತೀಯಾದಂದು ಬಸವ ಜಯಂತಿಯನ್ನು ಆಚರಿಸಬೇಕೆಂದು ಧಾರವಾಡ ಮುರುಘಾ ಮಠದ ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳ ಆಶೀರ್ವಾದ ಬಲದೊಡನೆ ನಿಷ್ಕರ್ಷಿಸಿದವರೇ ಶ್ರೀ ಹರ್ಡೇಕರ ಮಂಜಪ್ಪನವರು. ಶರಣ ಸಂಸ್ಕೃತಿಯ ಹೊಳಪಿಗೆ ಮತ್ತು ಸೌಗಂಧಕ್ಕೆ ಶ್ರೀ ಮಂಜಪ್ಪನವರು ಗಂಧದ ಕೊರಡಿನಂತೆ ಸವೆದುದನ್ನು ಯಾರೂ ಮರೆಯಬಾರದು.

ನವ ಸಂದೇಶ (೧೯೩೪) :

ಬಳ್ಳಾರಿಯ ಲಿಂ. ಟಿ. ಹೆಚ್. ಎಂ. ಚಂದ್ರಶೇಖರ ಶಾಸ್ತ್ರಿಗಳು " ನವ ಸಂದೇಶ " ವಾರಪತ್ರಿಕೆಯನ್ನು ಪ್ರಾರಂಭಿಸಿ ಶರಣ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಿದ್ದರು. ವಿಜಯ ನಗರದ ಸಂಗಮವಂಶದ ಹಕ್ಕ-ಬುಕ್ಕರಿಗೆ ಕರ್ನಾಟಕ ಸಾಮ್ರಾಜ್ಯ ಸ್ಥಾಪಿಸಲು ಪ್ರೇರಣೆ ನೀಡಿದವರೇ ವೀರಶೈವ ಮಠದ ಕ್ರಿಯಾಶಕ್ತಿ ದೇವರೆಂದು ಕೊನೆಯವರೆಗೂ ಸಾಧಿಸುತ್ತಿದ್ದರು. ಪರಸಮಯಿಗಳಿಂದ ಶರಣ ಸಂಸ್ಕೃತಿಗೆ ಅಪಚಾರ ಉಂಟಾದಾಗಲೆಲ್ಲ ಶ್ರೀ ಚಂದ್ರಶೇಖರ ಶಾಸ್ತ್ರಿಗಳ ಲೆಕ್ಕಣಿಕೆ ಹರಿತವಾಗುತ್ತಿತ್ತು.

ಸದ್ಧರ್ಮದೀಪಿಕೆ (೧೯೩೬) :

ಲಿಂ. ಚನ್ನಮಲ್ಲಿಕಾರ್ಜುನರು ಶಿರಾಳಕೊಪ್ಪ ಶರಣರು ಸ್ಥಾಪಿಸಿದ ಪತ್ರಿಕೆ. ಹಾವೇರಿಯ ಹುಕ್ಕೇರಿಮಠದ ಶ್ರೀ ನಿ. ಪ್ರ. ಸ್ವ. ಶಿವಬಸವಸ್ವಾಮಿಗಳ ಕೃಪಾಛತ್ರದಲ್ಲಿ ಕ್ರಿ. ಶ. ೧೯೪೪ರ ವರೆಗೆ ನಡೆದುದು ನಂತರ ಮೈಸೂರಿನ ಸುತ್ತೂರು ಸಿಂಹಾಸನದ ಶ್ರೀ

ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಕೃಪಾಛತ್ರಕ್ಕೆ ಸ್ಥಳಾಂತರಗೊಂಡು ಸಂಶೋಧನಾಯುಕ್ತ ಲೇಖನಗಳಿಂದ ಮುನ್ನಡೆಯಿತು. ಬಾಹ್ಯದೇಹದಿಂದ ಕುಬ್ಜರೂ ಒಕ್ಕಣ್ಣ ಕುರುಡರೂ, ಚೊಂಚರೂ ಆಗಿದ್ದ ಶ್ರೀ ಚನ್ನಮಲ್ಲಿಕಾರ್ಜುನರು ಹೃದಯದಿಂದ ಶರಣಜೀವಿಗಳಾಗಿದ್ದರು. ಶರಣ ಸಂಸ್ಕೃತಿಯು ವೇದಾಗಮೋಪನಿಷತ್ ಪ್ರತಿಪಾದಿತವಾದುದೆಂದು ವಾದಿಸುತ್ತಿದ್ದರು. ತಮ್ಮ ಇಡೀ ಜೀವನವನ್ನು ಶರಣ ಸಾಹಿತ್ಯ ಸಂಶೋಧನೆ, ವಿಶ್ಲೇಷಣೆ ಮತ್ತು ಪ್ರಕಟಣೆಗೆ ವಿನಿಯೋಗಿಸಿದರು. ಅವರ ಜೀವನ ತುಂಬಾ ಕಷ್ಟಮಯವಾಗಿದ್ದರೂ ಎಲ್ಲವೂ ಶಿವನ ಪ್ರಸಾದವೆಂದು ಖೇದಗೊಳ್ಳದೆ ಎದುರಿಸುತ್ತಿದ್ದರು. " ಕಾಯದ ಕಳವಳಕ್ಕಂಜಿ ಕಾಯಯ್ಯಾ ಎಂದವರಲ್ಲ, ಜೀವನೋಪಾಯಕ್ಕಂಜಿ ಈಯಯ್ಯಾ ಎಂದವರಲ್ಲ" ಸಕಲವೂ ಶಿವಾರ್ಪಣಮಸ್ತು ಎಂದು ಕ್ರಿ. ಶ. ೧೮೭೪ ರಿಂದ ೧೯೫೪ ರ ವರೆಗೆ ಬಾಳಿ ಬೆಳಗಿದವರು. ಹಾನಗಲ್ ಕುಮಾರ ಶಿವಯೋಗಿಗಳು ಇವರ ವಿದ್ವತ್ತನ್ನು ಸಮಾಜೋಪಯೋಗಿಯಾಗಿ ಬಳಸಿಕೊಳ್ಳಬೇಕೆಂದು ಶುದ್ಧ ಮನಸ್ಸಿನಿಂದ ಪ್ರಯತ್ನಿಸಿದರು. ಆದರೆ ಶ್ರೀ ಚೆನ್ನಮಲ್ಲಿಕಾರ್ಜುನರು ಚಿಟಗುಬ್ಬಿಯಂತೆ ಸ್ವತಂತ್ರವಾಗಿ ಬಾಳಲು ಹವಣಿಸಿದರು. ಕೊನೆಗೆ ತಮ್ಮ ಶಿರಾಳಕೊಪ್ಪದಲ್ಲಿನ ಆಸ್ತಿಯನ್ನು ಟ್ರಸ್ಟ್ ಮಾಡಿ ಸಮಾಜಕ್ಕೆ ಅರ್ಪಿಸಿ ಇಹಲೋಕ ತ್ಯಜಿಸಿದರು. ಅವರು ಕಡುಕಷ್ಟ ಜೀವನದಲ್ಲಿಯೂ " ಸದ್ಧರ್ಮ ದೀಪಿಕೆ " ಮಾಸ ಪತ್ರಿಕೆಯನ್ನು ನಡೆಯಿಸುವುದಲ್ಲದೆ ತಮ್ಮದೇ " ಶಿವಲಿಂಗ ವಿಜಯ " ಮುದ್ರಣಾಲಯದಿಂದ ಶ್ರೀ ಬಸವೇಶ್ವರ ಕಾಲನಿರ್ಣಯ ಮೊದಲಾದ ೬೬ ಪುಸ್ತಕಗಳನ್ನು ಹೊರತಂದುದು ಅವರ ಧರ್ಮ ನಿಷ್ಠೆಯನ್ನು ಸಾರುತ್ತದೆ.

ವೀರಶೈವ ಧರ್ಮ ಸಾಮ್ರಾಜ್ಯ (೧೯೨೭) :

ಈ ಪತ್ರಿಕೆ ಕೆಲವೇ ವರ್ಷ ನಡೆದಿರಬಹುದಾದರೂ ಈ ಮಾಸ ಪತ್ರಿಕೆಯ ಹೆಸರು ಮತ್ತು ಅದರ ಪ್ರಕಾಶನದ ಸ್ಥಳ ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ಎಲ್ಲ ಸೌಲಭ್ಯಗಳು ಸುಲಭವಾಗಿ ದೊರೆಯುವ ದೊಡ್ಡ ನಗರಗಳನ್ನೇ ಹುಡುಕಿಕೊಂಡು ಹೋಗುವ ಇಂದಿನ ದಿನಮಾನಗಳಲ್ಲಿ ಈ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದ ಶ್ರೀ ರಾಜಯ್ಯಸ್ವಾಮಿ ಲಿಂಗಯ್ಯಸ್ವಾಮಿ ಹಿರೇಮಠ ಅವರು ಬೈಲಹೊಂಗಲದ ಸಮೀಪದ ಕಮತಗಿ ಗ್ರಾಮದಿಂದ ಈ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಅವರ ಸಾಹಸವನ್ನು ಯಾರಾದರೂ ಮೆಚ್ಚಲೇಬೇಕು. ಪ್ರಾಯ ಕಿರಿದಾದಡೆ ಅಭಿಪ್ರಾಯ ಕಿರಿದಾಗಿರುವದಿಲ್ಲ ಎಂಬ ಸಂಗತಿಯನ್ನು ಈ ಪತ್ರಿಕೆಯು ಜಗಜ್ಜಾಹೀರಗೊಳಿಸಿದೆ.

ವಿಶ್ವಕಲ್ಯಾಣ (೧೯೬೬) :

ಹಿಂದಿನರ್ಧ ಶತಮಾನದಿಂದ ಬಸವ ಸಮಿತಿ ಮತ್ತು ಅಖಿಲ ಭಾರತ ವೀರಶೈವ ಮಹಾಸಭೆಗಳು ತನ್ನೆರಡು ಕಣ್ಣುಗಳು ಎಂಬ ರೀತಿಯಲ್ಲಿ ಬಹಳ ಎಚ್ಚರ - ಚಚ್ಚರಗಳಿಂದ ಎರಡೂ ಸಂಸ್ಥೆಗಳ ಹಿರಿಯ ಉಪಾಧ್ಯಕ್ಷರಾಗಿ ಸ್ವಲ್ಪವೂ ಏರುಪೇರಿಲ್ಲದೆ ತೂಗಿಸಿಕೊಂಡು ಹೋಗುತ್ತಿರುವ ಶ್ರೀ ವಿಶ್ವನಾಥರಡ್ಡಿ ಮುದ್ನಾಳ ಅವರು ಅತ್ಯಂತ

ಮಹತ್ವಾಕಾಂಕ್ಷೆಯಿಂದ ಪ್ರಾರಂಭಿಸಿದ ಪತ್ರಿಕೆಯಿದು. ೧೯೬೬ ರ ಅಗಸ್ಟ ೧೫ರ ಶ್ರಾವಣ ಮಾಸದ ಮಧ್ಯ ಸೋಮವಾರದಂದು ಈ ಪತ್ರಿಕೆ ಉದ್ಘಾಟನೆಗೊಂಡಿತು. ೧೯೬೬ ರ ಏಪ್ರಿಲ್ ೧ ರಿಂದ ೨೪ ರ ವರೆಗೆ ಹಂಪಿಯಿಂದ ಬಸವ ಕಲ್ಯಾಣದತನಕ ನಡೆದು ಬಸವ ಸಮಿತಿಯ ಐತಿಹಾಸಿಕ ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ "ವಿಶ್ವಕಲ್ಯಾಣ" ಎಂಬ ವಾರಪತ್ರಿಕೆಯನ್ನು ಯಾದಗಿರಿಯಿಂದ, ಪಾದಯಾತ್ರೆಯ ಘೋಷಣೆಯಾಗಿದ್ದ "ಬಸವತತ್ವದಿಂದಲೇ ವಿಶ್ವಕ್ಕೆ ಶಾಂತಿ" ಎಂಬುದನ್ನೇ ಧ್ಯೇಯವಾಗಿಟ್ಟುಕೊಂಡು ಶರಣ ಸಂಸ್ಕೃತಿಯ ಪ್ರಸಾರಾರ್ಥ ಪ್ರಾರಂಭಿಸಲಾಗುವದೆಂದು ಶ್ರೀ ರಡ್ಡಿ ಅವರು ಪ್ರಕಟಿಸಿದ್ದರು. ಈ ಪಾದಯಾತ್ರೆಯ ಮುಂಚೆಯೇ "ಪ್ರಜಾವಾಣಿ" ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಅನುಭವಪಡೆದಿದ್ದ ಶ್ರೀ ಬಿ. ಮಹಾದೇವಪ್ಪ ಅವರು ಸಂಪಾದಕ ಹೊಣೆಗಾರಿಕೆ ದೊರೆತದ್ದರಿಂದ ಅವರ ಪ್ರಕಟಣೆ ಹುಸಿಹೋಗಲಿಲ್ಲ. ಪತ್ರಿಕೆಯ ಸಂಚಾಲಕರಾಗಿದ್ದ ಶ್ರೀ ಮುದ್ನಾಳರವರದು ಮುಖ್ಯವಾಗಿ ಸಮಾಜೋ ರಾಜಕೀಯ (Socio Political) ಪತ್ರಿಕೆಯೊಂದನ್ನು ತೆಗೆಯಬೇಕೆಂಬ ಉದ್ದೇಶವಿದ್ದರೂ ಧರ್ಮೋ-ಸಾಹಿತ್ಯಿಕ (Religio - Litrary) ಒಲವಿನ ಶ್ರೀ ಬಿ. ಮಹಾದೇವಪ್ಪ ಸಂಪಾದಕರಾಗಿದ್ದರಿಂದ ಮತ್ತು ಶ್ರೀ ಮುದ್ನಾಳರವರಿಗೂ ಧರ್ಮಜಾಗೃತಿ ಕಾರ್ಯ ಬಹಳ ಆಪ್ಯಾಯನಕಾರಿಯಾಗಿದ್ದುದರಿಂದ ಒಂದು ದೃಷ್ಟಿಯಿಂದ ಅದು ಧಾರ್ಮಿಕ ಪತ್ರಿಕೆಯೇ ಆಯಿತು. ಮಠವೊಂದರ ಹಿನ್ನೆಲೆ ಇರದಿದ್ದರೂ ಅಖಿಲ ಭಾರತ ವೀರಶೈವ ಮಹಾಸಭೆಗೆ ತನ್ನದೆ ಆದ ಮುಖವಾಣಿ ಪತ್ರಿಕೆ ಇರದಿದ್ದರಿಂದ ಮತ್ತು ಬಸವ ಸಮಿತಿಯ ಮುಖವಾಣಿ ಪತ್ರಿಕೆಗಳಾದ ಬಸವಪಥ (ಕನ್ನಡ) ಬಸವ ಜರ್ನಲ್ (ಇಂಗ್ಲಿಷ್) ಬಸವ ಮಾರ್ಗ (ಹಿಂದಿ) ನಿಯತಕಾಲಿಕೆಗಳು ಆರಂಭವಾಗುವ ಮುಂಚೆ ಇವೆರಡೂ ಸಂಸ್ಥೆಗಳ ವಿಷಯ ಪುರವಣಿಗಳು ವಿಶ್ವಕಲ್ಯಾಣ ಪತ್ರಿಕೆ ಮೂಲಕವೇ ಪ್ರಕಟಗೊಳ್ಳುತ್ತಿದ್ದವು. ಇಂಥದೊಂದು ಅಗ್ಗಳಿಕೆ ನಾಡಿನ ಯಾವ ಪತ್ರಿಕೆಗೂ ಸಂದಿರಲಿಲ್ಲ. ಶ್ರೀಮಾನ್ ವಿಶ್ವನಾಥರಡ್ಡಿ ಮುದ್ನಾಳ ಅವರು ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಶ್ರೀಮಂತರಿಂದ ದೇಣಿಗೆಗಳನ್ನು ಪಡೆದು ಬಸವತತ್ವಾಭಿಮಾನಿಗಳಿಗೆಲ್ಲ ಅವರು ಚಂದಾಕೊಡಲಿ, ಕೊಡದಿರಲಿ ವರ್ಷಾನುಗಟ್ಟಲೆ ಕಳಿಸುತ್ತಿದ್ದುದರಿಂದ "ವಿಶ್ವಕಲ್ಯಾಣ" ವಾರಪತ್ರಿಕೆಯ ಮುದ್ರಣ ಸಂಖ್ಯೆ ಐದುಸಾವಿರಕ್ಕೆ ಒಮ್ಮೊಮ್ಮೆ ತಲುಪುತ್ತಿತ್ತು. ಶಾಸಕರ ಮತ್ತು ಮಂತ್ರಿಗಳ ಟೇಬಲ್ಲಿಗೆ ಈ ಪತ್ರಿಕೆ ಹೋಗಿ ಮುಟ್ಟುತ್ತಿತ್ತು. ಇವೆಲ್ಲ ದೃಷ್ಟಿಯಿಂದ ಶರಣ ತತ್ವಗಳ ಪ್ರಸಾರದ ನಿಟ್ಟಿನಲ್ಲಿ "ವಿಶ್ವಕಲ್ಯಾಣ" ವಾರಪತ್ರಿಕೆಯ ಸೇವೆ ಅನುಪಮವಾದುದು. ಅದು ೨೭ ವರ್ಷ ಒಬ್ಬರ ಸಂಪಾದಕತ್ವದಲ್ಲಿ ನಡೆದು ಸದ್ಯ ನಿಂತಿದೆ.

ಶರಣ ಸಾಹಿತ್ಯ (೧೯೩೭) :

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಕಟವಾಗುತ್ತಿದ್ದ ಕೀರ್ತನ ಕೇಸರಿ. ಆಸ್ಥಾನ ಪಂಡಿತ. ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳ "ಶರಣ ಸಾಹಿತ್ಯ" ಪತ್ರಿಕೆಯನ್ನು ನಾವು ಉತ್ತರ ಕರ್ನಾಟಕದ "ಶಿವಾನುಭವ" ದಷ್ಟೇ ಪೂಜನೀಯವಾಗಿ ಭಾವಿಸಬೇಕಾಗುತ್ತದೆ. ಕೆಲವು

ಕಾಲದವರೆಗೆ ಶ್ರೀ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರಿಂದ ಬಹಳಷ್ಟು ಸಾಹಿತಿಗಳ, ವಿದ್ವಾಂಸರ ಒಡನಾಟ ಅವರಿಗೆ ಒಂದು ಶರಣರ ಬಗೆಗಿನ ಅನೇಕ ಸಂಶೋಧನಾತ್ಮಕ ಲೇಖನಗಳು "ಶರಣ ಸಾಹಿತ್ಯ" ಪತ್ರಿಕೆ ಮುಖಾಂತರ ಪ್ರಕಟವಾಗುತ್ತಿದ್ದವು. ಸ್ವತಃ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪ್ರತಿಭಾನ್ವಿತ ವಿದ್ವಾಂಸರಾಗಿದ್ದು ಅನೇಕ ಶರಣರ ಜೀವನಚರಿತ್ರೆ ಮತ್ತು ಕೃತಿಗಳನ್ನು, ರಾಜರ ಚರಿತ್ರೆ ಮತ್ತು ಅವರ ಧರ್ಮ ಪ್ರಸಾರ ಕಾರ್ಯಗಳನ್ನು, ಶರಣರ ಕ್ಷೇತ್ರಗಳ ಪರಿಚಯವನ್ನು ಅಭಿಮಾನ ಪೂರ್ವಕವಾಗಿ ನೀಡುತ್ತಿದ್ದರು. ಶರಣ ಸಾಹಿತ್ಯ ಗ್ರಂಥಮಾಲೆಯನ್ನು ಪ್ರಾರಂಭಿಸಿ ಆ ಮೂಲಕವೂ ಅವರು ಅನೇಕ ಗ್ರಂಥಗಳನ್ನು ಹೊರತಂದಿದ್ದಾರೆ. ಪತ್ರಿಕೆಯನ್ನು ೧೯೭೨ ರ ವರೆಗೆ ಬಹಳ ಕಷ್ಟನಷ್ಟಗಳಿಂದ ನಡೆಸಿ ತಮ್ಮ ವೃದ್ಧಾಪ್ಯದ ದೆಸೆಯಿಂದ ನಿಲ್ಲಿಸಿದರು. ಶರಣ ಸಂಸ್ಕೃತಿಯ ಸಾಕಾರಮೂರ್ತಿಯಂತಿದ್ದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ತಾವು ಜೀವಂತವಿರುವವರೆಗೆ ಕಾರ್ಯಕಾರಿಣಿ ಸದಸ್ಯರಾಗಿ ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಬಸವ ಸಮಿತಿಗಳನ್ನು ಕಟ್ಟಿ ಬೆಳೆಸುವುದರಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯಯಿಸಿದ್ದಾರೆ.

ಬಸವ ಪಥ (೧೯೭೨) :

ಶರಣ ಸಂಸ್ಕೃತಿ ಪ್ರಸಾರಕ್ಕೆ ಮೀಸಲಾದ ಪತ್ರಿಕೆಯೆಂದರೆ ಬಸವ ಸಮಿತಿಯ "ಬಸವ ಪಥ" ವೆಂದು ಎದೆ ತಟ್ಟಿ ಹೇಳಬಹುದು. ಬೇರೆ ಬೇರೆ ಪತ್ರಿಕೆಗಳಲ್ಲಿ ಅಪ್ಪಿ ತಪ್ಪಿಯಾದರೂ ವಾಣಿಜ್ಯ, ಕಲೆ, ವೈದ್ಯಕೀಯ, ಶೈಕ್ಷಣಿಕ ಮೊದಲಾದ ವಿಷಯಗಳು ಬಂದಿರಬಹುದು. ಆದರೆ "ಬಸವ ಪಥ" ಮಾತ್ರ ಬಸವಾದಿ ಪ್ರಮಥರ ತತ್ವ ವಿವೇಚನೆಗೆ ಮೀಸಲಾದ ಪತ್ರಿಕೆಯಾಗಿದೆ. ಆರಂಭದಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರ ಸಂಪಾದಕತ್ವವನ್ನು ಹೊಂದಿದ್ದು ಈಗ ಪ್ರೊ. ಬಿ. ವಿರೂಪಾಕ್ಷಪ್ಪನವರ ಸಮರ್ಥ ಸಂಪಾದಕತ್ವದಲ್ಲಿ ಮುಂದುವರಿದಿದೆ. ಈಗಾಗಲೆ ಪತ್ರಿಕೆಯ ಪ್ರಸಾರ ಸಂಖ್ಯೆ ಮೂರುಸಾವಿರಕ್ಕೆ ಮುಟ್ಟುತ್ತಿದ್ದು ವಿದ್ವಾಂಸರು ಮತ್ತು ಸಂಶೋಧಕರು ಶರಣರ ಬಗೆಗಿನ ತಮ್ಮ ವಿಚಾರಗಳನ್ನು ಪ್ರಕಟಿಸಲು ಈ ಪತ್ರಿಕೆಯನ್ನೇ ಆಶ್ರಯಿಸುತ್ತಿದ್ದುದರಿಂದ "ಬಸವಪಥ" ಭವ್ಯ ಭವಿತವ್ಯವನ್ನು ಹೊಂದಿದೆ.

ಹೀಗೆ ಒಂದೊಂದು ಪತ್ರಿಕೆ ಬಗ್ಗೆ ನಾಲ್ಕಾರು ಸಾಲುಗಳನ್ನು ಬರೆದರೂ, ಲೇಖನ ವ್ಯಾಪ್ತಿ ಮೀರಿ ಗ್ರಂಥವ್ಯಾಪ್ತಿಗೆ ತಲುಪುತ್ತದೆ. ಶರಣ ಸಂಸ್ಕೃತಿ ಪ್ರಸಾರದಲ್ಲಿ ನಮ್ಮ ವೀರಶೈವ ಮಠಗಳ ಮಹತ್ತರ ಪಾತ್ರವನ್ನು ಮರೆಯಲಾಗುವದಿಲ್ಲ. ಆಯಾ ಮಠಗಳ ಪತ್ರಿಕೆಯನ್ನು ಆಯಾ ಮಠಗಳ ಶಿಷ್ಯರೇ ಓದುತ್ತಾರೆಂಬುದೇನೂ ಇಲ್ಲ. ಜನಸಾಮಾನ್ಯರು ತಮಗಿಷ್ಟವಾದ ಪತ್ರಿಕೆಯನ್ನು ಶಿಷ್ಯತ್ವವನ್ನು ದಾಟಿ ತರಿಸಿಕೊಳ್ಳುತ್ತಾರೆಯಲ್ಲದೆ ಒಬ್ಬೊಬ್ಬರು ಹಲವಾರು ಮಠಗಳ ಪತ್ರಿಕೆಯನ್ನೂ ತರಿಸಿಕೊಳ್ಳಬಹುದು. ಎಲ್ಲ ಪತ್ರಿಕೆಗಳಿಗಿಂತ ಮಠಗಳ ಪತ್ರಿಕೆಗಳು ಶರಣ ಸಂಸ್ಕೃತಿಯನ್ನು ಮೈಗೂಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆಯೆಂಬುದನ್ನು

ಮಾತ್ರ ಮರೆಯಲಾಗದು. ಯಾರೂ ಎಲ್ಲ ಸಂಗತಿಗಳ ಬಗೆಗೆ ಸುಪರಿಚಿತರಿರುವದಿಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ ಕೆಲವು ಮಠಗಳ ಪತ್ರಿಕೆಗಳನ್ನು ಹೆಸರಿಸುತ್ತಿದ್ದೇನೆ. ಇವುಗಳಲ್ಲಿ ಕೆಲವು ನಿಂತಿರಬಹುದು, ಕೆಲವು ನಡೆಯುತ್ತಿರಬಹುದು, ಮತ್ತೆ ಕೆಲವು ಓಡುತ್ತಿರಬಹುದು. ಆದರೆ ಅವು ಒದಗಿಸಿದ ಸೇವೆಮಾತ್ರ ಇಂತಿಷ್ಟೇ ಎಂದು ಮಿತಿಗೊಳಿಸಲಾಗುವದಿಲ್ಲ. ಅಂಥವುಗಳಲ್ಲಿ ಪ್ರಮುಖವಾದವುಗಳೆಂದರೆ ಧಾರವಾಡ ಮುರುಘಾಮಠದ "ಸಾವಧಾನ" ಹುಬ್ಬಳ್ಳಿ ಮೂರುಸಾವಿರಮಠದ "ಪರಂಜ್ಯೋತಿ" ಇಳಕಲ್ ಮಠದ "ಬಸವ ಬೆಳಗು" ಭಾಲ್ಕಿ ಹಿರೇಮಠದ "ಶಾಂತಿಕಿರಣ" ಗುಲ್ಬರ್ಗ ಶರಣಬಸವೇಶ್ವರ ಸಂಸ್ಥಾನದ "ದಾಸೋಹರತ್ನ" ಗುಲ್ಬರ್ಗ ಜಿಲ್ಲೆ ನಾಲವಾರಮಠದ "ತನಾರತಿ" ತುಮಕೂರು ಸಿದ್ಧಗಂಗಾಮಠದ "ಸಿದ್ಧಗಂಗಾ" ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ "ಮಹಾಮನೆ" ನಿಡುಮಾಮಿಡಿ ಸಂಸ್ಥಾನದ "ಮಾಮಿಡಿ" ಮೈಸೂರು ಸುತ್ತೂರು ಸಂಸ್ಥಾನಮಠದ "ಪ್ರಸಾದ" ಸಿರಿಗೆರೆ ತರಳಬಾಳು ಪೀಠದ "ತರಳಬಾಳು" ಹೊಸಪೇಟೆ ಕೊಟ್ಟೂರು ಸ್ವಾಮಿಮಠದ "ಹೇಮಕೂಟ" ಬಾಳೆಹೊನ್ನೂರು ಪಂಚಾಚಾರ್ಯಪೀಠದ "ರಂಭಾಪುರಿ ಬೆಳಗು" ಮಲೆಮಾದೇಶ್ವರ ಕ್ಷೇತ್ರದ "ಮಹದೇಶ್ವರ ಮಹಾತ್ಮೆ" ಗದುಗಿನ ವೀರೇಶ್ವರ ಪುಣ್ಯಾಶ್ರಮದ "ಪಂಚಾಕ್ಷರ ವಾಣಿ" ಬಾದಾಮಿ ಶಿವಯೋಗ ಮಂದಿರದ "ಸುಕುಮಾರ" ಉಳವಿ ಸುಕ್ಷೇತ್ರದ "ಶರಣಧರ್ಮ" ವೀರಶೈವ ರೆಡ್ಡಿ ಸಂಘದ "ಹೇಮರಡ್ಡಿ ಮಲ್ಲಮ್ಮವಾಣಿ" ಸೊಲ್ಲಾಪುರ ಕಾಡಾದಿ ಟ್ರಸ್ಟಿನ "ಶರಣ" ವಿಶ್ವಕಲ್ಯಾಣ ಮಿಶನ್ನಿನ "ಕಲ್ಯಾಣ ಕಿರಣ" ಪತ್ರಿಕೆಗಳ ನವೀನ ವಿಚಾರಧಾರೆಯನ್ನು ನಾವು ಸ್ವಾಗತಿಸಬೇಕಾಗುತ್ತದೆ.

ವ್ಯಕ್ತಿ ಮಟ್ಟದಲ್ಲಿ ನಡೆದ ಹುಬ್ಬಳ್ಳಿಯ ಜಿ. ಎಸ್. ಉಮದಿಯವರ "ಪ್ರಜಾಜ್ಯೋತಿ" ಗದುಗಿನ ಕೌತಾಳ ವೀರಪ್ಪನವರ "ನೇಗಿಲಯೋಗಿ" ಹುಬ್ಬಳ್ಳಿಯ ಪಾಟೀಲ ಪುಟ್ಟಪ್ಪನವರ "ಪ್ರಪಂಚ, ವಿಶ್ವವಾಣಿ" ಶ್ರೀ ಹುಚ್ಚೇಶ್ವರ ಮೇದಿಯವರ "ಕನ್ನಡಿಗ" ಶ್ರೀ ಇಟಗಿಯವರ "ನೇತಾಜಿ" ರಾಯಚೂರಿನ ಶ್ರೀ ಬಿ. ಎಂ. ವೀರೇಶ್ವರ ಶಾಸ್ತ್ರಿಗಳ "ಅಮರವಾಣಿ" ಯಾದಗಿರಿಯ ಶ್ರೀ ಜಿ. ಎಂ. ಗುರುಸಿದ್ಧಶಾಸ್ತ್ರಿಗಳ "ಹೈದರಾಬಾದ ಕನ್ನಡಿಗ" ಮುಂತಾದವು ಈ ಶೀರ್ಷಿಕೆಯ ಲೇಖನಕ್ಕೆ ಸ್ಮರಣಾರ್ಹಗಳೇ.

■■

ಲೇಖಕರ ವಿಳಾಸಗಳು

೧. ಡಾ. ವಿ.ಎಸ್. ಮಾಳಿ
ಶ್ರೀ ಚನ್ನವೃಷಭೇಂದ್ರ ಕಾಲೇಜು
ಪಾರೂಗೇರಿ ತಾ. ರಾಯಬಾಗ
ಜಿ. ಬೆಳಗಾವಿ

೨. ಡಾ. ಸಾ.ಶಿ.ಮರುಳಯ್ಯ
'ರಾಗಿಣಿ'
ಸರ್ವಿಸ್ ರಸ್ತೆ. ವಿಜಯನಗರ
ಎರಡನೇ ಹಂತ. ಬೆಂಗಳೂರು

೩. ಡಾ. ಎಂ. ಬಿ. ಹೂಗಾರ
ಶ್ರೀ ಶಿವಾನಂದ ಕಾಲೇಜು. ಕಾಗವಾಡ
ತಾ. ಅಥಣಿ ಜಿ. ಬೆಳಗಾವಿ

೪. ಡಾ. ಬಿ. ಆರ್. ಹಿರೇಮಠ
ಕನ್ನಡ ಪ್ರಾಧ್ಯಾಪಕರು.
ಕ.ವಿ.ವಿ. ಧಾರವಾಡ

೫. ಡಾ. ಎಂ.ಬಿ. ಪಾಟೀಲ
'ಶಿವಶಿಲ್ಪ'
ವಿದ್ಯಾನಗರ, ಮುಧೋಳ ರಸ್ತೆ.
ಮಹಾಲಿಂಗಪುರ. ಜಿ. ಬಾಗಲಕೋಟ

೬. ಪ್ರೊ. ಚಂದ್ರಕಾಂತ ಪೋಕಳೆ
ಬೇಡಕಿಹಾಳ
ತಾ. ಚಿಕ್ಕೋಡಿ ಜಿ. ಬೆಳಗಾವಿ

೭. ಪ್ರೇಮಾ ಭಟ್
"ಶ್ರೀ ಗುರು"
ವಿಜಯನಗರ ಎರಡನೇ ಹಂತ.
ಬೆಂಗಳೂರು

೮. ಡಾ. ಸಿ. ಪಿ. ಕೃಷ್ಣಕುಮಾರ
ಆದಿಚುಂಚನಗಿರಿ ಹಾಸ್ಟೆಲ್
ಹಿಂಭಾಗ. ಕಲಾಮಂದಿರ ರಸ್ತೆ
ಮೈಸೂರು

೯. ಡಾ. ಜೆ. ಎಂ. ಹೆಗಡೆ
ಕಿಟೆಲ್ ಆರ್ಟ್ಸ ಕಾಲೇಜು. ಧಾರವಾಡ

೧೦. ಪ್ರೊ. ಜಯವಂತ ಕಾಡದೇವರ
"ಮಕ್ಕಳ ಮಂಟಪ"
ಬನಹಟ್ಟಿ ಜಿ. ಬಾಗಲಕೋಟ

೧೧. ಶ್ರೀ ಶಿವಪುತ್ರ ಯಾದವಾಡ
ವಿಕ್ರಮಪುರ. ಅಥಣಿ ಜಿ. ಬೆಳಗಾವಿ

೧೨. ಶ್ರೀ ಬಿ.ಎಲ್. ಪಾಟೀಲ
ಅಧ್ಯಕ್ಷರು. ದೇವದಾಸಿ ವಿಮೋಚನಾ
ಸಂಘ. ಅಥಣಿ ಜಿ. ಬೆಳಗಾವಿ

೧೩. ಡಾ. ಎಂ. ಚಿದಾನಂದಮೂರ್ತಿ
"ಮಿಂಚು"
ವಿಜಯನಗರ ಎರಡನೇ ಹಂತ
ಬೆಂಗಳೂರು

೧೪. ಶ್ರೀ ಷ. ಬ್ರ. ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು
ಶ್ರೀ ಕೋರಿ ಸಿದ್ಧೇಶ್ವರಮಠ
ನಾಲವಾರ
ತಾ. ಚಿತಾಪುರ ಜಿ. ಗುಲ್ಬರ್ಗಾ

೧೫. ಶ್ರೀ ಮ.ಘ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು
ಶ್ರೀ ಉದಯೇಶ್ವರ ಮಠ
ನಾಗಠಾಣ ಜಿ. ಬಿಜಾಪುರ

೧೬. ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು
ದಾಸೋಹ ಮಠ. ಸೊನ್ನ
ತಾ. ಜೇವರ್ಗಿ ಜಿ. ಗುಲ್ಬರ್ಗಾ

೧೭. ಶ್ರೀ ಷ. ಬ್ರ. ಚಂದ್ರಶೇಖರ ಶಿವಾಚಾರ್ಯರು
ಗುರುಶಾಂತೇಶ್ವರ ಸಂಸ್ಥಾನ ಮಠ
ಹುಕ್ಕೇರಿ ಜಿ. ಬೆಳಗಾವಿ

೧೮. ಶ್ರೀ ಶಿವಾನಂದ ಮಹಾಸ್ವಾಮಿಗಳು
ಅನ್ನದಾನೇಶ್ವರ ಮಠ
ನಂಜನಗೂಡು ರಸ್ತೆ. ಮೈಸೂರು

೧೯. ಶ್ರೀ ಮಲ್ಲಯ್ಯ ಸ್ವಾಮಿಗಳು
ಶ್ರೀ ಶಿವಾನಂದ ಮಠ. ಘೋಡಗೇರಿ
ತಾ. ಹುಕ್ಕೇರಿ ಜಿ. ಬೆಳಗಾವಿ

೨೦. ಶ್ರೀ ಮಲ್ಲಿಕಾರ್ಜುನದೇವರು
ಚೌಡೇಶ್ವರ ಮಠ. ಸತ್ತಿ
ತಾ. ಅಥಣಿ ಜಿ. ಬೆಳಗಾವಿ

೨೧. ಶ್ರೀ ಜ್ಞಾನಮೂರ್ತಿದೇವರು
ಜೆ. ಎಸ್. ಎಸ್ ಗುರುಕುಲ
ಸುತ್ತೂರು ಮಠ
ಚಾಮುಂಡಿ ಬೆಟ್ಟದ ತಪ್ಪಲು
ಮೈಸೂರು

೨೨. ಶ್ರೀ ಶರಣಬಸವದೇವರು
ಶಾಂತಲಿಂಗೇಶ್ವರ ಮಠ, ಟೆಂಗಳಿ
ತಾ. ಚಿತಾಪುರ ಜಿ. ಗುಲ್ಬರ್ಗಾ

೨೩. ಶ್ರೀ ದಾನಪ್ಪಾ ಜತ್ತಿ
ಜಿಲ್ಲಾ ಅಧ್ಯಕ್ಷರು, ಕ.ಸಾ.ಪ
ಬಿಜಾಪುರ
ಅಂಚೆ : ತಿಕೋಟಾ ಜಿ. ಬಿಜಾಪುರ

೨೪. ಶ್ರೀ ಶರಣಪ್ಪ ಗುಡದಿನ್ನಿ
ದೇವದುರ್ಗ
ಜಿಲ್ಲೆ. ರಾಯಚೂರು

೨೫. ಶ್ರೀ ಮಹಾಲಿಂಗ ಯಾಳಗಿ
ಬಸವೇಶ್ವರ ನಗರ, ಮುಂಡರಗಿ
ಜಿಲ್ಲೆ. ಗದಗ

೨೬. ಡಾ. ವೈ. ರುದ್ರಪ್ಪ
ಶಾಂತಿವನ ಟ್ರಸ್ಟ್ ಮತ್ತು ನಿಸರ್ಗ
ಚಿಕಿತ್ಸಾಲಯ. ಧರ್ಮಸ್ಥಳ

೨೭. ಶ್ರೀ. ಟಿ. ಪಿ. ಮನೋಳಿ
ಪ್ರಧಾನ ವ್ಯವಸ್ಥಾಪಕರು
ಕಟಕೋಳ ಸಹಕಾರಿ ಬ್ಯಾಂಕ್
ಕಟಕೋಳ
ತಾ. ರಾಮದುರ್ಗ ಜಿ. ಬೆಳಗಾವಿ

೨೮. ಶ್ರೀ ಬಸವರಾಜ ಕತ್ತಿ
ಬೆಲ್ಲದ ಬಾಗೇವಾಡಿ
ತಾ. ಹುಕ್ಕೇರಿ ಜಿ. ಬೆಳಗಾವಿ

೨೯. ಶ್ರೀ ಶಿವರುದ್ರಪ್ಪ ನಂದೇಶ್ವರ
ಶ್ರೀ ಮೋಟಗಿಮಠ. ಅಥಣಿ

೩೦. ಶ್ರೀ ರವೀಂದ್ರ ಸೋರಗಾವಿ
ಆಕಾಶವಾಣಿ ಕಲಾವಿದರು
ಗೋಕಾಕ ಜಿ. ಬೆಳಗಾವಿ

೩೧. ಶ್ರೀ ಅಂಬಯ್ಯ ನುಲಿ
" ಸುಗುರೇಶ್ವರ ನಿಲಯ "
ಮಾನ್ವಿ ಜಿ. ರಾಯಚೂರು

೩೨. ಶ್ರೀಮತಿ ಲಕ್ಷ್ಮೀದೇವಿ ಪಾಟೀಲ
ದೇಗಾವಿ
ತಾ. ಬೈಲಹೊಂಗಲ ಜಿ. ಬೆಳಗಾವಿ

೩೩. ಪ್ರೊ. ದುಂಡಯ್ಯ ಡಿಗ್ಗಿಮಠ
ಶಿ.ಶಿ. ಬಸವನಾಳ ಶಿಕ್ಷಕರ ತರಬೇತಿ
ಕೇಂದ್ರ. ಬೆಳಗಾವಿ

೩೪. ಶ್ರೀ ಸುರೇಶ ಅಂಗಡಿ
ಜಿಲ್ಲಾ ಭಾ.ಜ.ಪ ಅಧ್ಯಕ್ಷರು
ಲಕ್ಷ್ಮೀ ಕಾಂಪ್ಲೆಕ್ಸ್. ಸದಾಶಿವನಗರ
ಬೆಳಗಾವಿ

೩೫. ಶ್ರೀ ಎಂ. ಸಿದ್ಧಣ್ಣ
ಹೊನವಾಡ ತಾ. ಬಿಜಾಪುರ

೩೬. ಶ್ರೀ ಅಪ್ಪಾಸಾಹೇಬ ಅಲಿಬಾದಿ
'ಶಾಂತಿನಿಕೇತನ'
ವಿಕ್ರಮಪುರ. ಅಥಣಿ ಜಿ. ಬೆಳಗಾವಿ

೩೭. ಶ್ರೀ ಮಹಾದೇವ ಅಥಣಿ ಅಥಣಿ
ಜಿ. ಬೆಳಗಾವಿ

೩೮. ಶ್ರೀ ಸುಭಾಷ ಮೋಟಗಿ
ಜವಳಿ ವರ್ತಕರು. ಅಥಣಿ

೩೯. ಶ್ರೀ ಬಾಳೇಶ ಲಕ್ಷಟ್ಟಿ
ಗುರುವಾರ ಪೇಠ.
ಗೋಕಾಕ ಜಿ. ಬೆಳಗಾವಿ

೪೦. ಡಾ. ಸಂಗಮೇಶ ಬಿರಾದಾರ
ಪ್ರಾಧ್ಯಾಪಕರ ಬಡಾವಣೆ ಗಿರೀಶ
ನಗರ. ಜಮಖಂಡಿ
ಜಿ. ಬಾಗಲಕೋಟ

೪೧. ಶ್ರೀ ಬಿ.ಗಿ.ಯಲ್ಲಟ್ಟಿ
'ಬಸವ ನಿಲಯ'
ಬನಹಟ್ಟಿ ಜಿ. ಬಾಗಲಕೋಟ

೪೨. ಶ್ರೀ ಮೋಹನ ಅಣೆಪ್ಪನವರ
ಶ್ರೀ ಪುರಾತನೇಶ್ವರ ಮುದ್ರಣಾಲಯ
ಅಥಣಿ ಜಿ. ಬೆಳಗಾವಿ

೪೩. ಪ್ರೊ. ಮಹಾಂತೇಶ ಉಕ್ಕಲಿ
ಶ್ರೀ ಎಸ್.ಎಮ್.ಎಸ್. ಕಾಲೇಜು
ಅಥಣಿ ಜಿ. ಬೆಳಗಾವಿ

೪೪. ಪ್ರೊ. ಬಿ.ಎಂ. ಹಿರೇಮಠ
ಶ್ರೀ ಎಸ್.ಎಮ್.ಎಸ್. ಕಾಲೇಜು
ಅಥಣಿ ಜಿ. ಬೆಳಗಾವಿ

೪೫. ಶ್ರೀ ಎಸ್.ಎ. ಗೋರೆ
ಶ್ರೀ ಚನ್ನಪ್ಪ ಕಿತ್ತೂರ ಪ್ರೌಢ ಶಾಲೆ
ಅಥಣಿ ಜಿ. ಬೆಳಗಾವಿ

೪೬. ಶ್ರೀ ವಿ. ಎಸ್. ಮನವಾಡೆ
ಕಾರ್ಯದರ್ಶಿಗಳು. ದೇವದಾಸಿ
ವಿಮೋಚನಾ ಸಂಸ್ಥೆ. ಅಥಣಿ

೪೭. ಶ್ರೀ ನಾರಾಯಣ ಆನೀಖಿಂಡಿ
ವಿಕ್ರಮಪುರ. ಅಥಣಿ ಜಿ. ಬೆಳಗಾವಿ

೪೮. ಪ್ರೊ. ಎಸ್. ಡಿ. ಚಕ್ರವರ್ತಿ
ಪತ್ರಕರ್ತರು. ಅಥಣಿ

೪೯. ಶ್ರೀ ಮ.ನಿ.ಪ್ರ. ಸಿದ್ಧರಾಮ
ಮಹಾಸ್ವಾಮಿಗಳು
ರುದ್ರಾಕ್ಷಿಮಠ ನಾಗನೂರು-ಬೆಳಗಾವಿ

೫೦. ಶ್ರೀ ಮ. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು
ಶ್ರೀ ಫಲಹಾರೇಶ್ವರ ಮಠ
ಅವರಾದಿ
ತಾ. ರಾಮದುರ್ಗ ಜಿ. ಬೆಳಗಾವಿ

೫೧. ಶ್ರೀ ಮ.ನಿ.ಪ್ರ ಶಿವಕುಮಾರ ಸ್ವಾಮಿಗಳು.
ಶಿವಯೋಗಾಶ್ರಮ. ಬಿದರಕುಂದಿ
ತಾ. ಮುದ್ದೇಬಿಹಾಳ

೫೨. ಪೂಜ್ಯಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು
ಶ್ರೀ ಜಗದ್ಗುರು ತರಳಬಾಳು ಬೃಹನ್ಮಠ. ಸಿರಿಗೆರೆ

೫೩. ಶ್ರೀ ಶಶಿಕಾಂತ ಪಟ್ಟಣ
'ಬಸವ' ಶ್ರೀನಗರ- ಬೆಳಗಾವಿ

೫೪. ಶ್ರೀ ಮಹಾಲಿಂಗ ಮಂಗಿ
ಅಂಚೆ : ಗೋಕಾಕ ಫಾಲ್ಸ್
ತಾ. ಗೋಕಾಕ

೫೫. ಡಾ. ಬಸವರಾಜ ಜಗಜಂಪಿ
ಮುಖ್ಯಸ್ಥರು. ಕನ್ನಡ ವಿಭಾಗ
ಲಿಂಗರಾಜ ಕಾಲೇಜು. ಬೆಳಗಾವಿ

೫೬. ಡಾ. ಎಸ್. ಆರ್. ಗುಂಜಾಳ
ನಿರ್ದೇಶಕರು. ಲಿಂಗಾಯತ ಸಂಶೋಧನಾಲಯ. ರುದ್ರಾಕ್ಷಿಮಠ
ಬೆಳಗಾವಿ

೫೭. ಡಾ. ಗುರುಪಾದ ಮರಿಗುದ್ದಿ
"ಕವಿಶೈಲ"
ನಮಾಜ ಮಾಳ. ಸಂಕೇಶ್ವರ
ಜಿ. ಬೆಳಗಾವಿ

೫೮. ಡಾ. ಗಿರಡ್ಡಿ ಗೋವಿಂದರಾಜ
'ಸರೋಜ'
ನವೋದಯ ನಗರ. ಧಾರವಾಡ

೫೯. ಡಾ. ಬಿ. ವಿ. ಯಕ್ಕುಂಡಿಮಠ
ಕನ್ನಡ ಪ್ರಾಧ್ಯಾಪಕರು
ಕ.ವಿ.ವಿ.. ಧಾರವಾಡ

೬೦. ಡಾ. ಎಸ್. ವಿದ್ಯಾಶಂಕರ
'ಸ್ವಪ್ನಲೋಕ'
ಅತ್ತಿಗುಪ್ಪೆ. ೨ನೆಯ ಹಂತ
ವಿಜಯನಗರ. ಬೆಂಗಳೂರು

೬೧. ಶ್ರೀ ಮಲ್ಲಿಕಾರ್ಜುನ ಹುಲಗಬಾಳಿ
'ಬಸವ ಸಂಪದ'
ಬನಹಟ್ಟಿ ಜಿಲ್ಲೆ. ಬಾಗಲಕೋಟ

೬೨. ಡಾ. ಸಂಗಮೇಶ ಹಂಡಿಗಿ
ಚಾವಡಿ ಬೀದಿ.
ನವಲಗುಂದ ಜಿ. ಧಾರವಾಡ

೬೩. ಡಾ. ಗುರುದೇವಿ ಹುಲೆಪ್ಪನವರಮಠ
ಶ್ರೀ ಮೃತ್ಯುಂಜಯ ಕಾಲೇಜು.
ಧಾರವಾಡ

೬೪. ಶ್ರೀ ಜಿ.ಎಸ್. ವಡಗಾವಿ
ರಾಮಪುರ. ಅಂಚೆ: ರಬಕವಿ
ತಾ. ಜಮಖಂಡಿ ಜಿ. ಬಾಗಲಕೋಟ

೬೫. ಡಾ. ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು.
ಬಿ.ವಿ.ವ. ಸಂಘ. ಬಾಗಲಕೋಟ.

೬೬. ಶ್ರೀ ಬಿ. ಮಹಾದೇವಪ್ಪ
ಬಸವ ಮುದ್ರಣಾಲಯ
ನಂ. ೯ ಔದ್ಯೋಗಿಕ ಪ್ರದೇಶ
ಮಿಲ್ ರಸ್ತೆ. ಗುಲ್ಬರ್ಗ

ಶ್ರೀ ಗುರು ಚೆನ್ನಬಸವೇಶ್ವರ ಗ್ರಂಥಮಾಲೆಯ ಪ್ರಕಟಣೆಗಳು

೧. ಚೆನ್ನಬಸವ ಚಾರಿತ್ರ್ಯ	ಶ್ರೀ ಗುರುಬಸವಸ್ವಾಮಿಗಳು	೫೦-೦೦
೨. ಅಂಧ ಸಿದ್ಧಾಂಜನ	ಶ್ರೀ ಗುರುಬಸವಸ್ವಾಮಿಗಳು	೧೫-೦೦
೩. ಸುಪ್ರಭಾತ	ಶ್ರೀ ಗುರುಬಸವಸ್ವಾಮಿಗಳು	೧೫-೦೦
೪. ವರ್ತಮಾನ	ಶ್ರೀ ಚನ್ನಬಸವದೇವರು	೨೦-೦೦
೫. ಶ್ರೀ ಗುರು	-(ಸಂ) ಶ್ರೀ ಚನ್ನಬಸವದೇವರು	೨೦-೦೦
೬. ನುತಿನಮನ	ಶ್ರೀ ಚನ್ನಬಸವದೇವರು	೦೬-೦೦
೭. ವಚನಚೈತ್ರ	ಶ್ರೀ ಚನ್ನಬಸವದೇವರು	೨೦-೦೦
೮. ವಚನ ತರಂಗ	ಶ್ರೀ ಚನ್ನಬಸವದೇವರು	೨೦-೦೦
೯. ವಚನಚೈತ್ರ (ಮರಾಠಿ)	ಅನು:ಶಾಲಿನೀತಾಯಿ ದೊಡಮನಿ	೨೫-೦೦
೧೦. ಎನ್ನೊಡೆಯನ ಹಾಡುವೆ.	-(ಸಂ) ಶ್ರೀ ಚನ್ನಬಸವದೇವರು	೫೦-೦೦

ಬಿ. ಎಂ. ಶ್ರೀ ಪ್ರತಿಷ್ಠಾನ
17739
ಗ್ರಂಥಾಲಯ
ಬೆಂಗಳೂರು-19



ಶ್ರೀ ಚನ್ನಬಸವದೇವರು ಬಸವತತ್ತ್ವದ ಬಗ್ಗೆ ಆಳವಾಗಿ ಅರಿವುಳ್ಳವರು. ಅತ್ಯುತ್ತಮ ವಾಗ್ಮಿಗಳು. ಸಮಾಜಸೇವೆಯನ್ನು ಮಾಡಬೇಕೆಂಬ ಅತೀವ ಹಂಬಲವುಳ್ಳವರು. ಜನರನ್ನು ಆಕರ್ಷಿಸುವ ಚುಂಬಕ ಶಕ್ತಿಯುಳ್ಳವರು.

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು, ಚಿತ್ರದುರ್ಗ

ಚನ್ನಬಸವದೇವರು ಕವಿ ಹೃದಯದ ಸಾಧಕರು. ವಚನ ಪರಂಪರೆಯನ್ನು ಮುಂದುವರೆಸಿದ ಈ ತರುಣ ಸ್ವಾಮಿಗಳ ಬಗೆಗೆ ಸಮಾಜ ತುಂಬಾ ಭರವಸೆಯನ್ನಿಟ್ಟುಕೊಂಡಿದೆ. ಒಬ್ಬ ಮಾದರಿ ಸ್ವಾಮಿಗಳಾಗಿ ಜನ-ಮನವನ್ನು ಹಸನುಗೊಳಿಸುವರೆಂಬ ಭರವಸೆ ನಮಗಿದೆ.

ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಗದಗ

ಭರವಸೆಯ ಬೆಳಕು ಚೆಲ್ಲುತ್ತಿರುವ ಚನ್ನಬಸವದೇವರ ಹೆಸರು ಕೇಳುತ್ತಿದ್ದಂತೆ ಅವರ ಕ್ರಿಯಾಶೀಲತೆ ಕಣ್ಮುಂದೆ ಬಂದು ನಿಲ್ಲುತ್ತದೆ. ಹೆಸರು ಚೆನ್ನ, ವಚನ ಚೆನ್ನ, ರಚನೆ ಚೆನ್ನ, ಪ್ರವಚನ ಚೆನ್ನ—ಈ ಚೆನ್ನ ಎಲ್ಲರಿಗೂ ಅಚ್ಚುಮೆಚ್ಚಿನ ಚೆನ್ನ.

ಶ್ರೀ ಜಗದ್ಗುರು ಶಿವಲಿಂಗೇಶ್ವರ ಮಹಾಸ್ವಾಮಿಗಳು, ನಿಡಸೋಸಿ

ಶ್ರೀ ಚನ್ನಬಸವ ಮಹಾಸ್ವಾಮಿಗಳು ಪ್ರಸನ್ನವದನರು, ಸಾಹಿತಿಗಳು, ವಿಚಾರರು, ಸಮಾಜ ಹಿತಚಿಂತಕರು. ಸಮತೆ ಹಾಗೂ ಸೌಜನ್ಯಗಳು ಅವರ ಸದ್ಗುಣಗಳು; ಸದ್ಭಾವ ಹಾಗೂ ಸುವಿಚಾರಗಳು ಅವರ ಸಂಪತ್ತು.

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಜ್ಞಾನಯೋಗಾಶ್ರಮ, ಬಿಜಾಪುರ

ಬೆಳೆಯ ಸಿರಿ ಮೊಳಕೆಯಲ್ಲಿ ಕಾಣುವಂತೆ ಪೂಜ್ಯ ಚನ್ನಬಸವದೇವರು ಅರಿವು, ಆಚಾರ, ಅನುಭಾವಗಳ ಸಾಕಾರ ಮೂರ್ತಿಯಾಗಿ ಬೆಳೆದಿದ್ದಾರೆ.

ಶ್ರೀ ಮಹಾಂತ ಶಿವಯೋಗಿಗಳು, ಇಳಕಲ್ಲ



ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ ✆ ೦೮೩೭-೫೩೭೫೭೭